TEXT LIGHT IN THIS BOOK

Tigh BindingAnd Brown

UNIVERSAL
LIBRARY
OU_200403
UNIVERSAL
LIBRARY

ಕಾದಂಬರೀಸಂಗ್ರಹ.

ವಿವಿಧ ನೀತಿಗ್ರಂಥಗಳನ್ನು ಪ್ರಕಟಿಸುವ
ಮಾಸಪತ್ರಿಕೆ

ಪಂಚಮಸಂಪುಟ

ಸಂಪಾದಕರು

ಚಾ. ವೆಂಕಟರಮಣಶಾಸ್ತ್ರಿ

೧೯೧೪—೧೫

ಕ್ರಯ 1—8—೦

ಈಸಂಪುಟದಲ್ಲಿರುವ ಗ್ರಂಥಗಳು.

೧ [illegible]

೨ [illegible]

೩ [illegible]

೪ ಸೊಬಗಿನಬಳ್ಳಿ

೫ ಸಾವಿತ್ರಿ

೧ ರಿಂದ ನಾಲ್ಕುಸಂಪುಟಗಳ ಬೆಲೆ, ಪ್ರತಿಯೊಂದೊಂದಕ್ಕೂ ಒಂದೂವರೆ ರೂಪಾಯಿ. ಈ ಐದುಸಂಪುಟಗಳನ್ನು ಒಮ್ಮೆಯೇ ತರಿಸಿದರೆ ಅಂಚೆವೆಚ್ಚ ಸೇರಿ ಏಳುರೂಪಾಯಿ ನಾಲ್ಕಾಣೆಗಳಿಗೆ ಕೊಡುವೆವು.

ತಪ್ಪುತಿದ್ದುವಿಕೆ;—ಸೊಬಗಿನಬಳ್ಳಿಯನ್ನು ೩೮ನೆಯ ಗ್ರಂಥಮಾಲೆಯನ್ನಾಗಿಯೂ, ಸಾವಿತ್ರಿಯನ್ನು ೩೫ನೆ ಗ್ರಂಥವನ್ನಾಗಿಯೂ ತಿದ್ದಿಕೊಳ್ಳುವುದು.

ಭುವನೇಶ್ವರೀಪ್ರೆಸ್ ಮೈಸೂರು.

ಕಾದಂಬರಿ ಸಂಗ್ರಹ ಗ್ರಂಥಮಾಲಾ ನಂಬರು 31.

ಅಂಬಾಲಿಕೆ.

ಜಿ. ಕೃಷ್ಣಮೂರ್ತಿ

ರಾಯಲ್ ಪ್ರೆಸ್,

ಮೈಸೂರು.

ಬೆಲೆ ೦-೧

ಪಾಠಕವರ್ಗ !

ಇದು 'ರಾಜಾಸ್ಥಾನದ ಇತಿಹಾಸ ಮಂಜರಿ' ಯಲ್ಲಿನ ಒಂದು ಸಣ್ಣ ಕಥೆಯ ಅವಲಂಬನವಾಗಿರುವುದು. ಗ್ರಂಥವು ಚಿಕ್ಕದಾದರೂ ಹಲವು ನೀತಿಗಳು ಅಡಕವಾಗಿರುವುವು. ವಿದ್ಯಾರ್ಥಿಯಾದ ನನ್ನ ಈ ಅಲ್ಪ ಲೇಖನವು ಪಾಠಕ ಪಾಠಕಿಯರೆಲ್ಲರಿಂದ ಸಮಾದೃತವಾದುದಾದರೆ ನಾನು ಕೃತಾರ್ಥನೇ ಸರಿ. ಇದರಲ್ಲಿನ ಸ್ಖಾಲಿತ್ಯಗಳನ್ನು ಆರಾದರೂ ತಿಳಿಯಪಡಿಸುವುದಾದರೆ ಅವುಗಳನ್ನು ಮುಂದಣ ಮುದ್ರಣದಲ್ಲಿ ಸರಿಪಡಿಸುವೆನು.

ಇದನ್ನು ಅನತಿಕಾಲದಲ್ಲೇ ಪ್ರಚುರಗೊಳಿಸಿದ ವೇ|| ಬ್ರಂ|| ಚಾಮರಾಜನಗರದ ವೆಂಕಟರಮಣ ಶಾಸ್ತ್ರಿಗಳವರ ಮಹೋಪಕಾರವು ನನ್ನ ಹೃದಯದಲ್ಲಿ ಚಿರಸ್ಥಾಯಿಯಾಗಿರುವುದು.

ಇದರಂತೆಯೇ ಎಲ್ಲರೂ ನನ್ನ ಇತರ ಗ್ರಂಥಗಳಿಗೂ ಉತ್ತೇಜನ ಕೊಡುವರೆಂಬುದೇ ನನ್ನ ನಂಬುಗೆ. ಮತ್ತು—

ಕಂ|| ಸದಯೇ ಭಕುತರ ಸಿರಿಯೇ |
ಸದಮಲ ಹೃದಯೇ ಸಮನ್ವಿತತುಲ ಸಹಾಯೇ ||
ಹದುಳಿ ನಸಿಲಯೇ, ವಿನಯೇ |
ಮುದದಿಂ ಪೊರೆಯುವುದು ಸಂಗ್ರಹನ ವಿಧಿಜಾಯೇ ||

ಇತಿ

ಬೆಂಗಳೂರು }
೧-೧೦-೧೯೧೬. }

ಜೆ. ಕೃಷ್ಣಮೂರ್ತಿ.

|| ಶ್ರೀಃ ||

ಅಂಬಾಲಿಕ.

ಒಂದನೆಯ ಅಧ್ಯಾಯ.

ಒಂದು ದಿವಸ ದುರ್ಗದ ರಾಜೋದ್ಯಾನದಲ್ಲಿ ರಾಜಾ ಭಗವತೀದಾಸನ ಏಕ ಮಾತ್ರಪುತ್ರಿಯಾದ ಅಂಬಾಲಿಕೆಯು ವಿಹರಿಸುತ್ತಿದ್ದಳು. ಆಗ ಸಂಧ್ಯಾಕಾಲವಾಗಿತ್ತು. ಭಗವಾನ್ ಪ್ರಭಾಕರನು ಕ್ಷೀಣತೇಜನಾಗಿ ಅಸ್ತಮಿಸುತ್ತಿದ್ದನು. ರಾಜಪುತ್ರಿಯಾದ ಅಂಬಾಲಿಕೆಯು ಅಸೀಮ ಸೌಂದರ್ಯಮಯಿ. ಪೂರ್ಣಚಂದ್ರನಂತಹ ಮುಖ, ಅಂದ ವಾದ ಹುಬ್ಬುಗಳು, ಕಪ್ಪಾದ ಮುಂಗುರುಳು, ತೊಂಡೇಹಣ್ಣಿನಂತಹ ಕೆಂದುಟಿಗಳು, ವಿಶಾಲವಾದ ಕಣ್ಣುಗಳು. ಇವುಗಳಿಂದ ಕೂಡಿ ಸರ್ವರ ಪ್ರೀತಿಗೂ ಪಾತ್ರಳಾಗಿದ್ದ ಈ ರಾಜಕುಮಾರಿಗೆ ವಿವಾಹವಾಗುವ ವಯಸ್ಸು ಬಂದೊದಗಿದ್ದರೂ, ಅದಾವಕಾರಣಗಳ ದೆಸೆಯಿಂದಲೋ ಇನ್ನೂ ವಿವಾಹವಾಗಿರಲಿಲ್ಲ. ರಾಯಗುವರಿಗೆ ಪ್ರಕೃತಿಯ ಸೌಂದ ರ್ಯದ ಮೇಲೆ ಬಹಳ ಇಷ್ಟ. ಉದ್ಯಾನವು ಹೂವುಗಳನ್ನು ಹೊಮ್ಮಿಸುತ್ತಿರುವ ಚಂಪಕವೃಕ್ಷಗಳಿಂದಲೂ, ಚಿಗುರಿದ ಅಶೋಕವೃಕ್ಷಗಳಿಂದಲೂ ಮತ್ತು ಅನೇಕ ತರ ಹದ ಲತಾವೃಕ್ಷಗಳಿಂದಲಂಕೃತವಾಗಿತ್ತು. ತಂಗಾಳಿಯು ಬಹಳ ಮನೋಹರವಾಗಿ ಬೀಸುತ್ತಿದ್ದುದು. ಹೂವುಗಳಲ್ಲಿನ ಮಕರಂದವನ್ನು ಪಾನಮಾಡುವುದರ ಸಲುವಾಗಿ ಭ್ರಮರಗಳು ತಂಡತಂಡವಾಗಿ ಬಂದು ಬಹಳ ಆನಂದದಿಂದ ಗಾನಮಾಡುತ್ತಿದ್ದುವು. ಸ್ವಲ್ಪ ಹೊತ್ತಿನಲ್ಲಿಯೇ, ತೇಜೋನಿಧಿಯಾದ ಸೂರ್ಯಬಿಂಬವು ಅಸ್ತಾಚಲದ ಹಿಂದೆ ಸಂಪೂರ್ಣವಾಗಿ ಮರೆಯಾಗಲು ಕತ್ತಲೆಯು ಪ್ರಪಂಚವನ್ನು ಪರಿವೇಷ್ಟಿಸಿದುದು. ದನ್ನು ಕಂಡು, ಕತ್ತಲಾದಮೇಲೆ ಸ್ತ್ರೀಯರು ಹೊರಗೆ ಸಂಚರಿಸುವುದು ಸರಿಯಲ್ಲ ಬುವುದನ್ನು ಚೆನ್ನಾಗಿ ತಿಳಿದಿದ್ದ ಅಂಬಾಲಿಕೆಯು ಅರಮನೆಯನ್ನು ಕುರಿತು ಹೊರ ಉದ್ಯುಕ್ತಳಾದಳು.

ಅಂಬಾಲಿಕೆಯು ಒಂದೆರಡು ಹೆಜ್ಜೆಗಳಷ್ಟು ದೂರ ಮುಂದುವರಿಯುವಷ್ಟರ ಲ್ಲಿಯೇ, ಆರೋ ಅವಳ ಹಿಂದಣಿಂದ, “ ರಾಜಕುಮಾರಿ! ಸ್ವಲ್ಪ ನಿಲ್ಲು. ಅನಂತರ ಅರಮನೆಗೆ ಹೋಗುವೆಯಂತೆ! ” ಎಂದು ಸಣ್ಣ ಧ್ವನಿಯಲ್ಲಿ ಕೂಗಿದರು. ರಾಜ

ಕುಮಾರಿಯು ಇದನ್ನು ಕೇಳಿ ಚಮಕಿತಳಾಗಿ ಹಿಂದಿರುಗಿ ನೋಡಿ ಮಂತ್ರಿಸುತನಾದ ಮೋಹನಸಿಂಹನನ್ನು ಕಂಡಳು. ಆದರೆ ಅವನ ಮನದಲ್ಲಿ ಅವುದೋ ಹಿಂದು ದುರಭಿಪ್ರಾಯವಿರಬೇಕೆಂದುಕೊಂಡು ಪುನಃ ಮುಂದುವರಿಯಲುಜ್ಜುಗಿಸಿದಳು. ಇದನ್ನು ಕಂಡು ಮೋಹನಸಿಂಹನು, "ಅಂಬಾಲಿಕೆ! ಇಷ್ಟುಬೇಗ ಈ ನಿರ್ಭಾಗ್ಯನನ್ನು ಮರೆಯಲು ಯೋಚಿಸಿರುವಿಯೇನು?" ಎಂದನು. ಅದಕ್ಕೆ ಅಂಬಾಲಿಕೆಯು, "ಮೋಹನಸಿಂಹ! ಇಂತಹ ಅವೇಳೆಯಲ್ಲಿ ನೀನು ರಾಣೀವಾಸದ ಉಪವನವನ್ನು ಪ್ರವೇಶಮಾಡಿದುದು ಒಳ್ಳೆಯದಲ್ಲ. ಅದು ಹಾಗಿರಲಿ ನೀನು ಇಲ್ಲಿಗೆ ಬಂದುದಕ್ಕೆ ಸರಿಯಾದ ಕಾರಣ ವೇನಾದರೂ ಇರುವುದೋ?" ಎಂದಳು.

ಮೋಹನ—"ಕಾರಣವಿಲ್ಲದೆ ಎಂದಿಗಾದರೂ ಬರುವೆನೆ? ಅದಕ್ಕೆ ತಕ್ಕ ಕಾರಣವಿದ್ದೇ ಇರುವುದು."

ಅಂಬಾಲಿಕೆ—"ಹಾಗಾದರೆ ಅಂತಹ ಕಾರಣವಾವುದು?" ಮೋಹನಸಿಂಹನು ರಾಜಕುಮಾರಿಯನ್ನು ಚಪಲದೃಷ್ಟಿಯಿಂದ ನೋಡುತ್ತ, "ರಾಯಗುವರಿ! ಆದರ ಕಾರಣವು ನೀನೇ" ಎಂದು ಹೇಳಿದನು.

ಇದನ್ನು ಕೇಳಿ ಅಂಬಾಲಿಕೆಯು ಆಪಾದಮಸ್ತಕಪರ್ಯಂತವೂ ತರಗೆಲೆಯಂತೆ ನಡುಗಿದಳು. ಆದರೂ ಧೈರ್ಯವನ್ನವಲಂಬಿಸಿ, "ಎಲಾ! ನೀಚನೇ! ಈ ಕ್ಷಣವೇ ಇಲ್ಲಿ ನಿಲ್ಲದೆ ಹೊರಟುಹೋಗು. ಇಲ್ಲದಿದ್ದರೆ ನಿನಗೆ ಒಳ್ಳೆಯದಾಗುವುದಿಲ್ಲ.

ಮೋಹನಸಿಂಹನು ಈ ಹೆದರಿಕೆಯನ್ನು ಸ್ವಲ್ಪವೂ ಲಕ್ಷಿಸದೆಯೇ, "ಅಂಬಾಲಿಕೆ! ಈಗ ನೀನು ನನ್ನನ್ನು ವಿವಾಹವಾಗುವುದಕ್ಕೆ ಸಮ್ಮತಿಸಿದರೆ ಸರಿ. ಇಲ್ಲವಾದರೆ,—ಇಗೋ! ನೋಡು. ನಾಳೆ, ನಿಮ್ಮ ತಂದೆ, ನಿಮ್ಮ ರಾಜ್ಯವಾವುದೂ ಇರುವುದಿಲ್ಲ. ಹಾಗೆ ಮಾಡುವಷ್ಟು ಅಪಾರವಾದ ಶಕ್ತಿಯು ನನ್ನಲ್ಲಿದೆ." ಎಂದನು.

ಅಂಬಾಲಿಕೆಯು ಈ ಅಹಿತಸೂಚಕವಾದ ಮಾತುಗಳನ್ನು ಕೇಳಲಿಚ್ಛಿಸದೆ, ಬಹಳ ಘಟ್ಟಿಯಾದ ಸ್ವರದಿಂದ ರಾಜದೂತರನ್ನು ಕೂಗಿದಳು, ತಕ್ಷಣವೇ ಮಂತ್ರಿಸುತನಾದ ಮೋಹನಸಿಂಹನು ಆ ವೃಕ್ಷಸಂದಣಿಯಲ್ಲಿ ಮಾಯವಾಗಿಬಿಟ್ಟನು. ಸ್ವಲ್ಪ ಹೊತ್ತಿನಲ್ಲಿಯೇ ಕೆಲವು ರಾಜದೂತರು ಬಂದು ರಾಜಪುತ್ರಿಯನ್ನು ಸುರಕ್ಷಿತವಾಗಿ ಅರಮನೆಗೆ ಕರೆದೊಯ್ದರು. ಅಲ್ಲಿ ಅವಳು ರಾಜೋದ್ಯಾನದಲ್ಲಿ ನಡೆದ ಸಮಾಚಾರವನ್ನು

ತನ್ನ ಮಾತೆಗೆ ತಿಳುಹಿದಳು. ಆಗ ರಾಣಿಯು ಕುಪಿತಳಾಗಿ, ಎಲ್ಲವನ್ನೂ ಭಗವತಿ ದಾಸನಿಗೆ ತಿಳುಹಿದಳು. ಅದಕ್ಕೆ ಅವನಾವ ಉತ್ತರವನ್ನೂ ಕೊಡಲಿಲ್ಲ; ಆದರೆ, ಬಹಳ ಆಲೋಚನಾನಿಮಗ್ನನಾದನು.

ಎರಡನೆಯ ಅಧ್ಯಾಯ.

ಮಾರನೇ ದಿವಸ ಪ್ರಾತಃಕಾಲದಲ್ಲಿ ಮೋಹನ ಸಿಂಹನು ಅರಮನೆಯನ್ನು ಪ್ರವೇಶಿಸಿ ರಾಜಾ ಭಗವತೀ ದಾಸನನ್ನು ಕಂಡನು. ಮಂತ್ರಿ ಪುತ್ರನಿಗೆ ಅರಮನೆ ಯನ್ನು ಪ್ರವೇಶಿಸಲು ಅಧಿಕಾರವನ್ನು ಸ್ವಯಂ ಭಗವತೀದಾಸನೇ ಕೊಟ್ಟಿದ್ದನು. ಅದುಕಾರಣ ಮೋಹನನು ಅರ ಆತಂಕವೂ ಇಲ್ಲದೆ ರಾಜನ ಇದಿರಿಗೆ ಬಂದು ನಿಂತನು. ಕುಶಲಪ್ರಶ್ನೆಗಳಾದನಂತರ ರಾಜನು, ಮೋಹನನು ಅರಮನೆಗೆ ಬಂದುದರ ಕಾರಣ ವನ್ನು ವಿಚಾರಿಸಿದನು. ಮೋಹನಸಿಂಹನು ಅದಕ್ಕೆ ಯಾವ ಪ್ರತ್ಯುತ್ತರವನ್ನೂ ಕೊಡದೆ ಮೌನವಾಗಿದ್ದನು.

ಭಗವತಿ ದಾಸ:—“ ಮೋಹನಸಿಂಹ! ನಿನ್ನೆಯದಿವಸದ ನಿನ್ನ ವರ್ತನವೆಲ್ಲವೂ ನನಗೆ ತಿಳಿಯಿತು. ಸಂಧ್ಯಾಕಾಲದಲ್ಲಿ ನೀನು ರಾಣೀವಾಸದ ಉಪವನವನ್ನು ಏಕಾಕಿ ಯಾಗಿ ಒಳಹೊಕ್ಕದು ಬಹಳ ತಪ್ಪು.”

ಮೋಹನಸಿಂಹ—(ನಿರುತ್ತರ).

ಭಗವತೀದಾಸ—ಮಂತ್ರಿಕುಮಾರ! ನಿನ್ನ ಅಪರಾಧವನ್ನು ಪ್ರಚ್ಛನ್ನವಾಗಿಟ್ಟು ಕೊಂಡು ಮರೆತುಬಿಡುವೆನೆಂದು ತಿಳಿಯಬೇಡ: ಶೀಘ್ರದಲ್ಲಿಯೇ ಅದಕ್ಕೆ ತಕ್ಕ ಶಿಕ್ಷೆ ಯನ್ನು ವಿಧಿಸುವೆನು.

ಮೋಹನಸಿಂಹ—ಮಹಾರಾಜ! ದುಡುಕಬೇಡಿರಿ. ನಿಮ್ಮ ಮಗಳ ಮತ್ತು ನಿಮ್ಮ ರಾಜ್ಯದ ಮಂಗಳದ ಮೇಲೆ ದೃಷ್ಟಿಯನ್ನಿಟ್ಟು ಚೆನ್ನಾಗಿ ಆಲೋಚಿಸಿ ಮಾತ ನಾಡಿರಿ. ಇಲ್ಲವಾದ್ದರೆ ಬಹಳ ವ್ಯಥೆಗೀಡಾಗುವಿರಿ.

ಭಗವತೀದಾಸ—ಎಲಾ, ಪಾಪಿ! ಅಧಮ!! ಇಂದು ನೀನು ನನ್ನ ಪವಿತ್ರ ವಾದ ಕುಲಕ್ಕೇ ಕಳಂಕವನ್ನು ತಂದೊಡ್ಡಿರುವಿ. ಈ ಉಪಕಾರಕ್ಕಾಗಿ ನಿನಗೆ ನನ್ನ

ಏಕಮಾತ್ರಪುತ್ರಿಯನ್ನು ವಿವಾಹಮಾಡಿಕೊಟ್ಟು ನಿನ್ನನ್ನು ನನ್ನ ರಾಜ್ಯಕ್ಕೆ ಹಕ್ಕುದಾರನನ್ನಾಗಿ ಮಾಡಿಕೊಳ್ಳಬೇಕೆಂದು ಬೊಗಳುವಿಯೋ ? ಥು ! ನೀಚಾ !! ನನ್ನಿದಿರಿನಿಂದ ಈಗ ತೊಲಗಿ ಹೋಗು : ಒಂದು ಕ್ಷಣವಾದರೂ ನನ್ನಿದಿರಿನಲ್ಲಿ ನಿಲ್ಲಬೇಡ. ಹಾಗೆ ನಿಂತರೆ ನಿನಗೆ ನಿಸ್ತಾರವಿಲ್ಲ ಎಂದು ಗದರಿಸಿಕೊಂಡನು.

“ ಮಹಾರಾಜ! ಇಂದು, ನೀವು ನನಗೆ ಯಾವ ರಜಪೂತನೂ ಸಹಿಸಲಾರದಷ್ಟು ಅಪಮಾನವನ್ನು ಮಾಡಿರುವಿರಿ. ಅದಕ್ಕಾಗಿ ನಾನು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳದೆಬಿಡೆನು. ಮಹಾರಾಜ! ಈ ವಿಷಯವನ್ನು ಮಾತ್ರ ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಿ, ಮರೆಯಬೇಡಿರಿ” ಎಂದು ಹೇಳುತ್ತ ಮೋಹನಸಿಂಹನು ಅರಮನೆಯನ್ನು ಬಿಟ್ಟು ಸ್ವಗೃಹಾಭಿಮುಖನಾದನು.

ಮೋಹನಸಿಂಹನು ಹೊರಟುಹೋಗುತ್ತಲೇ ರಾಜನು ತನ್ನ ಮಂತ್ರಿಯಾದ ವಿಕ್ರಮಸಿಂಹನನ್ನು ಕರೆಯಿಸಿ ಮೋಹನನ ದುರ್ವ್ಯಾಪಾರವನ್ನು ಅವನಿಗೆ ತಿಳುಹಿದನು. ಇದನ್ನು ಕೇಳುತ್ತಲೇ ವಿಕ್ರಮಸಿಂಹನ ಮುಖವು ಕೆಂಪಗಾಯಿತು. ಭ್ರೂಗಳು ಕೃಷ್ಣಸರ್ಪಗಳನ್ನು ಹೋಲಿದುವು. ತುಟಿಗಳು ಅದುರಿದುವು. ಅವನ ನೇತ್ರಗಳಲ್ಲಿ ಕ್ರೋಧಾನಲವು ಪ್ರಜ್ವಲಿಸಲಾರಂಭವಾಯಿತು. ತಕ್ಷಣವೇ ಅವನು ಒಬ್ಬ ಸೇವಕನನ್ನು ಕೂಗಿ, ಮೋಹನನನ್ನು ಕರೆದುಕೊಂಡು ಬಾರೆಂದು ಆಜ್ಞಾಪಿಸಿದನು. ಸ್ವಲ್ಪ ಹೊತ್ತಿನಲ್ಲಿಯೇ ಆ ಸೇವಕನು ಹಿಂತಿರುಗಿ ಬಂದು ಉತ್ತಮಾಶ್ವವೊಂದನ್ನು ಆರೋಹಿಸಿ ನಾಗೂರಿಗೆ ಅಭಿಮುಖನಾಗಿ ಪ್ರಯಾಣಮಾಡಿದನೆಂದು ಬಿನ್ನವಿಸಿದನು. ಆಗ, ವಿಕ್ರಮಸಿಂಹನು ಅತಿಪ್ರಯಾಸದಿಂದ ತನ್ನ ಕೋಪವನ್ನು ತನ್ನಲ್ಲಿಯೇ ಅಡಗಿಸಿಕೊಂಡು, “ ಮಹಾರಾಜ! ಸಮಾಧಾನಚಿತ್ತರಾಗಿರಿ. ಆ ಪರಮಪಾಪಿ—ಆ ಚಂಡಾಲನನ್ನು ಸ್ಮರಿಸಬೇಡಿ. ಇಂದಿನಿಂದ ಅವನು ನನಗೆ ತ್ಯಾಜ್ಯನಾದ ಪುತ್ರನಾಗಿರುವನು. ಆ ಅಧಮಾಧಮನ ಗೊಡ್ಡು ಬೆದರಿಕೆಗೆ ತಾವು ಭಯಪಡಬೇಕಾದುದರವಶ್ಯವಿಲ್ಲ ” ಎಂದನು.

ಮೂರನೆಯ ಅಧ್ಯಾಯ.

ಪಾಠಕಮಹಾಶಯ ! ಪಿತನ ಗೃಹವನ್ನು ಪರಿತ್ಯಜಿಸಿದ ಬಳಿಕ ಮೋಹನನು ನಾಗೂರನ್ನು ಕುರಿತು ಹೊರಟುದು ಸರಿಯಷ್ಟೆ ? ಈಗ ಅವನೇನಾದನೆಂಬುದನ್ನು ವಿಚಾರಿಸಿಕೊಳ್ಳುವೆವು.

ದುರ್ಗದಿಂದ ನಾಗೂರು ಸುಮಾರು ಹದಿನೈದು ಕ್ರೋಶಗಳಷ್ಟು ದೂರದಲ್ಲಿದ್ದಿತು. ನಾವು ಆವಕಾಲದ ಚರಿತ್ರೆಯನ್ನು ವಿವರಿಸಲೆಳಸಿರುವೆವೋ, ಆಕಾಲದಲ್ಲಿ ಮುಜಫರಖಾನನೆಂಬುವನು ನಾಗೂರಿನ ಅಧಿಪತಿಯಾಗಿದ್ದನು. ಮುಜಫರನು ವಿನಯ, ಪಾಪಭೀತಿ, ಮುಂತಾದ ಸನ್ಮಾರ್ಗಗಳ ವಾಸನೆಯನ್ನೇ ತಿಳಿಯದ ಮತ್ತು, ಅಪ್ರಮಾಣಿಕತೆ, ಇಂದ್ರಿಯ ಪಾರವಶ್ಯ, ವ್ಯಭಿಚಾರ, ವಂಚನೆ, ಇತ್ಯಾದಿ ದುರಾಚಾರಗಳಿಂದ ಕೂಡಿದ ಅಧರ್ಮೈಕನಿರತನಾಗಿದ್ದನೆಂದರೆ ಸದ್ಯಃ ಸಾಕಾಗಿರುವುದು. ಪ್ರದೋಷಕಾಲದ ಹೊತ್ತಿಗೆ ಮೋಹನಸಿಂಹನು, ಅರಮನೆಯ ಮುಂದೆ ಬಂದುನಿಂತು,—ಒಬ್ಬ ಚಿತ್ರಗಾರನು ತನ್ನ ಚಿತ್ರಪಠಗಳೊಂದಿಗೆ ಬಂದಿರುವನೆಂದು—ಹೇಳಿ ಕಳುಹಿಸಿದನು. ನಿರಂತರವೂ ಸ್ವಾರ್ಥದಲ್ಲಿಯೇ ಆಸಕ್ತನಾಗಿರುತ್ತಿದ್ದ ಆ ರಾಜನಿಗೆ ಮತ್ತಾವ ಕೆಲಸವೂ ಇಲ್ಲದಿದ್ದುದರಿಂದ, ಅಂದು ಅವನು ಪ್ರಮೋದದ ಉದ್ಯಾನದಲ್ಲಿ ಕುಳಿತು ಸುರೆಯನ್ನು ಸೇವಿಸುತಲಿದ್ದನು. ಮೋಹನನ ಬರುವಿಕೆಯನ್ನು ತಿಳಿದೊಡನೆಯೇ ಅವನಿದ್ದೆಡೆಗೆ ಬಂದು, "ಎಲ್ಲಿ ?—ನಿನ್ನ ಚಿತ್ರಪಟಗಳನ್ನು ತೆಗೆದು ತೋರಿಸು." ಎಂದನು.

ಆಗ ಮೋಹನನು ತನ್ನ ಕೆಂಕುಳಿನಲ್ಲಿದ್ದ ಗಂಟನ್ನು ಬಿಚ್ಚಿ ಚಿತ್ರಪಠಗಳನ್ನು ಒಂದೊಂದಾಗಿ ತೆಗೆದು ತೋರಿಸುತ್ತ, "ಮಹಾಪ್ರಭು! ನಾನೊಬ್ಬ ಪ್ರಸಿದ್ಧನಾದ ಚಿತ್ರಗಾರನು. ರಾಜಸ್ಥಾನದ ರಾಜರುಗಳೆಲ್ಲರೂ ತಂತಮ್ಮ ಮತ್ತು ತಂತಮ್ಮ ಮನೆಯವರ ಚಿತ್ರಗಳನ್ನು ಬರೆಯಿಸಿಕೊಳ್ಳುವುದಕ್ಕೆ ನನ್ನನ್ನೇ ಕರೆಸುವರು. ನನ್ನಲ್ಲಿರುವ ಚಿತ್ರಗಳಲ್ಲಿನ ಎಲ್ಲಾ ಮನುಷ್ಯರನ್ನೂ ನಾನೇ ಸ್ವತಃ ನೋಡಿ ಬಂದಿರುತ್ತೇನೆ. ಈಗ್ಯೆ, ಸುಮಾರು ಎರಡುತಿಂಗಳುಗಳ ಕೆಳಗೆ ಮೇವಾರದ ರಾಣಾರವರು ತಮ್ಮ ಚಿತ್ರಪಠವನ್ನು ತಯಾರುಮಾಡುವುದಕ್ಕಾಗಿ ನನ್ನನ್ನು ಕಳುಹಿದ್ದರು. ಆಗ ಅವರು ನನ್ನ ಬುದ್ಧಿಕುಶಲತೆಗೆ ಮೆಚ್ಚಿ ಒಂದು ಸಹಸ್ರ ವರಹಗಳನ್ನು ಪಾರಿತೋಷಿಕವಾಗಿ ಕೊಟ್ಟರು. ಅನಂತರ ನಾನು ಯೋಧಪುರದ ರಾಯರವರ ಚಿತ್ರವನ್ನು ತಯಾರುಮಾಡಿ ಅವರಿಂದ ದೊಡ್ಡ ಬಹುಮಾನವನ್ನು ಪಡೆದೆನು. ಮೊನ್ನೆ ತಾನೆ ದುರ್ಗದ ಭಗವತೀದಾಸರವರು ತಮ್ಮ ಕುವರಿಯ ರೂಪನ್ನು ಚಿತ್ರಿಸುವುದಕ್ಕಾಗಿ ನನ್ನನ್ನು ತಮ್ಮ ಬಳಿಗೆ ಕರೆಯಿಸಿದ್ದರು. ಸ್ವಲ್ಪ ಕಾಲದಲ್ಲಿಯೇ ನಾನು ಆ ರಾಜಕುಮಾರಿಯ ಅಸಮಾನವಾದ ರೂಪನ್ನು ಬಹಳ ಅಂದವಾಗಿ ಚಿತ್ರಿಸಿದೆನು. ಅದಕ್ಕಾಗಿ ಅವರು ಪಾರಿತೋಷಿಕವಾಗಿ ಒಂದು ಅಮೂಲ್ಯವಾದ ಮುತ್ತಿನ ಹಾರವನ್ನು ಕೊಟ್ಟುದೂ ಅಲ್ಲದೆ, ನನಗೆ ಕಷ್ಟಕಾಲವು ಸಂಪ್ರಾಪ್ತವಾದಾಗ ತಮ್ಮ ಬಳಿಗೆ ಬರಬಹುದೆಂದು ತಮ್ಮ ಅನುಜ್ಞೆಯನ್ನಿತ್ತಿರುತ್ತಾರೆ.

ಆದಕಾರಣ ನಾನು ಅವರಿಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದಾಗಿರುವುದು. ಪ್ರಭುಗಳೇ! ಇತ್ತ ನೋಡಿ, ಆ ರಾಜಕುಮಾರಿಯ ಚಿತ್ರಪಟದ ಪ್ರತಿಯೊಂದು ಇಲ್ಲಿಯೇ ಇರುವುದು. ತಾವು ಈ ಗರೀಬನಮೇಲೆ ದಯವಿಟ್ಟು ಅದನ್ನು ಪರಿಕಿಸಿ ತಮ್ಮ ಅಭಿಪ್ರಾಯವನ್ನು ತಿಳುಹೋಣಾಗಲಿ" ಎಂದು ಹೇಳಿ, ಅಂಬಾಲಿಕೆಯ ಚಿತ್ರಪಟವೊಂದನ್ನು ಮುಜಫರಖಾನನ ಹಸ್ತದಲ್ಲಿಟ್ಟು, ನಮ್ರಭಾವದಿಂದ ದೂರದಲ್ಲಿ ನಿಂತುಕೊಂಡು, ಖಾನನ ಉತ್ತರಾಪೇಕ್ಷಿಯಾಗಿ,—ತನ್ನಲ್ಲಿತಾನೇ, ಭಗವತೀದಾಸನ ಮೇಲಿನ ಸೂಡನ್ನು ತೀರಿಸಿಕೊಳ್ಳುವುದಕ್ಕೊಂದು ಸುಲಭವಾದ ಮಾರ್ಗವು ಸಮಾಗತವಾಯಿತೆಂದುಕೊಂಡು ಆನಂದಿಸುತ್ತಿದ್ದನು.

ಆ ಚಿತ್ರಪಟವನ್ನು ನೋಡಿದ ಕೂಡಲೇ ಮುಜಫರನ ಮನಸ್ಸು ಅನೇಕ ವಿಕಾರಗಳಿಗೊಳಗಾಯಿತು. ಅವನ ಮನದಲ್ಲಿ ಏನೇನೋ ಭಾವನೆಗಳುಂಟಾದುವು. ಹಾಗೆಯೇ ಸ್ವಲ್ಪಹೊತ್ತಿನವರೆಗೂ ಚಿತ್ರಾರ್ಪಿತಳಾದ ಆ ರಮಣಿಯ ಸೌಂದರ್ಯವನ್ನು ಚಂಚಲದೃಷ್ಟಿಯಿಂದ ನೋಡುತ್ತಿದ್ದನು. ಆಗ, ಮುಜಫರನು, ಚಿತ್ರಗತಳಾದ ರಾಜಕುಮಾರಿಯನ್ನು ವಿವಾಹಮಾಡಿಕೊಂಡು ಸುಖಿಸಬೇಕೆಂಬ ಉತ್ಕಟವಾದ ಇಚ್ಛೆಯುಳ್ಳವನಾದನು. ಅನಂತರ ಅವನು ಮೋಹನನನ್ನು ಕುರಿತು, "ಅಯ್ಯಾ! ಚಿತ್ರಗಾರ, ನಿನ್ನ ನಾಮಧೇಯವೇನು?" ಎಂದು ಪೃಚ್ಛಿಸಿದನು.

ಮೋಹನ:—"ಮಹಾಪ್ರಭು! ನನ್ನ ಹೆಸರು–ಮೋಹನಸಿಂಹ–ಸೆಂದಿರುವುದು."

ಮುಜಫರಖಾನ್:—ಒಳ್ಳಿತು ಮೋಹನಸಿಂಹ; ನಾನು ಈ ಚಿತ್ರಪಟವನ್ನು ಕ್ರಯಕ್ಕೆ ತೆಗೆದುಕೊಳ್ಳುವೆನು. ಇದರ ಬೆಲೆಯೇನು?–ಹೇಳು.

ಮೋಹನಸಿಂಹ:—ಹುಜೂರ್! ಅದಕ್ಕೆ ಪ್ರತಿಫಲವಾಗಿ ನನಗೇನೂ ಬೇಡ. ನನ್ನನ್ನು ತಮ್ಮ ಬಳಿ ಆವುದಾದರೊಂದು ಚಾಕರಿಯಲ್ಲಿಟ್ಟುಕೊಂಡರೆ ಸಾಕು.

ಮುಜಫರ:—ಒಳ್ಳೆಯದು. ಇಂದಿನಿಂದಲೇ ನೀನು ನನ್ನ ಅಂಗರಕ್ಷಕಲ್ಲೋರ್ವನಾಗಿರು.

ಇದನ್ನು ಕೇಳಿ ಅಲ್ಲಿದ್ದ ಒಬ್ಬ ಯವನ ಚಾಕರನು, "ಹುಜೂರ್! ನನ್ನ ಮನವಿಯನ್ನು ಲಾಲಿಸಬೇಕು." ಎಂದನು.

ಮುಜಫರ:—ಅದೇನೋ? ಗುಲಾಮ! ಬೇಗ ಹೇಳು.

ಚಾಕರನು :—ಹುಜೂರ್ ! ಈ ಮನುಷ್ಯನು ರಜಪೂತನು. ಬಹಳ ಕೆಟ್ಟ ವಿಧರ್ಮಿಗಳ ಜಾತಿಗೆ ಸೇರಿದವನು. ಇವನು ಗೂಢಚಾರನಿರಬಹುದು. ಈ ಕಾಫರರನ್ನು ನಂಬುವುದಕ್ಕಾಗುವುದಿಲ್ಲವಾದುದರಿಂದ ಇವನನ್ನು ತಟ್ಟನೆ ಅಂಥಾ ಭಾರೀ ಚಾಕರಿಯಲ್ಲಿಟ್ಟುಕೊಳ್ಳುವುದು ಬಹಳ ಅಪಾಯಕರವು.

ಆದಕ್ಕೆ ಮುಜಫರನು, "ನೀನು ಹೇಳಿದುದೂ ಉಚಿತವಾಗಿ ತೋರುತ್ತದೆ (ಮೋಹನನ ಕಡೆ ತಿರುಗಿ), ಅಯ್ಯಾ ! ಚಿತ್ರಗಾರ ! ನೀನು ನನ್ನ ಚಿತ್ರಪಟವೊಂದನ್ನು ಬರೆ. ಅದನ್ನು ನೋಡಿ ನಂಬುಗೆಯುಂಟಾದರೆ ನಿನ್ನನ್ನು ಚಾಕರಿಯಲ್ಲಿ ನಿಯಮಿಸುವೆವು.

ಅದಕ್ಕೆ ಸಮ್ಮತಿಸಿ, ಮೋಹನಸಿಂಹನು ಮಾರನೇ ದಿನ ಮುಜಫರನ ಚಿತ್ರಪಟವೊಂದನ್ನು ಬಹಳ ಸುಂದರವಾಗಿ ತಯಾರುಮಾಡಿಕೊಟ್ಟನು. ಚಿಕ್ಕಂದಿನಿಂದಲೂ ಚಿತ್ರಬರೆವ ವಿದ್ಯೆಯನ್ನು ಬಹಳ ಶ್ರಮದಿಂದ ಅಭ್ಯಾಸಮಾಡಿದ್ದನಾದುದರಿಂದ ಅವನಿಗೆ ಅದು ಕಷ್ಟಕರವಾಗಿ ತೋರಿಬರಲಿಲ್ಲ. ಮುಜಫರನು ಮೋಹನನ ಕೌಶಲಕ್ಕೆ ಮೆಚ್ಚಿ ಅವನನ್ನು ತನ್ನ ಅಂಗರಕ್ಷಕರಲ್ಲೋರ್ವನನ್ನಾಗಿ ನಿಯಮಿಸಿದನು.

ಮೋಹನಸಿಂಹನಿಗೆ ತನ್ನ ಇಷ್ಟಪೂರ್ತಿಯಾದುದಕ್ಕೋಸ್ಕರ ಬಹಳ ಆಮೋದವುಂಟಾಯಿತು.

ನಾಲ್ಕನೆಯ ಅಧ್ಯಾಯ.

ಮುಜಫರನು ಕಾಮಾಂಧನಾದನು. ನಮ್ಮ ಪ್ರಿಯ ಪಾಠಕ ಪಾಠಕಿಯರಿಗೆ ಚಿರಪರಿಚಿತನಾದ ಪುಷ್ಪಶರನ ಪ್ರಬಲಾವೇಶಕ್ಕೆ ಮುಜಫರನು ಸಿಕ್ಕಿಬಿದ್ದನು. ಅಂಬಾಲಿಕೆಯ ಚಿತ್ರ ಪಟವನ್ನು ನೋಡಿದಂದಿನಿಂದ ಅವನ ಮನಸ್ಸೇ ಬೇರೇ ಕಡೆಗೆ ತಿರುಗಿತು. ತನ್ನ ರಾಣೀವಾಸದ ಮುಸಲ್ಮಾನ ಬೇಗಮುಗಳನ್ನು ಕಂಡರೆ ಆಲಸ್ಯವನ್ನು ತೋರ್ಪಡಿಸಲಾರಂಭಿಸಿದನು. ಸುರೆಯನ್ನು ಪಾನಮಾಡಿದಾಗಲಂತೂ ಉನ್ಮತ್ತನಾಗಿ ಜ್ಞಾನರಹಿತನಾಗುತ್ತಿದ್ದನು. ಕೊನೆಗೆ ಮೋಹನಸಿಂಹನ ಹೇಳಿಕೆಯಪ್ರಕಾರ ಅಂಬಾಲಿಕೆಯನ್ನು ತನಗೇ ವಿವಾಹಮಾಡಿಕೊಡಬೇಕೆಂದು ಭಗವತೀದಾಸನಿಗೆ ಆಜ್ಞಾಪಿಸಿದನು.

ರಜಪೂತರು ಉತ್ತಮಜಾತಿಯವರು. ಯುದ್ಧಮಾಡಬಲ್ಲರು, ದೇಶಹಿತಕ್ಕಾಗಿ ತಮ್ಮ ಪ್ರಾಣಗಳನ್ನಾದರೂ ಅರ್ಪಿಸಬಲ್ಲರು,—ಆದರೆ, ಅವರು ಅಪಮಾನವನ್ನು

ಮಾತ್ರ ಸ್ಮರಿಸಲಾರರು. ಈ ಸಮಾಚಾರವನ್ನು ಕೇಳಿದೊಡನೆಯೇ ಭಗವತೀದಾಸನ ನೇತ್ರಗಳಲ್ಲಿ ದ್ವೇಷಾನಲವು ಪ್ರಕಾಶಿಸಲಾರಂಭವಾಯಿತು ; ಹುಬ್ಬು ಗಂಟಿಕ್ಕಿದನು, ಮುಖವು ರೌದ್ರಾಕಾರವನ್ನು ತಾಳಿದುದು, ಶರೀರದಲ್ಲಿ ರೋಮೋದ್ಗಮವಾದುದು, ಅವನ ಹಸ್ತವು ಸಮೀಪದಲ್ಲಿದ್ದ ಕಬ್ಬಿನದ ಅಸಿಯನ್ನೆಳೆಯಿತು. ರಾಜನು ಈ ಸಮಾಚಾರವನ್ನು ತಂದ ದೂತನನ್ನು ಸಮಾಪ್ತಿಗೊಳಿಸುವುದರಲ್ಲಿದ್ದನು, ಅಷ್ಟರಲ್ಲಿಯೇ ವಿಕ್ರಮಸಿಂಹನೇ ಮುಂತಾದವರು ಬಂದು ರಾಜನಿಗೆ ಬುದ್ಧಿವಾದವನ್ನು ಹೇಳಿ ತಡೆದರು. ಆದರೆ ಭಗವತೀದಾಸನ ಕ್ರೋಧವು ತೃಣಮಾತ್ರವೂ ಕುಂದಲಿಲ್ಲ : ಕ್ಷಣೇಕ್ಷಣೇ ಅಧಿಕ್ಯವನ್ನು ತಳೆಯಲಾರಂಭವಾಯಿತು. ಭಗವತೀದಾಸನಿಗೆ,—ಈ ಹಾಳು ಯವನರಾಜ್ಯವೃಕ್ಷದ ಬೇರನ್ನೇ ಕಿತ್ತು ಬಿಸುಟು, ಅವರನ್ನು ಭಾರತ ವರ್ಷದಿಂದಲೇ ಹೊರದೂಡಬೇಕೆಂಬುವಷ್ಟರಮಟ್ಟಿಗೆ ಕೋಪಬಂದಿತು. ಆದರೆ, ರಾಜಧರ್ಮದ ಮೇಲೆ ದೃಷ್ಟಿಯನ್ನಿಟ್ಟು ಮುಜಫರನ ದೂತನನ್ನು ಸಂಹರಿಸಲಿಲ್ಲವಾದರೂ ಅವನನ್ನು ಚೆನ್ನಾಗಿ ಬಯ್ದು ಅಪಮಾನಗೊಳಿಸಿ ಕಳುಹಿಸಿದನು.

ಇದಾದ ಕೆಲವು ದಿನಗಳ ಬಳಿಕ ಒಂದು ದಿವಸ ಮಂತ್ರಿಯಾದ ವಿಕ್ರಮಸಿಂಹನು ಬಂದು ರಾಜನನ್ನು ಕಂಡು ಮಾತನಾಡಿದನು.

ವಿಕ್ರಮಸಿಂಹ—ಮಹಾರಾಜ ! ಆ ವಿಷಯವನ್ನು ಆಗಲೇ ಮರೆತುಬಿಟ್ಟಿರುವಂತೆ ಕಾಣುತ್ತದೆ.

ಭಗವತೀದಾಸ—ಯಾವುದು, ಅಂತಹ ವಿಷಯ ?

ವಿಕ್ರಮಸಿಂಹ—ಮುಜಫರನ ವಿಷಯ.

ಭಗವತೀದಾಸ—ಅದನ್ನೇ ? ಅದನ್ನು ಮರೆಯುವುದೆಂದರೇನು ? ಅದು ಈಗಲೂ ನನ್ನ ಸ್ಮೃತಿಪಥದಲ್ಲಿರುವುದು. ಅದು ಹಾಗಿರಲಿ. ಈಗ ಅವನ ಸಮಾಚಾರವೇನು ?

ವಿಕ್ರಮಸಿಂಹ :—ಮಹಾರಾಜ ! ತಾವು ಅವನ ದೂತನನ್ನು ತಿರಸ್ಕರಿಸಿದುದರಿಂದ ಕುಪಿತನಾದ ಮುಜಫರನು, ನನ್ನ ಪುತ್ರನಾಗಿದ್ದ ಮೋಹನಸಿಂಹನ ಹೇಳಿಕೆಯ ಪ್ರಕಾರ ನಮ್ಮ ಮೇಲೆ ದಂಡೆತ್ತಿ ಬರುತ್ತಿರುವನು.

ಭಗವತೀದಾಸ :—ಇದು ನಿಜವೆ ?

ವಿಕ್ರಮಸಿಂಹ :—ಹೌದು, ನನ್ನ ಗುಪ್ತಚರರಲ್ಲೋರ್ವನು ಬಂದು ಹೇಳಿದನು.

ಭಗವತೀದಾಸ :—ಮಂತ್ರಿವರ್ಯನೆ! ಅದಕ್ಕೇತಕ್ಕೆ ಚಿಂತಿಸಬೇಕು? ಬಹಳ ಕಾಲದಿಂದಲೂ, ನಮ್ಮ ರಜಪೂತಯೋಧಗಣವು ರಣಸಮುದ್ರದಲ್ಲಿ ಧುಮಿಕಿ ಯವನರ ಎದೆಯ ರುಧಿರವನ್ನು ಹೀರಿ ತಮ್ಮ ದಾಹವನ್ನು ತೀರಿಸಿಕೊಳ್ಳಲು ಬಹಳ ಆತುರಪಡುತ್ತಿರುವುದು. ಆ ನೀಚನಾದ ಮುಜಫರನ ಯವನ ಸೈನ್ಯವು ನಮ್ಮ ದುರ್ಗವನ್ನು ಸಮೀಪಿಸಿದುದೇ ಆದರೆ ನಮ್ಮ ಸುಶಿಕ್ಷಿತವಾದ ಸೇನೆಯು ಅದನ್ನು ನಿರ್ಮೂಲಮಾಡಿ ಮುಜಫರನ ಹೆಸರನ್ನು ಪ್ರಪಂಚದಿಂದಲೇ ಅಳಿಸಿ ಬಿಡುವುದರಲ್ಲಿ ಲೇಶಮಾತ್ರವೂ ಸಂದೆಗವಿರಲಾರದು. ಹೀಗಿರುವಲ್ಲಿ ನಾವು ಆ ತುಚ್ಛನಾದ ಯವನನಿಗೆ ಏತಕ್ಕಾಗಿ ಭಯಪಡಬೇಕು? ಅವನು ನಮ್ಮ ಸೈನ್ಯದ ಬಳಿ ಬರಲಿ! ಆಗ ರಾಜಪುತ್ರ ಕನ್ಯೆಯನ್ನು ಹೀನಜಾತಿಯವನು ಅಪೇಕ್ಷಿಸುವುದರ ಪರಿಣಾಮವೇನಾಗುವುದೆಂಬುದನ್ನು ಅವನಿಗೆ ಚೆನ್ನಾಗಿ ತಿಳುಹಿಸಿ ಬುದ್ಧಿಗಲಿಸುವೆನು.

ವಿಕ್ರಮಸಿಂಹ :—ಮಹಾರಾಜ! ಸಾವಧಾನದಿಂದ ಚಿತ್ತೈಸಿರಿ. ಕೋಪೋದ್ರೇಕದಿಂದ ಸಿಕ್ಕಿದಹಾಗೆಲ್ಲ ಪ್ರವರ್ತಿಸುವುದು ಶ್ರೇಯಸ್ಕರವಾದುದಲ್ಲ. ಚೆನ್ನಾಗಿ ಪರ್ಯಾಲೋಚಿಸಿ ನೋಡಿ—ನಮ್ಮ ಸೇನೆಯೆಷ್ಟಿರುವುದು? ಅವರ ಬಲವೆಷ್ಟಿರುವುದು? ಅವರ ಅಗಾಧವಾದ ಸೇನೆಯನ್ನು ಇದಿರಿಸಿದರೆ ನಮ್ಮ ಗತಿಯೇನಾಗುವುದು?

ಭಗವತೀದಾಸ :—ವಿಕ್ರಮಸಿಂಹ! ಏನು ಹೇಳುತ್ತಿರುವಿ? ಒಂದೂವರೆ ಸಹಸ್ರ ಸುಶಿಕ್ಷಿತರಾದ ಯೋದ್ಧೃಗಳು ನಮ್ಮ ಆಜ್ಞಾಬದ್ಧರಾಗಿಲ್ಲವೆ?

ವಿಕ್ರಮಸಿಂಹ—ನಮ್ಮ ಬಳಿ ಇರುವವರಾದರೋ ಒಂದೂವರೆಸಹಸ್ರ ಸವಾರರು,-ಆದರೆ, ಅವರ ಬಳಿ ಐದುಸಹಸ್ರ ರಾಹುತರಿರುವರಲ್ಲ!

ಭಗವತೀದಾಸ—ಮಂತ್ರಿವರ್ಯನೆ! ಹಾಗಾದರೆ ನಮ್ಮ ಸೈನ್ಯವು ಅವರ ಸೈನ್ಯವನ್ನಿದಿರಿಸಿ ಯುದ್ಧಮಾಡಲಾರದೆ? ನಮ್ಮ ಸೈನಿಕರ ನರಗಳಲ್ಲಿಯೂ ದುರ್ಬಲತೆಯು ವ್ಯಾಪಿಸಿರುವುದೇನು? ನಮ್ಮವರೆಲ್ಲರೂ ಹೆಂಗಸರಾದರೋ? ನಮ್ಮ ಸೈನಿಕರಲ್ಲಿನ ರಜಪೂತರಕ್ತವು ಇಂಗಿಹೋಯಿತೆ? ನಮ್ಮವರು ತಮ್ಮ ಪೂರ್ವ ಪುರುಷರ ಶೌರ್ಯ, ಸ್ಥೈರ್ಯ, ಸಾಹಸಾದಿ ಸತ್ವಗುಣಗಳನ್ನು ಮರೆತುಬಿಟ್ಟರೆ? ಅವರ ಜ್ಞಾಪಕಶಕ್ತಿಯು ಹಾಳಾಗಿ ಹೋಯಿತೆ? ನಮ್ಮವರು, ಭರತಖಂಡಕ್ಕೆ ರತ್ನಪ್ರಾಯವಾದ ರಾಜಸ್ಥಾನದಲ್ಲಿ ಆರ್ಯವೀರದಂಪತಿಗಳಿಗೆ ಜನ್ಮಗ್ರಹಣಮಾಡಲಿಲ್ಲವೆ? ನಮ್ಮವರು ರಜಪೂತಜನನಿಯ ಸ್ತನ್ಯಪಾನವನ್ನು ಮಾಡಲಿಲ್ಲವೇನು? ನಮ್ಮವರೆಲ್ಲರಲ್ಲಿಯೂ ಕ್ಷಾತ್ರಧರ್ಮವು ತಿಲಮಾತ್ರವಾದರೂ ಉಳಿದುಕೊಳ್ಳದೆ ವಿಲುಪ್ತವಾಗಿ ಹೋಯಿತೆ?-ಎಲೈ, ವಿಕ್ರಮ

ಸಿಂಹ! ನಮ್ಮ ರಜಪೂತರ ವೀರ್ಯಾದಿಗುಣಗಳನ್ನು ಹೀಗೆ ತೃಣೀಕರಿಸಿ ಮಾತನಾಡುವುದು ನಿನಗೆ,—ರಾಜಕಾರ್ಯಪ್ರವೀಣನಿಗೆ,—ದೇಶಹಿತೈಷಿಗೆ,—ದೀರ್ಘದರ್ಶಿಗೆ ಉಚಿತವಾದುದೆ? ಹಾ! ಹಾ!! ಹಾ!!! ಭಾರತೀಯರ ಗತಿಯಿಂತಾದುದು ಅತೀವ ಶೋಚನೀಯ!

ವಿಕ್ರಮಸಿಂಹ—ಮಹಾರಾಜ! ನಮ್ಮವರಲ್ಲಿ ವೀರ್ಯವಿಲ್ಲವೆಂದು ನಾನು ಹೇಳಲಿಲ್ಲ. ನಮ್ಮವರು ಯುದ್ಧದಲ್ಲಿ ಇತರರೆಲ್ಲರನ್ನೂ ಹೊಡೆದಟ್ಟುವರು. ಸಮರ ಸಮುದ್ರದಲ್ಲಿ ನಮ್ಮ ಸೈನ್ಯದ ತರಂಗಗಳಿಂದ ತಾಡಿತರಾಗಿ ಬದುಕಿಬರುವವರಾರಿವರು? ಆದರೆ ಈಗ ನಾವು ಯುದ್ಧಮಾಡಿದರೆ ಅನೇಕ ಸ್ವಾಮಿ ಭಕ್ತರಾದ ರಜಪೂತವೀರರ ಪ್ರಾಣಗಳನ್ನು ವ್ಯರ್ಥವಾಗಿ ನಷ್ಟಗೊಳಿಸಬೇಕಾಗುವುದು. ಹಾಗೆ ನಷ್ಟಗೊಳಿಸಿದರೂ ಚಿಂತೆಯಿಲ್ಲ,—ನಮಗೇನಾದರೂ ಲಾಭವುಂಟಾಗುವುದೋ—ಎಂದೆಂದುಕೊಂಡರೆ ನಮಗೆ ಅದರಿಂದ ಬರುವ ಪ್ರತಿಫಲವಾವುದೂ ಇಲ್ಲ. ಹೀಗಿರುವಲ್ಲಿ ಅನೇಕ ಪ್ರಾಣಗಳನ್ನು ಅನ್ಯಾಯವಾಗಿ ಬಲಿಗೊಡುವುದು ಒಳ್ಳೆಯದಲ್ಲ.

ಭಗವತೀದಾಸ—ಎಲೈ, ಸಚಿವಪುಂಗವನೆ! ನಾನು ಮೊದಲು ದುಡುಕಿ ಮಾತನಾಡಿದುದನ್ನು ಮನ್ನಿಸು. ನೀನು ಹೇಳುವುದೂ ಆಲೋಚನಾರ್ಹವಾದುದು. ಈಗ ನನಗೆ ಈ ಕಷ್ಟದಿಂದ ಪಾರಾಗುವ ವಿಧವಾವುದೂ ತಿಳಿಯುವುದಿಲ್ಲ. ಆದುದರಿಂದ ನೀನೇ ಯೋಚಿಸಿಹೇಳಬೇಕು.

ವಿಕ್ರಮಸಿಂಹ—ರಾಜನೆ! ಇಂತಹ ಸಂದರ್ಭಗಳಲ್ಲಿ ಅನ್ಯರಾಜರ ಸಾಹಾಯ್ಯವಿಲ್ಲದೆ ಸ್ವತಂತ್ರವಾಗಿ ಪ್ರವರ್ತಿಸುವುದು ಬಹಳ ಅಪಾಯಕರವಾದುದು. ಆದುಕಾರಣ ಈಗ ನಾವು ಜಸಲಮೇರದಧಿಪತಿಯಾದ ಕರ್ಣರಾಯನ ಸಾಹಾಯ್ಯವನ್ನು ತೆಗೆದುಕೊಳ್ಳುವುದು ಒಳ್ಳೆಯದೆಂದು ತೋರುತ್ತಿದೆ. ಅವರು ನಮ್ಮ ಪಕ್ಷವನ್ನು ವಹಿಸಿದರೆ, ನಿಸ್ಸಂಶಯವಾಗಿಯೂ ನಮಗೇ ಜಯವು ಲಭ್ಯವಾಗುವುದು.

ಭಗವತೀದಾಸ—ಒಳ್ಳೆಯದು, ವಿಕ್ರಮಸಿಂಹ! ನಾಳೆಯೇ ನಾನು, ಪತ್ನೀ ಪುತ್ರಿಯರನ್ನು ಕರೆದುಕೊಂಡು ಸ್ವಲ್ಪ ಸೇನಾಸಮೇತನಾಗಿ ಜಸಲಮೀರಕ್ಕೆ ತೆರಳುವೆನು. ನಾನು ಹಿಂದಿರುಗಿ ಬರುವವರೆಗೂ ನೀನು ಇಲ್ಲಿನ ಕಾರ್ಯಭಾಗಗಳನ್ನು ನೋಡಿಕೊಂಡಿರು.

ವಿಕ್ರಮಸಿಂಹ—ಅಪ್ಪಣೆ.

ಭಗವತೀದಾಸ—ಆದರೆ ಈ ವಿಷಯವು ಮಾತ್ರ ಗುಪ್ತವಾಗಿರಲಿ.

ಮೋಹನಸಿಂಹನು ಮುಜಫರನ ಸೇನೆಯಲ್ಲಿ ನಿರತನಾದುದನ್ನು ನಮ್ಮ ಪಾಠಕ ಸದಾಶಯರು ಇಷ್ಟು ಬೇಗಾಗಲೇ ಮರೆತುಬಿಟ್ಟಿರಲಾರರು. ಹಾಗೆ ಯವನರಾಜನ

ಚಾಕರಿಯಲ್ಲಿ ನಿಂತಬಳಿಕ ಮೋಹನನು ಹಲವು ಗೂಢಚಾರರನ್ನು ದುರ್ಗಕ್ಕೆ ಕಳುಹಿ, ಅಲ್ಲಿ ನಡೆಯುವ ಸಂಗತಿಗಳೆಲ್ಲವನ್ನೂ ತನಗೆ ತಿಳುಹಿಸಬೇಕೆಂದು ಅಜ್ಞಾಪಿಸಿದ್ದನು. ಅವರಲ್ಲೊಬ್ಬನು, ರಾಜಸಚಿವರ ಸಂಭಾಷಣೆಯನ್ನೂ ಮತ್ತು ಅವರ ತೀರ್ಮಾನ ವನ್ನೂ ಹೇಗೆಯೋ ತಿಳಿದುಕೊಂಡುಬಂದು ಅದನ್ನು ಮೋಹನನಿಗೆ ಹೇಳಿಬಿಟ್ಟನು. ಇದನ್ನು ಮೋಹನನು ಮುಜಫರನಿಗೆ ತಿಳುಹಿಸಿದನು. ಆಗ ಮುಜಫರನು ಸೇನಾಸಮೇ ತನಾಗಿ, ಪ್ರಯಾಣ ಸನ್ನದ್ಧನಾಗಿದ್ದ ರಾಜಾ ಭಗವತೀದಾಸನನ್ನು ಇದಿರಿಸಿ ಅವನ ಪುತ್ರಿಯನ್ನು ಬಲಾತ್ಕಾರವಾಗಿ ಕರೆದೊಯ್ಯುವೆನೆಂದು ಶಪಥಮಾಡಿಕೊಂಡು ಜಸಲ ಮೀರದ ಮಾರ್ಗದಲ್ಲಿಯೇ ಪ್ರಯಾಣವನ್ನು ಬೆಳೆಸಿದನು. ಮೋಹನಸಿಂಹನೂ ಅವ ನನ್ನನುಸರಿಸಿದನೆಂಬುದನ್ನು ಬರೆಯಬೇಕಾದುದರ ಅವಶ್ಯಕವೇ ಇಲ್ಲವು.

ಐದನೆಯ ಅಧ್ಯಾಯ.

ಸಂಜೆಯಾಯಿತು. ಹಾಲುಚೆಲ್ಲಿದಹಾಗೆ ಬೆಳದಿಂಗಳು ಬಂದಿತು. ಕಳೆಯಾತ್ಮ ನಿಂದ ಹೊರಸೂಸುವ ಅಮೃತವಳ್ಳಿಗಳು ಸರ್ವರಿಗೂ ಅತ್ಯುತ್ಸಾಹವನ್ನು ಉಂಟು ಮಾಡಿದುವು

ಇಂದು ದುರ್ಗದ ಸೈನಿಕರಲ್ಲಿ ದೊಡ್ಡ ಕೋಲಾಹಲವೆದ್ದಿರುವುದು. ಎಲ್ಲರಿಗೂ ಆಶ್ಚರ್ಯದ ಮೇಲಾಶ್ಚರ್ಯ! ಆ ರಾತ್ರಿಯೇ ಪ್ರಯಾಣಮಾಡುವುದಕ್ಕೆ ಸಿದ್ಧರಾಗಿರ ಬೇಕೆಂದು ವಿಕ್ರಮಸಿಂಹ ಮಂತ್ರಿಪುಂಗವನು ಕಟ್ಟಲಾಮೇಲೆ ಸೈನಿಕರಿಗೆ ತಿಳಿಯಿಸಿ ದನು. ಆ ಸಮಾಚಾರವು ಒಂದೆರಡು ನಿಮಿಷಗಳಲ್ಲಿಯೇ ಊರಲ್ಲೆಲ್ಲಾ ಪಸರಿಸಿತು. ಅನಂತರ, ಎಲ್ಲಿನೋಡಿದರಲ್ಲಿ ಜನಸಮೂಹಗಳೇ ಕಾಣಬರುತ್ತಿದ್ದುವು. ಒಂದೆಡೆಸೇರಿ ಕೌತುಕದಿಂದ ಮಂತ್ರಿಯ ಆಜ್ಞೆಯ ಕಾರಣವನ್ನು ಚರ್ಚಿಸುತ್ತಿರುವವರು ಕೆಲವರು. ಕರ್ತವ್ಯದಮೇಲೆ ಹೋಗಲು ಸುಸಿದ್ಧರಾಗುತ್ತಿರುವ ಸೈನಿಕರು ಕೆಲವರು. ಯುದ್ಧ ಭೂಮಿಯ ನೋಟವನ್ನು ಹೃದಯಂಗಮವಾಗುವಂತೆ ತಮ್ಮ ಜತೆಗಾರರಿಗೆ ತಿಳಿಸುತ್ತಿ ರುವ ಸೈನಿಕರು ಕೆಲವರು. ಹಿಂದೆ ನಡೆದ ಯುದ್ಧಗಳಲ್ಲಿ ತಾವು ಪ್ರದರ್ಶಿಸಿದ ಧೈರ್ಯ ಶೌರ್ಯಗಳನ್ನು ಜನಗಳಿಗೆ ವಿವರಿಸುತ್ತಿರುವ ಮುದುಕರಾದ ಸೈನಿಕರು ಕೆಲವರು. ಮುಂದೆ ನಡೆವ ಯುದ್ಧದಲ್ಲಿ ಎಷ್ಟು ಭಯಂಕರವಾಗಿ ತಮ್ಮ ಶತ್ರುಗಳನ್ನು ಹೊಡೆದಟ್ಟುವೆ ವೆಂದು ತಮ್ಮ ಪರಾಕ್ರಮವನ್ನು ತಾವೇ ಪ್ರಶಂಸಿಸುತ್ತಿರುವ ಸೈನಿಕರು ಹಲವರು. ತಮ್ಮ ಆಯುಧಗಳನ್ನು ತೊಳೆದು ಶುಭ್ರಪಡಿಸುತ್ತಿರುವವರು ಕೆಲವರು. ತಮ್ಮ ಅಶ್ವಗ

ಳನ್ನು ಉಜ್ಜಿ ತೊಳೆಯುತ್ತಿರುವವರು ಕೆಲವರು. ಹಳೆಯ ಸಾಧಕಗಳನ್ನು ಜ್ಞಾಪಿಸಿಕೊಳ್ಳುತ್ತ ಅಸಿಗಳನ್ನು ಝಳಪಿಸುತ್ತಿರುವವರು ಹಲವರು. ಅನತಿಕಾಲದಲ್ಲಿಯೇ ಯೋದ್ಧರುಗಳೆಲ್ಲರೂ ಸುಸಜ್ಜಿತರಾಗಿ ಸಾಲುಸಾಲಾಗಿ ನಿಂತು ಮುಂದಲ ಅಪ್ಪಣೆಯನ್ನು ನೆರವೇರಿಸುವುದಕ್ಕಾಗಿ ಕಾಲಪರೀಕ್ಷಣೆಮಾಡುತ್ತಿದ್ದರು.

ಊರಿನ ಜನಗಳಲ್ಲಿಯೂ ದೊಡ್ಡ ಗದ್ದಲವೆದ್ದುದು. ಸಮಾಚಾರವನ್ನು ಕೇಳಿದೊಡನೆಯೇ ಎಲ್ಲೆಲ್ಲಿದ್ದವರು ಅಲ್ಲಲ್ಲಿಯೇ ನಿಂತುಬಿಟ್ಟರು. ಎಲ್ಲರಲ್ಲಿಯೂ ಆಶ್ಚರ್ಯವು ತಾನಾಗಿ ತಾನೇ ಆಕ್ರಮಿಸಿಕೊಂಡುದು. ಬೀದಿಯಲ್ಲಿ ಆಟವಾಡುತಲಿದ್ದ ಬಾಲಕರೆಲ್ಲರೂ, "ಎಲೋ! ಬನ್ನಿರೋ! ಯುದ್ಧಕ್ಕೆ ಹೋಗುವಂತಿದೆ. ನಾವೂ ಸಹ ಪೊರಮಟ್ಟು ಅರಿಗಳನ್ನು ಹೊಡೆದಟ್ಟುವ!" ಎಂದನ್ನಲಾರಂಭಮಾಡಿದರು. ವೃದ್ಧರೆಲ್ಲರೂ, ಅವುದೋ ಒಂದು ಮಹೋತ್ಸವವು ಸಮೀಪಗತವಾಯಿತೆಂದುಕೊಂಡರು. ಧನಾರ್ಥಿಗಳೆಲ್ಲರೂ, ತಾವು ಗಳಿಸಿದ ಸಂಪತ್ತನ್ನು ಭೂಗರ್ಭವಮಾಡುವುದಕ್ಕೆ ಹೊರಟರು. ಯುವಕರೆಲ್ಲರೂ ಯುದ್ಧಾಪೇಕ್ಷಿಗಳಾಗಿ ಸೇನೆಯ ಹಿಂದೆ ಹೊರಡಲು ಅನುವಾದರು. ವೀರಮಾತೆಯರೆಲ್ಲರೂ ರಾಜನಿಗೆ ಸಾಹಾಯ್ಯಮಾಡುವಂತೆ ತಂತಮ್ಮ ಪುತ್ರರನ್ನು ಪ್ರೇರೇಪಿಸಿದರು. ವರ್ತಕರೆಲ್ಲರೂ ತಮ್ಮ ವ್ಯಾಪಾರಕ್ಕೆ ಎಲ್ಲಿಯಾದರೂ ಕುಂದುಬಂದೀತೆಂದು ಯೋಚಿಸುತ್ತಾ ಕುಳಿತುಬಿಟ್ಟರು. ಊರಲ್ಲಿ ಎಲ್ಲೆಲ್ಲಿ ನೋಡಿದರೂ ಗಲಭೆಯೇ ಕಂಡು ಬರುತ್ತಿದ್ದಿತು.

ಅರಮನೆಯಲ್ಲೂ ಸೇವಕ ಸೇವಕಿಯರ ಕೂಗಾಟ! ಹುಚ್ಚುಸಂಭ್ರಮ!! ರಾಣಿಯು ತಾನೇ ಸ್ವಂತವಾಗಿ ಪ್ರಯಾಣಕ್ಕೆ ಎಲ್ಲವನ್ನೂ ಅಣಿಮಾಡತೊಡಗಿರುವಳು. ಅರಮನೆಯ ಧನವನ್ನೆಲ್ಲ ಒಂದು ಕಡೆ ಹೂಳಿಟ್ಟು ಅದನ್ನು ವಿಕ್ರಮಸಿಂಹನಿಗೆ ತಿಳಿಸಿದುದಾಯ್ತು. ಇಷ್ಟೆಲ್ಲಾ ನಡೆದರೂ—ಎಲ್ಲಿಗೆ ಹೋಗುವುದೆಂಬುದು ಮಾತ್ರ ರಾಜಾ, ಮಂತ್ರಿ, ಮೋಹನನ ಗುಪ್ತಚರನೋರ್ವ, ಇವರಿಗಲ್ಲದೆ ಮತ್ತಾವಪ್ರಾಣಿಗೂ ತಿಳಿಯದು. ಆದರೂ ಜನರುಮಾತ್ರ ತಮ್ಮ ಮನಸ್ಸಿಗೆ ಬಂದಂತೆಲ್ಲಾ ಹೇಳಿಕೊಳ್ಳುತ್ತಿದ್ದರು. ಹೊರಡುವುದಕ್ಕೆ ಮುಂಚಿತವಾಗಿ ಊರು ಮತ್ತು ಅರಮನೆಗಳನ್ನು ಕಾಯುವುದಕ್ಕಾಗಿ ಸ್ವಲ್ಪ ಸೇನೆಯು ವಿಕ್ರಮಸಿಂಹಮಂತ್ರಿಯ ಅಧೀನವಮಾಡಲ್ಪಟ್ಟುದು.

ಇಷ್ಟುಹೊತ್ತಿಗೆ ಸೈನಿಕರು ತಮ್ಮ ತಮ್ಮ ನಾಯಕರ ಅಧೀನದಲ್ಲಿ ರಣಘೋಷ ಮಂಗೈಯುತ್ತ ಅರಮನೆಯ ಮುಂದೆ ಬಂದು ನಿಂತರು. ಯೋಧರೆಲ್ಲರೂ ಆಗಸವನ್ನು ಭೇದಿಸುವ ಹಾಗೆ ಧ್ವನಿಮಾಡಿದರು.

"ಜಯ! ಭಗವತೀಪ್ರಸಾದನಿಗೆ ಜಯವಾಗಲಿ!"

ಅನಂತರ ರಾಣಿಯೂ ರಾಯಗುವರಿ ಅಂಬಾಲಿಕೆಯೂ ಅವರವರ ಪಾಲ್ಕಿಗಳಲ್ಲಿ ಕುಳಿತರು. ರಾಜನು ಉತ್ತಮಾಶ್ವವೊಂದನ್ನೇರಿದನು. ಸೈನಿಕರೂ ತಂತಮ್ಮ ಅಶ್ವಗಳನ್ನಾರೋಹಿಸಿದರು. ರಣಭೇರಿಯು ಧ್ವನಿತವಾಯ್ತು. ಬಳಿಕ ಇನ್ನೊಂದುತಡವೆ ಸೈನಿಕ ಸೇನಾನಿಗಳೆಲ್ಲರೂ ಇಂತೆಂದು ಉಚ್ಚೈರ್ಘೋಷವನ್ನು ಮಾಡಿದರು.

"ಜಯ! ರಾಜಾ ಭಗವತೀದಾಸನಿಗೆ ಜಯ!!"

ಬಳಿಕ ಸೈನ್ಯವು ರಾಜಾಜ್ಞೆಯಮೇರೆ ಜಸಲಮೀರವನ್ನು ಕುರಿತು ಹೊರಟಿತು.

ಆರನೆಯ ಅಧ್ಯಾಯ.

ಜಸಲಮೀರದ ಮಾರ್ಗದಲ್ಲಿ ಸ್ವಲ್ಪದೂರ ಹೋಗುತ್ತಲೇ, ಮುಂದಿದ್ದ ದುರ್ಗದ ಸೈನಿಕರಲ್ಲೊಬ್ಬನು ತನ್ನ ಪಕ್ಕದಲ್ಲಿದ್ದ ಸವಾರನನ್ನು ಕುರಿತು, ಎಲೋ! ನೋಡು. ಇನ್ನಾವುದೋ ಸೈನ್ಯವು ಇತ್ತಕಡೆಯೇ ಬರುವಂತಿದೆ! ಎಂದನು. ಆದರೆ ಎರಡನೆಯವನು ಅದನ್ನು ನಂಬಲಿಲ್ಲ. ಸ್ವಲ್ಪಹೊತ್ತಿನಲ್ಲಿಯೇ ಯಾವುದೋ ಒಂದು ದೊಡ್ಡ ಸೈನ್ಯವು ದೂರದಲ್ಲಿ ಕಾಣಬಂದಿತು. ಆಗ ಎಲ್ಲರಿಗೂ ಧೃಢವಾದ ನಂಬುಗೆ ಯುಂಟಾಯಿತು. ಈ ವರ್ತಮಾನವು ಸ್ವಲ್ಪಕಾಲದಲ್ಲಿಯೇ ಭಗವತೀದಾಸನಿಗೆ ತಿಳಿಯಿತು. ಭಗವತೀದಾಸನಿಗೆ ಸ್ವಲ್ಪ ಕಷ್ಟಕ್ಕೆ ಬಂದಿತು. ತನ್ನ ಸೈನ್ಯಸಂಚಲನದ ವಿಷಯವು ತನಗೆ ಮತ್ತಾ ವಿಕ್ರಮಸಿಂಹನಿಗೆ ಮಾತ್ರ ಗೊತ್ತಿರುವುದೆಂದು ಆವನಿಗೆ ನಂಬುಗೆಯಿತ್ತು. ಈಗ ಆ ನಂಬುಗೆಯು ಸಡಿಲವಾಯಿತು. ವಿಕ್ರಮಸಿಂಹನೇ ಎಲ್ಲಿಯಾದರೂ ಈ ಗುಪ್ತಸಮಾಚಾರಗಳನ್ನು ಶತ್ರುಗಳಿಗೆ ತಿಳಿಯಿಸಿರಬಹುದೆಂಬ ಯೋಚನೆಯು ಆವನ ಮನದಲ್ಲಿ ಉತ್ಪನ್ನವಾಗಿ ಆವನನ್ನು ಬಹಳವಾಗಿ ನಿಂದಿಸಲಾರಂಭಮಾಡಿದನು. ಕೊನೆಗೆ ಅವನು ವಿಕ್ರಮಸಿಂಹನೇ ದೂಷಿಯೆಂದು ನಿರ್ಧರಿಸಿಬಿಟ್ಟನು. ಆ ಪಾಪಿ-ಮೋಹನನ ಸೇವಕನು ಇವರ ಗುಪ್ತಸಮಾಚಾರವನ್ನು ಭೇದಿಸಿದುದು ಭಗವತೀದಾಸನಿಗೆ ತಿಳಿಯುವುದೆಂತು ? ಕೊನೆಗೆ ತನ್ನ ಸೈನಿಕರಿಗೆ ಮುಂದುವರಿಸಬೇಕೆಂದು ಅಪ್ಪಣೆಮಾಡಿದನು. ಏತಕ್ಕೆಂದರೆ ಆವನಿಗೆ,-ತನ್ನ ಮುಂದೆ ಬರುತಲಿದ್ದ ಸೇನೆಯು ಮುಜಫರನದೇ ಅಹುದೋ ಅಥವಾ ಇನ್ನಾವರಾಜನದೋ-ಎಂಬ ಸಂಶಯವುಂಟಾಯಿತು.

ಸ್ವಲ್ಪಹೊತ್ತಿನೊಳಗಾಗಿ ಎರಡು ಬಲಗಳೂ ಸಂಧಿಸಿದುವು. ಇನ್ನೊಂದು ಮುಜಫರನ ಸೇನೆಯೆಂದು ತಿಳಿದಕೂಡಲೇ ಆ ಕತ್ತಲಲ್ಲಿಯೇ ಯುದ್ಧವು ಪ್ರಾರಂಭವಾಯಿತು. ಹೊಡೆದಾಟವು ಮೊದಲಾಯಿತು. ಎರಡು ಕಡೆಗಳ ಸೈನಿಕರೂ ರಣೋ

ತ್ಸಾಹ ವರ್ಧಿತರಾಗಿ ಉನ್ಮಾದಗ್ರಸ್ತರಾಗಿ ಶತ್ರುಸಂಹರಣಕಾರ್ಯದಲ್ಲಿ ತೊಡಗಿದರು. ಪುಂಡರೀಕಗಳ ಬೃಂಹಿತ! ಅಶ್ವಗಳ ಹೇಷಾರವ !!ಫಿರಂಗಿಗಳ ಭಯೋತ್ಪಾದಕ ಶಬ್ದ!!! ವಿಜಯಿಗಳ ಕೋಲಾಹಲದ ಲಹರಿಗಳೊಡನೆ ಮರಣ ಮತ್ತು ತೃಷಾಪೀಡಿತರ ಆರ್ತಾಲಾಪಗಳು ನಿಲೀನ! ನಿಮಿಷನಿಮಿಷಕ್ಕೂ ಅಸಂಖ್ಯಾತರಾದ ಯೋದ್ಧೃಗಳು ಮಾರ್ತಾಂಡ ಪುತ್ರನಾಲಯವನ್ನು ಕುರಿತು ತೆರಳಿದರು. ಭೂಪ್ರದೇಶವು ಶೋಣಿತಾಕ್ತವಾಗಿ ಕೆಂಪು ವರ್ಣವನ್ನು ತಳೆದುದು. ಇದನ್ನು ನೋಡಿದವರಿಗೆ ಬೋಧೆಯಾಗುತ್ತಿದ್ದಿತು; ಏನೆಂದರೆ ಶಾಂತಮಯಿಯಾದ ಭೂದೇವಿಯು ಇಂದು ಇಷ್ಟು ರೌದ್ರಾಕಾರವನ್ನು ತಾಳಿರುವುದೇ ತಕ್ಕುದೇ? ಎಲ್ಲೆಲ್ಲಿ ದೃಷ್ಟಿಪ್ರಸರಣ ಮಾಡಿದರಲ್ಲಲ್ಲಿ ಭಯಾನಕ ದೃಶ್ಯ! ಅಂದು ಆಸಮರಾಂಗಣದಲ್ಲಿ ಪಿಶಾಚಿಗಳಿಗೊಂದು ದೊಡ್ಡ ಔತಣ !

ಏನಾದರೇನು? ಎಷ್ಟು ಹೃದಯಂಗಮವಾಗಿ ವರ್ಣಿಸಿದರೇನು? ಭಾರತೀಯರು ಮಾತ್ರ ಗೆಲ್ಲಲಿಲ್ಲ. ಅಂದು ನಾನೂರು ರಜಪೂತ ಯೋದ್ಧರುಗಳ ಬಿಸಿರಕ್ತವು ಅನ್ಯಾಯವಾಯಿತು. ಜಯಲಕ್ಷ್ಮಿಯಾದರೂ ಮುಜಫರನನ್ನೇ ಒಲಿದಳು ಭಗವತೀದಾಸನಾದರೋ ಆಳಿದುಳಿದವರೊಡನೆ ಜಸಲಮೀರಕ್ಕೆ ಪಲಾಯನಮಾಡಿದನು.

ಪಾಠಕರೆ! ಎಲ್ಲರೂ ಮರೆತಂತಿದೆ. ನಮ್ಮ ಕಥಾನಾಯಿಕೆಯ ಗತಿ ಯೇನಾದುದೆಂದು ವಿಚಾರಿಸಬೇಕಾದುದು ನಮ್ಮ ಕರ್ತವ್ಯವಲ್ಲವೆ ?

* * * *

ಯಾವಾಗ ಹಿಂದೂ ಯವನರ ಯುದ್ಧವು ಆರಂಭವಾಯಿತೋ ಆಗ ಅಂಬಾಲಿಕೆಗೆ ಅತ್ಯಂತಭಯವುಂಟಾಯಿತು. ಆದುಕಾರಣ ಆಕೆಯು ತನ್ನ ಸಖಿಯನ್ನು ಕೂಗಿದಳು. ಆಗಲೂ ನಿಶ್ಶಬ್ದ. ಸಖಿಯರಾರೂ ರಾಜಪುತ್ರಿಯ ಬಳಿ ಬರಲಿಲ್ಲ. ಇದು ಅಂಬಾಲಿಕೆಯ ಭಯವನ್ನು ಇಮ್ಮಡಿಮಾಡಿತು. ಆಗ ಪಲ್ಲಕ್ಕಿಯಹೊರಗಡೆ ಯಾರೋ ಗಟ್ಟಿಯಾಗಿ ನಕ್ಕಂತಾಯಿತು. ಅಂಬಾಲಿಕೆಯು ಪಾಲ್ಕಿಯ ಫರದೆಯನ್ನು ತೆರೆದಳು. ಆಗ ಪಲ್ಲಕ್ಕಿಯ ಬಳಿ ಒಂದು ವ್ಯಕ್ತಿಯು ಬಂದು ನಿಂತಿತು. ಆ ವ್ಯಕ್ತಿಯು ಪಾಠಕರಿಗೆ ಪೂರ್ವಪರಿಚಿತನಾದ, ಮಂತ್ರಿಸುತ 'ಮೋಹನಸಿಂಹ'

ಮೋಹನಸಿಂಹನು ಕಿಲಕಿಲನೆ ನಕ್ಕನು. ಆ ನಗುವು ಅಂಬಾಲಿಕೆಯ ಹೃದಯವನ್ನು ಬೇಧಿಸಿಕೊಂಡು ಹೋಯಿತು ತರುವಾಯ ಮೋಹನನು, " ರಾಯಗುವರಿ! ಹೊರಗೆ ನೋಡು. ಹಿಂದೂ ಮುಸಲಮಾನರಿಗೆ ಅತಿಘೋರವಾದ ಯುದ್ಧವು ನಡೆಯುತ

ಲಿದೆ. ಇನ್ನೊಂದು ನಿಮಿಷದಲ್ಲಿ ನಿನ್ನ ತಂದೆಯ ಸೇನೆಯು, ಸಾಗರದಲ್ಲಿ ಸೇರಿಹೋಗುವ ನದಿಯ ತರಂಗಗಳಂತೆ, ಯವನರ ಸೇನಾಸಮುದ್ರದಲ್ಲಿ ಲೀನವಾಗಿಹೋಗುವುದು" ಎಂದನು.

ಅಂಬಾಲಿಕೆಯು (ಆಶ್ಚರ್ಯಚಕಿತಳಾಗಿ) ಇದು ನಿಜವೆ?

ಮೋಹನ-ನಿಜ. ಅಂಬಾಲಿಕೆ! ಅದಕ್ಕೆ ಕಾರಣಕರ್ತರಾರೆಂದು ಗೊತ್ತೋ?

ಅಂಬಾಲಿಕೆ-ಗೊತ್ತು ಅದರ ಕಾರಣಕರ್ತನು ನೀನೇ

ಮೋಹನಸಿಂಹ-ನೋಡು. ಅಂಬಾಲಿಕೆ! ಹಿಂದೆ ನನ್ನನ್ನು ನೀಚನೆಂದು ಸಂಬೋಧಿಸಿ ತಿರಸ್ಕರಿಸಿ ಬಿಟ್ಟೆಯಲ್ಲ! ಹಾಗೆ ತಿರಸ್ಕರಿಸಿದುದು ನಿನ್ನ ತಪ್ಪೇನೂ ಇಲ್ಲ, ಏತಕ್ಕೆಂದರೆ ಆಗ ನಿನಗೆ ನನ್ನ ಪೌರುಷಸಾಮರ್ಥ್ಯಗಳು ತಿಳಿದಿರಲಿಲ್ಲ. ರಾಜಕುಮಾರಿ! ಹೊರಗೆ ನೋಡು. ಅಸಂಖ್ಯಾತಮುಸಲರು ವೀರಾವೇಶದಿಂದ, ಮೃಗೀಕುಲಗಳಂತೆ ಓಡಿಹೋಗುವ ನಿನ್ನ ಪಿತನ ಸೈನಿಕರನ್ನು ಸಂಹರಿಸುತ್ತಿರುವರು. ಚೆನ್ನಾಗಿ ಪರ್ಯಾಲೋಚಿಸಿ ನೋಡು. ಈಗಲಾದರೂ ನೀನು ನನ್ನನ್ನು ವಿವಾಹವಾಗುವುದಕ್ಕೆ ಸಮ್ಮತಿಸಿದರೆ ನಿನ್ನ ಹಿಂದಿನ ಅಪರಾಧಗಳನ್ನೆಲ್ಲಾ ಮನ್ನಿಸಿಬಿಡುವೆನು. ಅಷ್ಟೇ ಅಲ್ಲ. ತಂತ್ರಪರಂಪರೆಯ ಸಹಾಯದಿಂದ, ಈಗ ಯುದ್ಧಮಾಡುತಿರುವ ಯವನರನ್ನೆಲ್ಲಾ ಓಡಿಸಿಬಿಡುವೆನು. ಅನಂತರ ನಾವಿಬ್ಬರೂ ಈ ಭೂತಲದಲ್ಲೇ ನಂದನವನವೊಂದನ್ನು ಕಲ್ಪಿಸಿಕೊಂಡು ಸುಖಿಸಿಬಿಡೋಣ. ರಾಯಕುವರಿ! ಒಂದುಬಾರಿಯಾದರೂ ನಿನ್ನ ಮುದ್ದುಮುಖಕಮಲವನ್ನು ಚುಂಬಿಸುವುದಕ್ಕೆ···(ಎಂದು ರಾಜಪುತ್ರಿಯನ್ನು ಸಮೀಪಿಸಿ,) ಏನುಹೇಳುವಿ ? ಕಾಲವಾದರೋ ಮೀರಿಹೋಗುತ್ತಿರುವುದು.

ಅಂಬಾಲಿಕೆ—(ರೋಷಾರುಣನೇತ್ರಳಾಗಿ) ಎಲೊ ಮುಸಲರ ಪಾದಧೂಳಿಯನ್ನು ಪರಿಗ್ರಹಣಮಾಡಿದ ನರಪಶುವೆ— ಏತಕ್ಕೆ ? ಪಶುವಿಗಿಂತಲೂ ಹೀನನಾದವನೆ! ಏನು ಬೊಗಳುತ್ತಿರುವಿ ! ಬೇಗನೆ ನನ್ನಿದಿರಿನಿಂದ ತೊಲಗಿ ಹೋಗು.

ಮೋಹನ—ಹಾಗಾದರೆ ನೀನೊಪ್ಪುವುದಿಲ್ಲವಷ್ಟೆ ?

ಅಂಬಾಲಿಕೆ—(ನಿಶ್ಚಲಧ್ವನಿಯಿಂದ) ಇಲ್ಲ. ಇಲ್ಲ. ಇಲ್ಲ.

ಮುಂದೆ ಬಂದಿದ್ದವನೇ ಹಿಂದಕ್ಕೆ ಸರಿದು ಮೋಹನನು ಕರ್ಕಶಧ್ವನಿಯಿಂದ, 'ಗಫೂರ' ಎಂದು ಕೂಗಿದನು. ಒಡನೆಯೇ ಒಬ್ಬ ಸ್ಥೂಲಕಾಯನಾದ, ದಾಡಿಮೀಸೆಗಳಿಂದ ಕೂಡಿದ ಮುಸಲನು ಮೋಹನನಿದಿರಿಗೆ ಬಂದು ನಿಂತನು. ಮೋಹನನು, "ಗಫೂರಖಾನ್ ! ಜೋಕೆಯಿಂದ ನೋಡಿಕೊ. ಈ ರಮಣಿಯನ್ನೂ ಇನ್ನೊಂದು ಪಲ್ಲಕ್ಕಿಯಲ್ಲಿರುವ ರಮಣಿಯನ್ನೂ ನವಾಬರ ಶಿಬಿರಕ್ಕೆ ಕರೆದೊಯ್ಯಬೇಕು. ಎಂದನು.

ಈಗಲೇ ?

ಅಹುದು,—ಈ ರಾತ್ರಿಯೇ—ಈ ಕ್ಷಣವೇ.

ಅಪ್ಪಣೆ. ಹುಜೂರ್.

ತರುವಾಯ ಮೊಹನನು ಅಲ್ಲಿ ನಿಲ್ಲಲಿಲ್ಲ. ಎಲ್ಲಿಗೋ ಹೊರಟು ಹೋದನು.

ಏಳನೆಯ ಅಧ್ಯಾಯ.

(ಉಪಸಂಹಾರವು.)

ರಾಣಿಯೂ ಮಗಳೂ ಮುಜಫರನ ಬಂದಿಗಳಾದರು. ಮುಜಫರನ ಸಂತೋಷಕ್ಕಂತೂ ಪಾರವೇ ಇಲ್ಲ.

ಒಂದುದಿವಸ ಮುಜಫರನು ಸುರೆಯನ್ನು ಕುಡಿದು ಉನ್ಮತ್ತನಾಗಿ, ರಾಯಕುವರಿಯಮೇಲೆ ಅತ್ಯಾಚಾರವನ್ನು ಮಾಡಲುದ್ದೇಶಿಸಿ ಬಂದಿಗಳ ಮನೆಯನ್ನು ಹೊಕ್ಕನು. ಅವನು ಅಂಬಾಲಿಕೆಯ ಮಾನವನ್ನ ಪಹರಿಸಲುದ್ಯುಕ್ತನಾಗಲು, ಆಗ ಅವಳು ತನ್ನ ಮಡಿಲಿನಿಂದ ಚೂರಿಯೊಂದನ್ನು ತೆಗೆದು ಆತ್ಮಹತ್ಯವನ್ನು ಮಾಡಿಕೊಂಡಳು. ಆಕೆಯ ಸುಲಲಿತವಾದಾದೇಹವೃಕ್ಷವು ಕಡಿದು ಭೂಚುಂಬನ ಮಾಡಿದುದು ಅಂಬಾಲಿಕೆಯಾದರೋ ಪರಲೋಕದ ಅನಂತ ಸುಖಧಾಮಕ್ಕೆ ಹೊರಟು ಹೋದಳು. ರಾಣಿಯಾದರೋ ಮುಜಫರನ ಬಳಿ ಇನ್ನೂ ಬಂದಿ!

ಕೊನೆಗೆ ರಾಜಾ ಭಗವತೀದಾಸನು ರಾಯಕರ್ಣನ ಸಾಹಾಯ್ಯದಿಂದ ಮುಜಫರನನ್ನು ಅವನ ಸೇನೆಯೊಡನೆ ಕೊಂದು ತನ್ನ ರಾಣಿಯನ್ನು ಬಿಡಿಸಿಕೊಂಡನು. ಮಗಳು ಸತ್ತ ಸಮಾಚಾರವನ್ನು ಕೇಳಿದೊಡನೆಯೇ ಮೂರ್ಛೆಹೋದನು. ಸ್ವಲ್ಪಕಾಲದಮೇಲೆ ವಿಚಾರಿಸಲು ಆತನು ಪುನರಪಿ ದುರ್ಗದಲ್ಲಿ ರಾಜ್ಯಭಾರಮಾಡುತಿದ್ದನೆಂದು ತಿಳಿಯಿತು.

ಇದಾದ ಹತ್ತುದಿನಗಳಮೇಲೆ ಬೆಸ್ತರವನೊಬ್ಬನು ಒಂದುಶವವನ್ನು ತಂದನು. ಶವವು ಅಪರಿಚಿತನದೇನೂ ಆಗಿರಲಿಲ್ಲ. ರಾಜನೇ ಮುಂತಾದವರೆಲ್ಲರೂ ಅದನ್ನು ಮೊಹನನ ಶವವೆಂದು ನಿರ್ಧರಿಸಿದರು. ಆಗಲೂ ಸಹ ವಿಕ್ರಮಸಿಂಹನ ಕಂಗಳಿಂದ ಒಂದುತೊಟ್ಟು ನೀರೂಸಹ ಬಾರಲಿಲ್ಲ. ಇದಲ್ಲವೆ ರಜಪೂತರ ಸ್ಥೈರ್ಯ! ಕೊನೆಗೆ ವಿಕ್ರಮಸಿಂಹನು ನಿರ್ದೋಷಿಯೆಂಬುದು ವ್ಯಕ್ತವಾಯಿತು.

ತರುವಾಯ ರಾಜಾಮಂತ್ರಿಗಳು ಪ್ರಜೆಗಳನ್ನು ಚಿರಕಾಲ ಬಹಳ ಚನ್ನಾಗಿ ಪರಿಪಾಲಿಸಿದರು. ಆದರೆ ಅವರು ಅಂಬಾಲಿಕೆಯ ವಿಷಯವು ಜ್ಞಾಪಕಬಂದಾಗಲೆಲ್ಲಾ ಬಹಳ ದುಃಖಿತರಾಗುತ್ತಿದ್ದರು.

ಸಂಪೂರ್ಣ.

ಕಾದಂಬರೀ ಸಂಗ್ರಹ ಗ್ರಂಥಮಾಲಾ ನಂ: — ೨೨

“ವಿಲಾಸಿನಿ.”

(ನವೀನವಾದ ಪತ್ತೇದಾರಿಯ ಕಥೆ)

ಎಚ್. ನಾರಣಪ್ಪ

(All rights reserved)

1 ರಿಂದ 72 ಪುಟಗಳು ಭುವನೇಶ್ವರಿಪ್ರೆಸ್ಸಿನಲ್ಲಿಯೂ 72 ರಿಂದ 92 ಪುಟಗಳು
ರಾಯಲ್ ಪ್ರೆಸ್ಸಿನಲ್ಲಿಯೂ ಮುದ್ರಿತವಾಗಿವೆ.

ಬೆಲೆ 0—10—0 ಮೈಸೂರು Price 0—10—0

1916

ಇದರ ಸರ್ವಸ್ವಾತಂತ್ರ್ಯವನ್ನೂ ಎಚ್. ನರಸಿಂಗರಾಯರಿಗೆ ಒಪ್ಪಿಸಲಾಗಿದೆ

ಶ್ರೀ

ಮುನ್ನುಡಿ.

ವಾಚಕಮಹಾಶಯರೆ,

ವರ್ತಮಾನಕಾಲದಲ್ಲಿ ಕರ್ಣಾಟಕಭಾಷಾಮಾತೆಯು ಕೇವಲ ಅಯುಕ್ತವಾಗಿ, ಅನಾಶ್ರಿತವಾಗಿ, ಅನಾದರಕ್ಕೆ ಗುರಿಯಾಗಿರುವಳು. ಸ್ವಜನರಿಗೆ ತಿರಸ್ಕಾರ! ಪರರಿಗೆ ಪುರಸ್ಕಾರ!! ನೋಡಿ ಸಹಿಸುವುದೆಂತು? ಸ್ವಭಾಷಾಮಾತೆಯ ಈ ಶೋಚನೀಯವಾದ ಸ್ಥಿತಿಯನ್ನು ಸಮೀಕ್ಷಿಸಿದೆನು. ಆ ಮಾತೆಯ ಸೇವೆಯನ್ನು ಮನದಣಿಯೆ ಮಾಡಬೇಕೆಂದು ನಿರ್ಧರಿಸಿದೆನು. ನಾನು ಪಂಡಿತನಲ್ಲ!, ಅಂದರೆ ಆ ಭಾಷಾಮಾತೆಯ ಅನುಗ್ರಹವು ನನ್ನ ಮೇಲೆ ಪೂರ್ಣವಾಗಿಲ್ಲ. ಅದರೇನು? ಮಾತೃಸೇವೆಗೆ ಮಾತೆಯ ಅನುಗ್ರಹವಿದ್ದರೇನು? ಇಲ್ಲದಿದ್ದರೇನು? ನಾನು ಪಾಮರನಾದರೇನು, ಪಂಡಿತನಾದರೇನು? ನಾನೇನೋ ನನ್ನ ಕರ್ತವ್ಯದಲ್ಲಿ ತೊಡಗಿ ಈ ಪುಸ್ತಕವನ್ನು ಬರೆಯಲಾರಂಭಿಸಿದೆನು.

ಇದು ನನ್ನ ಪ್ರಥಮ ಪ್ರಯತ್ನವಾದುದರಿಂದ ಸಹಜವಾಗಿ ಸಂಭವಿಸಿರಬಹುದಾದ ಅನೇಕದೋಷಗಳು ಇದರಲ್ಲಿರಬಹುದು. ವಾಚಕಮಹನೀಯರು ಉದಾರಹೃದಯರಾಗಿ ಅವುಗಳನ್ನು ಗಣನೆಗೆ ತರದೆ ಸಾರವನ್ನು ಮಾತ್ರ ಸಂಗ್ರಹಿಸುವರೆಂದು ನಂಬಿರುವೆನು.

ಇದನ್ನು ತಮ್ಮ ಮಾಸಪತ್ರಿಕೆಯಲ್ಲಿ ಮುದ್ರಿಸಿಕೊಟ್ಟ ಕಾದಂಬರೀಸಂಗ್ರಹಸಂಪಾದಕರಾದ ವೇ|| ಸಿ. ವೆಂಕಟರಮಣಶಾಸ್ತ್ರಿಗಳಿಗೆ ನಾನು ಕೃತಜ್ಞನಾಗಿದೇನೆ.

ಬೆಂಗಳೂರು
1—12—1916

ಎಚ್ ನಾರಣಪ್ಪ.

ಶುದ್ಧಾಶುದ್ಧ ಪತ್ರಿಕೆ.

ಪುಟ	ಪಂಕ್ತಿ	ಅಶುದ್ಧ	ಶುದ್ಧ
೨	೨೫	ಈದಿನ	ಹಿಂದಿನ
೪	೪	ಅವರು	ಅವರೇನೊ
೭	೪	ಬಯುಸುತ್ತ	ಬಯಸುತ್ತ
,,	೧೩	ಬಯುಸಿ	ಬಯಸಿ
೮	೧	ಮೊರೆಯುನ್ನೆತ್ತಿ	ಮೋರೆಯನ್ನೆತ್ತಿ
೮	೨೪	ಮರಳ	ಮರಗಳ
೯	೭	ಹೋಗಿದ್ದನೋ	ಹೋದನೋ
೧೧	೧೧	ತಮೇಕಾಯತ್ತ	ತಮೇಕಾಯಿತ್ತ
೧೨	೩	ಮುದ ವರಿಯಿತು	ಮುಂದುವರಿಯಿತು
೧೪	೮	ವಿಷಣ್ಣಾಡನರಾದರು	ವಿಷಣ್ಣವದನರಾದರು
,,	೨೫	ಪರೀಕ್ಷೆಗೆ	ಪರೀಕ್ಷೆ
೧೬	೧೪	ಸುಲುವಾಗಿ	ಸುಲುವಾಗಿ
೧೭	೧೩	ಮೇಲಿದ	ಮೇಲಿಂದ
,,	,,	ಆ ಪ್ರಶ್ನೆಗೂ	ಆವ ಪ್ರಶ್ನೆಗೂ
,,	೧೫	ಸರಿಯೆ ನಾವು	ಸರಿಯೋ ಇಲ್ಲವೋ ನಾವು
೧೮	೨	ಇದ್ದುದರ ಉತ್ಪನ್ನ	ಇದ್ದುದರ ಉತ್ಪನ್ನ
,,	25	Hydrseyanic	Hydrocyanic
೧೯	೭	ಕಳೇಬರಣವು	ಕಳೇಬರಣವು
,,	೧೨	ಕದಮ	ಕಡಿಮೆ
೧೯	೨೩	ಸಂಭಾಷಣೆಯಂತಲೂ	ಸಂಭಾಷಣೆಯಿಂದಲೂ
೨೧	೧೯	ಎಲ್ಲಲ್ಲಿಯೂ	ಎಲ್ಲೆಲ್ಲಿಯೂ
೨೨	೨೦	ದೇಶವಿದೇಶದ	ದೇಶವಿದೇಶಗಳ
೨೬	೩	ಶ್ರೇಣಿಯ	ಶ್ರೇಣಿಗಳ
೨೭	೧೩	ಉಚ್ಚಟಕ	ಉಚ್ಚಾಟಕ
,,	೨೬	ಸಿಕ್ಕಯೆ	ಸಿಕ್ಕೀಯೆ
೨೮	೧	ಮೋರೆಯಲ್ಲಿ	ಮರೆಯಲ್ಲಿ
,,	೪	ಕಟ್ಟುಹಾಕಿದ	ಕಟ್ಟಿಹಾಕಿದ್ದ
,,	೨೦	" ಥ "	" ಥಂ "
೨೯	೨	ಬೆಳದಿದ್ದುದರಿಂದ	ಬೆಳೆದಿದ್ದುದರಿಂದ
೩೫	೨೩	ಶಂಭುವತ್ತಗೃಹಕೃತ್ಯಕ್ಕೆ	ಶಂಭುದತ್ತನಗೃಹಕೃತ್ಯಕ್ಕೆ
೩೭	೧೫	ಉದ್ವಗ್ನ	ಉದ್ವಿಗ್ನ
೩೮	೨೧	ತೊಳಗಿ ಬಳಲುತ್ತಿರುವ	ತೊಳಲಿ ಬಳಲುತ್ತಿರುವ
೩೯	೨೬	ಚಾಪಿಪಾಕ	ಚಾಪಿಪಾಕನ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೩೯	೨೦	ರೋಗವನ್ನು	ರೂಪವನ್ನೇ
೪೨	೧೧	ತಿಳಿಯ ಲಪೇಕ್ಷಿಸುವರೇನೊ	ತಿಳಿಯಲಪೇಕ್ಷಿಸುವಿರೇನೋ
೪೫	೯	ನಿಮ್ಮನ್ನವನ್ನು	ನಿಮ್ಮನ್ನವನು
೫೦	೧೫	ಮಾತನಾಡಿದರ	ಮಾತನಾಡಿದ್ದರೆ
,,	೨೪	ವ್ಯಕ್ತಿಯು	ವ್ಯಕ್ತಿಯು
೫೧	೯	ಜಪೋಯರನ್ನು	ಜಪೋಯರನು
,,	೧೦	ನಾಲ್ಕುರು	ನಾಲ್ಕರು
,,	೧೨	ಫೋಲೀಸನವರಿಗೆ	ಪೊಲೀಸನವರಿಗೆ
,,	೧೬	ಪ ಚಕನು	ಅಪರಾಧನನು
,,	೨೧	ವಾಸಿಯಲ್ಲಿ ಇವಿದ್ದನೆಂತಲೂ	ವಸಿಯಲ್ಲಿ ಇದಿದ್ದನೆಂದೂ
೫೩	೧೧	ಸಾಯಂಕಾಲದವರೆಗೂ	ಸಾಯಂಕಾಲದವರೆಗೂ
,,	೧೭	ಮುಂಮುವರಿದು	ಮುಂದುವರಿದನು
೫೬	೧೩	ಕೆರೆನು	ಕೆರೆಯಲು
,,	೨೪	ಉಪಾಯೋದಿತನಾಗಿ	ಉಪಾಯೋದಿತನಾಗಿ
೫೯	೨೨	[illegible]	ಎಂದು
,,	೨೨ — ೨೫	ನಿಕಿರವ	ನಿಕ್ಕಿರವನು
,,	೨೬	ಹೊರಟುಹೋದಟ್ಟು	ಹೊರಟುಹೋದನು
೬೪	೧೪	ನಿಶ್ಚ	ನಿಶ್ಚ
೬೬	೧೭	ಉದ್ಯೋಗ	ಉದ್ಯೋಗ
೬೯	೧೧	ವಸಸ್ಥಗ	ವಾಸಸ್ಥಗೆ
,,	೧೪	ಆಪೇಕ್ಷಿಸಿದವರಾರು	ಅಪೇಕ್ಷಿಸದವರಾರು
,,	೧೮	ಅತಿ	ಅತೀವ
೭೨	೧೫	ನಿದ್ರಾವಶರಾಗುವವನ್ನು	ನಿದ್ರಾವಶರಾಗಿದ್ದವನ್ನು
೭೪	೧೫	ತಾನು	ಅದು
೭೬	೪	ಹೊಡೆದು	ಹೊಡೆದು
೭೮	೨೪	ಬುಡುಬುಡುಕಿಯುವನಂತೆ	ಬುಡುಬುಡುಕೆಯವನಂತೆ
೮೦	೧	ಬುಡುಬುಡುಕಿಯುವ	ಬುಡುಬುಡುಕೆಯವನ
೮೩	೧೪	ಅವನಾರು	ನೀನಾರು
೮೪	೯	ಆ	ಈ
೮೮	೧೨ — ೧೪	ಮೋಸಗೆಳದರುವೆ	ಮೋಸಗೊಳಿಸಿರುವೆ
೯೦	೧೦	ಯಾವದಿನ	ಆವದಿನ
,,	೧೭	ಸದ್ಧರ್ಮವೂ	ಶುದ್ಧಮಾರ್ಗವೂ

ವಾಚಕರೆ, "ಈಶ್ವರೂ" ಎಂದಿರುವಕಡೆ "ಇರ್ವರೂ" ಎಂದೂ, "ತಕ್ಷಣ" ಎಂದಿರುವಕಡೆ "ತತ್‌ಕ್ಷಣವೆಂದೂ, ಓದಿಕೊಳ್ಳುವುದು.

" ವಿಲಾಸಿನಿ. "

ಪ್ರಥಮಗುಚ್ಛ

ಪ್ರಭಾತದ ಆಗಮನವನ್ನು ಸೂಚಿಸುತ್ತ ತಂಗಾಳಿಯು ಎಲ್ಲೆಲ್ಲಿಯೂ ಸುಳಿಯಲಾರಂಭಿಸಿತು; ಆಪ್ಯಾಯಮಾನವಾದ ಆ ಮಂದಮಾರುತದ ಮೃದುಸ್ಪರ್ಶದಿಂದ ಪೂರ್ವದಿಗ್ವನಿತೆಯು ಹರ್ಷಿತಳಾದಳು. ಅವಳ ಆನಂದವನ್ನು ನೋಡಿ ಸಹಿಸಲಾರದೆ ನಿಶೆಯು ಮೆಲ್ಲಮೆಲ್ಲನೆ ಹಿಂಜರಿಯಲಾರಂಭಿಸಿದಳು ! ಪಕ್ಷಿಸಂಕುಲಗಳ ಕಲಕಲ ರವವು ದಿಕ್ತಟಗಳಲ್ಲಿ ಪ್ರತಿಧ್ವನಿತವಾಗಲಾರಂಭಿಸಿತು ! ಪ್ರಭಾತದ ಈ ಸಮಾರಂಭವನ್ನು ಕಂಡು ನಿದ್ರಾಲತಾಂಗಿಯು ಭಯವಿಹ್ವಲಳಾದಳು ! ತನಗಿನ್ನು ಜಯಕಾಲವು ದುರ್ಲಭವೆಂದೆಂದುಕೊಂಡಳು ! ಕ್ಷಣಕ್ಷಣಕ್ಕೂ ಕಳೆಗುಂದಿ ಕಣ್ಮರೆಯಾಗುತ್ತಿದ್ದ ನಕ್ಷತ್ರಗಳ ಸ್ಥಿತಿಯನ್ನು ನೋಡಿದಳು ಆ ತೇಜೋಹೀನನಾದ ತಾರಾಕಾಂತನ ಸ್ಥಿತಿಯನ್ನು ನೋಡಿ ಬೆರಗಾದಳು ! ತಾನಿನ್ನಿರುವುದು ಅಯುಕ್ತವೆಂದುಕೊಂಡು ತನ್ನ ಆಲಿಂಗನದಿಂದ ಸುಖಿಸುತ್ತಿದ್ದವರನ್ನು ನಿಧಾನವಾಗಿ ತ್ಯಜಿಸಲಾರಂಭಿಸಿ ಸ್ವಲ್ಪಕಾಲದಲ್ಲಿಯೇ ಮರೆಯಾದಳು. ನಿದ್ರಾಲತಾಂಗಿಯು ತಮ್ಮನ್ನು ದೂರೀಕರಿಸಿದ ಮೇಲೆ ಹಾಸುಗೆಗಳಿಂದೇನು ಪ್ರಯೋಜನವೆಂದುಕೊಂಡು ಸರ್ವರೂ ಏಳಲಾರಂಭಿಸಿದರು. ಎದ್ದು ತತ್ಕಾಲ ಕರ್ಮೋತ್ಸುಕರಾಗುತ್ತಿದ್ದರು. ಆಗ ಕರೀಕಲ್ ಪಟ್ಟಣದ ಇನ್ಸ್ಪೆಕ್ಟರ್ ತಾಂದೋಣಿರಾಯರು ಪ್ರಾತರ್ವಿಧಿಗಳನ್ನು ಪೂರ್ತಿಗೊಳಿಸಿ, ಉಡುಪುಗಳನ್ನು ಧರಿಸಿ ಹೊರಗೆ ಹೊರಡಲುದ್ಯುಕ್ತರಾದರು ಅಷ್ಟರಲ್ಲಿಯೇ, " ಸ್ವಾಮಿ ! ಸ್ವಾಮಿ !! ಸರ್ವನಾಶವಾಗಿ ಹೋಗಿದೆ !!! ಅಯ್ಯೋ ! ಬನ್ನಿ !! ಬೇಗದಯಮಾಡಿ !!! " ಎಂದು ಕಾತರದಿಂದ ಕೂಗುತ್ತ ಬಹು ಆತುರದಿಂದ ಓಡಿಯೋಡಿಬಂದು

ಒಬ್ಬ ವ್ಯಕ್ತಿಯು ಭಯದಿಂದ ಗಡಗಡನೆ ನಡುಗುತ್ತ ನಿಂತನು. ವ್ಯಕ್ತಿಗೆ ಪ್ರಾಣಪ್ರಜ್ಞೆಯು ಇದ್ದಂತಿರಲಿಲ್ಲ! ಬಾಯಿಯಲ್ಲಿ ಮಾತುಗಳೇ ಸ್ಪಷ್ಟವಾಗಿ ಹೊರಡುತ್ತಿರಲಿಲ್ಲ!! "ಅಯ್ಯೋ! ಖೂನಿ!! ಸ್ವಾಮೀ! ಖೂನಿ ನಡೆದು ಹೋಗಿದೆ!! ಸತ್ತರು!! ಹಾಳಾಯಿತು!" ಎಂದು ಭಾವಪೂರಿತವಾಗಿ ಅವನಾಡುತ್ತಿದ್ದ ಮಾತುಗಳಿಂದ ಇನ್ಸ್‌ಪೆಕ್ಟರಿಗೆ ಕೇವಲ [illegible] ಯುಂಟಾಗಿ ಹೋಯಿತು. [illegible]

ಇನ್ಸ್‌ಪೆಕ್ಟರ್:— "ಅಪ್ಪಾ! ಸ್ವಲ್ಪ ಸಮಾಧಾನ ಮಾಡಿಕೊಳ್ಳು! [illegible] ಏನಾಯಿತು? ಖೂನಿಯೆ? ಯಾರ [illegible]? ಸ್ಪಷ್ಟವಾಗಿ, ತಿಳಿಯುವಂತೆ ಹೇಳು." ಎಂದು ಕೇಳಿದನು.

ವ್ಯಕ್ತಿ:— "ಅಯ್ಯೋ! ನಾನೇನು ಹೇಳಲಿ! [illegible] ಮನೆಯೊಳಗೆ ರಕ್ತವೋ [illegible] ಖೂನಿ! ನಡೆದಿದೆ!! ಕಳವು!! ಎಲ್ಲಾ [illegible] ನನ್ನ [illegible] ಮನೆಯು ಈ ದಿನ ಹಾಳಾಗಿದೆ!" ಎಂದು ವ್ಯಾಕುಲದಿಂದ [illegible] ದನ್ನು ಬಿಟ್ಟನು. "[illegible] ಕೊಲೆ, ದರೋಡೆ, ಕಳವು!" ಎಂಬ ಮಾತುಗಳನ್ನು ಕೇಳಿ ಇನ್ಸ್‌ಪೆಕ್ಟರು [illegible] ಅವನನ್ನು ಕರೆದುಕೊಂಡು [illegible] ಗೃಹ [illegible] ಹೊರಟನು.

ಆ ಬೀದಿಯಲ್ಲಿ ಅನೇಕ ಜನರು ನೆರೆದಿದ್ದರು! ಎಲ್ಲರೂ [illegible] ಮುಖರಾಗಿ, ಗೃಹದ ಕಡೆಯೇ ದೃಷ್ಟಿಯನ್ನಿಟ್ಟು ಅಲ್ಲಲ್ಲಿ ಪಿಸುಮಾತುಗಳನ್ನಾಡಿಕೊಳ್ಳುತ್ತಿದ್ದರು. ಎಲ್ಲೆಲ್ಲಿಯೂ [illegible] "ಖೂನಿ! ಖೂನಿ!! ಅಯ್ಯೋ! ಪಾಪಿಗಳೇ!! [illegible] ರನ್ನೂ, ಆದ ಕೃತ್ಯವನ್ನು [illegible] ನಿಗೆ ಮನಸ್ಸು ಹೇಗೆ ಬಂದಿತು? ನಿನಗೆ ತಕ್ಕ ಶಿಕ್ಷೆಯು [illegible]?" ಎಂದು ಮೊದಲಾಗಿ ಕೋಪೋದ್ರೇಕದಿಂದ ನುಡಿಯುತ್ತಿದ್ದರು. [illegible] ನಿನವರು ಬರುತ್ತಿದ್ದುದನ್ನು ಕಂಡು ಅನೇಕ ಜನರು, "[illegible] ಸಂಭವಿಸುವುದೋ? ಎಂದುಕೊಂಡು, ತಲೆತಪ್ಪಿಸಿಕೊಳ್ಳಲು [illegible] ಗಳಲ್ಲಿ ಸಂದುಗಳಲ್ಲಿ, ನುಸುಳುತ್ತಿದ್ದರು! ಕೇವಲ [illegible] ರ್ಬಲ್ಲ!! ಇನ್ನು ಕೆಲವರು, "[illegible]

ಸರಿ!" ಎಂದು ಮಾತಾಡಿಕೊಂಡು ಧೈರ್ಯದಿಂದ ಇನ್ಸ್‌ಪೆಕ್ಟರನ್ನು ಹಿಂಬಾಲಿಸಿದರು.

ಮನೆಯನ್ನು ಪ್ರವೇಶಿಸಿದರು, ಎಲ್ಲೆಲ್ಲಿಯೂ ಕತ್ತಲೆ. ಹೃದಯ ಭೇದಕವಾದ ನಿಶ್ಶಬ್ದತೆ! ಎಲ್ಲಾ [illegible]ಗಳನ್ನೂ, ಗವಾಕ್ಷಗಳನ್ನೂ, ಇನ್ಸ್‌ಪೆಕ್ಟರ್ ಸಾಹೇಬರು ಬೆಳಕು ಒಳಗೆ ಪ್ರವೇಶಕ್ಕಾಗಿ ತೆರೆಯಿಸಿದರು. ಅಲ್ಲಲ್ಲಿ ತೂಗಿದ್ದ ಚಿತ್ರಪಟಗಳನ್ನು ನೋಡುತ್ತ ಇನ್ಸ್‌ಪೆಕ್ಟರ್ ಸಾಹೇಬರು ಆಳುಗಳಿಂದ ತೋರಿಸಲ್ಪಟ್ಟ ಒಂದು ಕೋಣೆಯನ್ನು ಪ್ರವೇಶಿಸಿದರು! ಅದೆಂತಹ ಘೋರತರವಾದ ದೃಶ್ಯ!! ಎಂತಹ ಭಯಂಕರ ಪರಿಣಾಮ!!! ರಕ್ತವು ಹರಿದು ಸಿಂಪಿದೆ! ಕೋಣೆಯೆಲ್ಲಾ ರಕ್ತಮಯ!! ಇನ್ಸ್‌ಪೆಕ್ಟರು ತಡೆಯಲಾರದೆ ಹೋದರು! ವಸ್ತುತಃ ಹೃತ್ಕಂಪನವಾಯಿತು! ಇನ್ಸ್‌ಪೆಕ್ಟರೇ, ಏಕೆ? ಆರುತಾನೆ ಅಂತಹ ದೃಶ್ಯವನ್ನು ನೋಡಿ ನಡುಗುವುದಿಲ್ಲ? ಏನಾದರೇನು? ಆರು ಹೆದರಿದರೇನು? ಆರು [illegible]? ಎಷ್ಟು ಹೊತ್ತು ತಾನೆ ಇನ್ಸ್‌ಪೆಕ್ಟರ್ ಸಾಹೇಬರು ಹೆದರಬಹುದು, ಇನ್ಸ್‌ಪೆಕ್ಟರು ಮನೆಯನ್ನೆಲ್ಲಾ ಚೆನ್ನಾಗಿ ಹುಡುಕಿ ನೋಡಿ [illegible] ಗಳು ದಿಕ್ಕುದಿಕ್ಕುಗಳಲ್ಲಿ [illegible] ಬೀಗಗಳು ತೆರೆಯಲ್ಪಟ್ಟವು!! [illegible] ರವಿಲ್ಲ!!! ಇವೆಲ್ಲವನ್ನೂ ನೋಡಿ [illegible] ಮನೆಗೆ ಸರಿಯಾದ ಕಾವಲನ್ನು ಸ್ಥಾಪಿಸಿದರು. [illegible] ಜನಗಳನ್ನೆಲ್ಲಾ ಕರೆದುಕೊಂಡು [illegible] ಹೋದರು. [illegible] ಇನ್ಸ್‌ಪೆಕ್ಟರು ಎಲ್ಲರ ಹೇಳಿಕೆಗಳನ್ನೂ ಕೇಳಿದರು. [illegible] ಮನೆಗೆಹೋಗಿ [illegible]ಗಳನ್ನು [illegible] ಹಾಗೆಯೆ ಆ [illegible] ವಿಷಯವಾಗಿ ಆಲೋಚಿಸಲಾರಂಭಿಸಿದರು. ನಡೆದ ಸಂಗತಿಗಳನ್ನೆಲ್ಲ ಒಂದಾಸಲ [illegible] ಅಂದರು "ಹಿಂದಿನ ರಾತ್ರಿ, ಮನೆಯಲ್ಲೆಲ್ಲರೂ ಇದ್ದರು, [illegible] ಇರಲಿಲ್ಲ! ಮನೆಯೆಲ್ಲಾ ರಕ್ತಮಯ! [illegible]!!!" ಇಷ್ಟಲ್ಲದೆ ಮತ್ತೇನೂ ತಿಳಿಯಲಿಲ್ಲ! [illegible] ಈ ರೀತಿಯಲ್ಲಿ ತರ್ಕಿಸಲಾರಂಭಿಸಿ

ದರು !! “ ಈಗ ಆ ಭಯಂಕರ, ರಕ್ತ ಪ್ರವಾಹವು ಇರುವ ಕೋಣೆ ಯಲ್ಲಿ ಮಲಗುತ್ತಿದ್ದವರು ಮಾರ್ವಾಡಿಗಳು. ಅದೇ ಸ್ಥಳದಲ್ಲಿ ಈ ಘೋರ ದೃಶ್ಯ ! ಆದುದರಿಂದ ಮೃತರು ಅವರೇ ಎಂದೂಹಿಸಲು ಅಡ್ಡಿಯೇನು ? ಆಗಲಿ, ಅವರು ಮೃತರಾಗಿರುವರು. ಶಂಭುದತ್ತಾದಿಗಳಲ್ಲಿ ?

ಒಂದುವೇಳೆ ಅವರಿವರೆಲ್ಲರೂ ಒಟ್ಟಿಗೆ ಖೂನಾಗಿರಬಹುದೇ ? ಅದೆಲ್ಲಿಯ ಮಾತು ? ಅವರು ಮಲಗಿದ್ದ ಸ್ಥಳದಲ್ಲಿ ಅವವಿಧವಾದ ಅನು ಮಾನಾಸ್ಪದವಾದ ಕುರುಹುಗಳೂ ತೋರುವುದಿಲ್ಲ. ಆದುದರಿಂದ ಕೊಲೆ ಗಾರರು ಅವರೆಲ್ಲರನ್ನೂ ಈ ಕೋಣೆಯಲ್ಲಿಯೇ ಸೇರಿಸಿ ಕತ್ತರಿಸಿರಬಹು ದೆಂದು ಯೋಚಿಸೋಣವೆ ? ಛೆ ! ಛೆ !! ಅದು ಕೇವಲ ಅಸಂಭವವೆ. ಕೊಲ್ಲಲು ಬಂದವರು ಎಲ್ಲೆಲ್ಲಿದ್ದವರನ್ನು ಅಲ್ಲಲ್ಲಿಯೇ ಕೊಂದು ಕೈಗೆ ಸಿಕ್ಕಿದ್ದನ್ನು ಎತ್ತಿಕೊಂಡು ಹೋಗುವುದನ್ನು ಬಿಟ್ಟು ಅಂತಹ ವಿಪರೀತ ವನ್ನು ಆಚರಿಸುವರೆಂದು ಸ್ವಲ್ಪ ವಿವೇಕವಾದರೂ ಇದ್ದವನು ಎಂದಿಗೂ ಆಲೋಚಿಸಲಾರ ! ಶಂಭುದತ್ತಾದಿಗಳನ್ನು ಅವರಿದ್ದಲ್ಲಿ ಕೊಂದಿಲ್ಲ ಅಲ್ಲಿಂದಿಲ್ಲಿಗೆ ತಂದಿಲ್ಲ ! ಮನೆಯಲ್ಲಿದ್ದವರ ಸುಳಿವಿಲ್ಲ ! ಏನಾದರೆಂದು ಯೋಚಿಸಲು ಸಾಧ್ಯವಲ್ಲ ! ಆದುದರಿಂದ ಇದರ ಪರಿಣಾಮವೇನಾಗು ವುದೋ ದೇವರೇ ಬಲ್ಲನಲ್ಲದೆ ನಮ್ಮಿಂದ ಯೋಚಿಸಲು ಸಾಧ್ಯವಲ್ಲ. ಅದಂತಿರಲಿ ! ಈಗ ಮೃತರು ಮಾರ್ವಾಡಿಗಳೇ ಸರಿಯೆಂದು ಹೇಳುವು ದಾದರೆ ಪರಸ್ಥಳೀಕರಾದ ಇವರನ್ನು ಕೊಲ್ಲಲು ಬಂದವರಾರು ? ಸಾಮಾ ನ್ಯವಾಗಿ ಇಂತಹ ಖೂನಿಗಳಿಗೆ ಪೂರ್ವದ್ವೇಷ, ದಾಯಾದಿಮತ್ಸರ, ದ್ರವ್ಯಾ ಪೇಕ್ಷೆ, ಅಥವಾ ಸುಂದರಿಯರ ಸೌಂದರ್ಯವಾದರೂ ಕಾರಣವಾಗಿರ ಬೇಕು. ಒಂದುವೇಳೆ ಮೃತನು ಶಂಭುದತ್ತನಾಗಿದ್ದ ಪಕ್ಷದಲ್ಲಿ ಮೇಲಿನ ಮರಣದ ಕಾರಣಗಳಲ್ಲಿ ಎರಡು ಮೂರು ಅವನಲ್ಲಿ ಇತ್ತು. ಪಾಪ ? ಈ ಬಡಪಾಯಿಗಳಾದ ಮಾರ್ವಾಡಿಗಳು ಅನ್ಯದೇಶೀಯರು ! ಇವರು ಇಲ್ಲಿಗೆ ಹೊಸದಾಗಿ ಬಂದಿದ್ದುದರಿಂದ ಇವರಿಗೆ ಇಲ್ಲಿ ಪೂರ್ವದ್ವೇಷಗಳಿರಲು ಕಾರಣವಿಲ್ಲ. ದಾಯಾದಿಗಳಿದ್ದರೆ ಇಲ್ಲಿಗೆ ಬಂದು ಅವರನ್ನು ಕೊಲ್ಲುವ ಅವಶ್ಯಕತೆಯು ಏನು ? ಸ್ತ್ರೀಯರ ತಂಟೆಯಂತೂ ಇಲ್ಲವೇ ಇಲ್ಲ ! ಬಾಕೀ ಉಳಿದುದು ದ್ರವ್ಯವೊಂದು, ಅದೂ ಕೂಡ ಶಂಭುದತ್ತನ ಉತ್ತಮ

[illegible] ತಾನೆ ಯೋಚಿಸಲಾಗುವುದು ? [illegible] ಕಂಭುವತ್ತಾದಿಗಳಿರಬಹುದೆಂದ ಕೊಂಡು [illegible] ವಾಗ ಒಳಗೆ ಇದ್ದ ಕಂಭುವತ್ತಾದಿಗಳು [illegible] ತಪ್ಪಿಸಿಕೊಳ್ಳಲು [illegible] ಯಿಂದ ಈ ಕೃತ್ಯವು ನಡೆಯಿ [illegible] ವೊಂದಲ್ಲದೆ ವೃತ [illegible] ಸದಾ [illegible] ತಿಶಯ [illegible] ತಿಳಿಸುವೆಂದು ತೋರುವುದಿಲ್ಲ. [illegible] ರೀತಿ [illegible] ಚಮತ್ಕಾರವಾಗಿರುವುದಲ್ಲದೆ [illegible] ತಾಣುವುದಿಲ್ಲ ! ಪೆಟ್ಟಿಗೆಗಳು ಸರಿಯಾದ [illegible] ಬಲಪ್ರಯೋಗದ [illegible] ಮನೆಯ ಆಳತನವನ್ನು [illegible] ಪ್ರವರ್ತಿಸಬೇಕು ! ಎಂದು ಮೊದಲಾಗಿ ಸ್ವಲ್ಪ [illegible] ಒಂದು [illegible]—ದ್ರವ್ಯಾಶೆಯು ಕೆಟ್ಟದ್ದು ? [illegible] ? ಅದೇನು ಸಾಮಾನ್ಯವೆ ? [illegible] ತನ್ನಲ್ಲಿಟ್ಟ ದುಡ್ಡನ್ನು ದಕ್ಕಿಸಿಕೊಳ್ಳ [illegible] ? ಛೆ ! ಛೆ ! ತನ್ನಾಶ್ರಯವನ್ನು [illegible] ಕೊಲ್ಲಿಸುವಷ್ಟು ಸೀಚನಾಗುವನೆ ? [illegible] ಅಸಾಧಾರಣ ! ಏನಾದರೇನು ? [illegible] ಕೊಂಡಿರಲಿ ? ಈ [illegible] ಒಂದು ವಿಶೇಷ ತಂತ್ರವು ಇರ [illegible] ಹರಣ ಮಾಡುವುದಕ್ಕೆಂದೇ [illegible] ಇದರ ಗುಟ್ಟನ್ನು [illegible] ! ಎಂದು ದೃಢಸಂಕಲ್ಪವನ್ನು ತಳೆದು, ಸಂಕಲ್ಪ ಸಿದ್ಧಿಯನ್ನು [illegible] ಹೊರಟರು.

ದ್ವಿತೀಯ ಗುಚ್ಛ.

ಇಷ್ಟು ಮಾತ್ರಕ್ಕೇ ನಾನು ವ್ಯಸನದಿಂದ ಪರಿಪೀಡಿತಳಾಗಲಿ? ವೃಥಾ ವ್ಯಸನಪಡುವುದರಿಂದ ಆಗುವುದು ತಾನೆ ಏನು? ಸಕಲವೂ ಭಗವದಧೀನ? ನಮ್ಮ ಪೇಕ್ಷೆಯಂತೆ ಅವನು ತಾನೆ ನಡೆಸುವನು? ಹಾಗೆ ನಡೆಸುವಂತಿದ್ದರೆ ನಾವು ಭೂಸುರರೇ ಆಗುತ್ತಿದ್ದೆವಲ್ಲವೆ ಇದನ್ನಾದರೂ ಲಕ್ಷ್ಯಕ್ಕೆ ತರಿಸುತ್ತಿದ್ದೆವೆ? ಹಾಗಲ್ಲ ನಾವಿಷ್ಟು ಅಹಂಕಾರ ಮದಾಂಧತೆರಾಗ ಬಾರದಲ್ಲ! ಅನ್ಯಾಯವಾಗಿ ಮಾತಿಗೆ ಸಿಲುಕಿದ ಅನೇಕ ಸ್ತ್ರೀಯರು ನ್ಯಾಯವಾಗಿ ಆಚರಿಸಬೇಕಾದ ಸ್ವಧರ್ಮವನ್ನು ಸುಚ್ಛಿದ್ರ, ಸಿಲ್ಕಾತ್ಸ್ತರೂ, ದುರ್ಭಿಕ್ಷಪಾಸಿಗಳೂ, ಸ್ವೇಚ್ಛಾಚಾರಿಗಳೂ ಆಗಿ ತಾವು ಮಹದೈಶ್ವರ್ಯವಂತರ ಮನೆಗಳಲ್ಲಿ ಜನಿಸಿದವರೆಂತಲೂ, ತಾವು ಅನುಪಮ ರೂಪ ರಮಣೀಮಣಿಗಳೆಂತಲೂ, ಮಹಾಭಾಗ್ಯಗಳಿಂದ ಅದರಣೀಯಳೆಂದು ಕೇವಲ ಕೋಮಲಪುಷ್ಪಗಳಂತೆ ಪ್ರೀತಿಸಲ್ಪಟ್ಟು, ಅಲಂಗಾರವಸ್ತುವಿನಿಂದ ಉಂಟಾಗುವ ಆಯಾಸವನ್ನು ಸಹ ಸಹಿಸಲಾರದ ತಾವು ಆಯೆನಿಸಿ, ಪುರುಷ ಜಾತಿಗಳ ಕೈಹಿಡಿಯುವುದರಿಂದ ದಾಸ್ಯಕಾಲದಲ್ಲಿ ಸಿಲುಕ್ಕಬೇಕಾದ ದುರವಸ್ಥೆಯು ಬಂದೊದಗಿತೆಂತಲೂ, ಸ್ವತಃ ತಾವು ಅನುಭವಿಸಿ, ಅದೂ ಅಲ್ಲದೆ, ಸಕಲ ಶ್ರಮಗಳಿಗೂ ತಲೆಯೊಡ್ಡಿಕೊಂಡು ತಮ್ಮ ಹಿತ್ತಿ ತ್ಯವನ್ನೇ ಪಾಲಿಸುವ ಪುರುಷರನ್ನು ಅಡಿಗಡಿಗೂ ತಿರಸ್ಕಾರವಾಗಿ ನೋಡುತ್ತ ಕೇವಲ ಧೂರ್ತೆಯರಾಗಿ ಪ್ರವರ್ತಿಸುವರು. ನಾವಿಬ್ಬರೂ ಅಕೃತ್ರಿಮ ಪ್ರೀತಿ! ಅತ್ತೆಯರ ಮೇಲೆ ಉನ್ಮತ್ತರಾದ ಅಧಿಕಾರ! ನೂರಿಯಾದ ರೂಪಕನಕ್ಕೆಂತಲೂ ಕಟೆ! ನಾದಿನಿಯರು ಊರುಸೇರುವುದೆ ಕಷ್ಟ ಗಂಡನ ಪ್ರಾಣವನ್ನಾದರೋ ಹಿಂಡುತ್ತ ಸಂಸಾರ ಸಾಗರಕ್ಕೆ ಚಂಡ ಮಾರುತಪ್ರಾಯರಾಗಿ ಸಮಸ್ತ ಜನಗಳಿಗೂ ಪಾಪಸಂಕಾಶರಾಗಿ, ನಿರಂತರ ದೂಷಿತೆಯರಾಗಿ, ಅಂತ್ಯಕಾಲದಲ್ಲಿ ಅನಾಥರಿಗೊದಗುವ ದುಃಖಕ್ಕೆಂತಲೂ

ಶತಶಃ ಅಧಿಕವಾದ ದುಃಖಕ್ಕೆ ಭಾಜನರಾಗುವರು ! ಇಂತಲ್ಲದೆ, ಸಂಪತ್ ಸಮೃದ್ಧಿಯಿದ್ದರೂ ಅಹಂಕಾರಗ್ರಸ್ತರಾಗದೆ, ತೌರುಮನೆಯ ಸರ್ವಸ್ವವನ್ನೂ ಅವರಪೇಕ್ಷೆಗೆ ವಿರೋಧವಾಗಿ ಸ್ವೀಕರಿಸಲನರ್ಹವಾದುದೆಂದು ಭಾವಿಸಿ ಹುಟ್ಟಿದಮನೆಗೆ ಹೆಚ್ಚಿಗೆಯನ್ನು ಬಯಸುತ್ತ, ಸೇರಿದಕಡೆಯಲ್ಲಿ ಸಂಪೂರ್ಣತ್ವವನ್ನೆಣಿಸಿಕೊಂಡು, ಅಪಾರವಾದ ಈ ಸಂಸಾರ ಸಾಗರಕ್ಕೆ ಅತ್ಯುತ್ತಮವಾದ ನಾವೆಗಳಂತೆ, ಘನಗಾಂಭೀರ್ಯದಿಂದ ಸ್ವಧರ್ಮಗಳನ್ನು ಪರಿಪಾಲಿಸಿಕೊಂಡು, ಸುಖಸಂತೋಷಗಳಿಗೆ ಆಧಾರಭೂತರಾಗಿ ಸತ್ಪಥದಲ್ಲಿ ಮುಂದುವರಿಯುವ, ಚಿರಸ್ಮರಣೀಯರಾಗಿರುವಂತಹ ಸುಗುಣಮಣಿಗಳಾದ ರಮಣೀರತ್ನಗಳಂತೆ ನಡೆಯಲು ನಾನೂ ಆಶಿಸಿದೆನು. ಈಗಲೂ ಆಶಿಸುವೆನು. ನಾನು ಕುಲೀನಸ್ತ್ರೀಯು ಉನ್ನತಪ್ರದೇಶದಲ್ಲಿ ಜನಿಸಿದೆನು. ಅವರೂಕೂಡ ತೌರುಮನೆಯವರಿಗೆ ಅನುಕೂಲವಾಗದೆ, ಕರ್ನಾಟಕ ಮಂಡಲೇಶ್ವರನ ಸಾನ್ನಿಧ್ಯವನ್ನು ಹೊಂದಲಾಶಿಸಿ, ಗಂಭೀರ ಭಾವದಿಂದ ಮಹಿಶೂರ ಸೀಮೆಯಲ್ಲಿ ಪ್ರಯಾಣಿಸುತ್ತ ನನ್ನ ಸಹವಾಸವನ್ನು ಬಯಸಿ ಬಂದ ಕಪಿಲೆ ಹೇಮಾವತಿಯರೇ, ಮೊದಲಾದವರನ್ನು ಜತೆಗೊಂಡು, ಅಲ್ಲಲ್ಲಿ ಸಿಂಹಾಸನವನ್ನು ಅಲಂಕರಿಸಿಕೊಂಡು ಪ್ರಾರ್ಥಿಸುವಂತಿರುವ ಅನೇಕ ಕಬ್ಬುಗಳ ಸಮೂಹದಲ್ಲಿ ಸ್ವಚ್ಛಕಾಂತಿಯಿಂದ ಶೋಭಿಸುವ ದೀಪಮಾಲಿಕೆಗಳಾದ ಕಾಲುವೆಗಳಿಂದ ಮಹಿಶೂರದೇಶದ ಅನೇಕ ಭಾಗಗಳನ್ನು ಫಲಪ್ರದಗಳಾಗುವಂತೆ ನೀರಾವರಿಯಾಗಿ ಮಾಡಿ, ಆ ದೇಶದವರ ಜೀವನೋಪಾಯವನ್ನು ಕಲ್ಪಿಸಿದೆನು. ಅವರೂಕೂಡ ಒಡೆಯರ ಅಭಿಮಾನಗಳನ್ನು ಅವಲಂಬಿಸದ ಅದೃಷ್ಟವಿಲ್ಲದ ನನ್ನ ಪೂರ್ವಾರ್ಜಿತಕ್ಕೆ ಅಭಿನಂದನೆ ಮಾಡಲಿಲ್ಲರು ? ನನ್ನ ಪತಿಯು ನನ್ನಲ್ಲಿ ಕೋಪಿಸಿಕೊಳ್ಳುತ್ತಿರೆ ? ಛೀ ! ಅದೆಲ್ಲಿಯ ಮಾತು !! ಅರರ ಪಾದ ಸ್ಪರ್ಶವು ನನಗೆ ಪರಮ ಪಾವನವಾದುದೆಂದೂ, ಅವರಪ್ರೀತಿಯು ನನಗೆ ಮಹಾ ಮಹತ್ತರವಾದಂತಹ ಅಭೀಷ್ಟವಾದ, ಅಮೋಘವಾದುದ್ದುಯೆಂದೂ ಭಾವಿಸುತ್ತೇನೆ, ಅಂತಹ ಪತಿಯ ಪ್ರೀತಿಯು ನನಗೆ ದೊರೆಯದಿದ್ದ ಮಾತ್ರಕ್ಕೆ ಅತನಮೇಲೆ ಕೋಪಿಸಿಕೊಳ್ಳುವುದು ಸ್ತ್ರೀಕುಲ ಧರ್ಮವೇ ? ಛೀ ! ಅದೆಂದಿಗೂ ಅಲ್ಲ ! ನಾವು ಸುಕೃತ ಶಾಲಿಗಳಲ್ಲವಾದುದರಿಂದಲೇ ನಾವು ವಂಚಿತರಾಗುವುದು.

ದುರದೃಷ್ಟದ, ಹೇಯವಾದ, ನನ್ನೀ ಸುಟ್ಟ ಮೊರೆಯನ್ನೆತ್ತಿಕೊಂಡು ನಾನು ಹೇಗೆತಾನೆ ತಿರುಗಲಿ ? ಒಡೆಯನ ಪ್ರೀತಿಗೆ ಪಾತ್ರಳಾಗಲಿಲ್ಲ ಅವರ ಪಾದತಲಸ್ಪರ್ಶನಸುಖವನ್ನನುಭವಿಸುವ ಅದೃಷ್ಟವೂ ಇಲ್ಲದೆ ಹೋಯಿತು ! ಮಾಡುವುದೇನು ! ಇನ್ನುಮೇಲೆ ಜೀವಿಸಬಾರದೆಂತಲೂ, ನಿರರ್ಥಕವಾದ ಈ ಜನ್ಮವು ಸಾಕೆಂತಲೂ, ನಿರ್ಧರಿಸಿ, ಶಿವಸಮುದ್ರದ ಸಮೀಪದಲ್ಲಿ ಅಪ್ಪಳಿಸುತ್ತ ಹರಿವ ಪ್ರವಾಹಕ್ಕೆ ಧುಮುಕವಾಗಿ ಉನ್ನತವಾಗಿರುವ ಪ್ರದೇಶದಿಂದ ಹಾರಿಬಿಟ್ಟೆನು. "ಆದರೇನು ? ನನ್ನ ಕೋರಿಕೆಯು ಕೈಸೇರಿತೇ ? ನನಗೆ ಸಮಾಧಾನವನ್ನು ಹೇಳುವವರಾರು ?" ಎಂದಾಲೋಚಿಸಿ, ನನ್ನ ಕೋರಿಕೆಯು ಕೈಗೂಡುವಂತೆ ಪ್ರಾರ್ಥಿಸುತ್ತಾ ಸಮುದ್ರರಾಜನನ್ನು ಸಮೀಪಿಸುತ್ತಿದ್ದೆನು. ಅಷ್ಟರಲ್ಲಿಯೇ, ಶ್ರೀರಂಗಪಟ್ಟಣದಲ್ಲಿಯೂ, ಶಿವಸಮುದ್ರದಲ್ಲಿಯೂ, ನನಗೆ ದರುಶನವನ್ನು ದಯಪಾಲಿಸಿದ ಪರಮಪಾವನಮೂರ್ತಿಯಾದ ಶ್ರೀರಂಗನಾಥನು ಪುನಃ ದರ್ಶನವನ್ನು ದಯಪಾಲಿಸಿದನು. ಆ ದೀನದಯಾಪರನಾದ ಶ್ರೀರಂಗನಾಥನ ಸಂದರ್ಶನದಿಂದ ವ್ಯಾಕುಲಭಾವವನ್ನು ದೂರೀಕರಿಸಿ ಮುಂದುವರಿಯುತ್ತಿರಲು, ನನ್ನೊಡನಾಡಿಯು ನನ್ನ ಜತೆಯಲ್ಲಿರಲಾರದೆ ನಾನಾದೇಶವನ್ನು ನೋಡಬೇಕೆಂದು ದೂರದಲ್ಲಿದೆ ನನ್ನ ಅಮೋಘವಾದ "ಕಾವೇರಿ" ಯೆಂಬ ಅಂಕಿತ ನಾಮವನ್ನು ಕೊಡಬೇಕೆಂದು ಬೇಡಿದನು. ಪ್ರಪಂಚವೇ ಬೇಡದ ನನಗೆ ನನ್ನ ಈ ಹೆಸರಿನಿಂದಲಾದರೂ ಆಗುವುದೇನೆಂದು ಆಲೋಚಿಸಿ, ನನ್ನ ಹೆಸರನ್ನೇ ಅವರಿಗೆ ಕೊಟ್ಟು [illegible]ಮೆಂಬ ಹೆಸರಿನಿಂದ ಹೊರಟೆನು. ಇದಕ್ಕೋಸುಗ ನಾನೇಕೆ ವ್ಯಸನಪಡಲಿ ? ಎಂದು ಆಲೋಚಿಸುತ್ತಾ ಸ್ವಲ್ಪ ದೂರದಲ್ಲಿರುವ ಸಮುದ್ರರಾಜನನ್ನು ಸೇರಲು ನಿಧಾನವಾಗಿ ಪ್ರವಹಿಸುತ್ತಿರುವೆನೋ ಎನ್ನುವಂತೆ ಹರಿಯುತ್ತಿರುವ ಕೊಳ್ಳದ ನದಿಯ ಪಾರ್ಶ್ವದಲ್ಲಿದ್ದ ಮರದ ನೆರಳಲ್ಲಿ ಮೂವರು ಪ್ರಯಾಣಿಕರು ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳುವವರಂತೆ ಮಾತನಾಡುತ್ತಾ ಕುಳಿತಿದ್ದರು.

ಅವರಲ್ಲೊಬ್ಬ:—"ನೀನು ಹೇಳಿದಂತೆ ಅವನು ಹೊರಟಿದ್ದರೆ ಈ ಹೊತ್ತಿಗೆಲ್ಲಾ ಬಂದೇ ಇರಬೇಕಾಗಿತ್ತಲ್ಲ ; ನಾವು ಬಂದು ಸ್ವಲ್ಪ ಹೊತ್ತಾ

ಯಿತೇ ? ನನಗೆ ತಿಳಿದ ಮಟ್ಟಿಗೆ ಇಲ್ಲಿಗೆ ಬರಬೇಕಾದರೆ ಇದೊಂದಲ್ಲದೆ ಮತ್ತಿನ್ಯಾವ ಮಾರ್ಗವೂ ಇರುವಂತಿಲ್ಲ !"

ಇನಸ್ಪೆಕ್ಟರ್ :—ಹೊರಟನೋ ಇಲ್ಲವೋ ! ಹೊರಡಬೇಕೆಂದು ಪ್ರಯತ್ನಪಟ್ಟವನು ಎಷ್ಟು ವೇಳೆ ನಿಂತುಹೋಗುವುದಿಲ್ಲ ? ಅಲ್ಲದೆ ಅವನೇನು ಹೇಳಿದನೆಂದು ನೀನೇನು ಕೇಳಿದೆಯೋ ! ಹೊರಡಬೇಕೆಂದು ನಾವು [illegible] ಪ್ರಯತ್ನವನ್ನು ಕೇಳಿ ನೀನು ಬಂದನಂತರ ಅವನು ಮತ್ತೆಲ್ಲಿ ಗಾಡಿಯನ್ನು ನಿಲ್ಲಿಸಿದ್ದನೋ ? ಅಥವಾ ಪ್ರಯಾಣವನ್ನೇ ನಿಲ್ಲಿಸಿದನೋ ? ಮಾಡುವುದೇನು ?

ಪೋಲೀಸಿನವನು :—"ಹಾಗಿದ್ದರೆ ! ನಾವೆಲ್ಲ ಸುಳ್ಳು ತಟವಟವನ್ನು ಹೇಳುವವರು. ಹೇಳಿ ಸಾಕಾಯಿತು ! ಸಿದ್ಧವಾಗಿ ನಿಂತಿದ್ದ ಗಾಡಿಯನ್ನು ನನ್ನ ಈ ಕಣ್ಣುಗಳಿಂದಲೇ ನೋಡಿಕೊಂಡು ಬಂದಿರುವವನು ನಾನು ! ನನ್ನ ಕಣ್ಣುಗಳೇನು ಸುಳ್ಳು ಕಣ್ಣುಗಳೇ ? ಸುಮ್ಮನೆ ಕೂತುಕೊಂಡು ನೀವು ಏನೇನೋ ಕೇಳುತ್ತೀರಾದರೆ ಹೇಳುವುದೇನಿದೆ ? ಹೀಗಂತಿದ್ದರೆ ನನ್ನನ್ನೇಕೆ ಕಳುಹಿಸಿದಿರಿ ? ನೀವೇ ಹೋಗಬಹುದಾಗಿತ್ತಲ್ಲ ! ಇದರಲ್ಲೆಲ್ಲಾ ಏನಯ್ಯಾ ಹಿಂದೂ ಮುಂದೂ ?

ಪೋಲೀಸಿನವರು ಇವನಿಗೆ ಸಮಾಧಾನವನ್ನು ಹೇಳುತ್ತ, "ಹೊರಟಿದ್ದ ಗಾಡಿ ಬಂದೇ ಬರುತ್ತದೆ. ದೂರದ ಪ್ರಯಾಣವಾದ್ದರಿಂದ ಸ್ವಲ್ಪ ಹೊತ್ತಾಗಿರಲೂ ಬಹುದು. ಇನ್ನೂ ಸ್ವಲ್ಪ ಕಾಲ ನೋಡೋಣ. ಇಷ್ಟು ಹೊತ್ತು ಕಾದಿದ್ದೇವೆ. ಇನ್ನು ಸ್ವಲ್ಪ ಹೊತ್ತು ಕಾಯಬಾರದೆ ?" ಎಂದು ಹೇಳಿ, ಯುದ್ಧ ವಿಷಯಗಳನ್ನು ಕುರಿತು ಮಾತನಾಡುತ್ತ ಕುಳಿತುಕೊಂಡಿರುವಾಗ ದೂರದಲ್ಲಿ ಬರುತ್ತಿದ್ದ ಒಂದು ಗಾಡಿಯನ್ನು ನೋಡಿ, "ಅಗೋ ! ಯಾವುದೋ ಒಂದು ಗಾಡಿ ಬರುತ್ತಿದೆ ! ಅವನೇ ಬರುತ್ತಿದ್ದರೂ ಇರಬಹುದು !" ಎಂದು ಹೇಳಿದನು. ಮೂರು ಜನರೂ ಎದ್ದು ನೋಡಿದರು. "ಇದೇ ನಾನು ಹೇಳಿದ ಗಾಡಿ. ಈವಾಗಲಾದರೂ ನಂಬಿಗೆಯಾಯಿತೋ ?" ಎಂದು ಗಾಡಿಯನ್ನು ನೋಡಿಕೊಂಡು ಬಂದಿದ್ದ ಆ ವ್ಯಕ್ತಿಯು ಹೇಳಲು, ಎಲ್ಲರೂ ನದಿಯ ಸಮೀಪಕ್ಕೆ ಹೋದರು.

ಗಾಡಿಯು ನದಿಯ ಸಮೀಪದಲ್ಲಿ ಬಂದು ನಿಂತಿತು. ಗಾಡಿಯಿಂದೊಬ್ಬ ತರುಣನು ಇಳಿದನು. "ಆಚೇ ದಡಕ್ಕೆ ಹೋಗಲು ದೋಣಿಗಳುಂಟೆ ?" ಎಂದು ವಿಚಾರಿಸಿ ಸಮೀಪದಲ್ಲಿದ್ದ ಒಂದು ದೋಣಿಯನ್ನು ಗೊತ್ತು ಮಾಡಿ ಅದರಲ್ಲಿ ಕುಳಿತುಕೊಂಡನು. ಅವನ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಆ ಪ್ರಯಾಣಿಕರು ಅವನಿಗೆ ಸವಿನಯವಾಗಿ ವಂದನೆಯನ್ನು ಮಾಡಿ "ನಮ್ಮನ್ನೂ ಕೂಡ ದೋಣಿಯಲ್ಲಿ ಕೂಡಿಸಿಕೊಂಡು ಹೋಗಬೇಕು ! ನಮ್ಮಲ್ಲಿ ದುಡ್ಡು ಕಮ್ಮಿಯಾಗಿದೆಯಾದುದರಿಂದ ಬಹಳ ಹೊತ್ತಿನಿಂದಲೂ ತಮ್ಮಂತಹ ಉದಾರಿಗಳಾದ ಪ್ರಯಾಣಿಕರ ಆಗಮನವನ್ನೇ ಎದುರು ನೋಡುತ್ತಿದ್ದೆವು. ಅನುಗ್ರಹಿಸಬೇಕು ! " ಎಂದು ಸಪ್ರಭಾವದಿಂದ ಹೇಳಿದರು. ಉದಾರ ಹೃದಯನಾದ ಆ ತರುಣನು ಇವರ ವಿನಯಕ್ಕೆ ಸಂತೋಷಿಸಿ ಅವರನ್ನು ದೋಣಿಯಲ್ಲಿ ಕೂಡಿಸಿಕೊಂಡನು.

ದೋಣಿಯು ಹೊರಟಿತು. ಬರಬರುತ್ತ ಪ್ರವಾಹದ ವೇಗವು ಅಧಿಕವಾಯಿತು. ಪ್ರವಾಹದ ಮಧ್ಯಭಾಗವನ್ನು ಸೇರುತ್ತಿರಲು, ತರಂಗಗಳ ತಾಡನದಿಂದಲೂ ಪ್ರವಾಹದ ಪ್ರಾಬಲ್ಯದಿಂದಲೂ ವಹಿತ್ರವು ಬಹಳವಾಗಿ ಅಲ್ಲಾಡಲಾರಂಭಿಸಿತು ದೋಣಿಯು ಸ್ವಲ್ಪ ಹಳೆಯದಾಗಿದ್ದಿತು. ನೀರು ಪ್ರವೇಶಿಸುವುದೇನೋ ಎಂದು ಎಲ್ಲರೂ ಭಯಪಡಲಾರಂಭಿಸಿದರು ವಸ್ತುತಃ ನೀರು ಪ್ರವೇಶಿಸಲಾರಂಭಿಸಿಯೇ ಬಿಟ್ಟಿತು. ದೋಣಿಯ ವಿಶೇಷವಾದ ಅಲುಗಾಟದಿಂದಲೂ, ಸ್ವಲ್ಪ ಸ್ವಲ್ಪವಾಗಿ ನೀರು ದೋಣಿಯಲ್ಲಿ ಪ್ರವೇಶಿಸುತ್ತಿದ್ದುದರಿಂದಲೂ, ಅಪಾಯವು ಸಂಭವಿಸಬಹುದೆಂದು ಪ್ರಯಾಣಿಕರು ಮತ್ತಷ್ಟು ಭಯಗೊಂಡರು. ಭಯಾತುರರಾಗಿ ನದಿಯಲ್ಲಿ ಹಾರಿ ಸಾಹಸದಿಂದ ಈಜಿಕೊಂಡಾದರೂ ತಡಿಯನ್ನು ಸೇರಬೇಕೆಂದು ಪ್ರಯತ್ನಿಸುತ್ತಿದ್ದರು. ಅಂಬಿಗನು ಇವರನ್ನು ನೋಡಿ, "ಭಯಪಡಬೇಡಿ. ಭಯಪಡುವುದರಿಂದೇನು ಫಲ ? ಇದಕ್ಕಿಂತಲೂ ಅತಿಶಯವಾಗಿ, ಮಹಾವೇಗದಿಂದ ಹರಿಯುತ್ತಿರುವ ಪೂರ್ಣಪ್ರವಾಹದಲ್ಲಿಯೂ ಕೂಡ ಲೇಶಮಾತ್ರವಾದರೂ ಭಯವಿಲ್ಲದೆ ದೋಣಿಗಳನ್ನು ಸುರಕ್ಷಿತವಾಗಿ ಸಾಗಿಸುತ್ತೇವೆ ! ಇದೇನಂಥ ಅತಿಶಯವೆ ? ಸುಮ್ಮನೆ ಅಲುಗಾಡದೆ ಕುಳಿತುಕೊಳ್ಳಿರಿ ! " ಎಂದು ಧೈರ್ಯವನ್ನು ಹೇಳುತ್ತ ದೋಣಿಯನ್ನು ನಡೆಯಿಸುತ್ತಿದ್ದನು. ಸ್ವಲ್ಪ ಕಾಲ

ಹಾಗೆಯೇ ನಡೆಯಿಸುತ್ತಿದ್ದನು ತದನಂತರ ಅತ್ತಿತ್ತ ಸಂಶಯಾಕುಲನಾದವನಂತೆ ನೋಡಲಾರಂಭಿಸಿದನು. ಹಠಾತ್ತಾಗಿ, "ಇನ್ನೇನು ಗತಿ ! ಅಯ್ಯೋ ! ಕೆಟ್ಟೆವು ! ಹಾಳಾದೆವು ? ಎಂದು ಕೂಗುತ್ತ ನದಿಯಲ್ಲಿ ಅಂಬಿಗನೆ ಹಾರಿಬಿಟ್ಟನು ; ತಕ್ಷಣವೆ ದೋಣಿಯು ಮುಗುಚಿಕೊಂಡಿತು ! ಪ್ರಯಾಣಿಕರು ನದಿಯ ಪಾಲಾದರು ! ನದಿಯು ಒಂದೇ ರೀತಿಯಲ್ಲಿ ಹರಿಯುತ್ತಲೇ ಇದ್ದಿತು.

ತೃತೀಯ ಗುಚ್ಛ.

ರು ಅತಿಪ್ರೀತಿಯಿಂದ ಪ್ರವೇಶಿಸಲೆಳಸುತ್ತಿದ್ದರೋ ಅಂತಹವರೇ ಜುಗುಪ್ಸಾನ್ವಿತವಾದ ಭಯದಿಂದ ಹಿಂಜರಿಯುವಂತೆ ಆಗಿಸುತ್ತಿದ್ದ ಜನವಾಸರಹಿತವಾದ ಆ ಗೃಹದ—ಆ ಶಂಭುದತ್ತನ ಗೃಹದ ಸಮೀಪದಲ್ಲಿ ಒಂದು ವ್ಯಕ್ತಿಯು ತಿರುಗಾಡುತ್ತಿತ್ತು. ಆ ವ್ಯಕ್ತಿಯು ಮನೆಯ ಪ್ರತಿಯೊಂದು ಬಾಗಿಲು ಕಿಟಕಿಯನ್ನೂ ತದೇಕಾಸಕ್ತ ಚಿತ್ತದಿಂದ ನೋಡುತ್ತ ಹಠಾತ್ತಾಗಿ ಗೃಹವನ್ನು ಪ್ರವೇಶಿಸಿತು. ಒಳಗೆ ಪ್ರತಿಯೊಂದು ಸ್ಥಳವನ್ನೂ ಆ ಮೂಲಾಗ್ರವಾಗಿ ಪರೀಕ್ಷಿಸಿದ ಮೇಲೆ ಏನೋ ಒಂದು ಚಿಹ್ನೆಯನ್ನನುಸರಿಸಿ ಮುಂದುವರಿಯುತ್ತಿದ್ದಂತೆ ಬೋಧೆಯಾಗುತ್ತಿತ್ತು. ಹಾಗೆಯೇ ಹೋಗುತ್ತ ಮನೆಯ ಮತ್ತೊಂದು ದ್ವಾರದ ಮಾರ್ಗವಾಗಿ ಆ ವ್ಯಕ್ತಿಯು ಹೊರಹೊರಟಿತು.

ಆ ವ್ಯಕ್ತಿಯು ತದೇಕದೃಷ್ಟಿಯಿಂದ ನೋಡುತ್ತ ಹೋಗುತ್ತಿರಲು, ಆ ಬಾಗಿಲಿಗೆ ಹತ್ತಾರು ಮಾರುಗಳ ದೂರದಲ್ಲಿ ಆರೋ ಕೆಲವು ಜನರು ತಿರುಗಾಡಿದ್ದುದರಿಂದುಂಟಾದ ಗುರುತುಗಳು ದೃಷ್ಟಿಗೋಚರವಾದುವು. ಇನ್ನು ಸ್ವಲ್ಪದೂರ ಹೋಗಿ ನೋಡಲಾಗಿ ಆ ಗುರುತುಗಳು ಸಾಂದ್ರವಾಗಿಯೂ, ಎತ್ತರವಾಗಿಯೂ ಬೆಳೆದಿದ್ದ ಹುಲ್ಲಿನಲ್ಲಿ ಅದೃಶ್ಯವಾಗಿಹೋಗಿದ್ದುವು. ಆದರೂ ಆವ್ಯಕ್ತಿಯು ಅಷ್ಟಕ್ಕೇಬಿಟ್ಟು ಹಿಂದಿರುಗದೆ ಆ ಪ್ರದೇಶವನ್ನೆಲ್ಲಾ ಬಹು ಜಾಗರೂಕತೆಯಿಂದ ಪರೀಕ್ಷಿಸಲು ಆ ಹುಲ್ಲಿನಮಧ್ಯದಲ್ಲಿ

ಒಂದೆರಡುಕಡೆ ರಕ್ತದ ಕಲೆಗಳು ಕಂಡುಬಂದುವು! ಆ ವ್ಯಕ್ತಿಯ ಮುಖವು ಸ್ವಲ್ಪ ವಿಕಸಿತವಾಯಿತು! ಹಾಗೆಯೇ ಸ್ವಲ್ಪಕಾಲ ಏನೋ ಆಲೋಚಿಸಿ ಮುದುವರಿಯಿತು! ಅದು ಏನೋ ಒಂದು ದೃಢಪ್ರತಿಜ್ಞೆಯನ್ನು ಮಾಡಿದ್ದಂತೆ ಬೋಧೆಯಾಗುತ್ತಿತ್ತು.

ಮನೆಯ ಹಿಂದುಗಡೆಯಲ್ಲೊಂದುಕಡೆ ಕೆಲವು ವೃಕ್ಷಗಳು ಬಹಳ ದಟ್ಟವಾಗಿ ಬೆಳೆದಿದ್ದುವು. ಸಾಸ್ತ್ರವಾದ ಆ [illegible] ಗಳ [illegible] ಆ ವ್ಯಕ್ತಿಯು ಸುತ್ತಿಕೊಂಡು ಬಂದಿತು. [illegible] ಹೋಗಿದ್ದ ಒಂದು ಕಾಗದವು ಬಿದ್ದಿತ್ತು. [illegible] ಆ ವ್ಯಕ್ತಿಯು ಮುಂದೆಹೋಗಲು [illegible] ಕಾಣಿಬಂದಿತು. ಆ ಗಿಡವನ್ನು [illegible] ನೋಡಿ ಕೂಡಲೆ ಆ ವ್ಯಕ್ತಿಗೆ [illegible] ರಿಸಿದಂತೆ ಬೋಧೆಯಾಗುತ್ತಿತ್ತು. ಆ ವ್ಯಕ್ತಿಯು [illegible] ಹೊತ್ತುನೋಡಿ, ಆ [illegible] ಬಿಟ್ಟು [illegible] ಸಿತು! ಮೊತಕರಿಗೆ ಅನಾರೆಂಬುದನ್ನು [illegible] ಹಿಂಬಾಲಿಸಬೇಕಾಯಿತು! ಆಗೋ! [illegible]!! [illegible] ವಿದ್ದರೆ ಅವನಾರೆಂಬುವದನ್ನು ತಿಳಿಯಬಹುದು! ಆಗೋ, ನೋಡಿ, ಅವನು ಇನ್ಸ್ಪೆಕ್ಟರ ಮನೆಯಕಡೆ ಹೋಗುತ್ತಿದ್ದಾನೆ! [illegible] ವನೇ ಇರಬೇಕು!! ಆಗೋ, ಅವನು ಇನ್ಸ್ಪೆ[illegible] ಶಿಸಿದನು!!!

ಇನ್ಸ್ಪೆಕ್ಟರು ಆಗ ಎಲ್ಲಿಗೋ ಹೊರಡಬೇಕೆಂದಿದ್ದರು. [illegible] ಬಂದ ವ್ಯಕ್ತಿಯನ್ನು ನೋಡಿದರು. ತಕ್ಷಣವೇ ತಮ್ಮ [illegible] ಗೊಳಿಸಿ ವ್ಯಕ್ತಿಯು ಸಮೀಪಕ್ಕೆ ಶೀಘ್ರವಾಗಿ ಹೋದರು. ವ್ಯಕ್ತಿಯಾರು?— "ಗುಪ್ತಪೊಲೀಸಿ"ನವರಲ್ಲಿ ಅಗ್ರಗಣ್ಯನೆಂದು ಪ್ರಖ್ಯಾತನಾಗಿದ್ದ ಆ ಕಾಳೀಚರಣನೇ! ಸಮುಚಿತ ಮರ್ಯಾದೆಯಿಂದ ಕಾಳೀಚರಣನನ್ನು ಕೂಡಿಸಿ ತಾವೂ ಕುಳಿತುಕೊಂಡರು.

ಕಾಳೀಚರಣನು ಇನ್ನೂ ತರುಣ, ಇಪ್ಪತ್ತೆರಡು ಇಪ್ಪತ್ತುಮೂರು ವರ್ಷ ವಯಸ್ಸಿರಬಹುದು. ಅಂಗದಾರ್ಢ್ಯವು ವಂಶಭಾವದಿಂದಲೆ ಪ್ರಾಪ್ತ

ವಾಗುವುದು. ವಿಸ್ತಾರವಾದ ಲಲಾಟ ಕಾಂತಿಯುಕ್ತವಾದ ನೇತ್ರಗಳು ಮನಷ್ಯನ ಹೃದಯಕುಹರವನ್ನು ಪ್ರವೇಶಿಸಿ ಅವನ ಮನೋಗತವನ್ನು ಅದೆಷ್ಟು ಗುಪ್ತರೂ ಆಕರ್ಷಿಸಿ ಬಹಿರಂಗಕ್ಕೆ ತರುವುವೋ ಎಂಬಂತೆ ಪ್ರಕಾಶಿಸುವುವು. ಮುಖಭಾವದಲ್ಲಿ ಚಾತುರ್ಯಾತಿಶಯವು ಪ್ರಸ್ಫುಟವಾಗಿ ವ್ಯಕ್ತವಾಗುವುದು. ತೇಜಃಪ್ರಭಾವಾದ, ಸುಂದರವಾದ ಮುಖ! ಸಮುಚಿತವಾದ ಅಂಗಸೌಷ್ಠವ!!

ಕಾಳೀಚರಣನು ತನ್ನ ಉದ್ಯೋಗದಲ್ಲಿ ಪ್ರವರ್ತಿಸಿದಮೇಲೆ ಅತ್ಯಲ್ಪಕಾಲದಲ್ಲಿಯೇ ಪ್ರಸಿದ್ಧರಾದ ಪತ್ತೇದಾರರಲ್ಲಿ ಅಗ್ರಗಣ್ಯನೆನಿಸಿಕೊಂಡನು. ದೀರ್ಘದರ್ಶಿಯೂ, ಚಮತ್ಕಾರಿಯೂ ಆಗಿದ್ದನಲ್ಲದೆ, ಮಹದ್ವಿಪತ್ತಿನಲ್ಲಿ ಸಿಕ್ಕಿಕೊಂಡರೂಕೂಡ ಸ್ವಲ್ಪವೂ ಧೈರ್ಯಗೆಡದೆ ಮನಸ್ಥೈರ್ಯದಿಂದ ಕೃತಕಾರ್ಯನಾಗದೆ ಹಿಂದಿರುಗುತ್ತಿರಲಿಲ್ಲ. ಹೆಚ್ಚಿಗೆ ಹೇಳುವುದರಿಂದೇನು? ಕಾಳೀಚರಣನು ಅಸಾಧಾರಣನಾದ ಪತ್ತೇದಾ[illegible]!

ಪ್ರಸಿದ್ಧನಾದ ಕಾಳೀಚರಣನ ತಮ್ಮ ಸಹಾಯಾರ್ಥವಾಗಿ ಬಂದುದರಿಂದ ಇನ್ಸ್‌ಪೆಕ್ಟರಿಗೆ ಬಹುಸಂತೋಷವಾಯಿತು! ಆನಂದಕ್ಕೆ ಪಾರವೇ ಇರಲಿಲ್ಲ!! ಆತನನ್ನು ಅತ್ಯಾದರದಿಂದ ಮಾತನಾಡಿಸಿ, ನಡೆದ ಸಂಘಟನೆಗಳನ್ನೆಲ್ಲಾ ಸಾದ್ಯಂತವಾಗಿ ವಿವರಿಸಿದರು.

ಇನ್ಸ್‌ಪೆಕ್ಟರ ಅಭಿಪ್ರಾಯವನ್ನು ಕೇಳಿ, ಕಾಳೀಚರಣನು "ಹಾಗೆಯೇನೋ ನಡೆದಿರಬಹುದು. ಆದರೆ ಆ ಕೊಠಡಿಯಲ್ಲಿರುವ ರಕ್ತದ ಗುರುತಿನಿಂದ ಖೂನಿಯು ಅದೇ ಸ್ಥಳದಲ್ಲಿ ನಡೆಯಿತೆಂದಾಗಲಿ, ಆ ಶವವು ಬೇರೆ ಜನರಿಂದ ಹೊರಸೂಸಿದ್ದೆಂದಾಗಲೀ ಹೇಳುವುದಕ್ಕೆ ಸಾಕಾದ[illegible] ಕಾರಣಗಳು ಗೊತ್ತಾಗಿಲ್ಲ! ಮೃತರಾದವರೆಂದು ಈಗಲೆ ನಿರ್ಧರಿಸಲು ಸಾಧ್ಯವಾಗದುದರಿಂದ ಕಳೇವರಗಳನ್ನು ಮೊದಲು [illegible]ನೋಡೋಣ" ಎಂದು ಹೇಳಿದುದಕ್ಕೆ ಇನ್ಸ್‌ಪೆಕ್ಟರು ಸಮ್ಮತಿಸಿದರು. [illegible] ಜನರನ್ನು ಜತೆಯಲ್ಲಿ ಕರೆದುಕೊಂಡು ಶಂಭುದತ್ತನ [illegible] ಹೊರಟರು.

ಕಾಳೀಚರಣನು ಅವರನ್ನು ತಾನು ಮೊದಲು ನೋಡಿದ್ದ ಆ [illegible]ಗಳ ಸಮೀಪಕ್ಕೆ ಕರೆದುಕೊಂಡು ಹೋದನು [illegible]

ಪ್ರಕಾರ ಆ ಗಿಡವನ್ನು ಕಿತ್ತು ಹೊಸದಾಗಿ ಅಗೆಯಲ್ಪಟ್ಟಿದ್ದ ಪಾತಿಯ ಮಣ್ಣನ್ನು ತೆಗೆಯಲಾರಂಭಿಸಿದರು. ಒಂದೆರಡಡಿ ಆಳದವರೆಗೆ ಅಗೆದು ಮಣ್ಣನ್ನು ತೆಗೆಯುವಷ್ಟರಲ್ಲಿಯೇ ಅಗೆಯುತ್ತಿದ್ದವರು ಹಮ್ಮಯಿಸಿ ನಿಂತುಬಿಟ್ಟರು ! ಶವಗಳು ಸಿಕ್ಕಿದುವು. ಉಪಾಯದಿಂದ ಅವುಗಳನ್ನು ಮೇಲಕ್ಕೆಳೆದರು. ದೃಶ್ಯವು ಬಹು ಭಯಾನಕವಾಗಿತ್ತು. ಭಯದೊಂದಿಗೆ ಕೆಲವರಿಗೆ ಆಶ್ಚರ್ಯವನ್ನೂ ಉಂಟುಮಾಡುತ್ತಿತ್ತು. ಶಿರಸ್ಸಿಲ್ಲದ ಶವಗಳು ! ತಲೆಗಳಿಗಾಗಿ ಬಹಳ ಹುಡುಕಿದರು. ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಎಲ್ಲರೂ ವಿಷಣ್ಣವದನರಾದರು. ವಸ್ತ್ರಗಳೆಲ್ಲವೂ ರಕ್ತಮಯವೂ ಮೃತ್ತಿಕಾಮಯವೂ ಆಗಿದ್ದುವು ! ಆ ಉಡುಪುಗಳನ್ನು ನೋಡಿ ಮೃತರು ಮಾರ್ವಾಡಿಗಳೇ ಇರಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟರು. ತದನುಗುಣವಾಗಿ ಎಲ್ಲರೂ ವ್ಯಸನಪಟ್ಟರು.

ತಲೆಗಳಿಗಾಗಿ ಹುಡುಕುತ್ತಿದ್ದವರಲ್ಲೊಬ್ಬನು ಮಣ್ಣಿನಲ್ಲಿ ಸಿಕ್ಕಿದ ಒಂದುಂಗುರವನ್ನು ತಂದುಕೊಟ್ಟನು. ಅಮೋಘವಾದ ಆ ಉಂಗುರದ ಮೇಲಿದ್ದ "ಶ" ಎಂಬಕ್ಷರದ ಗುರುತಿನಿಂದಲೂ, ಅದನ್ನು ನೋಡಿದ್ದ ಅನೇಕ ಜನರು ಏಕವಾಕ್ಯದಿಂದ ಹೇಳಿದ ಸಾಕ್ಷಿಯಿಂದಲೂ, ಅದು ಶಂಭುದತ್ತನದೇ ಎಂದು ನಿರ್ಧರಿಸಲ್ಪಟ್ಟಿತು. ಏನು ವಿಪರೀತ ಸಂಘಟನೆ ! ಆ ಅಮೋಘವಾದ ಶಂಭುದತ್ತನ ಉಂಗುರವು, ಅಲ್ಲಿಗೆ ಹೇಗೆ ಬಂದಿತು ? ಎಲ್ಲರೂ ಆಲೋಚಿಸಲಾರಂಭಿಸಿದರು. ಊಹೆಗಳು ನಾನಾಮಾರ್ಗಗಳಲ್ಲಿ ಪ್ರವಹಿಸಲಾರಂಭಿಸಿದುವು. ಕೊನೆಗೆ ಆ ಕೃತ್ಯದಲ್ಲಿ ಶಂಭುದತ್ತನು ಸೇರಿಯೇ ಇರಬೇಕೆಂತಲೂ ಹಾಗಿಲ್ಲದಿದ್ದರೆ ಆ ಉಂಗುರವು ಅಲ್ಲಿರುವುದಕ್ಕಾಗಲಿ, ಅಥವಾ ಆ ಗೃಹದಲ್ಲಿದ್ದ ಮಾರ್ವಾಡಿಗಳನ್ನು ಇತರರು ಕೊಲ್ಲುವುದಕ್ಕಾಗಲಿ ಸಂಭವವಿಲ್ಲವೆಂದು ನಿರ್ಧರಿಸಿದರು. ಆದರೆ ಕಾಳೀಚರಣನು ಏನನ್ನೂ ಹೇಳಲಿಲ್ಲ ! ಆ ಶವಗಳನ್ನು ಚೆನ್ನಾಗಿ ಪರೀಕ್ಷಿಸಿದನು. ಆತನ ಮುಖದಲ್ಲಿ ಈಷದಸಮಾಧಾನವು ವ್ಯಕ್ತವಾಯಿತು ! ಅವುಗಳನ್ನು ಡಾಕ್ಟರ ಪರೀಕ್ಷೆಗೆ (Post Mortem Examination) ಯ ಸಲುವಾಗಿ ಕಳುಹಿಸಿಕೊಟ್ಟು ಇನ್ಸ್ಪೆಕ್ಟರೊಂದಿಗೆ ಅವರ ಮನೆಗೆ ಹೊರಟುಹೋದನು.

ಇನ್ಸ್ಪೆಕ್ಟರು "ಕಾಳೀಚರಣ ಮಹಾಶಯರೇ, ಈ ದಿನ ನೀವು ಮಾಡಿದ ಕೆಲಸವು ಕೇವಲ ಅಸಾಧಾರಣವೇ ಸರಿ! ನೀವು ಆ ಸ್ಥಳವನ್ನು ಕಂಡುಹಿಡಿದುದು ಹೇಗೆ? ಅದೇನು ಯೋಚನಾಶಕ್ತಿಯೋ! ನೀವು ಇಷ್ಟು ಸ್ವಲ್ಪ ಕಾಲದಲ್ಲಿ ಪತ್ತೆಮಾಡಿದ ಆ ಶವಗಳನ್ನು ನಾನು ನಿಜವಾಗಿಯೂ ಕಂಡು ಹಿಡಿಯುತ್ತಿದ್ದೆನೋ ಇಲ್ಲವೋ ನನಗೇ ಅನುಮಾನವಾಗಿದೆ! ಮುಖ್ಯ ನಿಮ್ಮ ಈ ದಿನದ ಸಾಹಸದಿಂದ ಮೃತರ ನೆಲೆಯೊಂದು ತಿಳಿದಂತಾಯಿತು. ಈ ದಿನದ ಸಾಕ್ಷಿಗಳಿಂದ ಖೂನಿಮಾಡಿದವರನ್ನು ಪತ್ತೆಮಾಡಬಹುದು. ಅಂತೂ ಕೇಸಿನ ಸ್ಥಿತಿಯು ಒಂದು ಮುಖವಾಯಿತು!!" ಎಂದು ಹೇಳಿದರು. ಕಾಳೀಚರಣನು ತಲೆಯನ್ನಲ್ಲಾಡಿಸಿ, "ಈ ದಿನ ನಾನು ಮಾಡಿದ ಕೆಲಸವು ನನಗೆ ಸಮರ್ಪಕವಾಗಲಿಲ್ಲ! ಖೂನಿಮಾಡಿದವರನ್ನು ಪತ್ತೆಮಾಡಬಹುದೆಂದು ಹೇಳಿದಿರಲ್ಲ! ಅದು ಹೇಗೆ? ಎಂದು ಕೇಳಿದನು. ಇನ್ಸ್ಪೆಕ್ಟರು, "ಸ್ವಾಮಿ. ನನ್ನಭಿಪ್ರಾಯಗಳವು ಈ ಕೃತ್ಯದಲ್ಲಿ ಯಾರೋ ಒಬ್ಬ ಗುರುತುಕಂಡವನಿರಬೇಕೆಂದು ಮೊದಲೇ ಹೇಳಿರುವೆನಷ್ಟೆ! ಈಗ ನೋಡಿದರೆ, ಮೃತರು ಆ ಮಾರ್ವಾಡಿಗಳೆಂದು ವ್ಯಕ್ತವಾಗಿರುತ್ತೆ. ಮನೆಯಲ್ಲಿದ್ದ ಶಂಭುದತ್ತಾದಿಗಳಾರೂ ಇಲ್ಲ! ಏನು ಯೋಚಿಸಬಹುದು? ತತ್ರಾಪಿ ಮಣ್ಣಿನಲ್ಲಿ ಶಂಭುದತ್ತನ ಉಂಗುರವು ಸಿಕ್ಕಿರುತ್ತೆ! ಶಂಭುದತ್ತಾದಿಗಳು ಮೃತರಾಗಿರುವರೆಂದು ಹೇಳಲು ಸಾಧ್ಯವಿಲ್ಲವೆಂದು ಹೇಳುತ್ತೀರಿ! ಅಲ್ಲದೆ, ಆ ಮಾರ್ವಾಡಿಗಳು ತಮ್ಮ ದ್ರವ್ಯವನ್ನೆಲ್ಲ ಶಂಭುದತ್ತನ ವಶದಲ್ಲಿಟ್ಟಿರುವರು, ಪ್ರಪಂಚದಲ್ಲಿ ದ್ರವ್ಯಾಶೆಯು ಬಹಳ ಕೆಟ್ಟದು! ಅದರಿಂದ ಎಂತಹ ಘೋರಕೃತ್ಯಗಳು ತಾನೆ ನಡೆಯದಿರುವುವು? ಅಲ್ಲದೆ, ಅವರ ಮರಣದಿಂದ ಶಂಭುದತ್ತನಿಗಲ್ಲದೆ ಇತರರಿಗೆ ಆದಾಯವೆಂಬುದು ಲೇಶವೂ ಇಲ್ಲ! ಆದುದರಿಂದ ಅನ್ಯರು ಇದರಲ್ಲಿ ಕೈಯೊಡ್ಡಿರಲಾರರು!! ಏನಾದರೂ ಮಾಡಿ ಶಂಭುದತ್ತನನ್ನು ನಾವು ಹಿಡಿಯಲೇಬೇಕು!" ಎಂದು ಹೇಳಿದರು. ಕಾಳೀಚರಣನು ಏನೊಂದುತ್ತರವನ್ನೂ ಕೊಡಲಿಲ್ಲ! ಇನ್ಸ್ಪೆಕ್ಟರ ಅಪ್ಪಣೆಯನ್ನು ಪಡೆದು ಸ್ವಸ್ಥಾನಕ್ಕೆ ಹೊರಟುಹೋದನು.

ಚತುರ್ಥ ಗುಚ್ಛ.

ದೇವೇಶವರ್ಮನಿಗೆ ಸುಮಾರು ನಾಲ್ವತ್ತೈದು ವರ್ಷವ ವಯಸ್ಸಾಗಿದ್ದಿತು. ಆತನು, ಶಾಸ್ತ್ರಜ್ಞನೂ, ನಿಷ್ಕಪಟಿಯೂ, ದೈವಭೀರುವೂ, ಎಂದು ಎಲ್ಲರಿಂದಲೂ ಸನ್ಮಾನಿಸಲ್ಪಡುತ್ತಿದ್ದನು. ಆತನು ಬಹುಕಾಲದಿಂದಲೂ ಶಂಭುದತ್ತನಿಗೆ ನಂಬಿಗೆಯುಳ್ಳ ಗುಮಾಸ್ತನಾಗಿದ್ದನು. ವಸ್ತುತಃ, ಆತನಿಗೆ ಶಂಭುದತ್ತನ ಗೃಹದಲ್ಲಿ ಸರ್ವಸ್ವಾತಂತ್ರ್ಯ! ಶಂಭುದತ್ತನ ಸೇವಕಸಂಬಂಧವು ಕೇವಲ ಮಾತ್ರ! ಸೇವಕನಾದರೂ ಆತನೇ ಸರ್ವಾಧಿಕಾರಿಯಾಗಿದ್ದನು.! ಶಂಭುದತ್ತನ ಸರ್ವಸ್ವವೂ ಆತನಿಗೆ ಅಧೀನ! ಸರ್ವಸ್ವವೇನು, ಶಂಭುದತ್ತನೇ ಆತನಾಜ್ಞೆಗಳಿಗೊಳಗಾಗದಿರುತ್ತಿರಲಿಲ್ಲ!! ಸರ್ವರಿಗೂ ಆತನಲ್ಲಿ ಮನಃಪೂರ್ವಕವಾದ ಪ್ರೀತಿ ಇದ್ದಿತು! ಆತನೂ ಕೂಡ ಅವರೆಲ್ಲರನ್ನೂ ನಿಃಸ್ಪೃಹತೆಯಿಂದ ಪ್ರೀತಿಸುತ್ತಿದ್ದನು. ತಥಾಪಿ, ಮಾತಾಪಿತೃವಿಹೀನೆಯಾದ ವಿಜಯಿನಿಯನ್ನು ತನ್ನ ಮಗಳೆಂದೇ ಭಾವಿಸಿಕೊಂಡಿದ್ದನು.

ಈ ದಿನ ದೇವೇಶವರ್ಮನು ಕೇವಲ ಚಿಂತಾಕ್ರಾಂತ! ಶವಗಳನ್ನು ಪರೀಕ್ಷಿಸಿ ಡಾಕ್ಟರ ಪರೀಕ್ಷೆಯು ಸುಲಭವಾಗಿ ಅವುಗಳನ್ನು ಕಳುಹಿಸಿಕೊಟ್ಟು ಕಾಳೀಚರಣನೇ ಮೊದಲಾದವರು ಹೊರಟು ಹೋದಮೇಲೆ ದೇವೇಶನು ಮನೆಯನ್ನು ಪ್ರವೇಶಿಸಿ ಒಂದು ಕೊಠಡಿಯಲ್ಲಿ ಆಲೋಚಿಸುತ್ತ ಕುಳಿತನು. ಅಕಸ್ಮಾತ್ ಆರೋ ಬಂದಂತಾಯಿತು! ಹಿಂದಿರುಗಿ ನೋಡುವಷ್ಟರಲ್ಲಿಯೇ ಬಂದಿದ್ದ ವ್ಯಕ್ತಿಯು ಅವನನ್ನು ನಮಿಸಿ "ದೇವೇಶಲೆ" ಎಂದು ಕರೆದನು. ಬಂದ ವ್ಯಕ್ತಿಯು ಕಾಳೀಚರಣನು. ದೇವೇಶನಿಗೆ ಆಶ್ಚರ್ಯವಾಗಿ ಹೋಯಿತು!! ಕೆಸಗನು ಪಿನಸ್ತು ಸಂಭವಿಸುವುದೋ ಎಂದು ಕಳವಳಗೊಂಡನು! ಕೇವಲ ಸ್ತಬ್ಧನಾದನು!! ಅಂತಹ ಸಂದರ್ಭದಲ್ಲಿ ಆರಿಗಾದರೇ ಹಾಗಾಗದು? [illegible] ಮಾನನ ಮೇಲೆ ಗುರುತರವಾದ ಅನುಮಾನ! ತಾನಾದರೋ ಗೃಹದಲ್ಲಿ

ಸರ್ವತಂತ್ರಸ್ವತಂತ್ರ !! ಹಾಗಿರುವಲ್ಲಿ ಪೋಲೀಸಿನವರು ತನ್ನನ್ನು ಹುಡುಕಿಕೊಂಡು ಬಂದರೆ ಹೆದರದಿರುವನೇ ?

ಕಾಳೀಚರಣನು “ಸ್ವಾಮಿ ! ತಾವು ಈರೀತಿ ಭಯಪಟ್ಟರೆ ಪ್ರಯೋಜನವೇನೂ ಇಲ್ಲ ! ನಡೆದಿರುವ ಸಂಗತಿಗಳು ಎಂದಿಗಾದರೂ ಹೊರಬೀಳಲೇಬೇಕು !! ಇದುವರೆಗೂ ನಡೆದಿರುವ ಸಂಘಟನೆಗಳಲ್ಲಿ ನಿಮಗೆ ತಿಳಿದಿರುವುದೆಲ್ಲವನ್ನೂ ಮರೆಮಾಚದೆ ಹೇಳುವುದು ನಿಮ್ಮ ಕರ್ತವ್ಯ ! ಶಂಭುದತ್ತನು ಈಕಾರ್ಯದಲ್ಲಿ ಸೇರಿರುವನೆಂದು ಹೇಳುವುದಕ್ಕೆ ಸಾಕ್ಷಿಗಳು ದೊರಕಿರುತ್ತವೆ. ಆತನ ಮನೆಯಲ್ಲಿ ನೀವು ಸರ್ವಾಧಿಕಾರಿಗಳು ! ನಿಮ್ಮ ತಿಳುವಳಿಕೆಗೆ ಬರದೆ ಆವಕೆಲಸವೂ ನಡೆಯುವಂತಿಲ್ಲ ಸತ್ಯಕ್ಕೆ ಎಂದಿಗೂ ಮೋಸವಿಲ್ಲವಾದುದರಿಂದ ನನ್ನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಡಿ” ಎಂದು ಹೇಳಿದನು. ಈ ಮಾತುಗಳನ್ನು ಕೇಳಿದ ದೇವೇಶನಿಗೆ ಬಹು ಭೀತಿಯುಂಟಾಯಿತು ! ಕಾಳೀಚರಣನು ಅವನನ್ನು ಮೇಲಿದ ಮೇಲೆ ಸಮಾಧಾನದಿಂದ ಪ್ರಶ್ನಿಸಿದನು. ಆ ಪ್ರಶ್ನೆಗೂ ಉತ್ತರವೇಬರಲಿಲ್ಲ ! ಕಾಳೀಚರಣನು, “ಸ್ವಾಮೀ ! ತಾವು ಹೇಳದರಂತೂ ಸರಿಯೇ ! ನಾವು ಹೇಳಿಸುವವಿಧದಲ್ಲಿ ಹೇಳಿಸುವೆವು. ಹೇಗಾದರೂ ಕೊಲೆಪಾತಕರನ್ನು ಶಿಕ್ಷೆಗೆ ಗುರಿಮಾಡದೆ ಖಂಡಿತವಾಗಿಯೂ ಬಿಡುವದಿಲ್ಲ ! ಇನ್ನು ನಿಮ್ಮ ಪರಿಣಾಮವು ನೆಟ್ಟಗಾಗುವುದಿಲ್ಲ !” ಎಂದು ಹೇಳಿ, ಸ್ವಲ್ಪ ಕೋಪವುಳ್ಳವನಂತೆ ನಟಿಸಿದನು. ದೇವೇಶನಿಗೆ ಬಹುಕಷ್ಟವಾಯಿತು ! “ನನ್ನನ್ನೇನು ಕೇಳುವನೋ ! ನಾನೇನು ಹೇಳಲಿ ? ನನ್ನಹೇಳಿಕೆಯಿಂದ ಶಂಭುದತ್ತನಮೇಲಿನ ಅಪವಾದವು ಯಾವಸ್ಥಿತಿಗೆ ಬರುವದೋ ! ನನಗೇನು ತೊಂದರೆಯುಂಟಾಗುವದೋ ! ಅಲ್ಲದೆ ನನ್ನ ಮಾತುಗಳನ್ನು ಪರಿಶೀಲಿಸುವವರಾರು ? ನಾನು ಶಂಭುದತ್ತನ ಪಕ್ಷಪಾತಿಯೆಂದೇ ಹೇಳುವರಲ್ಲದೆ ನನ್ನ ಮಾತಿಗೆ ಬೆಲೆಯನ್ನು ಕಟ್ಟುವರೇ ? ಪ್ರಪಂಚದಲ್ಲಿ ಚಂಚಲಳಾದ ಲಕ್ಷ್ಮಿಯು ಸಹವಾಸ ಕೆಟ್ಟದು. ಧನವೆಲ್ಲವೂ ನನ್ನ ಅಧೀನದಲ್ಲೇ ಇದ್ದುದರಿಂದ ನನಗೇನಾಗುವುದೋ ? ಏಕೆಂದರೆ ಅದು ನನ್ನಧೀನದಲ್ಲಿದ್ದುದನ್ನು ಎಲ್ಲರೂ ಬಲ್ಲರು ! ಅಲ್ಲದೆ ಈಗಿನ ಕಾಲದಲ್ಲಿ ಅಪರಾಧಿಯು ಸಿಗದಿದ್ದರೆ ನಿರಪರಾಧಿಯನ್ನಾದರೂ

ತಪ್ಪಿಗೆ ಗುರಿಮಾಡಿ ಈ ಜನರು ಸ್ವಪೌರುಷವನ್ನು ಕೊಚ್ಚಿಕೊಳ್ಳುವರು ! ಇಲ್ಲದುದರ ಉತ್ಪನ್ನ ಇಲ್ಲವೆ ಇದ್ದುದರ ಉತ್ಪನ್ನವನ್ನಾದರೂ ಮಾಡಿ ಕಾಸನ್ನು ಸಂಪಾದಿಸುವುದೇ ಇವರ ಕೆಲಸ ! ಎಂದು ಮೊದಲಾಗಿ ಆಲೋಚಿಸಿ "ಮನಸ್ಸಾಕ್ಷಿಯು ನಿರ್ಮಲವಾಗಿದ್ದರೆ ಸರಿ ! ನಿಜಸ್ಥಿತಿಯನ್ನೇ ಹೇಳಿಬಿಡುವೆನು" ಎಂದು ನಿರ್ಧರಿಸಿ, "ಆಗಬಹುದು ! ತಮ್ಮ ಪ್ರಶ್ನೆಗಳಿಗೆ ನನಗೆ ತಿಳಿದಮಟ್ಟಿಗೂ ಸಮಂಜಸವಾದ ಉತ್ತರಗಳನ್ನೇ ಕೊಡುವೆನು" ಎಂದು ಹೇಳಿದನು.

ಕಾಳೀಚರಣನು ಅನೇಕ ಪ್ರಶ್ನೆಗಳನ್ನು ಹಾಕಿದನು. ಪ್ರತಿಯೊಂದಕ್ಕೂ ಸಮಂಜಸವಾದ ಉತ್ತರವೇ ದೊರಕಿತು. ಆದರೂ ಶಂಭುದತ್ತನಿಗುಂಟಾದ ಅಪವಾದವನ್ನಾಗಲೀ ಆತನು ಜೀವಂತನೋ ಮೃತನೋ ಎಂದು ನಿರ್ಧರಿಸುವುದಕ್ಕಾಗಲೀ ಸಾಕಾದಷ್ಟು ಕಾರಣಗಳೇನೂ ಗೊತ್ತಾಗಲಿಲ್ಲ ! ಆದರೂ ಮನೆಯ ಆಭರಣಗಳನ್ನು ಚೆನ್ನಾಗಿ ಬಲ್ಲವರಾರೋ ಆ ಕಾರ್ಯದಲ್ಲಿ ಸೇರಿರಬೇಕೆಂದೂ, ಶಂಭುದತ್ತನಿಗೆ ಎಳ್ಳಷ್ಟಾದರೂ ಮಿತ್ರರಲ್ಲದ ಶತ್ರುಗಳಿಲ್ಲವೆಂದೂ, ಶಂಕರೀ ದುರ್ಗದ ಪ್ರೇಮಚಂದ್ರನು ಮಹಾತ್ಮ ಶಂಭುದತ್ತನಿಂದ ನಿರಾಕರಿಸಲ್ಪಟ್ಟು, ಆ ವಿಲಾಸಿನಿಯು ತನ್ನನ್ನಲ್ಲದೆ ಅನ್ಯರನ್ನು ಪ್ರೀತಿಸುವ ಸಂಭವವಿಲ್ಲವೆಂದು ನಂಬಿ ಶಂಭುದತ್ತನ ಮರಣವನ್ನೇ ಹಾರಯಿಸುತ್ತಿದ್ದನೆಂದೂ, ತನ್ನ ಸ್ವಂತದ ಪರೀಕ್ಷೆಯಿಂದ ತಿಳಿದುಕೊಂಡನು. ಕಾಳೀಚರಣನು, "ಸ್ವಾಮಿ ! ಭಯಪಡಬೇಡಿ ! ತಮ್ಮ ತೊಂದರೆಗೆ ಯಾರೂ ಬರದಂತೆ ಏರ್ಪಾಡುಗಳನ್ನು ಮಾಡಿರುತ್ತೇನೆ. ಆದರೆ ಅವಶ್ಯಕವಾದರೆ ತಾವು ಬರಬೇಕಾಗುತ್ತದೆ. ನಾನು ನಿಮ್ಮೊಂದಿಗೆ ಮಾತನಾಡಿದುದನ್ನು ಎಂದಿಗೂ ಬಹಿರಂಗಕ್ಕೆ ತರಬೇಡಿ" ಎಂದು ಹೇಳಿ ಶವಗಳನ್ನು ನೋಡಲು ಹೊರಟುಹೋದನು.

ಡಾಕ್ಟರರು ಶವಗಳನ್ನು ಪರೀಕ್ಷಿಸಿದ್ದರು. ಕಾಳೀಚರಣನು ಹೋದ ಕೂಡಲೆ ಸಮಸ್ತ ಸಂಗತಿಗಳನ್ನೂ ತಿಳಿಹಿಸಿ, "ಇದು ಕೇವಲ ವಿಚಿತ್ರತರವಾದ ಖೂನಿಯಾಗಿದೆ ಹೈಡ್ರೋಸಿಯಾನಿಕ್ ಆಸಿಡ್ (Hydrscyanic-acid) ಎಂಬ ಪ್ರಬಲವಾದ ವಿಷದಿಂದ ಮೊದಲು ಮರಣವುಂಟಾಗಿದೆ. ಅನಂತರ ರುಂಡಮುಂಡಗಳನ್ನು ಬೇರ್ಪಡಿಸಿರುವರು. ಅಲ್ಲದೆ, ಶವ

ಗಳಲ್ಲಿಯೂ, ಅವುಗಳ ಬಟ್ಟೆಗಳಲ್ಲಿಯೂ ಇರುವ ಕಲೆಗಳು ಆ ದೇಹಗಳಿಂದಲೇ ಹೊರಟ ರಕ್ತದಿಂದುಂಟಾಗಿಲ್ಲ!" ಎಂದು ಹೇಳಿದರು. ಪಾಠಕ ಮಹಾಶಯರು ಕಾಳೀಚರಣನಿಗೆ ಮಹದಾಶ್ಚರ್ಯವಾಯಿತೆಂದು ಊಹಿಸುವರೇನೋ! ವಸ್ತುತಃ ಕಾಳೀಚರಣನಿಗೆ ಸ್ವಲ್ಪವೂ ಆಶ್ಚರ್ಯವಾಗಲಿಲ್ಲ. ಆವದಿನ ಆ ರಕ್ತಪ್ರವಾಹದ ಭೀಕರವಾದ ಕೊಠಡಿಯನ್ನು ನೋಡಿದ್ದನೊ ಆ ದಿನವೇ ಅವನಭಿಪ್ರಾಯವು ಇತರರಿಗಿದ್ದಂತಿರಲಿಲ್ಲ. ಡಾಕ್ಟರರು ಹೇಳಿದ ಸಂಗತಿಗಳನ್ನು ಕೇಳಿ ಕಾಳೀಚರಣನು ತನ್ನ ಊಹಾದೃಷ್ಟಿಗೆ ಸುಲಭವಾಗಿ ಗೋಚರವಾಗದ ಅವುದೋ ಒಂದು ತಂತ್ರಜಾಲವು ಹರಡಲ್ಪಟ್ಟಿರಬೇಕೆಂತಲೂ ಸಂಘಟಿಸಿದ್ದ ಘಟನಾವಳಿಯು ಸಾಮಾನ್ಯವಾದುದಲ್ಲವೆಂತಲೂ ನಿರ್ಧರಿಸಿಕೊಂಡನು. ಡಾಕ್ಟರೊಂದಿಗೆ ವಿಶೇಷವಾಗಿ ಏನೂ ಮಾತನಾಡದೆ, ಅವರ ಅಪ್ಪಣೆಯನ್ನು ಪಡೆದು ತನ್ನ ಮನೆಗೆ ಹೊರಟನು. ಕಾಳೀಚರಣನ ಉತ್ಸಾಹವು ಹೆಚ್ಚಾಯಿತಲ್ಲದೆ ಸ್ವಲ್ಪವಾದರೂ ಕಡಿಮೆಯಾಗಲಿಲ್ಲ!

ಗೃಹಾಭಿಮುಖವಾಗಿಯೇ ಹೋಗುತ್ತಿದ್ದ ಕಾಳೀಚರಣನು ಹಠಾತ್ತಾಗಿ ನಿಂತುಬಿಟ್ಟನು! ಕ್ಷಣಮಾತ್ರ ಏನನ್ನೋ ಆಲೋಚಿಸಿದನು. ಮುಂದುವರಿಯದೆ ಹಿಂದಿರುಗಿ ಇನ್ಸ್ಪೆಕ್ಟರ ಮನೆಯಕಡೆ ಹೊರಟನು. ಸ್ವಲ್ಪಕಾಲದಲ್ಲಿಯೇ ಇನ್ಸ್ಪೆಕ್ಟರಮನೆಯನ್ನು ಸೇರಿದನು. ಬಾಗಿಲಿನ ಸಮೀಪದಲ್ಲಿದ್ದ ಒಬ್ಬ ಸೇವಕನು ಇನ್ಸ್ಪೆಕ್ಟರು ಅರೊಂದಿಗೋ ಮಾತನಾಡುತ್ತಿರುವರೆಂದು ಹೇಳಿದನು. ಇನ್ಸ್ಪೆಕ್ಟರ್ ಸಾಹೇಬರ ಕೊಠಡಿಯು ಗೃಹದ ಒಂದು ಪಾರ್ಶ್ವದಲ್ಲಿದ್ದುದರಿಂದ ಕಾಳೀಚರಣನು ಆ ಸೇವಕನಿಗೆ ಕಾಣಿಸದಂತೆಯೇ ಆ ಕೊಠಡಿಯನ್ನು ಸಮೀಪಿಸಿ ಗೋಡೆಯನ್ನೊರಗಿಕೊಂಡು ಹೊರಗಿನಿಂದಲೆ ಒಳಗಿನವರಾಡುತ್ತಿದ್ದ ಮಾತುಗಳನ್ನು ಕೇಳಲಾರಂಭಿಸಿದನು. ಸಂಭಾಷಣೆಯಿಂದಲೂ ವ್ಯಕ್ತಿಗಳ ಸ್ವರಗಳಿಂದಲೂ ಮಾತನಾಡುತ್ತಿದ್ದವರು ಇನ್ಸ್ಪೆಕ್ಟರ್ ಮತ್ತು ಭುಜಂಗನೆಂದು ತಿಳಿದುಕೊಂಡನು. ಭುಜಂಗನಾರೆಂಬುದನ್ನು ಪಾಠಕರು ಅವರೀರ್ವರ ಸಂಭಾಷಣೆಯಿಂದಲೇ ಅರಿಯುವರು.

ಭುಜಂಗ:—" ಸ್ವಾಮಿ ! ಹೇಗೆ ಹೇಳುವುದಕ್ಕಾಗುವುದು ? ಶಂಭುದತ್ತನೇನೋ ಸಾತ್ವಿಕನೇ ! ಆದರೆ ಶರಚ್ಚಂದ್ರರ ಆಸ್ತಿಯೊಂದು ಸಿಕ್ಕಿದ್ದರಿಂದತಾನೆ ಆತನು ಶ್ರೀಮಂತನಾದುದು ? ಆ ಹುಡುಗಿ-ವಿಜಯಿನಿಯನ್ನು ಮನೆಯಲ್ಲಿಟ್ಟುಕೊಂಡು ಕಾಪಾಡುವ ನೆವದಿಂದಲೇ ಅವಳಿಗೆ ಬರತಕ್ಕ ಆದಾಯದಲ್ಲಿ ಎಷ್ಟು ಮರೆಮಾಚಿದನೋ ಕಂಡವರಾರು ? ದ್ರವ್ಯಾಶೆಯು ಕೆಟ್ಟದ್ದು ! ಈಗ ತಾವೇ ಆಲೋಚಿಸೋಣವಾಗಲಿ ! ಆತನ ಮನೆಯಲ್ಲಿದ್ದವರನ್ನು ಇತರರು ಕೊಲ್ಲುವುದೇನು ಸುಲಭಸಾಧ್ಯವೇ ? ಒಂದುವೇಳೆ ಎಲ್ಲರೂ ಖೂನಾಗಿದ್ದರೆ ಮನೆಯವರಿಗೆಲ್ಲಾ ಒಂದೇಗತಿ ಬಂತೆಂದು ಹೇಳಬಹುದಾಗಿದ್ದಿತು. ಅವರಾರೂ ಸತ್ತಕುರುಹೂ ಕಾಣುವುದಿಲ್ಲ ! ಬದುಕಿರುವುದೂ ಗೊತ್ತಿಲ್ಲ ! ಮುಖ್ಯವಾಗಿ ಆ ವಿಜಯಿನಿಯು ನನಗೆ ಬಂಧುವು. ಅವಳೊಬ್ಬಳಿಂದ ಶರಚ್ಚಂದ್ರರ ವಂಶವು ಬೆಳೆಯಬೇಕಾಗಿರುತ್ತೆ. ಅವಳಪಾಡೇನಾಗಿರುವುದೋ ಎಂಬುದೆ ನನಗೆ ವ್ಯಸನ ಸ್ವಾಮಿ !!"

ಇನ್ಸ್ಪೆಕ್ಟರು :—" ನನಗೂ ತುಂಬಾಸಂದೇಹ ! ಆದರೆ ನಮ್ಮ ಕಾಳೀಚರಣನು ಈ ವಿಚಾರದಲ್ಲಿ ತನ್ನಭಿಪ್ರಾಯವನ್ನು ಸ್ವಲ್ಪವೂ ಹೊರತಂದಿಲ್ಲ ! ಏನೇನೋ ಕೆಲಸಗಳನ್ನು ಮಾಡುತ್ತಿರುವನು; ಇದರ ಒಳಸಂಗತಿಯನ್ನು ಕಂಡುಹಿಡಿಯಬೇಕಾದರೆ ವಸ್ತುತಃ ಅವನೊಬ್ಬನೇ ಸಮರ್ಥನಲ್ಲದೆ ಇನ್ನಾರಿಂದಲೂ ಆಗಲಾರದು ! ನನಗಂತೂ ಕೇವಲ ಭ್ರಾಂತಿಯಾಗಿದೆ ! ಏನಂತ ಇದರ ಗೂಢಮೂಲವನ್ನು ಕಂಡುಹಿಡಿದು ಮಾಡಬೇಕಾದುದನ್ನು ಅವನೇ ಮಾಡಿಕೊಳ್ಳಲಿ ! ಸರ್ವಭಾರವನ್ನು ಅವನಿಗೇ ವಹಿಸಿಬಿಟ್ಟಿರುತ್ತೇನೆ !! ಆತನ ಬುದ್ಧಿ, ಶಕ್ತಿ, ಸಾಹಸ, ಚಮತ್ಕಾರಗಳು ಸಾಮಾನ್ಯವೇ ? ಇದುವರೆವಿಗೂ ಅವನು ಪ್ರವೇಶಿಸಿದ ಕೇಸುಗಳ ನಿಜಸ್ಥಿತಿಯನ್ನು ಹೊರತಂದು ಅಪರಾಧಿಗಳ ಸೆಲೆಯನ್ನರಿತು ಶಿಕ್ಷಿಸದೆ ಬಿಟ್ಟಿಲ್ಲ !" ಎಂದು ಮೋದವಾಗಿ ಹೇಳುತ್ತಿರಲು ಭುಜಂಗನು " ಸರಿ ! ನಿಸ್ಸೀಮ !! ಗಟ್ಟಿಗ !!! ಅವನೆಂದಿಗೂ ಈ ಘೋರಕೃತ್ಯದ ಗುಟ್ಟನ್ನು ಬಹಿರಂಗಕ್ಕೆ ತರದೇ ಬಿಡುವುದಿಲ್ಲ " ಎಂದನು. ಕಾಳೀಚರಣನು ಬಹುಕಾಲ ಅಲ್ಲಿ ನಿಲ್ಲಲಿಲ್ಲ. ಎಲ್ಲಿಗೋ ಹೊರಟುಹೋದನು.

ಪಂಚಮ ಗುಚ್ಛ.

ದಾರುಣವಾದ ಬಿಸಲಿನ ತಾಪವನ್ನು ಸಹಿಸಲಾರದೆ ಸರ್ವಪ್ರಾಣಿಗಳೂ ನೆಳಲನ್ನು ಕಂಡೆಡೆಯಲ್ಲೆಲ್ಲಾ ವಿಶ್ರಮಿಸಿಕೊಳ್ಳುತ್ತಿದ್ದುವು. ಅತಿ ವೃದ್ಧನಾದ ಒಬ್ಬ ಬ್ರಾಹ್ಮಣನು ಬಿಸಲಿನ ತಾಪವನ್ನು ಸಹಿಸಲಾರದೆ, ಬಳಲಿ, ಕಂಗೆಟ್ಟು, ಅಡಿಗಡಿಗೂ ನಿಟ್ಟುಸಿರುಗಳನ್ನು ಬಿಡುತ್ತ, ಶಂಕರೀದುರ್ಗದ ರಾಜಬೀದಿಯಲ್ಲಿ ನಿಧಾನವಾಗಿ ಹೋಗುತ್ತಿದ್ದನು. ಬರಬರುತ್ತ ಆಯಾಸವು ಹೆಚ್ಚಿತು. ವೃದ್ಧನಿಗೆ ಇನ್ನು ಮುಂದೆ ನಡೆಯುವುದು ಕಷ್ಟಸಾಧ್ಯವಾಯಿತು! ಸಮೀಪದಲ್ಲಿ, ದಟ್ಟವಾಗಿಯೂ, ಕೋಮಲವಾಗಿಯೂ, ಬೆಳೆದಿದ್ದ ಒಂದು ಮರವನ್ನು ನೋಡಿ, ಅದರ ಸಮೀಪವನ್ನೈದಿದನು. ಆ ಮರದ ತಂಪಾದ ನೆಳಲನ್ನು ಸೇರಿ, ತನ್ನ ಗಂಟನ್ನು ಸಮೀಪದಲ್ಲಿಟ್ಟು ಕೊಂಡು ವಿಶ್ರಮಿಸಿಕೊಳ್ಳುತ್ತಿದ್ದನು. ಹಾಗೆಯೇ ನಿದ್ರಿಸಲಾರಂಭಿಸಿದನು.

ಎಚ್ಚತ್ತು ನೋಡುವಾಗ್ಗೆ ಸೂರ್ಯಾಸ್ತಮಾನವಾಗುತ್ತಿತ್ತು! ಬೆಚ್ಚಿಬಿದ್ದವನಂತೆದ್ದು, "ಆದರೇನು ಈ ಸ್ಥಳದಲ್ಲಿ ನನ್ನ ಪರಿಚಿತರಾರೂ ಇಲ್ಲ! ನಾನೆಲ್ಲಿಗೆ ಹೋಗಬೇಕು? ಏನು ಮಾಡಲಿ? ರಾತ್ರಿಯನ್ನು ಕಳೆಯುವುದು ಹೇಗೆ! ದೇವ! ನೀನೇ ಗತಿಯೋ?" ಎಂದು ನಾನಾವಿಧವಾಗಿ ಗೋಣಗುಟ್ಟಲಾರಂಭಿಸಿದನು.

ಪ್ರಬಲನಾದ ದಿನಮಣಿಯು ಮರೆಯಾದುದನ್ನು ಕಂಡು "ಕಬ್ಬಿಣವು ಕಾದವೇಳೆಯಲ್ಲಿಯೇ ಬಡಿಯಬೇಕು" ಎಂಬ ಸಾಮತಿಯನ್ನು ಅನುಸರಿಸಿರುವುದೋ ಎಂಬಂತೆ ಕತ್ತಲೆಯು, ಎಲ್ಲೆಲ್ಲಿಯೂ ಆವರಿಸುತ್ತಲಿತ್ತು. ಜನರೆಲ್ಲರೂ ತಂತಮ್ಮ ಮನೆಗಳಿಗೆ ಹೋಗುತ್ತಿದ್ದರು ಪಾಪ! ಆ ವೃದ್ಧನು ಮಾತ್ರ ಬಹುವ್ಯಸನಾಕ್ರಾಂತನಾಗಿದ್ದನು! ಹಾಗೆಯೇ ಸ್ವಲ್ಪಹೊತ್ತು ಆಲೋಚಿಸಿ, ಅಲ್ಲಿಂದೆದ್ದು, ಸಮೀಪದಲ್ಲಿ ಕಾಣಿಸುತ್ತಿದ್ದ ಒಂದು ಮನೆಯ ಹತ್ತಿರಕ್ಕೆ ಹೋದನು.

ಆ ಗೃಹದ ದ್ವಾರದೇಶವನ್ನು ಸೇರಿ ಮನೆಯವರನ್ನು ವಿಚಾರಿಸಲು, ಒಬ್ಬ ಕೆಲಸಗಾರನು "ಸ್ವಾಮಿ! ಮನೆಯ ಯಜಮಾನರು ಊರಲ್ಲಿಲ್ಲ. ನೀವ್ಯಾರು? ನಿಮ್ಮೂರ್ಯಾವದು?" ಎಂದು ಕೇಳಿದನು.

ವೃದ್ಧ:—"ಮಹರಾಯ, ನಾನು ಬಹುದೂರದೇಶಸ್ಥನು. ಈ ಮನೆಯವರಾರ ಪರಿಚಯವೂ ನನಗಿಲ್ಲ. ಆದರೂ, ರಾತ್ರೀಕಾಲವಾದುದರಿಂದ, ಮಲಗಲಿಕ್ಕೆ ಸ್ವಲ್ಪ ಸ್ಥಳ ಕೊಟ್ಟರೆ, ಬಹಳ ಪುಣ್ಯಬರುತ್ತೆ."

ಕೆಲಸ:—"ಆಗಲಿ ಸ್ವಾಮಿ! ನಮ್ಮ ಯಜಮಾನನೊಬ್ಬನು ಇದ್ದಾನೆ. ಅವನನ್ನು ಕೇಳಿ ಬರುತ್ತೇನೆ." ಎಂದು ಹೇಳಿ, ಯಜಮಾನನ ಅಪ್ಪಣೆಯನ್ನು ಪಡೆದುಕೊಂಡು ಬಂದನು. ವೃದ್ಧನನ್ನು ಒಳಗೆ ಕರೆದುಕೊಂಡು ಹೋಗಿ ಹಜಾರದಲ್ಲಿ ಕುಳಿತುಕೊಳ್ಳುವಂತೆ ಹೇಳಿ, ಹೊರಟುಹೋದನು.

ಸ್ವಲ್ಪ ಕಾಲದಲ್ಲಿಯೇ, ಅಲ್ಲಿನ ಆಳುಗಳಲ್ಲಿ ಪ್ರಮುಖನಾಗಿದ್ದವನೊಬ್ಬನು ಬಂದು, ಬಹು ಆದರದಿಂದ, "ಸ್ವಾಮಿ! ಭೋಜನಕ್ಕೇನಾದರೂ ಮಾಡಿಕೊಳ್ಳಿ, ಮನೆಯವರಿದ್ದಿದ್ದರೆ, ಎಲ್ಲಾ ಅನುಕೂಲವಾಗುತ್ತಿತ್ತು," ಎಂದು ಹೇಳಲು, "ಅಪ್ಪಾ ನನಗೇನೂ ಬೇಕಾಗಿಲ್ಲ. ಸಮೀಪದಲ್ಲಿ ಯಾವರೂ ಬಂದು ಕೊಳವನ್ನು ತೋರಿಸಿದರೆ ನಾನು ನಮ್ಮ ಸಂಧ್ಯಾಕರ್ಮಗಳನ್ನು ಮಾಡಿಕೊಂಡು ಬಂದು ಮಲಗುತ್ತೇನೆ," ಎಂದು ಹೇಳಿದನು. ಆ ಜವಾನನು ಸಮೀಪದಲ್ಲಿದ್ದ ಒಂದು ಕೊಳಕ್ಕೆ ಕರೆದುಕೊಂಡು ಹೋಗಲು ಒಬ್ಬನನ್ನು ಜತೆಯಾಗಿ ಕಳುಹಿಸಿದನು. ವೃದ್ಧನು ಕೊಳಕ್ಕೆ ಹೋಗಿ ಸಂಧ್ಯಾವಿಧಿಗಳನ್ನು ತೀರಿಸಿಕೊಂಡು ಬಂದನು. ಸೇವಕರೆಲ್ಲರೂ ಭೋಜನವನ್ನು ತೀರಿಸಿಕೊಂಡು ಬಂದು, ವೃದ್ಧನೊಡನೆ ದೇಶದೇಶದ ಸಮಾಚಾರಗಳನ್ನು ಕುರಿತು ನಾನಾವಿಧವಾಗಿ ಮಾತನಾಡುತ್ತ ಕಾಲವನ್ನು ಕಳೆಯುತ್ತಲಿದ್ದರು.

ಮಾತಿನ ಸಂದರ್ಭದಲ್ಲಿ ವೃದ್ಧನು, ಈಗಿನ ಕಾಲದ ಬಾಲಬಾಲಿಕೆಯರು ಹಿರಿಯರನ್ನು ಲಕ್ಷ್ಯಕ್ಕೆ ತರದೆ ಸ್ವಾತಂತ್ರ್ಯದಿಂದ ವರ್ತಿಸಿ ವಿಪತ್ತಿಗೊಳಗಾಗುತ್ತಿದ್ದುದನ್ನೂ, ಮತ್ತು ಬೇರೆಬೇರೆ ಸಂಗತಿಗಳನ್ನು ಹೇಳಿ, ಶಂಭುದತ್ತನ ಮನೆಯಲ್ಲಿ ನಡೆದ ಸಮಾಚಾರಗಳನ್ನೆಲ್ಲಾ ತಿಳುಹಿಸಿದನು. ಇವನೊಡನೆ ಮಾತನಾಡುತ್ತಿದ್ದ ಆ ಆಳಿಗೆ ಏನೂ ತೋಚದಂತಾಯಿತು!

ಸುಮ್ಮನೆ ಕುಳಿತುಕೊಂಡು ಬಹಳ ಹೊತ್ತು ಆಲೋಚಿಸುತ್ತಿದ್ದನು !! ಉಕ್ಕಿಬರುವ ವ್ಯಸನವನ್ನು ತಡೆಯಲಾರದವನಂತೆ ಅಳಲಾರಂಭಿಸಿದನು !!! ಆಳುಗಳೆಲ್ಲರೂ ಭಯಚಕಿತರಾಗಿ ತಮ್ಮ ಯಜಮಾನನನ್ನು ಸಮಾಧಾನ ಮಾಡುತ್ತ, ಆ ವೃದ್ಧನನ್ನು ನೋಡಿ "ಅಯ್ಯೋ, ನಮ್ಮ ಪ್ರೇಮಚಂದ್ರರೇನಾದರೊ "ಎಂದು ಹಂಬಲಿಸುತ್ತಿದ್ದರು. ವೃದ್ಧನು ಎಲ್ಲರಿಗೂ ಸಮಾಧಾನವನ್ನು ಹೇಳಿದನು. ಸಮಾಚಾರವನ್ನು ತಿಳಿಯಲೋಸುಗ ಬಹು ಯುಕ್ತಿಯುಕ್ತವಾದ ಮಾತುಗಳನ್ನಾಡಿ, ಆ ಮನೆಯ ಯಜಮಾನನಾದ ಪ್ರೇಮಚಂದ್ರನು ಅತುಲೈಶ್ವರ್ಯವಂತನೆಂತಲೂ ಅವನ ತಂದೆಯು ಆಕಸ್ಮಿಕವಾದ ಮರಣಕ್ಕೆ ಗುರಿಯಾದನೆಂತಲೂ ; ತಂದೆಯ ಮರಣದಿಂದ ಉಂಟಾದ ಅಧಿಕವ್ಯಸನವನ್ನು ವಿಸ್ಮೃತಿಗೆ ತರುವುದಕ್ಕಾಗಿ ಕಲಿಕಲ್ಲಿನಲ್ಲಿ ವಸಿಸುತ್ತಿದ್ದಾಗ, ವಿಲಾಸಿನಿಯಲ್ಲಿ ಅನುರಕ್ತನಾಗಿದ್ದುದನ್ನು ಶಂಭುದತ್ತನು ತಿಳಿದು ಅವನನ್ನು ತನ್ನ ಮನೆಗೆ ಸೇರಗೊಡಿಸಲಿಲ್ಲವೆಂತಲೂ, ಪ್ರೇಮಚಂದ್ರನು ಪುನಃ ಕಂಬಲೀಯುಗಕ್ಕೆ ಬಂದು ಸುಖವಾಗಿದ್ದರೂ, ವಿಲಾಸಿನಿಯನ್ನು ಮರೆಯದೆ ಅವಳನ್ನು ವಿವಾಹ ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಪತ್ರವ್ಯವಹಾರವನ್ನು ಮಾಡುತ್ತಿದ್ದನೆಂತಲೂ, ಒಂದು ವಾರದ ಕೆಳಗೆ, ವಿಲಾಸಿನಿಯು ಒಂದು ದಿನ ಒಂದು ಕಾಗದವನ್ನು ಬರೆದು ಗುಪ್ತವಾಗಿ ಕಳುಹಿಸಿದ್ದಳೆಂತಲೂ ; ಮತ್ತು ಮರುದಿನವೇ ಹೋದ ಪ್ರೇಮಚಂದ್ರನು ಅದುವರೆಗೂ ಬಂದಿರಲಿಲ್ಲವೆಂತಲೂ ವೃದ್ಧನು ತಿಳಿದುಕೊಂಡನು.

ಪುನಃ ಆ ಸೇವಕನು, " ನೀವು ಹೇಳುವುದನ್ನು ನೋಡಿದರೆ, ಶಂಭುದತ್ತನು ಏನು ಮಾಡಿಬಿಟ್ಟನೋ ಎಂದು ಯೋಚನೆಯಾಗಿದೆ ! ಇನ್ನೇನು ಮಾಡಲಿ ! ಪ್ರೇಮಚಂದ್ರರ ಸಮಾಚಾರವು ತಿಳಿಯುವುದು ತಾನೆ ಹೇಗೆ ! " ಎಂದು ತಹತಹಪಡಲಾರಂಭಿಸಿದನು. ವೃದ್ಧನು ಅವನನ್ನು ಸಂತೈಸಿದನು.

ರಾತ್ರಿ ಬಹಳ ಹೊತ್ತಾಗಿದ್ದುದರಿಂದ ಎಲ್ಲರೂ ತಂತಮ್ಮ ಸ್ಥಳಕ್ಕೆ ಹೋಗಿ ಮಲಗಿಕೊಂಡರು. ವೃದ್ಧನೂ ಸ್ವಲ್ಪಕಾಲ ಮಲಗಿದ್ದನು. ಮಧ್ಯರಾತ್ರಿಯಾಗುತ್ತಾ ಬಂದಿತು. ರಜನಿಯು ತನ್ನ ಸತ್ವಾತಿಶಯದಿಂದ ಮೆರೆಯುತ್ತಿರಲು, ಪ್ರಪಂಚದಲ್ಲಿ ಶಾಂತತೆಯೇ ಮೂರ್ತೀಭವಿಸಿದ್ದಂತೆ ಭಾಸವಾಗುತ್ತಿತ್ತು. ನಿದ್ರಾದೇವಿಯು ಸರ್ವಾಧಿಕಾರವು ಎಲ್ಲೆಲ್ಲಿಯೂ

ನಿರಂಕುಶವಾಗಿತ್ತು. ಅಂತಹ ಕಾಲದಲ್ಲಿ ಶಾಂತತೆಯು ಸುಖಾನುಭವವನ್ನು ಹೊಂದದಿರುವುದಾವುದು? ಜಾರಚೋರಾದಿ ದುರಾಚಾರಿಗಳೂ, ಗಂಭೀರ ಕಾರ್ಯತತ್ಪರರೂ, ವಿನಾ ಮತ್ತಾರು ತಾನೆ ಆ ಸಮಯದಲ್ಲಿ ಹೊರ ಹೊರಡುವರು.

ಎಲ್ಲರೂ ಕೇವಲ ನಿದ್ರಾಭಿಭೂತರಾಗಿರಲು ನಮ್ಮ ವೃದ್ಧನು ಮೆಲ್ಲನೆ ಎದ್ದನು, ಸುತ್ತಲೂ ನೋಡಿದನು. ಬಾಗಿಲ ಸಮೀಪಕ್ಕೆ ಹೋದನು. ತನ್ನ ಕಟಿಪ್ರದೇಶದಲ್ಲಿದ್ದ ಬೀಗದ ಕೈಗಳ ಸರವನ್ನು ತೆಗೆದನು! ನಿಶ್ಶಬ್ದವಾಗಿ ಬಾಗಿಲನ್ನೂ ತೆಗೆದುಕೊಂಡು ಒಳಹೊಕ್ಕನು. ಇದೇನು ವಿಪರ್ಯಾಸ! ಶುದ್ಧಸಾತ್ವಿಕನಂತೆ ತೋರುತ್ತಿದ್ದ ವೃದ್ಧ ಬ್ರಾಹ್ಮಣನು ತಸ್ಕರನಾಗಿರುವಂತಿರುವುದಲ್ಲಾ! ಚೋರಾಗ್ರೇಸರನೆ ನೀನು ಸಭ್ಯನೆಂದು ಮೋಸಹೋಗಿ ಇದುವರೆಗೂ ನಿನ್ನಲ್ಲಿ ಅವರಿಗುಂಟಾಗಿರುವ ಭಕ್ತಿವಿಶ್ವಾಸಕ್ಕೆ ಇದೀಗ ಪರಿಣಾಮ! ಈಗ ತಾನೇ—ನಾಲ್ಕಾರು ಘಳಿಗೆಗಳ ಹಿಂದೆ, ಆರಸ್ಥಿತಿಯನ್ನು ನೋಡಿದರೆ ಮನವು ಮರುಗುವಂತಿದ್ದಿತೋ ಅದೇ ಆ ಮನುಷ್ಯನು ಈಗ ಮಾಡುತ್ತಿರುವ ಕೃತ್ಯವನ್ನು ನೋಡಿದರೆ, ಈ ಪ್ರಪಂಚದಲ್ಲಿ ನಂಬಿಕೆಯುಂಬುದೆಲ್ಲಿದೆ? ಆರನ್ನು ನಂಬುವುದು? ಕಾಲಗತಿಯ ವಿಚಿತ್ರ ವ್ಯಾಪಾರದಿಂದ ಏನೇನಾಗುವುದೋ ಬಲ್ಲವರಾರು? ಆ ಕಳ್ಳವೃದ್ಧನು ಕೊಠಡಿಯೊಳಗೆ ಪ್ರವೇಶಿಸಿಯೇ ಬಿಟ್ಟನು.

ಕಳ್ಳನೊಂದಿಗೆ ಒಂದು ದೀಪವೂ ಇತ್ತು. ಅದರ ಸಹಾಯದಿಂದ ಮನೆಯ ಎಲ್ಲಾ ಭಾಗಗಳನ್ನೂ ಹುಡುಕುತ್ತಾ ಇದ್ದನು. ಆದರೂ ಏನನ್ನೂ ತೆಗೆದುಕೊಂಡಂತೆ ಕಾಣಲಿಲ್ಲ. ಏಕೆ? ಏನೂ ಸಿಗಲಿಲ್ಲವೆ? ಮಹದೈಶ್ವರ್ಯವಂತನ ಮನೆಗೆ ನುಗ್ಗಿ ಏನೂ ಸಿಗಲಿಲ್ಲವೆ? ಛಿ! ಛಿ!! ಇದೇನು ಆಶ್ಚರ್ಯವಾಗಿದೆ!!! ಅವನನ್ನು ಅಡ್ಡಿಪಡಿಸುವವರೇ ಇಲ್ಲದೆ ಇರುವಲ್ಲಿ ಕೈಗೆ ಸಿಕ್ಕಿದುದನ್ನು ಎತ್ತಿಕೊಂಡು ಹೋಗುವುದನ್ನು ಬಿಟ್ಟು ಏನೇನೋ ನೋಡುತ್ತಾ ಸುಮ್ಮನೆ ತಿರುಗುತ್ತಿರುವನು! ಇವನೇನು ಕಳ್ಳನೋ? ಕಪಟಸಂಧಿವಿಗ್ರಹಿಯೋ? ಅಥವಾ ಹುಚ್ಚನೋ? ಏನು? ಆರಾದರೂ ಆಗಲಿ, ಅಂತು ಆತನು ಏನನ್ನೂ ಅಪಹರಿಸಿಲ್ಲ. ಹಾಗಾದರೆ ವೃಥಾ ಗೃಹವನ್ನು ಪ್ರವೇಶಿಸಿದುದೇಕೆ? ಏತಕ್ಕಾದರೂ ಆಗಲಿ, ಮನೆಯ

ಳಲ್ಲೆಲ್ಲಾ ಹುಡುಕಿದನು. ಕಟ್ಟಕಡೆಗೊಂದು ಕಾಗದದ ಕಟ್ಟನ್ನು ತೆಗೆದುಕೊಂಡು ನೋಡಲಾರಂಭಿಸಿದನು. ಅದರಲ್ಲೊಂದು ಕಾಗದವನ್ನು ಕಂಡು ವಿಸ್ಮಯಾವಿಷ್ಟನಾದಂತಾಗಿ ಅದನ್ನು ಓದಲಾರಂಭಿಸಿದನು.

ಕಾಗದ :—

“ಮಿತ್ರಮಹಾಶಯರಾದ ಪ್ರೇಮಚಂದ್ರರ ಸನ್ನಿಧಿಯಲ್ಲಿ ಅನಾಥ ಭುಜಂಗನ ವಿಜ್ಞಾಪನೆಗಳು,

ತಮ್ಮಿಂದಲ್ಲದೆ ಅನ್ಯಥಾ ಈ ದೀನನ ಉದ್ಧಾರವಾಗುವುದು ಕೇವಲ ಅಸಂಭವವೆಂಬುದು ತಿಳಿದ ಅಂಶವೇ ಆಗಿರುತ್ತದೆ. ವಿಜಯಿನಿಯು ವಿಲಾಸಿನಿಯ ಮಾತಿಗೆ ಪ್ರತಿಯಾಡುವುದಿಲ್ಲವಾಗಿ ತಾವು ನನ್ನನ್ನು ಉದ್ಧಾರ ಮಾಡಬೇಕು. ದೇವೇಶರ ಸಾಮರ್ಥ್ಯವು ಏನೂ ನಡೆಯಲಿಲ್ಲ. ಆದರೂ ಸಮಯವನ್ನರಿತು ಸಹಾಯ ಮಾಡುವುದಾಗಿ ಹೇಳಿರುತ್ತಾರೆ. ಅಂತೂ ಅನಾಥನನ್ನು ಕೈಹಿಡಿದು ಉದ್ಧರಿಸುವ ಸರ್ವಭಾರವೂ ತಮ್ಮದಾಗಿರುತ್ತದೆ. ತಾವು ಕರಿಕಲ್‌ಗೆ ಯಾವಾಗ ಬರುತ್ತೀರಿ, ತಿಳುಹಿಸಬೇಕು.

ಅನಾಥಭುಜಂಗನ ಕಾಗದವನ್ನು ನೋಡಿ, ಕಳ್ಳಮುದುಕನು ಬಹಳಹೊತ್ತು ಆಲೋಚಿಸುತ್ತಿದ್ದಂತೆ ತೋರುತ್ತಿತ್ತು. ಅಷ್ಟರಲ್ಲಿಯೇ ಮುದುಕನು ಚಕಿತನಾಗಿ ತಕ್ಷಣವೇ ಹೊರಗೆ ಬಂದು ಸುತ್ತಲೂ ನೋಡಿದನು. ಮನೆಯ ಗೋಡೆಯನ್ನೇ ಆಶ್ರಯಿಸಿಕೊಂಡು ಮನೆಯ ಹಿಂಭಾಗಕ್ಕೆ ಹೋಗಿ ಕೈದೋಟದಲ್ಲಿ ನುಗ್ಗಿ ಎಲ್ಲಿಯೋ ಮಾಯವಾದನು.

ಷಷ್ಠ ಗುಚ್ಛ.

ಕಾದಂಬಿನಿಯ ಕಲಾಲೇಶವೂ ಇಲ್ಲದೆ ಶುಭ್ರವಾದ ಘನನೀಲವರ್ಣದಿಂದ ವಿರಾಜಿಸುತ್ತಿದ್ದ ಜ್ಯೋತ್ಸ್ನಾಮಯವಾದ ಆಕಾಶದಲ್ಲಿ ಕಾಂತಿಯುಕ್ತವಾಗಿ ಥಳಥಳಿಸುತ್ತಿದ್ದ ಅಗಣಿತ ಉಡುಗಣಗಳ ತೇಜೋರಾಶಿಯು ಆನಂದವನ್ನು ಬೀರುತ್ತಲಿತ್ತು!

ಹೃದಯಂಗಮವಾದ ಸರ್ವತ್ರ ಶಾಂತತೆಯನ್ನು ತಳೆದಿದ್ದ ಮತ್ತು ನಿಶ್ಶಬ್ದಮಯವಾದ ಆ ರಜನಿಯು ಗಂಭೀರವಾದ ಸಾರ್ವಭೌಮತ್ವದ ಸಮಾರಂಭಸಮಯದಲ್ಲಿ ಸಾಲುಸಾಲಾಗಿ ಹಬ್ಬಿದ್ದ ಪರ್ವತಶ್ರೇಣಿಯು ದುರ್ಗಮವಾದ ಆ ಕಣಿವೆಯಲ್ಲಿ ದಟ್ಟವಾಗಿ ಬೆಳೆದಿದ್ದ ಮರಗಳ ಆ ಗುಂಪಿನಲ್ಲಿ ಏಕಾಂಗಿಯಾದ ಒಂದು ವ್ಯಕ್ತಿಯು ಸಂಚರಿಸುತ್ತಲಿತ್ತು !! ಕತ್ತಲೆಯು ಹೆಚ್ಚುಹೆಚ್ಚಾಗುತ್ತಿದ್ದರೂ, ಈ ವ್ಯಕ್ತಿಯೇನೋ ಭಯಗೊಂಡಂತೆ ತೋರುತ್ತಿರಲಿಲ್ಲ. ಸಮೀಪದ ಮರಗಳ ಮರೆಯಲ್ಲಿ ಬೇರೊಂದು ವ್ಯಕ್ತಿಯು ಈ ವ್ಯಕ್ತಿಯನ್ನೇ ಅನುಸರಿಸಿಕೊಂಡು ಬರುತ್ತಿದ್ದಂತೆ ಬೋಧೆಯಾಗುತ್ತಿತ್ತು. ಆ ಕತ್ತಲೆಯಲ್ಲಿ ಅಂತಹ ಘೋರಾಟವಿಯ ಮಧ್ಯದಲ್ಲಿ ನಿರ್ಭಯವಾಗಿ ಒಂದನ್ನೊಂದೆಡೆಬಿಡದೆ ಸಂಚರಿಸುತ್ತಿರುವ ಈ ವ್ಯಕ್ತಿಗಳನ್ನು ನೋಡಿದರೆ ಭೂತಪ್ರೇತಗಳೆನ್ನುವುದರಲ್ಲಿ ಅತಿಶಯೋಕ್ತಿಯೇನು ? ಒಂದು ವೇಳೆ ಭೂತಗಳಲ್ಲದಿದ್ದರೆ ಅತಿ ಧೈರ್ಯಶಾಲಿಗಳಾದರೂ ಇರಬಹುದೆಂದು ಹೇಳೋಣವೇ ? ಅದೆಲ್ಲಿಯ ಮಾತು ! ಎಂತಹ ಧೈರ್ಯಶಾಲಿಯಾದರೂ ಅತಿ ದುರ್ಗಮವಾದ ಆ ಕಾಡಿನಲ್ಲಿ ಅಂತಹ ಕಾಲದಲ್ಲಿ ಏಕಾಂಗಿಯಾಗಿ ತಿರುಗುವುದು ಅಸಂಭವವಲ್ಲವೆ ? ಆದುದರಿಂದ ಭೂತಗಳ ಚೇಷ್ಟೆಯೇ ಎಂದೇಕೆ ಹೇಳಬಾರದು ? ಹಾಗೆಂದರೆ ನೂತನ ನಾಗರೀಕತೆಯು ನಗಲಾರದೆ ! ಭೂತಗಳ ಚೇಷ್ಟೆಯೂ ಅಲ್ಲ, ಎಂತಹ ಧೈರ್ಯಶಾಲಿಗಳಾದರೂ ಈ ರೀತಿ ಸಂಚರಿಸುವ ಸಂಭವವೂ ಇಲ್ಲ. ಅಂದಮೇಲೆ ಹುಚ್ಚರಿರಬಹುದೆ ? ಹುಚ್ಚರೇ ಆಗಿದ್ದರೆ ಈ ರೀತಿಯಲ್ಲಿ ಅನುಸರಿಸಿಕೊಂಡೇ ಬರುತ್ತಿದ್ದುದು ಆಶ್ಚರ್ಯಕರವಲ್ಲವೆ ? ಅಥವಾ ಒಂದು ವ್ಯಕ್ತಿಯು ಹುಚ್ಚನಿದ್ದು, ಇನ್ನೊಂದು ವ್ಯಕ್ತಿಯು ಅವನನ್ನು ಹಿಡಿಯಲೆತ್ನಿಸಿ ಬರುತ್ತಿರಬಹುದೆ ? ಹೇಗಾದರೂ ಇರಲಿ, ನಾವೇನೋ ಇವನನ್ನು ಹುಚ್ಚನೆಂದೇ ಕರೆಯುತ್ತೇವೆ.

ಹೋಗಹೋಗುತ್ತ ಹುಚ್ಚನು ಆ ದಾರಿಯನ್ನು ಸಹಾ ಬಿಟ್ಟು ಮರಗಳ ಗುಂಪಿನಲ್ಲಿ ನುಗ್ಗಿದನು ! ಹಾಗೆಯೇ ಕುಣಿಯಲಾರಂಭಿಸಿದನು ! ! ಕುಣಿಕುಣಿಯುತ್ತ ಹೋಗಿ ಒಂದು ಇಕ್ಕಟ್ಟಾದ ಸ್ಥಳವನ್ನು ಸೇರಿದನು ! ಅಲ್ಲೊಂದು ಮರದ ಕೆಳಗೆ ಕುಳಿತುಕೊಂಡು ನಗಲಾರಂಭಿಸಿದನು ! ನಗುತ್ತಿದ್ದವನು ಹಾಗೆಯೇ ಮಲಗಿಯೇ ಬಿಟ್ಟನು.

ಇವನನ್ನೇ ಅನುಸರಿಸಿಕೊಂಡು ಬರುತ್ತಿದ್ದ ವ್ಯಕ್ತಿಯು, ಈ ಆಟಗಳನ್ನೆಲ್ಲ ನೋಡಿ,— ಇವನಿಗೇನೊ ಹುಚ್ಚು ತಲೆಗೇರಿದಂತಿದೆ ಎಂದೆಂದುಕೊಂಡು ಮಾಯವಾದನು .

ಸ್ವಲ್ಪ ಹೊತ್ತಿನಲ್ಲಿಯೇ ಹುಚ್ಚನು ಎದ್ದನು. ಎದ್ದವನು, ಮರಗಳ ಸಂದುಗಳಲ್ಲಿ ಅತಿಜಾಗ್ರತೆಯಾಗಿ ಓಡಲಾರಂಭಿಸಿದನು. ಹುಚ್ಚನ ಲಕ್ಷಣವು ವಿಶಿಮೀರಿದಂತಿದೆ. ಆದರೆ ಮಾಡುವುದೇನು ? ಅವನೇನೋ ಓಡುತ್ತಲೇ ಇದಾನೆ ; ಕೈಗೆ ಬೇರೆ ಸಿಗುವ ಸಂಭವವು ತೋರ ವುದಿಲ್ಲ ಓಡುತ್ತಿದ್ದ ಹುಚ್ಚನು ಹಠಾತ್ತಾಗಿ ನಿಂತುಬಿಟ್ಟನು ನಿಧಾನವಾಗಿಯೂ ನಿಶಬ್ದವಾಗಿಯೂ, ಮುಂದುವರಿದು, ಸಮೀಪದಲ್ಲಿ ಮರಗಳ ಮರೆಯಲ್ಲಿ ಮಾತನಾಡುತ್ತಿದ್ದ ಕೆಲವು ಜನರನ್ನು ಕಂಡನು ಅವರಲ್ಲೊಬ್ಬನು— ಆ ಸೂಳೆಮಗನೇನಾದನೋ ? ಎಂದನ್ನುವಷ್ಟರಲ್ಲಿಯೇ, ಓಡಿಬರುತ್ತಿದ್ದವನೊಬ್ಬನು ಇವರನ್ನು ಸಮೀಪಿಸಿ,— ಇವನು ಅವನಲ್ಲ. ಯಾವನೋ ಒಬ್ಬ ಹುಚ್ಚ ಡಿಕ ! ಇವನೊಂದಿಗೆ ಅನ್ಯಾಯವಾಗಿ ಕಾಡೆಲ್ಲೆಲ್ಲ ಅಲೆದಾಡಿದ್ದಾಯಿತು ! ಎಂದು ಹೇಳಿದನು.

ಇನ್ನೊಬ್ಬ— ಅಯ್ಯೋ, ಬೆಪ್ಪ ನನ್ನ ಮಗನೇ ! ಹಾಕದ ! ನಿನಗೆ ಗಳೀ ಹಾಕದ ! ಆ ಸೂಳೇಮಗನು ತಾಯಿಗಂಡನೆಂದು ನಾನು ನಿನಗೆ ಮೊದಲೇ ಹೇಳಿರಲಿಲ್ಲವೇ ? ಇದೇಯೊ ನಿನ್ನ ಬುದ್ಧಿ ?

ಬೇರೊಬ್ಬ— ಬೋ ! ಈಗಲೆ ಹೋಗಿ ತಿರ್ಗ ನೋಡೊ ! ಅವನೇನಾದರೂ ಸಿಕ್ಕಿದರೆ, ಅವನು ಹುಚ್ಚನಾದರೂ ಆಗಲಿ, ಯಾರಾದರೂ ಆಗಲಿ, ಮಿಸಿಕಾಡದಂತೆ ಫೈಸಲ್ ಮಾಡಿಬಿಡು. ಅವನ ಕೈಗೆ ನೀನೆಲ್ಲಾದರೂ ಸಿಕ್ಕಿಯೆ ! ಜೋಕೆ ! ಎಂದು ಹೇಳಿ ಕಳುಹಿಸಿದನು.

ಈ ಮಾತುಗಳನ್ನು ಕೇಳುತ್ತಿದ್ದ ಹುಚ್ಚನು ಸ್ವಲ್ಪ ಹಿಂಜರಿದು, ದಟ್ಟವಾಗಿ ಬೆಳೆದಿದ್ದ ಗಿಡಗಳ ಪಕ್ಕದಲ್ಲಿ ಮಲಗಿಕೊಂಡನು. ಹುಚ್ಚನನ್ನು ಪುನಃ ಹುಡುಕುವುದಕ್ಕೋಸ್ಕರ ಹೋಗುತ್ತಿದ್ದವನು, ಅದೇಮಾರ್ಗದಲ್ಲಿ ಬರುತ್ತಲಿರಲು, ಒಂದೆರಡು ಹೆಜ್ಜೆ ಮುಂದುವರಿಯುವುದರಲ್ಲಿಯೆ, ಹುಚ್ಚನು ಹಾರಿ, ಬಲವಾದ ಹಿಡಿತದಿಂದ ಅವನು ಅಲ್ಲಾಡಲವಕಾಶವಿಲ್ಲದಂತೆ ಹಿಡಿದು ಕೆಡವಿಕೊಂಡನು. ಅವನಲ್ಲಿದ್ದ ಆಯುಧಗಳನ್ನು ಕಿತ್ತು

ಕೊಂಡು ಅವನ ಕೈಕಾಲುಗಳನ್ನು ಕಟ್ಟಿ ಮರಗಳ ಮರೆಯಲ್ಲಿ ಮಾತನಾಡುತ್ತ ಕುಳಿತಿದ್ದವರನ್ನು ಹಿಡಿಯಲು ಹೊರಟನು. ಹೋಗಿ ನೋಡುವಲ್ಲಿ ಅಲ್ಲ್ಯಾರೂ ಇರಲಿಲ್ಲ! ಸ್ವಲ್ಪಕಾಲ ಅಲ್ಲಲ್ಲಿ ಹುಡುಕಿ, ಪುನಃ ತಾನು ಮೊದಲೊಬ್ಬನನ್ನು ಕಟ್ಟಿಹಾಕಿದ ಸ್ಥಳಕ್ಕೆ ಬಂದು ನೋಡಿದನು. ಅಲ್ಲಿ ಅವನೂ ಇರಲಿಲ್ಲ!! ಸ್ಥಳ ವ್ಯತ್ಯಾಸವೇನಾದರೂ ಆಗಿರಬಹುದೆಂದಾಲೋಚಿಸಿ ಆ ಕಡೆಯಲ್ಲೇ ಹುಡುಕುತ್ತಿರಲು, ಮರಗಳ ಸಂದಿನಲ್ಲಿ ಒಬ್ಬನು ಓಡಿ ಹೋಗುತ್ತಿದ್ದುದನ್ನು ಕಂಡು ತಾನೂ ಆ ಕಡೆಯೇ ಓಡಲಾರಂಭಿಸಿದನು. ಇಬ್ಬರೂ ಈ ರೀತಿಯಲ್ಲಿ ಓಡುತ್ತ ಕಾಡಿನ ಮಧ್ಯದಲ್ಲಿದ್ದೊಂದು ಜಲಾಶಯವನ್ನು ಸಮೀಪಿಸಿದರು. ಮುಂದುಗಡೆಯಲ್ಲೋಡುತ್ತಿದ್ದವನು ಕಾಣಿಸದಂತಾದನು! ಕೂಡಲೆ "ಧಡೀರ್" ಎಂಬ ಶಬ್ದವು ಕೇಳಬಂದಿತು! "ಮುಂದೆ ಹೋಗುತ್ತಿದ್ದವನು ನೀರಿನಲ್ಲಿ ಬಿದ್ದುಬಿಟ್ಟನು. ಆವರೀತಿಯಲ್ಲಾದರೂ ಅವನನ್ನು ಹಿಡಿಯಲೇಬೇಕು" ಎಂದೆಂದುಕೊಂಡು ಹುಚ್ಚನು ಕೆರೆಯ ಸಮೀಪಕ್ಕೆ ಬಂದು, "ಅವನು ಬಂದು ತಡವೆ ಮೇಲಕ್ಕೆದ್ದುದನ್ನು ಕಂಡ ಕೂಡಲೆ ಹಿಡಿಯಬೇಕು." ಎಂದು ಆಲೋಚಿಸಿಕೊಂಡು, ಈಜುವುದಕ್ಕೆ ಸಿದ್ಧನಾಗಿ ನೀರಿನಲ್ಲಿ ಸ್ವಲ್ಪ ದೂರ ಇಳಿದು, ನೀರಿನ ಕಡೆಯೇ ನೋಡುತ್ತಾ ನಿಂತಿದ್ದನು. ಸ್ವಲ್ಪ ದೂರದಲ್ಲಿ "ಅಯ್ಯೋ! ಹುಚ್ಚ!! ನಿನ್ನಂತಹ ಜಾಣಹುಚ್ಚರಿಗೆ ಔಷಧವು ನಮ್ಮಲ್ಲಿಲ್ಲದಿದ್ದರೆ ಪ್ರೇಮಚಂದ್ರನ ಶಿಷ್ಯರಾಗುತ್ತಿದ್ದೆವೇ? ನಿನ್ನ ಹುಚ್ಚಿನ ಪರಿಣಾಮವು ಈ ದುರ್ಮರಣದಲ್ಲಿ ಪರಿಯವಸಾನವಾಗಬೇಕೆ! ಹುಚ್ಚಾ! ನೀಸಾಯಿ!" ಎಂದು ಹೇಳುತ್ತ ಆರೋ ಬಂದೂಕನ್ನು ಹಾರಿಸಿದರು. ಬಂದೂಕದ "ಢಂ" ಎಂಬ ಶಬ್ದವನ್ನೂ, ಹುಚ್ಚನು ನೀರಿನಲ್ಲಿ ಬಿದ್ದುದರಿಂದುಂಟಾದ "ಧಡೀರ್" ಎಂಬ ಶಬ್ದವು ಅನುಸರಿಸಿತು.

ಹುಚ್ಚನು ನೀರಿನಲ್ಲಿ ಬಿದ್ದುದರಿಂದುಂಟಾದ ಶಬ್ದವನ್ನು ಕೇಳಿದ ಕೂಡಲೆ "ಬಿದ್ದ ಸೂಳೆಮಗ" ಎಂದು ಹೇಳುತ್ತ ನಾಲ್ಕು ಜನರೋಡಿ ಬಂದರು. ಅಲ್ಲಲ್ಲಿ ಹುಡುಕಿ, "ಗುಂಡಿನೇಟಿನಿಂದುಂಟಾದ ಸಂಕಟದಿಂದ ಒದ್ದಾಡುತ್ತಿದ್ದ ಈ ತಾಯಿಗ್ಗಂಡನ ಶವವು ಕೆಳಗೆ ಬದಿಯಲ್ಲೆಲ್ಲೋ ಸೇರಿಕೊಂಡಿರಬಹುದು" ಎಂದೆಂದುಕೊಂಡು ತಮ್ಮ ಬಟ್ಟೆ ಬರೆಗಳನ್ನು

ತೆಗೆದಿಟ್ಟು, ನೀರಿನಲ್ಲಿ ಮುಳುಮುಳುಗಿ ಹುಡ್ಕನನ್ನು ಹುಡುಕುತ್ತಿದ್ದರು. ನೀರಿನ ಸುತ್ತಲೂ ಜೊಂಡು ಬಹಳ ದಟ್ಟವಾಗಿ ಬೆಳೆದಿದ್ದುದರಿಂದ, ಅದರ ಮಧ್ಯದಲ್ಲಿ ಅವಿತುಕೊಂಡು ಇವರ [illegible]ಗಳನ್ನೇ ನೋಡುತ್ತಿದ್ದ ಹು[illegible]ನನ್ನು ಆ ಜನರು ಕಾಣಲಿಲ್ಲ! ಈ ಹು[illegible]ನು ಈಜುವುದರಲ್ಲಿ [illegible] ಆದುದರಿಂದಲೇ [illegible] ಕೋಲಿನ ಶಬ್ದವನ್ನು ಕೇಳಿದ ಕೂಡಲೆ ನೀರಿನಲ್ಲಿ [illegible] ಒಳಗೇ ಈಜುತ್ತ ಹೋಗಿ, ಆ ಹುಲ್ಲಿನ ಮಧ್ಯದಲ್ಲಿ [illegible] ನಿರೀಕ್ಷಣೆಯುಳ್ಳವು, ಆ ಮೋಸಗಾರರು ಅನ್ನನ್ನು [illegible] ಆಸಕ್ತರಾಗಿದ್ದು, [illegible] ಎತ್ತಿಕೊಂಡು ಹೋದವನು. ತನ್ನ [illegible] ಉಡುವನ್ನು ಧರಿಸಿ [illegible] ಮರಗಳ [illegible].

ನೀರಿನಲ್ಲಿ ಬಹಳ ಹೊತ್ತು ಹುಡುಕಿ ಬೇಸರವಾಯ್ತು, "ಏನೂ ಸಿಕ್ಕಲಿಲ್ಲಪ್ಪ! ಸತ್ತನೇನೋ ಇಲ್ಲವೋ [illegible]! [illegible] ತಾಯಿ ಗಂಡ" ಎಂದು [illegible], "ಸತ್ತಿದ್ದರೆ ಈಗಲಾದರೂ [illegible]ದರೂ, ಹೆಣ ತೇಲಿಯೇ ತೇಲುತ್ತೆ, ನಡೆಯಿರೋ!" ಎಂದು ಹೇಳುತ್ತ ನೀರಿನಿಂದೀಚೆಗೆ ಬಂದರು. ಅವನಿಟ್ಟಿದ್ದ ಬಟ್ಟೆ ಬರೆಗಳಾವುವೂ ಇರಲಿಲ್ಲ! ವಿಸ್ಮಯಾವಿಷ್ಟರಾಗಿ, "ಆ [illegible]! ನಾವಿನ್ನು ಇಲ್ಲಿರುವುದು ಸರಿಯಲ್ಲ!!" ಎಂದು [illegible] ಪ್ರಾರಂಭಿಸಿದರು.

[illegible]ಗಿ [illegible], ಅವನು ಓಡಿಹೋಗಿ [illegible]ವನ್ನು ಕಂಡು, ಅದರನ್ನು [illegible]. [illegible] ದೂರ ಹೋಗಿ, ಆ ಮೋಸಗಾರರು [illegible]ಯನ್ನು ಹೊಕ್ಕರು. ಅವರಲ್ಲೊಬ್ಬನು, "ನೋಡಿದಿರೋ! [illegible] ಬಡ [illegible] ಕಾಡ [illegible] ಸೀರೆಯಾದನ್ನು ತಂದೆ!" ಅನ್ನುತ್ತಿದ್ದಾಗ, "ಲೋ, [illegible]! ನಾವು ನಾಲ್ಕು ಜನರಿದ್ದರೂ, ನನ್ನನ್ನು [illegible] ಬಟ್ಟೆ

ಗಳನ್ನೆಲ್ಲಾ ಹೊತ್ತುಕೊಂಡು ಹೋಗಿರುವನಲ್ಲ ! ಆ ನನ್ನ ಮಗ ದೆವ್ವನೇ ಆಗಿರಬೇಕು "

ಬೇರೊಬ್ಬ :— " ಅದಕ್ಕೇ ಕಣೋ ಭುಜಂಗ ಇವನು ಸಾಮಾನ್ಯದವನಲ್ಲವೆಂತ ಹೇಳುತ್ತಾ ಇರೋದು ! " ಎಂದು ಹೇಳಿ ಮುಂದೆ ಸಾಗುವಷ್ಟರಲ್ಲಿಯೇ ಇನ್ನೊಬ್ಬನು, " ಓಹೋ ! ಅದೆಲ್ಲ ಇರಲಿ; ಈವಾಗ ಬಟ್ಟೆಗೇನು ಮಾಡೋಣ ? ಬಟ್ಟೆನೆಲ್ಲಾ ಹೊತ್ತುಕೊಂಡು ಹೋಗಿದ್ದಾನೆ ! ' ಎಂದನ್ನುವಷ್ಟರಲ್ಲಿಯೇ, " ನನ್ನೊಂದಿಗೆ ಬಂದರೆ ನಿಮ್ಮ ಬಟ್ಟೆಗಳನ್ನು ಕೊಡುತ್ತೇನೆ " ಎಂದು ಹೇಳುತ್ತ ಹುಚ್ಚನು ಒಳಗೆ ನುಗ್ಗಿದನು. ತಕ್ಷಣದಲ್ಲಿಯೇ ಅವರೆಲ್ಲರು ಓಡಿಹೋಗಲು ಪ್ರಯತ್ನಿಸುತ್ತಿದ್ದುದನ್ನು ಕಂಡು, " ಅಲುಗಾಡಿದರೆ ಮರಣವು ತಪ್ಪಲಾರದು. ನಿಷ್ಕರುಣದಿಂದ ಕೊಂದು ಬಿಡುವೆನು. " ಎಂದು ಹುಚ್ಚನು ಘರ್ಜಿಸಿದನು. ಎಲ್ಲರೂ ನಿರುಪಾಯರಾದರು. ಹುಚ್ಚನು ಅವರೆಲ್ಲರನ್ನು ಕಟ್ಟಿಹಾಕಿ, ಅಲ್ಲಿದ್ದ ಕೋಣೆಗಳನ್ನು ಪರೀಕ್ಷಿಸಲು ಹೋದನು. ಏನೂ ಸಿಗಲಿಲ್ಲ. ಮನೆಯೆಲ್ಲವನ್ನು ಹುಡುಕಿ " ಇಲ್ಲಿನ್ನೇನು ತಾನೆ ಇದ್ದೀತು ? " ಎಂದಂದುಕೊಳ್ಳುತ್ತ, ತಾನು ಬಂದಿಗಳನ್ನಿರಿಸಿದ್ದ ಸ್ಥಳಕ್ಕೆ ಬಂದು ನೋಡಲು, ಹುಚ್ಚನನ್ನು ಆಶ್ಚರ್ಯ ಪಿಶಾಚವು ಹಿಡಿದಲ್ಲಾಡಿಸಲಾರಂಭಿಸಿತು ! ಅಲ್ಲಿಂದ ಬಂಧಿಸಲ್ಪಟ್ಟವನಾವನೂ ಇಲ್ಲ ! ಹಿಂದಿದು ಕಟ್ಟಿ ಒಳಗೆ ಹೋಗಿ ನೋಡಿಕೊಂಡುಬರುವಷ್ಟು ಅಲ್ಪ ಕಾಲದಲ್ಲಿಯೇ ಬಂದಿಗಳು ಮಾಯವಾಗಿರುವುದನ್ನು ನೋಡಿದರೆ ಆಶ್ಚರ್ಯಪಡದವರಾರು ? " ನಾನು ಎಷ್ಟು ಬಲವಾಗಿ ಕಟ್ಟಿದ್ದರೂ ಕೂಡ ತಪ್ಪಿಸಿಕೊಂಡು ಹೋಗಿರುವರಲ್ಲ ! ಇದೇನು ಇಂದ್ರಜಾಲವೋ ! ಸ್ವಪ್ನವೋ ! ಮಾಯವೋ ! ಇಷ್ಟೆಷ್ಟು ತಡವೆ ನನ್ನನ್ನು ಈ ರೀತಿ ವಂಚಿಸಿ ತಪ್ಪಿಸಿಕೊಂಡು ಹೋಗಬಲ್ಲಿರಿ ? ನನ್ನ ನಿಮ್ಮ ಬಲಾಬಲಗಳು ಒಂದಲ್ಲದಿದ್ದರಿನ್ನೊಂದು ವೇಳೆಯಲ್ಲಾದರೂ ಹೊರಬೀಳಲಾರವೆ ? " ಎಂದಂದುಕೊಳ್ಳುತ್ತ ಹುಚ್ಚನು ಅಲ್ಲಿಂದ ಹೊರಟನು. ಈ ಹುಚ್ಚನೇ ನಮ್ಮ ಧೀರ ಪತ್ತೇದಾರನಾದ ಕಾಳೀಚರಣ !

ಸಪ್ತಮ ಗುಚ್ಛ.

ತಾ ಶ್ವರು ಬರೆದಿದ್ದ ಕಾಗದವನ್ನೋದಿ ತಾಂಡೋಜಿ ರಾಯರು ಈ ವಿಧವಾಗಿ ಆಲೋಚಿಸಲಾರಂಭಿಸಿದರು :—"ಶಂಭುದತ್ತನು ಮೊದಲು ಮಾವಳಿಗಳಿಗೆ ವಿಷಪ್ರಯೋಗವನ್ನು ಮಾಡಿರುತ್ತಾನೆ. ಆದನ್ನಾವ ವಿಧದಲ್ಲಾದರೂ ಮರೆಮಾಚಬೇಕೆಂದು ಶಂಭುದತ್ತನು ಈ ಸಂಧ್ಯುಟನೆಯನ್ನು ಕಲ್ಪಿಸಿರಬಹುದು. ಆದೋ ಸುಗ ಇಷ್ಟು ವಿಘಾತವನ್ನುಂಟು ಮಾಡಬಹುದೆಂದು [illegible] ಸಮಯವನ್ನು ಸಿದ್ಧಪಡಿಸಿಕೊಂಡಿದ್ದ ಆ ಸಮಯದಲ್ಲಿ [illegible] ಸ್ವಾಗತವನ್ನು ಪ್ರವೇಶಿಸಿ ಪುನಃ [illegible] ಕಲ್ಪಿಸಿ [illegible] ದೂರೀಕರಿಸಬೇಕೆಂದು ಆಲೋಚಿಸಿ ಶಂಭುದತ್ತನು [illegible]. ಸರಿ! ಆ ಕೋಣೆಯಲ್ಲಿ [illegible], ಸೌಕರ್ಯವು ಕಾವಲುಗಾರರಿಲ್ಲ [illegible], ಆ [illegible] ಬಂದು ಬಿಟ್ಟನೋ ಇರ [illegible], [illegible] ಸೂಚಿಸುವ ಅಭಿಪ್ರಾಯವು ಈಗ ನಿಜವೆಂದು [illegible] ಆಹಾ! ಅನನುದೇಂತವಮೋಘಾಚಕ್ತ!! [illegible] ಅವನು ಪ್ರವೇಶಿಸಿದಾಗಲೇ ಕೃತಕಾರ್ಯನಾಗದೇ ಹಿಂದಿರುಗಿದನೋ [illegible]" ಎಂದು ಮೊದಲಾಗಿ ಆಲೋಚಿಸಿ, "ಕಾವಲುಗಾರನು [illegible] ಅಲ್ಲವಲ್ಲ! ಇದೇತಕ್ಕಿರಬಹುದು? ಅವನೇನು ಮಾಡುತ್ತಿರುವನು! ಎಲ್ಲಿರುವನು! ಎಂಬಂಶವನ್ನು ಗುರುತಿಸಲೂ ಕೂಡ ಸಾಧ್ಯವಿಲ್ಲವಲ್ಲ!" ಎಂದು ಆಲೋಚಿಸುತ್ತಿರುವಷ್ಟರಲ್ಲಿಯೇ ಕಾವಲುಗಾರನು ಅಲ್ಲಿಗೆ ಬಂದನು.

ಜ್ಞಾನೇಶ್ವರು :—"ಮಹಾರಾಯರೇ, ಇದೇನಿಷ್ಟು ಅವಸರ? ಸರ್ಪ ಕಚ್ಚಿದವನಂತೆ ಏನೋ ಅವಸರದಿಂದ ಬಂದಿರುವುದು? ನಿಮ್ಮ ಮೋಹಕ್ಕೆ ಅಪರಾಧವೂ ಸಿಲ್ಕುವ ಧಗವನಿಯೂ ಇರುವಂತೆ ತೋರುತ್ತಿದೆ! ಏನು?

ರೋ? ಎಂದು ಕಾಳೀಚರಣನನ್ನು ಪ್ರಶ್ನಿಸಲು, ಕಾಳೀಚರಣನು ಅಪರಾಧಿ ಯಾರು? ತಮಗೇನಾದರೂ ಸೂಚನೆ, ಗುರುತುಗಳು ಗೊತ್ತಾಗಿರುವವೇನು? ಎಂದಂದನು.

ಇನ್:—"ನನಗೆ ಮತ್ತಿನ್ನಾವ ಸೂಚನೆಯೂ ತಿಳಿದು ಬಂದಿಲ್ಲ. ಏನಿದ್ದರೂ ಈ ಕೇಸಿನ ಪರಿಣಾಮವು ನಿಮ್ಮಿಂದ ಆಗಬೇಕಲ್ಲದೆ ಅನ್ಯಥಾ ಕಾಣುವುದಿಲ್ಲ. ಏವಂಚ ನನಗೀಸೋ ಶಂಭುದತ್ತನ ಮೇಲೆ ಸಂಪೂರ್ಣ ಸಂದೇಹವೇ!

ಕಾಳೀ:—"ಹೇಗಾದರೂ ಇರಲಿ, ನಾನು ಮಾಡುವ ಪ್ರಯತ್ನವನ್ನು ಮಾಡಿ ನೋಡಿದಲ್ಲದೆ ಆರಮೇಲೂ ಅನುಮಾನಕರವಾಗಿ ತಪ್ಪನ್ನು ಹೊರಿಸಲಾರೆನು. ಎಂದು ಹೇಳಿ, ತಾನು ಇದುವರಿವಿಗೂ ನಡೆಸಿದ್ದುದೆಲ್ಲವನ್ನೂ ತಿಳುಹಿಸಿದನು. ಇನ್ಸ್ಪೆಕ್ಟರು ಸಂಗತಿಗಳನ್ನು ತಿಳಿದು ಪರಮಾಶ್ಚರ್ಯಭರಿತರಾದರಲ್ಲದೆ "ಏನು ಪತ್ತೇದಾರರೆ! ಕೇಸಿನ ಸ್ಥಿತಿಯು ಹೀಗೆ ತಿರುಗಿತು! ನೋಡಿದಿರ, ಬಹುಚಮತ್ಕಾರ! ಅಹಹ!! ಪರಮಾಶ್ಚರ್ಯಕರವಾದ ಈ ಸಂಗತಿಗಳ ನಿಜಸ್ಥಿತಿಯೆಂತಿರುವುದು! ಅಪರಾಧಿಯಾರು? ನಾವು ತಪ್ಪಿಗೆ ಗುರಿಮಾಡಿದುದಾರನ್ನು; ತುಚ್ಛವಾದ, ಅಸ್ಥಿರವಾದ ಈ ಸ್ತ್ರೀವ್ಯಾಮೋಹವು ಇಂತಹ ಭಯಂಕರವ್ಯಾಪಾರದಲ್ಲಿ ಪರಿಣಮಿಸಬಹುದೇ? ಕಾಲಗತಿ! ಕೇವಲ! ಅಶಕ್ತರಾದ ಈ ಮನುಜಮಾತ್ರದವರೇ ಇಂತಹ ಕಾರ್ಯಗಳಲ್ಲಿ ಈರೀತಿಯ ಕಪಟತಂತ್ರಗಳನ್ನು ಹರಡಿ ಹಲವರನ್ನು ಹಿಂಸೆಗೆ ಒಳಗಾಗಿಸಲು ಸಮರ್ಥರಾಗಿರುವರೆಂದಮೇಲೆ ಕಾಲಗತಿಯ ವಿಚಿತ್ರವ್ಯಾಪಾರದ ಸಾಮರ್ಥ್ಯವೇನು ಸಾಮಾನ್ಯವೇ? ಕೇವಲ ಅವರ್ಣನೀಯ! ಎಲ್ಲವೂ ಭಗವದಧೀನ!! ಆರೇನು ತಾನೆ ಮಾಡಲಾಪರು? ಮಹಾಶಯರೇ ಹೆಚ್ಚಿಗೆ ಹೇಳುವುದೇನು? ಮುಖ್ಯವಾಗಿ ತಮ್ಮ ಶಕ್ತಿಯೂ ಸಾಹಸವೂ. ಚಟುವಟಿಕೆಯೂ, ಅಸಾಧಾರಣವಾದವುಗಳು! ಇಂತಹ ಅತಿಶಯವಾದ ನಿಮ್ಮ ಸಾಹಸದಿಂದಲೇ ಈಗೀಗ ಅಪರಾಧಿಯಾರೆಂಬುದನ್ನು ಸರಿಯಾಗಿ ಯೋಚಿಸಿ ನೋಡಬಹುದಾದ ಸಂದರ್ಭಗಳೊದಗಿರುವುವು. ಇನ್ನು ಮುಂದಿನ ಮಾರ್ಗವೇನು? ಎಂದು ಕೇಳಲು, ಕಾಳೀಚರಣನು, "ಹೇಳುವೆನು-ಸದ್ಯಕ್ಕೆ ದೇವೇಶನಿಂದ ತಿಳಿಯಬೇಕಾದ ಅಂಶಗಳು ಕೆಲವಿವು

ವುದರಿಂದ ಅಲ್ಲಿಗೆ ಹೋಗಿ ಬರೋಣ" ಎಂದು ಹೇಳಿ ದೇವೇಶನ ಮನೆಗೆ ಹೊರಟನು. ಇನ್ಸ್ಪೆಕ್ಟ್ರರೂ ಅವನೊಂದಿಗೆ ಹೋದರು.

ಕಾಳೀಚರಣನೊಡನೆ ಇನ್ಸ್ಪೆಕ್ಟರು ಬಂದುದನ್ನು ನೋಡಿ ದೇವೇಶನು ಬಹಳ ಭಯಗೊಂಡನು. ಕಾಳೀಚರಣನು, "ಸ್ವಾಮೀ! ತಾವು [illegible] ತಾವು ನನಗೆ ತಿಳಿಸಿದ ಸಮಾಚಾರಗಳಿಂದ ನನಗೆ ಬಹಳ ಮಟ್ಟಿಗೆ ಸಹಾಯವಾಯಿತು. ಪುನಃ ತಮಗೆ ಶ್ರಮಕೊಡು ವುದಕ್ಕಾಗಿ ಕ್ಷಮಿಸಬೇಕು. ಪ್ರೇಮಚಂದ್ರ ಮತ್ತು ಭುಜಂಗರಾಯ ಇವರಿಬ್ಬರ ಪರಿಚಯ [illegible] ಸ್ವಲ್ಪ ತಿಳಿಯಬೇಕಾಗಿದೆ." ಎಂದು ಹೇಳಲು, ದೇವೇಶನು "[illegible]" ಎಂದೆಂದನು.

ಕಾಳೀಚರಣ:— [illegible] ಹೇಳುವಂತೆ ಈ ರಘುನಾಥನು ವಿಲಾಸಿನಿ ಯನ್ನು [illegible] ಹೇಳುತ್ತಿದ್ದರೂ, ವಿಲಾಸಿನಿಯು ತನ್ನನ್ನು ಪ್ರೀತಿಸುತ್ತಿದ್ದರೂ, ಪ್ರೇಮಚಂದ್ರನು ಈ [illegible]ಯಲ್ಲಿ ಸಂಬಂಧಿಸಿದವನೇ?

ದೇವೇಶ:— "[illegible] ಪ್ರಾಮಾಣಿಕನಾದುದು! ಆದರೂ ಪ್ರೇಮಚಂದ್ರನು ವಿಲಾಸಿನಿಗಾಗಿ ಮನುಷ್ಯನನ್ನು ಕೊಲ್ಲುವಷ್ಟು ನೀಚ ನೆಂದು ನಾನು ಹೇಳಲಾರೆ. ವಿಲಾಸಿನಿಯು ಎಂದಿಗಾದರೂ ಸಮ್ಮ ತಿಸುವಳೇ?"

ಕಾಳೀಚರಣ:—"ವಿಲಾಸಿನಿಗೆ ಏನೊಂದನ್ನೂ ತಿಳಿಸದೆ ಅವಳನ್ನು ಪ್ರೇಮಚಂದ್ರ ರಘುನಾಥನಿಗೆ [illegible] ಹಾಗೆ ಅವಳ ಸಮ್ಮತಪೂರ್ವಕ ವಾಗಿಯೇ [illegible], ಉತ್ತರ ಕ್ಷಣದಲ್ಲಿಯೇ ಈ ಕೆಲಸ ವನ್ನೇಕೆ ಅವನು ನಡೆಸಿರಬಾರದು?"

ದೇವೇಶ:—"ನಾನು ಬಹು ದಿನಗಳಿಂದಲೂ ಆತನ ನಡತೆಯನ್ನು ಬಲ್ಲೆನಾದುದರಿಂದ ಅಂತಹ ನೀಚವಾದ ಕಾರ್ಯದಲ್ಲಿ ಅವನು ಪ್ರವೇಶಿಸ ಲಾರನೆಂದು ಹೇಳಬಲ್ಲೆನೆ ವಿನಾ ಬೇರೊಂದನ್ನೂ ಹೇಳಲಾರೆ."

ಕಾಳೀಚರಣ:—"ಈ ಭುಜಂಗರಾಯನಿಗೂ ಪ್ರೇಮಚಂದ್ರನಿಗೂ ಸಂಬಂಧವೇನಾದರೂ ಇರಬಹುದೆ?"

ದೇವೇಶ:—"ಕಾಣಲಿಲ್ಲ."

ಕಾಳೀ ;— “ ಶಂಭುದತ್ತನಿಗೋ ? ”

ದೇವೇ ;—“ ಇಲ್ಲ ”

ಕಾಳೀ ;— “ ಹಾಗಾದರೆ ಅವನು ಶಂಭುದತ್ತನ ಮನೆಯಲ್ಲಿ ಅಷ್ಟು ಸಲಿಗೆಯಿಂದ ಹೋಗಿರುವನು ? ”

ದೇವೇಶ;—ಅವನು ಆ ವಿಜಯಿನಿಗೆ ಬಂಧುವು ಆದುದರಿಂದಲೇ ಅವನು ಶಂಭುದತ್ತನ ಮನೆಗೆ ಬಂದು ಹೋಗುತ್ತಾ ಇದ್ದನು. ಮತ್ತು ನಾವರೂ ಮಾಡಿ ವಿಜಯಿನಿಯನ್ನು ತಾನು ಮದುವೆ ಮಾಡಿಕೊಂಡರೆ ರಚ್ಚಂದ್ರರ ಆಸ್ತಿಯು ತನಗೆ ಸಿಗುವದೆಂಬ ಆಶೆಯೊಂದು !

ಕಾಳೀ;—ಅವನ ನಡತೆಯ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು ?

ದೇವೇ;— ಆ ವಿಷಯದಲ್ಲಿ ನಾನೇನೂ ಹೇಳಲಾರೆ ! ಜನರಿಗೇನೋ ಅವನ ವಿಷಯದಲ್ಲಿ ಅಷ್ಟು ಒಳ್ಳೆ ಅಭಿಪ್ರಾಯವಿಲ್ಲ ! ಸ್ವಲ್ಪ ದುರ್ಮಾರ್ಗಾವಲಂಬಿಯು !

ಕಾಳೀ;— ಸ್ವಾಮೀ ! ಈಗ ಮೃತರಾಗಿರುವರು ಮಾರ್ವಾಡಿಗಳು ಆದರೆ ಅವರ ಖೂನಿಗೆ ಶಂಭುದತ್ತನು ಸಂಬಂಧಿಸಿರಲಾರನೆಂದು ಹೇಳುವುದಕ್ಕೆ ಸಾಕ್ಷ್ಯಗಳೇನು ?

ದೇವೇ;— ಆತನ ಸದ್ಗುಣಗಳಿಂದಲೂ, ಆತನಿಗೆ ಅವಸ್ಥೆಯಲ್ಲಿಯೂ ದೇವರು ಕಡಿಮೆ ಮಾಡಿಲ್ಲವಾದುದರಿಂದಲೂ, ಆತನು ಇಂತಹ ಕೆಲಸವನ್ನು ಮಾಡಿಸಲಾರನೆಂದು ಹೇಳಬಲ್ಲೆ. ಆ ಮಾರ್ವಾಡಿಗಳನ್ನು ಕೊಲ್ಲುವುದರಿಂದ ಏನಾದರೂ ಆದಾಯವು ಬರುವ ಹಾಗಿದ್ದರೂ ಅವನು ಅಂತಹ ಕೆಲಸವನ್ನು ಮಾಡಿರಬಹುದೆಂದು ಹೇಳುವುದೂ ಬಹಳ ಕಷ್ಟ.

ಕಾಳೀ;— ಆ ಮಾರ್ವಾಡಿಗಳು ವ್ಯಾಪಾರಕ್ಕಾಗಿ ತಂದ ದ್ರವ್ಯವು ಎಲ್ಲಿದ್ದಿತು?

ದೇವೇ;— ಅದು ಶಂಭುದತ್ತನವಶದಲ್ಲಿಯೇ ಇದ್ದಿತು ಆದರೆ ಅದು ಕಳುವಾಗಿರಲಿಲ್ಲ !

ಕಾಳೀ:— ಪೆಟ್ಟಿಗೆಗಳನ್ನೆಲ್ಲಾ ಸರಿಯಾದ ಬೀಗದ ಕೈಗಳಿಂದಲೇ ತೆಗೆದಿರುವರು ! ಕಳ್ಳರೆಲ್ಲರೂ ಹೊರಗಿನವರೆಯೋ ?

ದೇವೇಶನಿಂದ ಪ್ರತ್ಯುತ್ತರವು ಹೊರಡಲಿಲ್ಲ ! ಕಾಳೀಚರಣನ ತೀಕ್ಷ್ಣ ದೃಷ್ಟಿಯು ದೇವೇಶನ ಸರ್ವಾಂಗಗಳನ್ನೂ ಪರಿಶೋಧಿಸಿತು !!

ಕಾಳೀ;—ಸ್ವಾಮೀ, ಒಂದುವೇಳೆ, ಈಗ ಮೃತನಾಗಿರುವವರು ಶಂಭುದತ್ತಾದಿಗಳೇ ಆಗಿದ್ದರೆ ಅವರ ಮರಣದಿಂದ ಅನುಕೂಲ ಪ್ರತಿಕೂಲಗಳಾರಿಗುಂಟಾಗಬಹುದು ?

ದೇವೇ;— ಆತನ ಮರಣದಿಂದ ಆತನ ಮುಖೇನ ವ್ಯಾಪಾರವನ್ನು ನಡಯಿಸುತ್ತಿದ್ದವರಿಗೂ, ಆತನನ್ನೇ ನಂಬಿಕೊಂಡಿದ್ದ ನಮಗೂ, ಸ್ವಲ್ಪ ತೊಂದರೆಯಾಗುತ್ತದೆ ಸ್ವತ್ತೆಲ್ಲವೂ ಆ ಹುಡುಗಿಯರ ಪಾಲಿಗೆ ಹೋಗುತ್ತೆ. ಒಂದುವೇಳೆ, ವಿಜಯಿನಿಯು ಅನಾಥಳಾದುದರಿಂದ ಅವಳ ಬಂಧುವಾದ ಭುಜಂಗನನ್ನು ರಕ್ಷಕನನ್ನಾಗಿ ಮಾಡಿಕೊಂಡರೆ ಶರಚ್ಚಂದ್ರರ ಆಸ್ತಿಯು ಅವನ ಅಧೀನಕ್ಕೆ ಹೋಗುವುದು. ಶಂಭುದತ್ತನ ಆಸ್ತಿಯು ವಿಲಾಸಿನಿಯ ಪಾಲಾಗಿ ತದನಂತರ ಅವಳ ಪತಿಯ ಪಾಲಿಗೆ ಹೋಗುವುದು. ಅಂದರೆ, ವಿಲಾಸಿನಿಯು ಪ್ರೇಮಚಂದ್ರನನ್ನು ಮದುವೆಯಾದರೆ ಅವಳ ಆಸ್ತಿಯೆಲ್ಲವೂ ಅವನ ವಶಕ್ಕೆ ಒಳಗಾಗುವುದು

ಕಾಳೀ;—ಅವರೂ ಮೃತರಾಗಿದ್ದರೆ ?

ದೇವೇ;—ಅವರೂ ಮೃತರಾಗಿದ್ದರೆ, ಶರಚ್ಚಂದ್ರರ ಆಸ್ತಿ ದೌಹಿತ್ರ ಸಂತತಿಯವನಾದ ಭುಜಂಗನು ಬಾಧ್ಯನಾಗುವನು. ಶಂಭುದತ್ತನ ಆಸ್ತಿಗೆ ಇನ್ನಾರೂ ಬಾಧ್ಯರಿಲ್ಲ. ಸಿಕ್ಕಿದವರಪಾಲಾಗಿ ಸರ್ಕಾರಕ್ಕೆ ಸ್ವಲ್ಪ ಸೇರಿಹೋಗಬಹುದು.

ಕಾಳೀಚರಣನು ಸ್ವಲ್ಪಕಾಲ ಆಲೋಚಿಸಿ ವಿಜಯಿನಿ, ವಿಲಾಸಿನಿ ಶಂಭುದತ್ತ ಇವರೆಲ್ಲರೂ ಮೃತರಾಗಿದ್ದರೆ ಭುಜಂಗನಿಗೆ ಸ್ವಲ್ಪ ಆಸ್ತಿ ಸಿಗಬಹುದು. ಶಂಭುದತ್ತ ಗೃಹಕೃತ್ಯಕ್ಕೆ ಅಧಿಕಾರಿಗಳಾದ ತಮಗೂ ಸ್ವಲ್ಪ ಸಿಗಬಹುದಲ್ಲವೇ ? ಎಂದು ಕೇಳಿದನು ದೇವೇಶನು ಚಕಿತನಾದನು ! ಭ್ರಾಂತನಾಗಿ ಕಾಳೀಚರಣನನ್ನೇ ನೋಡುತ್ತಾ ನಿರುತ್ತರನಾಗಿ, ಕುಳಿತುಕೊಂಡು ಬಿಟ್ಟನು !! ಆತನ ಸ್ಥಿತಿಯನ್ನು ನೋಡಿ ಕಾಳೀಚರಣನು ಸಮಾಧಾನ ವಾಕ್ಯಗಳನ್ನು ಹೇಳಿ, ತಾವೇನೂ ಭ

ಪಡಬೇಕಾದುದಿಲ್ಲ! ಸುಮ್ಮನೆ ಹಾಗೆ ಹೇಳಿದೆನು! ಎಂದು ಹೇಳಿ, ಅವರ ಅಪ್ಪಣೆಯನ್ನು ಪಡೆದು ಅಲ್ಲಿಂದ ಹೊರಟನು.

ಇನ್ಸ್‌ಪೆಕ್ಟರು, "ಪತ್ತೇದಾರರ ನಡತೆಯು ನನಗೆ ಮಹದಾಶ್ಚರ್ಯವನ್ನುಂಟುಮಾಡುತ್ತಿರುವುದು. (ಇನ್ಸ್‌ಪೆಕ್ಟರ್ ಸಾಹೇಬರು ಆಶ್ಚರ್ಯಪಡುವುದರಲ್ಲಿ ಬಹು ನಿಪುಣರೆಂದು ತೋರುತ್ತದೆ!) ಮಾಡಬೇಕಾದ ಕೆಲಸಗಳು ಪೂರ್ತಿಯಾಗಿದ್ದರೆ ನನ್ನ ಸರ್ವ ಪ್ರಶ್ನೆಗೆ ಉತ್ತರವು ಬರಬಹುದು" ಎಂದಂದನು.

ಕಾಳೀಚರಣನು ಸ್ವಾಮೀ! ಇದು ಖಳಸಂತತಿ ಹೀಗೆಯೇ ಸರಿ ಎಂದು ಹೇಳಲು ಸಾಧ್ಯವಲ್ಲವಾದರೂ ಪ್ರಕೃತ ಹೀಗೆಯೇ ಊಹಿಸಬಹುದು. ಪ್ರಣಯಪಾಶದಿಂದ ಅನೇಕ ಅನರ್ಥಗಳು ನಡೆಯುತ್ತವೆ. ಪ್ರೇಮಚಂದ್ರನು ಹೇಗಾದರೂ ವಿಲಾಸಿನಿಯನ್ನು ಹೊಂದಬೇಕೆಂದು ಪ್ರಯತ್ನಪಟ್ಟಿರುತ್ತಾನೆ. ಈ ಭುಜಂಗರಾಯನೂ ಕೂಡ ಹೇಗಾದರೂ ಶಂಭುಚಂದ್ರರ ಆಸ್ತಿಗೆ ಅಧಿಕಾರಿಯಾಗಬೇಕೆಂದು ದೃಢಪ್ರತಿಜ್ಞನಾಗಿರುವನು. ಆದುದರಿಂದ ಅವರಿಬ್ಬರೂ ಈ ಕೆಲಸದಲ್ಲಿ ಸಹಕರಿಸಿರಬಹುದು. ಆದರೆ ಅವರು ಶಂಭುದತ್ತಾದಿಗಳನ್ನು ಪ್ರಾಯಶಃ ಕೊಂದಿಲ್ಲ! ಅವರನ್ನು ಮರೆಯಲ್ಲಿರಿಸಿ ಈ ವಿಧವಾದ ಸಮಾಚಾರವನ್ನು ಪ್ರಕಟಿಸಿ, ಇದರಿಂದ ತಮಗೆ ಅನಿಷ್ಟವಾದ ತೊಂದರೆಯು ಒದಗದಂತೆ ಸಿಕ್ಕಿದ ಜನರನ್ನು ಕೊಲ್ಲುವುದೇ ಪ್ರಾಯಶಃ ಅವರ ಉದ್ದೇಶ! ಒಂದುವೇಳೆ ತೊಂದರೆ ಬರುವಹಾಗಾದರೆ ಶಂಭುದತ್ತನನ್ನು ಬಿಟ್ಟು ಅವರ ಪರಿವಾರಾದಿಗಳನ್ನು ಕೊಲ್ಲಿಸಿ ಎಲ್ಲಿಯೋ ತಲೆತಪ್ಪಿಸಿಕೊಂಡಿದ್ದಂತೆ ಪ್ರಚಾರಪಡಿಸಿ, ತಾವು ಬಹು ನಿಸ್ಪೃಹರಂತೆ ನಟಿಸಬೇಕೆಂಬುದೇ ಅವರ ಉದ್ದೇಶ!!

ಆದುದರಿಂದ ನೀವು ಇನ್ನು ಸ್ವಲ್ಪ ಕಾಲ ಈ ಮರ್ಮವನ್ನು ಅರಿಯದವರಂತೆಯೇ ಕೆಲಸಮಾಡಬೇಕು. ಭುಜಂಗರಾಯನ ಮೇಲೆ ಸಾಕಾದಷ್ಟು ದೃಷ್ಟಿಯನ್ನಿಟ್ಟಿರಬೇಕು ಎಂದು ಹೇಳಿದನು. ಇನ್ಸ್‌ಪೆಕ್ಟರು "ಸರಿ! ಹಾಗೆಯೇ ಇರಬಹುದು. ನೀವೇನನ್ನು ಮಾಡಬೇಕೆಂದು ಹೇಳಿದರೂ ನಾನದನ್ನು ಮಾಡುವೆನು, ಏಕೆಂದರೆ ನೀವು ಅನುಚಿತ ಮಾತುಗಳನ್ನು ಎಂದಿಗೂ ಹೇಳುವುದಿಲ್ಲ. ಇವರ ಗುಟ್ಟನ್ನು ಪತ್ತೇಮಾಡುವ ಭಾರವು ತಮ್ಮ

ಮೇಲಿದೆ ! " ಎಂದು ಹೇಳಿದರು. ಕಾಳೀಚರಣನು ಅಪರಪ್ರಶೆಯನ್ನು ಪಡೆದು ಎಲ್ಲಿಗೋ ಹೊರಟುಹೋದನು.

ಅಷ್ಟಮ ಗುಚ್ಛ.

ತರುಣಿಯ ಸಮಾಚಾರವು ಕರಿಕಲ್ ಪಟ್ಟಣದಲ್ಲಿ ನಾನಾ ರೂಪಗಳನ್ನು ತಳೆದಿದ್ದಿತು! ಆರಾರನ್ನು ಎಲ್ಲಿನೋಡಿದರೂ " ದ್ರವ್ಯಾಶೆಯು ಇನ್ನೆಂತಹ ಪ್ರಬಲವಾದುದು ! ಅಂತಹ ಶಂಭುದತ್ತನೂ ಕೂಡ ತನ್ನಾಶ್ರಯವನ್ನೇ ನಂಬಿಕೊಂಡಿದ್ದ ಆ ಮಾರ್ವಾಡಿಗಳನ್ನು ಕೊಲ್ಲಿಸಿದನೆಂದರೆ ಹೇಳುವುದುತಾನೆ ಇನ್ನೇನಿದೆ? " ಎಂದು ಮಾತನಾಡಿಕೊಳ್ಳುತ್ತಿದ್ದರು !! ಕಾಳೀಚರಣನು ಮುಂದೇನು ಮಾಡಬೇಕೆಂದು ಪ್ರಗಾಢವಾದ ಆಲೋಚನಾಪರಂಪರೆಗಳಲ್ಲಿ ಸ್ವಲ್ಪ ಕಾಲ ಮಗ್ನನಾಗಿದ್ದನು. ಇನ್ಸ್ಪೆಕ್ಟರ್ ತಾಂದೋಣಿರಾಯರಾದರೋ ಎಲ್ಲಾ ಕೆಲಸಗಳನ್ನೂ ಕಾಳೀಚರಣನಿಗೆ ಸಮರ್ಪಿಸಿ ನಿಶ್ಚಿಂತರಾಗಿದ್ದರು.

ಇದೆಲ್ಲವನ್ನೂ ನೋಡಿ ದಿನೇಶನು ಉದ್ವಿಗ್ನಚಿತ್ತನಾಗಿ ಆಲೋಚಿಸಲಾರಂಭಿಸಿದನು :—" ಇದೇನು ವಿಪರೀತ ! ಮಾನವರು ರಾಕ್ಷಸರಾಗುತ್ತ ಬಂದರಲ್ಲ !! ಪ್ರಪಂಚವು ಈ ವಿಧವಾದ ಅನ್ಯಥಾ ವೃತ್ತಿಯಲ್ಲಿ ಪ್ರವರ್ತಿಸಬಹುದೆ ! ! ! ನಾನು ಪ್ರತಿ ದಿವಸವೂ ಪಾವರದಿಂದ ಸೂಚಿಸುವ ಸನ್ಮಾರ್ಗಗಳಲ್ಲಿ ಪ್ರವರ್ತಿಸುವ ಸುಮತಿಯು ಈ ಮಾನವರಿಗಿಲ್ಲದೇ ಹೋಯಿತೆ ? ಪ್ರತಿಯೊಬ್ಬ ಮಾನವನೂ ತನ್ನ ನಿಯಮಿತ ಕಾರ್ಯದಲ್ಲಿ ತತ್ಪರನಾಗಿ ಕರ್ತವ್ಯಾನುಷ್ಠಾನದಿಂದ ಉತ್ತಮ ಗತಿಯನ್ನೇಕೆ ಆರ್ಜಿಸಬಾರದು ? ಪ್ರತಿಯೊಬ್ಬನೂ ಅವನವನ ಕೆಲಸವನ್ನು ನಿಃಸ್ಪೃಹತೆಯಿಂದ ಆಚರಿಸಲೆಂದೂ, ತನಗೇನು ಕಷ್ಟವು ಬಂದೊದಗಿದರೂ ವಿಧಾತನವಿಧಿಯನ್ನು ಎಂದೆಂದಿಗೂ ಮೀರದಿರಲೆಂದೂ, ತಾನೆಷ್ಟು ಕಷ್ಟಪಡಬೇಕಾಗಿ ಬಂದರೂ

ಸ್ಥಾಪಿಸಿಕೊಂಡು ಪರರ ಸಂಕಷ್ಟ ನಿವಾರಣೆಯಲ್ಲಿ ನಿರತನಾಗಿರುವ ಸುಗುಣಿಗೆ ಪ್ರಥಮತಃ ಪ್ರಬಲತರವಾದ ಕಷ್ಟಗಳು ಬಂದೊದಗಿದರೂ ಕಾಲಕ್ರಮೇಣ ದುರಂತರವಾದ ಆ ಕಷ್ಟ ಪರಂಪರೆಗಳೆಲ್ಲವೂ ನಿರಂತರ ಸುಖದಾಯಕ ಗಳಾಗಿ ಪರಿಣಮಿಸುವುವೆಂತಲೂ, ನನ್ನ ನಡತೆಯಿಂದಲೇ ವ್ಯಕ್ತಪಡಿಸುತ್ತಿ ರುವೆನಲ್ಲ ! ಇದಕ್ಕಾಗಿಯೇ ಅಲ್ಲವೆ ನನಗೆ ಲೋಕಬಾಂಧವನೆಂಬ ಅಭಿ ಧಾನವು ನಿಯೋಗಿಸಲ್ಪಟ್ಟಿರುವುದು ? ಹೀಗೆ ಪ್ರತ್ಯಕ್ಷ ಪ್ರಮಾಣವಾಗಿ ರುವ ಸಕಲ ಲೋಕವ್ಯವಹಾರಗಳನ್ನು ಗಣಿಸದಿರುವ ಈ ಮಾನವಕೀಟ ಗಳಿಗೇನು ಮಾಡಲಿ ? ಈಗಲೆ ನನ್ನೀ ಪ್ರಜ್ವಲಿಸುವ ಕಿರಣ ಸಮೂಹದಿಂದ ಪಾಪಿಗಳೆಲ್ಲರನ್ನೂ ಭಸ್ಮೀಭೂತರನ್ನಾಗಿಸಿ ಬಿಡಲೆ ? ಎಂದಂದುಕೊಂಡು ಅತ್ಯುಗ್ರಾಗ್ರಹಯುಕ್ತನಾದನು.

ಮತ್ತೆ ಹಾಗೆಯೇ ಸ್ವಲ್ಪ ಕಾಲ ಆಲೋಚಿಸಿ, "ಛೆ ! ಛೆ ! ! ಈ ಅತ್ಯಲ್ಪರ ವಿನಾಶಕ್ಕಾಗಿ ನನ್ನೀ ಪವಿತ್ರಕಿರಣ ರಾಜಿಗಳನ್ನು ವಿನಿಯೋಗಿ ಸಲೆ ? ಇವೆಂತು ತಾನೆ ಅಪವಿತ್ರರನ್ನು ಸ್ಪರ್ಶಿಸಲು ಸಮ್ಮತಿಸುವುವು ? ಈ ಪಾಪಿಗಳ ಸಲುವಾಗಿ ನನ್ನ ಈ ಪವಿತ್ರ ಕಿರಣರಾಜಿಗಳನ್ನು ಅಪವಿತ್ರ ಗೊಳಿಸಲಾರೆ ? ಈ ಪಾಷಂಡರ ಪಾಪಕಾರ್ಯವನ್ನು ನಾನೇಕೆ ನೋಡಲಿ ? ಪಾಪಕ್ಕೆ ತಕ್ಕ ಫಲವನ್ನು ಅವರನುಭವಿಸಿಯೇ ತೀರಬೇಕು ! ಛೆ ! ! ನನ ಗಿವರ ಗೊಡವೆಯೇ ಬೇಡ ! ! ! ಎಂದಂದುಕೊಳ್ಳುತ್ತ ಅಸಮಾಧಾನದಿಂದ ವಿಷಣ್ಣವದನನಾಗಿ ಪಶ್ಚಿಮದಿಕ್ತಟಾಭಿಮುಖವಾಗಿ ಹೋಗುತ್ತಿದ್ದನು.

ಅಸಮಾಧಾನದಿಂದ ಕಳೆಗುಂದಿ ಬರುತ್ತಿದ್ದ ಭಾಸ್ಕರನನ್ನು ನೋಡಿ ಪಶ್ಚಿಮದಿಗಂಗನೆಯು ಬೆಚ್ಚಿಬಿದ್ದು "ಇದೇಕೆ ! ದಿನೇಶನು ಹೀಗಿರುವನು ? ಇವನ ವ್ಯಸನಕ್ಕೆ ಕಾರಣವೇನು ? ಬೇಡ ಬೇಡ [illegible] ಮಾಡಿದ ಲೋಕಯಾತ್ರೆಯಲ್ಲಿ ತೊಡಗಿ ಎಡೆಬಿಡದೆ ತೊಳಗಿ ಬಳಲುತ್ತಿರುವ ಈ ದಿನೇಶನ ಪರಿತಾಪವನ್ನು ಕಾಣುತ್ತ ನನ್ನೆದೆಯೊಡೆಯುತ್ತಿರುವುದು ! ಹಾ ! ಜಗಚ್ಚಕ್ಷು, ನೀನೇಕೆ ಇಂತು ಬಾಡಿದ ಮುಖವಂತಿರುವೆ ? ಆವಾ ರಿಂದ ನಿನಗೀ ಮನೋವೈಕ್ಲಬ್ಯ ? " ಎಂದು ನೊಂದಲುತ್ತ ಅಂದುಕೊಳ್ಳುತ್ತ ರಾಗಾನ್ವಿತಳಾದಳು. ದಿನೇಶನ ಮ್ಲಾನಮುಖವನ್ನು ನೋಡಿ ನೋಡಿದ ಹಾಗೆಲ್ಲಾ ಆ ದಿಗಂಗನೆಯ ವ್ಯಸನವು ಹೆಚ್ಚು ಹೆಚ್ಚಿತು. ಕ್ರಮವಾಗಿ

ಕೋಪವು ಕಾಲಿಡಲಾರಂಭಿಸಿತು. ಸುಪತ್ನಿಯ ಸುಹೃದಯವು ಕಾಂತನ ಕಷ್ಟಗಳನ್ನು ಕಂಡು ಕಳವಳಿಸದಿರುವುದೆ? "ಲೋಕಹಿತಕ್ಕಾಗಿ ತನ್ನ ಸುಖವನ್ನೂ ಕೂಡ ತ್ಯಜಿಸಿ, ಸ್ವಲ್ಪವಾದರೂ ವಿಶ್ರಾಂತಿಯನ್ನಪೇಕ್ಷಿಸದೆ, ಎಂತೆಂತಹ ಕಷ್ಟಗಳು ಬಂದೊದಗಿದರೂ ಲಕ್ಷ್ಯೀಕರಿಸದೆ ಅವುಗಳನ್ನು ಸಹಿಸಿಕೊಂಡು, ಪರರ ಕ್ಷೇಮಾಭ್ಯುದಯವೇ ತನ್ನದೆಂದು ನಂಬಿ, ಈ ಸುವಿಸ್ತಾರವಾದ ಗಗನಪ್ರಾಂಗಣದಲ್ಲಿ ತಿರುಗುತ್ತ ಅಹಿತತಮವನ್ನು ಅಳಿಸುತ್ತಿರುವ ಈ ಭಾಸ್ಕರನಿಗೆ ಅಸಮಾಧಾನವು ಹೇಗಾಯಿತು? ಅದನ್ನುಂಟು ಮಾಡಿದವರಾರಿರಬಹುದು? ಧಿಕ್! ಅವರೆಂತಹ ಕೃತಘ್ನರೋ!! ಎಂತಹ ಸ್ವಾರ್ಥಿಗಳೋ!!! ಎಂತಹ ಪಾಷಂಡರೋ!! ಎಂದಾಲೋಚಿಸಿದಳು. ಕೋಪಾಗ್ನಿ ವ್ಯಾಪಿಸಿತು! ಮುಖವು ಕೆಂಪೇರಿತು!! ದಿನೇಶನು ದೂರದಿಂದಲೇ ಪತ್ನಿಯ ದಿಗಂಗನೆಯ ಕೋಪ ಭರಿತವಾದ ವದನವನ್ನು ನೋಡಿ ವ್ಯಾಕುಲಿತನಾದನು! ಆಯಾಸದಿಂದಲೂ, ಜುಗುಪ್ಸೆಯಿಂದಲೂ ಕೆಂಪೇರಿದ್ದ ಮುಖವು ಮತ್ತಷ್ಟು ಕೆಂಪೇರಿತು! ಪ್ರಿಯಪತ್ನಿಯ ಸಮೀಪಕ್ಕೆ ಹೋಗಿ, "ಪ್ರಿಯೆ! ಇದೇಕಿಷ್ಟು ಕೋಪ? ಅದೇನುಮಾಡಿದರು ಹೇಳಬಾರದೆ? ಸಾಕುಬಿಡು! ಅಹ!! ಈ ಕೋಪವು ಈ ಕೋಮಲವದನದಲ್ಲಿ ಮತ್ತಷ್ಟು ಸೊಬಗನ್ನು ಸಂಗ್ರಹಿಸುತ್ತಿರುವುದಲ್ಲ!!!" ಎಂದು ಹೇಳುತ್ತ ಆ ದಿಗಂಗನೆಯ ಮುದ್ದಾದ ಮುಖವನ್ನು ಮೃದುಮೃದುವಾಗಿ ಚುಂಬಿಸಿ "ಸಾಕಪ್ಪಾ! ಈ ಗಂಡಸರ ಸಹವಾಸವೇಸಾಕು!! ಒಂದು ಕಡೆ ಈ ರೂಪ! ಒಂದುಕಡೆ ಪ್ರತ್ಯಹವೂ ಇವರನ್ನು ಸಮಾಧಾನ ಪಡಿಸುವ ಕೆಲಸ!! ಏನು ಹೇಳಲೋ!!! ಇವರನ್ನು ಸಮಾಧಾನಪಡಿಸುವುದರಲ್ಲಿಯೇ ಮುಪ್ಪಾಗುವುದಲ್ಲದೆ ಇವರದೆಶೆಯಿಂದ ಬಾಳಗಾಲ ಬಂದಿತಲ್ಲ" ಎಂದೆಂದು ದೀರ್ಘವಾದ ನಿಶ್ವಾಸವನ್ನು ಬಿಟ್ಟು, "ವಿಧಾತನ ವಿಚಿತ್ರ ಸೃಷ್ಟಿಯಲ್ಲಿ ಈ ಸ್ತ್ರೀಯರ ಸೃಷ್ಟಿಯೇ ಬಹು ಅತಿಶಯವಾದುದು. ಬ್ರಹ್ಮನ ಬ್ರಹ್ಮಾಸ್ತ್ರಗಳೇ ಈ ಸ್ತ್ರೀಯರೆಂದು ತೋರುವುದು. ಪಾದರಸವು ಚಾಮೀಕವನ್ನು ಆಕರ್ಷಿಸಿ ಅದರ ರೋಗವನ್ನೇ ಹೇಗೆ ಮಾರ್ಪಾಗಿಸುವುದೋ ಹಾಗೆ ಈ ಸ್ತ್ರೀಯರು ಪುರುಷರನ್ನು ಆಕರ್ಷಿಸಿ ಅವರ ಸ್ವಾತಂತ್ರ್ಯವನ್ನೇ ನಶಿಸುವರು! ವ್ಯಾಮೋಹವು ಎಷ್ಟು ಪ್ರಬಲವಾಗಿರು

ವುದು ! ! ಪ್ರಪಂಚವು ಮದಾಂಧವಾಗಿ ಇಂತಹ ಪ್ರಬಲೆಯರಿಗೂ ಕೂಡ ಅಬಲೆಯರೆಂದು ಅಭಿಧಾನವನ್ನು ಅರ್ಪಿಸುವುದಲ್ಲ ! ! ಏನಾಶ್ಚರ್ಯ ! ! ಎಂದು ಮಂದಹಾಸದಿಂದ ಹೇಳಿದನು.

ಈ ಮಾತುಗಳನ್ನು ಕೇಳಿದ ಪಶ್ಚಿಮದಿಗಂಗನೆಯು ಪತಿಯನ್ನು ಬಿರುಗಣ್ಣುಗಳಿಂದ ನೋಡುತ್ತ, "ಇವರನ್ನು ನೋಡಿದರೂ ಎಲ್ಲದಕ್ಕೂ ಸ್ತ್ರೀಯರನ್ನೇ ದೂಷಿಸುತ್ತಾ ಪ್ರತಿಯೊಂದಕ್ಕೂ ಅವರೇ ಕಾರಣರೆಂದು ಹೇಳಲು, ಅವರು ಮಾಡಿರುವುದೇನು ? ಮಾಡುವುದು ತಾನೇ ಏನು ? ಪತಿಯೇ ತಮ್ಮ ಪ್ರಾಣಸರ್ವಸ್ವವೆಂದು ದೃಢವಾಗಿ ನಂಬಿ ಆತನೇನಂದರೂ ಅವರು ಸಹಿಸಿಕೊಂಡಿರುವುದರಿಂದತಾನೆ ನಿಮ್ಮೀ ಖಡ್ಗಪ್ರಹಾರಕ್ಕಿಂತಲೂ ಕಠಿಣವಾದ ವಾಕ್ಪ್ರಹಾರವು ? ಪುರುಷರು ಮನೋದಾರ್ಢ್ಯವಿಲ್ಲದೆ ಚಾಂಚಲ್ಯ ಸಾಗರದಲ್ಲಿ ನಿಮಗ್ನರಾಗಿರುವುದರಿಂದ ತಾನೆ ಸ್ತ್ರೀಯರು ಪ್ರಬಲರು ?" ಎಂದು ಹೇಳಿ ಹಿಂಜರಿಯಲುದ್ಯುಕ್ತಳಾದಳು. ಹಾಸ್ಯೋನ್ಮುಖನಾಗಿದ್ದ ದಿನೇಶನು ಪ್ರಿಯೆಯನ್ನು ಸವಿನಯವಾಗಿ ತಡೆದು ನಿಲ್ಲಿಸಿ, "ಪ್ರಿಯೆ ! ಇಂತಹ ವಿಪರೀತವಾದ ವಾಗಾಡಂಬರದಿಂದಲೇ ಅಲ್ಲವೆ ನೀವು ನಿಮ್ಮ ಹಠವನ್ನು ಸಾಧಿಸುವುದು ? ನಿಮ್ಮ ವಾಕ್ಸರಣಿಯಲ್ಲಿ ಸ್ವಲ್ಪವಾದರೂ ಕಾರುಣ್ಯವುಂಟೇ? ಛೆ ! ಅಂತಹ ವಿವೇಚನಾಶಕ್ತಿಯು ನಿಮಗೆಲ್ಲಿರುವುದು ? ನೀವು ಕೇವಲ ಮೂರ್ಖರು !" ಎಂದುಹೇಳಿದನು. ದಿನೇಶನ ವದನವನ್ನು ಒಮ್ಮೆ ನೋಡಿ ದಿಗಂಗನೆಯು "ಅಹುದು ! ನಾವು ಮೂರ್ಖರಾದರೆ ನಿಮ್ಮಂತಹ ನಿಷ್ಕಳಂಕರಾದ ಸಾಧುಗಳು ನಮ್ಮ ಸಹವಾಸವನ್ನೇ ಕಾಂಕ್ಷಿಸಬೇಕು ? ನಮ್ಮಂತಹ ಮೂರ್ಖರದೆಸೆಯಿಂದ ನಿಮ್ಮಂತಹ ಸಾಧುಗಳು ಅವರ್ಣನೀಯವಾದ ಕಷ್ಟಪರಂಪರೆಗೆ ಒಳಗಾಗಬೇಕಾಗುವುದಲ್ಲವೆ? ಇನ್ನು ಮೇಲೆ ನಮ್ಮ ಸಹವಾಸವನ್ನೇ ಬಿಟ್ಟುಬಿಡಿ !" ಎಂದನ್ನಲು ದಿನೇಶನು, "ನಾವೇನುತಾನೆ ಮಾಡಬಲ್ಲೆವು ? ಛೇದ್ಯವಲ್ಲದ, ವಿದ್ಯುಚ್ಛಕ್ತಿಗಿಂತಲೂ ಅತ್ಯಧಿಕವಾದ ಮಹದಾಕರ್ಷಣಶಕ್ತಿಯುಳ್ಳ ಆ ಪ್ರೀತಿಪಾಶವನ್ನು ನಾವು ಹೇಗೆತಾನೆ ಉಲ್ಲಂಘಿಸಬಲ್ಲೆವು? ಆ ಪ್ರೀತಿಯ ಪ್ರಾಬಲ್ಯದಿಂದ ನೀವು ಕುಣಿದರೂ ನಾವು ನರ್ತಿಸಬೇಕು, ನೀವು ಹೇಗೆ ಮಾಡಿದರೂ ನಾವು ಹಾಗೆಯೇ ಮಾಡಬೇಕು. ಈಷದಪಿ ಸಮಾಧಾನವನ್ನು

ಸಂಪಾದಿಸಬೇಕಾದರೂ ಅನ್ಯಥಾ ಮಾರ್ಗವೇ ನಮಗಿಲ್ಲ ! ಎಂದು ಹೇಳಿದನು. ಪಶ್ಚಿಮದಿಗಂಗನೆಯು ಮೊಗದಲ್ಲಿ ಸ್ವಲ್ಪನಗುವು ತಲೆದೋರಿತು. ಮತ್ತೊಮ್ಮೆ ದಿನೇಶನಮೇಲೆ ತನ್ನ ಚಂಚಲಕಟಾಕ್ಷವನ್ನು ಬೀರಿ, "ನಮ್ಮನ್ನು ಪ್ರೀತಿಸಬೇಕೆಂದು ನಾವೇನು ಕೇಳಿಕೊಂಡೆವೆ ? ಇಲ್ಲದ ವ್ಯಾಮೋಹಕ್ಕೆ ಪರವಶರಾಗಿ ಮಾಡಬಾರದುದನ್ನು ಮಾಡಿದರೆ ಆಗಬಾರದುದಾಗದಿರುವುದೇ ? ಅದಾವರೋ ಎಂತಹ ಪ್ರೀತಿ ! ಅದೇನು ಪ್ರೀತಿಯೋ ಪ್ರೇತವೋ ? ಅದೇನು ಸಾರವತ್ತಾದ ಪ್ರೀತಿಯೊ ? ಆ ಪ್ರೀತಿಯು ಅಗ್ನಿಸಾಕ್ಷಿಯಾಗಿ ಕೈಹಿಡಿದ ಸತಿಯನ್ನು ಕೂಡ ತೃಣವಲ್ಲಭವಾಗೆಣಿಸುವುದು ! ಆ ಪ್ರೀತಿಯು ಪರಸ್ತ್ರೀಯರಲ್ಲಿ ವಿಶೇಷ, ವಾರಾಂಗನೆಯರಲ್ಲಿ ಅನುರಕ್ತವಾಗಿ ಧರ್ಮಪತ್ನಿಯನ್ನೂ ಪರಿತ್ಯಜಿಸುವುದು ! ಇಂತಹ ದುರಾಚಾರವು ಪ್ರೀತಿಯಲ್ಲವೆ ? ಚಪಲೆಯರ ಚಂಚಲಕಟಾಕ್ಷಕ್ಕೆ ಮರುಳಾಗಿ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗಲು ಅಗಣಿತ ದುಷ್ಕಾರ್ಯಗಳನ್ನೂ ಕೂಡ ಮಾಡಿ, ಕಟ್ಟ, ಬೀದಿಗೆ ಬಂದು ಮುಖವನ್ನು ತೋರಿಸಲೂ ಕೂಡ ಧೈರ್ಯವಿಲ್ಲದೆ ಮೂಲೆ ಮೂಲೆಗಳಲ್ಲಿ ಕುಕ್ಕೊಳ್ಳುವುದದೊಂದುತರದಾ ಪ್ರೀತಿಯೋ ? ಅದೇನು ಪ್ರೀತಿಯೋ ಅಥವಾ ಅತ್ಯಧಿಕವಾಗಿ ಸಂಗ್ರಹಿಸಿದ ದುರಾಶಾಪಿಶಾಚಿಯೋ ? ಎಂದು ಹೇಳುತ್ತಿರಲು, ಇವರ ಸರಸಕಲಹವನ್ನು ಕೇಳಲೋಸುಗವೋ ಎಂಬಂತೆ ಅಲ್ಲಲ್ಲಿ ನಕ್ಷತ್ರಗಳು ಥಳಥಳಿಸಲಾರಂಭಿಸಿದುವು. ದಿನೇಶನು ಕಣ್ಮರೆಯಾದನು.

ತತ್ಸಮಯದಲ್ಲಿ ಕಾಳೀಚರಣನು ಹೀಗೆ ಆಲೋಚಿಸುತ್ತಿದ್ದನು. "ಪ್ರಪಂಚದ ಪ್ರಾಕೃತಿಕ ಸೌಂದರ್ಯವು ಎಷ್ಟು ರಮ್ಯವಾಗಿದೆ ! ಪ್ರಾಪಂಚಿಕ ವ್ಯವಹಾರವೂ ಇಷ್ಟೇ ರಮ್ಯವಾಗಿದ್ದಿದ್ದರೆ ಇದೇ ಈ ಪ್ರಪಂಚವು ಸ್ವರ್ಗವೇಗಿರುತ್ತಿತ್ತೋ ! ಆದರೆ ಅದು ಹಾಗಾಗುವ ಸಂಭವವಿಲ್ಲ !! ಅದಕ್ಕೆ ಬಹು ವ್ಯಕ್ತವಾಗಿರುವ ಕಾರಣಗಳಿವೆ ! ಆದರೆ ಪ್ರಕೃತದಲ್ಲಿ ಆ ವಿಷಯವು ನನಗೆ ಸಂಬಂಧಿಸಿರುವುದಲ್ಲ !

ಈಗ ನಡೆದಿರುವ ವಿದ್ಯಮಾನಗಳಲ್ಲಿ ಸಂಬಂಧಿಸಿರುವವರು ನಾಯಕಿಯರಾದಿಗಳೂ, ಶಂಭುದತ್ತ, ದೇವೇಶ, ಪ್ರೇಮಚಂದ್ರ ಮತ್ತು ಭೋಲಾನಾಗ, ಇವರಲ್ಲದೆ ಮತ್ತಿನ್ನಾರೂ ತೋರುವುದಿಲ್ಲ. ಅವರಸ್ಯೈಕಿ ಆ ಮಾರ್ವಾಡಿ

ಗಳು ಮತ್ತು ಶಂಭುದತ್ತ ಇವರನ್ನು ಗಣನೆಗೆ ಪ್ರಸ್ತುತದಲ್ಲಿ ತರದೇ ಇರಬಹುದು. ಇನ್ನುಳಿದವರಲ್ಲಿ ದೇವೇಶ, ಪ್ರೇಮಚಂದ್ರ, ಭುಜಂಗ ಇವರು ಪ್ರತಿಪಕ್ಷದವರಾಗಿದ್ದರೂ ಇರಬಹುದು. ಆದರೆ ಅವರನ್ನು ಚನ್ನಾಗಿ ಪರೀಕ್ಷಿಸಬೇಕು. ದೇವೇಶನು ಕೇವಲ ಸಾತ್ವಿಕ ಬ್ರಾಹ್ಮಣನೆಂದು ಲೋಕಾನುಭವವಿದೆ. ಪ್ರೇಮಚಂದ್ರನು ವಿಲಾಸಿನಿಯಲ್ಲಿ ಅನುರಕ್ತನಾಗಿರುವನು; ಅವನಲ್ಲಿ ದುರ್ಗುಣಗಳಾವುವೂ ಇರುವಂತಿಲ್ಲ. ಭುಜಂಗನು ಮಾತ್ರ ಕೇವಲ ದುರಾಚಾರಿಯೆಂದೇ ತೋರುವುದು. ಆದುದರಿಂದ ಪ್ರಥಮತಃ ಭುಜಂಗನನ್ನು ಪರೀಕ್ಷೆಗೀಡಾಗಿಸಬೇಕು! ಹೀಗೆ ನಿರ್ಧರಿಸಿ ಕಾಳೀಚರಣನು ಅಲ್ಲಿಂದೆದ್ದು ಎಲ್ಲಿಗೋ ಹೋದನು.

ದಶಮ ಗುಚ್ಛ.

ಪಾಠಕ ಮಹಾಶಯರು ಭುಜಂಗನ ವಿಷಯದಲ್ಲಿ ಹೆಚ್ಚಿಗೆ ಸಂಗತಿಗಳನ್ನು ತಿಳಿಯಲಪೇಕ್ಷಿಸುವರೇನೋ! ಆದರೆ ಪ್ರಕೃತದಲ್ಲಿ ನಮ್ಮ ಲೇಖಣಿಯು ಎಲ್ಲಾ ಸಂಗತಿಗಳನ್ನೂ ವಿವರಿಸಲಾರದು! ಕೆಲವು ಸಂಗತಿಗಳನ್ನು ಮಾತ್ರ ಈಗ ಬರೆದು ಉಳಿದುವನ್ನು ಸಂದರ್ಭವು ದೊರೆತಾಗ ಯಥೋಚಿತವಾಗಿ ವರ್ಣಿಸುವುದು.

ಭುಜಂಗನು ವಿಜಯಿನಿಯ ಸೋದರತ್ತೆಯ ಮಗ, ದುರದೃಷ್ಟವಶಾತ್ ಅನಾಥ! ಪಿತ್ರಾರ್ಜಿತವಾಗಿದ್ದ ಅಲ್ಪಸ್ವಲ್ಪ ಆಸ್ತಿಯನ್ನು ದುಸ್ಸಹವಾಸದಿಂದುಂಟಾದ ದುರಾಶೆಯಿಂದ ತೃಣವನ್ನಾಗೆಣಿಸಿ ಮನಸ್ಸಿಗೆ ತೋರಿದ ಹಾಗೆ ವೆಚ್ಚಮಾಡಿದನು. ತದನಂತರ ವಿಜಯಿನಿಯ ಮೂಲಕ ಶರಚ್ಚಂದ್ರರ ಆಸ್ತಿಗೆ ಹಕ್ಕುದಾರನಾಗಬೇಕೆಂಬುದೇ ಅವನ ಮುಖ್ಯ ಆಕಾಂಕ್ಷೆಯಾಯಿತು.

'ಭುಜಂಗನು' ಆ ಪಟ್ಟಣದ ಅವುದೋ ಒಂದು ತ್ಯಕ್ತಪ್ರದೇಶದಲ್ಲಿದ್ದ ಒಂದು ಪಾಳು ಮನೆಯಲ್ಲಿ ವಾಸಿಸುತ್ತಿದ್ದನು. ಅವನು ಇನ್ನೇನು ತಾನೆ ಮಾಡಬಲ್ಲ? ಪಾಪ! ಜೀವನವನ್ನು ಜರುಗಿಸುವುದೇ ಕೇವಲ ಕಷ್ಟಸಾಧ್ಯವಾಗಿದ್ದಿತು, ಅವನೊಂದಿಗೆ ಅದಾವಳೋ ಒಬ್ಬ ವೃದ್ಧೆಯು ವಾಸಿಸುತ್ತಿದ್ದಳು.

ಸಾಯಾಹ್ನದಲ್ಲಿ ಏಳುಘಂಟೆಯ ಸಮಯವಾಯಿತು. ಒಂದು ಹಣತೆಯ ದೀಪವು ತನ್ನ ಅಲ್ಪಪ್ರಭೆಯಿಂದ ಆ ಕುಟೀರವನ್ನು ಬೆಳಗುತ್ತಿದ್ದಿತು. ಅದಾವುದೋ ಒಂದು ವ್ಯಕ್ತಿಯು ಆ ಕುಟೀರವನ್ನು ಅತ್ಯಾತುರದಿಂದ ಪ್ರವೇಶಿಸಿ ಆ ವೃದ್ಧೆಯನ್ನು ನೋಡಿ! ಅಮ್ಮಾ! ನಿಮ್ಮ ಭುಜಂಗನೆಲ್ಲಿ? ಇನ್ನೂ ಬರಲಿಲ್ಲವೇ? ಎಲ್ಲಿರುವನೋ! ಅಯ್ಯೋ! ನಾನೇನುಮಾಡಲಿ! ಉಳಿಗಾಲವಿಲ್ಲ! ಭುಜಂಗನೀಗೆನಗೆಲ್ಲಿಸಿಕ್ಕುವನೋ! ಎಂದು ಮೊದಲಾಗಿ ವ್ಯಾಕುಲತೆಯನ್ನು ವ್ಯಕ್ತಪಡಿಸುತ್ತ ಕಂಪಿತಸ್ವರದಿಂದ ಹೇಳಿದನು. ವೃದ್ಧೆಯು ಬಹು ಭೀತಳಾಗಿ! ಅಯ್ಯೋ! ಅದೇನು ಸಂಗತಿ! ಏನಾಯಿತೋ! ನನ್ನೊಂದಿಗೆ ಹೇಳಿದರೆ ಅವನು ಬಂದ ಕೂಡಲೆ ಹೇಳುವೆನು. ಏನಿದ್ದರೂ ಮರೆಮಾಡದೆ ಹೇಳಪ್ಪಾ!! ಎಂದು ಹೇಳಿದಳು. ಆ ವ್ಯಕ್ತಿಯು ವ್ಯಾಕುಲಭಾವವನ್ನು ತೋರ್ಪಡಿಸುತ್ತ! ಅಮ್ಮಾ ನಾನೇನುಹೇಳಲಿ, ಇನ್ನೊಂದರ್ಧಘಳಿಗೆಯಲ್ಲಿ ಏನಾಗುವುದೋ, ಏನೋ! ದೊಡ್ಡ ಆಪತ್ತು! ಮಾನಪ್ರಾಣಗಳು ಉಳಿಯುವದೇ ಕೇವಲ ಕಷ್ಟ!! ಎಂದು ಹೇಳುತ್ತಾ ಸ್ವಲ್ಪಮುಂದುವರಿದು ಆ ವೃದ್ಧೆಯ ಕಿವಿಯಲ್ಲಿ ಏನನ್ನೋ ಪಿಸುಗುಟ್ಟಿದನು. ವೃದ್ಧೆಯು ಭಯಾಕುಲಳಾದಳು! ಹತಾಶಳಾದವಳಂತೆ [illegible] [illegible]ಸೆಯಾಗಿ ತದೇಕದೃಷ್ಟಿಯಿಂದ ನೆಲವನ್ನು ವೀಕ್ಷಿಸುತ್ತ, ! ಅಯ್ಯೋ! ಇನ್ನೇನು ಗತಿಯಪ್ಪಾ!! ಎಂದು ಹೇಳಿ ಅತ್ಯಧಿಕವಾದ ದುಃಖವನ್ನು ಸ್ತಂಭಿಸಲಾರದೆ ಮೆಲ್ಲಮೆಲ್ಲನೆ ಅಳುತ್ತ ನಿರಾಶಳಾದವಳಂತೆ ಕುಳಿತುಬಿಟ್ಟಳು. ಆ ವ್ಯಕ್ತಿಯು ಸಮನ್ತತಃ ನೋಡಿ! ಅಮ್ಮಾ! ಈ ರೋದನದಿಂದೇನು ಪ್ರಯೋಜನವಿಲ್ಲ. ನಡೆದುದು ನಡೆದುಹೋಯಿತು. ಪ್ರಕೃತದಲ್ಲಿ ಏನನ್ನೂ ಅರಿಯದವರಂತೆ ನಾವು ನಟಿಸಬೇಕು. ಮೊದಲು ಅವನನ್ನೆಲ್ಲಿದ್ದರೂ ಹುಡುಕಿ ಅವನು ತಲೆ

ತಪ್ಪಿಸಿಕೊಳ್ಳುವಂತೆ ಮಾಡಬೇಕು. ಇಲ್ಲದೇಹೋದರೆ ಎಂದಿಗೂ ಉಳಿಗಾಲವಿಲ್ಲ" ಈಗ ನೀವು ಸಮಾಧಾನಪಡಿಸಿಕೊಳ್ಳಿ, ಒಂದುವೇಳೆ ಅವಳ ಮನೆಯಲ್ಲೇನಾದರೂ ಇದ್ದರೂ ಇರಬಹುದು. ಅಲ್ಲಿಗೆ ಈಗಲೇ ಹೋಗಿ ನೋಡಿಕೊಂಡು ಬರುತ್ತೇನೆ. ! ಎಂದು ಹೇಳಿ ಹೊರಟು ಹೋದನು.

ಆ ವೃದ್ಧೆಯು "ಅವಳ" ಎಂಬ ಶಬ್ದವನ್ನು ಕೇಳಿದ ಕೂಡಲೆ ಸಹಸಾ ತಲೆಯನ್ನೆತ್ತಿ, "ಅಯ್ಯೋ ! ಆ ಹಾಳಾದ ಸುಟ್ಟಮೋರೆಯ ಚಂಡಾಲಮುಂಡೆಯಿಂದಲ್ಲವೆ ಈ ದುರ್ಗತಿಯು ಬಂದುದು !! ಅವನಾಸ್ತಿಯನ್ನೆಲ್ಲಾ ದೋಚಿಕೊಂಡಳು ! ಮೂರುಕಾಸೂ ಇಲ್ಲಗೆ ಹೋಯಿತು ! ಹೊಟ್ಟೆಗಿಲ್ಲದೆ ಸಾಯುತ್ತಿದ್ದೆವು !! ಆ ಮಹಾರಾಯನು ನಮ್ಮ ತೊಂದರೆಗಳನ್ನು ನೋಡ[illegible] ಬಂದಪ್ರೂರ್ವವಾದ ವಿಶ್ವಾಸದಿಂದ ನಮಗೆ ಸಹಾಯಮಾಡಿದನು. ಈ ನೀಚರಾಕ್ಷಸಿಯು ಅದಕ್ಕೂ [illegible]ಯ್ದು ಕೊಂಡಿದ್ದಳು. ಎಂದು ಅ[illegible]ರನ್ನೋ ಬಯ್ಯುತ್ತ ಕುಟೀರದ ಬಾಗಿಲನ್ನು ಮುಚ್ಚಿಕೊಂಡಳು.

ಸ್ವಲ್ಪ[illegible]ದಲ್ಲಿಯೇ ಭುಜಂಗನು ಮನೆಗೆ ಬಂದನು. ವೃದ್ಧೆಯು ಭೀತಳಾಗಿ ಕುಳಿತಿರುವುದನ್ನು ನೋಡಿ ಚಕಿತನಾಗಿ ಕಾರ್ಯವನ್ನು ವಿಚಾರಿಸಿ ಸಂಗತಿಯನ್ನರಿತನು. ಹಾಗೆಯೇ ಸ್ವಲ್ಪ ಆಲೋಚಿಸಿ ನೋಡಿದನು. ತಲೆದೂಗಿ "ಇರಲಿರಲಿ !" ಎಂದೆಂದುಕೊಂಡು, "ಈಗಲೆ ಬಂದೆ !" ಎಂದು ಮುದುಕಿಗೆ ಹೇಳಿ ಹೊರಟುಹೋದನು.

ಭುಜಂಗನು ತತ್‌ಕ್ಷಣವೇ ತನ್ನ ಪ್ರಿಯೆಯ ಸುಂದರ ಮಂದಿರವನ್ನು ಸೇರಿದನು. ಅಲ್ಲಾವ ವಿಶೇಷ ವಿಷಯವೂ ಗೊತ್ತಾಗಲಿಲ್ಲ. ಆಗ ತನ್ನಲ್ಲಿ ತಾನು ಹೀಗೆ ಹೇಳಿಕೊಂಡನು:—

"ಎಲೆಲ ! ಕಾಳೀಚರಣ !! ಇದೆಲ್ಲವೂ ನಿನ್ನ ಚೇಷ್ಟೆಯಲ್ಲದೆ ಮತ್ತಿನ್ನೇನೂ ಅಲ್ಲ ! ಆಗಲಾಗಲಿ !! ತಕ್ಕ ಪ್ರತಿಫಲವು ಲಭಿಸದಿರಬಾರದು. ಈ ದಿವಸ ನೀನಿಲ್ಲಿಗೆ ಬಾ ! ಪರಿಣಾಮವೇನಾಗುವುದೆಂದು ನೋಡುವೆ !! ಇದೇ ನಿನ್ನ ಅತ್ಯುದ್ಯಮದ ಅಂತ್ಯಕಾಲ !!!

ತನ್ನ ನಾಯಕಿಯಲ್ಲಿ ಕೆಲವು ಸಂಗತಿಗಳನ್ನು ತಿಳಿಸಿ, ಕಾರ್ಯವು ಕೈಗೂಡುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲದೆ ಅತ್ಯಾನಂದದಿಂದ ಹೊರಟು ಹೋದನು. ಉತ್ಸಾಹಪರವಶನಾಗಿದ್ದ ಆ ಭುಜಂಗನಿಗೆ ಮತ್ತಿನ್ನೇನೂ ಗೊತ್ತಾಗಲಿಲ್ಲ! ಸಹಜವೆ!! ಹಿಡಿದ ಕೆಲಸದಲ್ಲಿ ಕೃತಕಾರ್ಯರಾಗುವ ಸಂಭವವಿದ್ದರೆ ಪರಿಣಾಮದ ಫಲವೊಂದಲ್ಲದೆ ಮತ್ತಿನ್ನೇನು ತಾನೆ ಹೃದ್ಗೋಚರವಾಗಲಾಪುದು.

ಭುಜಂಗನು ಭೋಜನೋತ್ತರಕ್ಷಣವೇ ಅಲ್ಪ ವಿಶ್ರಾಂತಿಯನ್ನು ಕೂಡ ಅಪೇಕ್ಷಿಸದೆ ಆ ಚಿತ್ರತರಕುಟೀರದಿಂದ ಹೊರಹೊರಟನು. ತನಗೆದುರಾಗಿ ಆರೋ ಬರುತ್ತಿದ್ದಂತೆ ಭಾಸವಾಗಲು ಸ್ವಲ್ಪ ಭಯಚಕಿತನಾದನು; ಆದರೂ ಹಿಂದೆಗೆಯದೆ ನಾಲ್ಕಾರು ಹೆಜ್ಜೆ ಮುಂದಿಡುವಷ್ಟರಲ್ಲಿಯೇ ಇನ್‌ಸ್ಪೆಕ್ಟರು "ಅದಾರು? ಭುಜಂಗರಾಯರೇನು" ಎಂದು ಪ್ರಶ್ನಿಸಲು. "ಸ್ವಾಮಿ ಏನಪ್ಪಣೆ?" ಎಂದು ಭುಜಂಗನು ಹೇಳುತ್ತ ಇನ್‌ಸ್ಪೆಕ್ಟರ ಸಮೀಪವನ್ನೈದಿದನು. ಇನ್‌ಸ್ಪೆಕ್ಟರು ಅವನೊಂದಿಗೆ ಮಾತನಾಡುತ್ತ ಎಲ್ಲಿಗೋ ಕರೆದುಕೊಂಡು ಹೋದರು. ಅಯ್ಯೋ! ಪಾಪ!! ಭುಜಂಗನಿಗೆ ಆಶಾಭಂಗಕ್ಕೆ ಆರಂಭವೋ ಏನೋ! ಏನು ಮಾಡುವುದು? ಅನಿವಾರ್ಯವಾದ ಸಂಭವ

ಅವರೀರ್ವರೂ ಮಾತನಾಡುತ್ತ ಹೋಗುತ್ತಿರಲು, ಬಹು ಭೀತನಾಗಿ ಓಡಿಯೋಡಿ ಬರುತ್ತಿದ್ದ ಪೋಲೀಸ್ ಕಾನ್‌ಸ್ಟೆಬಲ್ಲನೊಬ್ಬನು "ಖೈದಿಯು ತಪ್ಪಿಸಿಕೊಂಡು ಓಡಿಹೋಗಿಬಿಟ್ಟನು ಇನ್ನೇನು ಗತಿ?" ಎಂದು ಹೇಳಿದನು. ಇನ್‌ಸ್ಪೆಕ್ಟರು ಸಮೀಪದಲ್ಲಿದ್ದ ಭುಜಂಗನನ್ನು ನೋಡಿ, ಭುಜಂಗರಾಯರೆ! ಇದೇನೋ ವಿಪರೀತ ಬಂದೊದಗಿತಲ್ಲ!! ಬನ್ನಿ! ಬೇಗಬನ್ನಿ!!! ಎಂದೆಂದು ಬೇಗಬೇಗ ಠಾಣೆಯ ಕಡೆ ಹೊರಟರು. ಭುಜಂಗನು ಇನ್‌ಸ್ಪೆಕ್ಟರ ಮಾತನ್ನು ಮೀರಲಾರ! ಹೋಗೋಣವೆಂದರೆ ತಾನು ಏರ್ಪಡಿಸಿದ್ದ ಸಂಚಿನ ಪರಿಣಾಮವನ್ನು ಪರೀಕ್ಷಿಸಬೇಕೆಂಬ ಕುತೂಹಲ!! ಏನಾದರೇನು? ಕೇವಲ ಚಂಚಲವಾದ ಜುಗುಪ್ಸಾನ್ವಿತವಾದ ಮನಸ್ಸಿನಿಂದ ಇನ್‌ಸ್ಪೆಕ್ಟರನ್ನು ಹಿಂಬಾಲಿಸಿದನು.

ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ "ಕಳ್ಳ! ಕಳ್ಳ!! ತಪ್ಪಿಸಿಕೊಂಡು ಓಡಿಹೋಗುತ್ತಾನೆ!!!" ಎಂಬ ಕೂಗನ್ನು ಕೇಳಿ ಇನ್‌ಸ್ಪೆಕ್ಟರು ಆಶ್ಚರ್ಯಚಕಿತರಾಗಿ ಸುತ್ತಲೂ ನೋಡುತ್ತಿರುವಷ್ಟರಲ್ಲಿಯೇ ಅವರೆದುರಾಗಿಯೇ ಬಹು ವೇಗವಾಗಿ ಬೈಸಿಕಲ್ಲಿನ ಮೇಲೆ ಬರುತ್ತಿದ್ದವನೊಬ್ಬನನ್ನು ಕಂಡರು. ಅವನನ್ನು ತಡೆದು ನಿಲ್ಲಿಸಬೇಕೆಂದು ಇನ್‌ಸ್ಪೆಕ್ಟರು ಒಂದೆರಡು ಹೆಜ್ಜೆ ಮುಂದಿಟ್ಟರು. "ಢಾ" ಎಂದು ಶಬ್ದವಾಯಿತು! ಇನ್‌ಸ್ಪೆಕ್ಟರು ಕೆಳಗೆ ಬಿದ್ದೇ ಬಿಟ್ಟರು!! ಮಿಂಚಿನ ವೇಗಕ್ಕೆ ಇಮ್ಮಿಗಿಲೋ ಎಂಬಂತೆ ಬೈಸಿಕಲ್ ಮುಂದೆ ಹೋಗಿಬಿಟ್ಟಿತು!!!

ಈ ಗಲಭೆಯಲ್ಲಿ ಬೈಸಿಕಲ್ಲು ಅವಕಡೆ ಹೋಯಿತೆಂಬುದನ್ನು ಸಹ ಭುಜಂಗನು ಅರಿಯಲಿಲ್ಲ. ಸ್ವಲ್ಪ ಕಾಲದಲ್ಲಿಯೇ ಆ ಬೈಸಿಕಲ್ಲಿನ ಮೇಲೆ ಹೋದವನು ಒಂದು ನಿರ್ಜನಪ್ರದೇಶವನ್ನು ಸೇರಿ ಬೈಸಿಕಲ್ಲನ್ನು ಸಮೀಪದಲ್ಲಿದ್ದ ಒಂದು ಕೂಪದಲ್ಲಿ ಬಿಸುಟು ಒಬ್ಬ "ದೊಡ್ಡ ಮನುಷ್ಯ" ನಂತೆ ಉತ್ತಮವಾದ ಉಡುಪುಗಳನ್ನು ಧರಿಸಿ ಪ್ರಸಃ ಪಟ್ಟಣವನ್ನು ಪ್ರವೇಶಿಸಿದನು.

ಆ ವೇಳೆಗೆ ರಾತ್ರಿ ಹತ್ತು ಗಂಟೆಯಾಗಿತ್ತು. ಜನರು ಮಲಗಿಯೂ, ಮಲಗುತ್ತಲೂ, ಇದ್ದರು. ಆ ಮನುಷ್ಯನು ಎಲ್ಲೆಲ್ಲಿಯೂ ಬಾಗಿಲುಗಳು ಮುಚ್ಚಲ್ಪಟ್ಟಿರುವುದನ್ನು ನೋಡಿ ನಿರಾಶನಾಗಿ ತನಗಿನ್ನೆಲ್ಲಿ ಆಶ್ರಯವು ಸಿಗಬಹುದೆಂದು ಆಲೋಚಿಸುತ್ತ ಆವೇಳೆಯಲ್ಲಿ ತಾನಾರೀತಿ ತಿರುಗುತ್ತಿರುವುದರಿಂದ ಮತ್ತೆಲ್ಲಿ ಪೊಲೀಸಿನವರಿಗೆ ಸಿಗುವೆನೋ ಎಂಬ ಭೀತಿಯಿಂದಲೋ ಏನೋ ಮೆಲ್ಲನೆ ಸಂದುಗೊಂದುಗಳಲ್ಲಿಯೇ ಮುಂದುವರಿಯುತ್ತಿರಲು ಒಂದು ಮನೆಯ ಬಾಗಿಲು ಸಂಪೂರ್ಣವಾಗಿ ತೆರೆಯಲ್ಪಟ್ಟು, ಒಬ್ಬ ತರುಣಿಯು ಆರ ಆಗಮನವನ್ನೋ ನಿರೀಕ್ಷಿಸುತ್ತ, ಬಾಗಿಲಿನ ಸಮೀಪದಲ್ಲಿಯೇ ನಿಂತಿದ್ದುದನ್ನು ನೋಡಿ, "ಇದಾರಗೃಹವಿರಬಹುದು? ರೀತಿಯನ್ನು ನೋಡಿದರೆ ವೇಶ್ಯಾಗೃಹವೆಂದು ತೋರುವುದು! ವಾಸ್ತವಿಕವಾಗಿಯೂ ಹಾಗೆ ಇದ್ದರೆನಾನಿಂದಿಗೆ ಬದುಕಿದೆ!" ಎಂದಂದುಕೊಂಡು ಸಂತೋಷದಿಂದ ಮುಂದೆ ಮುಂದೆ ಹೋಗಿ, "ಇದಾರಮನೆ" ಎಂದು ಪ್ರಶ್ನಿಸಿದನು.. ಆ ತರುಣಿಯು ಮುಂದೆ ಬಂದು ಮಂದಹಾಸದಿಂದ, "ಇದು ತಮ್ಮಂತಹ ಉದಾರಿ

ಗಳ ಪಾದಸೇವೆಯಿಂದ ಜೀವಿಸುವ ಬಡ,—" ಎಂದಂದು ತಲೆವಾಗಿ ಚಂಚಲಕಟಾಕ್ಷದಿಂದ ನೋಡುತ್ತ ಎಳೆನಗುವಿನ ಸುಳಿವಿಂದ ಸರಸ ಚಮತ್ಕಾರವಾಗಿ, "ದಯಮಾಡಿಸಬೇಕು" ಎಂದು ಹಸ್ತಲಾಘವವನ್ನಿತ್ತು ಒಳಗೆ ಕರೆದುಕೊಂಡು ಹೋದಳು.

ಪಾಠಕರಿಗೆ ಇವಳಾರೆಂದು ಗೊತ್ತಿರಬಹುದೆ? ಹಾಗಿಲ್ಲದಿದ್ದರೆ ಇವಳೇ ನಮ್ಮ ಭುಜಂಗನ ಮನೋಹರಳು! ಇವಳು ಅವನ ಅಪೇಕ್ಷೆಯಂತೆ ಆ ದಿನ ನಡೆಯಬಹುದಾಗಿದ್ದ ವಿಚಿತ್ರವ್ಯಾಪಾರಕ್ಕಾಗಿ ಕಾಳೇಚರಣನ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದುದರಿಂದಲೇ ಈತನಿಗೆ ಅವಳ ಸಹವಾಸವು ಘಟಿಸಲನುಕೂಲಿಸಿತೇ ವಿನಹ ಇಲ್ಲದಿದ್ದರೆ ಏನಾಗುತ್ತಿತ್ತೋ! ಅವನು ಒಳಗೆ ಬಂದ ಕೂಡಲೆ ಮತ್ತಾವ ಮಾತನ್ನೂ ಆಡದೆ ಜೇಬಿನಿಂದ ಎರಡುನೂರು ರೂಪಾಯಿನ ನೋಟುಗಳನ್ನು ತೆಗೆದು, ಆ ವಾರಾಂಗನೆಯ ಕಯ್ಯಲ್ಲಿಟ್ಟು ಬಹು ನಮ್ರತೆಯಿಂದ ಅವಳೆರಡು ಹಸ್ತಗಳನ್ನೂ ಹಿಡಿದುಕೊಂಡು "ನಾರೀ, ನಾನು ಕೇಳುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳಿ ನನ್ನ ಮನಸ್ಸಿನ ಭೀತಿಯನ್ನು ಸ್ವಲ್ಪ ಸಮಾಧಾನಗೊಳಿಸು. ನಾನು ಮತ್ತಿನ್ನಾವ ಸುಖಕ್ಕಾಗಿಯೂ ನಿನ್ನಾಶ್ರಯವನ್ನರಸಿ ಬರಲಿಲ್ಲ. ಈಗ ನನ್ನ ಪ್ರಾಣವು ಅತ್ಯಂತ ಘೋರಘಟನಾವಳಿಯಲ್ಲಿ ಸಿಲುಕಿದೆ! ನನ್ನನ್ನುದ್ಧರಿಸು!! ಆಜನ್ಮಪರ್ಯಂತರವೂ ನಿನ್ನನ್ನು ನನ್ನ ಮನೋದೈವವಾಗಿ ಪೂಜಿಸುವೆನಲ್ಲದೆ ನಾಡಾಡಿಯ ವೇಶ್ಯೆಯೆಂದು ಭಾವಿಸುವುದಿಲ್ಲ!" ಎಂದು ಕಾತರತೆಯಿಂದ ಕೇಳಿಕೊಳ್ಳುತಿರಲು ಅವಳು ಆತನ ದೀನವೃತ್ತಿಯನ್ನೂ ಕೈಯಲ್ಲಿರುವ ನೋಟುಗಳನ್ನೂ ನೋಡಿ, "ಏನು? ನನ್ನಿಂದೇನಾಗಬೇಕು? ನನ್ನ ಕೈಯಲ್ಲಾಗುವ ಮಟ್ಟಿಗೂ ಸಹಾಯಮಾಡುವೆನು." ಎಂದು ಹೇಳಿದಳು ಅವನು ಭೀತಿಯಿಂದ ನಡುಗುತ್ತ "ನನ್ನನ್ನು ಮೊದಲು ಆವುದಾದರೊಂದು ಗುಪ್ತ ಸ್ಥಳದಲ್ಲಿರಿಸು!" ಎಂದಂದು ಅಂಗಲಾಚಿಕೊಳ್ಳುತ್ತಿರಲು, ಆವಾರಾಂಗನೆಯು ಅವನಿಗೆ ಧೈರ್ಯವನ್ನು ಹೇಳುತ್ತ ಬೇರೊಂದು ಚಿಕ್ಕ ಕೊಠಡಿಗೆ ಕರೆದುಕೊಂಡು ಹೋದಳು.

ಅವನು ಸ್ವಲ್ಪ ಧೈರ್ಯವನ್ನು ತಳೆದು ತರುಣಿ! ಇಲ್ಲಿಗಾರಾದರೂ ಪೋಲೀಸಿನವರು ಬರಬಹುದೆ? ಆ ಪಿಶಾಚಸ್ವರೂಪನಾದ ಕಾಳೇ

ಚರಣನ ದೃಷ್ಟಿಗೆ ಬೀಳದಂತೆ ನನ್ನನ್ನು ಕಾಪಾಡಿ ಕಳುಹಿಸಲು ನಿನ್ನಿಂದ ಸಾಧ್ಯವೆ ? ಎಂದು ಕೇಳಲು ಅವಳು ಅದೇಕೆ ? ಪೋಲೀಸಿನವರಿಗೂ ಕಾಳೀಚರಣನಿಗೂ ತಾವಿಷ್ಟು ಭಯಬೀಳುವುದು ?

ವ್ಯಕ್ತಿ:— ಅಯ್ಯೋ ! ನಾನೇನು ಹೇಳಲಿ ? ಆ ಕಾಳೀಚರಣನು ನನ್ನನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿ ಬಿಟ್ಟನು ! ಅಬ್ಬಬ್ಬಾ ! ಆ ಹಿಂಸೆಯನ್ನು ನೆನೆಸಿಕೊಂಡರೆ,—ಆ ಕಾಳೀಚರಣನ ದೃಷ್ಟಿಗೆ ಸಿಕ್ಕಿದರೆ, ಹಲಸಿನ ಕಾಯನ್ನು ಕೊಚ್ಚುವಂತೆ ಕೊಚ್ಚಿಬಿಡುವವನಾಗುತ್ತಾನೆ ಎಂದನ್ನುವಷ್ಟರಲ್ಲಿಯೇ ಅವಳು, ನಿಮ್ಮನ್ನವನು ಹಿಡಿದು ಲಾಕಪ್ಪುಮಾಡಲು ಕಾರಣವೇನು ?

ವ್ಯಕ್ತಿ:— ಹೇಳಬಿಡಲೋ ? ಇಗೋ ನಿಜವನ್ನು ಹೇಳಿಬಿಡುತ್ತೇನೆ ! ನಾನು ನಿನ್ನೊಂದಿಗೆ ಸುಳ್ಳಾಡಲಾರೆ ! ನನ್ನನ್ನು ಕಾಪಾಡುವ ಭಾರ ನಿನ್ನದಾಗಿದೆ. ನೀನೇನು ಬೇಕಾದರೂ ಮಾಡು ! ನಾನು ವಿಲಾಸಿನಿಯ ಅಪಹರಣಕಾರಿಗಳ ಗುಂಪಿನವನು ! ನಮ್ಮ ಯಜಮಾನನು ಇಲ್ಲೊಬ್ಬನಿಗೆ ಅಯ್ದುನೂರು ರೂಪಾಯಿಗಳನ್ನು ವೆಚ್ಚಕ್ಕೆ ಕೊಟ್ಟು ಇಲ್ಲಿನ ಸಂಗತಿಗಳನ್ನೂ ಪೋಲೀಸಿನವರ ಸನ್ನಾಹವನ್ನೂ ತಿಳಿದುಕೊಂಡು ಬರುವಂತೆ ನನ್ನನ್ನು ಕಳುಹಿಸಿದನು. ಈ ಕಾಳೀಚರಣನು ಹೇಗೋ ನನ್ನನ್ನು ಕಂಡುಹಿಡಿದು ಲಾಕಪ್ಪುಮಾಡಿದನು, ಸಾಹಸದಿಂದ ತಪ್ಪಿಸಿಕೊಂಡು ಬರುತ್ತಿರಲು ದಾರಿಯಲ್ಲಿ ಇನಸ್ಪೆಕ್ಟರೂ ಭುಜಂಗನೂ ಸಹ ನನ್ನನ್ನು ಹಿಡಿಯುವ ಪ್ರಯತ್ನಮಾಡುತ್ತಿರಲು, ನಾನು ಇನಸ್ಪೆಕ್ಟರನ್ನು ರಿವಾಲ್ವರಿಂದ ಸುಟ್ಟು ತಪ್ಪಿಸಿಕೊಂಡು ಬಂದು ನಿನ್ನಾಶ್ರಯದಲ್ಲಿ ಬಿದ್ದಿರುತ್ತೇನೆ. ನನ್ನನ್ನು ಸುರಕ್ಷಿತವಾಗಿ ಕಾಪಾಡುವಭಾರ ನಿನ್ನದು ಎಂದು ಹೇಳಿದನು.

ಅವಳು ಸ್ವಲ್ಪಕಾಲ ಆಲೋಚಿಸಿ, ಭುಜಂಗರಾಯನು ನಿಮ್ಮನ್ನು ಬಿಟ್ಟು ಬಿಟ್ಟನೇ ? ಎಂದು ಕೇಳಲು ಅವನು ಅವಳ ಮುಖವನ್ನು ನೋಡುತ್ತಲೂ ಮುಖವನ್ನು ತಗ್ಗಿಸುತ್ತಲೂ, ನಿಟ್ಟುಸಿರುಗಳನ್ನು ಬಿಡುತ್ತಲೂ ಹೆಚ್ಚಿಗೆ ಮಾತನಾಡಲು ಅಸಮ್ಮತಿಯನ್ನು ಸೂಚಿಸಿದನು. ಇವನ ರೀತಿಯನ್ನು ನೋಡಿ ಆ ವಾರಾಂಗನೆಯು ನಿಮಗೂ ಭುಜಂಗ

ನಿಗೂ, ಪರಸ್ಪರ ಪರಿಚಯವಿರಬಹುದೆಂದು ತೋರುತ್ತದೆ! ಅದಕ್ಕಾಗಿ ನೀವು ಹೆದರಬೇಡಿ. ನಾನೂ ನಿಮ್ಮವಳೆಂದೇ ತಿಳಿದು ಆವಸಂಗತಿ ಯಿದ್ದರೂ ನಿರ್ಭಯವಾಗಿ ನನ್ನೊಂದಿಗೆ ತಿಳುಹಿಸಿ !!" ಎಂದಳು.

ವ್ಯಕ್ತಿ:—" ನೀವೇನು ಬೇಕಾದರೂ ಮಾಡಿ ! ನಾನೆಲ್ಲವನ್ನೂ ನಿಮ್ಮೊಂದಿಗೆ ಹೇಳಿಬಿಡುವೆನು, ನನ್ನನ್ನೂ ಭುಜಂಗನನ್ನೂ ಸಹ ಬಿಟ್ಟು ಕೊಡದೆ ಜಾಮೀಡಿಲೆ ನಮ್ಮ ಯಜಮಾನನಿಂದ ನಿಮಗೆ ಉತ್ತಮ ಬಹುಮಾನವನ್ನು ಕೊಡಿಸುವೆನು ಭುಜಂಗ ನನಗೆ ಪರಿಚಿತನು ಮಾತ್ರವೇ ಅಲ್ಲ ! ಅವನೇ ನಮ್ಮ ಎರಡನೆಯ ಯಜಮಾನನು !! "

ಅವಳು;—" ಹಾಗಾದರೆ ನೀವು ದುಡ್ಡು ತಂದುದಾರಿಗೆ ? "

ವ್ಯಕ್ತಿ;—" ಅವರಿಗೇನೆ "

ಅವಳು;—" ಈಗ ದುಡ್ಡೆಲ್ಲಿ ? ಅವರಿಗೆ ಕೊಟ್ಟರೇನು ! "

ವ್ಯಕ್ತಿ;—" ಇಲ್ಲ ! ನಾನೀಅವಸ್ಥೆಯಲ್ಲಿ ಸಿಕ್ಕಿರುವಾಗ ದುಡ್ಡನ್ನು ಹೇಗೆಕೊಡಲಿ ? "

ಅವಳು;—" ಹಾಗದರೆ ಅವರನ್ನು ಇಲ್ಲಿಗೆ ಕರೆಯಿಸಲೋ ? ಎಂದುದನ್ನು ಕೇಳಿ, ಅವನು ಮಹದಾಶ್ಚರ್ಯದಿಂದ, " ಏನು ? ಅವರಿಲ್ಲಿಗೆ ಬರುವರೇ ? ಹಾಗಾದರೆ ನೀವು ಅವರ,—" ಎಂದೆಂದು ಅವಳ ಮುಖವನ್ನು ನೋಡಲು, ಅವಳು ನಸುನಗುತ್ತ, " ಹೌದು ! ನೀವೇನೂ ಭಯಪಡಬೇಡಿರಿ. ಇದು ನಿಮ್ಮ ಮನೆ ! ಈ ದಾಸಿಯು ನಿಮಗೆ ಬೇಕಾದ ಸೇವೆಗೆ ಸಿದ್ಧಳಾಗಿರುತ್ತಾಳೆ ! " ಎನ್ನಲು, ಅವನು ಬಹಳ ಸಂತೋಷಿಸಿ, " ನಾನು ಭಾಗ್ಯಶಾಲಿಯೇನು ! ನನಗಿನ್ನು ಬ್ರಹ್ಮೇತಿಯ ಭಯವಿಲ್ಲ ! ಅವನಲ್ಲಿದ್ದರೆ ಅವನಂಥ ಹತ್ತು ಜನ ಕಾಳೀಚರಣರಿಗೂ ನಾನು ಹೆದರುವಂತಿಲ್ಲ !! " ಎಂದೆಂದು ಜೇಬಿನಿಂದ ಮತ್ತೇ ಮುನ್ನೂರು ರೂಪಾಯಿಗಳ ನೋಟನ್ನು ತೆಗೆದು ಅವಳ ಕೈಯಲ್ಲಿಟ್ಟು, " ಈಗ ನೋಡುವ ಸಂಭವ ವಿದ್ದರೆ ಸರಿ ! ಇಲ್ಲವಿದ್ದರೆ ಭುಜಂಗರಾಯರು ಇಲ್ಲಿಗೆ ಬಂದಾಗ ಯಜಮಾನರು ಕಳುಹಿಸಿ ಕೊಟ್ಟಿರುತ್ತಾರೆಂದು ಕೊಟ್ಟುಬಿಡುತ್ತೀರಾ ? ಇನ್ನೊಂದು ಸಂಗತಿಯನ್ನು ಕೇಳಬೇಕೆಂದಿರುತ್ತೇನೆ ಕೇಳಲೇ ?" ಎಂದನು.

ಅವಳು;— " ಅಡಿ ! ಅದಕ್ಕಡ್ಡಿಯೇನು ? ತಾವು ಸರ್ವಸ್ವತಂತ್ರರೆಂದು ಮೊದಲೇ ಹೇಳಿದೆನಲ್ಲ ! "

ವ್ಯಕ್ತಿ;—" ಈ ದಿವಸ ಕಾಳೀಚರಣನು ಇಲ್ಲಿಗೆ ಬರುವಸಂಭವವಿದೆಯೆಂದೂ ಹಾಗೆ ಬಂದರೆ ಅವನನ್ನು ಹಿಡಿದು ನಿರ್ನಾಮಮಾಡಲು ಪ್ರಯತ್ನಗಳು ಏರ್ಪಟ್ಟಿರುವುವೆಂದೂ ಕೇಳಿದೆನು. ದಿಟವೇ ? "

ಅವಳು;—" ಹೌದು ! ಎಲ್ಲವೂ ಸಿದ್ಧವಾಗಿದೆ ! ಅವನು ಮಾತ್ರ ಬರಲಿಲ್ಲ !!"

ವ್ಯಕ್ತಿ;—" ನಮ್ಮವರಾರಾದರೂ ಬಂದಿರುವರೋ ? "

ವೇಶ್ಯೆ;—"ಹೌದು ! ನಿಮ್ಮ ಮನುಷ್ಯ ಮತ್ತು ಶರದ್ದಾಸ್, ಇಬ್ಬರೂ ಬಂದಿರುತ್ತಾರೆ ! "

ವ್ಯಕ್ತಿ;—" ಅವರೆಲ್ಲಿರುವರು ? "

ವೇಶ್ಯೆ;—" ಇಲ್ಲೇಇರುವರು. ತಾವೇನಾದರೂ ಅವರನ್ನು ಕಾಣಬೇಕಾಗಿರುವುದೆ ? "

ವ್ಯಕ್ತಿ;—" ಹೌದು ! " ಮುಂದೆ ಒದಗಬಹುದಾಗಿರುವ ಗಲಭೆಗೆ ಮುಂಚೆಯೇ ನಾನು ಅವರೊಂದಿಗೆ ಮಾತನಾಡಿದರೆ ಚೆನ್ನಾಗಿತ್ತು !

ವೇಶ್ಯೆ ;—" ಅಗತ್ಯವಾಗಿ ಆಗಲಿ ! "ಎಂದೆಂದು ಅವರಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಲು ಪ್ರಯತ್ನಿಸಲು. " ಓಹೋ ! ಏನಾಮನೆಯಲ್ಲಿಯೋ ಅವರಿರುವದು ? ನಾನೇ ಮಾತನಾಡಿಕೊಂಡು ಬರುತ್ತೇನೆ. ಆ ಪಿಶಾಚಿ ಈಗ ಬಂದರೂ ಬರಬಹುದು. " ಎಂದು ಹೇಳಿದನು. ವೇಶ್ಯೆಯು " ಸರಿ ! ಹಾಗಾದರೆ ನಾನು ಆ ಕೆಲಸವನ್ನು ನಾನು ನೋಡಿಕೊಳ್ಳುತ್ತೇನೆ !" ಎಂದು ಹೇಳಿ, ಅವನನ್ನು ಅಲ್ಲಿಯೇಬಿಟ್ಟು, ಬೀದಿಯಕಡೆ ಬಂದಳು. ಆ ವೇಳೆಗೆ ಆರೋ ತನ್ನ ಮನೆಯಕಡೆ ಬರುತ್ತಿರುವದನ್ನುಕಂಡು, ಕಾಳೀಚರಣನೇ ಇರಬಹುದೆಂದು ಆ ವೇಶ್ಯೆಯು ಅತಿ ಸಂಭ್ರಮದಿಂದಿರಲು, ಅವಳನ್ನು ಸಮೀಪಿಸಿದ ವ್ಯಕ್ತಿಯ ಠಾಣೆಯಜಮಾನನಾಗಿದ್ದನು ! ವೇಶ್ಯೆಯು ಅವನನ್ನು ಕಂಡು ಭೀತಳಾದಳು. ಒಳಗೆಹೋಗಬೇಕೆಂದು ಆಲೋಚಿಸಿದಳು. ಆದರೂ ಸ್ವಲ್ಪ ಧೈರ್ಯಗೊಂಡು ಅವನನ್ನು ವಿಸ್ಮಯದಿಂದ ಮಾತನಾಡಿಸಿದಳು. ಜಮಾದಾರನು ಅರಳಿದ ಕಣ್ಣುಳ್ಳವನಾಗಿ ಸ್ವಲ್ಪ

ಘುಟ್ಟಿಯಾಗಿ " ಇಷ್ಟು ಹೊತ್ತಿನವರಿಗೆ ಆರಿಗಾಗಿ ಕಾಯ್ದುಕೊಂಡಿರುವಿ ! ಇಷ್ಟು ಹೊತ್ತಿನಮೇಲೆ ಇಲ್ಲಿಗೆ ಬರಬೇಕಾದರೆ ಆರಾದರೂ ಪೋಕರಿಗಳಲ್ಲದೆ ಸಂಭಾವಿತರು ಬರುವಂತಿಲ್ಲ ! ಈಗ ಒಳಗಾರಾರಿರುತ್ತಾರೆ ? ಈಗತಾನೆ ಇಕ್ಸ್ಪೆಕ್ಟರನ್ನು ಬಂದೂಕಿನಿಂದ ಹೊಡೆದ ಅಪರಾಧಿಯೊಬ್ಬನು ನಿನ್ನ ಮನೆಗೆ ಬಂದಂತೆ ವರ್ತಮಾನವನ್ನು ತಿಳಿದು ಬಂದಿರುತ್ತೇನೆ. ಈಗ ಅವನೆಲ್ಲಿ ? ತೋರಿಸು ! ! ! ಎಂದು ಆಜ್ಞಾಪಿಸಲು, ಆ ವೇಶ್ಯೆಯು ಬಹು ಭೀತಳಾಗಿ ಗಡಗಡನೆ ನಡುಗುತ್ತ, " ಅಯ್ಯೋ ಆರೂ ಬಂದಿಲ್ಲ; ಆರೂ ಇಲ್ಲದಿರುವುದರಿಂದಲೇ ಪದ್ಧತಿಯ ಮೇರೆ ಇದುರುನೋಡುತ್ತೇನೆ " ಎಂದು ಮೊದಲಾಗಿ ಅಂಗಲಾಚಿಕೊಳ್ಳಲು, ಜಮಾದಾರನು ಅವಳಮಾತಿಗೆ ಮರುಗದೆ, ಸಂಜ್ಞೆಮಾಡಲು, ನಾಲ್ಕಾರು ಜನ ಪೋಲೀಸಿನವರು ಬಂದು ಸೇರಿದರು. ಜಮಾದಾರನು ಮನೆಯಿಂದ ಹೊರಹೊರಡಲು ಆರಿಗೂ ಅವಕಾಶವನ್ನುಕೊಡಕೂಡದೆಂದು ಪೋಲಿಸಿನವರಿಗೆ ಆಜ್ಞೆಯನ್ನಿತ್ತು, ತಾನು ಮನೆಯುಒಳಗೆ ಹೋದನು. ಈ ಗಲಭೆಯನ್ನು ಕಂಡು ಮನ್ಸೂ ಖುದ್ದುಸ್ ಮತ್ತು ಆ ವ್ಯಕ್ತಿಯು ಇವರೆಲ್ಲರೂ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದನ್ನು ಕಂಡು ಪೋಲಿಸಿನವರು ಮೇಲ್ಬಿದ್ದು ಹಿಡಿಯುವಷ್ಟರಲ್ಲಿಯೇ, ಆ ಪರಿಚಿತನು ತನ್ನೆದುರಾಳಿಯನ್ನು ಪಿಸ್ತೂಲಿನಿಂದ ಹೊಡೆದು ತಪ್ಪಿಸಿಕೊಂಡೇ ಬಿಟ್ಟನು.

ದಶಮ ಗುಚ್ಛ.

ಮರುದಿನ ವಿಚಾರಣೆಯಲ್ಲಿ ಮನ್ಸೂ ಒಬ್ಬ ಪ್ರಯಾಣಸ್ಥನಾಗಿ ಆ ಊರಿಗೆ ಬಂದಿದ್ದವನು, ತನ್ನ ಆಳು ಖುದಿಸನೊಂದಿಗೆ ಅವಳ ಮನೆಯಲ್ಲಿಳಿದಿದ್ದೆನೆಂತಲೂ, ಹಿಂದಿನ ರಾತ್ರಿಯ ಗಲಭೆಯಲ್ಲಿ ತಾನು ಹೆದರಿ ಓಡಿ

ಹೋಗಬೇಕೆಂದಿದ್ದ ಸಮಯದಲ್ಲಿ ಸಂದೇಹದಿಂದ ಪೋಲೀಸಿನವರು ಹಿಡಿದರಲ್ಲದೆ. ಅವರು ಆವವಿಧವಾದ ಅಪರಾಧಿಯೂ ಅಲ್ಲವೆಂದೂ, ಅಪರಾಧಿಯು ಮತ್ತೊಂದು ಖೂಪಿಯನ್ನು ಮಾಡಿ ಓಡಿಹೋದನೆಂದೂ, ವ್ಯಕ್ತವಾದುದರಿಂದ ಅವರೀರ್ವರನ್ನೂ ಪೋಲೀಸಿನವನು ಬಿಟ್ಟುಬಿಟ್ಟನು

ಅವರೀರ್ವರೂ ಬಹು ಸಂತೋಷದಿಂದ ಹೋಗುತ್ತಿರಲು, ಮನ್ನುವು "ಲೋ! ನೋಡಿದ್ಯಾ? ಹೇಗಿದೆ? ಈ ದಿವಸ ನಮ್ಮದೆಷ್ಟು ಒಳ್ಳೇ ಅದೃಷ್ಟ! ಸದ್ಯ ಆ ಮಹರಾಯನು ಓಡಿಹೋಗುವಾಗ ಅವನ ವಸ್ತ್ರಗಳನ್ನು ಬಿಸುಟು ಹೋದುದರಿಂದ ಈ ದಿನ ನಮ್ಮ ಪರಿಣಾಮವು ಗಟ್ಟಿಗಾಯಿತು. ಸಾಲದುದಕ್ಕೆ ಜೇಬಿನಲ್ಲಿ ಇನ್ನೂ ಹತ್ತಾರು ರೂಪಾಯಿಗಳು ಇದ್ದೇ ಇವೆ. ಆದುದರಿಂದ ನಾವು ಈಗಲೇ ಓಡಿಹೋಗದೆ ಸಾಯಂಕಾಲದ ವರೆಗೂ ಇಲ್ಲಿಯೇ ಇದ್ದು ನಮ್ಮ ವಿಚಾರದಲ್ಲಿ ಅರಿಗೂ ಯಾವವಿಧವಾದ ಅನುಮಾನವೂ ತೋರದಹಾಗೆ ರಾತ್ರಿ ಹೊರಟುಹೋಗಿಬಿಡೋಣ!" ಎಂದೆಂದು ಮಾತನಾಡಿಕೊಳ್ಳುತ್ತಾ ಬಂದು ಹೋಟಲನ್ನು ಪ್ರವೇಶಿಸಿದನು.

ಸಾಯಂಕಾಲ ಅವರೀರ್ವರೂ ಹೋಟೆಲಿಂದ ಹೊರಟರು ಹೋಗುತ್ತಾ ದಾರಿಯಲ್ಲಿದ್ದದೊಂದು ಹೆಂಡದಂಗಡಿಯನ್ನು ಹೊಕ್ಕು, ಮಹದಾನಂದದಿಂದ ಯಥೇಚ್ಛವಾಗಿ ಕುಡಿದು ಮುಂದುವರಿದು. ಅವರೀರ್ವರಲ್ಲಿ ಮನ್ನುವು ವಿಶೇಷವಾಗಿ ಕುಡಿದಿದ್ದನಾದುದರಿಂದ ಸ್ವಲ್ಪಹೊತ್ತಿನಲ್ಲಿಯೇ ಸುರಾದೇವಿಯು ಅತಿತೀವ್ರನಾದ ಪ್ರತಿಮೆಯಿಂದ ಅಧಿಕಾರವನ್ನು ಮಾಡತೊಡಗಿದಳು. ಇವರೀರ್ವರೂ ಹೀಗೆಯೇ ಮತ್ತರಾಗಿ ಹೋಗುತ್ತಿರಲು, ಅಷ್ಟರೊಳ್ ಬೇರೊಂದು ವ್ಯಕ್ತಿಯು ಬಂದು ಅವರ ಜೊತೆಯಾಯಿತು.

ಹೊಸದಾಗಿ ಬಂದ ವ್ಯಕ್ತಿಯು ಮೊದಲಿನವರಿಬ್ಬರು ಒಬ್ಬೊಬ್ಬರೊಂದೊಂದು ಕಡೆ ಮನಸ್ವಿಯಾಗಿ. ಮಾತನಾಡಿಕೊಳ್ಳುತ್ತಾ ಪ್ರಜ್ಞೆಯಿಲ್ಲದೆ ಹೋಗುತ್ತಿರುವದನ್ನು ನೋಡಿ ಸಮಯಾನ್ವೇಷಿಯಾಗಿದ್ದು, ಬಹು ಸಾಂದ್ರವಾಗಿ ಬೆಳೆದಿದ್ದ ಮರಳಗುಂಪಿನಲ್ಲಿ ಪ್ರವೇಶಿಸಿದ ಕೂಡಲೆ ಬಹಳ ಹಿಂದಾಗಿ ಹೋಗುತ್ತಿದ್ದ ಪ್ರಜ್ಞಾಹೀನನಾಗಿದ್ದ ಮನ್ನು

ವನ್ನು ಹಿಡಿದು ಸಮೀಪದ ಮರಗಳ ಗುಂಪಿನಲ್ಲಿ ಬೇರೇಕಡೆ ತೆಗೆದುಕೊಂಡು ಹೋಗಿ ಉರುಳಿಸಿ ಇನ್ನೊಬ್ಬನನ್ನು ಹಿಡಿಯಲು ಹೋಗಬೇಕೆಂದಿರುವಷ್ಟರಲ್ಲಿ ಆ ಕಡೆ ಯಾರೋ ಬರುತ್ತಿದ್ದಂತೆ ಕಂಡುಬರಲು, ನಿಬಿಡವಾಗಿದ್ದ ಪೊದೆಗಳ ಮರೆಯಲ್ಲಿ ಅವಿತುಕೊಂಡನು.

ಆ ಕಡೆ ಎರಡು ವ್ಯಕ್ತಿಗಳು ಬರುತ್ತಿದ್ದುವು. ಆ ವ್ಯಕ್ತಿಗಳು ಅಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದು ಮನಸ್ವಿಯಾಗಿ ಮಾತನಾಡಿಕೊಳ್ಳುತ್ತಿದ್ದ ಮನ್ನುವನ್ನು ಕಂಡು, ಭಯಚಕಿತರಾದರು. ಅವನು ಮಾತನಾಡುವುದನ್ನು ನಿಲ್ಲಿಸಬೇಕೆಂದು ಪ್ರಯತ್ನಪಟ್ಟರು. ಪ್ರಯತ್ನವು ನಿಷ್ಫಲವಾಯಿತು. ಅವನನ್ನು ಹಾಗೆಯೇ ಬಿಟ್ಟು ಹೋಗುವುದಾದರೆ ಜ್ಞಾನಶೂನ್ಯನಾದುದರಿಂದ ಏನೇನು ಮಾತನಾಡುವನೋ! ಆದುದರಿಂದ ಅವನನ್ನು ಅಲ್ಲಿಂದ ಸಾಗಿಸಿಕೊಂಡು ಹೋಗುವುದೇ ಮೇಲೆಂದು ಆಲೋಚಿಸಿ ಇಬ್ಬರೂ ಅವನನ್ನು ಸಾಹಸದಿಂದ ಎತ್ತಿಕೊಂಡು ಹೊರಟರು.

ಪೊದೆಗಳ ಮರೆಯಲ್ಲಿದ್ದ ವ್ಯಕ್ತಿಯು ಅವರನ್ನೇ ಹಿಂಬಾಲಿಸಿತು.

ಹತ್ತಹತ್ತಿರ ಎರಡು ಮೈಲಿಗಳಷ್ಟು ದೂರ ಹೋಗಿ ಸಮೀಪದಲ್ಲಿ ನೋಟಕರ ದೃಷ್ಟಿಗೆ ಭಯಂಕರ ಕಾನನವೆಂದು ವ್ಯಕ್ತವಾಗುತ್ತಿದ್ದ ಗಿಡಮರ ಪೊದೆಗಳ ಮಧ್ಯದಲ್ಲಿದ್ದ ಒಂದು ಮುರುಕು ಮನೆಯನ್ನು ಪ್ರವೇಶಿಸಿ ಮನ್ನುವನ್ನು ಒಂದು ಕಡೆ ಮಲಗಿಸಿದರು.

ಅವರಲ್ಲೊಬ್ಬನು, "ಸಾಕಪ್ಪಾ! ಈ ಕೆಲಸ! ಚಾಕರಿ! ಧೈರ್ಯವಾಗಿ ಕಣ್ಬೆಳಕಿನ ಹೊತ್ತಿನಲ್ಲಿ ಸ್ವಲ್ಪ ದೂರ ತಿರುಗಾಡಿಕೊಂಡು ಬರೋಣವೆಂದರೂ ಮಾರ್ಗವಿಲ್ಲ!! ಹೆಜ್ಜೆ ಹೆಜ್ಜೆಗೂ ಭಯ!!! ಸಾಲದುದಕ್ಕೆ ಇದೊಂದವಸ್ಥೆ! ಸಾಕಪ್ಪಾ!! ನಮ್ಮಪ್ಪನಾಣೆಗೂ, ಭಗವತ್ಸಾಕ್ಷಿಯಾಗಿಯೂ, ಈ ವೇಳೆಗೆ ಈ ತೊಂದರೆಯಿಂದ ಕಳೆದು ಉಳಿದರೆ ಈ ಕೆಟ್ಟ ಕೆಲಸಕ್ಕಿಂತಲೂ ಕಷ್ಟಪಟ್ಟು ಕೂಲಿಯಿಂದ ಹೊಟ್ಟೆಯಾಡು ನೋಡಿಕೊಳ್ಳುವುದು ಸಹಸ್ರಪಾಲು ಮೇಲಪ್ಪ!" ಎಂದಂದನು.

ಎರಡನೆಯವನು :—"ಅಹಹ! ಎಂತಹ ಧೀರ!! ಏನು ವಿವೇಚನಾಶಕ್ತಿ! ನಿನ್ನಂತಹ ಕೆಲವರನ್ನು ಇಟ್ಟುಕೊಂಡು ಕಾರ್ಯಾರಂಭ ಮಾಡಿದರೆ ಸಮಯದಲ್ಲಿ ಒಳ್ಳೇ ಸಹಾಯ ಮಾಡುತ್ತೀರಿ" ಎಂದಂದನು.

ಈ ಮಾತುಗಳನ್ನು ಕೇಳಿ ಮೊದಲನೆಯವನಿಗೆ ಸ್ವಲ್ಪ ಸಿಟ್ಟು ಬಂದಂತೆ ತೋರುತ್ತಿದೆ! ಅವನು "ಹೌದಯ್ಯಾ! ಹೌದು!! ನನ್ನಂತಹ ಅಂಜುಬುರುಕರಿಂದ ಏನಾಗುವುದು? ನಿನ್ನಂತಹ ಧೀರರು, ಇಂತಹ ಅಸಾಧಾರಣ ಸಾಮರ್ಥ್ಯವುಳ್ಳವರು,— ಎಂದಂದು ಮನುಷ್ಯನ ಕಡೆ ಕೈತೋರಿಸಿ "ಇದ್ದರೆ ಸಾಕು! ಎಂತಹ ಆಗಬಾರದ ಕೆಲಸವಾದರೂ ಅತ್ಯಲ್ಪಕಾಲದಲ್ಲಿ ಪೂರ್ತಿಯಾಗುತ್ತೆ. ಹೀಗೆ ಮನಸ್ವಿಯಾಗಿ ಕುಡಿದು ಹುಚ್ಚುಹುಚ್ಚಾಗಿ ಬೊಗಳುತ್ತಿರುವಾಗ ಕಾಳೀಚರಣನಂತಹವನೇನಾದರೂ ಕಂಡು ಇಂತಹ ವಿಚಿತ್ರಮೃಗವು ಅವನ ಬಲೆಯಲ್ಲಿ ಬಿದ್ದರೆ ಆಗದರ ಪರಿಣಾಮವು ಬಹಳ ನೆಟ್ಟಗಾಗುತ್ತೆ. ನಾನೇನಯ್ಯಾ ಕೈಯಲ್ಲಾಗದವನು!" ಎಂದಂದನು.

ಎರಡನೆಯವನು :—"ಹೌದಪ್ಪಾ! ಏನು ಮಾಡೋದಕ್ಕಾಗ್ತದೆ? ಎಲ್ಲವೂ ಅಭ್ಯಾಸ! ಕುಡಿದು ಪ್ರಜ್ಞೆಯಿಲ್ಲದೆ ಬಿದ್ದ ಕಾಲದಲ್ಲಿ ವಿವೇಚನಾ ಶಕ್ತಿಯಿರುವುದುಂಟೇನು? ಸದ್ಯಕ್ಕೆ ಇವನೊಬ್ಬನಲ್ಲದೆ ನಮ್ಮ ಗುಂಪಿನಲ್ಲಿನ್ನಾರಪ್ಪಾ ಇಂತಹ ಕುಡಿಕರು. ಇವನನ್ನು ಅನೇಕ ವೇಳೆ ಗುಂಪಿನಿಂದ ಹೊರಡಿಸಬೇಕೆಂದು ಎಷ್ಟೋ ಪ್ರಯತ್ನ ಮಾಡಿದೆವು. ಒಂದೊಂದು ವೇಳೆ ಈ ಕುಡಿತದ ಮಹತ್ವದಿಂದ ಅನೇಕ ಕೆಲಸಗಳು ಕೆಟ್ಟು ಹಾಳಾಗಿವೆ. ಎಂತೆಂತಹ ಗುಟ್ಟುಗಳೂ ಬಯಲಾಗಿವೆ! ಇಷ್ಟಾದರೂ ಮುಂಡೇಮಗನ ಎದೆ ಕಲ್ಲಿಗಿಂತಲೂ ಗಟ್ಟಿ ನೋಡಯ್ಯಾ! ಎಂತಹ ಕೆಲಸಕ್ಕಾದರೂ ಎದೆ ಚಾಚಿಕೊಂಡು ನಿಲ್ಲುತ್ತಾನಲ್ಲದೆ ಹಿಂದೆಗೆಯುವುದಿಲ್ಲ!! ಅದಕ್ಕಾಗಿಯೇ ನಮ್ಮ ಯಜಮಾನನೂ ಕೂಡ ಇವನನ್ನು ಬಿಡುವ ವಿಷಯದಲ್ಲಿ ಹಿಂದೆಗೆಯುವುದು."

ಮೊದಲನೆಯವನು :—"ಮುಂಡೇಗಂಡ ಧೈರ್ಯಶಾಲಿಯೇನೋ ಹೌದು! ಅವರನ್ನು ಹಿಡುಕೊಂಡು ಒರೋದಿವಸ ನೋಡ್ದಿಯ? ಎಂತಹ ಸಾಹಸ ಮಾಡ್ದ! ಆ ಹುಡುಗಿಯರನ್ನು ಎರಡು ಸಣ್ಣ ಕೂಸುಗಳನ್ನು ತಂದಂತೆ ತಂದನಲ್ಲ! ಏನು ಮಾಡೋದು! ಅನೇಕ ಚಿತ್ತಾರಗಳನ್ನು ಬಂದು ಮಸಿ ನುಂಗಿತು ಎಂಬ ಗಾದೆಯಂತೆ ಈ ಕುಡಿತ ವೊಂದಿಲ್ಲದಿದ್ದರೆ ಎಲ್ಲವೂ ನೆಟ್ಟಗಿರುತ್ತಿತ್ತು.

ಎರಡನೆಯವನು ;—" ಅದಕ್ಕೇನು ಮಾಡುವುದು ? ನಮ್ಮ ಕೈಯುಲ್ಲಾದಷ್ಟು ಎಚ್ಚರಿಕೆಯಿಂದ ನೋಡುತ್ತಿರಬೇಕು. ನಮ್ಮ ಅದೃಷ್ಟವಶಾತ್ ಇವನು ಈ ದಿವಸ ಕಾಡಿನಲ್ಲಿ ಬಂದು ಬಿದ್ದು ನಮ್ಮ ಕೈಗೆ ಸಿಕ್ಕಿದ್ದರಿಂದ ಸರಿಹೋಯಿತು. ಮುಂಡೇಗಂಡ ಕುಡಿಯೋದಂದ್ರೇ ಗೊತ್ತು ಗುರಿಯೇ ಬೇಡವೆ ? ಕೈಯಲ್ಲೆಷ್ಟು ದುಡ್ಡಿರುವುದೋ ಅಷ್ಟಕ್ಕೂ ಕುಡಿಯುವುದಲ್ಲದೆ ಬೇರೆ ಯೋಚನೆಯೇ ಇಲ್ಲ ! ಒಂದು ವೇಳೆ ಊರೊಳಗೇ ಬಿದ್ದು ಬಿಟ್ಟಿದ್ದರೋ ! "

ಮೊದಲನೆಯವನು ;—" ನನಗೇನೋ ಈಗಲೂ ಅನುಮಾನವೆ ? ಈ ಕುಡಿತದ ಸಂಭ್ರಮದಲ್ಲಿ ಯಾರ್ಯಾರೊಂದಿಗೆ ಏನೇನು ಹೇಳಿರುವನೋ ! ಏನೋ ! ! ಅಲ್ಲಿ ಎಷ್ಟು ಹೊತ್ತಿನತನಕ ಹೀಗೆ ಹರಟುತ್ತಲೇ ಇದ್ದನೋ !"

ಎರಡನೆಯವನು;—" ಸರಿ ! ಸರಿ !! ನಿನಗಾವಾಗಲೂ ಇಲ್ಲದ ಹೆದರಿಕೆಯೆ! ಅವನೇನು ತೀರ ಕೆಲಸಕ್ಕಬಾರದವನೆಂದು ತಿಳಿದುಕೊಂಡೆಯೋ? ಪ್ರಜ್ಞೆಯಿಲ್ಲದ ವೇಳೆಯಲ್ಲಿ ನಾನು ಹೇಳಲಾರೆ ! ಸರಿಯಾಗಿದ್ದಾಗ ಅವನಿಂದೇನಾದರೂ ಒಂದು ಸಂಗತಿಯನ್ನು ತಿಳಿಯಲು ಬ್ರಹ್ಮನಿಂದ ಸಾಧ್ಯವೇ? ಈ ದುರ್ವಿದ್ಯದಲ್ಲಿ ಬಹಳ ಚೆನ್ನಾಗಿ ತಯಾರಾದವನು ! ಅವನಂಗಾಂಗಗಳನ್ನೆಲ್ಲಾ ಕತ್ತರಿಸಿದರೂ ಕೂಡ " ಇಲ್ಲ " ಎಂಬುದೊಂದಲ್ಲದೆ ಬೇರೆ ಮಾತು ಅವನ ಬಾಯಿಯಿಂದ ಎಂದಿಗಾದರೂ ಹೊರಡಲ್ಪಟ್ಟೀತೆಂದು ಭಾವಿಸುವಿಯೋ ? ಆದರೆ,—ಕುಡಿದಹೊತ್ತಿನಲ್ಲಿ ಮಾತ್ರ,—ಈ ದಿವಸ ನನಗಾವ ವಿಧವಾದ ಅನುಮಾನವೂ ಇಲ್ಲ ! ಈ ಹೊತ್ತಿನಲ್ಲಿ ಈ ಕಾಡಿನೊಳಗೆ ಪ್ರವೇಶಿಸಲು ಯಾವಪಿಶಾಚಿತಾನೆ ಪ್ರಯತ್ನಪಟ್ಟೀತು ? ತಥಾಪಿ ಮನುಷ್ಯರು ಆಯುಃಪರಿಮಿತಿ ಸಮೀಪಿಸಿದ್ದರೇ ಇಲ್ಲಿಗೆ ಬರಬೇಕು !

ಮೊದಲನೆಯವನು,—"ನೀನೇನೋ ಹಾಗೆ ತಿಳಿದುಕೊಂಡಿರಬಹುದು. ಆ ಸಹಸ್ರ ಪಿಶಾಚಿಗಳಿಗಿಂತಲೂ ಶತಾಧಿಕನಾದ, ಏಕೇ, ಅಮೃತ್ಯುಸ್ವರೂಪನಾದ ಕಾಳೀಚರಣನು ಏತಕ್ಕಾದರೂ ಹಿಂಜರಿಯುವನೆಂದು ಭಾವಿಸಿರುವಿಯೋ ? ಮೇಲಿಂದಮೇಲೆ ಭುಜಂಗನು ಇವನ ಸಾಹಸವಿಚಾರಗಳಲ್ಲಿ ಎಚ್ಚರಿಸುತ್ತಿರುವನಲ್ಲದೆ ಈಗ ನಾಲ್ಕು ದಿವಸಗಳ ಕೆಳಗೆ ಆ ಕೆರೆಯ ಸಮೀಪದಲ್ಲಿ ಅವನು ಮಾಡಿದ ಹಾವಳಿಯನ್ನೇ ಮರಿಯುವು

ದಕ್ಕಿಲ್ಲ ! ಈಗಾಗಲೆ ಇಲ್ಲಿಗಾರು ಬರುವರೆಂದು ಹೇಳುವಿಯಲ್ಲ ! ಆ ಕಾಳೀಚರಣನಿಗಿಂತ ಹೆಚ್ಚಿನ ಕಳ್ಳನಿಲ್ಲ. ಕ್ರೂರಮೃಗವಿಲ್ಲ, ಎಂತಹ ಕೊಲೆಗಾರರಲ್ಲಿಯೂ ಅಂತಹ ಧೈರ್ಯವಿಲ್ಲ ! ಪಿಶಾಚಿಯೂ ಇಲ್ಲ ! ಬ್ರಹ್ಮರಾಕ್ಷಸನೂ ಇಲ್ಲ !! ಅವನು ಎಲ್ಲದಕ್ಕೂ ಮೀರಿದ ಅಂತ್ಯಕಾಲದ ಮಾರಿ !! " ಎಂದು ಹೇಳುವಷ್ಟರಲ್ಲಿಯೇ ಹೊರಗೆ ಆರೋ ಬಾಗಿಲನ್ನು ತಟ್ಟಿದಂತೆ ಶಬ್ದವಾಯಿತು. ಈ ವ್ಯಕ್ತಿಯು ಭಯಭ್ರಾಂತರಾಗಿ ಅತ್ತಿತ್ತ ನೋಡುವಷ್ಟರಲ್ಲಿಯೇ " ನಿನ್ನೆ ರಾತ್ರಿ ಊರೊಳಕ್ಕೆ ಹೋಗಿದ್ದವರ ದೆಸೆಯಿಂದ ನಾವು ಕೆಟ್ಟೆವು ! ಗುಟ್ಟೆಲ್ಲಾ ಹೊರಬಿದ್ದಿತು !! ಯಜಮಾನನು ಪೋಲೀಸಿನವರ ವಶವಾದನು. ಎಲ್ಲೆಲ್ಲಿಯೂ ಪೋಲೀಸಿನವರು ತುಂಬಿಬಿಟ್ಟಿದ್ದಾರೆ ! ಇಗೋ ನಾನು ಹೊರಟೆ !! ಜೀವದಮೇಲೆ ಆಶೆ ಇದ್ದರೆ ಮೊದಲು ನಿಮ್ಮ ಪ್ರಾಣನ್ನು ನೋಡಿಕೊಳ್ಳಿರಿ ! " ಎಂದು ಗಾಬರಿಯಿಂದ ಆರೋ ಹೇಳಿ ಓಡಿಹೋದಂತಾಗಲು, ಅವರು ಗಾಬರಿಯಿಂದ ಓಡಿಹೋಗಬೇಕೆಂದು ಬಾಗಿಲನ್ನು ತೆರೆದು ಹುಷಾರ್ ! ಒಂದು ಹೆಜ್ಜೆ ಮುಂದಕ್ಕೆ ಇಟ್ಟರೂ ಕೊಂದು ಬಿಡುವೆನು !! ಅಲ್ಲಾಡಿದರೂ ಸಹ ಮರಣವು ಸಿದ್ಧ !!! ಜೋಕೆ !! ಎಂದು ಉಚ್ಚಸ್ವರದಿಂದ ಹೇಳುತ್ತ ತತ್‌ಕ್ಷಣವೇ ಒಂದು ವ್ಯಕ್ತಿಯು ಬಾಗಿಲಲ್ಲಿ ಅಡ್ಡವಾಗಿ ನಿಂತಿತು.

ವ್ಯಕ್ತಿಯು ಆಯುಧಪಾಣಿ ! ಅವರೀರ್ವರೂ ಹೆದರಿ ಚೈತನ್ಯಶೂನ್ಯರಾಗಿಬಿಟ್ಟರು !! ಆ ವ್ಯಕ್ತಿಯು ಆರಾರು " ನಲ್ಲಿ " ಗಳುಳ್ಳ ಪಿಸ್ತೂಲುಗಳೆರಡನ್ನು ಕೈಗಳಲ್ಲಿ ಹಿಡಿದು ಇಬ್ಬರಿಗೂ ಗುರಿಯಿಟ್ಟು " ಈಗೇನು ? ಕಾಳೀಚರಣನು ಪಿಶಾಚನೋ ಬ್ರಹ್ಮರಾಕ್ಷಸನೋ ಮಾರಿಯೋ ಅಥವ ಇವೆಲ್ಲಕ್ಕೂ ಮೀರಿದ ಅನಾಮಧೇಯನೋ ? ಇಲ್ಲವೇ ಪಾತಕಿಗಳ ಘಾತಕನೋ? ಏನು?" ಎಂದು ಹೇಳುತ್ತಾ ಅವರ ಹತ್ತಿರಕ್ಕೆ ಹೋದನು ! ಅವರೀರ್ವರೂ. ಉಪಾಯರಹಿತನಾಗಿ ಆ ವೇಳೆಯಲ್ಲಿ ತಾನವನಧೀನರಾಗುವದಲ್ಲದೆ ಅನ್ಯಥಾ ಮಾರ್ಗವೇ ಇಲ್ಲವೆಂದು ತಿಳಿದು ಕೈಗಳನ್ನು ಚಾಚಿಕೊಂಡು ಮುಖವಡಿಯಾಗಿ ನೆಲದ ಮೇಲೆ ಮಲಗಿಬಿಟ್ಟರು !

ಕಾಳೀಚರಣನು ಅವರಿಗೆ ಅತ್ತಿತ್ತಲಲುಗಲೂ ಸಹ ಅವಕಾಶವನ್ನೀಯದೆ ಅವರಿಗೆ ಕೈಕೋಳಗಳನ್ನು ತೊಡಿಸಿ, ಕಾಲುಗಳನ್ನು

ಬಂಧಿಸುವಷ್ಟರಲ್ಲಿಯೇ, ಸುರಾದೇವಿಯ ಅನುಗ್ರಹವು ಸ್ವಲ್ಪಕಡಿಮೆಯಾಗಿ ಅಲ್ಲಿ ನಡೆಯುತ್ತಿದ್ದುದನ್ನೆಲ್ಲಾ ನೋಡುತ್ತಲೇ ಮಲಗಿದ್ದ ಮನ್ನುವು ಇದು ತನಗೆ ಸರಿಯಾದ ಸಮಯವೆಂದೆಣಿಸಿ ಕಾಳೀಚರಣನ ಮೇಲೆ ನೆಗೆದನು ಕಾಳೀಚರಣನು ಆಶ್ಚರ್ಯಚಕಿತನಾಗಿ ಸ್ವಲ್ಪ ಓರೆಯಾಗಲು, ಮನ್ನುವು ಗುರಿತಪ್ಪಿ ಕಾಳೀಚರಣನ ಮೇಲೆ ಬೀಳದೆ ಬಂಧಿಸಲ್ಪಟ್ಟವರಲ್ಲೊಬ್ಬನ ಮೇಲೆ ಬಿದ್ದನು. ಆ ಪೆಟ್ಟಿಗೆ ಬಂದಿಯು ಚೀತ್ಕರಿಸಿದನು.

ಮನ್ನುವು ಏಳುವುದಕ್ಕೆ ಕೂಡ ಅವಕಾಶಕೊಡದಂತೆ ಕಾಳೀಚರಣನು ಅವನ ಮೇಲೆ ಬಿದ್ದು ಅವನನ್ನು ಹಿಡಿದನು. ಮನ್ನೂ ಕಾಳೀಚರಣರೀರ್ವರೂ ಪರಸ್ಪರ ಬಲಪ್ರಯೋಗದಿಂದ ಹೋರಾಡಿದರು. ಆದರೂ ಕಾಳೀಚರಣನ ಹಿಡಿತದಿಂದ ತಪ್ಪಿಸಿಕೊಳ್ಳಲು ಮನ್ನುವಿಗೆ ಸಾಧ್ಯವಾಗಲಿಲ್ಲ! ಮನ್ನುವು ಎಂದಾದರೂ ತನ್ನೆದುರಾಳಿಯನ್ನು ಕೊಲ್ಲಬೇಕೆಂದು ತನ್ನುಡಿಯಲ್ಲಿದ್ದ ಚೂರಿಯನ್ನು ಕಾಳೀಚರಣನ ಹೃದಯದಲ್ಲಿ ಹುದುಗಿಸಲು ಯತ್ನಿಸಿದನು.

ಕಾಳೀಚರಣನು ಇವನ ಮನೋಗತವನ್ನು ಅರಿತು, ಬಹು ಚಮತ್ಕಾರದಿಂದ ಆ ಚೂರಿಯನ್ನು ತನ್ನ ಹಲ್ಲುಗಳಿಂದ ಬಲವಾಗಿ ಕಚ್ಚಿ ಹಿಡಿದುಕೊಂಡನು. ಕಾಳೀಚರಣನ ಬಾಯಿಯಿಂದ ಆ ಚೂರಿಯನ್ನು ಕಿತ್ತುಕೊಳ್ಳಲು, ಮನ್ನುವು ಬಹುಸಾಹಸ ಮಾಡಿದನು. ಆದರೇನು ? ಸಾಧ್ಯವಾಗಲಿಲ್ಲ ! ಆ ಚೂರಿಯನ್ನು ಮನ್ನುವಿನ ಕೈಯಿಂದ ಸೆಳೆದುಕೊಳ್ಳಲು, ಕಾಳೀಚರಣನು ಮಾಡಿದ ಸಾಹಸವೂ ನಿಷ್ಫಲವಾಯಿತು !! ಈ ಎಳೆದಾಟದಲ್ಲಿ ಕಾಳೀಚರಣನ ಬಾಯಿ ತುಟಿಗಳಲ್ಲಿ ಬಹಳ ಘಾಯವಾಗಿ ರಕ್ತವು ಸುರಿಯುತ್ತಿದ್ದರೂ ಹಿಡಿತವನ್ನು ಮಾತ್ರ ಬಿಡಲಿಲ್ಲ! ಮನ್ನುವು ಮತ್ತೊಂದುಸಲ ತನ್ನ ಸಾಹಸವನ್ನೆಲ್ಲಾ ಪ್ರಯೋಗಿಸಿ ಆ ಚೂರಿಯನ್ನು ಎಳೆಯಲು ಕಾಳೀಚರಣನು ಆಚೂರಿಯನ್ನು ಬಿಟ್ಟು ಬಹು ಲಾಘವಚಮತ್ಕಾರದಿಂದ ಅವನನ್ನು ಮೇಲಕ್ಕೆತ್ತಿ ನೆಲದಲ್ಲಿ ಕುಕ್ಕಿದನು ! ಆ ವೇಳೆಯಲ್ಲಿ ಮನ್ನುವಿನ ಹಸ್ತಸ್ವಾಧೀನ ತಪ್ಪಿ ಅವನ ಕೈಯಲ್ಲಿದ್ದ ಚೂರಿಯು ಅವನ ಹೃದಯದಲ್ಲಿಯೇ ನಾಟಿತು ಕಿರಿಚಿಕೊಳ್ಳುತ್ತ

ನೆಲದಲ್ಲಿ ಬಿದ್ದುಬಿಟ್ಟನು. ಆ ಸಮಯದಲ್ಲಿ ವಿದ್ಯುದಾಘಾತದಂತೆ ಒಂದು ಮುಷ್ಟಿ ಪ್ರಹಾರವು ಕಾಳೀಚರಣನ ತಲೆಗೆ ಸಂದಿತು !! ಕಾಳೀಚರಣನು ತರಹರಿಸಲಾರದೆ ಭೂಗತನಾದನು !!!

ಏಕಾದಶ ಗುಚ್ಛ.

ಕಾಳೀಚರಣನಿಗೆ ಪ್ರಜ್ಞೆಯುಂಟಾಯಿತು. ಆದರೇನು ? ಸಹಾಯ ರಹಿತನಾಗಿ ಕೈಕಾಲು ಬಂಧಿಸಲ್ಪಟ್ಟವನಾಗಿ ಬಿದ್ದಿರುವ ಆ ಕಾಳೀಚರಣನಿಗೆ ಏನುತಾನೆ ಮಾಡಲು ಸಾಧ್ಯ ? ಪ್ರಜ್ಞೆಯುಂಟಾದಾಗ ತನ್ನ ಆ ಶೋಚನೀಯವಾದ ದುಃಸ್ಥಿತಿಗೆ ಏನಾದರೂ ಒಂದು ಪ್ರತೀಕಾರವನ್ನು ಸಹ ಮಾಡಿಕೊಳ್ಳಲನುಕೂಲವಿಲ್ಲದಂತೆ ಅವನ ವಿರೋಧಿಗಳು ಅಲ್ಲಿಯೇ ಮಾತನಾಡುತ್ತಾ ಕುಳಿತಿರುವದನ್ನು ನೋಡಿದನು ! ಆಗ ತಾನು ಪ್ರಜ್ಞಾಹೀನನಂತೆ ಇನ್ನೂ ಸ್ವಲ್ಪಕಾಲ ಬಿದ್ದಿದ್ದು ಅವರ ಸಂಭಾಷಣೆಯ ಸಂಗತಿಗಳನ್ನು ತಿಳಿದು ಮುಂದೆ ತನ್ನ ಸಾಹಸವನ್ನೆಲ್ಲಾ ಪ್ರಯೋಗಿಸಲನುಕೂಲವು ದೊರೆತರೆ ಆ ರೀತಿಯಲ್ಲಿ ಆಚರಿಸಲು ಸ್ಥಿರಚಿತ್ತನಾಗಿ ಹಾಗೆಯೇ ಬಿದ್ದುಕೊಂಡು ಪ್ರಜ್ಞಾಹೀನನಂತೆ ನಟಿಸುತ್ತಿದ್ದನು.

ಕಾಳೀಚರಣನು ಬಿದ್ದಿದ್ದ ಮುರುಕುಮನೆಯಲ್ಲಿಯೇ ಸ್ವಲ್ಪ ಕಾಲಕ್ಕೆ ಹಿಂದೆ ಅವನೊಂದಿಗೆ ಹೋರಾಡಿ ಗತಪ್ರಾಣನಾಗಿ ಬಿದ್ದಿದ್ದ ವನ್ನುವಿನ ಶವದ ಸಮೀಪದಲ್ಲಿ ಮೂರು ವ್ಯಕ್ತಿಗಳು ಕುಳಿತಿದ್ದವು. ಅವರಲ್ಲೀರ್ವರು ಕಾಳೀಚರಣನಿಂದ ಬಂಧಿಸಲ್ಪಟ್ಟಿದ್ದವರು. ಮತ್ತೊಬ್ಬನು ನೂತನ ! ಆ ನೂತನ ವ್ಯಕ್ತಿಯು, " ಇಂದಿಗೆ ನಮ್ಮ ಕೆಲಸವು ಬಹಳ ಮಟ್ಟಿಗೆ ಸಾಧ್ಯವಾಯಿತು " ಆರ ಭಯದಿಂದ ನನ್ನ ಪ್ರಾಣವು ಪ್ರತಿಕ್ಷಣದಲ್ಲಿಯೂ ಪರಿತಪಿಸುತ್ತಿತ್ತೋ ಆ ಕಾಳೀಚರಣನ ಪ್ರಾಣವು ಇಂದು ನಮ್ಮಾಧೀನ ! ನಾನು ಇನ್ನಾರಿಗೂ ಭಯಪಡುವಂತಿಲ್ಲ !! ನನ್ನನ್ನು

ಇನ್ನೀ ಜನ್ಮದಲ್ಲಿ ಭಯಪಡಿಸುವ ಧೀರನು; ಏಕೆ ಪಿಶಾಚಿಯು ಇವನೊಬ್ಬನಲ್ಲದೆ ಇನ್ನಾವನೂ ಜನ್ಮವನ್ನು ಹೊಂದಿಯೂ ಇಲ್ಲ, ಇನ್ನು ಮುಂದೆ ಜನಿಸುವ ಸಂಭವವೂ ಇಲ್ಲ!!! ಇನ್ನು ಅವನೊಬ್ಬನನ್ನು ಯಮಪುರಿಗೆ ಕಳುಹಿಸಿಬಿಟ್ಟನೆಂದರೆ ಈ ಅಪಾರವಾದ ಐಶ್ವರ್ಯಕ್ಕೆ ಸರ್ವಾಧಿಕಾರಿಯಾಗಿ ಕಳಂಕಕಲುಷಿತವಾದ ಈ ಹೆಸರನ್ನೇ ಪರಿತ್ಯಜಿಸಿ ಸರ್ವೋತ್ತಮವಾದ ಹೆಸರಿನಿಂದ ಮಹದೈಶ್ವರ್ಯವಂತನೆಂದೆನ್ನಿಸಿಕೊಳ್ಳುತ್ತ, ನಿಮ್ಮೆಲ್ಲರಿಗೂ ನಿಮ್ಮ ನಿಮ್ಮ ಸಾಹಸಕ್ಕೆ ತಕ್ಕ ಪ್ರತಿಫಲವನ್ನು ಕೊಟ್ಟು ಯಾವಜ್ಜೀವವೂ ಸುಖವಾದ ಸಂಸಾರದಲ್ಲಿರಲು ಆಶಿಸುತ್ತಿದ್ದಂತೆಯೆ ಏರ್ಪಡಿಸಿಕೊಳ್ಳುತ್ತೇನೆ. ಎಂದಂದನು.

ಇನ್ನೊಬ್ಬ;—“ಸರಿ! ಈ ಮಧ್ಯೆ ಆ ಹುಡುಗಿಯ ಗತಿ ?”

ಮೊದಲನೆಯವನು:— “ಸರಿ! ವಿಜಯಸಿಂಹ ಗತಿಗೊಳ್ಳುವ ತನಕ ನಾವು ಮಾಡತಕ್ಕ ಪ್ರಯತ್ನಗಳನ್ನೆಲ್ಲಾ ಮಾಡಿ ನೋಡುವೆವು. ಅನಂತರ ವಿಷಯಸುಖ! ಇಲ್ಲದಿದ್ದರೆ ವಿಷಪ್ರಯೋಗ ?”

ಇನ್ನೊಬ್ಬ;— “ಸಂಗತಿಯನ್ನೆಲ್ಲಾ ತಿಳಿದಂತಾಯಿತು. ಮುಂದೆ ಮಾಡುವದೇನು ?”

ಎರಡನೆಯವನು;—“ ಮುಂದಿನ್ನೇನು? ಗೊತ್ತೇ ಇದೆ! ನಮ್ಮನ್ನಾವಾಗಲೂ ಭಯಪಡಿಸುತ್ತಿದ್ದ ಈ ಪತ್ತೇದಾರ ಪಿಶಾಚಿಯ ನಿರ್ಮೂಲದ ಕೆಲಸ ಮೊದಲು!! ಅನಂತರ ಮುಂದೇನುಬೇಕೋ ನೋಡೋಣ!”

ನೂತನ;—“ಈ ಪತ್ತೇದಾರನ ಮಾತಿರಲಿ! ನಮ್ಮ ಗುಂಪಿನವರೆಲ್ಲರನ್ನೂ ಸೇರಿಸಿ, ಎಲ್ಲರನ್ನೂ ಭಯಗೊಳಿಸುತ್ತಿದ್ದ ಇವನಿಗೆ ಅವರೆಲ್ಲರ ಸಮಕ್ಷಮದಲ್ಲಿ ಸಜೀವಸಮಾಧಿ! ಸದ್ಯಕ್ಕೆ ದೇವೇಶನಿಗೆ ಒಂದು ಕಾಗದವನ್ನು ಬರಿಯಬೇಕು. ಅದು ಅಗತ್ಯವಾದ ಕೆಲಸ!!” ಎಂದು ಹೇಳಿ, ಕಾಗದವನ್ನು ಬರೆದು ಅವರಿಬ್ಬರಲ್ಲೊಬ್ಬನ ಕೈಯಲ್ಲಿ ಕೊಟ್ಟು ಕಳುಹಿಸಿ ಮತ್ತೊಬ್ಬನಿಗೆ ತಮ್ಮ ಜನರೆಲ್ಲರಿಗೂ ಕಾಳೀಚರಣನು ಸಿಕ್ಕಿರುವ ಮತ್ತು ಅವನ ಸಜೀವ ಸಮಾಧಿಯ ಸಂಗತಿಯನ್ನು ತಿಳುಹಿಸುವಂತೆ ಹೇಳಿ ಕಳುಹಿಸಿ, ಬಾಗಿಲನ್ನು ಹಾಕಿಕೊಂಡು ತಾನೂ ಹೊರಟುಹೋದಬ್ಬ

ಅವರೆಲ್ಲರೂ ಹೋದ ಮೇಲೆ ಕಾಳೀಚರಣನು ತಾನು ಕಟ್ಟನ್ನು ಕೀಳಲು ಪ್ರಯತ್ನಪಟ್ಟು ನೋಡಿದನು. ಸಾಧ್ಯವಾಗಲಿಲ್ಲ ! ಕಾಲವಿಳಂಬಕ್ಕೆ ಅವಕಾಶವಿಲ್ಲ ! ! ತನ್ನಿಂದಾಗಬೇಕಾದ ಕೆಲಸಕ್ಕಾದರೋ ಮಿತಿಯಿಲ್ಲ ! ! ಆಗೇನು ಮಾಡುವುದು ? ಮೇಲಿಂದ ಮೇಲೆ ಸಾಹಸಮಾಡಿ ನೋಡಿದನು ! ಸಾಹಸವೆಲ್ಲವೂ ಕೇವಲ ನಿರರ್ಥಕ ! ನಿಷ್ಫಲ ! ! ಕಾಳೀಚರಣನು ತಾನೆಂತು ಬಿಡಿಸಿಕೊಳ್ಳುವುದು ? ತನ್ನ ಮುಂದಿನ ಪರಿಣಾಮವೇನು ? ಎಂದು ಮೊದಲಾಗಿ ಆಲೋಚಿಸುತ್ತಿರಲು, " ಅವನು ಸಹಾಯರಹಿತನಾಗಿ ಬಿದ್ದುಕೊಂಡು ಏನು ಮಾಡುತ್ತಿರುವನು ? ಈ ಬಂಧನದಿಂದ ಹೇಗೆ ಮುಕ್ತನಾಗುವನು ? " ಎಂದಂದುಕೊಂಡು ನೋಡಲು ಕುತೂಹಲಯುಕ್ತನಾಗಿರುವನೋ ಎಂಬಂತೆ ಕುಮುದಬಾಂಧವನು ಪೂರ್ವಾದ್ರಿಯನ್ನಡರಿಸುತ್ತಲೂ ನೋಡತೊಡಗಿದನು ! ಚಂದ್ರನ ಅಂದವಾದ ಮುಖದಿಂದ ಹೊರಸೂಸುತ್ತಿದ್ದ ಸ್ವಚ್ಛತರ ಮರೀಚಿಗಳು ಅವನಿಯನ್ನು ಅಂದವಾಗಿ ಅಲಂಕರಿಸುತ್ತಿದ್ದುವು. ಆನಂದದಾಯಕವಾದ ಆ ಅಮೃತಕಿರಣಗಳು ಆ ಮುರುಕು ಮನೆಯನ್ನಾವರಿಸಿ ಅಲ್ಲಲ್ಲಿದ್ದ ಸಂದುಗಳ ಮಾರ್ಗವಾಗಿ ಮನೆಯೊಳಗೂ ಪ್ರವೇಶಿಸಿದುವು.

ರಾರಾಜಿಸುತ್ತಿರುವ ರಜನೀಪತಿಯನ್ನು ಕಂಡು, ಕಾಳೀಚರಣನಿಗೆ ಮನಸ್ಸಿನಲ್ಲಿ ಒಂದು ವಿಧವಾದ ಅನಿರ್ವಚನೀಯವಾದ ಆನಂದವು ಅಂಕುರಿಸಿ ಪುನಃ ಆ ಬಂಧನದಿಂದ ವಿಮುಕ್ತನಾಗಲು ಪ್ರಯತ್ನಿಸಿದನು ! ಸಮೀಪದಲ್ಲಿಯೇ ಗತಪ್ರಾಣನಾಗಿ ಬಿದ್ದಿದ್ದ ಮನುಷ್ಯನನ್ನು ಕಂಡನು. ಆಗ ಒಂದು ಉಪಾಯವು ತಲೆದೋರಿತು ! ಸಹಸಾ ಆ ಶವದ ಕಡೆಗೆ ಉರುಳಿಕೊಂಡು ಹೋದನು ! ! ಶವದ ಮೇಲೆ ಮುಖವನ್ನಿಟ್ಟು ಹುಡುಕಿದನು ! ! ! ಅವನಾನಂದಕ್ಕೆ ಮಿತಿಯಿಲ್ಲದಂತಾಯಿತು ! ಅದೇಕೆ ? ಮನುಷ್ಯನ ಹೃದಯದಲ್ಲಿ ನಾಟಿಕೊಂಡಿದ್ದ ಚೂರಿಯು ಹಾಗೆಯೇ ಇದ್ದಿತು ! ! ಅವನಿಗೆ ಬೇಕಾಗಿದ್ದುದೂ ಅದೆ ! ! ! ಅದನ್ನು ಹಲ್ಲುಗಳಿಂದ ಕಚ್ಚಿ, ಸೆಳೆದುಕೊಂಡು ಕಾಲಿಗೆ ಕಟ್ಟಿದ್ದ ಹಗ್ಗವನ್ನು ಕತ್ತರಿಸಲುಪಕ್ರಮಿಸಿದನು ! ಸ್ವಲ್ಪ ಕಾಲದಲ್ಲಿಯೇ ಕತ್ತರಿಸಿದನು. ಕಾಲುಗಳ ಬಂಧನವು ನಿವೃತ್ತಿಯಾಯಿತು ! ! ! ಕೈಯಲ್ಲಿದ್ದುವು ಕಬ್ಬಿಣದ ಕೋಳಗಳು ! ಅವುಗಳ ಮೇಲೆ ಚೂರಿಯ ಸಾಹಸವೆ ? ಚೂರಿಯನ್ನು ಬಗೆದನು. ಅದಕ್ಕೂ ಒಂದುಪಾಯವು ತಲೆದೋರಲು

ಮೇಲಕ್ಕೆದ್ದು ಮನೆಯ ಎಲ್ಲಾ ಭಾಗಗಳನ್ನೂ ಹುಡುಕುತ್ತ ಬಂದನು. ಅಲ್ಲಲ್ಲೆ ಮೊಳೆಗಳು ಗೋಡೆಗಳಿಗೆ ನಾಟಿದ್ದಿದ್ದುದನ್ನು ಕಂಡು ಅವುಗಳಿಂದೇತಾದರೂ ತನ್ನ ಕೈಗಳಲ್ಲಿದ್ದ ಕೋಳಗಳನ್ನು ತೆಗೆದು ಕೊಳ್ಳಬೇಕೆಂದಂದುಕೊಂಡು ಬಹು ಸಾಹಸದಿಂದ ಕೈಗಳನ್ನು ಮುಂದಕ್ಕೆ ತಿರುಗಿಸಿಕೊಂಡು ಆ ಕೋಳಗಳ ಬೀಗದ ತೂತನ್ನು ಮೊಳೆಗೆ ಸಿಗಿಸಿ ಅದರ ಕೀಲು (Spring) ಮೊಳೆಯ ಅಣಿಗೆ ತಗಲಿಕೊಳ್ಳುವವರೆಗೂ ಮೆಲ್ಲನೆ ಅಲುಗಾಡಿಸಿ, ಅದು ತಗಲಿಕೊಳ್ಳಲು, ಬಲವಾಗಿ ಎಳೆದನು. ಬೀಗವು ತೆರೆಯಿತು! ಒಂದು ಕೈಯಿ ಬಿಡುವಾಯಿತು!! ಉಪಾಯವಾಗಿ ಆ ಕೋಳವನ್ನು ತೆಗೆದು ಕೊಂಡು ನಿರಾಯುಧನಾಗಿದ್ದುದರಿಂದ ಮನೆಯಲ್ಲೇನಾದರೂ ಸಿಗಬಹುದೆಂದಂದುಕೊಂಡು ಮನೆಯಲ್ಲೆಲ್ಲಾ ಹುಡುಕಿದನು. ಏನೂ ಸಿಗದಿರಲು ತನ್ನನ್ನು ಬಂಧವಿಮುಕ್ತನನ್ನಾಗ ಗೊಳಿಸಿದ ಆ ಚೂರಿಯನ್ನು ಪ್ರೀತಿಯಿಂದಲೋ ಅಥವಾ ಆವುದಾದರೊಂದು ಆಯುಧವು ತನ್ನಲ್ಲಿರಬೇಕೆಂದೋ ತೆಗೆದುಕೊಂಡು ಬಾಗಿಲಸಮೀಪಕ್ಕೆ ಹೋದನು. ಅಷ್ಟರಲ್ಲಿಯೆ, ಕಾಳೀಚರಣನು ಸಿಕ್ಕಿಬಿದ್ದಿರುವನೆಂಬ ವರ್ತಮಾನವನ್ನು ಕೇಳಿದ ಆ ಗುಂಪಿನ ಜನಗಳ್ಯಾರೋ ಬಹುಸಂತೋಷದಿಂದ ಮಾತನಾಡಿಕೊಳ್ಳುತ್ತ ಬರುತ್ತಿರುವಂತೆ ಭಾಸವಾಗಲು, "ಇದೀಗ ಸುಸಮಯವು! ಇನ್ನು ಸ್ವಲ್ಪ ಮುಂಚೆಯೆ ಅವರು ಬಂದಿದ್ದರೆ ನನ್ನ ಗತಿಯೇನಾಗುತ್ತಿತ್ತೋ! ಎಂದಂದುಕೊಂಡು, ಕಾಳೀಚರಣನು ಆಗ ತಾನು ತಪ್ಪಿಸಿಕೊಂಡು ಹೊರಗಾಗುವ ಮಾರ್ಗವನ್ನು ಆಲೋಚಿಸುತ್ತಿದ್ದನು. ಅಷ್ಟರಲ್ಲಿಯೇ, ಬಾಗಿಲು ತೆರೆಯಲ್ಪಟ್ಟಿತು. ಕಾಳೀಚರಣನು ಬಾಗಿಲಿನ ಹಿಂಭಾಗದಲ್ಲಿ ಒರೆಯಾಗಿ ನಿಂತುಕೊಂಡನು. ಅವರು ಬಾಗಿಲನ್ನು ತೆಗೆದುಕೊಂಡು ಒಳಗೆ ಪ್ರವೇಶಿಸಿದರು. ತತ್ಕ್ಷಣವೆ ಕಾಳೀಚರಣನು ಅದೇಬಾಗಿಲಿನ ಮೂಲಕ ಹೊರಗಾಗಿ ಬಾಗಿಲನು ಮುಚ್ಚಿ ಕೊಂಡನು.

ಕಾಳೀಚರಣನು ಸುರಕ್ಷಿತವಾಗಿ ಹೊರಗೆ ಬಂದವನು ತಲೆತಪ್ಪಿಸಿಕೊಂಡು ಹೊರಟುಹೋಗದೆ, ಆ ಬಾಗಿಲಿನ ಸಮೀಪದಲ್ಲಿಯೆ ನಿಂತುಕೊಂಡನು. ಅದೆಂತಹ ಭಯ ಲೇಶವೂ ಇಲ್ಲದ, ಹಿಡಿದಕೆಲಸವನ್ನು ಸಾಧಿಸಲು ಏನೆದುರು ಬಂದರೂ ಹಿಮ್ಮೆಟ್ಟದ ಸಾಹಸವೊ! ಅತ್ಯಲ್ಪಕಾಲಕ್ಕೆ

ಮುಂಚೆ ಅದೇ ಸ್ಥಳದಲ್ಲಿ ಮೃತ್ಯುವಶನಾಗಿ ಬಿದ್ದಿದ್ದ ಕಾಳೀಚರಣನು ಅಂತಹ ಸಮರಾತ್ರಿಯಲ್ಲಿ, ಭಯಂಕರ ಕಾನನದಲ್ಲಿ, ಶತ್ರುಸಮೂಹದಿಂದ ಆವೃತನೂ ಆಗಿರುವುದಲ್ಲದೆ, ಕೇವಲ ಸಮೀಪಗತರಾಗಿರುವ ಮೂರು ಜನರಿಗೆ ಏಕಾಂಗಿಯೂ ನಿರಾಯುಧನೂ ಆಗಿರುವ ತಾನು ಎದುರಾಗಲು ಹೊಂಚುಕಾಯುತ್ತಿರುವನಲ್ಲ! ಪ್ರಾಣಾಪಾಯವೆಂಬುದು ಇವನಿಗೇನು ತೃಣವಲ್ಲಘುವೋ?

ಒಳಗೆ ದೀಪವನ್ನು ಹಚ್ಚಿಕೊಂಡು ನೋಡಲಾಗಿ, ಅಲ್ಲಿ ಅವರಿಗೆ ಮನುಷ್ಯನ ಕಳೇವರವೂ ಮತ್ತು ರಕ್ತಪ್ರವಾಹದ ಭಯಂಕರ ದೃಶ್ಯವಲ್ಲದೆ ಅವರ ಅಪೇಕ್ಷಿತ ವ್ಯಕ್ತಿಯು ಅಲ್ಲಿರಲಿಲ್ಲ. ಅವರಾಶೆಯು ನಿರಾಶೆಯಾಯಿತು! ಭಯಾಶ್ಚರ್ಯಭರಿತರಾಗಿ, "ಅಯ್ಯೋ! ಪಿಶಾಚಿರಂಡೇ ಮಗನೇ!! ಕೈಕಾಲುಗಳನ್ನು ಕಟ್ಟಿ ಕೆಡವಿದ್ದರೂ ನೀನು ತಪ್ಪಿಸಿಕೊಂಡಿದ್ದೆಂತು? ನಿನಗೇನಾದರೂ ಇಂದ್ರಜಾಲಾದಿ ಮಾಯಾವಿದ್ಯೆಗಳು ಬರುವುವೋ ಅಥವಾ ನಾವು ಸ್ವಪ್ನಾವಸ್ಥೆಯಲ್ಲಿರುವೆವೋ! ಇಲ್ಲ ನೀನು ಪಕ್ಕಾ ತಾಯಿಗಂಡನು!! ನಿನ್ನನ್ನು ಕೈಗೆ ಸಿಕ್ಕಿದ ಸಮಯದಲ್ಲಿ ಕೊಲ್ಲದೆ ಬಿಟ್ಟವರೆ ದಡ್ಡರು!" ಎಂದು ಹೇಳಿಕೊಳ್ಳುತ್ತಿರುವಷ್ಟರಲ್ಲಿಯೆ, "ನಿಮ್ಮ ಮೃತ್ಯುವು ನಿಮ್ಮಿಂದ ಕೊಲ್ಲಲ್ಪಡುವುದೆಂದಾದರೂ ಉಂಟೆ?" ಎಂದು ಆರೋ ಹೇಳಿದಂತೆ ಅವರಿಗೆ ಕೇಳಿಬರಲು, ಅವರು ಮೊದಲಿಗಿಂತಲೂ ಶತಶಃ ಅಧಿಕವಾಗಿ ಭಯವಿಹ್ವಲರಾಗಿ, "ಅಯ್ಯೋ! ಅವನಿಲ್ಲಿಯೆ ಇರುವಂತಿದೆ! ಮುಂದೇನುಗತಿ!!" ಎಂದಂದುಕೊಂಡು ಓಡಿಹೋಗಲು ಸಿದ್ಧರಾದರು!

ಕಾಳೀಚರಣನು ಬಾಗಲಿನಿಂದ ನಾತಿದೂರ ಸರಿದು ಕೆಲವು ಕಲ್ಲುಗಳನ್ನಾರಿಸಿಕೊಂಡು, ಬಾಗಿಲಿನ ಕಡೆಯೇ ನೋಡುತ್ತ ನಿಂತುಕೊಂಡಿದ್ದನು. ಗುರಿಯಿಟ್ಟು ಹೊಡೆಯುವುದರಲ್ಲಿ ಬಹು ಅಭ್ಯಾಸವಿತ್ತು. ಅವರು ಒಳಗಿನಿಂದ ಬಾಗಿಲನ್ನು ತೆರೆದ ಕೂಡಲೆ ಶಿಲಾವರ್ಷವಾದಂತೆ ಹತ್ತೆಂಟು ಕಲ್ಲುಗಳು "ಸುಯ್" ಗುಟ್ಟುತ್ತ ಬಹು ರಭಸದಿಂದ ಬಂದುವು! ಆ ಮೂವರಲ್ಲಿ ಮುಂದಿದ್ದ ಇರ್ವರಿಗೆ ಪೂರಾ ಪೆಟ್ಟುಬಿದ್ದು ತರಹರಿಸಲಾರದೆ ಕೆಳಗೆ ಬಿದ್ದರು ಇನ್ನೊಬ್ಬನು ಓಡಲಾರಂಭಿಸಿದನು. ಕಾಳೀಚರಣನು ಆ ಓಡುತ್ತಿರುವವನನ್ನು ಬೆನ್ನಟ್ಟುವುದೇ ಉತ್ತಮವೆಂದು ಭಾವಿಸಿ ಅವನನ್ನು ಹಿಂಬಾಲಿಸಿದನು.

ಹೀಗೆಯೆ ಅವರಿರ್ವರೂ ಅತ್ಯಲ್ಪಕಾಲದಲ್ಲಿ ನಾಲ್ಕಾರು ಮೈಲಿಗಳಷ್ಟು ದೂರ ಓಡಿದರು. ಮುಂದೆ ಓಡುತ್ತಿದ್ದವನಿಗೆ ಸೋಲುಂಟಾಗಿ ಅವನ ಓಟದ ವೇಗವು ಕಡಿಮೆಯಾಯಿತು. ಕಾಳೀಚರಣನು ಶ್ರಮಸಹಿಷ್ಣುವೂ, ಅಭ್ಯಾಸಬಲವುಳ್ಳವನೂ, ಆದುದರಿಂದ ಎಷ್ಟುದೂರ ಬೇಕಾದರೂ ಓಡಲು ಶಕ್ತನಾಗಿದ್ದನು! ಆದರೂ, ಬಹುದೂರವೇನೂ ಓಡುವ ಸಂಭವವು ಉಂಟಾಗಲಿಲ್ಲ. ಮುಂದೋಡುತ್ತಿದ್ದವನು ಸೋತು ನೆಲದ ಮೇಲೆ ಬಿದ್ದುಬಿಟ್ಟನು.

ಕಾಳೀಚರಣನು ಅವನನ್ನು ಸಮೀಪಿಸಿದಾಗ ಅವನಿಗೆ ಮಾತನಾಡಲೂ ಕೂಡ ಶಕ್ತಿಯಿಲ್ಲದಷ್ಟು ಆಯಾಸವಾಗಿ, ಕೇವಲ ನಿತ್ರಾಣನಾಗಿ ಬಿದ್ದೊದ್ದಾಡುತ್ತಿದ್ದನು. ಎದುರಾಳಿಯು ವಿಶ್ರಾಂತಿಗೆ ಸ್ವಲ್ಪ ಅವಕಾಶವನ್ನಿತ್ತು ತಾನೂ ಸ್ವಲ್ಪ ಉಪಚರಿಸಿದನು. ಅವನಿಗೆ ಸ್ವಲ್ಪ ಸಮಾಧಾನವಾದಮೇಲೆ ಭಯೋತ್ಪಾತವನ್ನುಂಟುಮಾಡಿ ತಾನು ಕೇಳುವ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನಿತ್ತು ಆ ಕೇಸಿನ ಸಕಲ ಸಂಗತಿಗಳನ್ನೂ ತಿಳುಹಿಸಿದರೆ ಅವನಿಗೆ ಅವವಿಧವಾದ ಶಿಕ್ಷೆಯೂ ಆಗುವುದಿಲ್ಲವೆಂದು ಹೇಳಿ, ಅವನಿಗೆ ಅನೇಕ ಪ್ರಶ್ನೆಗಳನ್ನು ಹಾಕಿದನು. ಕಾಳೀಚರಣನೆಷ್ಟು ಪ್ರಯತ್ನ ಮಾಡಿದರೂ, ಅವನಿಂದ, "ನಮ್ಮ ಗುಂಪಿಗೆ ಒಬ್ಬ ಯಜಮಾನನಿರುವನು" ನಾವೆಲ್ಲರೂ ಅವನನ್ನು ದಣಿಯೆಂದು ಕರೆಯುವೆವಲ್ಲದೆ ನಮಗೆ ಅವನ ಹೆಸರು ಗೊತ್ತಿಲ್ಲ! ನಾವೆಲ್ಲರೂ ಅಲ್ಲಲ್ಲಿ ಕಾಲಹರಣಮಾಡುತಿದ್ದು, ದಿನಕ್ಕೊಂದುಸಲ ಅವನೆಗೆ ಬಂದು ಒಬ್ಬರೊಬ್ಬರು ಕಲೆತು ಸಂಗತಿಯನ್ನು ತಿಳಿದುಕೊಂಡು ಹೋಗುವುದಲ್ಲದೆ, ಯಜಮಾನನು ಎಲ್ಲಿರುವನೆಂಬುದು ಕೂಡ ಗೊತ್ತಿಲ್ಲ! ನಮ್ಮ ಗುಂಪಿನವರಲ್ಲಿ ಸತ್ತುಹೋದ ವಸ್ನುಎಂಬುವನೆ ಒಹುಚೂರ; ನಮಗೆ ಇನ್ನೊಬ್ಬ ಯಜಮಾನನಿರುವನು. ಅವನು ಊರೊಳಗೇ ಇದ್ದುಕೊಂಡು, ಅಲ್ಲಿನ ಸಂಗತಿಗಳನ್ನು ತಿಳಿಸುತ್ತಾ ಬಂದಂತೆ ಇಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳುತ್ತೇವೆ! ಹುಡುಗಿಯರಿಬ್ಬರೂ ಸುರಕ್ಷಿತರಾಗಿ ಇರುತ್ತಾರೆ ಆದರೆ ಎಲ್ಲಿರುತ್ತಾರೆನೋ ಗೊತ್ತಿಲ್ಲ!! ಎಂದು ತಿಳಿದು ಬಂದಿತಲ್ಲದೆ ಕೇಸಿನ ಸಂಗತಿಗಳು ಹೊರಹೊರಡಲಿಲ್ಲ.

ವೃಥಾ ಕಾಲಹರಣದಿಂದ ಪ್ರಯೋಜನವಿಲ್ಲವೆಂದಂದುಕೊಂಡು, ಕಾಳೀಚರಣನು ಅವನನ್ನು ಬಂದಿಯಾಗಿ ಕರೆದುಕೊಂಡು ಹೊರಟು ಹೋದನು.

ದ್ವಾದಶ ಗುಚ್ಛ.

ನಿರ್ನಿಮಿತ್ತವಾಗಿ ಒಬ್ಬರ ಮನೆಗೊಬ್ಬರು ಯಾರುತಾನೆ ಬರುವರು ? ವ್ಯಥಾ ಯಾರೂ ಬರುವುದಿಲ್ಲ ! ಅದರಲ್ಲಿಯೂ. ಇಷ್ಟು ಜಾಗ್ರತೆ !! ಬೆಳಗಾಗುತ್ತಲೆ ! ಎದ್ದವರಂತೆಯೆ ಬರಬೇಕಾದರೆ ಏನಾದರೊಂದು ಅಗತ್ಯವಾದ ಕೆಲಸವಿದ್ದೇ ಇರಬೇಕು ! ತಥಾಪಿ, ಈ ಪೋಲಿಸ್ ಇನ್ಸ್ಪೆಕ್ಟರ್ ಇಷ್ಟು ಜಾಗ್ರತೆ ನನ್ನ ಮನೆಗೆ ಬರಬೇಕಾದರೆ, ಏನೋ,—ಅಂತೂ ಗ್ರಹಚಾರಕಾಲ ! ಸ್ಥಿತಿಯು ಚನ್ನಾಗಿಲ್ಲ !!" ಎಂದೆಂದುಕೊಳ್ಳುತ್ತಾ ಕ್ಷಣಕ್ಷಣಕ್ಕೂ ತೀಕ್ಷ್ಣದೃಷ್ಟಿಯಿಂದ ಇನ್ಸ್ಪೆಕ್ಟರಕಡೆ ನೋಡುತ್ತ. " ಇವರಾವುದೋ ಒಂದು ಕುತಂತ್ರ ಸಾಧನೆಗೋಸ್ಕರ ಬಂದಿರಬೇಕಲ್ಲದೆ ಅನ್ಯಥಾ ಇಲ್ಲ " ಎಂದೂ " ಇದರಿಂದ ನನಗೆ ಇನ್ನೇನು ಅನಿಷ್ಟ ಸಂಘಟನೆಯಾಗುವುದೋ ! ಏನಾದರೂ ಆಗಲಿ !! ದೈವೇಚ್ಛೆ ! ಕಾಲಗತಿ !! ನಾನೇನು ತಾನೆ ಮಾಡಬಲ್ಲೆ !!! ಪುರಾಕೃತವನ್ನು ಮೀರುವುದೆಂದರೆ ತ್ರಿಪುರಹರನಿಗೂ ಸಾಧ್ಯವಲ್ಲ ! ಇದರಲ್ಲಿ ನನ್ನ ಯತ್ನವೇನು ? ವಿಶ್ವವಿಧಾತನ ವಿಚಿತ್ರ ಮಹಿಮೆ ಹೇಗೆ ಪ್ರವರ್ತಿಸುವುದೋ ! " ಎಂದು ಮೊದಲಾಗಿ ಆಲೋಚಿಸುತ್ತ ತನ್ನ ಮನಸ್ಸಿನ ಭೀತಿಯನ್ನು ತೋರ್ಪಡಿಸದೆ, ನಷ್ಟಾಶಂಕನಾದವನಂತೆ ಹಸನ್ಮುಖಿಯಾಗಿ ದೇವೇಶನು ಇನ್ಸ್ಪೆಕ್ಟರೊಂದಿಗೆ ಮಾತನಾಡುತ್ತಿದ್ದನು. ಇನ್ಸ್ಪೆಕ್ಟರು ಎಷ್ಟುಹೊತ್ತಾದರೂ ಕಾಲೋಚಿತವಾದ ವಾದವಿವಾದಗಳಿಂದ ಹೊತ್ತುಕಳೆಯುತ್ತ ಕುಳಿತುಕೊಂಡೇ ಇದ್ದುದನ್ನು ನೋಡಿ, ದೇವೇಶನಿಗೆ " ಇದರಂತ್ಯವು ಹೇಗಾಗುವುದೋ ! " ಎಂಬ ಕುತೂಹಲವು ಬೇರೂರಿತು.

ಎಂಟುಘಂಟೆಯ ಸಮಯವಾಗಿರಬಹುದು, ಆಗ ಟಪಾಲು ಇಲಾಖೆಯ ಕರ್ಮಚಾರನೊಬ್ಬನು ದೇವೇಶನ ಹಸ್ತದಲ್ಲೊಂದು ಪತ್ರವನ್ನಿತ್ತನು. ದೇವೇಶನು ಪತ್ರದ ಸಂಗತಿಯನ್ನು ನೋಡಿಕೊಂಡನು. ಮನಸ್ಸಿನಲ್ಲಿ ಭೀತಿಯು ದೃಢಮೂಲವಾಗಲಾರಂಭಿಸಿತು. ಮುಖವು ವಿವರ್ಣವಾಯಿತು ! ಆ ಕಾಗದವನ್ನು ಹಾಗೆಯೇ ಮುಚ್ಚಿ ಮತ್ತಾರಿಗೂ ಸಿಕ್ಕ

ದಂತೆ ಸುಡಬೇಕೆಂದು ನಿರ್ಧರಿಸಿದನು. ಅಷ್ಟರಲ್ಲಿಯೆ ಇನ್ಸ್‌ಪೆಕ್ಟರು ದೇವೇಶನ ಕಡೆ ನೋಡಿ, "ಏನು ಸ್ವಾಮಿ? ಕಾಗದವನ್ನು ನೋಡಿ ಬಹು ಭೀತರಾದಂತಿದೆ! ಸಂದರ್ಭವೇನು? ಏಕೆ? ಗೋಪ್ಯವೋ? ನನ್ನೊಂದಿಗೆ ಹೇಳಬಹುದಾಗಿದ್ದರೆ ಹೇಳಿ!" ಎಂದು ಹೇಳುತ್ತ ಉತ್ತರಪ್ರದರಾಗುತ್ತಿದ್ದಲ್ಲಿಯೇ ದೇವೇಶನು ಆ ಕಾಗದದ ಸಂಗತಿಯು ಇನ್ಸ್‌ಪೆಕ್ಟರಿಗೆ ತಿಳಿದರೆ ತನ್ನ ಪರಿಣಾಮವು ನೆಟ್ಟಗಾಗಲಾರದೆಂದು ತಿಳಿದು, ಎಂತಾದರೂ ಅದು ಅವರ ಕೈಗೆ ಸಿಕ್ಕದಿರುವಂತೆ ಮಾಡಬೇಕೆಂದು ನಿರ್ಧರಿಸಿ; "ಏನಾದರೇನು? ನನ್ನ ಗ್ರಹಚಾರ! ಅದರ ಗೊಡವೆ ತಮಗೇಕೆ?" ಎಂದೆಂದು ಸರಕ್ಕನೆ ಹಿಂಜರಿದನು. ಇನ್ಸ್‌ಪೆಕ್ಟರು, "ಏ ಕಳ್ಳ ಮುಂಡೇಕ!! ಜೋಕೆ! ಯಾರೊಂದಿಗೆ ಮಾತನಾಡುತ್ತಿರುವೆ ಗೊತ್ತಿದೆಯೊ? ಆ ಕಾಗದಕ್ಕಾಗಿಯೇ ನಾನಿದುವರೆಗೆ ಕಾಯುತ್ತಿದ್ದುದು. ಕಾಗದವನ್ನು ಕೊಡುವೆಯೋ ಇಲ್ಲವೊ? ಎಂದು ಘರ್ಜಿಸುತ್ತ ಎದ್ದು ಕಾಗದವನ್ನು ಕಿತ್ತುಕೊಳ್ಳಲು ಹೋಗಲು, "ಏಸಿರಯ್ಯಾ! ಇದೇನು ಬಲಾತ್ಕಾರ? ಬೇರೆ ಮನೆಯ ಗೃಹಕೃತ್ಯದ ಕಾಗದಗಳನ್ನೆಲ್ಲ ಪೋಲೀಸಿನವರ ಹೆದರಿಕೆಗಾಗಿ ಕೊಟ್ಟುಬಿಡುವರೇನು? ನಾನು ಕೊಡುವುದೇ ಇಲ್ಲ! ಏನು ಮಾಡುವಿರೋ ಮಾಡಿ!" ಎಂದು ಕಂಪಿತಸ್ವರದಿಂದ ಹೇಳುತ್ತ ಕಾಗದವನ್ನು ನುಂಗಲು ಬಾಯಿಯಲ್ಲಿ ಹಾಕಿಕೊಳ್ಳಲು ಹೋಗಲು, ಇನ್ಸ್‌ಪೆಕ್ಟರು ಕೋಪೋದ್ರಿಕ್ತರಾಗಿ ದೇವೇಶನಿಗೆ ಬಲವಾದೊಂದು ಗುದ್ದನ್ನು ಕೊಟ್ಟರು. ದೇವೇಶನು ತಲೆತಿರುಗಿ ಬಿದ್ದುಬಿಟ್ಟನು. ಇನ್ಸ್‌ಪೆಕ್ಟರು, ಕಾಗದದ ಚೂರುಗಳನ್ನು ತೆಗೆದುಕೊಂಡು, ದೇವೇಶನ ಮೇಲೆ ಸರಿಯಾದ ಕಾವಲನ್ನಿರಿಸಿ ಕಾಳೀಚರಣನನ್ನು ನೋಡಲು ಹರ್ಷಚಿತ್ತರಾಗಿ ಹೊರಟುಹೋದರು.

ಕಾಳೀಚರಣನಿಗೆ ಹಿಂದೆ ಎರಡುಮೂರು ರಾತ್ರಿಗಳಿಂದ ನಿದ್ರೆಯಿಲ್ಲದಿದ್ದುದರಿಂದಲೂ, ಅವನ ಆ ಉನ್ಮತ್ತಾವಸ್ಥೆಗಳಿಂದುಂಟಾದ ಆಯಾಸದಿಂದಲೂ, ಮನ್ನುವಿನೊಂದಿಗೆ ಹೋರಾಡಿದಾಗ ಉಂಟಾದ ಚೂರಿಯ ಗಾಯಗಳ ಬಾಧೆಯಿಂದಲೂ, ಅವನು ವಿಶ್ರಾಂತನಾಗಲು ಮನೆಯಲ್ಲಿಯೇ ಇದ್ದನು. ಆದರೇನು? ವಿಶ್ರಮಿಸಿಕೊಂಡನೆ? ಸ್ವಭಾವತಃ ವಿಶ್ರಾಂತಿಯನ್ನಪೇಕ್ಷಿಸುವವನಲ್ಲ. ಒಂದುವೇಳೆ ಅಪೇಕ್ಷಿಸಿದರೂ ಅದು ಒದಗುವ ಸಂಭವವೂ

ಇರಲಿಲ್ಲ ! ತಾವೆಷ್ಟು ಸಂಕಷ್ಟದಲ್ಲಿದ್ದರೂ ತಾವುದ್ದೇಶಿಸಿದ ಕಾರ್ಯದಲ್ಲಿ ಕೃತಕೃತ್ಯರಾಗುವವರೆಗೂ, ಸ್ವಸ್ಥಚಿತ್ತರಾಗಿ ಆರುತಾನೆ ಇರುವರು ? ತತ್ರಾಪಿ ಕಾಳೀಚರಣನಿಗೆ ಅಂತಹ ಚಿತ್ತಶಾಂತಿಯು ಪ್ರಕೃತ್ಯಾ ದುರ್ಲಭ ! ಆಗವನು ನಾನಾವಿಧವಾಗಿ ಆಲೋಚಿಸುತ್ತಿದ್ದನು. ಆಲೋಚನಾ ತರಂಗಗಳ ಹೊಡೆತದಿಂದ ಬಂದೊಂದು ಬಾರಿ, ಅವನಿಗಾವುದೂ ಅಸಾಧ್ಯವಲ್ಲವೆಂಬುದಾಗಿ, ಏನಾದರೂ ಸರಿಯೆ, ಆಗಲೆ ಹೊರಟು, ವಿರೋಧಿಗಳನ್ನೆಲ್ಲಿದ್ದರೂ ಹುಡುಕಿ ತರುವವರೆಗೂ ಹಿಂದಿರುಗಬಾರದೆಂಬ ಪ್ರತಿಜ್ಞೆಯು ರೂಢಮೂಲವಾಗಿದ್ದುದರಿಂದ, ವಿಶ್ರಾಂತಿಯನ್ನು ವಿಷಪ್ರಾಯವಾಗಿ ಎಣಿಸುತ್ತಿದ್ದನು. ಆಗ ಅವನು, "ಇಷ್ಟಾದರೂ, ಕೃತ್ಯಕ್ಕೆ ಆಧಾರಭೂತವಾಗಿರ್ರುವುದು ಏನು ? ಈ ಗುಂಪಿಗೆ ಯಜಮಾನನಾರು ? ಹುಡುಗಿಯರು ಜೀವಂತೆಯರೇ, ಅಥವಾ ವ್ಯತರೆ ? ಇವುಗಳ ಸರಿಯಾದ ಸ್ಥಿತಿಯು ಇನ್ನೂ ಪೂರ್ಣವಾಗಿ ವ್ಯಕ್ತವಾಗಲಿಲ್ಲವಲ್ಲ !" ಎಂದು ಮೊದಲಾಗಿ ಚಿಂತಿಸುತ್ತಿರುವಷ್ಟರಲ್ಲಿಯೆ, ಇನ್‌ಸ್ಪೆಕ್ಟರು, "ಮಹಾಶಯರೆ !" ಎಂದೆಂದು ಒಳಗೆ ಪ್ರವೇಶಿಸಿದರು

ಕಾಳೀಚರಣನು ಎದ್ದು, "ದಯಮಾಡಬೇಕು ! ರಾಯರು ಹೋಗಿದ್ದ ಸಮಾಚಾರವೇನು ಅನುಕೂಲವೋ ಪ್ರತಿಕೂಲವೋ ?" ಎಂದು ಪ್ರಶ್ನಿಸಲು, ರಾಯರು ಮನಸ್ಸಿನಲ್ಲಿದ್ದ ಆತುರತೆಯ ಉದ್ವೇಗದಿಂದ ಆವ ಮಾತನ್ನೂ ಹೇಳಲು ಆಗದೆ ಮೊದಲು ಕೈಯಲ್ಲಿದ್ದ ಕಾಗದದ ಚೂರುಗಳನ್ನು ಕೊಟ್ಟರು. ಕಾಳೀಚರಣನು ಕಾಗದದ ಚೂರುಗಳನ್ನೆಲ್ಲ ಸರಿಯಾಗಿ, ವಾಕ್ಯರಚನೆಯಾಗುವಂತೆ, ಸೇರಿಸಿ ಓದಿನೋಡಿದನು. ಆಶ್ಚರ್ಯಚಕಿತನಾದನು ! ಆಶ್ಚರ್ಯದೊಂದಿಗೆ ಈಷದಾಕ್ರೋಶವೂ ತಲೆದೋರಿತು ಆ ಕಾಗದದ ಸಂಗತಿಯನ್ನೂ, ಹಿಂದಿನ ಘಟನಾವಳಿಯನ್ನೂ ಕುರಿತು ಸಮಾಲೋಚಿಸಿ, ಹಾಗೆಯೇ ತಲೆದೂಗಿ, "ಇರಲಿರಲಿ ! ನೀವು ಅಸಮಾನ ಸಾಹಸಿಗಳೇ ಸರಿ !! ಇದುವರೆಗೆ ಈ ಕಾಳೀಚರಣನೊಂದಿಗೆ ಹೋರಾಡಿದವರಲ್ಲಿ ನೀವೇ ಸಾಹಸಿಗಳು ! ಚತುರರು ! ಆದರೆ, ದುರ್ಮಾರ್ಗದ ಚಾತುರ್ಯಕ್ಕೆ ದುಷ್ಫಲವೇ ಫಲವೆಂಬುದನ್ನು ಚನ್ನಾಗಿ ತಿಳಿದಿರಿ ! ಇಷ್ಟರಮಟ್ಟಿಗೆ ಕಾಳೀಚರಣನನ್ನು ಮೋಸಪಡಿಸಲೆಳಸಿದವರಲ್ಲಿ ನೀವೇ ಅಗ್ರಗಣ್ಯರು ! ಆದ

ರೇನು ? ಪರಸ್ಪರ ಸಾಹಸವು ಪರಿಣಾಮದಲ್ಲಿ ತಾನೆ ಗೊತ್ತಾಗುವುದು! ಹಿಡಿದ ಕಾರ್ಯದಲ್ಲಿ ಕೃತಕೃತ್ಯನಾಗದಿರುವ ಅಪಮಾನಕ್ಕಿಂತಲೂ ಹೇಯವಾದುದು ಮತ್ತಾವುದೂ ಇಲ್ಲವೆಂದು ಈ ಕಾಳೀಚರಣನು ಭಾವಿಸುವನು. ಸಮಯವು ಸಂಧಿಸಿದಾಗ ಎಲ್ಲವೂ ಸುಸೂತ್ರನೆ! " ಎಂದಂದುಕೊಂಡು, " ರಾಯರೆ, ವೃಥಾ ಕಾಲಹರಣದಿಂದ ಪ್ರಯೋಜನವಿಲ್ಲ. ಈ ಪಾಷಂಡರನ್ನು ಹಿಡಿದು ಶಿಕ್ಷಿಸುವವರೆಗೂ ನಾನು ಸ್ವಸ್ಥಚಿತ್ತನಾಗಲಾರೆನು. ಇವರುಗಳನ್ನು ಸಜೀವವಾಗಿಯೆ ಹಿಡಿದುತರಬೇಕು. ಇಲ್ಲವೆ ಅವರಿಂದ ನಾನು ಮೃತನಾಗಬೇಕು. ಹಾಗಿಲ್ಲದಿದ್ದರೆ ಈ ಪತ್ತೆದಾರಿಯ ಕೆಲಸವೂ, ನನ್ನ ಜೀವಿತವೂ, ನಿರರ್ಥಕವಲ್ಲವೆ? " ಎಂದಂದು, " ಚಿಂತೆಯಿಲ್ಲ. ಅವರೇನೇನು ಕುತಂತ್ರಗಳನ್ನು ಮಾಡುವರೋ ಮಾಡಲಿ, ನೀವು ಮಾತ್ರ ಬಹಳ ಎಚ್ಚರಿಕೆಯಿಂದಿರಬೇಕು. ಆವುದನ್ನೂ ಸತ್ಯವೆಂದು ನಂಬಿ ಕಾರ್ಯದಲ್ಲಿ ದುಡುಕಬೇಡಿ. ಆದರೂ ತಿಳಿದುಬಂದ ಸಮಾಚಾರಗಳಿಗೆ ತಕ್ಕ ಹಾಗೆ ಕಾರ್ಯವನ್ನು ನೆರವೇರಿಸಿಕೊಳ್ಳುವವರಂತಿರಬೇಕು. ಈಗ ಈ ಕಾಗದದ ಮರ್ಮವು ಎಷ್ಟರಮಟ್ಟಿಗಿರುವುದೆಂದು ಹುಡುಕಲು ಪ್ರಯತ್ನಿಸಬೇಡಿ. ದೇವೇಶನನ್ನು ಖೈದಿನಲ್ಲಿಡಿಸಿ. ಭುಜಂಗನಲ್ಲಿ ಬಾಹ್ಯತಃ ಅತಿಪ್ರೀತಿಯನ್ನು ತೋರಿಸುತ್ತ ಅವನ ಮೇಲೆ ಬಹು ಲಕ್ಷ್ಯವನ್ನಿಟ್ಟು ನೋಡಿಕೊಳ್ಳುತ್ತಿರಿ. ಈ ದಿನ ನಾನು ನಿಮ್ಮಧೀನದಲ್ಲಿಟ್ಟ ಖೈದಿಗೆ ತಪ್ಪಿಸಿಕೊಂಡು ಹೋಗಲು ಅವಕಾಶಕೊಟ್ಟು ಅವನು ಹೊರಟುಹೋಗುವಂತೆ ಮಾಡಿ. ಈ ವೇಳೆ ಅವರು ನನ್ನ ಹಿಡಿತದಿಂದ ತಪ್ಪಿಸಿಕೊಳ್ಳಲಾರರು, " ಎಂದು ಹೇಳಿ ಅವರನ್ನು ಕಳುಹಿಸಿದನು.

ಇನ್ಸ್ಪೆಕ್ಟರು ಮನೆಗೆ ಹೋಗುತ್ತ, " ಇದೆಂತಹಕೃತ್ಯ! ಒಂದೊಂದು ವೇಳೆ ತಿಳಿದು ಬರುವ ವರ್ತಮಾನಗಳಲ್ಲಿ ಒಬ್ಬೊಬ್ಬ ಹೊಸ ಹೊಸ ಅಪರಾಧಿ!! ಇವರ ಗುಟ್ಟು ಹೀಗೇ ಸರಿಯೆಂದು ನಿರ್ಧರಿಸುವುದೆಂತು ? ಇದಾವುದೂ ನಿಜವಲ್ಲದೆ ಈ ತಂತ್ರವನ್ನು ನಡಸುತ್ತಿರುವ ಬೇರೊಬ್ಬ ಸೂತ್ರಧಾರನು ಇರುವ ಪಕ್ಷದಲ್ಲಿ ಅವನ ಸಾಹಸವಿನ್ನೆಷ್ಟೆಂದು ಹೇಳಲೋಣ " ಅವನೇನು ಸಾಮಾನ್ಯ ಕಳ್ಳನೆ? ಸುಪ್ರಸಿದ್ಧ ಸಾಹಸಿಯಾದ ಕಾಳೀಚರಣನಿಗೇ ಇಷ್ಟು ತೊಂದರೆ ಕೊಡುವ ಈ ಜನರಿಗೆ ಈ ಬಡ ಪೋಲೀಸಿನವರು ಈಡೆ?

ಏನಾದರಾಗಲಿ ಕಾಳೀಚರಣನು ಹೇಳಿದಂತೆ ನಡೆದರೆ ಸರಿ. ಅಲ್ಲದೆ ನನಗೆ ಬೇರೆ ಏನೂ ತೋಚುವುದಿಲ್ಲ" ಎಂದಂದುಕೊಂಡು ಮನೆಯನ್ನು ಸೇರಿದರು.

ಆ ದಿವಸ ಕಾಳೀಚರಣನು ತೋರಿಸತಕ್ಕದಾದ ಸಾಹಸ ಚಮತ್ಕಾರಗಳನ್ನು ನೋಡದಿದ್ದ ಮೇಲೆ ಏನು ಪ್ರಯೋಜನವೆಂದಂದುಕೊಂಡು, "ಇಂತಹ ಸಂಭ್ರಮದಲ್ಲಿ ನನ್ನ ಪ್ರಿಯೆಯು ಇನ್ನೆಷ್ಟು ಸಂತೋಷಪಡುವಳೋ! ಆದುದರಿಂದ ಅವಳಿಗೂ ಈ ಸಂಗತಿಯನ್ನು ತಿಳಿಸಿ ನಾವೀರ್ವರೂ ಈ ದಿನದ ಅವನ ಸಾಹಸವನ್ನು ನೋಡಬೇಕು" ಎಂದಂದುಕೊಂಡು ಸಂಗತಿಯನ್ನು ಪ್ರಿಯೆಗೆ ತಿಳಿಸಬೋಗಸ್ತ್ರೋ, ಹಿಸೋ, ಎಂಬುವಂತೆ ದಿನೇಶನು ಪಶ್ಚಿಮಾಭಿಮುಖನಾದನು.

ತ್ರಯೋದಶ ಗುಚ್ಛ.

ಮನಸ್ಸಿಗೆ ಮಾಧುರ್ಯವನ್ನೂ, ಶರೀರಕ್ಕೆ ಸೌಖ್ಯವನ್ನೂ, ಅಪ್ಪುವ [illegible] ಪ್ರಸಾದವೋ ಯಂತಹ ಆ ವಿಶ್ರಾಂತಿಯನ್ನಪೇಕ್ಷಿಸದವರು ? ನಿಯಮಿತಕಾಲಗಳಲ್ಲಿ ಗಂಭೀರವಾದ ವಿಶ್ರಾಂತಿಯನ್ನನುಭವಿಸುವುದು ಮಾನವರ ಅಭ್ಯುದಯಕ್ಕೆ ಅವಶ್ಯಕವಾದುದಲ್ಲವೆ ? ಜೀವನದ ಸ್ಥಿತ್ಯಂತರಗಳಲ್ಲಿ ಈ ವಿಶ್ರಾಂತಿಯ ಸ್ವಭಾವವೂ ಅಂತೆಯೆ ! ಅವರ ಪರಿಸ್ಥಿತಿಯೂ, ಅವನವನ ಮನಃಪ್ರವರ್ತನೆಗೂ, ವ್ಯಕ್ತಿಗತವಾದ ಸಂದರ್ಭಗಳಿಗೂ, ತಕ್ಕ ಹಾಗೆ ಮಾರ್ಪಡುವುದು. ಅದ್ಭುತವು ಸೃಷ್ಟಿಕಾರ್ಯಗಳಲ್ಲಿ ಅತೀ

ಮೇಧಾಶಕ್ತಿಯನ್ನು ಪ್ರಾಮುಖ್ಯವಾಗಿರಿಸಿಕೊಂಡಿರುವರೋ, ಅವರಿಗೆ ಶಾರೀರಕಶ್ರಮವೇ ವಿಶ್ರಾಂತಿ. ಆರಿಗೆ ಅತ್ಯಂತ ಶಾರೀರಕಶ್ರಮವೇ ಮುಖ್ಯ ಸಾಧನವಾಗಿರುತ್ತದೋ, ಅವರಿಗೆ ಗಾಢನಿದ್ರೆಯೇ ವಿಶ್ರಾಂತಿ. ದರಿದ್ರರಿಗೂ, ಜುಗುಪ್ಸಾನ್ವಿತರಿಗೂ, ದುಃಖಿಗಳಿಗೂ, ದುರ್ವ್ಯಸನಿಗಳಿಗೂ, ಸಂತೋಷ ಮತ್ತು ಶಾಂತತೆಯೇ ವಿಶ್ರಾಂತಿ. ಪ್ರಾಯಶಃ ಕ್ಷಣಭಂಗುರಗಳಾದ ಪ್ರಾಪಂಚಿಕ ಸುಖಸಂತೋಷಗಳಲ್ಲಿ ನಿಮಗ್ನರಾಗಿ ದುರಹಂಕಾರದಿಂದ ಮೆರೆಯುವ ಪ್ರಮತ್ತರಿಗೆ ಒಂದೊಂದು ವೇಳೆ ವ್ಯಸನವೇ ವಿಶ್ರಾಂತಿಕರವಾಗಿರುತ್ತೆಯಾದರೂ, ಆ ವಿಶ್ರಾಂತಿಯನ್ನು ಕೇವಲ ತಾತ್ಕಾಲಿಕ ಸಮಾಧಾನವೆಂದು ಕರೆಯುವುದೇ ಉಚಿತವಾಗಿರುವಂತಿದೆ. ಇಂತಹ ಈ ಅಮೋಘವಾದ ವಿಶ್ರಾಂತಿಯೆಂಬುದು ಕಾಲಾನುಗುಣವಾದ ರೂಪಾಂತರವನ್ನು ಹೊಂದಿ ಸಕಲಪ್ರಾಣಿಗಳಿಗೂ, ತನ್ನನುಭವವನ್ನೀಯಲು ಸಿದ್ಧವಾಗಿದ್ದರೂ ಕೂಡ ಈ ನಶ್ವರವಾದ ಪ್ರಪಂಚದಲ್ಲಿ ಶಾಶ್ವತವಲ್ಲದಿದ್ದರೂ, ಕ್ಷಣಕಾಲವಾದರೂ ಶಾಂತಿ ಸುಖರೂಪವಾದ ಈ ಅದರ ಕುರುಹನ್ನೆ ಅರಿಯದ ಒಂದೇ ಒಂದು ವರ್ಗವಿರುವುದು. ವಾಚಕರೆ, ಅವರಾರು ? ಇಂತಹ ಅಮೋಘವಾದ ವಿಶ್ರಾಂತಿಯಿಂದ ದೂರೀಕರಿಸಲ್ಪಟ್ಟವರಾರು ? ಅವರೇ, ಈ ಪ್ರಪಂಚದಲ್ಲಿ, ತಮ್ಮ ಜೀವನ ಕಾಲವನ್ನೆಲ್ಲ ಭಯಂಕರ ಪಾಪಕೃತ್ಯಗಳಲ್ಲಿ ವಿನಿಯೋಗಿಸುವ ದುಷ್ಟರು ! ಅವರಿಗೆ ಆವವಿಧವಾದ ವಿಶ್ರಾಂತಿಯೂ ದುರ್ಲಭವೆ!! ಅವರೆಂದೆಂದಿಗೂ ವಿಶ್ರಾಂತರೂ ಅಲ್ಲ, ವಿಕ್ರಾಂತರೂ ಅಲ್ಲ !!

ದಿನೇಶನಾದ ಅಬ್ಜಬಾಂಧವನು ಕಾಲಿಕಕರ್ಮಾಚರಣೆಯನ್ನು ಪೂರ್ತಿಗೊಳಿಸಿದ ಮೇಲೆ ಸರ್ವಪ್ರಾಣಿಗಳೂ ಆ ವಿಶ್ರಾಂತಿಸುಖವನ್ನು ಅನುಭವಿಸುವುದು ಅತ್ಯವಶ್ಯಕವೆಂದೂ, ತಾನೂ ಕೂಡ ತನ್ನೀ ಲೋಕಯಾತ್ರೆಯು ಪೂರ್ತಿಯಾದುದರಿಂದ ವಿಶ್ರಾಂತನಾಗಲೋಸುಗ ಹೋಗುತ್ತಿರುವನೆಂದೂ, ಹೇಳುತ್ತಿರುವನೋ ಎಂಬಂತೆ ಪಶ್ಚಿಮದಿಕ್ತಟಾಭಿಮುಖನಾದನು. ಸರ್ವಪ್ರಾಣಿಗಳೂ ತಮ್ಮತಮ್ಮ ನಿವಾಸಾಭಿಮುಖವಾಗಿ ಹೋಗುತ್ತಿದ್ದುವು. ಆವುದೋ ಒಬ್ಬ ವ್ಯಕ್ತಿಯು ಮಾತ್ರ ಜನಭರಿತವಾದ ಊರನ್ನು ಬಿಟ್ಟು ಸಮೀಪದಲ್ಲಿದ್ದ ಅರಣ್ಯವನ್ನು ಪ್ರವೇಶಿಸುತ್ತಿದ್ದನು.

ಆ ಕಾಡಿನಲ್ಲಿ ಅಲ್ಲಲ್ಲಿ ಚಿಕ್ಕಚಿಕ್ಕ ಸೀಳುದಾರಿಗಳಿದ್ದರೂ, ಹೆಚ್ಚಿಗೆ ಜನಸಂಚಾರವಿಲ್ಲದಿದ್ದುದರಿಂದ ಅಪರಿಚಿತರಿಗೆ ಅವುಗಳ ಗುರುತು ಕೂಡ ಸಿಗುವಂತಿರಲಿಲ್ಲ. ಸಾಲದುದಕ್ಕೆ, ಮಹೋನ್ನತವಾಗಿ ಬೆಳೆದಿದ್ದ ಮರಗಳ ಶಾಖೋಪಶಾಖೆಗಳು ಬಹು ಸ್ನಿಗ್ಧವಾಗಿ ಬೆಳೆದು ಒಂದಕ್ಕೊಂದು ನೇಯಲ್ಪಟ್ಟವುಗಳಂತೆ ಸೇರಿಹೋಗಿ, ಎಲ್ಲೆಲ್ಲಿಯೂ ಕಾರ್ಗತ್ತಲೆಯು ಮುಚ್ಚಿಕೊಂಡು ಪ್ರಕೃತಿಯು ನಿರ್ಮುಕ್ತವಾದ ಭಯಂಕರ ರೂಪವು ಆವರಿಸಿತ್ತು. ಉನ್ನತವಾದ ಬಿದಿರುಮೆಳೆಗಳು ! ದಟ್ಟವಾದ ಪೊದೆಗಳು !! ಉನ್ನತವಾದ ವೃಕ್ಷಶ್ರೇಣಿಗಳು !!! ಇವುಗಳ ಸಂಸರ್ಗದಿಂದ ನಿಬಿಡೀಕೃತವಾಗಿದ್ದ ಆ ಕಾನನದ ಹೃದಯ ಪ್ರಾಂತದಲ್ಲಿ, ಅಂತಹ ಅವೇಳೆಯ ಕತ್ತಲೆಯಲ್ಲಿ, ಅಪರಿಚಿತರಿಗೆ ಸಂಚಾರವು ಕೇವಲ ಅಸಾಧ್ಯವೆಂದು ಬೋಧೆಯಾಗುತ್ತಿದ್ದಿತು.

ಆ ವ್ಯಕ್ತಿಯು ಸ್ವಲ್ಪವೂ ಹಿಂಜರಿಯದೆ ಹಿಂದುಮುಂದು ಸಹ ನೋಡದೆ, ನಿರ್ಭಯನಾಗಿ ಆ ಹೊತ್ತಿನಲ್ಲಿ, ಆ ಕಾಡಿನಲ್ಲಿ ಹೋಗುತ್ತಿರುವುದನ್ನು ನೋಡಿದರೆ ಅವನಿಗೆ ಆ ಪ್ರದೇಶದ ಪೂರ್ಣಾನುಭವವು ಇದ್ದಂತಿರುವುದು. ಅದಾವುದೋ ಮತ್ತೊಂದು ವ್ಯಕ್ತಿಯು ಈ ವ್ಯಕ್ತಿಯನ್ನೇ ಅನುಸರಿಸಿಕೊಂಡು ಬರುತ್ತಿದ್ದಂತೆ ಬೋಧೆಯಾಗುತ್ತಿದ್ದಿತು.

ಈ ವ್ಯಕ್ತಿಗಳು ಹೀಗೆಯೇ ಸ್ವಲ್ಪದೂರ ಹೋಗಿ, ಮುಂದೆಮುಂದೆ ಹೋಗುತ್ತಿದ್ದ ವ್ಯಕ್ತಿಯು ಒಂದು ಪೊದೆಯ ಸಮೀಪದಲ್ಲಿ ನಿಂತು, ಸಂಕೇತ ಧ್ವನಿಯನ್ನು ಮಾಡಿದನು. ಇದಕ್ಕೆ ಪ್ರತ್ಯುತ್ತರವು ನಾತಿದೂರದಿಂದಲೆ ಬಂದಿತು. ಆ ವ್ಯಕ್ತಿಗಳೀರ್ವರು ಉತ್ತರವು ಬಂದಕಡೆಗೇ ಹೊರಟರು. ಹಿಂದಿದ್ದ ವ್ಯಕ್ತಿಯು ಮುಂದೆ ಹೋಗುತ್ತಿದ್ದ ವ್ಯಕ್ತಿಯ ಕಡೆ ಹಾರಿ, ಹಿಡಿದು ಕೆಡವಿ, ತನ್ನ ಜೇಬಿನಲ್ಲಿದ್ದ ಒಂದು ಸೀಸೆಯನ್ನು ತೆಗೆದು, ಅದರಲ್ಲಿದ್ದ ದ್ರವದ ಒಂದೆರಡು ಬಿಂದುಗಳನ್ನು ಒಂದು ಬಟ್ಟೆಯ ತುಂಡಿಗೆ ಹಾಕಿ, ಅವನ ನಾಸಿಕಕ್ಕೆ ಅದನ್ನು ಇಟ್ಟಿದನು. ಆ ವ್ಯಕ್ತಿಯು ಒಂದೆರಡು ನಿಮಿಷಗಳಲ್ಲಿಯೆ ಚೈತನ್ಯಹೀನನಾದನು. ಆ ವ್ಯಕ್ತಿಯು ಉಡುಪುಗಳನ್ನು ತೆಗೆದು ತಾನು ಧರಿಸಿಕೊಂಡು, ಅವನನ್ನು ಒಂದು ಮರೆಯಾದ ಸ್ಥಳದಲ್ಲಿ ಮಲಗಿಸಿ, ಆ ವ್ಯಕ್ತಿಯು ಪುನಃ ಮೊದಲಾದಂತೆಯೆ ಸಂಕೇತವನ್ನು ಮಾಡಿದನು.

ಪ್ರತ್ಯುತ್ತರವು ದೊರೆಯಿತು, ಪ್ರತ್ಯುತ್ತರವು ಬಂದ ಕಡೆಗೆ ಹೋಗಿ ನೋಡಲು, ಅಲ್ಲಿ ಒಂದು ತೋಪಿನ ಮಧ್ಯದಲ್ಲಿದ್ದ ಒಂದು ಚಿಕ್ಕ ಗುಡಿಸಿಲಿನ ಮುಂಭಾಗದಲ್ಲಿ, ಒಬ್ಬ ವ್ಯಕ್ತಿಯು ನಿಂತಿದ್ದನು. ಆ ವ್ಯಕ್ತಿಯೆ ತಾನು ಕೊಟ್ಟ ಸಂಕೇತಕ್ಕೆ ಪ್ರತ್ಯುತ್ತರವನ್ನು ಕೊಟ್ಟವನಿರಬಹುದೆಂದು ಆಲೋಚಿಸಿ, ಸಮೀಪಕ್ಕೆ ಹೋಗಿ, "ಅವನಿಗೆ ಹೆಂಗಯ್ತಪ್ಪ? ಸನಪ್ಪ ಡಂತು ನಾಯ್ಪ್ರಾಣ ಬಿಡು! ಆ ಬೊಡ್ಡೀಮಗ ನನ್ನ ಹಿಡ್ಕೊಂಡು ಹೋಗಿ ಪಡಬಾರದ ಶ್ರಮಪಡಿಸಿ ಬಿಟ್ಟನಪ್ಪ! ನಾನು ಜೀವದಿಂದ ಉಳಿದು ಬಂದಿದ್ದೇ ಭಾಳ ಕಷ್ಟ ಆಗೋಯಿತು!" ಎಂದು ಹೇಳಿದ ಇವನ ಮಾತನ್ನು ಕೇಳಿ ಆ ವ್ಯಕ್ತಿಯು, "ಲೋ ಅಂಗಾದ್ರೆ ನೀನು ಪೋಲೀಸ್ನವ್ರಿಗೆ ಸಿಕ್ಬಿಟ್ಟಿದ್ದೆ? ನಾವು ಇವತ್ತೆಲ್ಲ ನೀನೆಲ್ಲೊ ಯದ್ರುಕೊಂಡು ಓಡೋಗ್ಬಿಟ್ಟಿದ್ದೀ ಅಂತ ತಿಳ್ಕೊಂಡಿದ್ದಕಣೋ! ನೀನು ಪೋಲೀಸ್ನವರಿಂದ ಅದ್ಯಂಗ್ತಪ್ಪಿಸ್ಕೊಂಡ್ಬಂದೆ?" ಎಂದಂದನು,

ಬಂದ ವ್ಯಕ್ತಿಯು :—"ಅವರಿಗೆ ಪೂರಾ ಚಕ್ಕರ್ ಕೊಟ್ಟು ಬಂದೆ! ಸದ್ಯ, ಇವತ್ತು ಇಲ್ಲಿ ಹೊಸದಾಗಿ ನಡೆದಿರುವ ಸಮಾಚಾರವೇನು? ನಮ್ಮ ಯಜಮಾನ್ರು ಎಲ್ಲವ್ರೆ? ಈಗ ಊರೊಳ್ಗ ಇನ್ನೊಂದ್ಸಮಾಚಾರ ನಡ್ದಿದೆ!"

ನಿಂತಿದ್ದ ವ್ಯಕ್ತಿ ;—ಅದೇನೋ ಸಮಾಚಾರ? ಬಂದಿದ್ದ ವ್ಯಕ್ತಿ ;—ಆ ಇನ್ಸ್ಪೆಕ್ಟ್ರನ್ನಲ್ಲೋ, ಅವನು ಆ ದೇವೇಶನ ಮನೆಗೆ ಹೋಗಿದ್ರಂತೆ. ಅವನ ಮನೇಲಿ ಒಂದು ಕಾಗದ ಸಿಕ್ಕಿತಂತೆ! ಆ ಕಾಗದ್ದಲ್ಲಿ ಅವನೂ ಮತ್ತು ಇನ್ಯಾರೊ ಸೇರಿಕೊಂಡು ಏನೇನೋ ಮಾಡಿರುವಂತೆ ಗೊತ್ತಾಯಿತಂತೆ? ಅದಕ್ಕಾಗಿ ಅವನನ್ನು ಲಾಕಪ್ಪಿನಲ್ಲಿ ಹಾಕಿರುವರಂತೆ ಅಂಗೇ ನಾನು ವರ್ತಮಾನ ಕೇಳಿದ್ದರಲ್ಲಿ ಭುಜಂಗನ ಮೇಲೆ ಒಬ್ಬನಿಗೂ ಅನುಮಾನ ಇಲ್ಲ!" ಎಂದು ಹೇಳಲು, ಆ ವ್ಯಕ್ತಿಯು ಬಹು ಆಶ್ಚರ್ಯಭರಿತನಾಗಿ, ಎಲ್ಲಾ ಏನೇನೋ ಆಗ್ತಾ ಇದಪ್ಪ! ಯಜಮಾನಸಿಗೆ ತಿಳಿಸೋಣ" ಎಂದು ಹೇಳಿ, ಇರ್ವರೂ ಅಲ್ಲಿಂದ ಹೊರಟರು.

ಹೋಗುತ್ತ, ದಾರಿಯಲ್ಲಿ, ಅವರವರಿಗೆ ನಡೆದ ಸಂಭಾಷಣೆಯಿಂದ ಅವರ ಗುಂಪಿನಲ್ಲಿ ನಾಲ್ಕು ಜನರು ಮಾತ್ರ ಇರುವಂತೆಯೂ, ಕಾಳೀಚರಣನು ಮೇಲಿಂದಮೇಲೆ "ಆ ಕಾಡಿಗೆ" ಹೊಕ್ಕು ಅವರನ್ನು ಬಹಳವಾಗಿ ತೊಂದರೆಗೊಳಗಾಗಿಸುತ್ತಿದ್ದುದರಿಂದ, ಅವರುಗಳು ರೂಪಾಂತರವನ್ನು ಕಲ್ಪಿಸಿ, ಊರನ್ನು ಸೇರಿ, ಊರೊಳಗೆ ಇದ್ದುಕೊಂಡು, ಮುಂದಿನ ಕಾರ್ಯಗಳನ್ನು ಸಾಧಿಸಲೇರ್ಪಡಿಸಿದ್ದರೆಂತಲೂ ತಿಳಿಯಬಂದಿತಲ್ಲದೆ, ವಿಜಯಿನಿಯು ಭುಜಂಗನನ್ನು ಮದುವೆಯಾಗಲೊಪ್ಪುವುದಾದರೆ, [illegible]ರಿಗೂ, ಗಂಧರ್ವವಿವಾಹದಂತೆ ಮಾಡಿ ಒಂದೆರಡು ದಿವಸಗಳ ಪರ್ಯಂತರ ಅವರೀರ್ವರನ್ನೂ ಒಂದು ಕಡೆ ಇಟ್ಟುಬಿಟ್ಟರೆ, ಯೋಗ್ಯರ ಮನೆಯ ಹುಡುಗಿಯಾದ ಅವಳು ಪಾತಿವ್ರತ್ಯಕ್ಕೂ, ಮರ್ಯಾದೆಗೂ, ಅಂಜಿಕೊಂಡು, ಭುಜಂಗನನ್ನೇ ಎಲ್ಲರ ಸಮಕ್ಷಮದಲ್ಲಿಯೆ ವಿವಾಹಮಾಡಿಕೊಳ್ಳಬಹುದಾದುದರಿಂದ ಹಾಗೆ ಮಾಡಬೇಕೆಂತಲೂ ಇಲ್ಲವಾದರೆ ಅವಳನ್ನು ಯಮಪುರಿಗೆ ಕಳುಹಿಸಬೇಕೆಂದು ನಿರ್ಧರಿಸಿರುವರೆಂತಲೂ, ತಿಳಿಯಬಂದಿತು, ಇರ್ವರೂ ಒಂದು ಗವಿಯಂತಿದ್ದ ಸ್ಥಳವನ್ನು ಸೇರಿದರು. ಅದರ ಬಾಗಿಲಿನ ಹೊರವಳಯದಲ್ಲಿ ಇಬ್ಬರು ಮಲಗಿದ್ದರು. ಅವರು ನಿದ್ರಾವಶರಾಗುವುದನ್ನು ಕಂಡು, ಈ ಎರಡು ವ್ಯಕ್ತಿಗಳ ಪೈಕಿ ಒಬ್ಬನು, ಇನ್ನೊಬ್ಬನನ್ನು ಕೈ ಹಿಡಿದು ಸ್ವಲ್ಪ ಹಿಂದಕ್ಕೆಳೆದನು. ಅವನು "ಏಕೆ ಎಳೆಯುತ್ತಿ?" ಎಂದಂದು ಹಿಂದಕ್ಕೆ ತಿರುಗುವಷ್ಟರಲ್ಲಿಯೇ ಆ ವ್ಯಕ್ತಿಯು ತನ್ನ ಕೈಯ್ಯಲ್ಲಿದ್ದ ಪಿಸ್ತೂಲನ್ನು ಮುಖಕ್ಕೆ ಹಿಡಿದು, "ಉಸರಾಡಿದರೆ ಬದುಕಲಾರೆ!" ಎಂದು ಮೆಲ್ಲನೆ ಹೇಳಿದನು. ಆ ವ್ಯಕ್ತಿಯು ಹೆದರಿ, ಇವನು ಹೇಳಿದಂತೆಯೆ ತನ್ನ ಕೈಕಾಲುಗಳನ್ನು ಬೆನ್ನಿನ ಕಡೆಗೆ ನೀಡಿ ಮುಖವಡಿಯಾಗಿ ಮಲಗಿಕೊಂಡನು. ಈ ವ್ಯಕ್ತಿಯು ಅವನ ಕೈಕಾಲುಗಳನ್ನು ಕಟ್ಟಿ, ಮಲಗಿದ್ದವರಿಬ್ಬರಲ್ಲೊಬ್ಬನಿಗೆ "ಪ್ರಜ್ಞಾನಾಶಕ" ದ್ರವ (Chloro Form) ವನ್ನು ಉಪಯೋಗಿಸಿ ಮತ್ತೊಬ್ಬನ ಸಮೀಪಕ್ಕೆ ಹೋಗಿ ಹೊಡೆದೆಬ್ಬಿಸಿದನು. ಅವನು ಗಾಬರಿಯಿಂದ ಮೇಲಕ್ಕೇಳುವಷ್ಟರಲ್ಲಿಯೆ ಅವನಿಗೆ ಪಿಸ್ತೂಲನ್ನು ತೋರಿಸಿ "ಈಗ ನಿನಗೆ ಜೀವದಮೇಲಿನ ಆಶೆಯಿದ್ದರೆ ನನಗೆ ಸರಿಯಾದ ಪ್ರತ್ಯುತ್ತರ

ವನ್ನು ಕೊಡು. ಕೊಡದಿದ್ದರೆ, ಇಗೋ, ಕೊಂದುಬಿಡುವೆನು!" ಎಂದೆಂದು ಹೆದರಿಸಿದನು. ಅವನು ಹೆದರಿ, "ಸ್ವಾಮೀ, ನಾನೊಬ್ಬ ದಾರಿಕಾರನು, ನೀವೇನು ಬೇಕಾದರೂ ಮಾಡಿ! ನನಗೊಂದೂ ಗೊತ್ತಿಲ್ಲ!" ಎಂದು ಹೇಳಿದನು. ಆ ಮತ್ತೊಬ್ಬ ವ್ಯಕ್ತಿಯು ವೃಥಾ ಕಾಲವನ್ನು ಕಳೆಯುವುದು ಉಚಿತವಲ್ಲವೆಂದೆಂದುಕೊಂಡು, ಆ ಮೂವರನ್ನೂ ಹಿಡಿದು ಒಟ್ಟಾಗಿ ಬಿಗಿದು, ಒಂದು ಗೋಪ್ಯವಾದ ಸ್ಥಳದಲ್ಲಿರುಳಿಸಿದನು. ಅವರನ್ನು 'ಜಪ್ತಿ' ಮಾಡಿದಾಗ ದೀಪದಕಡ್ಡಿಗಳೂ, ಒಂದು ಬೀಗದ ಕೈಯಿ, ಇವುಗಳು ದೊರೆತವು. ಆ ವ್ಯಕ್ತಿಯು ಅವರನ್ನಲ್ಲಿ ಬಿಟ್ಟುಬಿಟ್ಟು, ತನ್ನ ಕೈ ಲಾಂದ್ರವನ್ನು ಹಚ್ಚಿಕೊಂಡು, ಗವಿಯನ್ನು ಶೋಧನೆಮಾಡಲಾರಂಭಿಸಿದನು. ಆ ಗವಿಯು ಮುಂದುಗಡೆ ಸ್ವಲ್ಪ ಪಜಾರದಂತೆ ಇತ್ತು. ಆ ಪಜಾರದಿಂದ ಒಳಗೆ ಹೋಗಲು, ಒಂದು ಬಾಗಿಲಿದ್ದು ಅವೆಲ್ಲವೂ, ಕಾಡುಗಲ್ಲುಗಳವುಗಳಾಗಿದ್ದುದರಿಂದ ಆ ಬಾಗಿಲನ್ನು ತೆಗೆಯುವ ವಿಧಾನವು ಗೊತ್ತಾಗದೆ ಆ ವ್ಯಕ್ತಿಯು ಸಿಕ್ಕಿದ ಕಲ್ಲುಗಳನ್ನೆಲ್ಲ ನೂಕಿ ನೂಕಿ ನೋಡುತ್ತಿದ್ದನು. ಹೀಗೆ ಪರೀಕ್ಷಿಸುತ್ತಿರುವಾಗ ಬಾಗಿಲಿನ ಸಮೀಪದಲ್ಲಿದ್ದ ಒಂದು ಚಿಕ್ಕ ಕಲ್ಲು ಅಲುಗಾಡುತ್ತಿದ್ದುದನ್ನು ಕಂಡು, ಆ ಕಲ್ಲನ್ನು ಕಿತ್ತು ಹಾಕಿದನು. ಅದರಿಂದುಂಟಾದ ಸಂದಿನಲ್ಲಿ ತನ್ನ ಕೈ ಲಾಂದ್ರವನ್ನು ಹಿಡಿದು ನೋಡಿದನು. ಅದು ಒಳಗೆ ಬಹು ವಿಸ್ತಾರವಾಗಿದ್ದಂತೆ ಬೋಧೆಯಾಯಿತು. ಆ ಕಂಡಿಯಲ್ಲಿ ಕೈಯನ್ನು ಹಾಕಿ, ಕೈಗೆ ಸಿಕ್ಕಬಹುದಾಗಿದ್ದುದನ್ನೆಲ್ಲ ಪರೀಕ್ಷಿಸಿ ನೋಡುತ್ತಿರಲು, ಒಳಗೆ ಒಂದು ಸರಪಣಿಯು ಸಿಕ್ಕಲು ಅದನ್ನು ಹಿಡಿದು ಎಳೆದನು. ಒಂದು ದೊಡ್ಡ ಕಲ್ಲು ತಕ್ಷಣವೇ ತೆರೆಯಾಯಿತು. ಕೂಡಲೆ ಆ ವ್ಯಕ್ತಿಯು ಒಳಗೆ ನುಗ್ಗಿ ನೋಡಿದನು. ಒಳಗೆ ದೃಷ್ಟಿಚ್ಛೇದಕವಾದ ಅಂಧಕಾರವು ವ್ಯಾಪ್ತವಾಗಿದ್ದುದರಿಂದ ಏನೂ ಕಾಣಿಸುತ್ತಿರಲಿಲ್ಲ. ಆದರೂ ತನ್ನ ಕೈ ಲಾಂದ್ರದಿಂದ ಸ್ಥಳವನ್ನು ಹೆಜ್ಜೆಹೆಜ್ಜೆಗೂ ಪರೀಕ್ಷಿಸುತ್ತ ಆ ಗವಿಯ ನಾನಾ ಭಾಗಗಳನ್ನು ನೋಡಿದನು. ಒಂದು ಕಡೆಯಲ್ಲಿದ್ದ ಒಂದು ಮುರುಕು ಪೆಟ್ಟಿಗೆಯಲ್ಲಿ ಒಂದೆರಡು ರಿವಾಲ್ವರುಗಳೂ, ಕೆಲವು ಫೋಟೋಗಳೂ, ಕೆಲವು ಕಾಗದಗಳೂ ಇದ್ದುವು. ಆ ವ್ಯಕ್ತಿಯು ಅವೆಲ್ಲವನ್ನೂ ತೆಗೆದು ಕೊಂಡು, ಆ ಕಾಗದಗಳನ್ನು ನೋಡುತ್ತಿರಲು, ಅವುಗಳಲ್ಲೊಂದು ಕಾಗದದಲ್ಲಿ ಹೀಗೆ ಬರೆಯಲ್ಪಟ್ಟಿದ್ದಿತು.

"ಇಲ್ಲಿ ಕಾಳೀಚರಣನೊಬ್ಬನಲ್ಲದೆ ಮತ್ತಾರೂ ನನ್ನ ಮೇಲೆ ಅನುಮಾನಪಡುವಂತಿಲ್ಲ. ಪ್ರೇಮಚಂದ್ರನ ವಿಚಾರವಾಗಿ ಕಾಳೀಚರಣನು ಶಂಕರೀದುರ್ಗಕ್ಕೆ ಹೋಗಿರುತ್ತಾನೆ. ಎಚ್ಚರಿಕೆ! ಇತಿ, ಭುಜಂಗ"

ಹಾಗೆಯೇ ನೋಡುವಾಗ ಆ ದಿವಸವೇ ಬರೆಯಲ್ಪಟ್ಟಿದ್ದ ಮತ್ತೊಂದು ಪತ್ರವು ಸಿಕ್ಕಿತು ಅದರಲ್ಲಿ :—

“ ನೀವು ಮಾಡಿದ ತಂತ್ರಕ್ಕೆ ಕಾಳೀಚರಣ ಮತ್ತು ತಾಂಡೋಣಿರಾಯರು, ಮೋಸ ಹೋಗಿ ದೇವೇಶನನ್ನು ಸೆರೆಯಲ್ಲಿಟ್ಟಿರುವರು. ನಿಮ್ಮ ಸಾಮರ್ಥ್ಯವು ಅಸಾಧಾರಣವಾದುದು. ನಿಮ್ಮ ಪ್ರಭಾವದಿಂದ ಈಗ ನನ್ನನ್ನು ಮಾತನಾಡಿಸುವವರೇ ಇಲ್ಲ ! ನೀವು ಹೇಳಿ ಕಳಿಸಿದಂತೆ ನಿಮಗೆ ವಾಸಕ್ಕೆ ತಕ್ಕ ಮನೆಯನ್ನು ನೋಡಿರುತ್ತೇನೆ, ಈ ದಿವಸ ರಾತ್ರಿಯೇ ಮನೆಗೆ ಬಂದು ಮನೆಯನ್ನು ಸೇರತಕ್ಕದ್ದು.

ಇತಿ, ಭುಜಂಗ”

ಎಂದು ಬರೆಯಲ್ಪಟ್ಟಿದ್ದಿತು.

ಇವುಗಳನ್ನು ನೋಡಿ, “ಎಲ ! ಎಲ ! ಭುಜಂಗ, ನೀನೂ, ನಿನ್ನ ಸಹಪಾಠಿಯೂ ಗಟ್ಟಿಗರೆಂದೂ, ನಿಮ್ಮ ಮೋಸಕ್ಕೆ ಎಲ್ಲರೂ ಸಿಕ್ಕಿಕೊಂಡು ನಿನ್ನನ್ನು ಮಾತನಾಡಿಸುವವರೇ ಇಲ್ಲವೆಂದೂ ತಿಳಿದುಕೊಂಡಿರುವೆಯಾ ? ಆವಾಗಲೂ ನಿನ್ನ ಮೇಲೆ ಕಣ್ಣನ್ನಿಟ್ಟುಕೊಂಡು, ಬೇಕೆಂತಲೇ ನಿನ್ನನ್ನೀ ರೀತಿಯಲ್ಲಾಡಲು ಬಿಟ್ಟುಕೊಂಡಿರುವ ಕಾಳೀಚರಣನ ಬಲೆಯಲ್ಲಿ ನೀನು ಬಿದ್ದಿರುವೆಯೋ ಅಥವಾ ಕಾಳೀಚರಣನು ಮೋಸ ಹೋಗಿರುವನೋ ? ನಿಜಸ್ಥಿತಿಯು ಅತ್ಯಲ್ಪಕಾಲದಲ್ಲಿಯೇ ಹೊರಬೀಳುವುದು ! ” ಎಂದಂದುಕೊಳ್ಳುವಷ್ಟರಲ್ಲಿಯೆ ಹೊರಗಡೆಯಲ್ಲಾರೋ ಮಾತನಾಡುತ್ತಿದ್ದಂತೆ ಬೋಧೆಯಾಗಲು, ಆ ವ್ಯಕ್ತಿಯು,—ಅಂದರೆ, ಸ್ವಯಂ ಕಾಳೀಚರಣನೆಂದು ಹೇಳುವುದು ಪ್ರಕೃತದಲ್ಲಿ ಅತ್ಯುಕ್ತಿಯೆ ;—ಹೊರಗಡೆಯಿಂದ ನೋಡುವವರಿಗೆ ತಾನು ಸರಿಯಾಗಿ ಕಾಣುವಂತೆ ದೀಪವನ್ನಿರಿಸಿ, ತಾನು ಮತ್ತೊಂದು ಮೂಲೆಯಲ್ಲಿ ನಿಂತುಕೊಂಡನು.

ಹೊರಗಡೆಯಲ್ಲಿದ್ದವರು ಆ ದೀಪದ ಬೆಳಕನ್ನು ಕಂಡು, ‘ ಈ ವೇಳೆ ನಾವು ನಾಲ್ಕು ಜನರೂ ಒಟ್ಟಾಗಿ ನುಗ್ಗಿ, ಅವನನ್ನು ಹಿಡಿಯಬೇಕು. ನಮ್ಮಲ್ಲಿ ರಿವಾಲ್ವರುಗಳಿದ್ದಿದ್ದರೆ ಅವನನ್ನು ಇಲ್ಲಿಂದಲೇ ಹೊಡೆದುಬಿಡಬಹುದಾಗಿತ್ತು. ಗ್ರಹಚಾರವಶಾತ್ ಅವೂಕೂಡ ಒಳಗೆ ಸಿಕ್ಕಿಹೋಗಿವೆ ! ಏನಾದರೂ ಆಗಲಿ ! ಪ್ರಾಣಭಯಕ್ಕೆ ಹಿಂಜರಿಯದೆ ನುಗ್ಗಿಯೇ ಬಿಡಬೇಕು ! ಈ ಗವಿಗೆ ಇನ್ನೊಂದು ಬಾಗಿಲಿರುವುದು ಅವನಿಗೆ ಗೊತ್ತಿಲ್ಲದಿರುವುದರಿಂದ ಎರಡು ಬಾಗಿಲುಗಳಿಂದಲೂ ಒಳಗೆ ನುಗ್ಗಿ ಅವನನ್ನು ಹಿಡಿಯೋಣ ! ” ಎಂದು ಮಾತನಾಡಿಕೊಂಡು ಹಾಗೆಯೆ ಇರ್ಕಡೆಗಳಿಂದಲೂ ಅವರು ಒಳಗೆ ನುಗ್ಗಿದರು.

ಚತುರ್ದಶಗುಚ್ಛ.

ನಾಲ್ಕು ಜನರೂ ಒಳಗೆ ನುಗ್ಗಿದರು. ಒಂದು ಮೂಲೆಯಲ್ಲಿ ಕುಳಿತಿದ್ದ ಕಾಳೀಚರಣನು ಮತ್ತೊಂದು ಕಡೆಯಿಂದ ಕೇಳಿಬರುವಂತೆ, “ ಈ ಕತ್ತಲೆಮನೆಯಲ್ಲಿ ನಿಮ್ಮೊಂದಿಗೆ ಇನ್ನು ನಾಲ್ಕು ಜನರು ಸೇರಿದರೂ ನನ್ನನ್ನು ಹಿಡಿಯಲಾರಿರಿ. ಈಗ ನಿಮ್ಮ ಪ್ರಾಣವು ನನ್ನಧೀನದಲ್ಲಿದೆ! ” ಎಂದಂದನು.

ಈ ಮಾತನ್ನು ಕೇಳಿ ಅವರು ಶಬ್ದವಾದಂತೆ ಕೇಳಿಬಂದಕಡೆಗೆ ನುಗ್ಗಲು ಕಾಳೀಚರಣನು ಚಾರ್‍ಮಾಡದೇ ಇದ್ದ ರಿವಾಲ್ವರೊಂದನ್ನು ಜೋರಾಗಿ ಅವರ ಕಡೆಗೆ ಎಸೆದನು. ಅದು ಒಬ್ಬನ ತಲೆಗೆ ತಗುಲಿತು. ಅವನು “ ಅಯ್ಯೋ! ಸತ್ತೆ! ಸೂಳೇಮಗ ಪುನಃ ಕಲ್ಲಿನಿಂದ ಹೊಡೆದ!! ” ಎಂದು ಕಿರಿಚಿಕೊಳ್ಳುತ್ತ ನೆಲದಮೇಲೆ ಬಿದ್ದನು. ಉಳಿದ ಮೂರು ಜನರು, “ ಕಾಳೀಚರಣ! ನೀನು ಈ ದಿವಸ ಈ ಗವಿಯಿಂದ ನಿನ್ನೀ ಪ್ರಾಣಸಹಿತನಾಗಿ ಹೋಗಲಾರೆ! ಅಷ್ಟರೊಳಗಾಗಿ ನೀನೇನೇನು ಅನಾಹುತಗಳನ್ನು ಮಾಡಬೇಕೆಂದಿರುವೆಯೋ ಮಾಡಿಬಿಡು! ”ಎಂದಂದು ಒಂದೊಂದು ಬಾಗಿಲಿನ ಸಮೀಪದಲ್ಲಿ ಒಬ್ಬೊಬ್ಬನು ನಿಂತುಕೊಂಡು ಕಾಳೀಚರಣನು ಹೊರಗೆ ಹೋಗದಂತೆ ನೋಡಿಕೊಳ್ಳಬೇಕೆಂತಲೂ ಮತ್ತೊಬ್ಬನು ಒಳಗೆಲ್ಲಾ ಹುಡುಕಬೇಕೆಂತಲೂ ನಿಶ್ಚಯಿಸಿ ಹಾಗೆಯೇ ಮಾಡಲಾರಂಭಿಸಿದರು.

ಕಾಳೀಚರಣನಿಗೆ ಇವರ ಉಪಾಯದಿಂದ ಬಹು ಸಂತೋಷವಾಯಿತು. ಬಹು ಜಾಗರೂಕತೆಯಿಂದ, ಹುಡುಕಿಕೊಂಡು ಬರುತ್ತಿರುವವನನ್ನು ಪ್ರಥಮತಃ ಹಿಡಿಯಬೇಕೆಂದಿದ್ದನು. ಆ ವ್ಯಕ್ತಿಯು ದೀಪವನ್ನು ತೆಗೆದುಕೊಳ್ಳಲು ಹೋಗುತ್ತಿರುವುದನ್ನು ಕಂಡು ತನ್ನ ಕೈಯಲ್ಲಿದ್ದ ಪಿಸ್ತೂಲಿನಿಂದ ದೀಪಕ್ಕೆ ಹೊಡೆಯಲು ದೀಪವು ಕೆಳಗೆ ಬಿದ್ದು ಒಡೆದು ಹೋಯಿತು! ಕಾಳೀಚರಣನು ತತ್‍ಕ್ಷಣವೇ ಆ ವ್ಯಕ್ತಿಯಕಡೆಗೆ ಹಾರಿ ಅವನನ್ನು ಒಂದೇ ಹಿಡಿತದಿಂದ ಉಸಿರಾಡದಂತೆ ಹಿಡಿದು ‘ಅವನಿಗೆ “ಪ್ರಜ್ಞಾನಾಶಕದ್ರವ (Chloroform) ವನ್ನು ಉಪಯೋಗಿಸಿದನಲ್ಲದೆ ವಿಕಾರಸ್ವರದಿಂದ ಅಯ್ಯೋ! ಸತ್ತೆ! ಹೊಡದೇಬಿಟ್ಟ!! ಎಂದು ಕೂಗಿಕೊಂಡನು. ಉಭಯದ್ವಾರಗಳಲ್ಲಿಯೂ ಇದ್ದವರು ಈ ಕೂಗನ್ನು ಕೇಳಿ ತಮ್ಮ ಕಡೆಯವರೀರ್ವರೂ ಕಾಳೀಚರಣನಿಗೆ ತುತ್ತಾದುದರಿಂದ ಕಾವಲಿರುವುದನುಚಿತವೆಂದಂದುಕೊಂಡು ಪಲಾಯನಸೂಕ್ತವನ್ನು ಪಠಿಸಲಾರಂಭಿಸಿದರು. ಆಗ ಕಾಳೀಚರಣನು ಅವರನ್ನು ಆ ರೀತಿಯಲ್ಲಿ ಓಡಾಡಿಸುವುದು ಅಯುಕ್ತವೆಂದಂದು

ಕೊಂಡು ಆವರೀರ್ವರಲ್ಲೋರ್ವನನ್ನು ಹಿಂಬಾಲಿಸಿದನು. ಆ ವ್ಯಕ್ತಿಯು ಬಹು ವೇಗ ವಾಗಿ ಓಡುತ್ತಿದ್ದುದರಿಂದಲೂ, ಕಾರ್ಗತ್ತಲೆಯಲ್ಲಿ ಅವನು ಸುಲಭವಾಗಿ ತಪ್ಪಿಸಿಕೊಳ್ಳಲು ಸಂಭವವಿದ್ದುದರಿಂದಲೂ ಕಾಳೀಚರಣನು ಉಪಾಯರಹಿತನಾಗಿ ತನ್ನ ಪಿಸ್ತೂಲಿನಿಂದ ಅವನನ್ನು ಹೊಡದು ಕೆಡವಿದನು.

ಕಾಳೀಚರಣನು, ಬಿದ್ದ ವ್ಯಕ್ತಿಯ ಸಮೀಪಕ್ಕೆ ಹೋಗಿ, ಅವನನ್ನು ನೋಡಿ ಅವನು ತನಗೆ ಕೇವಲ ನೂತನ ವ್ಯಕ್ತಿಯಾಗಿ ಕಂಡುಬಂದುದರಿಂದ ಆಶ್ಚರ್ಯಚಕಿತನಾಗಿ, "ನೀನಾರು ?" ಎಂದು ಕೇಳಿದನು. ವ್ಯಕ್ತಿಯು ಇವನ ಮುಖವನ್ನು ನೋಡಿ ಜುಗುಪ್ಸೆಯಿಂದಲೂ, ಸಂಕಷ್ಟದಿಂದಲೂ, ಸ್ತಬ್ಧನಾಗಿ ಆವಮಾತನ್ನೂ ಆಡದೆ ಇದ್ದನು. ಅವನನ್ನು ಸ್ವಲ್ಪ ಉಪಚರಿಸಿ, "ನೀನಾರು ? ಖಂಡಿತವಾಗಿ ಹೇಳು. ಇನ್ನತ್ಯಲ್ಪಕಾಲದಲ್ಲಿಯೆ ನೀನೀ ನಶ್ವರವಾದ ದೇಹವನ್ನು ಬಿಟ್ಟು ಹೊರಡುವವನಾಗಿರುವೆ. ನೀನೇ ಮೃತನಾದ ಮೇಲೆ ಮತ್ತಾರು ಕೆಟ್ಟರೂ, ಬದುಕಿದರೂ ಕೂಡ ನಿನಗೇನು ತಾನೆ ಆಗಬಲ್ಲದು ?" ಎಂದು ಮೊದಲಾಗಿ ಅನೇಕ ಸಾಂತ್ವ ವಚನಗಳಿಂದ ಅವನನ್ನು ಸಮಾಧಾನಗೊಳಿಸಲು, ಆ ವ್ಯಕ್ತಿಯು ಸ್ವಲ್ಪ ವ್ಯಥಿತನಾಗಿ, "ನಾನಾವ ವಿಧವಾದ ತಪ್ಪನ್ನೂ ಮಾಡಿದವನಲ್ಲ. ನಾನೀ ಪಾಷಂಡರ ಪಾದಸೇನೆಯಲ್ಲಿ ಸಿಲುಕಿ ಹೀಗಾದೆ!" ಎಂದಂದು ಕಂಬನಿ ಗರೆಯಬಾರಂಭಿಸಿದನು. ಅವನ ಸ್ಥಿತಿಯನ್ನು ಕಂಡು ಅವನನ್ನು ಅತಿಶಯವಾದ ಮಾತುಗಳಿಂದ ಹೊಗಳಿ ನಿಜಸ್ಥಿತಿಯನ್ನು ಹೊರಪಡಿಸಬೇಕೆಂಬ ಅಪೇಕ್ಷೆಯು ಉಂಟಾಗುವಂತೆಸಗಿದುದರಿಂದ ಅವನು ಸಂಕ್ಷೇಪವಾಗಿ, ಆ ಗುಂಪಿಗೆ ಯಜಮಾನನಾಗಿ ಅಂತಹ ತಂತ್ರಗಳನ್ನೂ, ಭಯಂಕರ ಕೃತ್ಯಗಳನ್ನೂ, ನಡೆಯಿಸುತ್ತಿದ್ದವನು ಪುರಂದರನೆಂಬುವವನೆಂತಲೂ, ಅವನೂ ಭುಜಂಗನೂ ಸೇರಿ ಪ್ರೇಮಚಂದ್ರ, ಶಂಭುದತ್ತ ಮತ್ತು ಶರಚ್ಚಂದ್ರರ ಆಸ್ತಿಗಳನ್ನೆಲ್ಲ ಅಪಹರಿಸಲು ಅಸ್ಟೆಲ್ಲ ಮಾಡಿದರೆಂತಲೂ ಅವರ ಕಪಟ ತಂತ್ರಗಳಿಗೆ ಸಿಲುಕಿ ಅವರೊಂದಿಗೆ ಕಾವೇರೀ ನದಿಯನ್ನು ದಾಟುತ್ತಿದ್ದಾಗ ಅವರು ಮೋಸದಿಂದ ದೋಣಿಯನ್ನು ಮುಳುಗಿಸಿ ಪ್ರೇಮಚಂದ್ರನನ್ನು ಮುಳಿಗಿಸಿದರೆಂತಲೂ, ...ನು ಅವರಲ್ಲಿ ಕೈಸೆರೆಯಾಗಿರುವನೆಂತಲೂ ; ತಮ್ಮ ಪ್ರಯತ್ನಗಳಾವುವೂ ನಡೆ...ಂದ ಭುಜಂಗನು ವಿಜಯಿನಿಯನ್ನೂ, ಪುರಂದರನು ವಿಲಾಸಿನಿಯನ್ನೂ, ...ಂದಲಾದರೂ ಅಪರಿಶುದ್ಧರನ್ನಾಗಿಸಿ ಬಿಟ್ಟರೆ ಸತ್ಕುಲಪ್ರಸೂತರಾದ ...ಕನ್ನ್ಯ, ... ಕೃತ್ಯಗಳನ್ನೆಲ್ಲ ... ಅವ...ನೆಂ...ಗರೂ ಆಗ... ಅ...ಸಿ, ಅವರನ್ನು ಊರ...ಲ್ಲಿ ಗೋಪ್ಯವಾಗಿ ಇರಿಸಿರುವರೆಂತಲೂ, ತಿಳಿಸಿದನಲ್ಲದೆ ಪುರಂದ

ರನ ಆಜ್ಞಾನುಸಾರವಾಗಿ ಪಟ್ಟಣದಲ್ಲಿದ್ದು ತನಗೆ ತಿಳಿದ ಸಂಗತಿಗಳನ್ನು ತನ್ನವರಿಗೆ ತಿಳಿಸುತ್ತ ತಾನು ಗೂಢಚಾರನಾಗಿದ್ದೆನೆಂತಲೂ ತಿಳಿಸಿದನು. ಪ್ರಾಣೋತ್ಕ್ರಮಣ ಕಾಲವು ಸಮೀಪಿಸಲು ಸ್ವಲ್ಪಕಾಲ ನೀರವನಾಗಿದ್ದು, ಮತ್ತೊಂದು ತಡವೆ ಕಣ್ದೆರದು ನೋಡಿ, "ತಾವು ಅಸಹಾಯ ಶೂರರಾದ ಕಾಳೀಚರಣರೇ ಇರಬಹುದೆಂದು ನಾನು ಭಾವಿಸುವೆನು. ಅದು ಸರಿಯೆ?" ಎಂದು ಕೇಳಿದನು.

ಕಾಳೀಚರಣ—"ಹೌದು ! ನನ್ನಿಂದೇನಾಗಬೇಕಾಗಿದ್ದರೂ ಧಾರಾಳವಾಗಿ ಹೇಳಬಹುದು !"

ವ್ಯಕ್ತಿ—"ನನ್ನದೊಂದೇ ವಿಜ್ಞಾಪನೆ, ಈ ಅಂತ್ಯಕಾಲದ, ಮರಣೋನ್ಮುಖಿಯಾಗಿರುವ ನನ್ನ ವಿಜ್ಞಾಪನೆಯನ್ನು ಖಂಡಿತವಾಗಿಯೂ ನಡೆಯಿಸಬೇಕು."

ಕಾಳೀಚರಣ—"ಆಗಬಹುದು."

ವ್ಯಕ್ತಿ—"ಇವರ ತಂತ್ರಗಳಿಂದ ಮೋಸಹೋಗಿ ಸಾತ್ವಿಕ ಶಿರೋಮಣಿಯಾದ ದೇವೇಶನ ಮೇಲೆ ತಾವು ಹೊರಿಸಿರುವ ತಪ್ಪು ಕೇವಲ ಅಸ್ಪತ ! ಆದರಿಂದ ಆತನನ್ನು ಉದ್ಧರಿಸಬೇಕು. ಈ ಪುರಂದರನೆಂಬುವನು ಬಹು ತಂತ್ರಿಯಾದುದರಿಂದ ತಮ್ಮ ಕೈಯಿಂದ ತಪ್ಪಿಸಿಕೊಂಡರೂ ತಪ್ಪಿಸಿಕೊಳ್ಳಬಹುದು. ಆದರೂ ಬಾಧ್ಯರಿಲ್ಲದೆ ಸರ್ಕಾರದವರ ಅಧೀನದಲ್ಲಿರುವ ಪ್ರೇಮಚಂದ್ರನ ಆಸ್ತಿಯನ್ನು ಈ ಪುರಂದರನು ದಾಯಾದಿಯಾದುದರಿಂದ ಸ್ವಾಧೀನಪಡಿಸಿಕೊಳ್ಳಲು ಬರಬಹುದು. ಆದಕ್ಕಾಗಿಯೇ ಈ ಕೃತ್ಯಗಳನ್ನೆಲ್ಲ ಅವನಾಚರಿಸಿರುವುದು. ಆಗಲಾದರೂ, ಅವನನ್ನು ಹಿಡಿದು ಶಿಕ್ಷಿಸಬೇಕು!" ಎಂದೂ ತನ್ನ ಹೆಸರು ಗಂಗಾರಾಮನೆಂದೂ ಹೇಳಿ ಹಾಗೆಯೇ ಗತಪ್ರಾಣನಾದನು.

ಕಾಳೀಚರಣನು ತಾನು ಮುಂದೆಸಗಬೇಕಾಗಿದ್ದ ಕೆಲಸವು ಬಹಳವಾಗಿದ್ದುದರಿಂದ ಕೂಡಲೆ ನಗರಕ್ಕೆ ಹೊರಟು ಭುಜಂಗನ ಮನೆಗೆ ಹೋದನು.

ಆಗ ರಾತ್ರೆ ಒಂದು ಗಂಟೆಯ ಮೇಲಾಗಿದ್ದಿತು. ಬಾಗಿಲನ್ನು ತಟ್ಟಿದನು. ಭುಜಂಗನೊಂದಿಗೆ ಒಬ್ಬ ವೃದ್ಧೆಯು ವಾಸಿಸುತ್ತಿದ್ದಳೆಂಬುದನ್ನು ನಮ್ಮ ವಾಠಕಮಹಾಶಯರು ಮರೆತಿರಲಿಕ್ಕಿಲ್ಲ. ಆ ಮುದುಕಿಯು ಅಷ್ಟು ಹೊತ್ತಿನಲ್ಲಿ ಕದವನ್ನು ತಟ್ಟುವರಾರೆಂದು ಬೇಸರದಿಂದ, "ಏನು ಹಾಳ ಕೆಲಸವೋ! ಈ ಮುಂಡೇ ಮಕ್ಕಳಿಗೆ ಹೊತ್ತಿಲ್ಲ, ಗೊತ್ತಿಲ್ಲ! ಇವರಿಗೆ ಬಾಗಿಲು ತೆಗೆಯುವುದರಲ್ಲಿಯೇ ನನ್ನ ಪರ್ಯವಸಾನವಾಯಿತು!" ಎಂದು ಗೊಣಗುಟ್ಟಿಕೊಳ್ಳುತ್ತ ಬಂದು, "ಯಾರೋ?" ಎಂದಂದಳು. ಕಾಳೀಚರಣನು, "ಅಜ್ಜೀ! ನಾನು ಗಂಗಾರಾಮ್! ಗೊತ್ತಿಲ್ಲವೆ?

ರಾಯರು ಮನೆಯಲ್ಲಿದ್ದಾರೋ ?" ಎಂದು ಗಂಗಾರಾಮಿನ ಸ್ವರವನ್ನೇ ಅನುಕರಿಸಿ ಕೇಳಲು ಮುದುಕಿಯು, "ಯಾರು ಗಂಗೂವೇ ? ಏನು ಸಮಾಚಾರ! ಇಷ್ಟು ಹೊತ್ತಿನಲ್ಲಿ ಏಕೆ ಬಂದೆ ?" ಎಂದು ಕೇಳಿದಳು.

ಕಾಳೀಚರಣ—"ಯಜಮಾನರು ರಾಯರನ್ನು ಕರಕೊಂಡು ಬರಹೇಳಿದರು."

ಮುದುಕಿ—"ಅಯ್ಯೋ ! ಏನಾ ರಾಯನೋ ! ಏನುಗೋಳೋ ! ಯಾರೋ ಒಬ್ಬ ಅವನಿಗೆ ಗುರುತಾದವರಂತೆ, ಅವರು ಈ ಊರಿಗೆ ಬಂದಿದ್ದಾರಂತೆ, ನಿನ್ನೇ ದಿವಸದಿಂದ ಊಟಾ ತಿಂಡೀಯಿಲ್ಲಾ ಅಲ್ಲಿಯೇ ಕಣಪ್ಪ ! ಮನೆಗೆಕೂಡ ಬರುವುದಿಲ್ಲ!"

ಕಾಳೀಚರಣ—"ಆ ಮನೆಗೆ ಹೋದರೆ ಈಗ ಸಿಗಬಹುದೇನು ? ಅದೆಲ್ಲಿದೆ ?"

ಮುದುಕಿ—"ಅದೆಲ್ಲೋ ಅಪ್ಪ ನನಗೆ ಗೊತ್ತಿಲ್ಲ!" ಎಂದು ಹೇಳಿದಳು. ಕಾಳೀಚರಣನು ಮನೆಯನ್ನು ಪತ್ತೇಮಾಡಲು ತಾನು ಉಪಯೋಗಿಸಿದ ಉಪಾಯವು ನಿಷ್ಫಲವಾದುದರಿಂದ ಹಿಂದಿರುಗಿದನು. ಆದರೇನು ನಿರಾಶನೆ ? ಇಲ್ಲ ! ಕೂಡಲೆ "ಸಂಭಾಷಣಯಂತ್ರ" (telephone) ದ "ಎಕ್ಸ್ಛೇಂಜ್ ಆಫೀಸಿ" ಗೆ ಹೋಗಿ, ನಗರದ ಎಲ್ಲಾ ಪೋಲೀಸ್ ಸ್ಟೇಷನ್ನುಗಳಿಗೂ, ಆಯಾಯ ಸ್ಟೇಷನ್ ಸರಹದ್ದುಗಳಲ್ಲಿ ಜನಾವಾಸರಹಿತವಾದ ಮತ್ತು ಒಂದೆರಡು ದಿವಸಗಳಿಂದೀಚೆಗೆ ಹೊಸಬರು ವಾಸಕ್ಕೆ ಉಪಯೋಗಿಸುತ್ತಿರುವ, ಮನೆಗಳನ್ನು ತಿಳಿಸಬೇಕೆಂತಲೂ, ಅವರವರ ಅಧೀನದಲ್ಲಿರುವ ಗೂಢಚಾರರನ್ನು ಕೂಡಲೆ ಇನ್ಸ್ಪೆಕ್ಟರ ಮನೆಗೆ ಕಳುಹಿಸಬೇಕೆಂತಲೂ, ಯಂತ್ರದ ಮೂಲಕ ತಿಳಿಸಿ ಇನ್ಸ್ಪೆಕ್ಟರ್ ತಾಂಡೋಣಿರಾಯರ ಮನೆಗೆ ಹೋದನು.

ಅಪ್ಪಣೆಯಪ್ರಕಾರ ಬಂದ ಗೂಢಚಾರರಿಗೆ ಮಾಡಬೇಕಾದ ಕೆಲಸವನ್ನು ತಿಳಿಸಿ ತಕ್ಕ ಪೋಲೀಸಿನವರನ್ನು ಕರೆದುಕೊಂಡು ನಗರದ ಹೊರವಳಯದಲ್ಲಿದ್ದ ಆ ಅರಣ್ಯಕ್ಕೆ ಹೋಗಿ ಗವಿಯಲ್ಲಿ ಬಂಧಿತರಾಗಿದ್ದ ಜನರನ್ನು ಹಿಡಿದುಕೊಂಡು ಪ್ರಭಾತಕಾಲಕ್ಕೆ ಮುಂಚಿತವಾಗಿಯೇ ಕಾಳೀಚರಣನು ಊರನ್ನು ಸೇರಿದನು. ಆ ವೇಳೆಗೆ ಗೂಢಚಾರರು ಕಾಳೀಚರಣನು ಹೇಳಿದಂತೆ ಎಲ್ಲವನ್ನೂ ಸಿದ್ಧಗೊಳಿಸಿಕೊಂಡು ಬಂದಿದ್ದರು. ಕಾಳೀಚರಣನು ಸಂಗತಿಗಳೆಲ್ಲವನ್ನೂ ತಿಳಿದುಕೊಂಡು ಬುಡಬುಡುಕಿಯುವನಂತೆ ಉಡುಪುಗಳನ್ನು ಧರಿಸಿ, ಗೂಢಚಾರರಿಂದ ತಿಳುಹಿಸಲ್ಪಟ್ಟಿದ್ದ ಒಂದು ಮನೆಗೆ ಸೂರ್ಯೋದಯ ಸಮಯದಲ್ಲಿ ಹೋದನು.

ಆ ಮನೆಯು ಆ ಊರಿನಲ್ಲಿ ಜನರು ಅತ್ಯಂತ ವಿರಳವಾಗಿದ್ದ ಒಂದು ಪ್ರದೇಶದಲ್ಲಿದ್ದಿತು. ಅದು ಬಹಳ ದೊಡ್ಡದು. ಅದರ ಕೆಲವು ಭಾಗಗಳು ಆಗತಾನೆ ಸರಿಪಡಿಸಲ್ಪ

ಟ್ಟಿದ್ದುವು. ಭುಜಂಗನು ಮನೆಯಿಂದ ಹೊರಹೊರಟನು. ಕೂಡಲೆ ವೇಷಧಾರಿಯಾಗಿದ್ದ ಕಾಳೀಚರಣನು ತನ್ನ ವಾದ್ಯವನ್ನು ಧ್ವನಿಮಾಡಿ “ ಜಯ! ಜಯ!! ” ಎಂದು ಹೊಗಳಿದನು. ಭುಜಂಗನಿಗೆ ಇಂತಹ ಜನಗಳ ಮಾತಿನಲ್ಲಿ ಹೆಚ್ಚಾಗಿ ನಂಬುಗೆಯಾಗಿದ್ದುದರಿಂದ, “ಏ! ಹಕ್ಕೀನರಸಯ್ಯ! ಈ ದಿವಸ ಹಕ್ಕಿ ಹೇಳಿದ ವಿಶೇಷ ವಾರ್ತೆಯೇನಾದರೂ ಉಂಟೋ? ” ಎಂದು ಕೇಳಿದನು.

ಕಾಳೀಚರಣ:—(ಬುಡುಬುಡುಕೆಯನ್ನು ಬಹು ರಭಸದಿಂದ ಧ್ವನಿಗೆಯ್ದು) “ಸ್ವಾಮಿಗೆ ಜಯವುಂಟು! ಹೆಣ್ಣಿನದೆಶೆಯಿಂದ ಹೇರಳವಾಗಿ ಹೊನ್ನು ಕೈಸೇರುವುದು. ಹೆಣ್ಣಿನ್ನೂ ಸ್ವಾಧೀನವಾಗಲಿಲ್ಲವೆಂದು ಸಂಕೋಚ. ಭಯಕಾಲವು ಕಳೆಯಿತು! ಜಯಕಾಲವು ಸಮೀಪಿಸಿತು!! ” ಎಂದೆಂದು, ಮತ್ತೊಮ್ಮೆ ವಾದ್ಯದ ವಿಚಿತ್ರವಾದ ಧ್ವನಿಯನ್ನು ವ್ಯಕ್ತಗೊಳಿಸಿ, “ ಸ್ವಾಮಿಗೆ ಜಯವಾಗುತ್ತದೆ! ನರಸನ ಮಾತು ಎಂದಿಗೂ ಸುಳ್ಳಲ್ಲ!! ಸ್ವಾಮಿ ಸುಮ್ಮನಿರಕೂಡದು. ನರಸನು ವಂಶಪಾರಂಪರೆಯಾಗಿ ಬಂದಿರುವ ಗೀರ್ವಾಣಭಾಷೆಯ ಮಹಿಮೆಯಿಂದ ಹಕ್ಕಿ ಹೇಳಿದ್ದೆಲ್ಲವನ್ನೂ ತಿಳಿದುಕೊಂಡು ಬಂದಿರುವನು. ದಿಟವಾದರೆ ದಿಟವೆನ್ನಬೇಕು! ಸಟೆಯಾದರೆ ಸಟೆಯೆನ್ನಬೇಕು. ಸ್ವಾಮಿಯು ಒಂದು ದೊಡ್ಡ ಇನಾಮು ಕೊಡಬೇಕು. ನರಸನು ನಾಪಾಡಿಯುವನಲ್ಲ ಹೇಳಿದ ಮಾತೊಂದೂ ಸುಳ್ಳಾಗುವುದಲ್ಲ. ಸ್ವಾಮಿಯ ಸಮಾಚಾರವನ್ನು ಇಂತಹ ಬಹಿರಂಗಸ್ಥಳದಲ್ಲಿ ಹೇಳತಕ್ಕದ್ದಲ್ಲ. ” ಎಂದೆಂದು ಮತ್ತೊಮ್ಮೆ ವಾದ್ಯರವವನ್ನು ಮಾಡಿ “ ಇನಾಮು ಬರಬೇಕು ಸ್ವಾಮೀ! ” ಎಂದೆಂದನು.

ಭುಜಂಗನಿಗೆ ಆಶೆಯು ಹೆಚ್ಚಾಯಿತು. ಬುಡುಬುಡುಕೆಯವನನ್ನು ಕೇಳಕೇಳುತ್ತ ಹೋದ ಹಾಗೆಲ್ಲ ಅವನು ತನ್ನ ವಾಗ್ವೈಖರಿಯಿಂದ ಭುಜಂಗನಿಗೆ ಮತ್ತಷ್ಟು ಆಶೆಯು ಹೆಚ್ಚಾಗುವಂತೆ ಮಾಡಿದನು. ಭುಜಂಗನು ಇವನಿಂದೆಲ್ಲಾ ಸಂಗತಿಗಳನ್ನೂ ತಿಳಿದುಕೊಳ್ಳಬೇಕೆಂದೆಣಿಸಿ, “ ನರಸ! ಇದು ನಮ್ಮ ಮನೆಯಲ್ಲ! ನಮ್ಮ ಮನೆಗೆ ಹೋಗೋಣ ಬಾ! ನಿನ್ನ ಹಕ್ಕಿಯು ಹೇಳಿದುದನ್ನೆಲ್ಲ ಹೇಳುವಿಯಂತೆ!! ” ಎಂದೆಂದನು. ನರಸನು ಪುನಃ ಬುಡುಬುಡುಕೆಯನ್ನು ಚೆನ್ನಾಗಿ ಬಾರಿಸಿ, “ ಪರಾಕು ಸ್ವಾಮೀ! ಜಯವಾಗಲಿ ಸ್ವಾಮಿ!! ಬುದ್ಧಿಯವರಿಗೆ ಈ ಮನೆಯಲ್ಲಿ ಸರ್ವಸ್ವತಂತ್ರವುಂಟು. ದೇವರ ಜೀವವಾದ ಅಮ್ಮನವರು ಇಲ್ಲೇ ಉಂಟು!! ಈ ಹೊತ್ತು ದೇವರು ಕೃಪೆಮಾಡಿಯಾನು!!! ಲಕ್ಷ್ಮೀ ಕಟಾಕ್ಷ ಒದಗೀತು! ಬುದ್ಧಿಯವರಿಗೆ ಸಂತೋಷವಾದೀತು!! ನರಸನ ಮಾತು ಸುಳ್ಳಲ್ಲ! ” ಎಂದು ಹೇಳಲು, ಭುಜಂಗನಿಗೆ ಆಶೆಯು ಮಿತಿಮೀರಿತು.

ಪಂಚದಶಗುಚ್ಛ.

ಕಾಳೀಚರಣನು ಬುಡುಬುಡುಕಿಯವನ ವೇಷದಿಂದ ತಾನು ಸಾಧಿಸಬೇಕೆಂದಿದ್ದ ಉದ್ಯಮವನ್ನು ಚೆನ್ನಾಗಿ ಸಾಧಿಸಿದನು. ಭುಜಂಗನು ಸಂಪೂರ್ಣವಾಗಿ ಕಾಳೀಚರಣನ ಬಲೆಯಲ್ಲಿ ಬಿದ್ದನು. ಅಷ್ಟೇ ಏಕೆ? ಅವನು ಈ ಬುಡುಬುಡುಕಿಯುವನ ಮಾತಿನಂತೆ ನಡೆಯಲು ಈಷದಪಿ ಹಿಂಜರಿಯುತ್ತಿರಲಿಲ್ಲ. ಇವನು ವಿಷಪಾನವನ್ನು ಮಾಡೆಂದು ಹೇಳಿದ್ದರೆ ಅದನ್ನು ಕೂಡ ಮಾಡಲು ಸಿದ್ಧನಾಗಿದ್ದನು. ಈ ಸಂದರ್ಭವನ್ನರಿತು, ಕಾಳೀಚರಣನು ತನ್ನ ವಾಕ್ಚಾತುರ್ಯದಿಂದ ಅವನನ್ನು ಕೇವಲ ಮುಗ್ಧನಾಗುವಂತೆ ಮಾಡಿದನಲ್ಲದೆ ಅವನ ಪರಮಗುರುವಾದ ಪುರಂದರನು ಕೇವಲ ನಟನೆಯ ಮನುಷ್ಯನೆಂದೂ, ಅವನು ಕೇವಲ ತನ್ನ ಸ್ವಾರ್ಥಕ್ಕಾಗಿ ಆ ರೀತಿ ನಂಬಿಕೆಯನ್ನು ಹುಟ್ಟಿಸಿ, ಕಾರ್ಯವು ಕೈಗೂಡಿದ ಮೇಲೆ ಎಲ್ಲರಿಗೂ ಮೋಸಮಾಡುವನೆಂದೂ, ಏನಾದರೂ ಮಾಡಿ ಅವನಧೀನದಿಂದ ಆ ದಿವಸವೇ ಹುಡುಗಿಯರನ್ನು ಹೊರತರಬೇಕೆಂದೂ, ಹೇಳಿದನು. ಅವನ ಮಾತಿನಲ್ಲಿ ಭುಜಂಗನಿಗೆ ನಂಬುಗೆಯು ಉಂಟಾಗಿದ್ದುದರಿಂದ ಅವನು ಹೇಳಿದುದು ನಿಜವೆಂದು ನಂಬಿ ಆ ಮನೆಯಿಂದ ಹೆಂಗಸರನ್ನು ಬೇಗ ಬೇರೊಂದು ಮನೆಗೆ ಕರೆದುಕೊಂಡು ಹೋಗಬೇಕೆಂದು ಆಲೋಚಿಸಲಾರಂಭಿಸಿದನು. ಕಾಳೀಚರಣನು ಆ ದಿನ ಸಾಯಂಕಾಲ ತಾನು ಬಂದು ಕೈಯಲ್ಲಾದ ಸಹಾಯವನ್ನು ಮಾಡುವುದಾಗಿ ಹೇಳಿ ಭುಜಂಗನ ಅಪ್ಪಣೆಯನ್ನು ಪಡೆದು ಅಲ್ಲಿಂದ ಹೊರಟುಹೋದನು. ಭುಜಂಗನು,—ಕಾಳೀಚರಣನ ಹೇಳಿಕೆಗೆ ಮರುಳಾಗಿದ್ದವನು;—ಸರಸನು ಆಡಿದ ಮಾತಿನಪ್ರಕಾರ ತನ್ನ ಸಹಾಯಕ್ಕಾಗಿ ಸಾಯಂಕಾಲ ಬರಬಹುದೆಂದೂ, ಆ ದಿವಸ ಪುರಂದರನನ್ನೂ ಹುಡುಗಿಯರನ್ನೂ ಬಹು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದೂ ನಿಶ್ಚಯಿಸಿಕೊಂಡನು, ಹಾಗೆಯೆ, ಆ ಮನೆಯಲ್ಲಿ ಪುರಂದರನನ್ನು ಬೆನ್ನುಬಿಡದಂತೆ ಕಾಯ್ದನು. ಅಷ್ಟರಲ್ಲಿ ಕಾಳೀಚರಣನು ಆ ಮನೆಯ ಯಜಮಾನನನ್ನು ಪತ್ತೆಮಾಡಿಸಿ ಕರೆಯಿಸಿಕೊಂಡು ಅವನಿಂದಾಗಬೇಕಾದ ಕೆಲಸಗಳೆಲ್ಲವನ್ನೂ ತಿಳಿಯಿಸಿ, ಅವನೊಂದಿಗೆ ಒಬ್ಬ ಮನುಷ್ಯನನ್ನು ಕಳುಹಿಸಿಕೊಟ್ಟನು. ಅವರಿಬ್ಬರೂ ಪುರಂದರಾದಿಗಳಿದ್ದ ಮನೆಗೆ ಹೋದರು.

ಮನೆಯಲ್ಲಿದ್ದ ಪುರಂದರ ಮತ್ತು ಭುಜಂಗ, ಇವರಿರ್ವರೂ ಅವರನ್ನು ಉಚಿತವಾಗಿ ಸತ್ಕರಿಸಿ "ಬಂದ ಕಾರ್ಯವೇನು?" ಎಂದು ಕೇಳಿದರು. ಮನೆಯ ಯಜಮಾನನು "ಸ್ವಾಮಿ! ಈ ಮನೆಯ ಅಂತರ್ಗೃಹದಲ್ಲಿ ನಮಗೆ ಸ್ವಲ್ಪ ಕೆಲಸವಿದೆ ಒಂದು ಕಾಲುಗಂಟೆಮಟ್ಟಿಗೆ ನಮ್ಮನ್ನಲ್ಲಿ ಬಿಡಬೇಕು!" ಎಂದಂದನು.

ಭುಜಂಗ—“ಸ್ವಾಮಿ! ಮಾಫ್‌ಮಾಡಬೇಕು! ಅಲ್ಲಿ ನಾವು ಬಹಳ ಸಾಮಾನುಗಳನ್ನು ತುಂಬಿರುವೆವು. ನಮಗೆ ಒಂದು ದಿನ ಪುರುಸತ್ತುಕೊಟ್ಟರೆ ಬಿಡುವು ಮಾಡಿಸಿ ಕೊಡುತ್ತೇನಲ್ಲದೆ ಈಗ ಖಂಡಿತವಾಗಿಯೂ ಆಗುವುದಿಲ್ಲ!”

ಯಜಮಾನ—“ಸ್ವಾಮೀ ದಯವಿಟ್ಟು ಹಾಗೆ ಮಾಡಬೇಡಿ. ದಯವಿಟ್ಟು ಈಗಲೇ ಅಪ್ಪಣೆಕೊಡಬೇಕು. ಬೇಕಾದರೆ ತಾವೂ ನಮ್ಮ ಜತೆಯಲ್ಲೇ ಇರಿ. ನಿಮ್ಮ ಸಾಮಾನೊಂದನ್ನೂ ಮುಟ್ಟುವುದಿಲ್ಲ! ಬಹು ಅಗತ್ಯವಾಗಿದೆ. ಸ್ವಾಮಿ! ಅದರಲ್ಲಿ ಮುಚ್ಚುಮರೆಯೇನು ಸ್ವಾಮಿ! ನಿಜವಾದ ಸಂಗತಿಯನ್ನು ಹೇಳಿಬಿಡುತ್ತೇನೆ ಕೇಳಿ—ಇವರಿದ್ದಾರಲ್ಲಾ,—” ಎಂದೆಂದು ತನ್ನ ಜತೆಯಲ್ಲಿದ್ದವನನ್ನು ತೋರಿಸಿ, “ಇವರ ತಂದೆಯವರು ಪೆನ್ಷನ್ ಕಲೆಕ್ಟರು. ಈಗ ಎರಡು ವರ್ಷಗಳ ಹಿಂದೆ ಈ ಮನೆಯಲ್ಲಿವರಿದ್ದರು. ಆ ಕಾಲದಲ್ಲಿ ಈತನ ತಾಯಿಯು ಸ್ವಲ್ಪ ದ್ರವ್ಯವನ್ನು ಭೂಸ್ಥಾಪನೆ ಮಾಡಿದರು. ಎಲ್ಲಿ? ಆ ಅಂತರ್ಗೃಹದಲ್ಲೊಂದು ಕಡೆ! ಈಗ, ಈತನ ಮೇಲೆ ಐದು ಸಾವಿರ ರೂಪಾಯಿಗೆ ಒಂದು ದಾವಾ ಡಿಕ್ರೀಯಾಗಿರುತ್ತೆ. ಈ ದಿವಸ ಕೋರ್ಟಿನ ಕಾಲಕ್ಕೆ ಸರಿಯಾಗಿ ಡಿಕ್ರೀ ಮೊಬಲಗನ್ನು ಹಾಜರ್‌ಮಾಡಬೇಕು.”

ಪುರಂದರ—“ಸ್ವಾಮಿ, ಇದಕ್ಕಾಗಿ ಇಷ್ಟು ವ್ಯಥೆಯೇಕೆ? ಆ ರೂಪಾಯಿಗಳನ್ನು ನಾನು ಕೊಟ್ಟಿರುತ್ತೇನೆ. ಅನಂತರ ನೀವು ನಿಮ್ಮ ಭೂಗತ ದ್ರವ್ಯವನ್ನು ತೆಗೆದುಕೊಡಬಹುದು.”

ಮನೆಯ ಯಜಮಾನನು ಅದಕ್ಕೆ ಪ್ರತ್ಯುತ್ತರವನ್ನು ಹೇಳಲು ಏನೂ ತೋರದೆ ಜತೆಯಲ್ಲಿದ್ದವನ ಮುಖವನ್ನು ನೋಡಿದನು. ಅವನು ಈತನ ಅಭಿಪ್ರಾಯವನ್ನರಿತು “ಅದೆಲ್ಲಿಯ ಮಾತು ಸ್ವಾಮಿ! ಎಷ್ಟಿರುವುದೋ ಏನೊ! ನಮ್ಮ ದುಡ್ಡನ್ನು ನಾವು ಉಪಯೋಗಿಸೋಣ!” ಎಂದಂದನು.

ಪುರಂದರನಿಗೆ ಸ್ವಲ್ಪ ಕೋಪವುಂಟಾಯಿತು. “ನೀವು ನಮಗೆ ತೊಂದರೆ ಕೊಡುವುದಕ್ಕಾಗಿ ಬಂದಿರುವಂತೆ ತೋರುತ್ತದೆ. ನೀವು ಏನು ಬೇಕಾದರೂ ಮಾಡಿಕೊಳ್ಳಿ, ನಾನು ಖಂಡಿತವಾಗಿಯೂ ಒಳಗೆ ಬಿಡುವುದಿಲ್ಲ!” ಎಂದು ಸ್ವಲ್ಪ ಆಕ್ರೋಶದಿಂದ ಹೇಳಿದನು.

ಮನೆಯ ಯಜಮಾನನು, “ನಾವು ನಿಜಸ್ಥಿತಿಯನ್ನು ಹೇಳಿರುವುದರಿಂದ ನಿಮ್ಮ ನಂಬಿಕೆ ನಮಗೇನು? ಖಂಡಿತವಾಗಿಯೂ ಈ ಹೊತ್ತು ತೆಗೆದುಕೊಂಡೇ ಹೋಗಬೇಕು. ನಮ್ಮ ದ್ರವ್ಯವನ್ನು ಈಗಲೇ ತೆಗೆದುಕೊಂಡು ಹೋಗಬೇಕು. ಅವಕಾಶ

ಕೊಟ್ಟರೆ ಕೊಡಿ, ಇಲ್ಲವೆ ನನ್ನ ಮನೆಯನ್ನು ಬಿಡಿ. ಈಗಲೆ ಬಿಟ್ಟು ಹೊರಡಿ. ನನ್ನ ವಸ್ತುವನ್ನು ನಾನು ತೆಗೆದುಕೊಳ್ಳಬೇಕೆಂದರೆ ಅಡ್ಡಿಮಾಡುವುದು ಯಾವ ನ್ಯಾಯ? ಘೋಷಾ ಹೆಂಗಸರಿರುವರೆ? ನೀವೇನು ಮುಸಲಮಾನರೇ? ಆ ಕೋಣೆಯಲ್ಲೇನಾದರೂ ಖೂನಿ ಮಾಡಿದ್ದೀರ? ನಿಮ್ಮ ಪದಾರ್ಥಕ್ಕೆ ಈಷದಪಿ ಬಾಧಕವಿಲ್ಲದಂತೆ ನಮ್ಮ ಕೆಲಸವನ್ನು ಮಾಡಿಕೊಳ್ಳುವೆವೆಂದರೆ ಅಡ್ಡಿಪಡಿಸಲು ನೀವಾರನ್ನಾದರೂ ಅಲ್ಲಿ ಬಚ್ಚಿಟ್ಟಿರುವಿರ? ಏನಿದೆ? ಅದೇನು ಬಿಡುವಿರೋ ಇಲ್ಲವೋ?" ಎಂದು ಕೇಳಲು ಪುರಂದರನಿಗೆ ಅತ್ಯುಗ್ರವಾದ ಕೋಪವುಂಟಾಯಿತು. ಮಹದಾಕ್ರೋಶದಿಂದ, "ನಾವೆಂತಹವರಾದರೇನು? ಒಳಗೆ ಹೋಗಲು ಬಿಡುವುದಿಲ್ಲ. ನ್ಯಾಯವಾಗಿ ಹೊರಗೆ ಹೋಗುವುದಾದರೆ ಹೋಗಿ, ಇಲ್ಲವಾದರೆ ಕತ್ತುಹಿಡಿದು ತಳ್ಳಿಸಿಬಿಡುವೆವು." ಎಂದು ಹೇಳಿದನು. ಯಜಮಾನನಿಗೆ ಕೋಪವು ಮಿತಿಮೀರಿತು. "ಏನಿರಯ್ಯಾ! ನೀವೇನೊ ಸಂಭಾವಿತರೆಂದು ಮನೆಯನ್ನು ಕೊಟ್ಟಿದ್ದಾಯಿತು. ಸರಿ! ಸರಿ! ಒಳ್ಳೇ ದೊಡ್ಡಸ್ತಿಗೆ! ನಮ್ಮ ಮನೆಯಿಂದ ನಮ್ಮನ್ನೆ ಕತ್ತುಹಿಡಿದು ತಳ್ಳಿಸೋದು" ಎಂದು ಹೇಳುತ್ತ ಹೊರಗೆ ಬಂದರು. ಆ ವೇಳೆಗೆ ತಾಂಮ್ಸೋಣಿರಾಯರು ಆಕಡೆ ಹೋಗುತ್ತಿರಲು, ಆ ಯಜಮಾನನು ಇನ್‌ಸ್ಪೆಕ್ಟರ್ ಸಾಹೇಬರನ್ನು ಕರೆದು, "ರಾಯರೆ! ಈತನ ಧೂರ್ತತೆಯನ್ನು ನೋಡಿರಿ!" ಎಂದಂದು ನಡೆದ ಸಂಗತಿಯನ್ನೆಲ್ಲ ಹೇಳಲು, ಇನ್‌ಸ್ಪೆಕ್ಟರು ಸಮಾಧಾನವನ್ನು ಹೇಳುವುದಕ್ಕೋಸುಗ ಮನೆಯನ್ನು ಪ್ರವೇಶಿಸಿದರು.

ಭುಜಂಗನೂ, ಪುರಂದರನೂ, ಇನ್‌ಸ್ಪೆಕ್ಟರನ್ನು ನೋಡಿ ಕೇವಲ ವಿಷಣ್ಣವದನರಾದರು. ಪುರಂದರನು ಇನ್‌ಸ್ಪೆಕ್ಟರನ್ನು ನೋಡಿ, "ತಾವಿಲ್ಲಿಗೆ ಬಂದುದೇಕೆ?" ಎಂದು ಪ್ರಶ್ನಿಸಿದನು. ಇನ್‌ಸ್ಪೆಕ್ಟರು, "ಇಲ್ಲೇ ಹೋಗುತ್ತಿದ್ದೆನು. ಇವರು ಕರೆದರಾದುದರಿಂದ ಸುಮ್ಮನೆ ನೋಡಬೇಕೆಂದು ಬಂದೆ?" ಎಂದಂದರು. ಪುರಂದರನು ಮನೆಯ ಯಜಮಾನನ್ನು ನೋಡಿ, "ಸ್ವಾಮಿ, ತಮ್ಮ ಮನೆಗೆ ವಾಸಕ್ಕೆ ಬಂದುದು ನನ್ನ ತಪ್ಪು. ಏನಾದರಾಗಲಿ! ನಿಮ್ಮೊಂದಿಗೆ ಮಾತೇನು? ನಿಮ್ಮ ದುಡ್ಡೇನಿದ್ದರೂ ಕಿತ್ತುಕೊಂಡು ಹೋಗುವಿರಂತೆ? ಸ್ವಲ್ಪ ತಾಳಿ." ಎಂದು ಹೇಳಿ ಒಳಗೆ ಹೋದನು. ಮತ್ತೆ ಹಿಂದಿರುಗಲೇ ಇಲ್ಲ!

ಸ್ವಲ್ಪ ಕಾಲ ಕಾಯ್ದು ಇನ್‌ಸ್ಪೆಕ್ಟರ್ ಸಾಹೇಬರು, "ಅವರೆಲ್ಲ ಸರಿಪಡಿಸಿ ಕೊಡುವರು, ಅದಕ್ಕೇ ಅವರಿನ್ನೂ ಒರಲಿಲ್ಲವಯ್ಯಾ. ನಿಮ್ಮ ಕೆಲಸಮಾಡಿಕೊಂಡು ಹೋಗಿ!" ಎಂದಂದು ಮೇಲಕ್ಕೇಳುವಷ್ಟರಲ್ಲಿಯೇ, ಒಳಗೆ 'ಢಂ' ಎಂದು ಬಂದೂ

ಕಿನ ಶಬ್ದವಾಯಿತು. ಶಬ್ದವನ್ನನುಸರಿಸಿ ಎಲ್ಲರೂ ಒಳಗೆ ನುಗ್ಗಿದರು. ಆ ವೇಳೆಗೆ ಕಾಳೀಚರಣನು ಬಹು ರಭಸದಿಂದ ತನ್ನ ಸಾಹಸವನ್ನೆಲ್ಲ ಪ್ರಯೋಗಿಸಿ ಒಂದು ಬಾಗಿಲನ್ನು ಒದೆಯುತ್ತಿದ್ದುದನ್ನು ನೋಡಿದರು. ಕೂಡಲೆ ಎಲ್ಲರೂ ಅಲ್ಲಿಗೆ ಓಡಿಹೋಗಿ, "ಇದೇನು" ಎಂದು ಕೇಳಲು, "ವಿಜಯಿನಿ ವಿಲಾಸಿನಿಯರ ಅಪಹಾರಕನಾದ ಪುರಂದರನ ಈ ಮನೆಯಲ್ಲಿದ್ದನು. ಅವನು ನನ್ನ ಮೇಲೆ ಬೀಳಲು ಬರಲು, ಅವನನ್ನು ಜೀವಸಹಿತನಾಗಿ ಹಿಡಿಯಬೇಕೆಂಬ ಆಶೆಯಿಂದ ಅವನ ಕೈಯಲ್ಲಿದ್ದ ಪಿಸ್ತೂಲನ್ನು ನೆಲಕ್ಕೆ ಕೆಡಹಿದೆ. ತತ್ಕ್ಷಣವೆ ಅವನು ಈ ಕೊಠಡಿಯಲ್ಲಿ ಸೇರಿಕೊಂಡನು !" ಎಂದು ಹೇಳಿದನು. ಎಲ್ಲರೂ ಸೇರಿ ಆ ಬಾಗಿಲನ್ನು ಮುರಿದು, ಒಳಹೊಕ್ಕರು. ಪುರಂದರನು ಅಲ್ಲಿರಲಿಲ್ಲ ! ಕಾಳೀಚರಣನು ಕೇವಲ ಜುಗುಪ್ಸಾನ್ವಿತನಾದನು ! ಕೈಗೆ ಸಿಕ್ಕಿದ್ದವನು ತಪ್ಪಿಸಿಕೊಂಡುದಕ್ಕಾಗಿ ಸ್ವಲ್ಪ ವ್ಯಸನಪಟ್ಟನು. ಆದರೇನು ? ಕೇವಲ ವ್ಯಸನದಲ್ಲಿಯೇ ಕೂಡುವ ಸ್ವಭಾವದವನೇ ? ಅಲ್ಲ ! ಕಾಳೀಚರಣನಿಗೆ ಆ ಸ್ವಭಾವವಿರಲಿಲ್ಲ ! ಉತ್ತರಕ್ಷಣದಲ್ಲಿಯೇ ಪುರಂದರನು ತಪ್ಪಿಸಿಕೊಂಡು ಹೋದ ಮಾರ್ಗವನ್ನು ಕಂಡು ಹಿಡಿದು, ಅವನನ್ನು ಹುಡುಕಲು, ಹೊರಗೆ ಹೋದನು. ನಾತಿದೂರದಲ್ಲಿ ಬಿದ್ದು ನರಳುತಿದ್ದ ಒಬ್ಬನನ್ನು ಕಂಡು, "ಅವನಾರು ?" ಎಂದು ವಿಚಾರಿಸಲು, ಅವನು, ಬೈಸಿಕಲ್ಲಿನಮೇಲೆ ಆಕಡೆ ಹೋಗುತ್ತಿರಲು, ಆರೋ ಒಬ್ಬನು ಅವನನ್ನು ಬೈಸಿಕಲ್ಲಿನಿಂದ ತಳ್ಳಿ ಅದರ ಮೇಲೆ ಕುಳಿತುಕೊಂಡು ಹೊರಟುಹೋದನೆಂದು ಹೇಳಿದನು. ಅದು ಪುರಂದರನ ಕೆಲಸವೇ ಇರಬಹುದೆಂದು ಕಾಳೀಚರಣನು ಆಲೋಚಿಸಿ, ತಾನೊಂದು ಬೈಸಿಕಲ್ಲನ್ನು ಹತ್ತಿ ಪುರಂದರನು ಹೋದ ಮಾರ್ಗವನ್ನೇ ಅನುಸರಿಸಿ ಬಹು ವೇಗವಾಗಿ ಹೋದನು. ಇನ್ಸ್ಪೆಕ್ಟರು ಭುಜಂಗನನ್ನು ಕರೆದುಕೊಂಡು ಹೊರಟು ಹೋಗಿ, ಆ ಮನೆಗೆ ತಕ್ಕ ಕಾವಲನ್ನು ಏರ್ಪಡಿಸಿದರು.

ಷೋಡಶಗುಚ್ಛ.

ಪಾತಕಮಹಾಶರಿಗೆ ಭುಜಂಗನ ವಿಚಿತ್ರವಾದ ಕುಟೀರವನ್ನು ಒಮ್ಮೆ ತೋರಿಸಿ ಬಿಟ್ಟಿರುತ್ತೇವೆ. ಇಂದು, ಭುಜಂಗನು ತನ್ನಾ ಕುಟೀರದ ಒಂದು ಮೂಲೆಯಲ್ಲಿ ಕುಳಿತುಕೊಂಡು ಚಿಂತಾಕ್ರಾಂತನಾಗಿರುವನು. ವಿಷಯವೇನಿರಬಹುದು ? ಕಾಳೀಚರಣನು ಬುಡುಬುಡುಕಿಯವನಂತೆ ವೇಷವನ್ನು ಧರಿಸಿ, ಭುಜಂಗನ ಅತ್ಯದ್ಭುತ ಭವಿಷ್ಯತ್ತನ್ನು ಅರ್ಥಾಂತರವಾಗಿ ಬೋಧಿಸಿದ್ದನಾದುದರಿಂದ ಅವನು ಅದನ್ನು ಕುರಿತೇ ಆಲೋಚಿಸುತ್ತಿರಬಹುದು ! ನರಸನು ಹೇಳಿದ ಒಂದೊಂದು ಶಬ್ದವೂ ಜ್ಞಾಪಕಕ್ಕೆ ಬರುತ್ತಿದ್ದಿತು. ಆ ದಿವಸ ನಡದ ಆ ವಿಚಿತ್ರ ವ್ಯಾಪಾರವು ಅವನನ್ನು ಅಸ್ಪಷ್ಟವಾದ ಸ್ಥಿತಿಗೆ ಗುರಿಮಾಡಿದ್ದಿತು. ಒಮ್ಮೊಮ್ಮೆ "ನರಸನ ಮಾತಿನ ಮಹಿಮೆಯು ಅತ್ಯದ್ಭುತವಾಗಿರುವಂತಿದೆ ! ಅಂತು, ಆ ದಿವಸ ಕಾಳೀಚರಣ, ಪುರಂದರ, ಇವರಿಬ್ಬರಲ್ಲಿ ಯಾರಾದರೊಬ್ಬರು ಸತ್ತರೆ ನನ್ನ ಸುಕೃತಕ್ಕೆ ಎಣೆಯುಂಟೆ ? ಒಂದುವೇಳೆ ಪುರಂದರನೇನಾದರೂ ಸಿಕ್ಕಿಬಿದ್ದರೇ !—ಛೆ !! ಅದೆಲ್ಲಿಯ ಮಾತು : ಅವನೇನು ಸಾಮಾನ್ಯನೆ ? ಇಂತಹ ಮನೆಯಲ್ಲಿ ಕೈಗೆ ಸಿಕ್ಕಿದವನು ಎಷ್ಟು ಸಾಹಸ ಮಾಡಿ ತಪ್ಪಿಸಿಕೊಂಡಿರುತ್ತಾನೆ ! ಹೇಗೆ ಪರಾರಿ !! ಇಂತಹವನು ಕಾಡಿನಲ್ಲಿ ಬಿದ್ದಮೇಲೆ ಕಾಳೀಚರಣನ ಕೈಗೆ ಸಿಕ್ಕುವುದುಂಟೆ ! ಇಲ್ಲ !! ಕೇವಲ ಅಸಂಬದ್ಧ ಪ್ರಲಾಪ !!! ನರಸನು ಹೇಳಿದಂತೆ ಏನೊ, ಎಲ್ಲವೂ ನಡೆಯುವ ಹಾಗೇ ಕಾಣುತ್ತದೆ ! ಆದ್ದರಿಂದ ಅವನ ಮಾತಿನಂತೆ ಈ ದಿವಸ ಕಾಳೀಚರಣನು ಪುರಂದರನಿಂದ ಸತ್ತರೂ ಸಾಯಬಹುದು. ಆದುದರಿಂದ ಆ ವಿಜಯಿನಿ ವಿಲಾಸಿನಿಯರನ್ನು ಅಲ್ಲಿಂದ ಹೊರತೆಗೆದು, ನನ್ನಧೀನದಲ್ಲಿಟ್ಟುಕೊಂಡು, ಏನಾದರೂ ಸಾಹಸ ಮಾಡಿ, ಇಬ್ಬರೂ ನನ್ನ ವಶರಾಗುವಂತೆ ಮಾಡಿಕೊಂಡೆನೆಂದರೇ, ಅಗಣಿತದ್ರವ್ಯವೆಲ್ಲವೂ ನನ್ನಧೀನವಾಗುವುದು" ಎಂದು ಮೊದಲಾಗಿ ಆಲೋಚಿಸುತ್ತಿದ್ದನು, "ನರಸನು ಬರುವ ಸಮಯವಾಯಿತು !" ಎಂದಂದುಕೊಳ್ಳುತ್ತಿದ್ದನು.

ಕಾಳೀಚರಣನು ಬೇರೇ ವೇಷವನ್ನು ಧರಿಸಿ, ಭುಜಂಗನ ಮನೆಗೆ ಬಂದನು. ಭುಜಂಗನು ನರಸನ ಧ್ಯಾನದಲ್ಲಿಯೆ ಇದ್ದನಾದುದರಿಂದ, "ನರಸಯ್ಯಾ ! ನೀನೋ ?" ಎಂದಂದನು. ಕಾಳೀಚರಣನು, "ಸ್ವಾಮಿಗೆ ಜಯಕಾಲ ! ಬೇಗ ಹೊರಡಬೇಕು !" ಎಂದು ಹೇಳಲು, ಭುಜಂಗನು, 'ನರಸಯ್ಯಾ ! ಆ ಮನೆಯ ಸುತ್ತಲೂ, ಪೊಲೀಸಿನವರು ಕಾವಲಿರುತ್ತಾರಲ್ಲಾ ! ಆ ಮನೆಯೊಳಕ್ಕೆ ನಾವು ಹೋಗುವುದೆಂತು ? ಆ ಹುಡುಗಿ

ಯರನ್ನು ನಾವು ಕರೆತರುವುದೆಂತು ? ಏನೋ ನಿನ್ನ ಮಾತಿನಲ್ಲಿ ನನಗೆ ಬಹಳ ಭಯ ವುಂಟಾಗಿದೆಯಪ್ಪ ! '' ಎಂದಂದನು,

ನರಸನು—(ಅರಳಿದ ಕಣ್ಣುಗಳುಳ್ಳವನಾಗಿ) ಏನು ಸ್ವಾಮೀ ! ನಾನೇನು ನಾಡಾಡಿಯೊ ? ಹಕ್ಕೀ ಮಾತನ್ನು ಪಾದದಲ್ಲಿ ಅರಿಕೆ ಮಾಡಿರುತ್ತೇನೆ ಸ್ವಾಮೀ ! ಅದು ಸುಳ್ಳೆಂದರೆ ಪರಪಂಚವೇ ಸುಳ್ಳು ಸ್ವಾಮೀ !! ಆದೇಕೆ ಸ್ವಾಮೀ, ನನ್ನ ಸಾಹಸ ಈಗ ತೋರಿಸುತ್ತೇನೆ ಬನ್ನೀ. ಪೊಲೀಸಿನವರಲ್ಲದಿದ್ದರೆ ದೇವತೆಗಳಿರಲಿ, ಏನು ಸ್ವಾಮೀ! ನನ್ನ ಮಾತು ಸುಳ್ಳೋ ಈಗ ನಿಮ್ಮ ಪರಮ ಸತ್ರುವೊಬ್ಬನು ನಿಮಗೆಲ್ಲಾ ದಣಿಯಾಗಿ ದ್ದವನೊಬ್ಬನನ್ನು ಬೆನ್ನಾಡಿಕೊಂಡು ಹೋಗಿಲ್ಲವೋ ? ಈಗ ನೋಡಿ, ಅವರು ಒಬ್ಬರಿ ಗೊಬ್ಬರೂ ಹೊಡೆದಾಡಿ ಇಬ್ಬರೂ ಸತ್ತಿರುತ್ತಾರೆ ! ಬೆಳಕು ಹರಿಯುವುದರಲ್ಲಿ ನೋಡಿ ಸ್ವಾಮಿ ! ನನ್ನ ಮಾತು ಸುಳ್ಳೋ ನಿಜವೊ ಗೊತ್ತಾಗುತ್ತದೆ. ಬುದ್ಧಿಯವರು ಮಾತು ಕೊಟ್ಟ ಪರ್ಕಾರ ಬಂದೆ ! ಈಗೇನು ಹೋಗಲೋ ಬುದ್ಧಿ ? ''

ಭುಜಂಗ—" ನರಸಯ್ಯಾ, ಬೇಡ ! ಹಾಗಲ್ಲ !! ಈವಾಗ ಅವರನ್ನು ಕರೆದು ಕೊಂಡು ಬರುವದಕ್ಕಾಗುತ್ತದೆಯೊ ? ''

ನರಸ—" ಆದರ ಯೋಚನೆ ನಿಮಗ್ಯಾಕೆ ಸ್ವಾಮೀ ! ನನ್ನ ಜತೆಯಲ್ಲಿ ಬನ್ನೀ! ನನ್ನ ವಿದ್ಯ ತೋರಿಸುತ್ತೇನೆ !! '' ಎಂದು ಹೇಳಲು, ಭುಜಂಗನು ಹೊರಟನು.

ಕಾಳೀಚರಣನು ಭುಜಂಗನನ್ನು ಸಮೀಪದಲ್ಲಿದ್ದ ಒಂದು ಬನ್ನೀಮರದ ಹತ್ತಿ ರಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಆ ಮರವನ್ನು ಪೂಜಿಸಿ, ಏನೋ ಮಹಾ ಮಂತ್ರ ವನ್ನು ಉದ್ಘೋಷಿಸುವಂತೆ ನಟಿಸಿ, ಭುಜಂಗನ ಹಣೆಗೆ ಸ್ವಲ್ಪ ಕುಂಕುಮವನ್ನಿಟ್ಟು ತಾನೂ ಸ್ವಲ್ಪ ಇಟ್ಟುಕೊಂಡು, ಅವನ ಕೈಯ್ಯಲ್ಲೊಂದು ಪಿಸ್ತೂಲನ್ನು ಕೊಟ್ಟು, " ಸ್ವಾಮಿ ! ದಯಮಾಡಬೇಕು ! ಬುದ್ಧಿಯವರನ್ನು ಈಗ ಯಾರಾದರೂ ಕಂಡು ಮಾತನಾಡಿಸಿದ್ದೋ ಆದರೆ ಈ ಪಿಸ್ತೂಲಿನಿಂದ ನರಸನನ್ನು ಸುಟ್ಟುಬಿಡಿ. ನರಸನ ಯೋಗ್ಯತೆಯು ಇದರಲ್ಲಿಯೆ ಗೊತ್ತಾಗುತ್ತದೆ. ಎಂದು ಹೇಳಲು ಇವನ ಮಾತಿನಲ್ಲಿ ಬಹಳ ನಂಬುಗೆಯನ್ನಿಟ್ಟಿದ್ದ ಭುಜಂಗನು ಅವನು ಹೇಳಿದುದನ್ನು ಕೇಳಿ, ಆ ಕುಂಕುಮ ದಲ್ಲೇನೊ ಗುಣಾತಿಶಯವಿರಬಹುದೆಂದಂದುಕೊಂಡು ಅವನ ಜತೆಯಲ್ಲಿ ಮುಂದು ವರಿದನು.

ಇರ್ವರೂ ವಿಜಯಿನಿ ವಿಲಾಸಿನಿಯರಿಗೆ ಗೋಪ್ಯಾಶ್ರಯವನ್ನಿತ್ತಿದ್ದ, ಆ ಮನೆಯ ಸಮೀಪಕ್ಕೆ ಹೋದರು. ಮೊದಲೇ ಕಾಳೀಚರಣನಿಂದ ಎಚ್ಚರಗೊಳಿಸಲ್ಪಟ್ಟಿದ್ದ ಪೊಲೀ

ಸಿನವರು ಇವರನ್ನು ಕಂಡರೂ ಕಾಣದವರಂತೆ ನಟಿಸಲು, ಭುಜಂಗನು ಮಹದಾನಂದ ದಿಂದ ಮನೆಯನ್ನು ಪ್ರವೇಶಿಸಿದನು.

ಕಾಳೀಚರಣನು, “ಸ್ವಾಮಿ! ತಮ್ಮ ಕೆಲಸವು ಕೈಗೂಡಿತೆಂಬುವುದಕ್ಕೆ ಇನ್ನಾವ ಅಭ್ಯಂತರವೂ ಇಲ್ಲ. ಈವಾಗ ನನಗೆ ಹತ್ತುಸಾವಿರ ರೂಪಾಯಿ ಇನಾಮ್ ಕೊಡ ಬೇಕು, ಇಲ್ಲವಾದರೆ ಕೊಡುವುದಾಗಿ ಕಾಗದ ಬರದು ಕೊಡಬೇಕು. ಇಲ್ಲವಾದರೆ ನನ್ನ ಮಂತ್ರದ ಕುಂಕುಮವನ್ನೂ ಕೊಡುವುದಿಲ್ಲ, ಹುಡುಗಿಯರನ್ನು ಕರೆದುಕೊಂಡು ಹೋಗುವುದಕ್ಕೂ ಬಿಡುವುದಿಲ್ಲ!” ಎಂದಂದನು. ಭುಜಂಗನಿಗೆ ಏನು ಮಾಡಲೂ ತೋಚದೆ ಹೋಯಿತು.

ಎಷ್ಟು ಆಲೋಚಿಸಿ ನೋಡಿದರೂ ಕಾಗದ ಬರೆದು ಕೊಡಬೇಕು. ಇಲ್ಲವೆ ದ್ರವ್ಯವನ್ನು ಕೊಡಬೇಕು, ಇಲ್ಲವಾದರೆ ಮಾರ್ಗವಿಲ್ಲವೆಂಬುದು ದೃಢವಾಯಿತು. ಕಟ್ಟಕಡೆಗೆ ದುರುಳರಿಗೆ ಸ್ವಾಭಾವಿಕವಾಗಿ ಇಂತಹ ಅನೇಕ ಸಂದರ್ಭಗಳಲ್ಲಿ ತೋರಿಬ ರುವ ಉಪಾಯವೊಂದು ಆಗಲೆ ಹೊಳೆಯಿತು ಅದೇನು? ತನ್ನೆದುರಾಳಿಯನ್ನು ಗತ ಪ್ರಾಣನನ್ನಾಗಿಸುವುದೆ! ಭುಜಂಗನು ತನ್ನ ಕೈಯ್ಯಲ್ಲಿದ್ದ ಪಿಸ್ತೂಲನ್ನು ಕಾಳೀಚರಣನ ಕಡೆಗೆ ಹಾರಿಸಿಯೇಬಿಟ್ಟನು. ಕಾಳೀಚರಣನು ತತ್‍ಕ್ಷಣವೆ ಬಿದ್ದುಬಿಟ್ಟನು. ಭುಜಂಗನ್ನು ತಾನು ಕೃತಕೃತ್ಯನಾದೆನೆಂದಂದುಕೊಂಡು ಮಹದಾನಂದದಿಂದ ಕಾಳೀಚರಣನ ಜೇಬಿನ ಲ್ಲಿದ್ದ ಕುಂಕುಮದ ಭರಣಿಯನ್ನು ತೆಗೆದುಕೊಳ್ಳಬೇಕೆಂದು ಕೈ ನೀಡಿದನು. ಕಾಳೀಚರ ಣನು ತತಕ್ಷಣವೆ ಅವನನ್ನು ಎಳೆದು ನೆಲಕ್ಕೆ ಬೀಳಿಸಿ, “ಭುಜಂಗ! ಹಕ್ಕೀ ನರಸನ ಸಾಮರ್ಥ್ಯವನ್ನು ನೋಡಿದಿಯೊ!” ಎಂದಂದು ತನ್ನ ಸ್ವಾಭಾವಿಕವಾದ ಸ್ವರದಿಂದ ಮಾತನಾಡಲು, ಭುಜಂಗನು ತಾನು ಕಾಳೀಚರಣನ ಬಲೆಯಲ್ಲಿ ಬಿದ್ದಿದ್ದೇನೆಂದೂ, ತನ ಗಿನ್ನು ಉಳಿಗಾಲವಿಲ್ಲವೆಂದೂ ತಿಳಿದು ಭಯಭ್ರಾಂತನಾಗಿ ಮತ್ತಾವ ಸಾಹಸಕ್ಕೂ ಪ್ರಯತ್ನಪಡದೆ ಸುಮ್ಮನಾಗಿಬಿಟ್ಟನು. ಕಾಳೀಚರಣನ ಸಂಕೇತವನ್ನು ಅರಿತು ಪೊಲೀಸಿ ನವರು ಅಲ್ಲಿಗೆ ಬಂದು, ಭುಜಂಗನನ್ನು ಖೈದಿಯಾಗಿ ಕರೆದುಕೊಂಡು ಹೋದರು. ಕಾಳೀಚರಣನು, ಭುಜಂಗನಿಗೆ ತಾನು ಕೊಟ್ಟಿದ್ದ ಪಿಸ್ತೂಲನ್ನು ತೆಗೆದುಕೊಂಡು, ಅದ ರಲ್ಲಿದ್ದ ಹುಸಿಮದ್ದನ್ನು ತೆಗೆದು ತನ್ನಧೀನದಲ್ಲಿಟ್ಟುಕೊಂಡು ಮುಂದಿನ ಕಾರ್ಯದಲ್ಲಿ ಉದ್ಯುಕ್ತನಾದನು.

ಆ ಗೃಹದ ಎಲ್ಲಾ ಭಾಗಗಳನ್ನೂ ಪರೀಕ್ಷಿಸಿದನು. ಒಂದು ಕಡೆಯಲ್ಲಿ ಮೊದ ಲಿದ್ದ ಬಾಗಿಲನ್ನು ಕಿತ್ತು ಆ ಸ್ಥಳದಲ್ಲಿ ಗೋಡೆಯು ಹಾಕಲ್ಪಟ್ಟಿದ್ದಂತಿತ್ತು. ಆ

ಕೋಣೆಗೆ ಮತ್ತೆಲ್ಲಿ ಬಾಗಿಲನ್ನು ಇಟ್ಟಿರುವರೋ ಎಂದು ಹುಡುಕುತ್ತ, ಒಂದು ಕಡೆ ಕಾರ್ಗತ್ತಲೆಯು ಕವಿದು ಬೆಳಕಿನ ಲೇಶವೂ ಇಲ್ಲದ ಒಂದು ಭಾಗಕ್ಕೆ ಬಂದನು. ಅಲ್ಲೊಂದು ಚಿಕ್ಕ ಬಾಗಿಲಿದ್ದಿತು. ಆ ಬಾಗಿಲನ್ನು ತೆಗೆದುಕೊಂಡು, ಒಳಹೊಗಲು ಅದೊಂದು ಚಿಕ್ಕ ಕೊಠಡಿಯಾಗಿದ್ದಿತು. ಅದರಲ್ಲೂ ಕತ್ತಲೆಯು ತುಂಬಿದ್ದಿತು. ಶಖೆ ಯಾದರೊ ದುಸ್ಸಹ!

ಅಲ್ಲಿ ತನ್ನ ಕೈಲಾಂದ್ರದ ಬೆಳಕಿನಿಂದ ಕೋಣೆಯನ್ನೆಲ್ಲ ಹುಡುಕಲು, ಒಂದು ಕಡೆ ಒಂದು ಚಿಕ್ಕ ಬಾಗಿಲುಳ್ಳ ಗೂಡಿದ್ದಿತು. ಆ ಗೂಡಿಗೆ ಬಹು ಬಲವಾದ ಬೀಗವು ಹಾಕಲ್ಪಟ್ಟಿದ್ದಿತು. ಅಲ್ಲೇನೊ ಅತಿಶಯವಾದುದಿರಬಹುದೆಂದಂದುಕೊಂಡು ಆ ಬಾಗಿಲನ್ನು ತೆಗೆದು ನೋಡಲು ಅದು ಗೂಡಾಗಿರಲಿಲ್ಲ. ಆದುದರಿಂದ ಆಶ್ಚರ್ಯ ಭರಿತನಾಗಿ ಆ ಗೂಡಿನೊಳಗಿನಿಂದ ಹೋಗಿ ನೋಡಿದನು. ನಾತಿದೂರದಲ್ಲಿ ಆರೊ ಮಾತನಾಡುತ್ತಿದ್ದಂತೆ ಅಸ್ಪಷ್ಟವಾಗಿ ಕೇಳಿಬರುತ್ತಿತ್ತು. ಮುಂದುವರಿದು ನೋಡಿದನು. ಬರಬರುತ್ತ ಮಾತು ಬಹು ಸ್ಪಷ್ಟವಾಗಿ ಕೇಳಿಸಿತು, ಮಾತನಾಡುತ್ತಿದ್ದವರು ಸ್ತ್ರೀಯ ರೆಂದು ಅವರ ಸ್ವರದಿಂದಲೇ ವ್ಯಕ್ತವಾಯಿತು. ಒಬ್ಬಳು—“ ಅಯ್ಯೊ! ನಮ್ಮ ಹಣೆ ಯಲ್ಲೇನು ಬರೆದಿರುವುದೊ! ನಾನು ಕಣ್ಣನ್ನು ಮುಚ್ಚಿದೆನೆಂದರೆ ಪ್ರೇಮಚಂದ್ರನು ಬಹು ದೀನನಾಗಿ ನನ್ನ ಸಮೀಪದಲ್ಲಿ ನಿಂತು ‘ ಅಯ್ಯೋ! ನನ್ನನ್ನು ಕೈಬಿಡುವೆಯಾ ?’ ಎಂದು ಕೇಳುವಂತೆಯೂ, ಒಂದೊಂದುವೇಳೆ, ಆಲಿಂಗಿಸಲಾಶಿಸುವನಂತೆ ನೀಡಿದ ಹಸ್ತ ಗಳುಳ್ಳವನಾಗಿ ಸಮೀಪವರ್ತಿಯಾಗುತ್ತಲೂ, ಅಷ್ಟರಲ್ಲಿ ಭೀತನಾಗಿ ಹಿಂಜರಿಯುವ ನಂತೆಯೂ ಸ್ವಪ್ನವಾಗುವುದು. ಅದೇನೋ! ಅವನ ಮುಖವನ್ನು ಕಂಡರೆ ಸಾಕೆಂದು ಹಂಬಲಿಸುತ್ತಿರುವ ನನಗೆ ಒಂದು ದಿನವಾದರೂ ಅವನು ಮುಖವನ್ನು ತೋರಿಸಲಿಲ್ಲ!” ಎಂದಂದಳು.

ಮತ್ತೊಬ್ಬಳು—“ ನನಗೆ ನಿನ್ನೆಯ ದಿವಸದಿಂದ ಈಚೆಗೆ ಈ ವಿಚಾರದಲ್ಲಿ ಮೊದಲಿದ್ದಂತೆ ಅಭಿಪ್ರಾಯವಿಲ್ಲ. ಏನೋ ಒಂದು ದುರಭಿಸಂಧಿ ಇರುವಂತೆ ತೋರುತ್ತದೆ.”

ಮೊದಲನೆಯವಳು—“ ಅದೇನು? ಭುಜಂಗನೇನಾದರೂ ನಮ್ಮನ್ನು ಈರೀತಿ ಮೋಸಗೊಳಿಸಿ ನಮ್ಮನ್ನು ಕೆಡಿಸಲು ಯತ್ನಿಸಿರಬಹುದೆ?” ಎಂದಂದಳು, ಈ ಮಾತನ್ನು ಕೇಳಿ ಎರಡನೆಯವಳು ಕ್ಷಣಕಾಲ ಆಲೋಚಿಸಿ “ ನನಗಂತೂ ಕೇವಲ ಸಂದೇ ಹವೆ! ನಾವು ಮನೆಯಿಂದ ಅಗಲಿಸಲ್ಪಟ್ಟ ಲಾಗಾಯಿತು ಇಲ್ಲಿಗೆ ಬರುವ ಪ್ರತಿಯೊ

ಬ್ಬನೂ ಭುಜಂಗನ ಗುಣರೂಪಗಳನ್ನು ವರ್ಣನೆ ಮಾಡುತ್ತಲೂ ನಾನು ಅವನನ್ನು ವರಿಸಬೇಕೆಂಬುದು ಪ್ರೇಮಚಂದ್ರನ ಅಭಿಪ್ರಾಯವೆಂತಲೂ ಹೇಳುತ್ತಿರುವರು. ಇದರಿಂದ ಭುಜಂಗನ ಮೇಲೆ ನನಗೆ ತುಂಬಾ ಅನುಮಾನವೆ! ಅಲ್ಲದೆ ಅವನಿಗೆ ದ್ರವ್ಯಾಶೆಯು ಬಹಳ!!" ಎಂದು ಹೇಳಿ ಮುಂದೆ ಸಾಗುವಷ್ಟರಲ್ಲಿಯೆ "ಹೌದು! ನನಗೆ ಬೇಕಾಗಿರುವುದೇ ಅಷ್ಟು! ಈಗೇನು ಮದುವೆಯಾಗುವಿಯೋ ಇಲ್ಲವೆ ಯಮಪುರಿಗೆ ಹೋಗಲು ಸಿದ್ಧವಾಗಿರುವೆಯೋ ಹೇಳು!" ಎಂದು ಕಾಳೀಚರಣನು ವಿಕಾರಸ್ವರದಿಂದ ಹೊರಗಿನಿಂದಲೆ ಕೂಗಿದನು. ಸಂಭಾಷಣೆಯು ನಿಂತುಹೋಯಿತು! ಕಾಳೀಚರಣನು "ಬಾಗಿಲು ತೆರೆಯಿರಿ" ಎಂದು ಕೂಗಿದನು. ಪ್ರತ್ಯುತ್ತರವೇನೂ ಬರಲಿಲ್ಲ! ಅವರು ಬಹಳ ಹೆದರಿರಬಹುದೆಂದು ಊಹಿಸಿಕೊಂಡು ಬಹು ಸಾಹಸದಿಂದ ಆ ಬಾಗಿಲನ್ನು ಒಡೆದು ಒಳಗೆ ನುಗ್ಗಿದನು. ವಿಜಯಿನಿಯು ರೇಗಿ, "ಭುಜಂಗ! ನಿಲ್ಲು!! ನೀನು ನಮ್ಮ ಕುಲದಲ್ಲಿ ಹುಟ್ಟಬಾರದಾಗಿತ್ತು! ನನ್ನ ಗೊಡವೆಯು ಬೇಡವೆಂದು ಹೇಳಿದರೂ ಕೂಡ ಇಲ್ಲದ ತಂತ್ರವನ್ನು ಕಲ್ಪಿಸಿ ನಮ್ಮನ್ನು ಈರೀತಿ ಮೋಸಗೊಳಿಸಿರುವೆ!! ಈಗಲೂ ನಿನಗಿದು ಯೋಗ್ಯವಲ್ಲ! ನಮ್ಮನ್ನು ಕಳುಹಿಸಿಬಿಡು. ಹೀಗೆ ಮಾಡುವುದರಿಂದ ಹೆದರಿ ನಾನು ನಿನ್ನನ್ನು ಮದುವೆಯಾಗುವೆನೆಂದು ಎಂದಿಗೂ ನಂಬಬೇಡ!" ಎಂದು ಹೇಳಿದಳು.

ಕಾಳೀಚರಣನು—(ನಕ್ಕು) "ವಿಜಯಿನಿ! ಈ ಪೌರುಷವನ್ನು ಇನ್ನು ಕಟ್ಟಿಬಿಡು!! ಹೇಗೂ ನನ್ನ ಕೈಯ್ಯಲ್ಲಿ ಸಿಕ್ಕಿರುವೆ!!! ಸರಿಯಾದ ಮಾರ್ಗದಲ್ಲಿ ನನ್ನನ್ನು ಪತಿಯನ್ನಾಗಿ ವರಿಸುವುದಾದರೆ ವರಿಸು. ಇಲ್ಲವಾದರೆ ನಿನ್ನ ಸತೀತ್ವವನ್ನು ಹಾಳುಮಾಡುವೆನು. ಈ ದಿವಸ ಆವುದಾದರೊಂದು ಖಂಡಿತವಾಗಬೇಕೆಂದೇ ನಾನಿಲ್ಲಿಗೆ ಬಂದಿರುವುದು?

ವಿಜಯಿನಿ—"ನೀನು ಹಾಳಾಗು! ದುರ್ಭಾಷೆಯನ್ನಾಡುವ ನಿನ್ನೀ ನಾಲಿಗೆಯು ಹಾಳಾಗಲಿ. ಅಬಲೆಯರೂ, ಸಹಾಯರಹಿತರೂ, ಎಂದು ನಿನ್ನ ಪರಾಕ್ರಮವನ್ನು ತೋರಿಸಲೆಳಿಸುವಿಯೇನೋ, ಅದೆಂದಿಗೂ ನಡೆಯುವುದಿಲ್ಲ. ನೀನು ಒಂದು ಹೆಜ್ಜೆ ಮುಂದಕ್ಕಿಡುವದಾದರೂ ನಾಲಿಗೆಯನ್ನು ಕಿತ್ತುಕೊಂಡು ಪ್ರಾಣವನ್ನು ಬಿಡುವೆನೇ ಹೊರತು ನಿನ್ನ ಕೈಗೆ ಬೀಳುವುದಿಲ್ಲ." ಎಂದು ಹೇಳುತ್ತ ಕೈಯನ್ನು ಎತ್ತುವುದರೊಳಗಾಗಿಯೆ ಕಾಳೀಚರಣನು ಮಿಂಚಿನಂತೆ ಮುಂದುವರಿದು, "ವಿಜಯಿನಿ! ನಾನಾರು? ಭುಜಂಗನ ಸ್ವಪ್ನದಲ್ಲಿರುವ ನಿನಗೆ ಎಲ್ಲರೂ ಭುಜಂಗನಂತೆ ತೋರಿಬರ

ಬಹುದಲ್ಲವೆ?" ಎಂದು ಕೇಳಲು ವಿಜಯಿನಿಯು ಮುಖವನ್ನೆತ್ತಿ ನೋಡಿದಳು. ಭೀತಿಯೂ, ನಾಚುಗೆಯೂ, ವಿಜಯಿನಿಯನ್ನಾಕ್ರಮಿಸಿದುವು. "ಮಹನೀಯರೆ! ಸರ್ವಾಪರಾಧ!! ಕ್ಷಮಿಸಬೇಕು!" ಎಂದು ಹೇಳುತ್ತ ಲಜ್ಜೆಯಿಂದ ಅಧೋಮುಖಿಯಾಗಿ ನಿಂತುಕೊಂಡಳು.

ಸಪ್ತದಶಗುಚ್ಛ.

ಪಾಠಕಮಹಾಶಯನಿಗೆ ಮುಂದೇನು ನಡೆಯಿತೋ ಎಂದು ತಿಳಿವ ಕುತೂಹಲವಿರಬಹುದು. ಅಂತಹ ಸಂಭವವೇನೂ ಇರಲಿಲ್ಲ. ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಯಿತು. ಅವರ ಪ್ರಮುಖನು ಮಾತ್ರ ಸಿಗಲೇ ಇಲ್ಲ! ಅಸಮಾನನಾದ ಕಾಳೀಚರಣನ ಸಾಹಸದಿಂದ ಪ್ರೇಮಚಂದ್ರ, ದೇವೇಶ, ಶಂಭುದತ್ತಾದಿಗಳ ನಿರ್ದೋಷತೆಯು ಎಲ್ಲೆಲ್ಲಿಯೂ ವ್ಯಕ್ತವಾಯಿತು. ಇನ್ಸ್ಪೆಕ್ಟರ್ ತಾಂದೋಣಿ ರಾಯರು ಅವಕಾಶವು ಒದಗಿಬಂದಾಗಲೆಲ್ಲಾ, "ಕಾಳೀಚರಣನು ಕೇವಲ ಅವತಾರಪುರುಷನೆಂದರೂ ಕೂಡ ಸಾಲದಾಗಿದೆ! ಈತನ ಧೈರ್ಯವೇನೂ! ಶಕ್ತಿಯೇನೂ! ಸಾಹಸವೇನೂ! ಎಲ್ಲವೂ ಅಸಾಧಾರಣ!! ಅತ್ಯದ್ಭುತ!!!" ಎಂದಂದುಕೊಳ್ಳುತ್ತ ಅತಿಶಯವಾದ ಆಶ್ಚರ್ಯದ ಆನಂದವನ್ನನುಭವಿಸುತ್ತಿದ್ದರು.

ಕಾಳೀಚರಣನು, ತಾನೆಷ್ಟು ಸಾಹಸಮಾಡಿದರೂ ಕರಗತನಾಗಿದ್ದ ಆ ಕ್ರೂರಿಯು ತಪ್ಪಿಸಿಕೊಂಡು ಬಿಟ್ಟನು, ಪ್ರಮುಖನಾದವನನ್ನು ಹಿಡಿದು ಶಿಕ್ಷಿಸುವ ಪರ್ಯಂತರವೂ ತಾನು ಕೃತಕೃತ್ಯನಲ್ಲ, ಅಲ್ಲದೆ ಅವನು ಕೇವಲ ವಂಚಕಾಗ್ರೇಸರನಾದುದರಿಂದ ಅಂತ್ಯದವರೆಗೂ ಅವನ ಕ್ರೂರಕೃತ್ಯಗಳನ್ನು ಪದೇಪದೇ ಬಹಿರಂಗಪಡಿಸದೇ ಬಿಡುವವನಲ್ಲ. ಅವನಿಲ್ಲದಿದ್ದರೆ ಈ ಬಡಪಾಯಿಗಳು ಏನುಮಾಡಲು ತಾನೇ ಶಕ್ತರಾಗಿದ್ದರು! ಎಂತಾದರೂ ಅವನನ್ನು ಹಿಡಿಯಲೇಬೇಕು. ಹಾಗಲ್ಲದಿದ್ದರೆ ತನ್ನ ಶ್ರಮವೆಲ್ಲವೂ ಕೇವಲ ನಿರರ್ಥಕ! ಎಂದಂದುಕೊಳ್ಳುತ್ತಿದ್ದನು.

ಒಂದುದಿನ ಕಾಳೀಚರಣನೂ, ತಾಂದೋಣಿರಾಯರೂ, ಮಾತನಾಡುತ್ತ ಕುಳಿತಿದ್ದರು. ಆಗ, ಟಪಾಲಾಫೀಸಿನ ಕರ್ಮಚಾರಿಯೊಬ್ಬನು ಕಾಳೀಚರಣನಿಗೆ ಒಂದು ಕಾಗದವನ್ನು ತಂದು ಕೊಟ್ಟನು. ಕಾಳೀಚರಣನು ಕಾಗದವನ್ನು ತೆರೆದು ಓದಿದನು. ಕಾಗದದಲ್ಲಿ :—

" ಅಸಹಾಯಶೂರರ ಪದಾರವಿಂದದಲ್ಲಿ,

ಈ ನಿರ್ಭಾಗ್ಯನು ಆವುದೋ ಒಂದು ಕಾಲದಲ್ಲಿ ಸಾಹಸಿಯು ಸಹವಾಸಿಯೂ ಗಿದ್ದನು. ಒಂದೊಂದುವೇಳೆ ಅತಿಶಯ ಚಮತ್ಕಾರದಿಂದ ಚಾತುರ್ಯಪ್ರದರ್ಶನೆಯನ್ನೂ ಮಾಡುತ್ತಿದ್ದನು. ಇದೇ ನಿರ್ಭಾಗ್ಯನು ಅವನ್ನು ಜ್ಞಾಪಕಕ್ಕೆ ತರಲು ಪ್ರಯತ್ನಪಡ ಬೇಕೆಂದರೂ ಸಂಕುಚಿತನಾಗುವನು. ತಮ್ಮ ಸಾಹಸವನ್ನು ನಾನು ಬಲ್ಲೆ! ನನ್ನಾಟವು ತಮ್ಮ ಮುಂದೆ ನಡೆಯಲಾರದೆಂದು ತಿಳಿದುಕೊಂಡೂ ಇದ್ದೆ. ಆದರೇನು? ಸಮಯ ದೊರೆತಾಗ ಸಾಹಸವನ್ನು ಪಯೋಗಿಸಬೇಕೆಂಬ ಆಶೆಯು ಆರನ್ನು ತಾನೆ ಪರಿಪೀಡಿಸ ದಿರುವುದು? ಕೇವಲ ದುರ್ದೈವದ ಕರ್ಮವಿಪಾಕ! ನನ್ನತಿಶಯ ಚಾತುರ್ಯ ಸಾಹ ಸಾದಿಗಳೆಲ್ಲವೂ ತೇಜೋಮಯನಾದ ಭಾಸ್ಕರನ ದಿವ್ಯ ಕಿರಣರಾಜಿಯಿಂದ ಕರಗಲ್ಪ ಡುವ ಮಂಜಿನಂತೆ ಮಾಯವಾದುವು! ಯಾವದಿನ ಆವ ಮುಖವನು ಗೃಹಾಂತ ರಾಳದಲ್ಲಿ ಕಂಡೆನೋ ಅಂದೇ ನಾನು ಕರಗತನಾದೆನೆಂದು ಭಾವಿಸಿದೆನು. ಆವ ಮುಖವು ಒಂದುಕಾಲದಲ್ಲಿ ತಮ್ಮಿಂದ ಆದರಿಸಲ್ಪಡುತ್ತಿದ್ದಿತೋ ಅದೇ ಆ ಮುಖವೇ ಈಗ ಅತಿಶಯವಾದ ಪಾಪರಾಶಿಯಿಂದ ಪರಿಪೂರ್ಣವಾಗಿ ಹೇಯವೂ, ಅತಿ ಭಯಂ ಕರವೂ ಆಗಿರುವುದು! ಒಂದುವೇಳೆ ಪರಮ ಮಿತ್ರರಾಗಿದ್ದವರು ಈಗ ಪರಸ್ಪರ ವಿರುದ್ಧಭಾವದಲ್ಲಿ ನಿಂತೆವು! ಜಯಾಪೇಕ್ಷೆಯಿಂದ ಪರಸ್ಪರ ಅತಿ ಭಯಂಕರವಾದ ದ್ವಂದ್ವ ಯುದ್ಧವನ್ನು ಮಾಡಿದೆವು. ಆದರೇನು? ಕರ್ಮಕ್ಕೆ ತಕ್ಕ ಫಲ!! ದೈವ ವ್ಯಾಪಾರವು ಅತಿಶಯವಾದುದು! ಒಂದು ಪಕ್ಷದಲ್ಲಿ ಸದ್ಧರ್ಮವೂ, ಇನ್ನೊಂದು ಪಕ್ಷದಲ್ಲಿ ಪರಹಿಂಸಾರೂಪವಾದ ಪಾಪವೂ, ಬೆಂಬಲವಾಗಿ ನಿಂತವು. ಅಧರ್ಮಕ್ಕೆ ಆಗಬೇಕಾದುದು ಆಯಿತು. ಪಾಪಶೇಷದಿಂದಲೂ, ಕ್ರೂರಕೃತ್ಯಗಳಿಂದಲೂ, ಅಧೋ ಗತಿಗಿಳಿಯುತ್ತಿರುವ ನಾನು, ಪೂರ್ವಾರ್ಜಿತ ಸುಕೃತಸಾಮರ್ಥ್ಯದಿಂದ ಪ್ರಸಿದ್ಧರಾಗು ತ್ತಿರುವ ನಿಮ್ಮ ಉತ್ತಮ ಗುಣವನ್ನು ಆವೆಂದಿಗೂ ದ್ವೇಷಿಸುವವನಲ್ಲ. ಪೂರ್ವಾ ರ್ಜಿತ ಸುಕೃತದಿಂದ ನೀವು ಹೇಗೆ ಉನ್ನತಪದವಿಯನ್ನು ಪಡೆಯುತ್ತಿರುವಿರೋ ಹಾಗೆಯೆ ನಾನು ಚತುರೋಪಾಯಗಳಿಂದ ಸಾಧಿಸಬೇಕೆಂದಿದ್ದ ಸುಖಜೀವನಕ್ಕೆ ನೀವು ಅಡ್ಡಿಯಾದುದಕ್ಕೆ ಮಾತ್ರ ನಿಮ್ಮನ್ನು ಬಹಳವಾಗಿ ದ್ವೇಷಿಸುವೆನು. ಅದಕ್ಕೆ ಮಿತಿ ಯುಂಟೆ? ಗಣನಾತೀತವಾದ ಆಶೆಗಳು! ಮಿತಿಯಿಲ್ಲದ ದ್ವೇಷ!! ಅದಕ್ಕೇನು ತಾನೆ ಮಾಡಬಲ್ಲೆ? ಪ್ರತೀಕಾರವನ್ನೆಸಗಬೇಕೆಂಬ ಆಶೆ! ಆದರೂ, ಕೇವಲ ಚೈತನ್ಯಶೂನ್ಯ!! ನಿಮ್ಮನ್ನು ಜಯಿಸುವ ಭರವಸೆಯು ನನಗುಳಿಯಲಿಲ್ಲ!!! ಹಿಂಸಿಸಬೇಕೆಂಬ ವಾಂಛೆಯು ನನ್ನನ್ನು ಬಿಡಲಿಲ್ಲ! ಅದಕ್ಕೆ ನಾನೇನು ಮಾಡುವೆನು? ಇಗೋ! ಸಾಯುವೆನು!!

ಪಿಶಾಚನಾಗಿಯಾದರೂ ನಿನ್ನಮೇಲ ಸೇಡನ್ನು ತೀರಿಸಿಕೊಳ್ಳುವೆನು !!! ನೀನು ನನ್ನನ್ನು ಹಿಡಿಯಲೇ ಬೇಕೆಂದೂ, ನಾನು ನಿನ್ನ ಕೈಗೆ ಸಿಕ್ಕಲೇಬಾರದೆಂದೂ, ಪರಸ್ಪರ ಬದ್ಧ ಕಂಕಣರಾಗಿರುವೆವು. ನಿನ್ನ ಪ್ರಯತ್ನವು ವಿಫಲವಲ್ಲ ! ನನಗೆ ದೈವಸಹಾಯವಿಲ್ಲ !! ನಿನ್ನ ಕೈಯಲ್ಲಿ ಬೀಳುವುದಕ್ಕಿಂತಲೂ, ಯಮಕಿಂಕರರ ಕರಗತವಾಗುವುದು ನನಗೆ ಅಧಿಕ ಸುಖಕರವಾಗಿ ಕಂಡಿತು. ಹಾಗೆಯೇ ನಿಶ್ಚಯಿಸಿದೆನು ! ಸ್ವೇಚ್ಛಾಮರಣವನ್ನೇ ಹೊಂದುವೆನು. ಆವ ಮನೆಯಲ್ಲಿ ನನಗೆ ಬಲಭುಜದಂತಿದ್ದ ಮನ್ನುವು ನಿನ್ನೊಂದಿಗೆ ಹೋರಾಡಿ ಗತಪ್ರಾಣನಾದನೋ, ಎಲ್ಲಿ ನೀನು ಬಂದಿಯಾಗಿದ್ದು ಅತಿ ಸಾಹಸದಿಂದ ತಪ್ಪಿಸಿ ಕೊಂಡೆಯೋ, ಅಲ್ಲಿ ಈ ನಿನ್ನ ನಿರ್ಭಾಗ್ಯ ಸಹಾಧ್ಯಾಯಿಯ ಮೃತ ಕಳೇ ಬರವನ್ನು ನೋಡು !

ಇತಿ

ನಿರ್ಭಾಗ್ಯ ಪುರಂದರ.

ಕಾಗದವನ್ನು ನೋಡಿ ಕಾಳೀಚರಣನು ಸ್ವಲ್ಪಕಾಲ ಆಲೋಚಿಸಿದನು. ಹೀಗೆ ಮಾತನಾಡದೆ ಕಾಳೀಚರಣನು ಕುಳಿತಿದ್ದುದನ್ನು ಇನ್‌ಸ್ಪೆಕ್ಟರು ಕಂಡು, “ ಇದೇನು ?” ಎಂದು ಪ್ರಶ್ನಿಸಿದರು. ಕಾಳೀಚರಣನು, “ ನನ್ನ ಯೋಚನೆಯು ಸರಿಯಾದ ಮಾರ್ಗ ದಲ್ಲಿ ಓಡುತ್ತಿರುವುದಾದರೆ, ಇದೊಂದು ಅತಿಶಯ ಗಂಭೀರ ಚಾತುರ್ಯ !” ಎಂದಂದು “ ರಾಯರೆ ! ಅಗತ್ಯವಾದ ಕೆಲಸವಾಗಿ ಕಾಣುತ್ತದೆ ! ಸ್ವಲ್ಪಕಾಲದಲ್ಲಿಯೆ ಬಂದು ತಮ್ಮನ್ನು ನೋಡುವೆನು.” ಎಂದು ಹೇಳಿ ಅಲ್ಲಿಂದ ಹೊರಟೇಬಿಟ್ಟನು.

ಕಾಳೀಚರಣನು ಹೋದುದನ್ನು ನೋಡಿ ಇನ್‌ಸ್ಪೆಕ್ಟರು, “ ಇದೆಂತಹ ಕೆಲಸ! ಯಾವಾಗನೋಡಿದರೂ, ಎಂತಹ ಕಾರ್ಯಬಿದ್ದರೂ, ಏಕಾಂಗಿಯಾಗಿಯೇ ನುಗ್ಗುತ್ತಿರು ವನಲ್ಲ ! ಇದೆಂತಹ ಧೈರ್ಯ !! ಈತನಿಗೆ ಪ್ರಾಣಭಯವೆಂಬುದು ಲೇಶಮಾತ್ರ ವಾದರೂ ಇಲ್ಲ ! ಆ ಕಾಗದದಲ್ಲಿದ್ದ ಸಂಗತಿಯನ್ನು ಕೂಡ ಹೇಳದೆ ಹೊರಟು ಹೋದನಲ್ಲಾ ! ಆಗಲಿ !!” ಎಂದಂದುಕೊಂಡು, ಕಾಳೀಚರಣನು ಹೋದ ಮಾರ್ಗ ವನ್ನೇ ಅನುಸರಿಸಿ ಹೋದರು.

ಇಬ್ಬರೂ ನಿರ್ದಿಷ್ಟಸ್ಥಾನವನ್ನು ಸೇರಿದರು. ದೃಶ್ಯವು ಹೃದ್ಭೇದಕವಾಗಿತ್ತು. ಕಾಳೀಚರಣನು ಚಕಿತನಾದನು. ಇನ್‌ಸ್ಪೆಕ್ಟರ ಸ್ಥಿತಿಯಾದರೋ ಕೇವಲ ಸ್ತಂಭೀಭೂತ? ಸ್ವಲ್ಪಕಾಲ ಹಾಗೆಯೇ ನಿಂತಿದ್ದರು.” ಅಹಹ ! ಎಂತಹ ಭಯಂಕರ ಪರಿಣಾಮ !!

ಏನಾಗಿರಬಹುದು?'' ಎಂದು ಇಕ್ಸ್ಪೆಕ್ಟರು ಕಾಳೀಚರಣನನ್ನು ಪ್ರಶ್ನಿಸಿದರು. ಕಾಳೀಚರಣನು, ಸರಿಯಾಗಿ ವಿಚಾರಮಾಡಿ ಸಂಗತಿಗಳನ್ನು ಹೀಗೆಯೇ ಸರಿಯೆಂದು ನಿರ್ಧರಿಸಿಕೊಳ್ಳದೆ ಹೇಳುವುದು ಹೇಗೆ?'' ಎಂದು ಹೇಳಲು ಇಕ್ಸ್ಪೆಕ್ಟರು "ನಾನು ಈ ರೀತಿಯಲ್ಲಿ ಆಲೋಚಿಸುವೆನು, ಏನೆಂದರೆ, ನಿಮ್ಮಿಂದ ಈ ತಂತ್ರಗಳೆಲ್ಲವೂ ಬಟ್ಟಬಯಲಾದುದನ್ನು ನೋಡಿ ತಮ್ಮ ಕೈಗೆ ಅವನು ಸಿಕ್ಕಿಬಿದ್ದು ಈ ತಪ್ಪಿತಕ್ಕಾಗಿ ಘೋರವಾದ ಹಿಂಸೆಯನ್ನು ಅನುಭವಿಸಬೇಕಾಗಿ ಬರುತ್ತೆಯಾದುದರಿಂದಲೂ, ತನ್ನ ಕಡೆಯವರೆಲ್ಲರೂ ಸಿಕ್ಕಿ ತಾನು ಒಬ್ಬಂಟಿಗನಾದುದರಿಂದಲೂ, ಆ ಸೂತ್ರಧಾರನು ಈ ರೀತಿಯಲ್ಲಿ ಪ್ರಾಣವನ್ನು ಬಿಟ್ಟಿರಬಹುದು!'' ಎಂದು ಹೇಳಿದರು ಕಾಳೀಚರಣನು ಸ್ವಲ್ಪಕಾಲ ಆಲೋಚಿಸಿ, "ಇದ್ದರೂ ಇರಬಹುದು! ಒಂದುವೇಳೆ, ನಮಗೆ ಅವನು ಮೃತನಾದಂತೆ ನಂಬುಗೆಯನ್ನು ಹುಟ್ಟಿಸಿ ಮತ್ತೇನಾದರೂ ಮೋಸಗಾರಿಕೆಯನ್ನು ಮಾಡಲು ಹೀಗೆ ನಿರ್ಮಿಸಿರಬಹುದು! ಅತಏವ ಈ ಮರಣದ ವಿಚಾರವು ನಂಬುಗೆಗರ್ಹವಾದುದಲ್ಲವೆಂದು ನನಗೆ ತೋರುತ್ತದೆ. ಏನಾದರೇನು? ಅವನವನ ಕರ್ತವ್ಯದಲ್ಲಿ ಅವನವನು ಜಾಗರೂಕತೆಯಿಂದಿರುವುದು ಮಾನವನ ಕರ್ತವ್ಯ! ಎಂದು ಹೇಳಿ ಹಿಂದಿರುಗಿದನು!

ಪಾಠಕಮಹಾಶಯರಿಗೆ ನಿಜಸ್ಥಿತಿಯನ್ನು ತಿಳಿಯಲು ಬಹು ಕುತೂಹಲವಿರುವುದೇನೊ! ಹಾಗಿದ್ದರೆ ನಾವಿಷ್ಟು ಮಾತ್ರ ತಿಳುಹಿಸಬಲ್ಲೆವು, ಏನೆಂದರೆ ವಸ್ತುತಃ ಪುರಂದರನು ಸಿಗಲೇ ಇಲ್ಲ!

ಸಮಾಪ್ತ

ಕಾದಂಬರೀಸಂಗ್ರಹ ಗ್ರಂಥಮಾಲಾ ನಂ. ೩೩

ಕರ್ಣಾಟಕ ಸಾಹಿತ್ಯ ಪರಿಷತ್ತು

[illegible]

— ಎರಡನೇಭಾಗ —

(ಸಾಮಾಜಿಕ ರೊಬ್ಬರಿಂದ)

ಭುವನೇಶ್ವರಿ ಪ್ರೆಸ್,

ಮೈಸೂರು.

೧೯೧೨

ವಿನಂತಿ.

“ಕರ್ಣಾಟಕಸಾಹಿತ್ಯ ಪರಿಷತ್ತಿ”ನ ಅಭಿವೃದ್ಧಿಯೇ ದೇಶಭಾಷಾಭಿವೃದ್ಧಿ ಯೆಂಬ ದೃಢನಂಬುಗೆಯಿಂದ, ಈ ಲೇಖನವನ್ನು — [illegible] ಸ್ವಾರ್ಥತ್ಯಾಗದಿಂದ — ಪ್ರಕಟಿಸಿರುತ್ತೇವೆ

ಈ ಲೇಖನದಲ್ಲಿರುವ ಸೂಚನೆಗಳನ್ನು ಕ. ಸಾ. ಪರಿಷತ್ತಿನ ಸಭಾಸದರೂ ಸಮ್ಮೇಳನದ ಪ್ರತಿನಿಧಿಗಳೂ ಕರ್ಣಾಟಕಪತ್ರಿಕಾಧಿಪತಿಗಳೂ ಸ್ವೀಕರಿಸಿ [illegible] ಕರ್ಣಾಟಕದ ದೇಶಭಾಷೆಗಳ ಅಭಿವೃದ್ಧಿಯು ನಿಜವಾಗಿಯೂ ಆಗುವಂತೆ ಮಾಡುವು ದಾದರೆ ನಮ್ಮ ಪ್ರಕಾಶನಶ್ರಮವು ಸಾರ್ಥಕವಾಗುವುದು.

ಕ. ಸಾ. ಪರಿಷತ್ತಿನ ಸಭಾಸದರಲ್ಲಿ ಯಾರಾದರೂ ಈ ಲೇಖನವನ್ನು ಅಪೇಕ್ಷಿಸಿ [illegible]ವನ್ನು — ಕಳುಹಿಸಿದರೆ, ಮುದ್ರಿತವಾಗಿ! ಕಳುಹುವೆವು. [illegible]

ಮೈಸೂರು. [illegible] ಪ್ರಕಾಶಕರು.

[illegible]

ಶುದ್ಧಾಶುದ್ಧಪತ್ರಿಕೆ.

ಪುಟ	ಪಂಕ್ತಿ	ಅಶುದ್ಧ	ಶುದ್ಧ
೨	ಕೊನೆಯದು	3 (c)	(L).
೩	೧	3 (c)	L.
೪	೨	ಸಂಗ	ಸಂಘ.
೬	೯	(indiviually)	(individually).
೯	೧೯	ಬಂದೇ	ಬಂದೇ.
೧೨	೭, ೯	ಪ್ರಸಿದ್ಧರಾದ " ಪಂಡಿತ "	ಪ್ರಸಿದ್ಧರಾದಪಂಡಿತ
೧೩	೧೨	ಮುಂದರಿಸಿಲಾಗುತ್ತವೆ	ಮುಂದರಿಸಿಡಲಾಗುತ್ತವೆ
೧೪	೨೪	ನಿಂಬಧನೆ	ನಿಬಂಧನೆ
೧೫	೨೦	ದಾದುದ್ದರಿಂದ	ದಾದುದರಿಂದ.
೧೬	೧೩	ಆಸ್ತಿಯು	ಆಸ್ತಿಯು.
೧೭	೪	ವರ್ಗದಲ್ಲಿ	ವರ್ಷದಲ್ಲಿ.
೨೯	೯ ೧೦	ಸಹಾವನ್ನು	ಸಹಾಯವನ್ನು
೩೦	೫	ಉದೋಗಸ್ಥ	ಉದ್ಯೋಗಸ್ಥ.
೩೫	೧	ಊಪಸಂಹಾ	ಉಪಸಂಹಾ.
,,	೧೬	ವೃಕ್ತ್ಯ	ವಕ್ತ್ಯ
,,	೧೯	ಕಾರ್ಯ್ಯೀಯು	ಕಾರ್ಯವು.

ಕರ್ಣಾಟಕ ಸಾಹಿತ್ಯ ಪರಿಷತ್ತು

ಸೂಚನೆಗಳು.

ಬೆಂಗಳೂರಿನಲ್ಲಿ ಸುಮಾರು ಎರಡು ವರ್ಷಗಳ ಹಿಂದೆ ಸ್ಥಾಪಿತವಾಗಿರುವ ಕರ್ಣಾಟಕಸಾಹಿತ್ಯ ಪರಿಷತ್ತಿನವರು ಪ್ರಥಮತಃ ಏರ್ಪಡಿಸಿದ್ದ ನಿಬಂಧನೆಗಳಲ್ಲಿ ಕಂಡುಬಂದ ನ್ಯೂನತೆಗಳನ್ನು ತೋರಿಸಿಕೊಟ್ಟು ತಿದ್ದುಪಡಿಗಳನ್ನು ಸೂಚಿಸಿ ಒಂದು ಸಣ್ಣ ಪುಸ್ತಕವನ್ನು ಮೈಸೂರು "ಕಾದಂಬರೀಸಂಗ್ರಹ"ದ ಗ್ರಂಥಮಾಲೆಯಲ್ಲಿ ೧೪ನೆಯ ಪುಸ್ತಕವಾಗಿ ಕಳೆದ ೧೯೧೬ನೇ ಇಸವಿಯ ಏಪ್ರಿಲ್ ತಿಂಗಳಲ್ಲಿ ಪ್ರಚಾರಗೊಳಿಸಿರುವ ವಿಷಯವು ಸದಸ್ಯರೂ ಭಾಷಾಭಿಮಾನಿಗಳೂ ಆದ ಅನೇಕರಿಗೆ ತಿಳಿದೇ ಇರುವುದಲ್ಲವೇ? ಪ್ರಕಾಶಗೊಳಿಸುವಲ್ಲಿ ತುಂಬಾ ವಿಳಂಬವಾದರೂ ಅದರ ದೆಸೆಯಿಂದ ಬಂದಿಷ್ಟು ಪ್ರಯೋಜನವಾಗದೆ ಹೋಗಲಿಲ್ಲ; ಅದರೊಳಗೆ ಮಾಡಲಾದ ಎಷ್ಟೋ ತಿದ್ದುಪಡಿಗಳೂ ಇತರ ಸೂಚನೆಗಳೂ ಕಳೆದ ಮೇ ತಿಂಗಳಲ್ಲಿ ನೆರೆದ ಪರಿಷತ್ತಿನ ವಾರ್ಷಿಕ ಮಹಾಸಭೆಯಲ್ಲಿ ಅವರೊಡನೆ ಅನುಮೋದಿಸಲ್ಪಟ್ಟುವು. ಪರಿಷತ್ಪತ್ರಿಕೆಯ ಮೊದಲನೇ (ಏಪ್ರಿಲ್, ೧೯೧೮) ಸಂಚಿಕೆಯಲ್ಲಿ ಅಚ್ಚಾಗಿರುವ ಮೂಲನಿಬಂಧನೆಗಳಿಗೂ ತಿದ್ದುಪಡಿಯಾದ ಬಳಿಕ ಪುಸ್ತಕರೂಪವಾಗಿ ಅಚ್ಚಾದ ಈಗಿನ ನಿಬಂಧನೆಗಳಿಗೂ ಎಷ್ಟು ಅಂತರವಿರುವುದೆಂದೂ, ಪೂರ್ವದಲ್ಲಿರುತ್ತಿದ್ದ ಎಷ್ಟೆಲ್ಲ ಕುಂದಕಗಳು ಈಗ ಪರಿಹಾರವಾಗಿರುವುವೋ ಅದು ಇವೆರಡನ್ನೂ ಜತೆಯಲ್ಲಿಟ್ಟುಕೊಂಡು ಓದಿದರೆ ಸುಲಭವಾಗಿ ಕಂಡು ಬರುವುದು. ಹೀಗಾದುದರಿಂದ ಮೂಲನಿಬಂಧನೆಗಳನ್ನು ಕಳೆದ ಎಷ್ಟೋ ತಿಂಗಳ ಕಾಲ ಸೂಕ್ಷ್ಮವಾಗಿ ಆಲೋಚಿಸಿ ಅದರೊಳಗಣ ದೋಷಗಳನ್ನು

ಬೇರೆ ಕೆಲವು ಸೂಚನೆಗಳನ್ನೂ ಸದಸ್ಯರುಗಳ ಗಮನಕ್ಕೆ ಪ್ರಸ್ತಾಪ ಮೂಲವಾಗಿ ತರುವಲ್ಲಿ ನಾನು ಪಟ್ಟ ಕಷ್ಟವು ನಿರರ್ಥಕವಾಗಲಿಲ್ಲವೆಂದು ನನಗೂ ಸಮಾಧಾನವುಂಟಾಗಿದೆ

ತಥಾಪಿ, ಇಷ್ಟರಿಂದಲೇ ನಿಬಂಧನೆಗಳಲ್ಲಿನ್ನ ದೋಷಗಳೆಲ್ಲ ಹೋಗಗೊಳಿಸಲ್ಪಟ್ಟಂತಾಗಲೀ, ಪರಿಷತ್ತಿನ ವಿಷಯದಲ್ಲಿ ಮಾಡತಕ್ಕ ಸೂಚನೆಗಳೆಲ್ಲ ಮಾಡಿ ತೀರಿದಂತಾಗಲೀ, ನನ್ನ ಇಷ್ಟಾರ್ಥವೆಲ್ಲ ನೆರವೇರಿದಂತಾಗಲೀ ಆಗಲಿಲ್ಲ. ಕಳೆದ ಸಲ ನಾನು ಮಾಡಿದ ಸೂಚನೆಗಳಲ್ಲಿಯೇ ಕೆಲವು ಉಳಿದಿವೆ; ಬೇರೆ ಕೆಲವು ಹೊಸ ಸೂಚನೆಗಳು ನನ್ನ ಮನಸ್ಸಿಗೆ ಹೊಳೆದಿವೆ. ಸಾಲದುದಕ್ಕೆ, ಉತ್ಸಾಹಿಗಳೂ ಪರಿಷತ್ತಿನ ಹಿತೇಚ್ಛುಗಳೂ ಆದ ನನ್ನ ಮಿತ್ರರು ಕೆಲವರು ಕೂಡ ಇನ್ನಷ್ಟೇ ಸೂಚನೆಗಳನ್ನು ನನಗೆ ಬರೆದು ತಿಳಿಸಿರುವರು. ಹೀಗಾದ ದರಿಂದ, ಇವನ್ನೆಲ್ಲ ಕೂಡಿಸಿ ಪ್ರತ್ಯೇಕ ಪ್ರಸ್ತಾಪರೂಪವಾಗಿ, ಈಸಲ ಅಷ್ಟು ತ್ವರೆಪಡದೆ, ಅಚ್ಚು ಹಾಕಿಸಿ ಭಾಷಾಭಿಮಾನಿಗಳಾದ ಸದಸ್ಯರ ಸನ್ನಿಧಿಯಲ್ಲಿರಿಸಿರುವೆನು. ಪರಿಷತ್ತಿನ ಉತ್ತರಾಭ್ಯುದಯವನ್ನು ಸಾಧಿಸುವಲ್ಲಿ ಬದ್ಧಕಂಕಣರಾದ ಸಾಮಾಜಿಕರೆಲ್ಲರೂ ಈ ಪ್ರಸ್ತಾಪವನ್ನು ಶಾಂತಚಿತ್ತರಾಗಿ ಓದಿಕೊಂಡು, ಅದರಲ್ಲಿ ಮಾಡಲಾದ ಸೂಚನೆಗಳ ಯುಕ್ತಾಯುಕ್ತತೆಯನ್ನು ತಮ್ಮ ತಮ್ಮ ಪ್ರಾಂತ್ಯದ ವೃತ್ತಪತ್ರಿಕೆಗಳಲ್ಲಿ ಚರ್ಚಿಸಿ, ಮುಂದಿನ ೧೯೧೭ನೇ ಸಂವತ್ಸರದ ಮಹಾಸಭೆಯ ಕಾಲದಲ್ಲಿ ಅವುಗಳೊಳಗೆ ಯೋಗ್ಯವಾದುವುಗಳು ಸುಲಭವಾಗಿ ಅಂಗೀಕರಿಸಲ್ಪಡುವಂತೆ ಅನುಕೂಲ ನಡಿಸಿಕೊಡುವರೆಂದು ನಂಬುವೆನು.

ನಿಬಂಧನೆಗಳು

ಹಿಂದೆ ಪ್ರಚುರಗೊಳಿಸಿದ್ದ ಪ್ರಸ್ತಾಪದಲ್ಲಿ ಪರಿಷತ್ತಿನ ೩ನೆಯ ನಿಬಂಧನೆಯನ್ನು ಕುರಿತು ಹೀಗೆ ಹೇಳಿದ್ದೆನು:—

೩ನೆಯ ನಿಬಂಧನೆಯು ಪರಿಷತ್ತಿನ ಉದ್ದೇಶವನ್ನು ಸಂಗ್ರಹವಾಗಿ ನಿರೂಪಿಸುವುದು. ಮತ್ತು ಅದನ್ನು ನೆರವೇರಿಸಲು ಒಟ್ಟು ೧೪ ಮಾರ್ಗಗಳನ್ನು ಹೇಳಿವೆ. ಆದರೆ (ಪ್ರಥಮ) ಸಮ್ಮೇಳನದ ೨ನೇ ನಿರ್ಣಯರೂಪವಾಗಿ ಗೊತ್ತಾದ; ೧ ಕರ್ಣಾಟಕದ ಬೇರೆಬೇರೆ ಭಾಗಗಳಲ್ಲಿ ಕ. ಸಾ. ಪರಿಷತ್ತಿನ

ಶಾಲೆಗಳನ್ನು ಸ್ಥಾಪಿಸಿ, ಸಮಾನೋದ್ದೇಶಗಳಿಗಾಗಿ ಏರ್ಪಟ್ಟ ಬೇರೆ ಬೇರೆ ಸಂಘಗಳನ್ನು ಪರಿಷತ್ತಿಗೆ ಜೋಡಿಸುವುದು (Affiliate)" ಎಂಬುದನ್ನು ೧೧ನೆಯ ಭಾಗವೆಂದು ಹೇಳಿರುವ ಅಂಶಕ್ಕೆ ಸೇರಿಸಿ ಅದನ್ನು ವಿಸ್ತಾರಪಡಿಸುವುದು ಅಯುಕ್ತವಾಗಲಾರದೆಂದು ನನಗೆ ತೋರುತ್ತದೆ. ಇನ್ನು, ಕನ್ನಡ ಸಾಹಿತ್ಯವನ್ನೂ ಭಾಷೆಯನ್ನೂ ಉನ್ನತಿಗೆ ತರುವುದಿಷ್ಟೇ ನಮ್ಮ ಪರಿಷತ್ತಿನ ಮಹೋದ್ದೇಶವೆಂದು ನಾನು ತಿಳಿಯುವುದಿಲ್ಲ. "ಭಾರತೀಯ ಸಾಹಿತ್ಯ ಕಲಾಶಾಸ್ತ್ರರೂಪವಾಗಿ ವ್ಯಕ್ತವಾಗಿರುವ ಸರ್ವವಿಧವಾದ ಆರ್ಯಸಂಸ್ಕೃತಿ (Culture) ಯನ್ನು ಕರ್ಣಾಟಭಾಷಾ ಮೂಲವಾಗಿ ವಿಕಾಸಗೊಳಿಸಿ ಸಮಸ್ತೋಪಾಯಗಳಿಂದ ಕನ್ನಡಿಗರ ಅಭ್ಯುದಯವನ್ನು ಸಾಧಿಸುವುದೇ ಕರ್ಣಾಟಕಸಾಹಿತ್ಯಪರಿಷತ್ತಿನ ಉದ್ದೇಶ" ವೆಂದು ಈಗಿನ ಮಾತುಗಳಿಗೆ ಬದಲಾಗಿ ಹಾಕಿದರೆ ಚೆನ್ನಾಗಿರಬಹುದೆಂದು ನನಗೆ ತೋರುತ್ತದೆ. ಹೀಗೆ ಮಾಡಿದೆವಾದರೆ, ನಾಟಕಗಳು, ಹರಿಕೀರ್ತನೆಗಳು, ಚಿತ್ರಲೇಖನ, ಗಾನ ಮುಂತಾದವುಗಳು ಕೂಡ ನಮ್ಮ ಉದ್ದೇಶಕ್ಕೆ ವಿಸಂಗತವಲ್ಲವಾದುದರಿಂದ ಅವು ಕೂಡ ನಮ್ಮ ಈ ಅರ್ಥವಿವರಣೆಯೊಳಗೆ ಬರುವುದಕ್ಕೆ ಅವಕಾಶವಾಗುವುದು.

ಈ ನಿಬಂಧನೆಯನ್ನು ಮೇಲಿನ ಅವತರಣದಲ್ಲಿ ಹೇಳಿದ ರೀತಿಯಾಗಿ ತಿದ್ದಿಕೊಳ್ಳುವುದು ಯುಕ್ತವೆಂದು ತೋರುತ್ತದೆ. ಇದರಲ್ಲಿ ಹೇಳಿರುವಂತೆ ಪರಿಷತ್ತಿನ ಉದ್ದೇಶವನ್ನು ವಿಸ್ತಾರಗೊಳಿಸುವಲ್ಲಿ ಇತರ ಯಾವ ಸಾಹಿತ್ಯಪರಿಷತ್ತಿನವರೂ ಇದುವರೆಗೆ ಮಾಡದಿರುವ ಯಾವುದೊಂದು ನೂತನವಾದ ತಿದ್ದುಪಡಿಯನ್ನು ನಾವು ಮಾಡಿದಂತಾಗುವುದಿಲ್ಲ. ಪರಿಷತ್ಪತ್ರಿಕೆಯ ಮೊದಲನೆಯ (ಏಪ್ರಿಲ್, ೧೬) ಸಂಚಿಕೆಯಲ್ಲಿ ಶ್ರೀಯುತ ಚಕ್ರವರ್ತಿಯವರು "ವಂಗೀಯ ಸಾಹಿತ್ಯ ಪರಿಷತ್ತಿನ ನಿಬಂಧನೆ" ಗಳನ್ನು ಕುರಿತು ಬರೆದಿರುವ ಲೇಖನದಲ್ಲಿಯೂ ಇದೇರೀತಿ ಗಾನ, ಚಿತ್ರಲೇಖನಾದಿಗಳ ಉಲ್ಲೇಖವು ಬಂದಿರುವುದನ್ನು ವಾಚಕರು ಕಾಣಬಹುದು. ಇದೇ ಉದ್ದೇಶವು ನಮ್ಮ ವಂಗೀಯ ಬಂಧುಗಳಲ್ಲಿಯೂ ಇರುವುದು. ಇದರಿಂದ ಸ್ಪಷ್ಟವಾಗುತ್ತದೆ. ಈ ತಿದ್ದುಪಡಿ ಮಾಡಿದೆವಾದರೆ ನಾಟಕ ಸಭೆಗಳು, ಚಿತ್ರಕಲಾಸಂಘಗಳು ಮುಂತಾದ ಸಂಸ್ಥೆಗಳನ್ನೂ ಪರಿಷತ್ತಿಗೆ ಜೋಡಿಸಲು ಸಾಧ್ಯವಾಗುವುದು.

ತಿದ್ದುಪಡಿಯಾದ ನಿಬಂಧನೆಗಳ ಇಂಗ್ಲೀಷ್ ಪ್ರತಿಯಲ್ಲಿ Conference (ಸಮ್ಮೇಳನ) ವೆಂಬ ಮಾತು ಮೊದಲಲ್ಲಿಯೂ ಬಾವಗೆ ಪಕ್ಕನೆ ೮ನೇ ನಿಬಂಧನೆಯಲ್ಲಿ ಬಂದಿದೆ. ಕನ್ನಡ ಪ್ರತಿಯಲ್ಲಿ "ಸಮ್ಮೇಳನ" ಪದವು 3 (e) ನಲ್ಲಿಯೂ ಬಂದಿರುವುದು. ಇಂಗ್ಲೀಷ್ ಪ್ರತಿ

ಯಲ್ಲಿಯೇ ಅದಕ್ಕೆ ಸಮಾಲೋಚನಾ ಸಭೆ ಎನ್ನುವ "Meetings" (ಸಭೆಗಳು) ಎಂಬ ಪದದ ಬದಲಾಗಿ 'Conferences' ಎಂಬ ಪದವನ್ನೇ ಇಡುವುದು ಯುಕ್ತವಾಗಿದೆ.

ಸಮಾನೋದ್ದೇಶಗಳಿಗಾಗಿ ಏರ್ಪಟ್ಟ ಬೇರೆ ಬೇರೆ ಸಂಘಗಳನ್ನು ಪರಿಷತ್ತಿಗೆ ಜೋಡಿಸಿಕೊಳ್ಳುವ ವಿಷಯವಾಗಿ ನೆನ್ನೆಯ ವರ್ಷದಲ್ಲಿ ಯಾವ ಕೆಲಸವೂ ನಡೆಯಲಿಲ್ಲ. ಎರಡನೆಯ ಸಂವತ್ಸರದ (೧೯೧೬ ನೇ ಮೇ) ಕಾಲದಲ್ಲಿ ನಡೆದ ಪರಿಷತ್ತಿನ ಪ್ರಥಮ ವಾರ್ಷಿಕ ಮಹಾಸಭೆಯಲ್ಲಿ "ಈ ಕುರಿತು ತಕ್ಕ ನಿಬಂಧನೆಗಳನ್ನು ಯೋಚಿಸಿ ರಿಪೋರ್ಟ್ ಮಾಡುವುದಕ್ಕಾಗಿ" ಎಂಟುಮಂದಿ ದೊಡ್ಡ ಮನುಷ್ಯರುಗಳ ಒಂದು ಉಪಸಭೆಯು ಏರ್ಪಟ್ಟಿತು. ಈ ಉಪಸಭೆಯವರು ಯಾವ ನಿಬಂಧನೆಗಳನ್ನು ಮಾಡಿ ವರೋ ಅದು ಇನ್ನೂ ತಿಳಿದು ಬಂದಿಲ್ಲ. ಈ ಕುರಿತು ನಿಬಂಧನೆಗಳನ್ನೇರ್ಪಡಿಸುವಲ್ಲಿ ಈ ಕೆಳಗಣ ನಾಲ್ಕು ವಿಷಯಗಳನ್ನು ಮುಖ್ಯವಾಗಿ ಗಮನಿಸಬೇಕೆಂದು ನನಗೆ ತೋರುತ್ತಿದೆ.—

(i) ನಿಬಂಧನೆಗಳು ಸರಳವಾಗಿರಬೇಕು—ಸಂಘಗಳೊಳಗೆ ಬೇರೆ ಬೇರೆ ತರಗತಿಗಳನ್ನು ಮುಂತಾಗಿ ಮಾಡಿ ವಿಸ್ತಾರವಾದ ಅನೇಕಾನೇಕ ನಿಬಂಧನೆಗಳನ್ನು ಮಾಡಿದರೆ ಅವುಗಳಿಂದ ಅನಾವಶ್ಯಕವಾದ ಗೊಂದಲಕ್ಕೆ ಅವಕಾಶ ಪುಟ್ಟುವುದು.

(ii) ನಿಬಂಧನೆಗಳು ಸುಲಭಸಾಧ್ಯವಾಗಿರಬೇಕು —ದ್ರವ್ಯಬಲದ ವಿಷಯದಲ್ಲಿ

ಹೊರ ಪೂರುಗಳಲ್ಲಿಯೂ ಗ್ರಾಮಾಂತರಗಳಲ್ಲಿಯೂ ಇರುವ ಸಂಘಗಳ ಸ್ಥಿತಿಯು ಬಹು ಹೀನವಾಗಿರುವುದು, ಅಂಥ ಸಂಘಗಳಿಂದ ಸದಸ್ಯರ ಸಂಖ್ಯಾನುಗುಣವಾಗಿ ಇಷ್ಟೇ ದ್ರವ್ಯ ಬರಬೇಕೆಂದು ಪರಿಷತ್ತಿನವರು ಅಪೇಕ್ಷಿಸಿದರೆ ಅದನ್ನು ಕೊಡಲು ಅವುಗಳಿಗೆ ಶಕ್ತಿಯಿಲ್ಲದೆ ಹೋಗಬಹುದು. ಇಂಥಸ್ಥಿತಿಯಲ್ಲಿ ಎಷ್ಟೋ ಸಂಘಗಳು ಪರಿಷತ್ತಿನೊಂದಿಗೆ ಜೋಡಿಸಿಕೊಳ್ಳಲು ಸಾಧ್ಯವಾಗಲಾರದು. ಆದುದರಿಂದ ಕೊಡತಕ್ಕ ದ್ರವ್ಯದ ಮೊಬಲಗನ್ನು ಅವವುಗಳ ಇಷ್ಟಕ್ಕೆ ಬಿಟ್ಟರೆ ಯುಕ್ತವಾಗುವುದು.

(iii) ಸಂಬಂಧವು ಬಹಳ ನಿಕಟವಾಗಕೂಡದು.—ಜೋಡಿಸಲ್ಪಟ್ಟ ಮಾತ್ರದಿಂದ ಇತರ ಸಂಘಗಳಿಗೆ ಪರಿಷತ್ತಿನ ಆಡಳಿತದ ವಿಷಯದಲ್ಲಿಯೂ ಪರಿಷತ್ತಿಗೆ ಇತರ ಸಂಘಗಳ ಆಡಳಿತದ ವಿಷಯದಲ್ಲಿಯೂ ಮಿತಿ ಮೀರಿ ಕೈಹಾಕಲು ಬರುವಂತಿರಬಾರದು. ಹೀಗಿದ್ದರೆ ಜೋಡಿಸಲ್ಪಟ್ಟ ಸಂಘಗಳ ಆಡಳಿತವೇ ಮುಂತಾದ ವ್ಯವಹಾರಗಳು ಹೇಗಿದ್ದರೂ ಪರಿಷತ್ತಿಗೆ ಅದರಿಂದ ಯಾವ ಬಾಧಕವೂ ಉತ್ತರವಾದಿತ್ವವೂ ಇರುವುದಿಲ್ಲ. ಇದಲ್ಲದೆ ಕರ್ಣಾಟಕದೇಶದ ಹಲವು ಭಾಗಗಳಲ್ಲಿ ಹರಡಿಕೊಂಡಿರುವ ಯಾವತ್ತು ಸಂಘಗಳ ಮೇಲ್ವಿಚಾರವನ್ನು ನೋಡಲು ಪರಿಷತ್ತಿಗೆ ಸಾಧ್ಯವೂ ಆಗಲಾರದು.

(iv) ಜೋಡಣೆಯ ದೆಸೆಯಿಂದ ಇತರ ಸಂಘಗಳ ಗೌರವಕ್ಕೆ ಚ್ಯುತಿಯಾಗತಕ್ಕದಲ್ಲ.—ಮುಖ್ಯವಾಗಿ ಕಳೆದ ಸುಮಾರು ೨೫ ವರ್ಷಗಳಿಂದ ಸಹ ಉತ್ತರ ಕರ್ಣಾಟಕದಲ್ಲಿ ವಿಶೇಷವಾದ ಗೌರವದೊಡನೆ ಕಾಣಲ್ಪಡುತ್ತಿರುವ ಧಾರವಾಡದ ಕರ್ಣಾಟಕ ವಿದ್ಯಾವರ್ಧಕಸಂಘವನ್ನು ಅನುಲಕ್ಷಿಸಿ ಹೀಗೆ ಹೇಳುವೆನು. ಜೋಡಣೆಯ ದೆಸೆಯಿಂದ ಪರಿಷತ್ತಿನ ಉಪಸಂಘದಂತಾಗಿ ಅದರ ಪ್ರತಿಷ್ಠೆಗೆ ಲೋಪಬರುವ ಹಾಗಿದ್ದರೆ ಆ ಸಂಘವು ಪರಿಷತ್ತಿನೊಂದಿಗೆ ಜೋಡಿಸಲ್ಪಡಲು ಸರ್ವಥಾ ಸಮ್ಮತಿಸಲಾರದು.

ಈ ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಆಲೋಚಿಸುವಲ್ಲಿ, ಈ ಕೆಳಗಿನಂತೆ ನಿಬಂಧನೆಯನ್ನು ಏರ್ಪಡಿಸಿಕೊಂಡರೆ ಜೋಡಣೆಯ ಕಾರ್ಯವು ಬಹುಸುಲಭವಾಗಿ ನೆರವೇರುವುದೆಂದು ನನಗೆ ತೋರುತ್ತಿದೆ:—

"(a) ಸಾಮಾನ್ಯವಾಗಿ ಯಾರೊಬ್ಬರು ಯಾವ ಉಪಾಧಿ (Condition)ಗಳಿಗೆ ಒಳಪಟ್ಟು ಪರಿಷತ್ತಿನ ಯಾವ ಯಾವ ವರ್ಗಗಳ ಸದಸ್ಯರಾಗಬಹುದೋ, ಆ ಯಾವತ್ತು ವರ್ಗಗಳ ಸದಸ್ಯರಾಗಿ, ಅವೇ ಉಪಾಧಿಗಳಿಗೊಳಪಟ್ಟು, ಪರಿಷತ್ತಿನ ಉದ್ದೇಶಗಳನ್ನು ಅನುಮೋದಿಸತಕ್ಕ ಸಮಸ್ತ ವಾಚನಾಲಯಗಳೂ, ಪುಸ್ತಕಭಂಡಾರ

ಗಳೂ, ಇತರ ಸಂಘಗಳೂ ತಮ್ಮ ಐಕ್ಯಗೊಳಿಸಲ್ಪಟ್ಟ ನೆಲೆ (Corporate capacity) ಯಲ್ಲಿ ಪರಿಷತ್ತನ್ನು ಸೇರಬಹುದು. ಹೀಗೆ ಸದಸ್ಯರಾಗಿ ಸೇರಿದ ಯಾವತ್ತು ಸಂಸ್ಥೆಗಳಿಗೆ ಆಯಾ ವರ್ಗದ ಇತರ ಸದಸ್ಯರಿಗೆ ಇರುವ ಸಕಲ ಸ್ವಾತಂತ್ರ್ಯಗಳೂ ಇರತಕ್ಕದ್ದು."

"(b) ಇಂಥ ಸಂಸ್ಥೆಗಳು ಪರಿಷತ್ತನ್ನು ಸೇರುವ ಕಾಲದಲ್ಲಿ ತಮ್ಮ ನಿಬಂಧನೆಗಳ ಪುಸ್ತಕವನ್ನೂ ಸದಸ್ಯರ ಪಟ್ಟಿಯನ್ನೂ ಕಳುಹಿಸುವುದಲ್ಲದೆ ಅವುಗಳಲ್ಲಾಗುವ ಬದಲಾವಣೆಗಳನ್ನೂ ಆಗಿಂದಾಗ ಪರಿಷತ್ತಿಗೆ ತಿಳಿಸುತ್ತಿರತಕ್ಕದ್ದು, ಮತ್ತು ವಾರ್ಷಿಕ ವೃತ್ತಾಂತವನ್ನೂ ತಕ್ಕ ಕಾಲಗಳಲ್ಲಿ ಕಳುಹಿಸತಕ್ಕದ್ದು.

"(c) ತಮ್ಮ ಪರವಾಗಿ ಸದಸ್ಯತ್ವದ ಮತಾಧಿಕಾರವನ್ನು ನಡೆಯಿಸುವುದಕ್ಕಾಗಿ ಆಯಾ ಸಂಘಗಳು ತಮ್ಮೊಳಗಿನ ಒಬ್ಬರನ್ನು ಪ್ರತಿನಿಧಿಯಾಗಿ ನೇಮಿಸಿ ಅವರ ಹೆಸರನ್ನು ಸಕಾಲದಲ್ಲಿ ಪರಿಷತ್ತಿನ ಕಾರ್ಯದರ್ಶಿಯವರಿಗೆ ತಿಳಿಸತಕ್ಕದ್ದು. ಇಂಥ ಪ್ರತಿನಿಧಿಗಳು ತಾವೇ ಪರಿಷತ್ತಿನ ಸದಸ್ಯರಾಗಿದ್ದರೆ ಅವರು ಆ ನೆಲೆಯಲ್ಲಿಯೂ ಪ್ರತ್ಯೇಕವಾಗಿ ಮತಕೊಡಲು ಅರ್ಹರಾಗಿರತಕ್ಕದ್ದು."

ಈ ನಿಬಂಧನೆಯಿಂದ ಮೇಲಿನ ನಾಲ್ಕು ವಿಷಯಗಳಿಗೂ ಸಮರ್ಪಕವಾದ ಏರ್ಪಾಡು ಮಾಡಿದಂತಾಗುವುದು. ಕ. ವಿ. ವ. ಸಂಘದವರಿಗೂ ಪರಿಷತ್ತಿಗೆ ಜೋಡಿಸಲ್ಪಟ್ಟುದರಿಂದ ಗೌರವಹಾನಿಯಿರುವುದಿಲ್ಲ. ಏಕೆಂದರೆ, ಅವರೂ ಕೂಡ ಇದೇ ಮೇರೆಗಿನ ನಿಬಂಧನೆಗಳನ್ನಿಟ್ಟುಕೊಂಡು ಪರಿಷತ್ತನ್ನೂ ಇತರ ಇಷ್ಟವುಳ್ಳ ಸಂಘಗಳನ್ನೂ ತಮ್ಮ ಸಂಘಕ್ಕೆ ಜೋಡಿಸಿಕೊಳ್ಳಲು ಬರುವಂತಿದೆ. "ಬಂಗೀಯ ಸಾಹಿತ್ಯ ಪರಿಷತ್ಪತ್ರಿಕೆ"ಯನ್ನು ತರಿಸಿಕೊಳ್ಳುವ ವಿಚಾರದಲ್ಲಿ ನಮ್ಮ ಪರಿಷತ್ತಿನ ಕಾ. ನಿ. ಮಂಡಲಿಯವರು ಕಳೆದ ಸೆಪ್ಟಂಬರು ೩ನೇ ದಿನ ಸೇರಿದಾಗ "ಕ. ಸಾ. ಪರಿಷತ್ತನ್ನು ಬಂಗೀಯ ಸಾ. ಪರಿಷತ್ತಿಗೆ ೬ ರೂ. ಚಂದಾ ಕೊಡುವ ಮೆಂಬರಾಗಿ ಸೇರಿಸಿಕೊಂಡು ಬಂ. ಸಾ. ಪ. ಪತ್ರಿಕೆಯನ್ನು ಕಳುಹಿಸಿಕೊಡುವಂತೆ ಕೇಳಿಕೊಳ್ಳತಕ್ಕದ್ದು" ಎಂಬುದಾಗಿ

ಮಾಡಿದ ನಿರ್ಣಯವು ಮೇಲೆ ಸೂಚಿಸಿದ ಕ್ರಮಕ್ಕೆ ಅನುಗುಣವಾಗಿಯೇ ಇರುವುದು.

ಮೇಲೆ ಹೇಳಿದ ನಿಬಂಧನೆಯು ಇತರ ಸಂಘಗಳನ್ನು ಪರಿಷತ್ತಿಗೆ ಜೋಡಿಸಿಕೊಳ್ಳುವ ಮಟ್ಟಿಗೆ ಸಾಕಾಗಿರಬಹುದಾದರೂ ಶಾಖಾ ಸಂಘಗಳಿಗೆ ಅನ್ವಯಿಸುವಂತಿಲ್ಲ. ಆದರೆ ಪರಿಷತ್ತಿನ ವರ್ತಮಾನ ಸ್ಥಿತಿಯಲ್ಲಿ ಶಾಖಾ ಸಂಘಗಳನ್ನು ಕುರಿತು ಆಲೋಚಿಸುವುದು ಅನಾವಶ್ಯಕವೆಂಬುದರಿಂದ ಈ ವಿಷಯದಲ್ಲಿ ಹೆಚ್ಚಾಗಿ ಬರೆಯಲು ಇಷ್ಟಪಡುವುದಿಲ್ಲ.

ಹೀಗೆ ಪರಿಷತ್ತಿಗೆ ಜೋಡಿಸಲ್ಪಟ್ಟ ಸಂಘಗಳ ಮೆಂಬರುಗಳಿಗೆ ವ್ಯಕ್ತಿಶಃ (Indiviually) ಪರಿಷತ್ತಿನ ವಿಷಯದಲ್ಲಿ ಯಾವ ಸ್ವಾತಂತ್ರ್ಯವೂ ಇರಲಾರದು. ಆದರೆ ಪರಿಷತ್ತಿನವರು ಪುಸ್ತಕಗಳನ್ನು ಮುಂತಾಗಿ ಪ್ರಚುರಗೊಳಿಸಿದ ಕಾಲದಲ್ಲಿ ಪರಿಷತ್ತಿನ ಸದಸ್ಯರಿಗೆ ದೊರೆವ ಬೆಲೆಗಿಂತ ಸ್ವಲ್ಪ ಹೆಚ್ಚು ಬೆಲೆಗೆ (ಆದರೆ ಇತರರಿಗೆ ದೊರೆವ ಬೆಲೆಗಿಂತ ಸ್ವಲ್ಪ ಕಡಿಮೆಯಾಗಿ) ಅವರಿಗೂ ಆ ಪುಸ್ತಕಾದಿಗಳು (ತಮ್ಮ ತಮ್ಮ ಕಾರ್ಯದರ್ಶಿಯವರ ಮೂಲಕ ಒಟ್ಟಾಗಿ ತರಿಸಿಕೊಂಡ ಪಕ್ಷದಲ್ಲಿ) ಸಿಕ್ಕುವಂತೆಯೂ, ಇದೇ ವಿಧವಾಗಿ ಆಗಿಂದಾಗ ಕಾ. ನಿ. ಮಂಡಲಿಯವರು ನಿರ್ಣಯಿಸುವ ಇತರ ಸೌಲಭ್ಯಗಳನ್ನು ಅವರಿಗೆ ಕೊಡಿಸಿಯೂ ವ್ಯಕ್ತಿಶಃ ಅಂಥ ಸಂಘಗಳ ಮೆಂಬರುಗಳಿಗೆ ಕೂಡ ಪ್ರಯೋಜನವುಂಟಾಗಿಸಲು ಸಾಧ್ಯವಾಗಿದೆ.

೪ನೇ (ರಚನಾಕ್ರಮವನ್ನು ಕುರಿತ) ನಿಬಂಧನೆಯ ವಿಷಯವಾಗಿ ನಾನು ಮಾಡಿದ ಸೂಚನೆಗಳಲ್ಲಿ ಬಹುಶಃ ಯಾವತ್ತೂ ಸೂಚನೆಗಳು ಅಲ್ಪ ಸ್ವಲ್ಪ ಬದಲಾವಣೆಗಳೊಡನೆ ಅಂಗೀಕರಿಸಲಾಗಿವೆ. ಆದರೆ "ಮೊದಲನೆಯ ವರ್ಗದ ಸದಸ್ಯರಿಗೆ ವರ್ಷಕ್ಕೆ ೬ ರೂ. ಯನ್ನೂ ಎರಡನೆಯ ವರ್ಗದವರಿಗೆ ೩ ರೂ. ಯನ್ನೂ ವರ್ಗಣಿಯಾಗಿ ನಿರ್ಧರಿಸುವುದು ಯುಕ್ತ"ವೆಂದೂ "ಬೆಂಗಳೂರಿನಲ್ಲಿಯೇ ಇದ್ದು ಪುಸ್ತಕಾಲಯದ ಪ್ರಯೋಜನವನ್ನೂ ಪಡೆಯುವ ಸದಸ್ಯರ ಸಂಗತಿಯಲ್ಲಿ ಬೇಕಾದರೆ ಸ್ಥಳೀಯ ವರ್ಗಣಿಯೆಂದು ವರ್ಷಕ್ಕೊಂದು ರೂಪಾಯಿಯಂತೆ ಹೆಚ್ಚಾಗಿ ಪಡೆಯಬಹುದು. ಇತರ ಸದಸ್ಯರು ಕೂಡ ತಮ್ಮ ತಮ್ಮ ಪಟ್ಟಣಗಳಲ್ಲಿ ಉಪಶಾಖೆಗಳನ್ನು ಹೊಂದು

ಸಿದಾಗ ಆಯಾ ಶಾಖೆಯು ಪೋಷಣೆಗಾಗಿ ಇದೇ ಮೇರೆಗೆ ೧ ರೂ. ಸ್ಥಳೀಯ ವರ್ಗಣಿಕೊಡತಕ್ಕದೆಂದು ನಿಬಂಧಿಸಬಹುದು" ಎಂದೂ ಮಾಡಿದ ಸೂಚನೆಯು ಮಾತ್ರ ಹಾಗೆಯೇ ಉಳಿದಿದೆ. ಮೊದಲನೆಯ ವರ್ಗದ (೧೦ ರೂ) ವರ್ಗಣಿಯು ಅತ್ಯಧಿಕವೆಂದಾದರೆ ಅದಕ್ಕೆ ಯಾರೂ ಸೇರದೆ ಹಾಗಾಗಿಯೇ ಆ ವರ್ಗವು ನಿಂತು ಹೋಗುವುದೆಂದು ಪ್ರಮುಖರಾದ ಸದಸ್ಯರು ಕೆಲವರು ವಾರ್ಷಿಕ ಸಭೆಯಲ್ಲಿ ಅಭಿಪ್ರಾಯಪಟ್ಟರು. ತಥಾಪಿ ಈ ವಿಷಯವು ಮುಂದಿನ ಮಹಾಸಭೆಯಲ್ಲಿ ಪುನಃ ಪರ್ಯಾಲೋಚಿಸಲ್ಪಡಲು ತಕ್ಕುದಾಗಿದೆ.

ರಚನಾಕ್ರಮದಲ್ಲಿ "ಸದಸ್ಯ" ಪದವು "ಆಜೀವ," "ಸಾಧಾರಣ" "ಗೌರವ" ಮತ್ತು "ವಿಶಿಷ್ಟ" ಶಬ್ದಗಳಿಗೆ ಮಾತ್ರ ಜೋಡಿಸಲ್ಪಟ್ಟಿದೆ. "ಮಹಾಪೋಷಕರು" ಮೊದಲುಗೊಂಡು "ಸಹಾಯಕರ" ಪರ್ಯಂತದ ವರ್ಗಗಳಿಗೆ ಸೇರಿಸಲ್ಪಟ್ಟಿಲ್ಲ. ಮುಂದಿನ ೫ನೆಯ ಮತ್ತು ಇತರ ನಿಬಂಧನೆಗಳಲ್ಲಿ "ಸದಸ್ಯರು"ಗಳಿಗೆ ಮಾತ್ರ, ಅಭಿಮತವನ್ನು ಸೂಚಿಸುವ ಅಧಿಕಾರ' ಕೊಡಲಾಗಿದೆ. ಇದರ ದೆಸೆಯಿಂದ ಉಳಿದವರ ಅಧಿಕಾರಕ್ಕೆ ಲೋಪಬರುವಂತಿದ್ದರೆ, ಸದಸ್ಯ' ಎಂಬ ಮಾತಿನಲ್ಲಿ ೧೦ ವರ್ಗದವರೂ ಸೇರಿರುವರೆಂಬುದನ್ನು ಸ್ಪಷ್ಟಪಡಿಸುವುದು ಅಗತ್ಯವಾಗಿದೆ.

ಇನ್ನು, ಯಾವದೊಂದು ಸಂಘದ ಅಥವಾ ಮಹೋದ್ದೇಶದ ಉತ್ತರೋನ್ನತಿಯ ವಿಷಯದಲ್ಲಿ ಸಾಮಾಜಿಕರಿಗೆ ಮೊದಲಲ್ಲಿದ್ದಷ್ಟು ಉತ್ಸಾಹವು ತದನಂತರದಲ್ಲಿರುವುದಿಲ್ಲ. ಇದು ನಮಗೆ ಮಾತ್ರ ವಿಶೇಷವಲ್ಲ; ಲೋಕಸ್ಥಿತಿಯೇ ಹೀಗಿರುವುದು. ಸಂಘದಲ್ಲಿ ಅನೇಕ ವಿಧವಾದ ಅಂತಃಕಲಹಗಳುಂಟಾಗಿಯೋ ಅನ್ಯಕಾರಣಗಳಿಂದಲೋ ಸಭ್ಯರಲ್ಲಿ ಕೆಲಕೆಲವರು ತಮ್ಮ ಮಹೋದ್ದೇಶವನ್ನು ಮರೆತು ಸಂಘದ ವಿಷಯದಲ್ಲಿ ಉದಾಸೀನರಾಗಿ ಪ್ರತ್ಯೇಕರಾಗುವ ಸಂದರ್ಭಗಳು ಪುನಃ ಪುನಃ ಬರಬಹುದಾಗಿದೆ. ಇವುಗಳದೆಸೆಯಿಂದ ಕೆಲವುವೇಳೆ ಸಂಘವೇ ಮುರಿದು ಹೋಗುವಷ್ಟು ಗಂಡವೂ ಪ್ರಾಪ್ತವಾಗಬಹುದು. ಇಷ್ಟೇ ಅಲ್ಲದೆ, ಆಗಿಂದಾಗ ವರ್ಗಣಿ ಕೊಡಿಸುತ್ತಲಿರುವುದೂ ತುಂಬಾ ತೊಂದರೆಯ ಕೆಲಸವೆಂದು ಪ್ರತ್ಯೇಕವಾಗಿ

ಹೇಳಬೇಕಾದುದಿಲ್ಲ; ಸಂಘಗಳನ್ನು ನಡೆಯಿಸುವವರು ಇದನ್ನು ಚೆನ್ನಾಗಿ ಬಲ್ಲರು ಹೀಗಾದುದರಿಂದ ಸಾಧ್ಯವಾದ ಮಟ್ಟಿಗೂ ಆಜೀವ ಸದಸ್ಯರ ಸಂಖ್ಯೆಯು ಹೆಚ್ಚುವಂತೆಯೂ ಒಟ್ಟಾಗಿ ಒಡನೆಯೇ ರೂಪಾಯಿ ಕೊಡಲು ಕೊಡದ ಅಥವಾ ಕೊಡಬಲ್ಲವರಾದರೂ ಇಷ್ಟವಿಲ್ಲದ ಸದಸ್ಯರು ಕೂಡ ಸುಲಭವಾಗಿ ಆಜೀವ ಸಭಾಸದ ವರ್ಗಕ್ಕೆ ಸೇರ್ಪಡಿಸಿಕೊಳ್ಳಲು ಪ್ರೋತ್ಸಾಹಕವಾಗಿಯೂ ಇರುವ ಯಾವದೊಂದು ನಿಬಂಧನೆ ಮಾಡುವುದು ಯುಕ್ತವೆಂಬು ನಾನು ಭಾವಿಸುವೆನು. ಆದುದರಿಂದ "ಈ ಕ್ರಮದ ಮೇರೆಗೆ ಆಜೀವಸದಸ್ಯರಾಗುವ ತಮ್ಮ ಅಪೇಕ್ಷೆಯನ್ನು ಮುಂದಾಗಿ ತಿಳಿಸಿ, ಮೊದಲನೇ ವರ್ಗದ ಸದಸ್ಯರು ವರ್ಷಕ್ಕೆ ೧೫ ರೂಪಾಯಂತೆ ೮ ವರ್ಷ ಕೊಟ್ಟರೆ ಆ ಬಳಿಕ ಏನೂ ಕೊಡದೆ ಅವರನ್ನು "ಸಹಾಯಕ" ರಾಗಿಯೂ, ಎರಡನೆಯ ವರ್ಗದವರು ೫ ರೂಪಾಯಂತೆ ೧೦ ವರ್ಷ ಕೊಟ್ಟರೆ ಅವರನ್ನು ಆಜೀವ ಸದಸ್ಯರಾಗಿಯೂ ಮಾಡಿಕೊಳ್ಳತಕ್ಕದು" ಎಂಬುದಾಗಿ ಒಂದು ನಿಬಂಧನೆ ಮಾಡಬಹುದು, ಇವರುಗಳಿಂದ ಪೂರಾಹಣವು ಸಂದಾಯವಾಗುವವರೆಗೂ ಅವರಿಂದ ಬಂದ ವರ್ಗಣಿಯನ್ನು ಅನಿಶ್ಚಿತವಾಗಿ (Suspense account) ಇಟ್ಟುಕೊಂಡು ಅವರಿಗೆ ಆಯಾ ವರ್ಗದ ಸ್ವಾತಂತ್ರ್ಯವು ಮಾತ್ರ ಕೊಡಲ್ಪಡಬಹುದು. ಕಾರಣಾಂತರಗಳಿಂದ ಇಂಥವರ ಸದಸ್ಯತ್ವವು ಮಧ್ಯದಲ್ಲಿಯೇ ನಿಂತುಹೋದರೂ ಅದರಿಂದ ಪರಿಷತ್ತಿಗೆ ನಷ್ಟವಿಲ್ಲ ಇನ್ನು, ಕೆಲವು ಕಾಲದವರೆಗೆ ಮೇಲಿನ ನಿಯಮದಂತೆ ವರ್ಗಣಿ ಕೊಟ್ಟು ಆಮೇಲೆ ಉಳಿದ ಅಂಶವನ್ನು ಒಂದೇ ಗಂಟಿಗೆ ಯಾರಾದರೂ ಕೊಡುವ ಪಕ್ಷದಲ್ಲಿ, ಅವರು ಹಿಂದಿನ ವರ್ಷಗಳಲ್ಲಿ ಸಾಮಾನ್ಯ ವರ್ಗಣಿಗಿಂತ ಹೆಚ್ಚಾಗಿ ಕೊಟ್ಟ ಹಣವನ್ನು (ಎಂದರೆ, ಮೊದಲನೆಯ ವರ್ಗದವರ ಸಂಗತಿಯಲ್ಲಿ ವರ್ಷಕ್ಕೆ ಮೂರು ರೂಪಾಯಂತೆಯೂ ಎರಡನೆಯ ವರ್ಗದವರ ಸಂಗತಿಯಲ್ಲಿ ಒಂದು ರೂಪಾಯಂತೆಯೂ) ಬಡ್ಡಿಯೆಂದು ಹಿಡಿದು, ಉಳಿದ ಹಣವನ್ನು ಒಟ್ಟು ಹಣದ ಭಾಗವಾಗಿ ತಿಳಿದು ಆ ಮೊಬಲಗಿನಿಂದ ಕಳೆಯಬಹುದು

೭. ೪ ಮತ್ತು ೯ ನೇ ಮೂಲನಿಬಂಧನೆಗಳ ವಿಷಯದಲ್ಲಿ ಹಿಂದಿನ ಬಾರಿ ಪ್ರಕಟಿಸಿದ ಪುಸ್ತಕದಲ್ಲಿ ಈ ಕೆಳಗಿನಂತೆ ಬರೆದಿದ್ದೆನು.—

(೧) ಕಾರ್ಯನಿರ್ವಾಹಕ ಸಭೆಗೆ Executive Committee ಎಂಬ ಇಂಗ್ಲೀಷ್ ಹೆಸರಿನ ಬದಲಾಗಿ ಆಂಧ್ರಪರಿಷತ್ತಿನವರಂತೆಯೇ Senatus ಎಂಬ ಹೆಸರು ಕೊಟ್ಟರೆ ಕಿವಿಗೆ ಗಂಭೀರ ವಾಗಿಯೂ ಪರಿಷತ್ತಿನ ಘನತೆಗೆ ಅನುರೂಪವಾಗಿಯೂ ಇರುವುದು.

(೨) ಅಧ್ಯಕ್ಷ (President) ರನ್ನೇ ಕಾರ್ಯನಿರ್ವಾಹಕಮಂಡಲಿಯ ಮುಖ್ಯನನ್ನಾಗಿ ಮಾಡುವುದಕ್ಕೆ ಬದಲಾಗಿ ಆ ಉದ್ಯೋಗವು ಕನ್ನಡನಾಡಿನ ಇತರ ಭಾಗಗಳ ದೊಡ್ಡ ಮನುಷ್ಯರಿಗೂ ದೊರೆಯಲು ಅವಕಾಶವಾಗುವಂತೆ, ಕಾರ್ಯನಿರ್ವಾಹಕ ಮಂಡಲಿಯ ಸಭಾಪತಿಯಾಗಿ (Chairman- of the Senatus) ಬೇರೊಬ್ಬರನ್ನು ನಿಯಮಿಸಿ, ಅಧ್ಯಕ್ಷರನ್ನು ಮುಂದೆ ಹೇಳುವ ಮೇರೆಗೆ ಅನಧಿಕಾರಾಧ್ಯಕ್ಷರನ್ನಾಗಿ ಇಟ್ಟುಕೊಳ್ಳಬಹುದು. ಇಂಥ ಸಭಾಪತಿಗಳು ಬೆಂಗಳೂರಿನವರೇ ಆಗಿರ ಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ಆಯಾ ಸಮ್ಮೇಳನದ ಅಧ್ಯಕ್ಷರೇ ಮುಂದಿನ ಸಮ್ಮೇಳನದ ಪರ್ಯಂತ ಪರಿಷತ್ತಿನ ಅಧ್ಯಕ್ಷರಾಗಿದ್ದರೆ ಚೆನ್ನಾಗಿರುವುದು

(೩) ಕಾ. ನಿ. ಮಂಡಲಿಯ ಸದಸ್ಯರ ಒಟ್ಟು ಸಂಖ್ಯೆಯನ್ನು ೫೦ಕ್ಕೆ ಏರಿಸಬಹುದು. ಮತ್ತು ಇವರ ಹೊರತು ಮಹಾಪೋಷಕರೂ, ಪೋಷಕರೂ ಮೇಲೆ ಸೂಚಿಸಿದ (ಹಾಲಿಯ ವರ್ಷದ ಮತ್ತು ಹಿಂದಿನ ವರ್ಷಗಳ) ಅಧ್ಯಕ್ಷರೂ ಇದರ ಯಾವಜ್ಜೀವ ಅಸಾಧಾರಣ ಸಭಿಕರ (extra- ordinary members) ರಾಗಿರಬೇಕೆಂದು ನಿರ್ಧರಿಸಬಹುದು.

* (೪) ಉಪಾಧ್ಯಕ್ಷರ ಸಂಖ್ಯೆಯ ಪರಮಾವಧಿಯು ೫ ಯೆಂದೂ, ಕಾರ್ಯದರ್ಶಿಗಳೂ ಕೋಶಾಧ್ಯಕ್ಷರಿಗೂ ಒಬ್ಬೊಬ್ಬರು ಜಂಟಿಯಾಗಿ (Joint) ಅಥವಾ ಸಹಾಯಕ (Assiwftant) ರಾಗಿ ಇರಬಹುದೆಂದೂ, ಅಂತು ಉದ್ಯೋಗಪ್ರಯುಕ್ತ (Exofficio) ಸದಸ್ಯರ ಸಂಖ್ಯೆಯ ಪರಮಾವಧಿಯು ೧೦ರವರೆಗೆ ಇರಬಹುದೆಂದೂ ನಿರ್ಧರಿಸಬಹುದು. ಬೇರೆಬೇರೆ ಪ್ರಾಂತ್ಯಗಳಲ್ಲಿಯ ದೊಡ್ಡ ಮನುಷ್ಯರಿಗೆ ಪರಿಷತ್ತಿನ ಬೇರೆ ಯಾವ ಅಧಿಕಾರವೂ ಲಭಿಸುವಂತಿಲ್ಲವಾದುದರಿಂದ ಅವರನ್ನು ಗೌರವಿಸುವುದಕ್ಕಾಗಿ ಉಪಾಧ್ಯಕ್ಷರ ಸಂಖ್ಯೆಯನ್ನು ಹೆಚ್ಚಿಸುವುದು ಅಗತ್ಯವಾಗಿದೆ. ಆದರೆ ಯಾವ ದೊಂದು ಪ್ರಾಂತ್ಯದಿಂದ ಕನಿಷ್ಠಪಕ್ಷ ೨೫ ಮಂದಿ ಸಭಾಸದರಾದರೂ ಇಲ್ಲದೆ ಅವರಿಗೆ ಆ ಪ್ರಾಂತ್ಯದ ಬಗ್ಗೆ ಉಪಾಧ್ಯಕ್ಷರನ್ನಾರಿಸಲು ಬಾರದಿರಬಹುದು.

(೫) ನಲವತ್ತು ಸ್ಥಾನಗಳನ್ನು ಸಭಾಸದರು ಆಯ್ದುಕೊಳ್ಳುವುದಕ್ಕಾಗಿ ಇಟ್ಟುಕೊಳ್ಳಬಹುದು.

---

* ತೆಲುಗು ಸಾ. ಪರಿಷತ್ತಿಗೆ ಕಾರ್ಯದರ್ಶಿಗಳು ಮೂವರು ಕೋಶಾಧ್ಯಕ್ಷರಿಬ್ಬರೂ ಇರುವರು. ಮರಾಟ ಸಾ. ಪರಿಷತ್ತಿಗೆ ಉಪಾಧ್ಯಕ್ಷರೈವರೂ ಕಾರ್ಯದರ್ಶಿಗಳಿಬ್ಬರೂ ಕೋಶಾಧ್ಯಕ್ಷರೊಬ್ಬರೂ ಇರುವರು.

ಈ ವಿಷಯವನ್ನು ಒಂದಿಷ್ಟು ಸೂಕ್ಷ್ಮವಾಗಿ ಪರೀಕ್ಷಿಸಬೇಕಾಗಿದೆ. ಇಂಥ ಸ್ವಾತಂತ್ರ್ಯದಿಂದ ಇಷ್ಟೇ ಪ್ರತಿನಿಧಿಗಳು ಕಾರ್ಯನಿರ್ವಾಹಕ ಮಂಡಲಿಯಲ್ಲಿರಬೇಕೆಂದು ಕಳೆದ (ಎಂದರೆ, ಮೊದಲನೆಯ ಸಮ್ಮೇಲನದಲ್ಲಿ ಗೊತ್ತು ಪಡಿಸಿದಾಗ ಯಾವ ಪ್ರಾಂತ್ಯದಿಂದಲೂ ಸಭಾಸದರಿರಲಿಲ್ಲವಷ್ಟೇ ಅಲ್ಲದೆ, ಎಲ್ಲಿಂದ ಎಷ್ಟು ಮಂದಿ ಪರಿಷತ್ತಿಗೆ ಸೇರಬಹುದೆಂಬುದೂ ತಿಳಿದಿರಲಿಲ್ಲ. ಇಂಥ ಸ್ಥಿತಿಯಲ್ಲಿ ಆಗ ಮಾಡಿದ ಕ್ರಮವೇ ಚೆನ್ನಾಗಿತ್ತೆನ್ನಬಹುದು. ಆದರೆ ಈಗ ಆಯಾ ಪ್ರಾಂತ್ಯದ ಸಭಿಕರಿಷ್ಟೇ ಜನರಿರುವರೆಂದು ತಿಳಿದಿರುವುದರಿಂದ ಬರೀ (Province) ಸ್ಥಾನಮಾನಾನುಸಾರವಾಗಿ ಪ್ರತಿನಿಧಿಗಳನ್ನು ಆಯ್ದುಕೊಳ್ಳುವುದಕ್ಕಿಂತ ಬೇರೊಂದು ರೀತಿಯಾಗಿ ಆರಿಸುವುದು ಯುಕ್ತವೆಂದು ನನಗೆ ತೋರುತ್ತದೆ. ಆದುದರಿಂದ ಈ ಕೆಳಗಿನಂತೆ ನಿಬಂಧಿಸಿದರೆ ಅನುಕೂಲವಾಗಬಹುದು.—

(i) ೨೦ ಮಂದಿಯನ್ನು ಆಯಾ ಪ್ರಾಂತ್ಯದ ಸದಸ್ಯರ ಪ್ರಮಾಣಾನುಸಾರವಾಗಿ ಆರಿಸುವುದು:—ಉದಾಹರಣೆಯಾಗಿ, ಎಲ್ಲಾ ವರ್ಗಗಳು ಸೇರಿ ಒಟ್ಟು ೪೦೦ ಸಭಿಕರಿದ್ದು ಅವರಲ್ಲಿ ೨೦೦ ಮಂದಿ ಮೈಸೂರಿನವರೂ, ೧೦೦ ಮಂದಿ ಬೊಂಬಾಯಿಯವರೂ, ೭೫ ಮದ್ರಾಸಿನವರೂ, ೨೫ ಕೊಡಗಿನವರೂ ಇದ್ದರೆ, ಕ್ರಮವಾಗಿ ಮೈಸೂರಿಗೆ ೧೦, ಬೊಂಬಾಯಿಗೆ ೫, ಮದ್ರಾಸಿಗೆ ೪, ಕೊಡಗಿಗೆ ಒಂದರಂತೆ ಪ್ರತಿನಿಧಿಗಳನ್ನು ಕೊಡಬೇಕಾಗುವುದು. ಈ ಪ್ರಮಾಣವನ್ನು ಆಯಾ ಚುನಾವಣೆಯ ಕಾಲದಲ್ಲಿರುವ ಸಭಾಸದರ ಸಂಖ್ಯೆಗೆ ಸರಿಪಡಿಸಿಕೊಳ್ಳಬೇಕು. ಬೊಂಬಾಯಿಯ ದೇಶೀಯ ಸಂಸ್ಥಾನಗಳನ್ನು ಪ್ರತ್ಯೇಕವಾಗಿ ಗಣಿಸಬೇಕಾದ ಆವಶ್ಯಕತೆ ತೋರಲಿಲ್ಲ.

(ii) ಉಳಿದ ೨೦ ಮಂದಿ ಪ್ರತಿನಿಧಿಗಳನ್ನು ದೇಶಭೇದವಿಲ್ಲದೆ ಆಯಾ ವರ್ಗಗಳಿಗೆ ಹಂಚಿಹಾಕಬಹುದು;—ಉದಾಹರಣೆಯಾಗಿ, ನಾನು ಹಿಂದೆಕೊಟ್ಟ ವರ್ಗೀಕರಣವು ಅಂಗೀಕರಿಸಲ್ಪಟ್ಟ ಪಕ್ಷದಲ್ಲಿ ಪೋಷಕ, ಆಶ್ರಯದಾತ, ಪ್ರೋತ್ಸಾಹಕರೆಂಬ ಈ ಮೂರು (ಈಗ ತಿದ್ದುಪಡಿಯಾದಂತೆ ಆರು) ವರ್ಗಗಳಿಂದ ಒಬ್ಬರು ಅಥವಾ ಇಬ್ಬರು, ಒಂದನೇ ವರ್ಗದ ಆಜೀವಸಭಾಸದರಿಂದ ೫ ಜನರು, ಎರಡನೆ, ವರ್ಗದ ಆಜೀವ ಸಭ್ಯರಿಂದ ೪ ಜನರು, ೧ನೇ ವರ್ಗದ ಸಾಮಾನ್ಯ ಸಭಾಸದರಿಂದ ಮೂವರು, ೨ನೇ ವರ್ಗದ ಸಾಮಾನ್ಯಸಭಾಸದರಿಂದ ಇಬ್ಬರು, ಮತ್ತು ಇದುವರೆಗೆ ಆಯ್ದುಕೊಳ್ಳಲಾದ ಅಧಿಕಾರಿಗಳೂ ಕಾರ್ಯನಿರ್ವಾಹಕ ಸಭಿಕರೂ ಒಟ್ಟಿಗೆ ಆಯ್ದುಕೊಳ್ಳುವ ೪ ಅಥವಾ ೫ ಜನರು ಹೀಗೆ ೨೦ ಜನರನ್ನು ಆರಿಸಿಕೊಳ್ಳಬಹುದು. ಈ ಕೊನೆಗೆ ಹೇಳಿದ ೪ ಅಥವಾ ೫ ಮಂದಿಯನ್ನು ಕಾರ್ಯನಿರ್ವಾಹಕರೇ ಆಯ್ದುಕೊಳ್ಳುವ ಕ್ರಮದ ಮೂಲವಾಗಿ, ಸಾಮಾನ್ಯವಾಗಿ ಚುನಾವಣೆಗಳಲ್ಲಿ ದುರಾಗ್ರಹವೇ ಮುಂತಾದವುಗಳ ದೆಸೆಯಿಂದ ಉಂಟಾಗಬಹುದಾದ ಯಾವುದಾದರೂ ಅಕ್ರಮಗಳನ್ನು ಪರಿಹರಿಸಲು ಅವಕಾಶ ದೊರೆತಂತಾಗುವುದು. ಚುನಾವಣೆಯ ಸಲುವಾಗಿ ಗೌರವಾರ್ಥ (Honorary) ಸದಸ್ಯರನ್ನು ಮೇಲಿನ ಯಾವುದೊಂದು ವರ್ಗದವರೆಂದು ತಿಳಿಯತಕ್ಕದ್ದು.

ಈ ಸೂಚನೆಗಳೊಳಗೆ, ಕಾರ್ಯದರ್ಶಿಗಳ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಕಾ. ನಿ. ಮಂಡಲಿಗೆ ೫ ಜನರಿಗೆ ಮೀರದೆ "ಪಂಡಿತ"ರನ್ನು ಕಾ. ನಿರ್ವಾಹಕ ಮಂಡಲಿಯವರೇ ನಿಯಮಿಸಿಕೊಳ್ಳುವ ಪಟ್ಟಿಗೆ ಹೊಸಕ್ರಮ

ಗಳಲ್ಲಿ ತಿದ್ದುಪಡಿಗಳಾಗಿವೆ. ಆದರೆ ಅಯ್ಯರನ್ನು ಹೆಚ್ಚಾಗಿ ನೇಮಿಸಿ ಕೊಳ್ಳುವಲ್ಲಿ "ಪಂಡಿತರನ್ನೇ" ಎಂದು ಕಟ್ಟಳೆ ಪಡಿಸುವುದು ಯುಕ್ತವೆಂದು ನನಗೆ ತೋರುವುದಿಲ್ಲ. ಗೌರವ ಸದಸ್ಯರಲ್ಲಿ ಬಹುಭಾಗವೆಲ್ಲ ಪಂಡಿತರೇ ಆಗುವಂತಿದೆ. ಇಷ್ಟೇ ಅಲ್ಲದೆ ಪಂಡಿತರಿಗೂ ಇತರರಂತೆಯೇ ಸದಸ್ಯರಾಗಿ ನ ಅಧಿಕಾರವಿದೆ. ಹೀಗಾದುದರಿಂದ ಸಾಮಾನ್ಯ ಚುನಾವಣೆಯಲ್ಲಿಯೇ ಪಂಡಿತರು ಕೆಲವರು ಆಯ್ದು ಬರುವಂತಿರುವುದಷ್ಟೇ ಅಲ್ಲದೆ, ನಾನು ಸೂಚಿಸಿದಂತೆ ವರ್ಗಾಚ ಚುನಾವಣೆ ನಡೆದರೆ ಇನ್ನು ಹೆಚ್ಚು ಮಂದಿ ಬರುವಂತೆಯೂ ಇದೆ. ಆದುದರಿಂದ ಈ ಕಟ್ಟಳೆಯನ್ನು ತೆಗೆದು ಹಾಕಿ, ಪ್ರಸಿದ್ಧರಾದ "ಪಂಡಿತರನ್ನು" ಎಂಬ ಮಾತುಗಳಿಗೆ ಬದಲಾಗಿ "ಪ್ರಮುಖರಾದ ಯಾರನ್ನಾದರೂ" ಎಂಬ ಶಬ್ದಗಳನ್ನಿಟ್ಟರೆ ಅನುಕೂಲವಾಗಬಹುದು.

ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರ ಒಟ್ಟು ಸಂಖ್ಯೆಯನ್ನು ೫೦ಕ್ಕೆ ಏರಿಸಬಹುದೆಂದು ಹಿಂದಿನಸಲ ಸೂಚಿಸಿದ್ದೆನಾದರೂ, ಪರಿಷತ್ತಿನ ವರ್ತಮಾನ ಸ್ಥಿತಿಯಲ್ಲಿ ಅಷ್ಟುಮಟ್ಟಿಗೆ ಏರಿಸುವುದು ಯುಕ್ತವಲ್ಲವೆಂದು ಅನೇಕರು ತಿಳಿಯುವಂತಿರುವುದು ಮಾತ್ರವಲ್ಲದೆ ನಾನೂ ಪುನರಾಲೋಚನೆಯಿಂದ ನಿಶ್ಚಯಿಸಿರುವೆನು. ಆದುದರಿಂದ ಕಳೆದ ವಾರ್ಷಿಕ ಸಭೆಯಲ್ಲಿ ಏರ್ಪಟ್ಟಂತೆ-ಐವರು ಅಧಿಕಾರಿಗಳು, ೩೦ ಮಂದಿ ಸಭ್ಯರು ಮತ್ತು ಅಯ್ಯರು ನೇಮಕ ಪಡೆವವರು ಸೇರಿ—ಒಟ್ಟು ೭೦ನ್ನೇ ಕಾ. ನಿ. ಮಂಡಲಿಯ ಪರಮಸಂಖ್ಯೆಯಾಗಿ ಇಟ್ಟುಕೊಳ್ಳುವುದು ಅನುಕೂಲವು. ಆದರೆ ಇವರನ್ನೆಲ್ಲ ಆಯ್ದುಕೊಳ್ಳುವ ಕ್ರಮವನ್ನು ಮಾತ್ರ ಹಿಂದಿನ ಸಲ ಸಕಾರಣವಾಗಿ ಮಾಡಿದ ಸೂಚನೆಯಂತೆ ತಿದ್ದಿಕೊಳ್ಳುವ ವಿಷಯದಲ್ಲಿ ಸದಸ್ಯರು ಪ್ರವರ್ತಿಸಬೇಕಾಗಿದೆ. ನಾನು ಈ ಕೆಳಗಿನಂತೆ ಸೂಚಿಸುವೆನು:—

(i) ಅಧಿಕಾರಿಗಳು ೫. (ii) ಆಯಾ ಪ್ರಾಂತಗಳ (ಎಲ್ಲಾ ವರ್ಗದ) ಸದಸ್ಯರು ಒಟ್ಟಾಗಿ ಆಯ್ದುಕೊಂಡವರು ೧೫. (iii) ಆಯಾವರ್ಗದ ಅಥವಾ ವರ್ಗಸಮುದಾಯದ (ಪ್ರಾಂತ್ಯಭೇದವಿಲ್ಲದೆ) ಯಾವತ್ತು ಸದಸ್ಯರು ಒಟ್ಟಾಗಿ ಆಯ್ದುಕೊಂಡವರು ೧೫ (iv) ಮೇಲಿನ ೩೫ ಮಂದಿ ಕಾ. ನಿ. ಸದಸ್ಯರು ಆರಿಸಿಕೊಂಡ ೫. — ಅಂತು ೭೦ ಇದರಲ್ಲಿ ಕಾ. ನಿ. ಸದಸ್ಯರೇ

ಆರಿಸತಕ್ಕ ಅಯಿದು ಮಂದಿಯನ್ನು ವಾರ್ಷಿಕ ಸಭಾಸದರಲ್ಲಿಯೇ ಆರಿಸ ಬೇಕೆಂಬಂತಿಲ್ಲ; ಹಿಂದಿನಿಂದಲೂ ಆರಿಸಿಕೊಳ್ಳಬಹುದು. ಆದರೆ ಕಾ. ನಿ. ಸದಸ್ಯರೆಲ್ಲರ(ಎಂದರೆ ಯಾರು ಯಾರು ಕಾಣಿಸಿಕೊಡುವರೋ ಅವರೆಲ್ಲರ) ಅಭಿಪ್ರಾಯ ತರಿಸಿಕೊಂಡು ಆಯ್ದುಕೊಳ್ಳಬೇಕಾದುದು ಯುಕ್ತವು.

ಮೂಲ ೧೦ ನೆಯ ನಿಬಂಧನೆಯಲ್ಲಿ ಈ ಕೆಳಗಿನಂತೆ
ತಿದ್ದುಪಡಿಯನ್ನು ಸೂಚಿಸಿದ್ದೆನು:—

"೧೦ ನೇ ನಿಬಂಧನೆ.—ಇದರಲ್ಲಿ ಆಯಾ ಕಾಲದಲ್ಲಿ ನೆರೆದ ಕಾ. ನಿ. ಸಭಿಕರ ಬಹುಮತದಂತೆ ವರ್ತಿಸತಕ್ಕದೆಂದು ಮಾತ್ರ ಹೇಳಿದೆ. ಆದರೆ ಮುಖ್ಯವಾದ ಕೆಲವು ವಿಷಯಗಳಲ್ಲಿ ಯಾವತ್ತು ಕಾರ್ಯನಿರ್ವಾಹಕರ ಮತಗಳನ್ನು ಪಡೆಯುವಂತೆ,—ಉದಾಹರಣೆಯಾಗಿ, (a) ತೆರವಾದ ಕಾ. ನಿ. ಸದಸ್ಯರ ಸ್ಥಳಗಳನ್ನು ತಾತ್ಕಾಲಿಕವಾಗಿ ತುಂಬಿಕೊಳ್ಳುವ ಸಂದರ್ಭದಲ್ಲಿ, (b) ಯಾವುದೊಂದು ನಿಬಂಧನೆಯ ಅರ್ಥದ ವಿಷಯದಲ್ಲಿ ಮತಭೇದವುಂಟಾದಾಗ, (c) ವಾರ್ಷಿಕ ಮಹಾಸಭೆಗಾಗಿ ಯಾರಾದರೂ ಸೂಚನೆಗಳನ್ನು ಕಳುಹಿಸಿರುತ್ತ ಅವನ್ನು ಆ ಮಹಾಸಭೆಗೆ ತರಬೇಕೇ, ಬೇಡವೇ ? ಎಂಬುದನ್ನು ನಿರ್ಣಯಿಸುವಾಗ,—ಕಾರ್ಯನಿರ್ವಾಹಕಸಭ್ಯರೆಲ್ಲರ ಅಭಿಪ್ರಾಯವನ್ನು ಪಡೆಯುವುದು ಉತ್ತಮವೆಂದು ನನಗೆ ತೋರುತ್ತದೆ. ಮೊದಲಲ್ಲಿ, ಕಾರ್ಯನಿರ್ವಾಹಕರ ಬಳಿಗೆ ಕಳುಹಿಸಿದ ಪ್ರತಿ ಸೂಚನೆಯನ್ನೂ ಅವರು ಅಗತ್ಯವಾಗಿ ಮಹಾಸಭೆಗೆ ತರಬೇಕೇ? ಅಥವಾ ತಮ್ಮ ವಿವೇಕ ಬುದ್ಧಿಯನ್ನು ಪ್ರಯೋಗಿಸಿ ಹಾಗೆ ತಾರದೆ ಬಹುಮತದಿಂದ ತಮ್ಮ ಸಭೆಯಲ್ಲಿಯೇ ತಳ್ಳಿಬಿಡಬಹುದೇ ?-ಎಂಬ ವಿಷಯವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುವುದು ಅಗತ್ಯವಾಗಿದೆ."

ಈ ಮೂಲ ನಿಬಂಧನೆಗೂ ಹೊಸ ೧೦ನೇ ನಿಬಂಧನೆಗೂ ಭೇದವಿಲ್ಲ. ಆದರೆ ಮೇಲೆ ಸೂಚಿಸಿದಂತೆ "ಮುಖ್ಯವಾದ ಕೆಲಕೆಲವು ವಿಷಯಗಳಲ್ಲಿ ಯಾವತ್ತು ಕಾ. ನಿ. ಸದಸ್ಯರ ಮತಗಳನ್ನು ಪಡೆಯುವುದು ಉತ್ತಮ." ವೆಂಬುದನ್ನು ಅಂಗೀಕರಿಸುವುದಕ್ಕೆ ಬದಲಾಗಿ ಹೊಸ ೧೧ ನೇ ನಿಬಂಧನೆಯಲ್ಲಿ "ವರ್ಷಮಧ್ಯದ (Half yearly)ಸಭೆ" ಎಂಬ ಒಂದು ನೂತನವಾದ ವಿಧಾನವ ಮಾಡಿ, ಆ ವರ್ಷಮಧ್ಯದ ಸಭೆಯು "ಸಾಧ್ಯವಾಗುವ ಮಟ್ಟಿಗೂ ನವರಾತ್ರಿಯ ರಜದಲ್ಲಿ ನಡೆಯಬೇಕು" ಎಂದು ನಿರ್ಣಯಿಸಿರುತ್ತದಲ್ಲದೆ, ಇತರ (ಕಾ. ನಿ.) ಸಭೆಗಳ ಕಾರ್ಯವಿವರದಪಟ್ಟಿಯಲ್ಲಿ ಕಾಣುತ್ತಿರುವ ವಿಷಯಗಳಲ್ಲಿ ಯಾವುದನ್ನಾದರೂ ವರ್ಷಮಧ್ಯದ ಸಭೆಯ ಪರ್ಯಾಲೋಚನೆಗೆ ಮೆಂಬರುಗಳು ಇಡಿಸಿಕೊಳ್ಳಬಹುದು" ಎಂದು ೧೧ನೆಯ ನೂತನ ನಿಬಂಧನೆಯಲ್ಲಿ ಹೇಳಿದೆ.

ಈ ಹೊಸ ಏರ್ಪಾಡಿನ ಮೂಲಕವಾಗಿ ನನ್ನ ಉದ್ದೇಶವು ನೆರವೇರಿದಂತಾಯಿತೆಂದು ನಾನು ತಿಳಿಯುವುದಿಲ್ಲ. ಸಾಮಾನ್ಯವಾಗಿ ಕಾ. ನಿ. ಸಭೆಗಳಿಗೆ ಬೆಂಗಳೂರಿನ ೧೦ ಸದಸ್ಯರು ಸರಾಸರಿಯಾಗಿ ಸೇರುತ್ತಿದ್ದರೆ ವರ್ಷಮಧ್ಯದ ಸಭೆಗೆ ಮೈಸೂರಿನ ಎಲ್ಲರೂ ಸೇರಿ ೬ ಸದಸ್ಯರು ಸೇರಬಹುದಾಗಿದೆಯೇ ಹೊರತು, ಬೊಂಬಾಯಿ (೧೦) ಮದ್ರಾಸಿನ (೫) ಮತ್ತು ಕೊಡಗು ಹೈದರಾಬಾದುಗಳ (೩) ಸದಸ್ಯರು ಆ ವರ್ಷಮಧ್ಯದ ಸಭೆಗೆ ತಕ್ಕಷ್ಟು ಸಂಖ್ಯೆಯಲ್ಲಿ ಕೂಡ ಸೇರಲು ಸಾಧ್ಯವಿಲ್ಲ. ಅಥವಾ ದೂರ ಪ್ರಯಾಣದ ವೆಚ್ಚವನ್ನು ಲೆಕ್ಕಿಸದೆ ಕೆಲಕೆಲವರು ಬಂದರೂ ಅದರಿಂದ ಆಗ ತಕ್ಕ ಪ್ರಯೋಜನವೂ ಅಷ್ಟೊಂದಿಲ್ಲ. ಯಾಕೆಂದರೆ ಕಾ. ನಿ. ಸಭೆಯ ಕಾರ್ಯವಿವರದ ಪಟ್ಟಿಯಲ್ಲಿ ೨೦ ವಿಷಯಗಳನ್ನು ಆಲೋಚನೆಗೆ ಇಟ್ಟಂತೆ ಕಾಣಿಸಿದರೆ ಅವುಗಳೊಳಗೆ ಬರೇ ಅಲ್ಪವಾದ ೪-೫ ಮಾತ್ರ ನಿರ್ಣಯಿಸಲ್ಪಟ್ಟು ಉಳಿದವುಗಳು "ಮುಂದಿನ ಸಭೆಗೆ ಮುಂದರಿಸಲಾಗುತ್ತವೆ." ಇಂಥ ಸ್ಥಿತಿಯಲ್ಲಿ ಅಷ್ಟೊಂದು ವೆಚ್ಚ ಹಿಡಿದುಕೊಂಡು ಬರಬೇಕೆಂಬ ಉತ್ಸಾಹವು ಯಾರಲ್ಲಾದರೂ ಉಳಿಯುವುದು ಹೇಗೆ? ಹೀಗಾದುದರಿಂದ ವರ್ಷಮಧ್ಯದ ಸಭೆಯು ವಿಶೇಷ ಯಾವ ಉಪಯೋಗಕ್ಕೂ ಬರುವಂತಿಲ್ಲ, ಮತ್ತು ಹೊರವೂರುಗಳ ಕಾರ್ಯನಿರ್ವಾಹಕ ಸದಸ್ಯರು ಬರೀ ಗೊಂಬೆಗಳಾಗಿರುವುದು ತನ್ಮೂಲವಾಗಿ ನಿಂತುಹೋಗುವುದಿಲ್ಲ. ಹೊರವೂರುಗಳ ಕಾ. ನಿ. ಸದಸ್ಯರ ಅನುಭವದ ಪ್ರಯೋಜನವು ಕಾ. ನಿ. ಮಂಡಲಿಗೆ ನಿಜವಾಗಿ ದೊರೆಯಬೇಕಾದರೆ ನಾನು ಹೇಳುವಂತೆ ಮುಖ್ಯವಾದ ಕೆಲಕೆಲವು ವಿಷಯಗಳನ್ನು ಪ್ರತ್ಯೇಕಿಸಿ ಆ ವಿಷಯಗಳನ್ನು ಯಾವತ್ತೂ ಕಾ. ನಿ. ಸದಸ್ಯರ ಅಭಿಪ್ರಾಯಗಳನ್ನು ತರಿಸಿದ ಮೇಲೆ ನಿರ್ಣಯಿಸುವುದೇ ಸರಿಯಾದ ಮಾರ್ಗವೆಂದು ಭಾವಿಸುವೆನು.

ಈಗಳನ ೧೧ನೇ ನಿಬಂಧನೆಯಲ್ಲಿ "ಕಾ. ನಿ. ಮಂಡಲಿಯು ಕನಿಷ್ಠ ಪಕ್ಷ ಮೂರುತಿಂಗಳಿಗೊಂದಾವೃತ್ತಿಯಾದರೂ ಸೇರಲೇಬೇಕು." ಎಂದು ಹೇಳಿದೆ. ಇದಕ್ಕೂ ಹೆಚ್ಚಾಗಿ ಸಭೆ ಸೇರುವುದು ಪರಿಷತ್ತಿನ ಅಧಿಕಾರಿಗಳ ಮೇಲೆಯೇ ಸಂಪೂರ್ಣವಾಗಿ ಅವಲಂಬಿಸಿದೆ. ಹೀಗಾದುದರಿಂದ

ಇತರ ಕಾ. ನಿ. ಸದಸ್ಯರು ಕೇಳಿಕೊಂಡರೂ ಸಭೆ ಸೇರಿಸಬೇಕಾದುದು ಅವಶ್ಯಕವಾಗುವಂತೆ ಆ ವಾಕ್ಯದ ಕೊನೆಯಲ್ಲಿ; "ಇದಲ್ಲದೆ ಸಾಮಾನ್ಯತಃ ೧೦ ಮಂದಿಗೆ ಕಡಿಮೆಯಿಲ್ಲದಷ್ಟು ಕಾ. ನಿ. ಸದಸ್ಯರು ಲಿಖಿತಮೂಲವಾಗಿ ಅಪೇಕ್ಷಿಸಿದರೂ ಆ ಲಿಖಿತವು ತಲುಪಿದ ೧೫ ದಿನದೊಳಗಾಗಿ ತಪ್ಪದೆ ಸಭೆಸೇರತಕ್ಕುದು" ಎಂದು ಸೇರಿಸಿಕೊಳ್ಳಬಹುದು. ಇಂಥ ಕ್ರಮವು ಪರಿಷತ್ತಿನ ವಿಶೇಷ ಸಭೆಗಳ (೩೧ನೇ ನಿಬಂಧನೆ) ವಿಷಯದಲ್ಲಿ ಈಗಲೂ ಇರುವುದು.

ವರ್ಷಮಧ್ಯದ ಕಾ. ನಿ. ಸಭೆಯು ನವರಾತ್ರಿಯ ರಜದಲ್ಲಿ ನಡೆಯಬೇಕೆಂದು ೧೧ನೆಯ ನಿಬಂಧನೆಯಲ್ಲಿ ಹೇಳಿದೆಯಷ್ಟೆ. ಮೈಸೂರಿನ ಹೊರಗಣ ಸದಸ್ಯರಿಗೆ ನವರಾತ್ರಿಯಲ್ಲಿ ಒಂದೇ ಒಂದು ದಿನ ರಜಾ ಇರುವುದರಿಂದ ನವರಾತ್ರಿಯ ವಿಶೇಷವೇನೂ ಇರುವುದಿಲ್ಲ. ಅದೇ, ಡಿಸೆಂಬರು ಕಡೆಯ ವಾರದ ಕ್ರಿಸ್ಮಸ್ ರಜದಲ್ಲಿ ಮಾಡುವರಾದರೆ ಎಲ್ಲರಿಗೂ ರಜಾಯಿರುವುದಲ್ಲದೆ ಮುಂದಿನ ಸಮ್ಮೇಳನದ ಏರ್ಪಾಡುಗಳನ್ನೂ ಆ ಸಭೆಯಲ್ಲಿ ನಿಶ್ಚಯಿಸಲು ಅನುಕೂಲವಾಗಬಹುದು

೧೩ನೇ ನಿಬಂಧನೆ:—ಕಾ. ನಿ. ಸದಸ್ಯರ ಸಂಖ್ಯೆಯು ೩೪ ರಿಂದ ೪೦ ಕ್ಕೆ ಏರಿರುವುದರಿಂದ ಕನಿಷ್ಠ ಸಂಖ್ಯೆಯನ್ನು ೭ ಕ್ಕೆ ಹೆಚ್ಚಿಸಿ ಅದರಲ್ಲಿ ಅಧಿಕಾರಿಗಳಲ್ಲದವರು ೫ ಮಂದಿ ಬಂದಿರಬೇಕೆಂದು ಗೊತ್ತು ಪಡಿಸಬಹುದು.

೧೬ನೇ ನಿಬಂಧನೆ:—ಕಾ. ನಿ. ಸಭೆಯ ಕನಿಷ್ಠ ಸಂಖ್ಯೆ ಅಯಿವರಲ್ಲಿ ಅಯಿದುಮಂದಿ ಮಾತ್ರ ಬಂದಾಗ ಇಬ್ಬರು ಆಕ್ಷೇಪಿಸಿದರೂ ಯಾರೊಬ್ಬರನ್ನು ಪರಿಷತ್ತಿಗೆ ಸೇರದಂತೆ ತಡೆಯಲು ಸಾಧ್ಯವಾಗುವುದು. ಇದು ಯುಕ್ತವೆಂದು ನಾನು ತಿಳಿಯುವುದಿಲ್ಲ. ಸಭೆಗೆ ಬಂದವರೊಳಗೆ 1/3 ಕ್ಕಿಂತ ಹೆಚ್ಚು ಮಂದಿ ಆಕ್ಷೇಪಿಸಿದ ಪಕ್ಷದಲ್ಲಿ ಆ ವಿಷಯವನ್ನು, ಯಾವತ್ತು ಕಾ. ನಿ. ಸದಸ್ಯರ ಅಭಿಪ್ರಾಯಕ್ಕಾಗಿ ಬರೆದು ತಿಳಿಸಿ, ಅಭಿಪ್ರಾಯ ಕಳುಹಿಸಿದವರೊಳಗೆ 1/4 ಕ್ಕಿಂತ ಹೆಚ್ಚು ಮಂದಿ ಆಕ್ಷೇಪಿಸಿದರೆ ಮಾತ್ರ ಹಾಗೆ ನಿರಾಕರಿಸಬಹುದೆಂದು ನನ್ನ ಅಭಿಪ್ರಾಯವು.

೧೬ನೇ ನಿಬಂಧನೆಯನ್ನು ಕುರಿತು ಈ ಕೆಳಗಿನಂತೆ ಬರೆದಿದ್ದೆನು —

" ೧೬ನೇ ನಿಬಂಧನೆಯಲ್ಲಿ No applicant for Honorary membership' " ಎಂದರೆ ಸನ್ಮಾನಿತ ಸದಸ್ಯತ್ವಕ್ಕೆ ಮನುವೆ ಮಾಡುವ ಯಾವನಾದರೂ," ಎಂಬ ಮಾತುಗಳು ಇಂಗ್ಲೀಷ್

ಪ್ರತಿಯಲ್ಲಿ ೬. ಈ ಬಹುಮಾನದ ನಿಬಂಧನೆಯನ್ನು ಮಹಾಸಭೆಯಾದರೂ ನಡೆಸತಕ್ಕದ್ದೇ ಅಲ್ಲವೆಂದು ನಾನು ಸೂಚಿಸುತ್ತೇನೆ. ಕನ್ನಡಪತ್ರಿಕೆಯಲ್ಲಿ ಆ ಪದಗಳೆಲ್ಲಾ ಇರುವುದರಿಂದ ಇಂಗ್ಲೀಷ್ ಪ್ರತಿಯನ್ನು ತಿದ್ದಿಕೊಳ್ಳಬೇಕಾಗಿದೆ. ಇದಲ್ಲದೆ ಇಂಥ ಸೂಚನೆಯು ಮೊತ್ತ ಮೊದಲು ಕಾರ್ಯನಿರ್ವಾಹಕರ ಬಳಿಗೆ ಬಂದು ಅವರ ಒಪ್ಪಿಗೆಯಿಂದ ಮಹಾಸಭೆಯಲ್ಲಿ ಬಂದರೆ ಚೆನ್ನಾಗಿರುವದೆಂದು ನನಗೆ ತೋರುತ್ತದೆ."

ಈ ದೋಷವು ಈಗಲೂ ಹಾಗೆಯೇ ಉಳಿದಿರುವುದರಿಂದ ಮುಂದಿನ ಪ್ರತಿಯಲ್ಲಾದರೂ ತಿದ್ದುಪಡಿಮಾಡುವುದು ಅವಶ್ಯವು.

ಈ ನಿಬಂಧನೆಯಲ್ಲಿ ಗೌರವ ಮತ್ತು ವಿಶಿಷ್ಟ ಸದಸ್ಯರ "ಹಕ್ಕುಗಳೂ ಕರ್ತವ್ಯಗಳೂ" ವಿವರಿಸಲಾಗಿರುವುದು ಚೆನ್ನಾಗಿಲ್ಲ. ಯಾರೊಬ್ಬರನ್ನು ಅಂಥ ಸದಸ್ಯರಾಗಿ ಮಾಡುವುದು ಅವರನ್ನು ಗೌರವಿಸುವುದಕ್ಕೆ ವಿನಾ ಅವರಿಂದ ಕೆಲಸ ತೆಗೆಯಿಸಿಕೊಳ್ಳುವುದಕ್ಕಲ್ಲ; ಅತಏವ, ಅವರ ಗೌರವಕ್ಕೆ ಸರಿಯಾದ ಯಾವ ಕೆಲಸ ಕೊಟ್ಟರೂ ಅವರು ಮಾಡಿಯೇ ಮಾಡುವರು. ಆ ಕೆಲಸಗಳನ್ನು ವಿವರಿಸಬೇಕಾದ ಅಗತ್ಯವೇನು? ಅದು ದರಿಂದ "ಅವರುಗಳಿಗಿರುವ" ಎಂಬಲ್ಲಿಂದ ಮುಂದಿನ ಎಲ್ಲ ಒಕ್ಕಣೆಯನ್ನು ತೆಗೆದುಬಿಟ್ಟು "ಇಂಥ ಸದಸ್ಯರುಗಳಿಗೆ ಸಾಮಾನ್ಯತಃ ಆಜೀವ ಸದಸ್ಯರುಗಳಿಗಿರುವ ಯಾವತ್ತು ಸ್ವಾತಂತ್ರ್ಯಗಳು ಇರತಕ್ಕದು" ಎಂದು ಇಟ್ಟುಕೊಂಡರೆ ಸಾಕಾಗುವಂತಿದೆ.

ಹಾಗೆಯೇ ಕಾ. ನಿ. ಸದಸ್ಯರಿಗೆ ತಿಳಿಯದೆ ಮಹಾಸಭೆಯಲ್ಲಿಯೇ ಯಾರಾದರೂ ಯಾರೊಬ್ಬರ ಹೆಸರನ್ನು ಗೌರವ ಅಥವಾ ವಿಶಿಷ್ಟ ಸದಸ್ಯರಾಗಿ ಸೂಚಿಸಿದ ಪಕ್ಷದಲ್ಲಿ ತೀವ್ರವಾದ ವಾದಕ್ಕೆ ಆಸ್ಪದವುಂಟಾಗಬಹು [illegible] ದಾದುದ್ದರಿಂದ, "ಸೇರಿಸಿಕೊಳ್ಳಕೂಡದು" ಎಂಬ ಶಬ್ದಗಳ [illegible] "ಇಂಥ ಸೂಚನೆಯು ಮೊತ್ತಮೊದಲು ಕಾ ನಿ ಮಂಡಲಿಯ ಮುಂದೆ ಇಡಲ್ಪಟ್ಟು ಅವರಿಂದ ಸಮ್ಮತಿಸಲ್ಪಟ್ಟರೇನೆ ವಿನಾ ಪರಿಷತ್ತಿನ ಸಾಮಾನ್ಯ ಮಹಾಸಭೆಯ ಮುಂದೆ ಬರಕೂಡದು." ಎಂಬ ವಾಕ್ಯವನ್ನು ಸೇರಿಸಿದರೆ ಉತ್ತಮ.

೧೮ನೇ ನಿಬಂಧನೆ:—ಇದರ ಕೊನೆಗೆ "ಸದಸ್ಯತ್ವವು ನಿಂತುಹೋದ ಮಾತ್ರದಿಂದ ಯಾವನೊಬ್ಬನಿಗೆ ತಾನು ಈ ಮೊದಲು ಪರಿಷತ್ತಿಗೆ ಕೊಟ್ಟಿರುವ ಧನ ಅಥವಾ ಇತರ ಸ್ವತ್ತನ್ನು ಹಿಂದಕ್ಕೆ ಪಡೆಯಲು ಅರ್ಹತೆ ಇರ

ತಕ್ಕುದಲ್ಲ, ಮತ್ತು ಆತನಿಂದ ಪರಿಷತ್ತಿಗೆ ಆ ಪರ್ಯಂತ ಬರತಕ್ಕುದಾಗಿ ಉಳಿದಿರುವ ಹಣವನ್ನು ಕೊಡುವ ಬಾಧ್ಯತೆಯಿಂದಲೂ ಆತನು ಮುಕ್ತನಾಗತಕ್ಕುದಲ್ಲ" ಎಂಬ ವಾಕ್ಯವನ್ನು ಸೇರಿಸಿದರೆ ಚೆನ್ನಾಗಿರುವುದು. ಹಾಗೆಯೇ ಇಂಥ ಸೂಚನೆಯು ಕಾ. ನಿ. ಮಂಡಲಿಯ ಮೂಲವಾಗಿ ಅವರ ಅನುಮತಿಯಿಂದ ವಾರ್ಷಿಕ ಸಭೆಯ ಮುಂದೆ ಬರುವುದು ಶ್ರೇಯಸ್ಕರವೆಂದು ತಿಳಿಯುವೆನು.

೧೯ನೇ ನಿಬಂಧನೆ (ಪರಿಷತ್ತಿನ ಆಸ್ತಿ)—ಈ ನಿಬಂಧನೆಯು ಬಹು ಸಂಕ್ಷಿಪ್ತವಾಗಿಯೂ ಅಪೂರ್ಣವಾಗಿಯೂ ಇದೆ. ಇದಕ್ಕೆ ಬದಲಾಗಿ ಈ ಕೆಳಗಣ ನಿಬಂಧನೆಯನ್ನು ಏರ್ಪಡಿಸಬಹುದು:—

"೧೯ (A) ಧನ—ಪರಿಷತ್ತಿನ ಯಾವತ್ತು ಸ್ಥಿರ ಚರ ಸ್ವತ್ತುಗಳು ಅನ್ಯಂತವಾಗಿ ಪರಿಷತ್ತಿನ ಆಸ್ತಿಯಾಗಿರತಕ್ಕುದು. ಪರಿಷತ್ತಿಗೆ ಸೇರಿದವರಾದ ಯಾರಿಗೂ ಆ ಆಸ್ತಿಯಲ್ಲಿ ವ್ಯಕ್ತಿಶಃ ಯಾವ ಸ್ವಾತಂತ್ರ್ಯವೂ ಇರತಕ್ಕುದಲ್ಲ.

(B) ಪರಿಷತ್ತಿನ ಆಸ್ತಿಯು (i) ಶಾಶ್ವತ (Permanent) ಮತ್ತು (ii) ನಿತ್ಯೋಪಯೋಗದ (Current) ಆಸ್ತಿ ಎಂದು ಎರಡು ವಿಧವಾಗಿರತಕ್ಕುದು.-

ಶಾಶ್ವತ ಆಸ್ತಿಯು ಈ ಕೆಳಗಿನವುಗಳನ್ನು ಒಳಕೊಂಡಿರತಕ್ಕುದು.

(a) ಮಹಾಪೋಷಕರೇ, ಮೊದಲಾದವರಿಂದ ಯಾವಜ್ಜೀವ ಪ್ರಯೋಜನಕ್ಕಾಗಿ ಕೊಡಲ್ಪಟ್ಟು ಪರಿಷತ್ತಿಗೆ ದೊರೆತ ಧನ;

(b) ನಿಯತಕಾಲಗಳಲ್ಲಿ ಬರತಕ್ಕ (Recurring) ಸ್ವಭಾವದ್ದಲ್ಲವಾಗಿ ಯಾರಿಂದಲಾದರೂ ಉಚಿತ (Gift) ದಾನ (grant) ವೃತ್ತಿ (Endowment) ರೂಪದಿಂದ ಬಂದ ಮೂಲಧನ;

(c) ಶಾಶ್ವತ ಆಸ್ತಿಯಾಗಿ ವರ್ತಿಸಲ್ಪಡತಕ್ಕುದೆಂದು ನಿರ್ದೇಶಿಸಿ ಕೊಡಲ್ಪಟ್ಟ ಧನ;

(d) ಪರಿಷತ್ತಿನಲ್ಲಿ ಅಥವಾ ಕಾ. ನಿ. ಮಂಡಲಿಯಲ್ಲಿ ಹಾಗೆ ನಿರ್ಣಯವಾಗಿ ಶಾಶ್ವತನಿಧಿಗೆ ಸೇರಿಸಲಾದ ಧನ; ಮತ್ತು

(e) ಪರಿಷತ್ತಿನ (ರಿಜಿಸ್ಟರ್ಡು) ಅಚರ ಸ್ಥಿರ ಚರ ಸ್ವತ್ತುಗಳು ಮತ್ತು ಸಂಸ್ಥಾ ಸಂಗಳು (Institutions)

ಮೇಲ್ಕಂಡ ಸಂದರ್ಭದ ಶಾಶ್ವತ ಆಸ್ತಿಯ ಬಡ್ಡಿಯನ್ನು ಮಾತ್ರ ಉಪಯೋಗಿಸತಕ್ಕದ್ದೇ ವಿನಾ, ಮೂಲಧನವನ್ನು ವೆಚ್ಚಮಾಡತಕ್ಕದ್ದಲ್ಲ. ಆದರೆ ಶಾಶ್ವತ ಆಸ್ತಿಯನ್ನು ಧನರೂಪವಾಗಿಯೇ ಇಡುವುದಕ್ಕೆ ಬದಲಾಗಿ ಪರಿಷತ್ತಿನ ಸ್ಥಿರ ಸ್ವರೂಪವಾದ ಬೇರೆ ಆಸ್ತಿಯ ರೂಪಕ್ಕೆ ಮಾರ್ಪಡಿಸ ಬಹುದು.

ನಿತ್ಯೋಪಯೋಗದ ಆಸ್ತಿಯು ಈ ಕೆಳಗಣವುಗಳನ್ನು ಒಳಕೊಂಡಿರತಕ್ಕದು.—

(i) ಸಾಮಾನ್ಯ ಸದಸ್ಯರು ಮುಂತಾದವರಿಂದ ನಿಯತಕಾಲದಲ್ಲಿ ದೊರೆವ ವಾರ್ಷಿಕ ಚಂದಾ;

(ii) ಶಾಶ್ವತ ಆಸ್ತಿಯಿಂದ ಉತ್ಪನ್ನವಾಗುವ ಬಡ್ಡಿ;

(iii) ಸರಕಾರದವರಿಂದಲೂ ಇತರರಿಂದಲೂ ನಿಯತಕಾಲಗಳಲ್ಲಿ ಸಹಾಯ ರೂಪವಾಗಿ ದೊರೆವ ಧನ;

(iv) ಶಾಶ್ವತ ಆಸ್ತಿಗೆ ಸೇರತಕ್ಕವಲ್ಲದಾದ ಇತರ ವಿವಿಧ (Miscellaneous) ಮೊಬಲಗುಗಳು

(3) ನಿತ್ಯೋಪಯೋಗದ ಧನದಿಂದಲೇ ನಾಗದಂಥ ಯಾವುದೊಂದು ಪ್ರತಿಫಲ ಬರತಕ್ಕ (Productive) ಕೆಲಸಕ್ಕಾಗಿ, ಕಾರ್ಯನಿರ್ವಾಹಕ ಮಂಡಲಿಯವರು ಒಟ್ಟು ಕಾ. ನಿ. ಸದಸ್ಯರ ಬಹುಮತದಿಂದ ಒಪ್ಪಿದರೆ, ಶಾಶ್ವತ ನಿಧಿಯಿಂದ ಹಣವನ್ನು ತಾತ್ಕಾಲಿಕವಾಗಿ ತೆಗೆದು ಉಪಯೋಗಿಸಬಹುದು. ಆದರೆ ಇಂಥ ಹಣವನ್ನು ಸಾಲ (Loan) ದಂತೆ ತಿಳಿದು, ಶೇಕಡ ೩ರಂತೆ ಬಡ್ಡಿಯೊಂದಿಗೆ ಆದಷ್ಟು ತ್ವರೆಯಾಗಿ ಪುನಃ ಆದೇ ನಿಧಿಗೆ ಸೇರಿಸತಕ್ಕದು.

೨೫ನೇ ನಿಬಂಧನೆ:—ಇದರಲ್ಲಿ ಅವಶ್ಯವಾದಂತೆ ಉಪನಿಬಂಧನೆಗಳನ್ನು ಮಾಡಿಕೊಳ್ಳಲು ಕಾ. ನಿ. ಮಂಡಲಿಗೆ ಅಧಿಕಾರ ಕೊಟ್ಟಿದೆ; ಮತ್ತು ಈ ಉಪನಿಬಂಧನೆಗಳು " ಪರಿಷತ್ತಿನ ವಾರ್ಷಿಕ ಸಭೆಯು ಕೂಡುವವರೆಗೂ

ಜಾರಿಯಲ್ಲಿರತಕ್ಕದು" ಎಂದು ಹೇಳಿದೆ. ಹೀಗಾದುದರಿಂದ "ಪರಿಷತ್ತಿನ ವಾರ್ಷಿಕ ಸಭೆಯು ಕೂಡಿದ ತರುವಾಯ ಈ ಉಪನಿಬಂಧನೆಗಳ ಸಲುವಳಿಯು ನಿಂತುಹೋಗತಕ್ಕದು" ಎಂಬ ತಪ್ಪು ಅಭಿಪ್ರಾಯವು ಈ ಒಕ್ಕಣೆಯಿಂದ ಹೊರಡುವಂತಿದೆ. ಆದರೆ ನಿಜವಾಗಿ ನೋಡುವುದಾದರೆ "ಆಯಾವರ್ಷದಲ್ಲಿ ಕಾ. ನಿ. ಮಂಡಲಿಯವರು ಮಾಡಿದ ನಿಬಂಧನೆಗಳು ವಾರ್ಷಿಕ ಸಭೆಯು ಸೇರುವವರೆಗೆ ತಾತ್ಕಾಲಿಕ (Temporary) ವಾಗಿ ಸಲುವಳಿಯಲ್ಲಿದ್ದು, ಆ ಸಭೆಯಲ್ಲಿ ಸದಸ್ಯರಿಂದ ಸಮ್ಮತಿಸಲ್ಪಡಲಾಗಿ ಸ್ಥಿರ (Permanent) ವಾಗತಕ್ಕದು." ಎಂಬ ಅರ್ಥವು ಇದರಿಂದ ಹೊರಡಬೇಕಾಗಿರುವುದು. ಆದುದರಿಂದ "ಕೂಡುವವರೆಗೂ ......ತಕ್ಕದು" ಎಂಬ ಶಬ್ದಗಳ ಬದಲಾಗಿ "ಕೂಡುವವರೆಗೂ ತಾತ್ಕಾಲಿಕವಾಗಿ ಜಾರಿಯಲ್ಲಿದ್ದು, ಪರಿಷತ್ತಿನ ವಾರ್ಷಿಕಸಭೆಯಲ್ಲಿ ಸಮ್ಮತಿಸಲ್ಪಡಲಾಗಿ ಸ್ಥಿರ ಉಪನಿಬಂಧನೆಗಳಾಗಿ ಪರಿಣಮಿಸತಕ್ಕದು." ಎಂಬ ವಾಕ್ಯವನ್ನು ಸೇರಿಸಿ ಸರಿಗೊಳಿಸುವುದು ಅವಶ್ಯವಾಗಿದೆ. ಹಾಗೆಯೇ, "ಒಂದು ಬಾರಿಗೆ ಪರಿಷತ್ತಿನ ಸಭೆಯಲ್ಲಿ ಸಮ್ಮತಿ ಹೊಂದಿದ ಉಪನಿಬಂಧನೆಯು ಕಾ. ನಿ. ಮಂಡಲಿಯವರಿಂದ ತಿದ್ದುಪಡಿ ಮಾಡಲ್ಪಟ್ಟರೆ, ಅದನ್ನು ಆ ವರ್ಷದಲ್ಲಿ ಮಾಡಿದ ಹೊಸ ನಿಬಂಧನೆಯಂತೆ ತಿಳಿದು ವರ್ತಿಸತಕ್ಕದು" ಎಂಬ ವಾಕ್ಯವನ್ನೂ ಇದಕ್ಕೆ ಕೂಡಿಸಿದರೆ ಉತ್ತಮ.

೧೯೧೫ರಲ್ಲಿ ಪರಿಷತ್ತು ಸ್ಥಾಪಿಸಲ್ಪಟ್ಟು ೧೯೧೬ರಲ್ಲಿ ಮೊದಲನೆಯ ವಾರ್ಷಿಕಸಭೆಯು ನಡೆಯುವವರೆಗೆ ಮಾಡಲಾಗಿದ್ದ ಉಪನಿಬಂಧನೆಗಳನ್ನು ಆ ವಾರ್ಷಿಕಸಭೆಯ ಮುಂದಿಟ್ಟು (೨೫ನೇ ನಿಬಂಧನೆ) ಅನುಮತಿ ಪಡೆಯಬೇಕಾಗಿದ್ದಿತು. ಅದೊಂದೂ ಮಾಡಲ್ಪಟ್ಟ ಹಾಗೆ ತೋರಲಿಲ್ಲ. ಈಗ ಮುಂದಾದರೂ ಈ ಉಪನಿಬಂಧನೆಗಳ ವಿಷಯವು ಪರಿಷತ್ತಿನ ಆಯಾ ವಾರ್ಷಿಕ ವೃತ್ತಾಂತ(Annual Report)ದಲ್ಲಿಯೇ ಒಂದು ಸದಸ್ಯರ ಅನುಮತಿ ಪಡೆಯಲು ಅನುಕೂಲ ಪಡಿಸಬೇಕಾದುದು ಅವಶ್ಯ.

೨೩ನೇ ನಿಬಂಧನೆ:—ಪರಿಷತ್ತಿನ ಸಾಮಾನ್ಯ ಸಭೆಗಳ ವಿಷಯವು, ೧೩ನೇ, ೧೯ನೇ ಮತ್ತು ೨೩ರಿಂದ ೩೦ರ ವರೆಗಿನ ನಿಬಂಧನೆಗಳಲ್ಲಿ ಸೂಚಿ

ತಪ್ಪಿದೆ. ಆದರೆ ಸಾಮಾನ್ಯಸಭೆಯು ನಡೆಯಲು ಬೇಕಾಗಿರುವ ಸದಸ್ಯರ ಕನಿಷ್ಠ ಸಂಖ್ಯೆಯನ್ನು ಎಲ್ಲಿಯೂ ಹೇಳಿರುವುದಿಲ್ಲ. ಹಾಗೆಯೇ ಯಾವುದೊಂದು ಸೂಚನೆಯು ಪರಿಷತ್ತಿನಲ್ಲಿ ಹೇಗೆ, ಎಷ್ಟು ಮತಗಳಿಂದ ಅಂಗೀಕಾರವಾದಂತೆ ತಿಳಿಯಲ್ಪಡತಕ್ಕದೆಂಬುದೂ ಕಂಡು ಬರುವುದಿಲ್ಲ. ಆದುದರಿಂದ ಈಗಿನ ೧೭ನೇ ನಿಬಂಧನೆಯನ್ನು ಪೂರ್ತಿಯಾಗಿ ೧೮ನೆಯದರ ಮೊದಲನೆಯ ವಾಕ್ಯವಾಗಿ ಸೇರಿಸಿ, "ಮತಕೊಡಲು ಅಧಿಕಾರವುಳ್ಳ ಸದಸ್ಯರೊಳಗೆ ಕನಿಷ್ಠಪಕ್ಷ ೨೫ ಜನರಾದರೂ ಸಭೆಯಲ್ಲಿದ್ದಲ್ಲದೆ ಪರಿಷತ್ತಿನ ಯಾವ ಸಭೆಯೂ ನಡೆಯತಕ್ಕದ್ದಲ್ಲ; ಮತ್ತು ಅನ್ಯಥಾ ವಿಧಿಸಲ್ಪಟ್ಟರೇ ವಿನಾ ಪರಿಷತ್ತಿನ ಮುಂದೆ ಬರುವ ಸಮಸ್ತ ಸೂಚನೆಗಳು ಬಹುಮತದಿಂದ ಅಂಗೀಕರಿಸಲ್ಪಡತಕ್ಕದು. ಮತಗಳು ಉಭಯಪಕ್ಷಕ್ಕೂ ಸಮಾನವಾಗಿರುವ ಪಕ್ಷದಲ್ಲಿ ಸಭಾಧ್ಯಕ್ಷರು ತಮ್ಮ ಮತದಂತೆ ನಿರ್ಣಯಗೊಳಿಸತಕ್ಕದು" ಎಂಬ ಹೊಸ ೧೭ನೇ ನಿಬಂಧನೆಯನ್ನು ವಿಧಾಯಿಸಿದರೆ ಉತ್ತಮ.

<u>೧೮ನೇ ನಿಬಂಧನೆ</u>:—ಸದಸ್ಯರು ಸೂಚಿಸತಕ್ಕ ಬದಲಾವಣೆಗಳನ್ನು ಸಾಮಾನ್ಯಸಭೆಯ ನೋಟೀಸು ಪಡೆದ ಒಂದು ವಾರದೊಳಗಾಗಿ ಕಾರ್ಯದರ್ಶಿಗಳಿಗೆ ಶ್ರುತಪಡಿಸುವುದು ಬಹು ಕಷ್ಟವೆಂದು ನನಗೆ ತೋರುತ್ತಿದೆ. ನೋಟೀಸು ಮೂರುತಿಂಗಳು ಮುಂಚಿತವಾಗಿ (೧೭ನೇ ನಿಬಂಧನೆ) ಬರುವುದರಿಂದ, ಸೂಚನೆಗಳನ್ನು "ನೋಟೀಸನ್ನು ಪಡೆದ ಒಂದುವಾರದೊಳಗಾಗಿ" ಎಂಬುದರ ಬದಲಾಗಿ "ನೋಟೀಸಿನ ತಾರೀಖಿನಿಂದ ಮೂರುವಾರದೊಳಗಾಗಿ" ಎಂದು ತಿದ್ದಿಕೊಳ್ಳುವುದು ಯುಕ್ತವಾಗಿದೆ

<u>೪ನೇ ಉಪನಿಬಂಧನೆ</u>:—ಕಾ. ಸಿ. ಮಂಡಲಿಯಲ್ಲಿ ಖಾಲಿಯಾದ ಸ್ಥಾನಗಳನ್ನು ಹಂಗಾಮಿಯಾಗಿ ಮುಂದಿನ ವಾರ್ಷಿಕಸಭೆ ಸೇರುವವರೆಗೆ ಕಾ. ಸಿ. ಮಂಡಲಿಯವರೇ ಭರ್ತಿಮಾಡಿಕೊಳ್ಳಬಹುದೆಂದು ಇದರಲ್ಲಿ ಹೇಳಿದೆ; ಆದರೆ ನೇಮಕದ ವಿಷಯದಲ್ಲಿ ಯಾವ ನಿರ್ಬಂಧವೂ ಇರುವಂತೆ ತೋರುವುದಿಲ್ಲ. ಆದುದರಿಂದ "ಸ್ಥಾನದಲ್ಲಿ" ಮತ್ತು "ಇತರರನ್ನು" ಎಂಬ ಶಬ್ದಗಳ ನಡುವೆ "ಸಾಧ್ಯವಾದ ಮಟ್ಟಿಗೆ, ಅದೇ ಪ್ರಾಂತ್ಯದ ಅಥವಾ (ನಾನು ಸೂಚಿಸಿದ ಮೇರೆಗೆ ತರಗತಿಯ ಕ್ರಮದಂತ ಚುನಾಯಿಸಲ್ಪಟ್ಟವ

ನಾದರೆ) ಅದೇ ತರಗತಿಯು " ಎಂಬ ಶಬ್ದಗಳನ್ನು ಇಟ್ಟರೆ ಅನುಕೂಲವಾಗ ಬಹುದು.

ಇದುವರೆಗೆ ನಿಬಂಧನೆಗಳಲ್ಲಿಯೂ ಉಪನಿಬಂಧನೆಗಳಲ್ಲಿಯೂ ಆಗ ಬೇಕಾಗಿ ತೋರಿದ ತಿದ್ದುಪಡಿಗಳನ್ನು ಸೂಚಿಸಿರುವೆನು. ಇದಲ್ಲದೆ, ಪರಿಷತ್ತಿನ ವಿಷಯದಲ್ಲಿ ಅಗತ್ಯ ಇನ್ನು ಕೆಲವು ತಿದ್ದುಪಡಿಗಳನ್ನು ಹಿಂ ದಿನ ಪುಸ್ತಕದೊಳಗೆ ಈ ಕೆಳಗಣವುಗಳನ್ನು ಹೇಳಿದ್ದೆನು:—

(a) ಮೈಸೂರು ಸರ್ಕಾರದ ಸಂಪದಭ್ಯುದಯ ಸಮಾಜದವರ ಪ್ರೋತ್ಸಾಹವೇ ನಮ್ಮ ಪರಿಷತ್ತಿನ ಜನನಕ್ಕೆ ಹೇತುವಾಗಿರುವುದಷ್ಟೆ! ಆದುದರಿಂದ ಈ ಸಂಗತಿಯು ನಿರಂತರವಾಗಿ ನಮ್ಮ ನೆನಪಿನಲ್ಲಿ ನಿಲ್ಲುವಂತೆ ಆ ಸರ್ಕಾರವನ್ನೇ ಆಗಲೀ ಸಮಾಜವನ್ನೇ ಆಗಲಿ ನಮ್ಮ ಪರಿಷತ್ತಿನ ಪ್ರತಿಷ್ಠಾಪಕರೆಂದು ಕಾಣಿಸುವುದು ನಮ್ಮ ಕರ್ತವ್ಯವಾಗಿದೆಯೆಂದು ನಾನು ಭಾವಿಸುವೆನು. ಆಂಧ್ರಸಾಹಿತ್ಯಪರಿಷತ್ತಿನವರೂ, ಉದಾರವಾಗಿ ಧನಸಹಾಯಮಾಡಿ ಆ ಪರಿಷತ್ತಿನ ಸ್ಥಾಪನೆಗೆ ಕಾರಣಭೂತರಾದ ಪಿಠಾಪುರದ ಮತ್ತು ವೆಂಕಟಗಿರಿಯ ರಾಜರುಗಳನ್ನು ತಮ್ಮ ಪ್ರತಿಷ್ಠಾಪಕರೆಂದು ಏರ್ಪಡಿಸಿರುವರು.

(c) ಕಾರ್ಯನಿರ್ವಾಹಕಮಂಡಲಿಯಲ್ಲಿ ಸಮಸ್ತ ಭಾಗಗಳ ಪ್ರತಿನಿಧಿಗಳೂ ಇರುವರಾದರೂ, ಅವರೆಲ್ಲ ಆ ಮಂಡಲಿಯ ಪ್ರತಿ ಸಭೆಗೆ ಬರುವುದು ಕೇವಲ ಅಸಾಧ್ಯವೆಂಬುದು ಸ್ಪಷ್ಟವಾಗಿದೆ ಹೀಗಾದುದರಿಂದ ಬೆಂಗಳೂರಿನಲ್ಲಿರುವ ೮—೧೦ ಜನ ದೊಡ್ಡಮನುಷ್ಯರು ಮಾತ್ರ ಸೇರಿ ಮಾಡುವ ನಿರ್ಣಯಗಳು ಕಾರ್ಯಕರ್ತೃ ಮಂಡಲಿಯ ನಿರ್ಣಯಗಳಾಗಿ ನಿಲ್ಲುವ ಸಂಭವವಿರುವುದು. ಇದರ ದೆಸೆಯಿಂದ ಯಾವ ಕೆಡಕೂ ಆಗಲಾರದು ನಿಜವಾದರೂ ಮಂಡಲಿಯ ಯಾವತ್ತು ಸದಸ್ಯರ (ಪತ್ರಮುಖೇನ) ಅಭಿಪ್ರಾಯ ಪಡೆದು ನಿರ್ಣಯಿಸತಕ್ಕದೆಂದು ಮುಖ್ಯವಾದ ಕೆಲಕೆಲವು ವಿಷಯಗಳನ್ನು ನಿಬಂಧನೆಗಳಿಂದಲೇ ಪ್ರತ್ಯೇಕಿಸಿಡುವುದು ಉತ್ತಮವೆಂದು ಭಾವಿಸುವೆನು. ಹೀಗೆ ಮಾಡಿದರೆ ಉಳಿದವರ ಕಾರ್ಯನಿರ್ವಾಹ ಸದಸ್ಯತ್ವವು ಕೇವಲ ಗೌರವಾರ್ಥ ಮಾತ್ರವಾಗದೆ ಅವರ ಆಲೋಚನೆಯ ಪ್ರಯೋಜನವು ಕೂಡ ಪರಿಷತ್ತಿಗೆ ದೊರೆತಂತಾಗುವುದು.

(d) ಪ್ರತಿ ವಿಷಯದಲ್ಲಿಯೂ ಪ್ರತಿ ಬಾರಿಯೂ ಕಾರ್ಯದರ್ಶಿಯೇ ಮೊದಲಾದ ಉದ್ಯೋಗಸ್ಥರು ಮೇಲ್ಪಟ್ಟವರ ಅನುಜ್ಞೆಯನ್ನು ಪಡೆಯುವುದೆಂದರೆ ಅನವಶ್ಯವಾದ ಕಾಲವಿಳಂಬವಾಗುವುದು ಹೀಗಾದುದರಿಂದ ಸಂಧರ್ಭಾನುಸಾರವಾಗಿ ಬಂದ ವಿಷಯಗಳನ್ನು ತೀರ್ಮಾನಗೊಳಿಸಿ ಸುಮ್ಮನಾಗದೆ ಕಾರ್ಯನಿರ್ವಾಹಕ ಮಂಡಲಿಯವರು ಅವುಗಳ ತತ್ತ್ವವನ್ನು ಗ್ರಹಿಸಿ ಅವುಗಳಿಂದಲೇ ಸಾಮಾನ್ಯಕ್ರಮಗಳನ್ನು ಏರ್ಪಡಿಸಿ, ಮುಂದೆ ಕಾರ್ಯದರ್ಶಿಯು ತದನುಸಾರವಾಗಿ ಕೂಡಲೇ ವರ್ತಿಸುವಂತೆ ಅನುಕೂಲಪಡಿಸಿ ಕೊಟ್ಟರೆ ಎಷ್ಟೋ ಮೇಲುಂಟು. ಇಂಥ ಕ್ರಮವು ' Standing orders ' ಎಂದರೆ ಕಾಯಂ ಹುಕುಮುಗಳೆಂಬ ಹೆಸರಿಂದ ಸರ್ಕಾರದಲ್ಲಿಯೂ ಚಲುವಳಿಯಲ್ಲಿದೆ.

(e) ಕಳೆದ (೧೯೧೫ನೇ ಇಸವಿಯ) ನವೆಂಬರು ೨೦ನೇ ತಾರೀಖಿನ ದಿನ ನಡೆದ ಕಾರ್ಯನಿರ್ವಾಹಕರ ಸಭೆಯಲ್ಲಿ ಒಂದು ವಿಶೇಷ ಜರಗಿತು. ' ಪರಿಷತ್ತು ಪ್ರಶಸ್ತಿಯನ್ನು ಪಡೆದುಕೊಳ್ಳು

ವೃತ್ತಕ್ಕೆ ಮುಂಚೆ .....ಸಮ್ಮೇಳನದಲ್ಲಿ ಆದ ನಿರ್ಣಯಗಳ ವಿಷಯದಲ್ಲಿ ಕಾರ್ಯಗಳನ್ನು ನಡೆಯಿಸುವುದು ಅಷ್ಟು ಫಲಕಾರಿಯಾದುದಲ್ಲವೆಂದು ಕಾಣುವುದರಿಂದ ಸದ್ಯದಲ್ಲಿ ಈ ವಿಷಯವನ್ನು ಮನ್ನಾ ಮಾಡಬಹುದು' ಎಂದು ಕಾ. ನಿ. ಸದಸ್ಯರು ನಿರ್ಣಯಿಸಿದರು. ಪರಿಷತ್ತಿನ ಪರಮಹಿತೇಚ್ಛುಗಳೂ ಪೂರ್ವಾಪರಜ್ಞರೂ ಆದ ದೊಡ್ಡ ಮನುಷ್ಯರು ಮಾಡಿದ ಈ ನಿರ್ಣಯವು ಯುಕ್ತವಾದುದೇ ಎಂದು ಚೆನ್ನಾಗಿ ಆಲೋಚಿಸಿ ನೋಡಿದವರಿಗೆ ಗೋಚರಿಸದಿರದು. ತಥಾಪಿ, ಸಮ್ಮೇಳನದಲ್ಲಿ ಆದ ನಿರ್ಣಯವನ್ನು ಸಮ್ಮೇಳನದವರಿಂದಲೇ ನೇಮಿಸಲ್ಪಟ್ಟವರಾದ ಕಾರ್ಯನಿರ್ವಾಹಕ ಮಂಡಲಿಯವರು ಈ ರೀತಿ ತಳ್ಳಿಬಿಡಲು ಸ್ವತಂತ್ರರೇ? ಇದು ನ್ಯಾಯಸಮ್ಮತವೇ? ಎಂದು ಕೆಲವರು ಆಕ್ಷೇಪಿಸಲೂಬಹುದು. ಸೂಕ್ಷ್ಮವಾಗಿ ಆಲೋಚಿಸಿದರೆ, ಇದು ನ್ಯಾಯಸಮ್ಮತವಲ್ಲವೆಂದು ಕೂಡ ಹೇಳಬಹುದು. ಆದರೆ ಸಮ್ಮೇಳನವು ಪರಿಷತ್ತಿನ ಪರವಾಗಿ ನಡೆಯತಕ್ಕದು; ಅದರಲ್ಲಿ ಪರಿಷತ್ತಿನ ಸದಸ್ಯರಿಗೆ ಮಾತ್ರವಲ್ಲದೆ ಇತರರಿಗೂ ಪ್ರವೇಶಿಸಲು ಅವಕಾಶವಿರುವುದು. ೨-೩ ದಿನದ ಹಬ್ಬದಲ್ಲಿ, ಉತ್ಸಾಹವೇ ಅಧಿಕವಾಗಬಹುದಾದ ಸಮ್ಮೇಳನದ ಸಭೆಯಲ್ಲಿ ಆದ ಪ್ರತಿ ನಿರ್ಣಯವನ್ನು ಸ್ಥಿರವಾದ ಪರಿಷತ್ತಿನ ಕಾರ್ಯನಿರ್ವಾಹಕರು ನೆರವೇರಿಸಲು ಎಷ್ಟುಮಟ್ಟಿಗೆ ಬದ್ಧರೆಂಬ ಇನ್ನೊಂದು ಪ್ರಶ್ನೆಯೂ ಆಲೋಚಿಸತಕ್ಕದಾಗಿದೆ. ಆದರೆ ಸಮ್ಮೇಳನದ ಯಾವ ನಿರ್ಣಯವೂ ಕಾ. ನಿ. ರನ್ನು ಬದ್ಧಪಡಿಸಲಾರದೆನ್ನುವುದಾದರೆ ಸಮ್ಮೇಳನವನ್ನು ನಡೆಯಿಸುವುದರಿಂದ ಯಾವ ಪ್ರಯೋಜನವೂ ಉಂಟಾದ ಹಾಗಾಗಲಾರದು ಆದುದರಿಂದ ಉಭಯಪಕ್ಷದವರಿಗೂ ಅಸಮಾಧಾನವಾಗದಂತೆ ಒಂದು ಮಧ್ಯಮಾರ್ಗವನ್ನು ಗೊತ್ತುಪಡಿಸುವುದು ಅಗತ್ಯವು. "ಸಮ್ಮೇಳನದಲ್ಲಿ ಆದ ಯಾವುದೊಂದು ನಿರ್ಣಯವೂ ಕಾಲಾಂತರಗಳಿಂದ ನೆರವೇರಿಸಬರುವುದಿಲ್ಲವೆಂದು ಸಮಸ್ತ ಕಾರ್ಯನಿರ್ವಾಹಕರೂ ಬಹುಮತದಿಂದ ಅಭಿಪ್ರಾಯಪಟ್ಟರೆ, ಪುನಃ ಅದೇ ನಿರ್ಣಯವು ಮುಂದಿನ ಸಮ್ಮೇಳನದಲ್ಲಿ ಆಗುವ ತನಕ ಅದನ್ನು ತಡೆದಿಡಬಹುದು." ಎಂದು ಒಂದು ನಿಬಂಧನೆಯನ್ನು ಏರ್ಪಡಿಸಿದರೆ ಈ ಅಡಚಣೆಯು ದೂರವಾಗಬಹುದೆಂದು ನನಗೆ ತೋರುತ್ತಿದೆ.

ಇವಲ್ಲದೆ ಈ ಕೆಳಗಣ ವಿಷಯಗಳೂ ಗಮನಿಸಲ್ಪಡತಕ್ಕವಾಗಿವೆ –

(i) ಕಳೆದ ಪ್ರಥಮ ವಾರ್ಷಿಕಸಭಾಕಾಲದಲ್ಲಿ ಕಾ. ನಿ. ಮಂಡಲಿಯನ್ನು ಚುನಾಯಿಸುವಾಗ ಉದ್ಯೋಗಸ್ಥರನ್ನೂ ಸದಸ್ಯರನ್ನೂ ಒಟ್ಟಾಗಿ ಒಂದೇ ಪಟ್ಟಿಯಲ್ಲಿ ಆರಿಸಿಕೊಂಡರು. ಇದರಿಂದ ತುಂಬಾ ಅನ್ಯಾಯವಾಯಿತೆಂದು ಮ॥ ಆರ್. ರಘುನಾಥರಾಯರವರು ಪ್ರಬಲವಾದ ಆಕ್ಷೇಪಣೆಯನ್ನು ತಂದರು. ಆಗ ಆ ಆಕ್ಷೇಪಣೆಯು ಸದಸ್ಯರಿಂದ ಗಮನಿಸಲ್ಪಡಲಿಲ್ಲವಾದರೂ ಆಕ್ಷೇಪಣೆಯು ಯುಕ್ತಿಯುಕ್ತವೂ ಸಾಧುವೂ ಆಗಿದ್ದುದೆಂದು ಒಪ್ಪದೇ

ಉಪಾಯವಿಲ್ಲ. ಸೂಕ್ಷ್ಮವಾದ ನಿಬಂಧನೆಗಳಿಲ್ಲದಿರುವುದೇ ಇದರ ಕಾರಣವಾಗಿದೆ. ೮ನೆಯ ನಿಬಂಧನೆಯನ್ನು ತಕ್ಕಂತೆ ತಿದ್ದಿಕೊಂಡರೆ ಉತ್ತಮ.

(ii) ಹಾಗೆಯೇ, ಪರಿಷತ್ತಿನ ಸಭೆಗಳ ನಡವಳಿಕೆಯೂ (Procedure) ಗೊತ್ತಾಗಿರುವುದಿಲ್ಲ. ಕೆಲಕೆಲವರು ಹೇಗೆ ಬೇಕಾದರೂ ಎಷ್ಟು ಸಲವಾದರೂ ಮಾತನಾಡುವರು; ಬೇರೆ ಕೆಲವರಿಗೆ ಬಾಯಿಯೆತ್ತುವುದಕ್ಕೇ ಅವಕಾಶ ದೊರೆಯುವುದಿಲ್ಲ. ಇದರಿಂದ ಮುಂದೆ ಎಂದಾದರೂ ಕ್ಷೋಭಕ್ಕೆ ಕಾರಣವಾಗುವಂತಿದೆ. ಕಾ. ನಿ. ಮಂಡಲಿಗೆ ಇಂಥ ಗೊತ್ತಾದ ನಡವಳಿಕೆಯು ಅಷ್ಟು ಆವಶ್ಯಕವಲ್ಲವಾದರೂ ಪರಿಷತ್ತಿನ ಸಭೆಗಳಲ್ಲಿಯಾದರೂ ಯಾವ ನಡವಳಿಕೆಯನ್ನು ಅನುಸರಿಸಬೇಕೆಂಬುದನ್ನು ಸ್ಪಷ್ಟಪಡಿಸುವುದು ಅತ್ಯಗತ್ಯವು. ಈ ವಿಷಯದಲ್ಲಿ, ಸಾಮಾನ್ಯತಃ ಯೂನಿವರ್ಸಿಟಿಯ ಸಭೆಗಳಲ್ಲಿ ಅಥವಾ ನ್ಯಾಯವಿಧಾಯಕ ಸಭೆಗಳಲ್ಲಿ ಬಳಕೆಯಲ್ಲಿರುವ ಮಾದರಿಯ ಕ್ರಮವನ್ನೇ ನಾವೂ ಇಟ್ಟುಕೊಂಡರೆ ಆಗಬಹುದೆಂದು ಭಾವಿಸುವೆನು.

(iii) ಪರಿಷತ್ತಿನ ವಾಚನಾಲಯವು ಪರಿಷತ್ತಿನ ಮಂದಿರಕ್ಕೆ ಹೋಗಿ ಓದುವ ಯಾರಿಗೂ ತೆರೆದುದಾಗಿರುವುದಾದರೂ ಪುಸ್ತಕಭಂಡಾರದ ಪ್ರಯೋಜನವು ಸದಸ್ಯರಿಗೆ ಮಾತ್ರ, ಅದೂ ಕೂಡ ಬೆಂಗಳೂರಿನವರಿಗೆ ಮಾತ್ರ ದೊರೆಯುವಂತಿದೆ. ಈ ಪುಸ್ತಕ ಭಂಡಾರದ ವಿಷಯದಲ್ಲಿ ಈಗ ಯಾವ ನಿಯಮಗಳಿವೆಯೋ ತಿಳಿಯದು. ಇಲ್ಲವಾದರೆ ಹೊಸದಾಗಿ ಏರ್ಪಡಿಸಿ, (ತಾವು ಇರುವುದಾದರೆ ತಕ್ಕಂತೆ ತಿದ್ದಿಕೊಂಡು) ಹೊರವೂರುಗಳ ಸದಸ್ಯರಿಗೂ ಉಪಕಾರಿಯಾಗುವಂತೆ ಪುಸ್ತಕಭಂಡಾರದ ನಿಯಮಗಳನ್ನು ಮಾಡುವುದು ಅಗತ್ಯವು. ಅಂಚೆಯ ವೆಚ್ಚವನ್ನು ಸಹಿಸಲೊಪ್ಪುವ ಹೊರವೂರಿನ ಸದಸ್ಯರಿಗೆ ಪರಿಷತ್ತಿನ ಪುಸ್ತಕಗಳು ದೊರೆಯುವಂತಿರಬೇಕು. ಹಾಗೆಯೇ ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯೂ ಅಭಿಮಾನವೂ ಹೆಚ್ಚುವಂತೆ, ಯಾರೊಬ್ಬ ವಿದ್ಯಾರ್ಥಿಯ ವಿಷಯದಲ್ಲಿ ಯಾವನೊಬ್ಬ ಸದಸ್ಯನು ಉತ್ತರವಾದಿಯಾಗುವುದಾದರೆ ಅಂಥ ವಿದ್ಯಾರ್ಥಿಯನ್ನು ವರ್ಷಕ್ಕೆ ಒಂದು ರೂಪಾಯಿ ವರ್ಗಣಿ

ಕೊಟ್ಟು ಪುಸ್ತಕಭಂಡಾರದಿಂದ ಪುಸ್ತಕಗಳನ್ನು ಎರವಲಾಗಿ ಕೊಂಡು ಹೋಗಲು ಅವಕಾಶ ಕಲ್ಪಿಸಿದರೆ ಚೆನ್ನಾಗಿರುವುದು. ಇವರನ್ನು ವಿದ್ಯಾರ್ಥಿ-ಚಂದಾದಾರ (Student subscriber) ರೆಂದು ಕರೆಯಬಹುದು, ಮತ್ತು ಇವರು ವಾಸ್ತವವಾಗಿ ೧೫ ರಿಂದ ೨೦ ವರ್ಷಕ್ಕೊಳಪಟ್ಟ ವಿದ್ಯಾರ್ಥಿಗಳಾಗಿರಬೇಕೆಂದು ಗೊತ್ತು ಪಡಿಸಬಹುದು.

(iv) ಮೈಸೂರು ಕಂಪನಿಗಳ ರೆಗ್ಯುಲೇಷನ್‌ಗಳ ಮೇರೆಗೆ ಪರಿಷತ್ತು ಈಗ ರಿಜಿಸ್ಟರು ಮಾಡಲ್ಪಟ್ಟಿರುವುದಷ್ಟೇ. ಬ್ರಿಟಿಷ್ ಇಂಡಿಯಾದಲ್ಲಿಯೂ ಇದೇ ರೀತಿ ರಿಜಿಸ್ಟರು ಮಾಡಲ್ಪಡದಿದ್ದರೆ ಉಪಯೋಗವಾಗಲಾರದೆಂದು ಕೆಲವರು ಅಭಿಪ್ರಾಯ ಪಡುತ್ತಿರುವರು. ಈ ವಿಷಯವು ಹೊರವೂರುಗಳ ಸದಸ್ಯರಿಂದ ನಿರ್ಣಯಿಸಲ್ಪಡತಕ್ಕದಾಗಿದೆ.

(v) ಕಾ. ಸಿ. ಮಂಡಲಿಗೆ ಸದಸ್ಯರುಗಳನ್ನು ಚುನಾಯಿಸುವುದಕ್ಕಾಗಿ ಆರು ಚುನಾವಣೆಯ ಮಂಡಲ (Electoral circles) ಗಳೇರ್ಪಟ್ಟಿವೆ (೯ನೇ ನಿಬಂಧನೆ) ಆದರೆ, ಮದ್ರಾಸು ಮುಂಬಯಿ ಮತ್ತು ಮೈಸೂರು ಮಂಡಲಗಳಲ್ಲಿ ಮಾತ್ರ ಪ್ರತಿಯೊಂದಕ್ಕೂ ಆರಿಸಿಕೊಡಲರ್ಹರಾದ ಅಷ್ಟು ಸದಸ್ಯರಿರುವರೇ ವಿನಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು, ಹೈದರಾಬಾದು ಮತ್ತು ಕೊಡಗು ಸೀಮೆಯಿಂದ ಒಂದೊಂದಕ್ಕೆ ಐದು ಮಂದಿಯಂತೆ ಕೂಡ ಸದಸ್ಯರಿರುವುದಿಲ್ಲ. ಒಂದೆರಡು ಸಂಗತಿಗಳಲ್ಲಿ ಸದಸ್ಯರಿಲ್ಲದೇನೆ ಪ್ರತಿನಿಧಿಗಳು ಕೂಡಲ್ಪಟ್ಟಿರುವರು. ಇಂಥ ಸ್ಥಿತಿಯಲ್ಲಿ ಅವುಗಳಿಗೆ ಪ್ರತ್ಯೇಕವಾಗಿ ಪ್ರತಿನಿಧಿಗಳನ್ನಾರಿಸಗೊಡುವುದು ಯುಕ್ತವೆಂದು ನನಗೆ ತೋರುವುದಿಲ್ಲ. ಹೀಗಾದುದರಿಂದ, ಒಂದು ಬಾರಿಗೆ ಏರ್ಪಡಿಸಿದ ಮಂಡಲಗಳನ್ನು ಕಡಿಮೆಮಾಡುವುದು ಕೆಲವರಿಗೆ ಆಕ್ಷೇಪಕರವಾಗಿ ತೋರಬಹುದಾದರೂ, ಯಾವುದೊಂದು ಮಂಡಲದಿಂದ ಆರಿಸಿಕೊಡಲು ೧೦ ಮಂದಿ ಸಭಾಸದರಾದರೂ ಇರುವಲ್ಲಿ ವಿನಾ ಆ ಮಂಡಲಗಳಿಂದ ಪ್ರತ್ಯೇಕವಾಗಿ ಪ್ರತಿನಿಧಿಗಳನ್ನಾರಿಸತಕ್ಕದ್ದಲ್ಲವೆಂದೂ, ಅದುವರೆಗೆ ಆ ಮಂಡಲದವರು ಸಮೀಪವಾದ ಬೇರೆ ಮಂಡಲದೊಂದಿಗೆ ಒಟ್ಟಾಗಿ (ಉದಾ:- ಬೊಂಬಾಯಿಯವರೂ,

ದ. ಕ. ಸಂಸ್ಥಾನದವರೂ ಒಟ್ಟಾಗಿ ೧೦ ಮಂದಿಯನ್ನು, ಮದ್ರಾಸು ಮತ್ತು ಕೊಡಗು ಒಟ್ಟಾಗಿ ೮ ಮಂದಿಯನ್ನು) ಆರಿಸತಕ್ಕದೆಂದೂ ನಿಬಂಧಿಸಬಹುದು. ಹಾಗೆಯೇ ಈಗ ಏರ್ಪಟ್ಟ ಮಂಡಲಗಳೊಳಗೆ ಯಾವುದೊಂದು ವಿಶಿಷ್ಟ (Special) ಭಾಗದ[illegible]ಗೆ ತ[illegible] ಸಂತಿಷ್ಟು (ಉದಾ—೫೦೦) ಮಂದಿ ಸದಸ್ಯರಿದ್ದರೆ (ಮತ್ತು [illegible]) ಆ ಮಂಡಲವನ್ನು ವಿಭಾಗಿಸಿ ಆಯಾ ಭಾಗ[illegible] [illegible] ಆರಿಸತಕ್ಕದೆಂದೂ ನಿಬಂಧಿಸಬಹುದು. ಹೇಗೆಂದರೆ, ಮೈಸೂರಿನ ೮ ಜಿಲ್ಲೆಗಳೊಳಗೆ ೫೦೦ ಸದಸ್ಯರಿದ್ದು ಅವರೊಳಗೆ ಮಲೆನಾಡಿನ ೪ ಜಿಲ್ಲೆಗಳಿಂದಲೇ [illegible] ಮಂದಿಯಿದ್ದರೆ ಮತ್ತು ಅವರು ಅಪೇಕ್ಷಿಸಿದರೆ ಆ ಭಾಗದವರೇ ಪ್ರತ್ಯೇಕವಾಗಿ [illegible] ಪ್ರತಿನಿಧಿಗಳನ್ನು ಉಳಿದ ಜಿಲ್ಲೆಗಳು ಉಳಿದ [illegible] ಪ್ರತಿನಿಧಿಗಳನ್ನು ಆರಿಸಿಕೊಳ್ಳಲು ಆಗುವಂತಿರಬೇಕು.

(vi) ಕನ್ನಡ ಪುಸ್ತಕಗಳನ್ನು ಸ್ವಂತವೆಚ್ಚದಿಂದ ಪ್ರಕಾಶಗೊಳಿಸತಕ್ಕ ಪ್ರಕಾಶಕ (Publishers) ಇಲ್ಲವಷ್ಟೇ ಅಲ್ಲದೆ, ಕರ್ತೃಗಳು ತಾವೇ ವೆಚ್ಚ ಮಾಡಿ ಪ್ರಕಟಗೊಳಿಸಿರುವ ಪುಸ್ತಕಗಳನ್ನು ಕೂಡ ಇಟ್ಟುಕೊಂಡು ಮಾರಾಟಮಾಡಿ ಉತ್ಪನ್ನವಾದ ಹಣವನ್ನು ಕಮ್ಮಿ ಕಮಿಷನ್ ಕಳೆದು, ಕರ್ತೃವಿಗೆ ತಪ್ಪದೆ ಕೊಡತಕ್ಕ ಪುಸ್ತಕವ್ಯಾಪಾರಿಗಳು ಕೂಡ ಕಡಿಮೆಯೇ. ಹೀಗೆ ಗ್ರಂಥಲೇಖಕರಿಗೆ ಇದೊಂದು ದೊಡ್ಡ ಅಡಚಣೆಯಾಗಿದೆ. ಆದುದರಿಂದ ಪರಿಷತ್ತಿನವರೇ ಒಂದು ಪುಸ್ತಕ ವಿಕ್ರಯದ ಶಾಖೆಯನ್ನೇರ್ಪಡಿಸಿಕೊಂಡು ಕನ್ನಡ ಪುಸ್ತಕಗಳನ್ನು ಮಟ್ಟಿಗಾದರೂ ಮಾರತೊಡಗಿದ ಪಕ್ಷದಲ್ಲಿ ಪರಿಷತ್ತಿಗೂ ಗ್ರಂಥಕರ್ತೃಗಳಿಗೂ ಲಾಭವಾಗುವುದು ಸಾಧ್ಯ[illegible]ವಿದೆ. [illegible] ನಕ್ಕೂ ತುಂಬ ಸಹಾಯವಾಗದಿರದು [illegible] ಸದಸ್ಯರ ಒಂದು ಉಪಸಂಘವನ್ನೇರ್ಪಡಿಸಿ ಅವರ ಮೇಲ್ವಿಚಾರಣೆಗೆ ಈ ಶಾಖೆಯನ್ನೊಪ್ಪಿಸಬಹುದು. ಕಾಲಾಂತರದಲ್ಲಿ ವ್ಯಾಪಾರವು ಬಹಳ

ವಾಗಿ ಹೆಚ್ಚಿದ ಪಕ್ಷದಲ್ಲಿ ಪ್ರತ್ಯೇಕವಾದ ನೌಕರರ ಸಿಬ್ಬಂದಿಯನ್ನು (Establishment) ಕೂಡ ಇಡಬಹುದು. ತಕ್ಕ ನಿಬಂಧನೆಗಳನ್ನು ಮಾಡಿ ಈ ಕೆಲಸವನ್ನು ಕೈಕೊಂಡರೆ ಇದರಿಂದ ಯಾವ ಅಪಾಯವೂ ಬಾರದು. ಪರಿಷತ್ತಿಗೆ [illegible] ಒಂದು [illegible] [illegible].

[illegible] [illegible] [illegible] [illegible]. [illegible] ಇಷ್ಟು ಅಲ್ಲದೆ [illegible] (Novelty) [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]

ವಾಗುವಂತೆಯೂ ಮಾಡಬಹುದಾಗಿರುವ ಕೆಲಕೆಲವು ಸೂಚನೆಗಳನ್ನು ಯಥಾಮತಿಯಾಗಿ ಈ ಕೆಳಗೆ ಕೊಟ್ಟಿರುವೆನು:—

(i) ಸಮ್ಮೇಳನಕ್ಕಾಗಿ ಬರುವ ಪ್ರತಿನಿಧಿಗಳು ಪರಿಷತ್ತಿನ ಸದಸ್ಯರು ಮಾತ್ರವಲ್ಲವಾದರೂ ಸಮ್ಮೇಳನಕ್ಕೆ ಪರಿಷತ್ತಿನ [illegible]

(ii) ಪರಿಷತ್ತಿನ [illegible] (Standing Committee) [illegible] ಸಮ್ಮೇಳನವು [illegible]

ಕರೊಡನೆ ಸ್ನೇಹವುಂಟಾಗಲು ಸಾಧ್ಯವಾಗುವುದು. ಹೀಗಿರುವುದರಿಂದ ಮೈಸೂರಿನ ೮ ಜಿಲ್ಲೆಗಳು, ಬೊಂಬಾಯಿಯ ೪ ಜಿಲ್ಲೆ, ಮದ್ರಾಸಿನ ೨ ಜಿಲ್ಲೆ, ಹೈದರಾಬಾದು ೧, ಕೊಡಗು ೧— ಅಂತು ೧೬ ಮಂಡಲಗಳನ್ನೇ ಹಿಡಿಕೊಂಡು, ಸಾಧ್ಯವಾದ ಹಾಗೆ ಈ ಕ್ರಮಾನುಬಂಧದಲ್ಲಿಯೂ ಪರ್ಯಾಯದಿಂದ ಸಮ್ಮೇಳನವು ನಡೆಯಲು ಅನುಕೂಲಪಡಿಸಬೇಕು; ಮತ್ತು ಒಂದುವರ್ಷ ಸಮ್ಮೇಳನವು ನಡೆದಲ್ಲಿ ಪುನಃ ೧೬ ವರ್ಷ ದಾಟುವ ವರೆಗಾದರೂ ಇನ್ನೊಂದು ನಡೆಯದಂತೆ ನೋಡಿಕೊಳ್ಳಬೇಕಾಗುವುದು.

(iii) ಒಂದು ಸಮ್ಮೇಳನವು ನಡೆಯುವ ಕಾಲದಲ್ಲಿಯೇ ಅದರ ಮುಂದಿನ ಸಮ್ಮೇಳನವು ಎಲ್ಲಿ ನಡೆಯತಕ್ಕದೆಂಬ ವಿಷಯವು ಗೊತ್ತಾಗಬೇಕು. ಬೇರೆ ಬೇರೆ ಜಿಲ್ಲೆಗಳಿಂದ ಬರುವಂಥ ಸದಸ್ಯರು ತಮ್ಮ ತಮ್ಮ ಜಿಲ್ಲೆಯ ಅನುಕೂಲ ಪ್ರತಿಕೂಲಗಳನ್ನು ಮುಂದಿಟ್ಟು ಆಲೋಚಿಸಿಕೊಂಡು ಸಮ್ಮೇಳನಕ್ಕೆ ಆಹ್ವಾನವನ್ನು ಕೊಡಬೇಕು, ಮತ್ತು ಮುಂದಿನ ಸಭೆಯು ಆಲೋಚಿಸಿ ಯುಕ್ತವೆಂದು ಕಂಡ ಒಂದರ ಆ ಆಮಂತ್ರಣವನ್ನು ಸ್ವೀಕರಿಸಬೇಕು. ಈ ಮೇರೆಗೆ ಮುಂದಿನ ಸಮ್ಮೇಳನದ ಸ್ಥಳವು ನಿರ್ಧರಿಸಲ್ಪಟ್ಟ ಬಳಿಕ ಆ ಜಿಲ್ಲೆಯ ಸದಸ್ಯರು ಕೆಲವು ತಿಂಗಳೊಳಗಾಗಿ ಅಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಕೂಡಿಸಿ, ಸ್ವಾಗತಮಂಡಳಿ (Reception Committee) ಎಂಬ ಒಂದು ಸಂಘವನ್ನು ಆದರ ಕಾರ್ಯಕಾರಿಮಂಡಲವನ್ನು ಸ್ಥಾಪಿಸಿ ಅದಕ್ಕೆ ಪ್ರತಿಷ್ಠಿತರೂ ಸಮರ್ಥರೂ ಆದ ಅಧಿಕಾರಿಗಳನ್ನು ನೇಮಿಸಬೇಕು. ಈ ಅಧಿಕಾರಿಗಳು [illegible] ತಮ್ಮ ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಿಗೆ ಹೋಗಿ ಸಾರ್ವಜನಿಕ ಉಪನ್ಯಾಸಗಳಿಂದಲೂ ಖಾಸಗಿ ಸಂಭಾಷಣೆಗಳಿಂದಲೂ ಮಹಾಜನರಿಗೆ [illegible] ಸಮ್ಮೇಳನದ ಪ್ರಯೋಜನಗಳನ್ನು ಮನದಟ್ಟಾಗುವಂತೆ ತಿಳಿಯ ಹೇಳಬೇಕು; ಮತ್ತು ಸಂಪನ್ನರಾದವರಿಂದ ಧನಸಹಾಯವನ್ನು ಅಪೇಕ್ಷಿಸಬೇಕು. ಒಂದು ಸಮ್ಮೇಳನವು ಚೆನ್ನಾಗಿ ನಡೆಯಬೇಕಾದರೆ ಸುಮಾರು [illegible] ರೂ. ತಗಲಬಹುದೆಂದು ತೋರುವುದು. ಆದರೆ ಮೇಲೆ ಹೇಳಿದಂತೆ ಕ್ರಮವಾಗಿ ಕೆಲಸ ಮಾಡಿದರೆ, ಎಲ್ಲಿಯೂ ೧೦-೧೬ ವರ್ಷಕೊಮ್ಮೆ [illegible]

ನವಲ್ಲಿ ಒಂದೆರಡುಬಾರಿ) ನಡೆಯತಕ್ಕ ಸಮಾರಂಭಕ್ಕೋಸ್ಕರ ಅಷ್ಟು ಹಣವನ್ನು ಒಂದೊಂದೇ ಜಿಲ್ಲೆಯಲ್ಲಿ ಕೂಡ ಒಟ್ಟುಗೂಡಿಸಲು ಪ್ರಯಾಸವಾಗಲಾರದು ಕೊನೆಗೆ ಧನಬಲವು ಕಡಿಮೆಯಿರುವ ಸಣ್ಣ ಜಿಲ್ಲೆಗಳು ೨-೩ ಒಟ್ಟುಸೇರಿಯಾದರೂ ಈ ಕಾರ್ಯವನ್ನು ಸಾಧಿಸಿಕೊಳ್ಳಬಹುದಾಗಿದೆ. ಹೀಗೆ ದಾನ (Donation) ರೂಪವಾಗಿ ಹಣ ಕೂಡಿಸುವುದಿಷ್ಟೇ ಅಲ್ಲದೆ, ಸ್ವಾಗತಮಂಡಲಿಯ ಸದಸ್ಯರಾಗುವವರು ಕೂಡ ಒಬ್ಬೊಬ್ಬರು ೨ ಅಥವಾ ಹೆಚ್ಚು ರೂಪಾಯಿಯಂತೆ ಫೀಸು ಕೊಡಬೇಕೆಂದು ಗೊತ್ತುಪಡಿಸಬಹುದು. ಇಷ್ಟರಿಂದಲೂ ಸಾಕಾದಷ್ಟು ಹಣವು ಹುಟ್ಟಲಿಲ್ಲವಾದ ಸಂದರ್ಭದಲ್ಲಿ ಪರಿಷತ್ತಿನ ಸದಸ್ಯರಲ್ಲಿ ಪರಪ್ರಾಂತ್ಯದ ಸಂಪನ್ನರಾದವರನ್ನು ಪ್ರಾರ್ಥಿಸಿ ಅವರ ಸಹಾಯವನ್ನೂ ಸ್ವಲ್ಪಮಟ್ಟಿಗೆ ಪಡೆಯಬಹುದು. ಇನ್ನು ಸಮ್ಮೇಳನದ ಸಹಾಯಾರ್ಥವಾಗಿ ನಾಟಕಾದಿಗಳನ್ನು ಆಡಿಯೂ ಒಂದಿಷ್ಟು ಹಣವನ್ನು ಗಳಿಸಬಹುದು. ಹೀಗೆಲ್ಲ ಮಾಡಿದ ಬಳಿಕ ಧನದ ಕೊರತೆಯು ಉಳಿಯುವ ಸಂಭವವೇ ಇರಲಾರದು. ಆದರೆ ಈ ಕೆಲಸದಲ್ಲಿ ಪರಿಷತ್ತಿನ ಆಯಾ ಪ್ರಾಂತ್ಯದ ಸದಸ್ಯರೇ ಮುಖ್ಯವಾಗಿ ಭಾರವನ್ನು ವಹಿಸತಕ್ಕದೆಂದು ನಾನು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ.

(iv) ಇದೇ ವೇಳೆಗೆ, ಸಮ್ಮೇಳನದಲ್ಲಿ ನಡೆಯತಕ್ಕ ಕಾರ್ಯಗಳ, ಅದಕ್ಕಾಗಿ ಬರುವ ಪ್ರತಿನಿಧಿಗಳ ಮತ್ತು ಪ್ರೇಕ್ಷಕರ, ಇಳಿಯುವ ಸ್ಥಳದ ಮತ್ತು ಊಟ ಉಪಚಾರಗಳ ಹಾಗೂ ಸಭಾಮಂಟಪದ ವಿಷಯವಾಗಿ ಸಹ ಕಾರ್ಯಕಾರಿ ಮಂಡಲದಲ್ಲಿ ಆಲೋಚನೆ ನಡೆಯುತ್ತಿರಬೇಕು. ಏನೆಲ್ಲ ಕೆಲಸಗಳು ಹೇಗೆ ಮುಂದರಿಸಿ ಹೋಗುತ್ತಿವೆಯೆಂಬುದು ಸರ್ವರಿಗೂ ತಿಳಿದು ಬರುವಂತೆ ಯಾವತ್ತು ಸಮಾಚಾರಗಳನ್ನು ಆಗಿಂದಾಗ ವೃತ್ತಪತ್ರಿಕೆಗಳ ಮೂಲವಾಗಿ ಪ್ರಸಿದ್ಧಗೊಳಿಸುತ್ತಿರಬೇಕು. ಸಮ್ಮೇಳನವು ನಡೆಯತಕ್ಕ ಪ್ರಾಂತ್ಯದಿಂದ ಸಂಭಾವಿತರಾದ ಕನಿಷ್ಠಪಕ್ಷ ೨೦೦ ಜನರಾದರೂ ಪ್ರತಿನಿಧಿಗಳಾಗಿ ಬರುವಂತೆ ವ್ಯವಸ್ಥೆ ಮಾಡಬೇಕು. ದೂರ ಪ್ರಾಂತ್ಯಗಳಿಂದ ಬರುವವರ ಸಂಖ್ಯೆಯು ಕಡಿಮೆಯಾಗಿಯೇ ಇರುವುದಾದರೂ ಕಳುಹಿಸುವ ಆಮಂತ್ರಣಗಳ ಸಂಖ್ಯೆಯು ಮಾತ್ರ ಕಡಿಮೆಯಾಗಿರಬಾರದು. ಪರಪ್ರಾಂತ್ಯ

ಗಳ ಒಂದೊಂದು ಜಿಲ್ಲೆಗೆ (ಪರಿಷತ್ತಿನ ಸದಸ್ಯರ ವಿನಾ) ೧೦೦ಮಂದಿಗಾದರೂ ಆಹ್ವಾನಪತ್ರಿಕೆಗಳು ಹೋಗಿರಬೇಕು. ಇದಕ್ಕಾಗಿ ಆಯಾ ಪ್ರಾಂತ್ಯದ ಉತ್ಸಾಹಶಾಲಿಗಳಾದ ಸದಸ್ಯರಿಂದ ಜಿಲ್ಲೆಗೆ ೨೦೦ ರಂತೆ ಹೆಸರುಗಳ ಪಟ್ಟಿಗಳನ್ನು ಮೂರುತಿಂಗಳಿಗೆ ಮೊದಲೇ ತರಿಸಿಕೊಳ್ಳಬೇಕು. ಇಂಥ ಪಟ್ಟಿಗಳಲ್ಲಿ ಆಯಾ ಜಿಲ್ಲೆಯ ಪ್ರಸಿದ್ಧರಾದ ಪಂಡಿತರು, ಗ್ರಂಥಲೇಖಕರು, ದೊಡ್ಡ ಉದ್ಯೋಗಸ್ಥರು, ವೈದ್ಯರು ವಕೀಲರು ಮೊದಲಾದ ಸ್ವತಂತ್ರೋದ್ಯೋಗಿಗಳು, ವಿದ್ಯಾವಂತರಾದ ಶ್ರೀಮಂತರು, ವರ್ತಕರು ಮತ್ತು ಜಮೀನುದಾರರು, ದೇಶಭಾಷಾಭಿಮಾನಿಗಳು ಮತ್ತು ವಿದ್ಯಾವತಿಯರಾಗಿ ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಗಳಾಗುತ್ತಿರುವ ಸ್ತ್ರೀಯರ ಹೆಸರುಗಳಿರತಕ್ಕದ್ದು. ಆಮಂತ್ರಣಗಳನ್ನು ಜಿಲ್ಲೆಯ ಮುಖ್ಯ ಪಟ್ಟಣಗಳಿಗೆ ಮಾತ್ರ ಹಳ್ಳಿಹಟ್ಟಿಗೂ ಕಳಿಸದಂತೆ ಜಾಗರೂಕರಾಗಿರಬೇಕು. ಈ ಕಾರ್ಯದಲ್ಲಿ ಸ್ವಾಗತಮಂಡಲಿಯವರು ಪರಿಷತ್ತಿನ ಕಾರ್ಯದರ್ಶಿಯವರ ಸಹಾಯವನ್ನು ಪಡೆಯಬಹುದು. (ಇಂಥ ಪಟ್ಟಿಗಳನ್ನು ಪರಿಷತ್ತಿನ ಕಾರ್ಯದರ್ಶಿಗಳು ಆಗಿಂದಾಗ ತರಿಸಿ ಇಟ್ಟುಕೊಂಡು ಆಗಿಂದಾಗ ಸರಿಪಡಿಸಿಕೊಳ್ಳುತ್ತಿದ್ದರೆ ಕೆಲಸವು ಬಹು ಸುಲಭವಾಗಿ ಜರಗುವುದು.) ಇಂಥ ಪಟ್ಟಿಗಳಿಂದ ಸ್ವಾಗತಮಂಡಲಿಯವರು ತಮಗೆ ಬೇಕಾದಷ್ಟು ಹೆಸರುಗಳನ್ನು ಆಯ್ದುಕೊಂಡು ಆಮಂತ್ರಣಗಳನ್ನು ಕಳುಹಿಸಬೇಕು.

(v) ಕಳುಹಿಸಿದ ಆಮಂತ್ರಣ ಪತ್ರಿಕೆಯ ಸಂಗಡಲೇ ಸಮ್ಮೇಳನವು ನಡೆಯತಕ್ಕ ಪಟ್ಟಣಕ್ಕೆ ಹೋಗುವದಾರಿ, ಉಳಿದುಕೊಳ್ಳುವುದಕ್ಕಾಗಿ ಮಾಡಿರುವ ಏರ್ಪಾಡುಗಳು ಮತ್ತು ಹೋಗುವವರು ತಿಳಿಯಬೇಕಾಗಿರುವ ಬೇರೆ ಯಾವುವಾದರೂ ವಿಶೇಷಗಳನ್ನು ವಿವರವಾಗಿ ತಿಳಿಸುವ ಒಂದು ಪತ್ರಿಕೆಯೂ ಇರತಕ್ಕದು. ಈ ವಿಷಯಗಳನ್ನು ಬೇರೆಬೇರೆ ಕನ್ನಡ ಪತ್ರಿಕೆಗಳ ಮೂಲವಾಗಿಯೂ ಆಗಿಂದಾಗ ತಿಳಿಸುವುದು ಅಗತ್ಯವು. ಸಮ್ಮೇಳನಗಳ ಮೂಲವಾಗಿ ಸಾಹಿತ್ಯವರ್ಧನವೊಂದೇ ಆಗುವುದೆಂದು ತಿಳಿಯತಕ್ಕದ್ದಲ್ಲ. ಬೇರೆಬೇರೆ ಭಾಗಗಳಿಂದ ಬರುವ ಭಾಷಾಭಿಮಾನಿಗಳಲ್ಲಿ ಆಂತರಿಕವಾದ ಸ್ನೇಹವೂ ತಾವೆಲ್ಲ ಒಂದೇ ಜನರೆಂಬ ಭಾವನೆಯೂ

ಉಂಟಾಗಲು ಅವಕಾಶವಿದೆ. ಆದುದರಿಂದ ಊಟ ಬಿಡಾರಗಳ ಏರ್ಪಾಡುಗಳನ್ನು ಮಾಡುವಲ್ಲಿ ಪರಪ್ರಾಂತಗಳಿಂದ ಬರುವ ಸಮಸ್ತರೂ ಒಂದೇ ಕಡೆಯಲ್ಲಿ ನಿಲ್ಲಲು ಅನುಕೂಲವಾಗುವಂತೆ ದಿನಂಪ್ರತಿಯ ವೆಚ್ಚದ ದರಗಳನ್ನು ಸಾಧ್ಯವಾದಷ್ಟು ಕಡಿಮೆಯಾಗಿ ಇಡಬೇಕು. ದರಗಳನ್ನು ಹೆಚ್ಚಾಗಿ ಇಟ್ಟುಕೊಂಡು ಕೊಡಲು ಶಕ್ತಿಯಿಲ್ಲವೆಂದು ಹೇಳುವವರಿಗೆ ಮಾತ್ರ ಕಡಿಮೆ ಮಾಡುವುದೆನ್ನುವುದು ಕೇವಲ ಅವಮಾನಕರವು. ದರಗಳು ಎಲ್ಲರಿಗೂ ಒಂದಾಗಿರಬೇಕು. ಸರಳಜೀವನವೇ ಮುಖ್ಯವಾಗಿರುವ ಕನ್ನಡಿಗರಿಗೆ ವಿಶೇಷವಾದ ಸೌಕರ್ಯಗಳು ಬೇಕಾಗಿಲ್ಲ. ದಿನಕ್ಕೆ ಒಂದು ರೂಪಾಯಿಗಿಂತ ಹೆಚ್ಚಾಗಿ ನಿಶ್ಚಯಿಸಿದರೆ ಅನೇಕರು ಈ ಸಮ್ಮೇಳನದ ಪ್ರಯೋಜನವನ್ನು ಹೊಂದುವುದಕ್ಕೆ ಆಗದೆ ಉದ್ದೇಶವು ಕೆಡುವುದು. ಆದರೆ ಧನಸಂಪನ್ನರಾದ ಕೆಲವರು ಅಸಾಧಾರಣವಾದ ಅನುಕೂಲತೆಗಳನ್ನು ಅಪೇಕ್ಷಿಸಿದ ಪಕ್ಷದಲ್ಲಿ ಅವರಿಂದ ಮಾತ್ರ ಹೆಚ್ಚಿಗೆ ಹಣವನ್ನು ತೆಗೆದುಕೊಳ್ಳಬಹುದು.

(VI) ಕರ್ನಾಟಕ ಕುಂತಳದಲ್ಲಿಯೂ ದೇಶಾಂತರದಲ್ಲಿಯೂ ಕೆಲ ಕೆಲವರು ಬಹು ಸ್ವಲ್ಪ ವರಮಾನವುಳ್ಳವರಾಗಿರುವರು. ಇಂಥವರು ಪ್ರತಿವರ್ಷವೂ ಸ್ವಂತ ವೆಚ್ಚದಿಂದ ದೂರದೂರದಲ್ಲಿ ನಡೆಯುವ ಸಮ್ಮೇಳನಗಳಿಗೆ ಹೋಗಲು ಸಾಧ್ಯವಲ್ಲವಾದುದರಿಂದ ಇಂಥವರ ವಿಷಯದಲ್ಲಿ ವಿಶೇಷವಾದ ಏನಾದರೂ ಏರ್ಪಾಡು ಇರಬೇಕು. ಸಾಧ್ಯವಾದರೆ ಅವರ ಪ್ರಯಾಣದ ವೆಚ್ಚವನ್ನು ಪೂರ್ತಿಯಾಗಿ ಅಥವಾ ಒಂದು ಭಾಗದಷ್ಟಾದರೂ ಸ್ವಾಗತ ಮಂಡಲಿಯವರು ಕೊಡಬೇಕು. ಅವರಿಂದ ಊಟದ ವೆಚ್ಚವನ್ನು ಕೇಳತಕ್ಕದ್ದಲ್ಲ. ಆಂಧ್ರಸಾಹಿತ್ಯಪರಿಷತ್ತಿನವರು ಇಂಥ ಕ್ರಮವನ್ನು ಇಟ್ಟುಕೊಂಡಿರುವರು. ಆದರೆ ಇಂಥ ಸಾಹಾಯ್ಯಗಳನ್ನು ಯಾರು ಯಾರಿಗೆ ಕೊಡತಕ್ಕದ್ದೆಂಬುದನ್ನು ಮಾತ್ರ ಮೊದಲೇ ನಿಷ್ಪಕ್ಷಪಾತವಾಗಿ ಆಲೋಚಿಸಿ ಗೊತ್ತುಪಡಿಸಬೇಕು. ಈ ಏರ್ಪಾಡನ್ನು ಯಾವತ್ತೂ ಕರ್ನಾಟಕ ದೇಶಕ್ಕೆ ಅನ್ವಯಿಸುವಂತೆ ಮಾಡಲು ಧನಾನುಕೂಲತೆಯಿಲ್ಲವೆಂದಾದರೆ ಆಯಾ ವರ್ಷ ಯಾವಲ್ಲಿ ಸಮ್ಮೇಳನವು ನಡೆಯುವುದೋ ಆ ಪ್ರಾಂತ್ಯದ ಪಂಡಿತರ ಮಟ್ಟಿಗಾದರೂ ಮಾಡುವುದು ಅವಶ್ಯವಾಗಿದೆ. ಇತರರು ಸಾವಿರ

ಗಟ್ಟಲೆಯಾಗಿ ಬಂದು ತಾನೇ ಏನು ? ಪಂಡಿತರೂ ಲೇಖಕವರ್ಗದವರೂ ಅಲಂಕರಿಸದ ಸಮ್ಮೇಳನವು ದೇವರಿಲ್ಲದ ಗುಡಿಯಂತೆ ನಿರರ್ಥಕವೆಂಬುದನ್ನು ಮರೆಯತಕ್ಕದಲ್ಲ.

(vii) ಸಮ್ಮೇಳನದಲ್ಲಿ ಆಗತಕ್ಕ ನಿರ್ಣಯಗಳೇನೆಂಬುದನ್ನು ಸ್ವಾಗತಕಮಿಟಿಯವರು, ಅವಶ್ಯವಾದರೆ ಇತರರಿಂದಲೂ ಅಭಿಪ್ರಾಯಗಳನ್ನು ತರಿಸಿಕೊಂಡು, ಮುಂದಾಗಿಯೇ ಆಲೋಚಿಸಿರಬೇಕು. ಅವುಗಳಲ್ಲಿ ಬೇಕಾದುವುಗಳನ್ನು ಆಯ್ದುಕೊಂಡು ಬೇಕಾದ ರೂಪದಲ್ಲಿ ಸಮ್ಮೇಳನದ ಮುಂದಿಡುವ ಕೆಲಸವು ವಿಷಯನಿರ್ಧಾರಕ ಉಪಸಭೆ (Subjects committee) ಯವರದಾಗಿರುವುದು. ಸಮ್ಮೇಳನಕಾಲದಲ್ಲಿ ಓದುವುದಕ್ಕಾಗಿ ಉಪನ್ಯಾಸಾದಿಗಳನ್ನು ತರಿಸಿಕೊಳ್ಳುವ ಕಾರ್ಯವನ್ನು ಪರಿಷತ್ತಿನ ಕಾರ್ಯದರ್ಶಿಗಳೇ ಅನುಕೂಲವಾಗಿ ಮಾಡಬರುವಂತಿದೆ ಆದರೆ ಸ್ವಾಗತಮಂಡಲಿಯವರು ಕೂಡ ಈ ವಿಷಯದಲ್ಲಿ ತಾವೂ ಪ್ರವರ್ತಿಸಿದರೆ ಇನ್ನಷ್ಟು ಉತ್ತಮವು. ಕಳೆದಸಲ ಉಪನ್ಯಾಸಗಳ ಸಂಖ್ಯೆಯು ಅತ್ಯಲ್ಪವಾಗಿದ್ದಿತು. ಇತರ ಸಮ್ಮೇಳನಗಳಿಗೆ ಬರುವಂತೆ ನಮ್ಮಲ್ಲಿಗೂ ೨೦-೨೫ ಪ್ರಬಂಧಗಳು ಬಂದರೆ ಚೆನ್ನಾಗಿರುವುದು. ಆದರೆ ಇವುಗಳೊಳಗೆ ಚರ್ಚಾಸ್ಪದವಾದ ಮತ್ತು ಸುಲಭಗ್ರಾಹ್ಯವಾಗತಕ್ಕವುಗಳನ್ನು ಮಾತ್ರ ಆ ಕಾಲದಲ್ಲಿ ಸಂಕ್ಷೇಪವಾಗಿ ಓದಿಸಿ ಉಳಿದುವುಗಳಲ್ಲಿ ಮುಖ್ಯವಾದುವನ್ನು ಪರಿಷತ್ಪತ್ರಿಕೆಯಲ್ಲಿ ಪ್ರಕಾಶಗೊಳಿಸಬಹುದು. ಸಮ್ಮೇಳನಕ್ಕಾಗಿ ಬಂದ ಉಪನ್ಯಾಸಗಳ ಮುಖ್ಯಾಂಶಗಳನ್ನು ಮಾತ್ರ ಪೂರ್ವದಲ್ಲಿಯೇ ಅಚ್ಚುಹಾಕಿಸಿ ಆ ಕಾಲದಲ್ಲಿ ಸದಸ್ಯರೊಳಗೆ ಹಂಚಿದರೆ ಚರ್ಚೆಯು ಅಧಿಕ ಯುಕ್ತಿಯುಕ್ತವೂ ಗಂಭೀರವೂ ಆಗದಿರದು. ಇನ್ನು, ಲೇಖಕರು ತಮ್ಮ ತಮ್ಮ ಇಷ್ಟಾನುಸಾರವಾಗಿ ಬರೆಯುವ ಲೇಖನಗಳು ಮಾತ್ರವಲ್ಲದೆ, ಪರಿಷತ್ತಿನ ಕಾ. ಸಿ. ಮಂಡಲಿಯವರು ತಾವೇ ಮುಂದಾಗಿ ಕೆಲಕೆಲವು ವಿಷಯಗಳನ್ನು ಗೊತ್ತುಪಡಿಸಿ ಆ ವಿಷಯಗಳ ಮೇಲೆ ಉಪನ್ಯಾಸಗಳನ್ನು ಬರೆದು ಕಳುಹಿಸುವಂತೆ ಪಂಡಿತರನ್ನು ಪ್ರಾರ್ಥಿಸಿಕೊಳ್ಳಬಹುದು. ಹಾಗೆಯೇ ಸಮ್ಮೇಳನದಕಾಲದಲ್ಲಿ ಒಂದೆರಡು ನಿಬಂಧ ವಾಚನ ಮತ್ತು ಚರ್ಚೆಗಳು ನಡೆದೊಡನೆ ನಡುನಡುವೆ ಒಂದೆರಡು

ನಿರ್ಣಯಗಳನ್ನು ಸಭೆಯು ಮುಂದಿಡುವ ಕಾರ್ಯವೂ ಜರಗುತ್ತಿದ್ದರೆ ಪ್ರೇಕ್ಷಕರಿಗೂ ಪ್ರತಿನಿಧಿಗಳಿಗೂ ಜುಗುಪ್ಸೆಯುಂಟಾಗದು

(Viii) ಪರಿಷತ್ತಿನ ಪ್ರಥಮ ವರ್ಷದ ವರದಿಯು ವಾರ್ಷಿಕ ಸಭಾಕಾಲದಲ್ಲಿ ಓದಲ್ಪಡುವುದಕ್ಕೆ ಬದಲಾಗಿ ಕಳೆದ ಸಾರಿ ಸಾಹಿತ್ಯ ಸಮ್ಮೇಳನದಲ್ಲಿ ಓದಲಾಯಿತು. ಸಾಹಿತ್ಯ ಸಮ್ಮೇಳನಕ್ಕೂ ಪರಿಷತ್ತಿನ ಆಡಳಿತಗಳಿಗೂ ಅಂಥ ನಿಕಟವಾದ ಸಂಬಂಧವೇನೂ ಇಲ್ಲವೆಂಬುದು ಸ್ಪಷ್ಟವಾಗಿದೆ. ಆದುದರಿಂದ ಈ ಮುಂದಾದರೂ ಅಂಥ ವರದಿಯು ಪರಿಷತ್ತಿನ ವಾರ್ಷಿಕ ಸಭೆಯಲ್ಲಿಯೇ ಓದಲ್ಪಡುವುದು ಯುಕ್ತವಾಗಿದೆ. ಆ ವರದಿಯನ್ನು ಕುರಿತು, ಅದನ್ನು ಶ್ಲಾಘಿಸಿಯೋ, ಆಕ್ಷೇಪಿಸಿಯೋ, ಹೊಸ ಸೂಚನೆಗಳನ್ನು ಮಾಡಿಯೋ, ಮಾತನಾಡುವುದಕ್ಕೆ ಪರಿಷತ್ತಿನ ಸದಸ್ಯರಿಗೆ ಅವಕಾಶವನ್ನು ಕೊಡುವುದು ಉಚಿತ ಅವಶ್ಯಕ. ಹಾಗೆಯೇ, ಆಯಾ ಕ್ಯಾಲೆಂಡರು ವರ್ಷದಲ್ಲಿ ಕರ್ಣಾಟಕದೇಶದ ಬೇರೆ ಬೇರೆ ಭಾಗಗಳಲ್ಲಿ ಉಂಟಾದ ವಾಙ್ಮಯಾಭಿವೃದ್ಧಿ, ಪ್ರಸಿದ್ಧರಾದ ಲೇಖಕರ ಮತ್ತು ಭಾಷಾಸೇವಕರ ವಿವರವಾದ ಸಮಾಚಾರಗಳು, ದೇಶಭಾಷೆಗಳ ವಿಷಯದಲ್ಲಿ ವಿದ್ಯಾಪೀಠವೇ ಮೊದಲಾದ ಕಡೆಗಳಲ್ಲಿ ಆದ ಮಾರ್ಪಾಡುಗಳು, ಇತ್ಯಾದಿ ಭಾಷೆಗೆ ಸಂಬಂಧಪಟ್ಟ ಸಾಧಕ ಬಾಧಕ ವಿಷಯಗಳನ್ನೆಲ್ಲ ಒಟ್ಟುಗೂಡಿಸಿ ಪರಿಷತ್ತಿನ ಕಾರ್ಯದರ್ಶಿಗಳು ಬರೆದ ಒಂದು ವರದಿಯನ್ನು ಸಾಹಿತ್ಯಸಮ್ಮೇಳನದ ಮುಂದೆ ಓದಬಹುದು. ಈ ಸಮಾಚಾರಗಳನ್ನು ಆಯಾ ಪ್ರಾಂತ್ಯಗಳ ಪ್ರಮುಖ ಸದಸ್ಯರ ಮೂಲಕ ತರಿಸಿಕೊಳ್ಳಬೇಕಾಗಿದೆ; ಇಂಥ ವರದಿಯಿಂದ ತುಂಬ ಪ್ರಯೋಜನವುಂಟಾಗಬಹುದು.

(ix) ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಪರಿಷತ್ತಿನ ಕಾ. ನಿ. ಮಂಡಲಿಯ ಅಧ್ಯಕ್ಷರೂ ಒಬ್ಬರೇ ಆಗಿರುವ ಕ್ರಮವು ಇತರ ಯಾವ ಸಮ್ಮೇಳನದಲ್ಲಿಯೂ ಇರುವಂತೆ ತೋರುವುದಿಲ್ಲ. ಪರಿಷತ್ತಿನ ಅಧ್ಯಕ್ಷರೂ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಸಭಾಪತಿಗಳೂ ಪ್ರತಿಪ್ರತ್ಯೇಕರಾಗಬೇಕೆಂದು ಹಿಂದೆ ೪ ನೇ ನಿಬಂಧನೆಯ ವಿಷಯವಾಗಿ ಹೇಳುವಲ್ಲಿಯೇ ಸೂಚಿಸಿರುವೆನು ಸಮ್ಮೇಳನಗಳ ಅಧ್ಯಕ್ಷರನ್ನು ಆಗಾಗ ಸ್ವಾಗತ

ಮಂಡಳಿಯವರೇ—ಬೇಕಾದರೆ ಪರಿಷತ್ತಿನ ಕಾ. ಸಿ. ಮಂಡಲಿಯ ಅಭಿಪ್ರಾಯವನ್ನು ಪಡೆದು—ನಿಶ್ಚಯಿಸಿ ಕೊಳ್ಳುವಂತಾಗಬೇಕು, ಮತ್ತು ಸಾಧ್ಯವಾದ ಮಟ್ಟಿಗೆ, ಈ ಅಧ್ಯಕ್ಷರು ಸಮ್ಮೇಳನವು ಎಲ್ಲಿ ನಡೆಯುವುದೋ ಆ ಪ್ರಾಂತ್ಯದವರಲ್ಲದ ಪ್ರಮುಖ ನಾಗರಿಕರೂ ಭಾಷಾಭಿಮಾನಿಗಳೂ ಆಗಿರಬೇಕು. ಇವರೇ ಮುಂದಿನ ಸಮ್ಮೇಳನದವರೆಗೂ ಪರಿಷತ್ತಿನ ಅಧ್ಯಕ್ಷರಾಗಿದ್ದು ಮುಂದಿನ ವಾರ್ಷಿಕ ಸಭೆಯಲ್ಲಿ ಆಗ್ರಾಸನವನ್ನು ವಹಿಸಬೇಕು. ಇವರು ಬಾರದಿದ್ದರೆ ಮಾತ್ರ ಕಾ. ಸಿ. ಮಂಡಲಿಯ ಸಭಾಪತಿಗಳು ಆ ಸ್ಥಾನವನ್ನು ಅಲಂಕರಿಸುವಂತೆ ಏರ್ಪಡಿಸಿಕೊಳ್ಳಬಹುದು.

(X) ಸಮ್ಮೇಳನವು ಎಷ್ಟು ದಿನ ನಡೆಯಬೇಕೆಂಬುದೂ ಆಲೋಚಿಸತಕ್ಕ ಮುಖ್ಯವಾದ ಒಂದು ವಿಷಯವಾಗಿದೆ. ಮೊದಲನೆಯ (೧೯೧೫) ಸಮ್ಮೇಳನವು ಮೂರು ದಿನವೆಂದು ಪ್ರಥಮತಃ ಏರ್ಪಟ್ಟರೂ ವಾಸ್ತವವಾಗಿ ನಾಲ್ಕು ದಿನ ನಡೆಯಿತು.— ೧೯೧೬ ರಲ್ಲಿ ಪರಿಷತ್ತಿನ ವಾರ್ಷಿಕಸಭೆಯು ಬೆಳಗಿನ ಹೊತ್ತು ಎರಡು ದಿನವೂ, ಸಮ್ಮೇಳನವು ಮಧ್ಯಾಹ್ನದಮೇಲೆ ಎರಡು ದಿನವೆಂದು ಮೊದಲು ಗೊತ್ತಾಗಿದ್ದರೂ ವಸ್ತುತಃ ಮೂರು ದಿನವೂ ನಡೆಯಿತು. ಎಂದರೆ, ಎರಡು ಸಲವೂ ಉದ್ದೇಶಿಸಿದುದಕ್ಕಿಂತ ಒಂದೊಂದು ದಿನ ಹೆಚ್ಚಾಗಿ ನಡೆಯಿತು. ಪ್ರಥಮ ಸಮ್ಮೇಳನದಲ್ಲಿ ಏನಾದರೂ ಗೊಂದಲವಿದ್ದಿರಬೇಕಾದರೆ ಅದಕ್ಕೆ ಅದರ ನೂತನತ್ವವೇ ಕಾರಣವಾಗಿದ್ದಿತು. ಆದರ ಇಂಥ ಯಾವ ಕಾರಣವೂ ಇಲ್ಲವಾಗಿದ್ದಾಗ್ಯೂ ಎರಡನೆಯ ಸಮ್ಮೇಳನವು ಮೈಸೂರು ಸೀಮೆಯ ಹೊರಗಿನ ಪ್ರಾಂತಗಳಿಂದ ಬಂದ ಸದಸ್ಯರ ಅತ್ಯಲ್ಪ ಸಂಖ್ಯೆಯ ದೆಸೆಯಿಂದಷ್ಟೇ ಅಲ್ಲದೆ, ಸರ್ವಥಾವಾಗಿಯೂ ಮೊದಲನೆಯದರಷ್ಟು ಶಾಂತವಾಗಿಯೂ ಅಚ್ಚುಕಟ್ಟಾಗಿಯೂ ಸಮರ್ಪಕವಾಗಿಯೂ ನಡೆಯಲಿಲ್ಲವೆಂದು ಅನೇಕರು ತುಂಬ ಅಸಮಾಧಾನಪಟ್ಟರು. ಸಮಯವು ಸಾಕಾದಷ್ಟು ಗೊತ್ತಾಗದಿದ್ದುದೇ ಇದರ ಒಂದು ಕಾರಣವಾಗಿರುವುದೆಂದು ನಾನು ಭಾವಿಸುವೆನು. ಮುಂಜಾನೆ ಮಧ್ಯಾಹ್ನವೆರಡು ಹೊತ್ತೂ ಸಭೆ ನಡೆಯುವುದು ಊರಿನವರಿಗೇ ಆಗಲಿ, ಹೊರಗಿನವರಿಗೇ ಆಗಲಿ, ಅಷ್ಟೊಂದು ಅನುಕೂಲವೆಂದು ತೋರುವುದಿಲ್ಲ. ಹೊರ

ಗಿಂದ ಬಂದವರು ಸಮ್ಮೇಳನವೊಂದಕ್ಕೇ ಎಂದು ಬರುವುದಿಲ್ಲವಾಗಿ ಹೀಗೆ ಮಾಡಿದರೆ ದಿನವೆಲ್ಲ ಇದಕ್ಕೇ ವ್ಯಯವಾಗುವುದರಿಂದ ಅವರಿಗೆ ಬೇರೆ ಯಾವ ಕೆಲಸಕ್ಕೂ ಅವಕಾಶ ದೊರೆಯುವುದಿಲ್ಲ. ಇದಲ್ಲದೆ, ಸಮ್ಮೇಳನದ ಕೆಲಸಗಳಿಗಾದರೂ ಈ ಮಾರ್ಗವಾಗಿ ಹೆಚ್ಚು ಸಮಯ ದೊರೆಯುವುದೆಂದರೆ, ಅದೂ ಇಲ್ಲ. ಆದುದರಿಂದ ಇದನಂತರದಲ್ಲಿ ಒಂದು ದಿನ ಒಟ್ಟಾಗಿ ನಡೆಯಿಸುವುದಕ್ಕಿಂತ, ವಾರ್ಷಿಕಸಭೆ ಒಂದು ದಿನವೆಂದೂ ಸಮ್ಮೇಳನವು ಆಮೇಲಿನ ಮೂರು ದಿನವೆಂದೂ ವಿಭಾಗಿಸಿಕೊಳ್ಳು ಮಾಡಿದರೆ ಒಳ್ಳೆಯದಾಗುವುದು. ವಾರ್ಷಿಕಸಭೆಯು ಒಂದು ದಿನದಲ್ಲಿಯೇ ಬಹು ಶೀಘ್ರವಾಗಿಯೂ ಮುಗಿಯುವಂತಿದೆ; ಕಾರಣಾಂತರಗಳಿಂದ ಹಾಗೆ ಮುಗಿಯದಿದ್ದರೆ ಮರುದಿನ ಸಮ್ಮೇಳನವನ್ನು ಮಧ್ಯಾಹ್ನದಲ್ಲಿ ೨ ಅಥವಾ ೩ ಗಂಟೆಗೆ ಪ್ರಾರಂಭಿಸುವಂತೆ ಮಾಡಿಟ್ಟು, ಮುಂದಿನ ದಿನದ ಕೆಲಸಗಳನ್ನು ಬೆಳಗಿನ ೮ ರಿಂದ ೯ ರ ವರೆಗೆ, ೧೦ ಅಥವಾ ೧೧ ರಿಂದ ಮಧ್ಯಾಹ್ನ ೧ ರ ವರೆಗಾಗಲೀ ನಡೆಯಿಸಬಹುದು. ಸಭೆಗಳನ್ನು ಎರಡು ಹೊತ್ತು ಸೇರಿಸುವುದಕ್ಕಿಂತ ಪ್ರತಿದಿನವೂ ೧ ರಿಂದ ೬ ರ ವರೆಗೂ, ನಡುವೆ ೧ ತಾಸು ವಿಶ್ರಾಂತಿಗಾಗಿ ಬಿಟ್ಟು, ೩ ರಿಂದ ೬ ಅಥವಾ ಬೇಕಾದರೆ ೭ ರ ವರೆಗೂ ನಡೆಯಿಸುವುದು ಉತ್ತಮ. ಪ್ರೇಕ್ಷಕರಿಗೇ ಆಗಲಿ ಪ್ರತಿನಿಧಿಗಳಿಗೇ ಆಗಲಿ ಮಧ್ಯಾಹ್ನದ ಫಲಾಹಾರವನ್ನು ಸ್ವಾಗತ ಮಂಡಲಿಯವರು ತಮ್ಮ ವೆಚ್ಚದಿಂದ ಮಾಡಿಸುವ ಅವಶ್ಯವಿಲ್ಲ; ಆದರೆ ಸಭಾಮಂಟಪದ ಸಮೀಪದಲ್ಲಿ ನಿರ್ಮಲವಾದಂಥ ಒಂದು ಫಲಾಹಾರದ ಅಂಗಡಿಯನ್ನಿಡಿಸುವುದಕ್ಕೆ ಮಾತ್ರ ಅವರು ತಪ್ಪಲಾಗದು. ಮೊದಲನೆಯ ದಿನದ ಸಮ್ಮೇಳನವು ಮಧ್ಯಾಹ್ನದ ಮೇಲೆ ಕೂಡುವುದಾದರೆ ಆ ದಿನ ಅಧ್ಯಕ್ಷರ ಭಾಷಣ, ವಾಙ್ಮಯಾಭಿವೃದ್ಧಿ ವಿಷಯವಾದ ನಿಬಂಧಗಳನ್ನು ಓದೋಣ, ವಿಷಯ ನಿರ್ಧಾರಕ ಉಪಸಂಘದ ನೇಮಕ, ಅವಕಾಶವಿದ್ದರೆ ಒಂದಿಷ್ಟು ವಿನೋದ—ಇಷ್ಟನ್ನು ಮಾತ್ರ ನಡೆಯಿಸಿ ನಿಲ್ಲಿಸಬೇಕು; ಮತ್ತು ಒಡನೆಯೇ ವಿಷಯ ನಿರ್ಧಾರಕ ಉಪಸಂಘದವರು ಮರುದಿನದ ಕಾರ್ಯಕ್ರಮವನ್ನೇರ್ಪಡಿಸಲು ತೊಡಗಬೇಕು. ಆದರೆ ಮೊದಲನೆಯ ದಿನವೂ ೧೧ ಗಂಟೆಗೇ ಸೇರಿದ ಪಕ್ಷದಲ್ಲಿ ಒಂದೆರಡು

ಉಪನ್ಯಾಸಗಳೂ ನಡೆಯಬಹುದು. ಏನಂತ ನಿರ್ಣಯಗಳು ಉಪಸಂಘದವರಿಂದ ಗೊತ್ತು ಪಡಿಸಲಾಗುವುದಕ್ಕೆ ಪೂರ್ವದಲ್ಲಿ ಸಮ್ಮೇಳನದ ಮುಂದೆ ಎಂದೂ ಬರಕೂಡದು. ಇನ್ನು, ಸಮ್ಮೇಳನದ ಎರಡುಮೂರನೆಯ ದಿನಗಳಲ್ಲಿ ಉಳಿದ "ನಿರ್ಣಯ" ಗಳನ್ನು ಮಾಡೋಣ ಉಪನ್ಯಾಸ ವಾಚನ, ಚರ್ಚೆ, ಮುಂತಾದ ಯಾವತ್ತು ವಿಷಯಗಳು ನಡೆಯಬೇಕು. ಹೀಗೆ ಕೆಲಸ ನಡೆದರೆ ಸಮ್ಮೇಳನವು ಗೊಂದಲವಿಲ್ಲದೆ ಅಚ್ಚುಕಟ್ಟಾಗಿ ನಡೆಯುವುದರಲ್ಲಿ ಸಂದೇಹವಿಲ್ಲ.

(ix) ಸಮ್ಮೇಳನವು ಮನೋಹರವೂ ಪ್ರೋತ್ಸಾಹಕರವೂ ಆಗುವಂತೆ ಮಾಡತಕ್ಕ ಇನ್ನು ಬೇರೆ ವಿಷಯಗಳೂ ಇರುವುವು. ಪರಪ್ರಾಂತ್ಯಗಳಿಂದ ಬಂದ ಕನ್ನಡಿಗರಿಗೆ ನೋಡಲು ಅವಕಾಶ ಸಿಕ್ಕುವಂತೆ ಸ್ವಾಗತಮಂಡಲಿಯವರು ತಮ್ಮ ತಮ್ಮ ಪ್ರಾಂತ್ಯಕ್ಕೆ ವಿಶೇಷವೆಂದು ತಿಳಿಯಲ್ಪಡುವ ಕನ್ನಡಗಾನ, ನಾಟಕ, ದಶಾವತಾರದಆಟ, ಹರಿಕೀರ್ತನೆ, ವೀಣಾದಿಗಳವಾದನ, ಸಕಲಿ, ಪ್ರಸಿದ್ಧರಾದ ವ್ಯಕ್ತಿಗಳ ಭಾಷಣ, ಮುಂತಾದವುಗಳನ್ನು ಸಮ್ಮೇಳನದ ಕಾಲದಲ್ಲಿ ಏರ್ಪಡಿಸಬಹುದು. ಹಾಗೆಯೇ, ಸಮೀಪದಲ್ಲಿರುವ ಪ್ರಸಿದ್ಧವಾದ (ಉದಾ—ಹಂಪೆ, ಶ್ರವಣಬೆಳಗೊಳ, ಶ್ರೀರಂಗಪಟ್ಟಣ, ಮೇಲುಕೋಟೆ, ವಿಜಾಪುರ, ಹಾಳಕೋಟೆ, ಗೇರುಸೊಪ್ಪೆ, ಗದುಗು, ತೊರವೆ, ಬಾದಾಮಿ, ಉಡುಪಿ, ಬಾರಕೂರು, ಮೂಡಬಿದುರೆ, ವೇಣೂರು ಇತ್ಯಾದಿ) ಸ್ಥಳಗಳ ಸಂದರ್ಶನಕ್ಕೂ ಅವಕಾಶ ಕಲ್ಪಿಸಿಕೊಡಬಹುದು. ಇನ್ನು, ವಾಙ್ಮಯ, ವೃತ್ತಪತ್ರಿಕೆಗಳು, ಚಿತ್ರಶಿಲ್ಪಾದಿಕಲೆಗಳು, ಮುದ್ರಣಕಲೆ, ಇವಕ್ಕೆ ಸಂಬಂಧಪಟ್ಟ ಒಂದು ಪ್ರದರ್ಶನವನ್ನು ನೆರೆಯಿಸಿದರೆ ಅದರಿಂದ ಅಮೋಘವಾದ ಪ್ರಯೋಜನವುಂಟಾಗುವುದರಲ್ಲಿ ಸಂದೇಹವಿಲ್ಲ. ಇಂಥ ವಿಶೇಷಗಳೆಲ್ಲ ಆಂಧ್ರ, ಗುರ್ಜರ, ವಂಗೀಯ ಮುಂತಾದ ಸಾಹಿತ್ಯ ಸಮ್ಮೇಳನಗಳಲ್ಲಿ ನಡೆಯುತ್ತಿರುವುದನ್ನು ತಿಳಿದೇ ಇಲ್ಲಿ ಸೂಚಿಸಿರುವೆನು.

ಇಷ್ಟೇ ಅಲ್ಲದೆ, ಕರ್ನಾಟಕಸಾಹಿತ್ಯ ಸಂಬಂಧವಾದ ಪರೀಕ್ಷೆಗಳನ್ನು ನಡೆಯಿಸಿ ಉತ್ತಮವಾಗಿ ತೇರಿದವರಿಗೂ, ಆಯಾ ವರ್ಷದಲ್ಲಿ

ಸರ್ವೋತ್ತಮವಾದ ಕರ್ನಾಟಕಪುಸ್ತಕಗಳನ್ನು ಬರೆದವರಿಗೂ, ಕನ್ನಡಿಗರ ಮತ್ತು ಕರ್ನಾಟಕಸಾಹಿತ್ಯದ ಅಭ್ಯುದಯಕ್ಕಾಗಿ ವಿಶೇಷಭಾವದಿಂದ ಕೆಲಸ ಮಾಡಿದವರಿಗೂ, ಇತರ ಕಲಾವಿದ್ಯೆಗಳಲ್ಲಿ ಪ್ರವೀಣರಾದವರಿಗೂ, ಧನ ರೂಪವಾಗಿಯೋ, ಬಿರುದಿನ ಬಿಲ್ಲೆ(Medals)ಗಳನ್ನರ್ಪಿಸಿಯೋ, ಪ್ರಶಸ್ತಿ (Certificates of merit)ಗಳನ್ನು ಅಥವಾ ಗೌರವದ ಬಿರುದು (Titles of honour)ಗಳನ್ನು ಕೊಟ್ಟೋ ಗೌರವಿಸಿದ ಪಕ್ಷದಲ್ಲಿ, ಕನ್ನಡಭಾಷೆಗೂ ದೇಶಕ್ಕೂ ಸಾಹಿತ್ಯಸಮ್ಮೇಳನಕ್ಕೂ ತುಂಬಾ ಕೀರ್ತಿಯುಂಟಾಗುವುದರಲ್ಲಿ ಸಂದೇಹವಿಲ್ಲ. ಆದರೆ ಇದೆಲ್ಲ ತಕ್ಕ ಹಣವಿಲ್ಲದೆ ನೆರವೇರುವುದು ಸಂದೇಹವೆಂದು ಭಾವಿಸಬೇಕಾಗಿದೆ. ಆದಾಗ್ಯೂ, ಇದನ್ನು ಮರೆಯದೆ, ಸಾಧ್ಯವಾದ ಮಟ್ಟಿಗೆ ಕ್ರಮಕ್ರಮವಾಗಿ ಏರ್ಪಡಿಸಿದ ಪಕ್ಷದಲ್ಲಿ ಸಮ್ಮೇಳನವು ಹುಟ್ಟಿದುದು ಸಾರ್ಥಕವಾಗಿ ಅದರ ಉಪಯೋಗವು ಅನೇಕ ಕರ್ನಾಟಕರಿಗೂ ದೊರೆತಂತಾಗುವುದು

— ಭದ್ರಂ ಶುಭಂ ಮಂಗಳಂ —

ಕಾದಂಬರೀಸಂಗ್ರಹ.

ಮಾಸಪತ್ರಿಕೆ

ವಾರ್ಷಿಕಚಂದಾ ೧—೫—೦.

ಈ ಪತ್ರಿಕೆಯಲ್ಲಿ ಸರಸವಾದ ಕಾದಂಬರಿಗಳೂ, ಉಪನ್ಯಾಸಗಳೂ, ಪದ್ಯ, ನಾಟಕ, ಜೀವಿತಚರಿತ್ರೆಯೇ ಮುಂತಾದ ವಿವಿಧ ಗ್ರಂಥಗಳು ಪ್ರಕಟವಾಗುತ್ತಿವೆ.

ಎಡಿಟರ್:—ಕಾದಂಬರೀಸಂಗ್ರಹ, ಮೈಸೂರು

ಕಾದಂಬರೀ ಸಂಗ್ರಹ ಗ್ರಂಥಮಾಲಾ ನಂ. ೩೩

ಸೊಬಗಿನ ಬಳ್ಳಿ

PUBLISHED BY
C. V. SASTRY
Manager Bhuvaneswari Press,
MYSORE

1917.

ಕ್ರಯ ೨ ಆಣೆ]

[Price 2 Annas.

ಪೀಠಿಕೆ

ಮಹಾಭಾರತದ ಪುರಾಣದಲ್ಲಿ ಹೇಳಿರುವ ಪ್ರದ್ಯುಮ್ನನ ಉತ್ಪತ್ತಿ, ಶಂಬರಾಸುರನ ವಧೆ ಮೊದಲಾದ ವಿಷಯಗಳನ್ನೂ, ಸೊಬಗಿನ [illegible] ಹೆಸರಿನಿಂದ ವಿವಿಧವೃತ್ತಂಗಳಿಂದ ಈ ಗ್ರಂಥದಲ್ಲಿ ವಿಸ್ತರಿಸಲಾಗಿದೆ. ಪ್ರಾಚೀನರ ಸಾಹಾಯ್ಯಕ್ಕಾಗಿ ಕಡೆಯಲ್ಲಿ ಸಂಕ್ಷಿಪ್ತ ಟೀಕೆಯನ್ನು ಬರೆಯಲಾಗಿದೆ. ಕನ್ನಡದಲ್ಲಿ ಈ ಬಗೆಯ ಗ್ರಂಥಗಳು ವಿರಳವೆಂದು ತಿಳಿದು ಈ ಗ್ರಂಥ ಪ್ರಕಟನೆಗೆ ಅವಕಾಶವನ್ನು ಕಲ್ಪಿಸಲಾಯಿತು. ಎರಡನೆಯ ಭಾಗಗಳನ್ನು ಪ್ರಸರಿಸಲಾಗಿ [illegible] ಒಪ್ಪಿಕೊಳ್ಳುವರು. ಇವರೆ ಈ ಆಶ್ಚರ್ಯ [illegible] ಜಿಜ್ಞಾಸುಗಳು ಎಂದು ನಂಬುತ್ತೇನೆ. ಹೀಗಿದ್ದಲ್ಲಿ ಪ್ರಾಸಂಗಿಕವಾಗಿ ಅರ್ಥಸಂಯೋಜನೆಗಾಗಿ ಪ್ರತಿಯೊಂದು ಸ್ಥಾನಗಳಲ್ಲಿಯೂ [illegible] ಗ್ರಂಥಕರ್ತರು ಹೀಗೆ ಬರೆದಿರಬಹುದು. ಅರ್ಥಸಂಬಂಧವನ್ನು [illegible], ಎಂಬುದನ್ನರಿತ ಕೋವಿದರು ನಿರ್ಧರಿಸಬಹುದಾದ ಈ ಗ್ರಂಥವನ್ನು ಆದರಿಸಿ ಗುಣಗ್ರಹಣ ಮಾಡಬೇಕಾಗಿ ಪ್ರಾರ್ಥನೆ.

ಪಿಂಗಳ ಸಂವತ್ಸರ
ವೈಶಾಖಮಾಸ

ಪ್ರಕಾಶಕ.

ಸೊಬಗಿನಬಳ್ಳಿ.

ಮೊದಲನೆ ಮುಗುಳು.

ಚೌಪದಿ|| ಸಿರಿಯರಸ ನಡಿಯೊಳಿಗವನೆ ಮಾಡುವೆನು |
ಕೊರೆವನವನಾನದಕ್ಕೇಕೆ ಬೇಡುವೆನು ? |
ಹೊರತೊಮ್ಮೆ ಕೃಷ್ಣನೈದುತ ರುಕ್ಮಿಣಿಯನು |
ನಿರುಕಿಸುತ ಸಂನೆಯದೊಳಿಂತು ಪೇಳಿದನು ||೧||

ನಲ್ಲೆ ಕತ್ತಲೆಯು ದಿನಿತಿನಿತಾಗಿ ಮುಸುಕೆ |
ಮೆಲ್ಲಮೆಲ್ಲನೆ ಮುಸುಕುವಾ ಸಂಜೆಯಿರಕೆ |
ಕಲ್ಲಾಯ್ತನಹುದು ನಿನ್ನಯ ಮೈಯಿದೇನು |
ಸೊಲ್ಲಿಸೆನ್ನೊಡನೆ ಮರೆಮಾಜದೆಲ್ಲವನು ||೨||

ಬೆಳಕಿಂದೆನಪು ಹರಿಯೆ ಕೈಗೆಲಸದವಳು |
ಬಳಿವಂದು ಮೆಲ್ಲನೆಂದಳು ಬಗೆಯೊಳಳಲು |
ಬೆಳೆಯುತಿಹುದೊಡತಿಗೆಂದುಸುರದೇನಿಂದು |
ಪಳವಿರದೆ ಮರುಗಿದರೆ ದೊರೆಯಲೇನಿಹುದು ||೩||

ಬೇರೆಹೆಂಗಳತೆರದಿ ನಿನಗೆ ಸವತಿಯರೊಳ್ |
ತೋರದೆಳ್ಳನಿತಾದರುಂ ಮಚ್ಚರಂಗಳ್ |
ಆರಾದರುಂ ಕುನಿಸಿದರೊ ನುಡಿವುದಿದ್ದಂ |
ತಾರೆಸಗುವರು ಕುತ್ತಮರಿಯದಿರೆ ಮದ್ದಂ ||೪||

ಇನಿಯ ನೀಂನಲ್ಮೆಯಿಡೆ ಬೇರಾವನೋವು |
ಎನಗೊದಗಲುಂಟುನೇಹವನಾಂತು ತಾವು |
ಇನಿದಾಗಿ ಸವತಿಯರು ಬಾಳ್ವರಾದರೆ ಕೇಳ್ |
ಕುನಿವುದದವಳಲೊಂದು ಮುಳುಮೊನೆಯವೊಲು ||೫||

ಹೆಣ್ಣಾದ ಹೆಣ್ಗಳೆಲ್ಲರು ಹಡೆದಣುಗರಿಂ |
ತಣ್ಣಸವನಾಂ ಪರೊಡಲುರಿನಂದಲದರಿಂ |
ಉಣ್ಣಲಿಕೆ ಕಾಳಿಲ್ಲದಾ ಬಡತನದೊಳುಂ |
ಎಣ್ಣುವರು ಮಕ್ಕಳಿರಲೆಣ್ಸಿರಿಯವರವೋಲ್ ||೬||

ಬಾಳೆ ತನ್ನಯ ಬಾಳ್ಗೆ ಬಾಳೆನ್ನಿಸಿದರು |
ತಾಳಿಕೊನೆಯಂ ಮೆರೆವುದದೊನೋಳ್ಪುದಿದಿರು |
ಕೇಳೆನ್ನರನ್ನ ಹೆಣ್ಣಾಗಿ ಹೆರದಿರಲು |
ಹೇಳೇನಿಹುದು ಹಿರಿಯಹುಟ್ಟಿನೊಳಿದರೊಳು ||೭||

ಅಂತಾದರೀಗಳಿಲ್ಲದ ಮಗನನೆಣಿಸಿ |
ಎಂತಾನು ಮಳಲನೇಕರೆವುದೇಕರಸಿ |
ಮುಂತೆದೆವ್ವದ ನೀಳ್ದನೋಟಕನುವಾಗಿ |
ಸಂತಸಂ ನಿನಗೆ ತಾವರೆಗಿರುಳುಪೋಗಿ ||೮||

ಅದವಳಲು ಬೇಡ ಶಂಬರನೆನ್ನುವವನಂ |
ಪಡೆವುದಕ್ಕಾಗಿ ಪಡೆಯುವೆ ಮುದ್ದು ಮಗನಂ |
ಇದುಬೊಮ್ಮನಾಣೆ ಹುಸಿಯಾಗದರೆವೀಸಂ |
ಅದರಿಂದ ಪಾರ್ವುದು ನೆಲವೆ ನಿನ್ನಕೂಸಂ ||೯||

ಕಾಡಿಗೆಯ ನೊಂದಿಕರ್ಮಣಿಯಾಗಿ ಕದಪಂ |
ಜೋಡುಗೊಂಡಾ ಕುಂಕುಮವನಾಳ್ದ ಕೆಂಪಂ |
ಮಾಡಿಬರಿದಿದ್ದ ಮುತ್ತಾದಕಂಬನಿಯಂ |
ನೀಡಿಸೆರಗಿಂದೊರಸಿದಂ ಕೃಷ್ಣರಾಯಂ ||೧೦||

ಹುಯಲಿಬ್ಬನಿಹೊಳೆವ ತಾವರೆಯವೋಲು |
ಮಿರುಪೊಪ್ಪವಾಂತು ಹೊಳೆವಾಹೊನ್ನಿದೆನಲು |
ಸಿರಿಯ ಮೊಗವುಂಬಗೆಯುಮಾಯ್ತು ಹದಿಬದೆಗೆ |
ತಿರಿದಾವುದಿಹುದು ನಲ್ಲನನಲ್ಮೆಯೊರೆಗೆ ||೧೧||

ಎರಡನೆಯ ಮುಗುಳು.

ಶರಪಟ್ಪದಿ|| ಆಕಿಡುಮಿಗಗಳ | ಜೋಕೆಗೆಡಿಸಿಬನ |
ದೀಕಡೆಗಾಂಸೊಗವೆಸಗಿದೆನು |
ಏಕಿನ್ನಿಲ್ಲಿಹು | ದೆನ್ನುತಶಂಬರ |
ನಾಕೊಳಂಮುಂದುವರಿದನು ||೧||

ಕೊಬ್ಬಿದೆದೆಯನೀ | ಳ್ಗಾಲ್ಗುಮ್ಮಸುಡಿನತಾ |
ನುಬ್ಬಿದಲೆಯಕೈವಿಡಿನಡುಮೇಣ್ |
ಅಬ್ಬರದಾಬಾ | ಡುಗಿವಿಯನಾಯಿಗ |
ಳೊಬ್ಬುಳಿಯೊಸರುವನಾಲಗೆಯ ||೨||

ಮುರುಟಿದಮೂತಿಯ ಗೇಣ್ಗಾಲ್ಗಳಕಿ |
ಕ್ಕಿರಿದಪಸುಂಬೆಯೊಡಲನವಿರ |
ಉರಿವಾಕೆಂಗಣ್ಣಿನ ಹುಲಿನಾಯ್ಗಳು |
ಹರಿದುವುಮುಂದೆ ಸಿಡಿಲದನಿಯಿಂ ||೩||

ಕರೆಯುತಕೋಲ್ಮಳೆ ಯನುಹೊಲೆಯರಮುಗಿ |
ಲಿರಲೊಡನಾಶಂಬರನೆಂಬ |
ದುರುಳಂಪೆರ್ಮೋಡದವೋಲ್ ಮುಂದಕೆ |
ಸರಿದಂಗಾಳಿಯ ಬಿರುಸಿಂದ ||೪||

ಬಸಿರಡಿಯುಯ್ಯಾಲೆ ಯಾಡುವಮರಿಗಳ |
ಮುಸುಗಳುಡುಗುಗೆಜ್ಜಲಮಿಗಗಳ್ |
ಹಸೆಗೈದುವುನೆಲ ವನ್ನೆಣಿಸಲ್ಕಂ |
ದಸದಳವಾಗಿಹ ಪರಣೆಗಳು ||೫||

ಅದೊಮಲಗಿರುವುದು ಮಿಗಮೊಂದೆನ್ನುತ |
ಹೆದೆಗೇರಿಸಲಾಗಳ್ ಕೋಲಂ |
ಬೆದರುತಲಾ ಹೆಣ್ಣೆಚ್ಚತ್ತೆದ್ದವ |
ನಿದಿರ್ಗೈತಂದಡ್ಡಂಬಿದ್ದಳ್ ||೬||

ಎಳೇಳ್‌ಹೆಣ್ಣೇ | ಹೆಗ್ಗಾಡಿನೊಳೇ |
ಬಾಳುವೆಯೆಂತೊಬ್ಬಳೆನೀನು |
ಹೇಳೆನ್ನೊಳು | ನಿನ್ನಯಹುಟ್ಟಂಬಗೆ |
ಗೋಳೇನೆಂಬುದನರಿವವೋಲು ||೭||

ತಾಯಿತಂದೆಗಳ | ನರಿಯೆನುಕ್ಕೆವಿಡಿ |
ದಾಯೆರೆಯಂ ಕಾಡ್ಗಿಚ್ಚಿನೊಳು |
ಬೇಯಲುಕಡೆಗುಡಿ | ಗಡಿದಬಳ್ಳಿಯೆನೆ |
ಸಾಯಲು ನರಲುವೆನೀಯೆಡೆಯೊಳ್ ||೮||

ಮನೆಗೆಲಸಗಳಂ | ಗೈವೆನುಕ್ಕೈಲಾ |
ಪನಿತೆನ್ನಂ ಪೊರೆಕೊಂಡೊಯ್ದು |
ಎನಲೊಡನೊಯ್ದನು | ಕನಿಕರದಿಂಕ |
ಲ್ಲಿನಸೆರೆಯೊಳಗೊಸರಿದುದೆನ್ನಲ್ ||೯||

ಮೂರನೆಯ ಮುಗುಳು.

ಸೀಸಂ|| ನಾರದಂ ನಡೆತರಲು ನೋಡಿರಕ್ಕಸರಾಯ |
ನೇರಿದ್ದ ರನ್ನವಣೆಯಿಳಿದದರಿಗೆ |
ಸಾರಿಕೈವಿಡಿದೊಯ್ದು ಕುಳ್ಳಿರಿಸಿಮನ್ನಿಸ |
ಲ್ಕಾರೈದು ನಗುತಕಿತ್ತಡಿನುಡಿದನು ||೧||

ಈಗಳೇಂತೊಡಕಿಲ್ಲವಲೆ ನಾಡಿನಾಳ್ತನ |
ಕ್ಕಾಗಸದವರು ಮುನ್ನಿನಂತೆಬಹರೆ |
ಬಾಗಿನಿನ್ನಯ ಜೆವರುಬಿದ್ದೆಡೆಗೆನೆತ್ತರೆಂ |
ಬಾಗರುವಿಕೆಯ ಬಂಟರೊಳ್ಳಿತಿಹರೆ ||೨||

ಹಲವನೆನ್ನುವುದೇಕೆ ನಿನ್ನೊಲ್ಮೆಯಿಂದೆನ್ನ ।
ಚಲದ ನುಡಿಗೆಡರಾದುದಿಲ್ಲ ಮಲೆತು ।
ನೆಲದಿಬಾಳ್ವವರಿಲ್ಲ ಹೆಸರನಾಲಿಸುತಬ ।
ದೀಲರೊಡೆಯನುಂ ನಡುಗುವನು ಬೆದರ್ದು ॥ ೩ ॥

ಊರನುಳಿದೋಡಿಮು ನ್ನೀರನಂಬಿಗರಂತೆ ।
ಸೇರಿರುವ ಗೋವಳಂ ಕೃಷ್ಣನೊಬ್ಬಂ ।
ಓರೆಗಣ್ಣಿಂನೋಡಲೇನು ನುಸಿಯುಂಬಿಸುಕೆ ।
ಪಾರುವುನು ಪಂತಪ್ಪೊಪ್ಪಡೊ ಪೇಳು ॥ ೪ ॥

ಅಳಲಿದ್ದುದೊಂದು ಕೃಷ್ಣನವಗಂ ತಾಂ ನಿನ್ನ ।
ತಲೆಗಡಿವನೆಂಬ ಬೊಮ್ಮನ ಮಾತಿನಿಂ ।
ತಳುವದಾನುರಿಗಣ್ಣನೊಲ್ಮೆ ಪಡೆದಂ ನಾನೆ ।
ಕಳೆಸಲವನಿಂ ದೊಮ್ಮಗಳಿವೆನ್ನುತ ॥ ೫ ॥

ತಲೆಯನೊಲಿಯುತನಕ್ಕು ನಾರದಂ ಪೇಳ್ದನೆ ।
ನ್ನಲದೇನು ನಿನ್ನ ಪೇರ್ಮೆಗೆ ಬಲ್ಮೆಗೆ ।
ಮಲೆತು ಕನಸಿನೊಳಾದರುಂ ಬಾಳ್ವರಿಲ್ಲಮೈ ।
ಭಳಿರೆ ಮೂಲೋಗದಲ್ಲಣನಾಗಿಹೆ ॥ ೬ ॥

ಆದರಾ ಕೃಷ್ಣಂಗೆ ಸಿವನೊಲ್ಮೆಯಿಂದಣುಗ ।
ನಾದಂ ನೆಲದೊಳದನ್ನರಿವುತಾನು ।
ಓದಲ್ಕೆತಂದೆ ಎನ್ನಯುತಂದೆ ನಿನ್ನೆಡೆಗೆ ।
ಬೇಧವೆಣಿಸದೆ ಕೇಳು ಸೊಗದೆ ಬಾಳು ॥ ೭ ॥

ಸಿಸುವೆಂದು ಹಗೆಯನುಳಿಸಲ್ಬಹುದೆ ಹಿಡಿಯೊಳಗೆ ।
ನು ಸುಳುವಾಬಿತ್ತು ಹೆಮ್ಮರವಾಗದೆ ।
ದೆಸೆಗೆಡುತ್ತಳಲದಿರು ಕೈಯಿಂದಾಮೇಲಿ ।
ಬಸವಾಗದೆಣಿಸಿಕೊಳ್ಳಿಂಡ್ಯೆದಿದಂ ॥ ೮ ॥

ಹುಬ್ಬುಗಂಟಿಕ್ಕಿದುದು ಕಣ್ಗೆನಿವಿಸಂ ನಿಲವು ।
ತಬ್ಬಿಬ್ಬೆನಿಸಿತು ತಲೆಮಣವಾದುದು ।
ಉಬ್ಬುಗಡ್ಡವನು ತಳಕಿರಿಸುತರೆನೋಟವಂ ।

ಆದವಳಲ ಚಿತ್ರರಫ್ರೊ ಹೇಳೆನ್ನಲಿಲ್ಲವೆಂ |
ಬಾದನರುಹುವಂತೆ ದುರುಳನ ಮೊಗದೊಳು |
ತುದಿಯುಕ್ಕಿ ತೊಂದೆಸಿಕೆಯೊಡನೆ ಸೊಂಟಮೊಳುಕ |
ಟ್ಟಿದ ಪೊನ್ನೊರೆಯ ಬಾಳನೆಳೆವುತಿದ್ದಂ || ೧೦ ||

ಮುಸುಕಿತವಸೆಯ ಕತ್ತಲೆಯ ಪೆತ್ತಲುಂ ನಲ್ಕ |
ದೆಸೆಗಳೊಳು ಚುಕ್ಕಿಗಳು ಮಿನುಗಿದ್ದರುಂ |
ತುಸವೊಳ್ಳಿಸಾದೆಸೆಕೆ ತಾನೆ ತಲೆದೋರ್ದರುಂ |
ಮುಸುಕಸ್ಟೆನೆಟ್ಟಿಕಿಡುಕಂಬಗೆಯೆನಲ್ || ೧೧ ||

ಬೀದಿಗೊಂಡಂಶಂಬರಂಗಾಳಿಯೋಟದಿಂ |
ವೈದಿದಂ ಕಡಲತಡಿಗೆಡಿಕೆ ಗಣ್ಣಿಂ |
ಆದೆವ್ವಮುನ್ನಂ ಬರಲು ಬುದ್ಧಿಯೊಂದದಂ |
ಬೋದಿಪುದೆ ತಲೆದಿರುಗೆ ನಡೆಯಲಹುದೆ ? || ೧೨ ||

ಮೊರೆದು ತುತಿಯಂ ಗೊಣಗಿ ನೊರೆಯೆಂಬಮುಗುಲ್ದು |
ಮಿರುಗಲಲ್ಲಲ್ಲಿ ಮಿನ್ನಗೆ ದ್ವರೆಂಬುತ |
ಹರಕೆದೀರಿಸುವಂತೆ ದ್ವಾರಕೆಯ ಸುತ್ತಲುಂ |
ಹೊರಳೆ ಮಡಿಮಡಿದು ತೆರೆನೆಪ್ಪದೆಕಡಲು | ೧೩ ||

ದುರುಳನಾಗಳೆಯುದಂ ದಾಂಟಿಸಿರಿಯುರಸನಿ |
ಪ್ಪ ರಮಣೆಯ ಸೊಬಗನೆಲ್ಲಂನೋಡುತ |
ನೆರೆಬಗೆಯೊಡಂಬಟ್ಟಿರುಂ ಹುಳುಕಸಂದತಾಂ |
ಹಿರಿದಿದೇಂ ಚೀ ಸುಡೆನ್ನುತ ಸರಿದನು || ೧೪ ||

ಪಡಿವಳರನೊರಗಿಸುತಮುಂಕು ಬೂದಿಯೊಳುಮುಂ |
ದೊಡನಡಿಯ ನಿಡುತಲುಪ್ಪರಿಗೆಗೇರಿ |
ಸೊಡರನ್ನು ಕತ್ತಿಸುತ ಮೆಲ್ಲನಾ ತೊಟ್ಟಿಲೊಳು |
ಪಡುತಿದ್ದ ಮುದ್ದುಗೂಸಂ ಕಂಡನು || ೧೫ ||

ಹೊಂಬಣ್ಣ ಮೊಪ್ಪುತಿಹ ಪುಟ್ಟಕಾಲ್ಗಳು |
ಸೊಂಟಕಿಂಬಾಗಿ ಹೊಳೆವ ಬಜ್ಜರದಗೆಜ್ಜೆ |
ತುಂಬಿ ಗುರುಳಿನ ಕಿರುಮೊಗಂ ಮುಚ್ಚುಗಣ್ಣೆಸೆಕೆ |
ಯಿಂಬಟ್ಟೆಯಂಬಿದಿರ್ದಣುಗನೆಸೆದಂ || ೧೬ ||

ಕೋಟಲುಂಟೆ ಈ ಮಗುವದೆನ್ನನೆಂದುಂ ಕಿರುವೆ |
ರಲು ಬೀಗುತಾನೆಗಂಬವೆನಿಸಿಪ್ಪದೆ |
ಇಲಿಯುಂ ಹಿಡಿವುದೆ ಗುಡ್ಡೆಯನಗುಳ್ದುಂಡುತ |
ಸ್ಖಲಿತನೆ ತಿಳಿವು ತಳೆದೊಯ್ಯುತ್ತೆಂದಂ || ೧೭ ||

ಕನಸಿನೊಳು ಮೆಚ್ಚಿರಬೇಕೆಂಬ ಬಿಗಿಯುರಂ |
ದಿನಮಾತ ನರಿತು ನಾರದನೆಂದುದಂ |
ನೆನೆವರುಂ ಕಡೆಗಣಿಸಬಹುದೆ ಕೊಬ್ಬಿಂದಲಿಂ |
ದೆಸೆತ ಮಗುವಂ ಕೊಂಡಿಳಿಸೆಗಣ್ಣಂ || ೧೮ ||

ಇಡುಕಿತ ಧಳಂವ ನಾಕೊಸನುಬಿ ಸಂತಸಂ |
ಒದುತರಕ್ಕಸನ್ನೆದೆ ತೆಗೆಸ್ಟೆಯೊಳು |
ಒಡಿದಾಡಿಸಿತು ಕದಲುಗುಳ್ಳಿದುಟಯಿಂದವು |
ದ್ದಿದುತ ನಂಟರುಮಿಹರ ದೆವ್ವವೊಲಿಯೆ || ೧೯ ||

ನಾಲ್ಕನೆಯ ಮುಗುಳು.

ಲಲಿತೆ || ಬಗೆಯೊಳಗೆ ಬೇಸತ್ತು ಮನೆಗೆಲಸವಂ ಮಾಡಿ |
ಉಗುವ ಕಣ್ಣೀರು ಕಾಲಾಗಿ ಹರಿಯಲು ಕೂಡಿ |
ರಕ್ಕಸನ ಬಾಣಸಿಗಳೊಮ್ಮೆ ಹಿಂದಣಮರಿಗೆ |
ಎಕ್ಕಟಿಯೊಳಗೆ ಸುಯ್ಯುತ್ತೊಕ್ಕಣಿಸಿದಳು ಹೀಗೆ || ೧ ||

ಹೆಣ್ಣಾಗಿ ಹುಟ್ಟುವುದು ಹಗೆಗಾರರಿಗು ಬೇಡ |
ವೆಣ್ಣಲಾರದ ಸಂಕಟದ ತವರ್ಮನೆನೋಡ |
ಲೊಂದು ಮನೆಯೊಳ್ ಹುಟ್ಟಿ ಇನ್ನೊಂದು ಮನೆಗೈದೆ |
ತಂದೆತಾಯ್ಗಳಿಗೆ ನೆನೆನೆನೆದು ಬಾರದು ಸದ್ದೆ || ೨ ||

ಒಳ್ಳಿತಾದೆಣಿಕೆಯಿಂ ದೆವ್ವವಿಾಯಲು ಚೆಲ್ವ |
ನೆಳ್ಳನಿತರಿಯದೆ ಬಾಯಿಗೆ ಬಂದತೆರಮೂಳ್ವ |
ಕಂದಕಿಡುಕರನಡಿಗೆ ಕಿವಿಮುಚ್ಚಿ ಕುಳಿತಹುದೆ |
ಅಂಡೆಯಿಂದದಿ ದೊಂಡೆಬಾಯಿಗಟ್ಟಲ್ ಬಹುದೆ ? || ೩ ||

ಅದರೊಳೆನ್ನಂತಕಟನಲ್ಲನಂ ನೀಗುತಂ |
ಬದಿಯೆ ನೋಡುವರ ಕಣ್ಣಿಗೆ ಸುಣ್ಣವಾಗುತಂ |
ಕೊಳನಿಲ್ಲೊಳಗೆತ್ತಿಮೈವಿಡಿದಡಗೆ ಮೆಲ್ಲಾಗಿ |
ಬಾಳುವುದೆ ತಂದೆ ಚೆಂದವಗೆ ಕರೆ ಬೇರಾಗಿ ‖ ೪ ‖

ತಲೆಯುಮೇಲ್ ಪೊತ್ತಿರಲುಸಿವನ್ನಿಸಿನ್ನಂ ತಂದೆ |
ಮೆಲುನುಡಿಯೊಳೊರೆಯು ದಳಿಯುನನಳಿವಪೊಲುಗ್ಗೈದೆ |
ಕೊಂಕೆನಿಸಿದಂಗ ಸಿರಿಯೊದಗೆ ತನ್ನವರನ್ನು |
ಏಂಕಾಂಬನೇ ಹೋಗಲೀಕೆ ದೂರುವುದಿನ್ನು ‖ ೫ ‖

ರಾಯೊಂದು ಕಬ್ಬಿಗರು ಬಣ್ಣಿಸುತ್ತಿದ್ದೆನ್ನ |
ಕತೆಯಿದಾಯ್ತೀಮರಂ ಮುಂದಪೂ ವಳ್ಳಿಯೆನ |
ಲಾಕಾಡೊಳಿರಲಂದಿಗದು ಸಲ್ಲದೆಂದಾಯ್ತು |
ಈಕಡೆಗೆ ಬರಲಿಂದಿಗಿದು ತಲೆಗೆ ನೋವಾಯ್ತು ‖ ೬ ‖

ಬರೆಸಂಕಟಂಮೆಯ್ಯುಳಿದರೆ ಸಾಕೆಂದೆಣಿಸೆ |
ಹಿರಿದಹುದು ಬಳಿಕ ಮನ್ನಣೆಯೊಳೆಂಡಪ್ಪುಸೆ |
ಮತ್ತೆ ಬೇರೊಂದು ಕಾಡುವುದದಕ್ಕೀಯೊಡಲ |
ನಿತ್ತು ಬೆಂಕಿಯೊಳುಸಂತಂಬಿಡದೆ ನೆಲೆಯಿಲ್ಲ ‖ ೭ ‖

ಎಂದೆಣಿಸಲಾಗಳಿಲಿಮಗಳೆ ಮರುಗದಿರಿನ್ನು |
ಹೊಂದಲಿರುವುದುನಲ್ಲನಂಬೇಗದೊಳು ನೀನು |
ಇಂತೀಂಗಸದಮಾತು ಮೊಳಗೆ ಚಾದಗೆಯಂತೆ |
ಸಂತಸದ ಹಗಲನೆಣಿಸುತ್ತಿದ್ದಳವಳಂತೆ ‖ ೮ ‖

ಐದನೆ ಮುಗುಳು.

ಸಾಂಗತ್ಯ ‖ ಮಾಡಿದುದನು ತಿಂದೆ ತೀರಬೇಕೆಂದೆಂಬ |
ನಾಡಿನನುಡಿಯು ಕೋರಿಕೆಗೆ |
ಕೂಡಿದುದೆಡೆಯೆನ್ನಲೊಮ್ಮೆರತಿಯೊಳುತಾ |
ನಾಡಿದ ನಿಂತುರಕ್ಕಸನು ‖ ೧ ‖

ಬಾಱಸಿಗಳೆನ್ನೊಡು ಕಡಲತಡಿಯೊಳಿಂದು |
ಸಂಜಾತ್ತ್ರಿಅ ನೀವುಗುವನು |
ಮಾಱದೆತಂದನಲವಳೊಪಾಣ್ಬ ಮುಂದಿಂ |
ಗಾಱದೆಬಿಸುಟರಬೇಕು || ೨ ||

ಅಱಿಂದಲೆಗಮುಸಯೊಳು ನೋಡಿನಡುವ |
ರಿದನೊದಗುವುದಲ್ತೆ ಕುಂದು |
ಪದುಳದೆ ಪೂರ್ವಮುಂದಕಿದಿರಿಗೆಬರುವನೆಂ |
ದಿದೊಮುಪ್ಪುವೊಗಮರುಹುವುದು || ೩ ||

ಎನೆಕೊಂಡುಹೋಗಿಸಿಸುವನಾಕೆ ಸಾಕೆಜೆ |
ವನವುಚೊತ್ತಿತು ಕಣ್ಣಕಡೆಯೊಳ್ ||
ಪುಸಗ್ಯದುದುಬ್ಬುವೆಯೊಳಗಂಪ್ರದ್ಯುಮ್ನಂಗೆ |
ಒನಕ್ಕೆದಿದಳು ಒಳಿಕೆಣವ್ಹ್ || ೪ ||

ಕಾವನಸದಿರುಗೊಳಲ್ಕೆ ತಕ್ಕೆಡೆಯಿದೆಂ |
ದಾವಸಂತಂ ಮನೆಗಟ್ಟಿ |
ಏವೇಳ್ವಿಂ ಸಿಂಗರಿಸಿದ ಸೊಬಗನ್ನನೆ |
ಹೂವಿನಬನವೊಪ್ಪಿತಂದು || ೫ ||

ಹೊಸ ಹೊಸ ನೋಟಗಳಿಂದ ಬೇರೆಣಕೆಗಳ್ |
ಹಸಗ್ಯೆಯೆಬಗೆಯೊಳು ಹಲವು |
ಉಸುರಲದಂವೋರೆ ಮರೆಯೆತಕಿನ್ನೆನು |
ತ್ತಸಿಯಳೀ ಪರಿಬಣ್ಣಿಸಿವಳು || ೬ ||

ತಂಗಾಳಿಯುಱಱು ಸುತಸದಿಂ [illegible] ಂಬಪೆಂ |
ಪಿಂಗಡೆಯಾಗಿರುಂರಂತ್ತ್ |
ಹಿಂಗವೆಸಳ್ನೊಂಕಿ ಜೇನಿನೆಳೆಮುಸವಿ |
ದಿಂಗುತಿಹುದು ತಾವರೆಯೊಳು || ೭ ||

ಎಲೆಗಿಳಿ ನೀನಂಣ್ಮನಳಿದುಬಣ್ಣಿಣಿಸದೆ |
ನಲಪಿನ ಮಾತನಾಡುತಿಹೆ |
ಸಲಿಬಿನದಿಸಿ ಕೆಂವೊಗಂದೋರ್ಪೆ ಹೋಗಲಿ |
ಪಳದಾಸೆಯವಗೆ ಮರುಕವೆ? || ೮ ||

ಬಳ್ಳಿಕ್ಕೈನೀಡಿದಕೆಂದಳವನು ಕೊಳು |
ತಳ್ಳಿಗೊಂಟೆಂಬಕೊಂಬಿನೊಳು ||
ತುಳ್ಳಿಹಗಂಡುಗೋಗಿಲೆ ಕೊಳಲ್ಸ್ವರಗೊಟ್ಟು |
ನಲ್ಲೆಯಂದಿಟ್ಟುಸುತಿಹುದು || ೯ ||

ನೀನಮ್ಮ ಹೂವಿನಹೊಳಲಚಿತ್ರಂಪಿದಂ |
ಕಾಣಿಸುತ್ತ ಕಟಬರಂತ ||
ತಾನೆವೋಲಕೆ ಬಾದಿಮುಸುಕಿದಕಿಚ್ಚಿನ |
ದೇನೀಕೆ ಪೂರಿಸುತಿರುವೆ || ೧೦ ||

ಆವೆನೊಗವಲದ ವಮ್ಮ್ಯುಲಿ ಸಜ್ಜವಸಿಪಿತಳ |
ತಡೆಚಿತ್ರದ ಪಸುಬಳ್ಳಿ |
ಅವಲ್ಲಟ್ಟೆನ್ನೊಳೆನಸು ಮುನಿದಿಸಿಯುಸ |
ನೊದಗಿನಗಿಸಿದಂಗಿಳಿಯು || ೧೧ ||

ಚಿಗುರತಳ್ಜವ ನಿಕೆಯೊಳಗಣಂದೀಗೆನ್ನ |
ಮನಗ... ಪೋಳಿಯುವ ಯೋಗಳ |
ಬಗೆಯಿಪಿಯಲು ಮರೆಯಾಗಿಹುವೇ ಮುದ್ದು |
ಮೊಗದೋರೆನ್ನೊಳುವೀ ಸಂದೆಯುವೆ ! || ೧೨ ||

ತಲೆದೋರಿಲೀ ಪಂಯೆಣೆಕೆಗಳ್ ಬೇರೆಬೇ |
ರೊಲಿದಕ್ಕರಿಂದನಾರದನು ||
ನಲಿಯೆಬೆರಲು ಬೀಣೆಯೊಳೆಯೊಳಾಗಸದಿಂದ |
ಬಿಳಿದನುಗಾಳಿಯೋಣೆಯೊಳು || ೧೩ ||

ಕಾಣುತ್ತಲಾರಿಸಿಯನು ತಲೆವಾಗಿದ |
ನಾಣೆನಕಣಿಯಂ ಪೆಣ್ಮಣಿಯಂ ||
ಕೇಣಗೊಳ್ಳದಿರೆಂದು ತಲೆದಡವುತ್ತನ |
ಲ್ಬಾಣಿಯನಿಂತು ಸಾರಿದನು || ೧೪ ||

ಕೊರಲಮುತ್ತಿನಸರವನು ಹುಡುಕುವನಂತೆ |
ಬರಿದೆ ಬಿಸಿಲ್ಬರಗುವುದೆ ||
ಮರುಗದಿರ್ಮಗಳೆ ಮನೆಯೊಳಿವಾಣಳ |
ದಿಕ್ಕುವರಿಂದಿದಂ ಮಾಡುವಮಂತಣವಂ || ೧೫ ||

ಗುಟ್ಟನಳಟ್ಟಿವಿದರ ಹೊಲಬರಿಯೆನು ।
ನೆಟ್ಟನೆಬಿಚ್ಚಿ ಹೇಳೆನ್ನಲ್ ॥
ತಟ್ಟನೆಂದಂ ಕಾಮನಿರವನಾಲಿಸಿನುಡಿ ॥
ಪಟ್ಟಳು ಸಂತಸಗಡಲೊಳ್ ॥ ೧೬ ॥

ಕುಕ್ಕುರಿಸುತು ನಸುಮುಗುಳ್ತು ಬೆವರ್ತಿಸಿ ।
ಯುಕ್ಕಿತಾಗಳೆ ಬಗೆಕಣ್ಣಂ ॥
ನಕ್ಕಳು ನೋಟಮುಂಗುಟವನದುಂನೆಲಂ ।
ಗುಕ್ಕಿತಾದುದು ರತಿಗಂವು ॥ ೧೭ ॥

ಕುರುಳದುನೀಳೆಕಣ್ಗಡೆ ಕೂರ್ಪಂತಾಳೆನ ।
ಳ್ಕಿರುಗುಗದ ಪುನುಣ್ಪನಾಳೆ ॥
ಕೊರಲಾಗಳ್ ಬಲಮುರಿಸಂಕಿಗಾಣಿಯನುಗ್ಗೆ ।
ಎರೆಕ್ಕೆವಳ್ಳಿಯೊಳು ಗುರ್ಬಿಗುರೆ ॥ ೧೮ ॥

ತಳಿರುಡೆಗುಪ್ಪ ಸಂಮಯ್ಯುಬ್ಬುತಗ್ಗಗ ।
ಳಳವನೊರೆಯ ಟೊಳಗಿಂದ ॥
ನಳಿದೋಳನಾಡುಂ ದಾವರೆ ಯಲರ್ವಡಿಬೊಟ್ಟಂ ।
ತಳದವೋಲೆಯನೇ ವಣ್ಣಿಸುವೆಂ ॥ ೧೯ ॥

ಬಾನಿನವರು ಹೊಸಪುಟ್ಟಿಸಿತ್ತರು ನಿನ ।
ಗೇನಿನ್ನಂಜಿಕೆದೆವ್ವ ಮೊಲಿಯೆ ।
ಬೇನೆಬೇಡೆಂದು ಸಂತೈಸಲ್ಕೆ ತಣ್ಣನೆ ।
ತಾನೊಮ್ಮೆ ತಂಗಾಳಿಸೀಡೆ ॥ ೨೦ ॥

ಮಲ್ಲಿಗೆವಟಿಯುಮಾರಂಬೀಳೆ ಸುವಪೆ ।
ಯುಲ್ಲಿನಲ್ಕಿಯು ಕೇಳುನೊಳು ॥
ಇಲ್ಲದುಡಿಲ್ಲ ಕಾಮನನಾಡಿಗೋರ್ಳದು ।
ಬಲ್ಲುದೆನ್ನುನಾಗವಿಗಸ್ಫಾಲ್ ॥ ೨೧ ॥

ಒಟ್ಟುಡೆಯುಟ್ಟು ಕೊಂಗ್ಲಿ ಮುತ್ತಿನಸರಂ ।
ದೊಟ್ಟುತಳಿಗೆಂ ಮುಡಿಯುಂ ॥
ಕಟ್ಟಿತಾವರೆಗೊಂ ತಿರುಹುಬೆರಳಿಗೆ ।
ಯಿಟ್ಟನಲ್ಲಿಗೆಕಾಪನೊಡನೆ ॥ ೨೨ ॥

ಕಡೆಗಣ್ಣೋಟಂ ಬೀರುತಲ್ಲಲ್ಲಿನಲ್ಲನಿ |
ಯೆಡೆಗಿನಿಸುಂ ಕಿವಿಗೊಡುತ ||
ನಡೆಗೊಳ್ಳುವನು ತಲಗ್ಗಾಲದಿಂಮನೆಗೆಸೆ |
ಕಂಡುವಿಲ್ಲನೈದಿದನಲ್ಲಿ || ೨೩ ||

ಆರನೆ ಮುಗುಳು

ಮಂದಾನಿಲರಗಳೆ || ಬಳಿವಂದಡಿಗೆರಗಿದ ಭೂಮನನು |
ತಳುವದೆತಕ್ಕೈಸುತ ನಾರದನು |
ಹಲಗೇಲಂಬಾಳನ್ನುತ ಹರಸಿ |
ಕೆಲದೊಳಿರುವಪೆಣ್ಮಣಿಯನಿರುಕಿಸೆ || ೧ ||

ಒಂದೆರಡಿನಿತರಳುವಕಿರುಮುಗುಳು |
ಅಂದಣಕಿಸುವುದು ತಳಿರೆಡೆಯೆನಲು |
ಮುಚ್ಚುವರಿಯಲಾರದ ಮುಗುಳುನಗೆ |
ಚೆಂದುಟಿವಾಗಿಲಸೆರೆಯೊಳು ಮಿನುಗೆ || ೨ ||

ನೋಡಳುನಾಚಿಕೆ ಮುಂದಾಣೆಯನುಂ |
ಮಾಡಲ್ಕಾರಳು ಕಡೆಗಣ್ಣೆನುಂ |
ಆಡಳುನಾಲಗೆಯನ್ನು ತಡೆಯಲು |
ಕೂಡದೆಗಿಳಿಯೊಳು ಬರಿದೆನುಡಿವಳು || ೩ ||

ಕಣ್ಣರಿತಿಂತಿಂತೆನ್ನಲು ತಿಳಿದು |
ಹೆಣ್ಣಿನಚೆಲ್ವಂಬಗೆ ಬಸವಳಿದು |
ಎಣ್ಣುತಲವಳನೆ ಮರವಟ್ಟಂದಂ |
ಕಣ್ಣನೆಕಾವನಿರಲು ರಿಸಿನುಡಿದಂ || ೪ ||

ಬೆರಗಿಂತೇತಕ್ಕಿರುಳುಂ ಪಗಲುಂ |
ಕೆರೆನಿನ್ನನೆಹಲುಬುತ್ತಿವಳಿರಲುಂ |
ತೊರೆಸಂದೆಯವಂ ಮನ್ನಿಸಿವಳನು |
ಒಲಿವುದೆ ಹೊನ್ನನ್ನರಿತುಂ ಮೋಣು || ೫ ||

ಬಳಿಕಮವನಹಿಂದಣ ಪರಿಗಳನು |
ತಿಳಿಸುತಲಂತಂತಾನಾರದನು |
ನೆಲದೊಳ್ಳಿತೆಸೊಗವ್ಯೆಹುಟ್ಟಿಂಗೆ ||
ಪಳವೆಂದೊರೆದನಿದೊಂದನವಂಗೆ || ೬ ||

ದುರುಳಂಶಂಬರನಂ ಬಡಿದೊರಸು |
ನರಲುತಲಿಪೊಳ್ಳಿದ ರಂಬರಿಸು |
ತೆರಳು ತೊಡನೆಮನೆಗಿನಿಯಳ್ಳಿರಸು ||
ಒರಲುವತಾಯ್ಗೆ ಸೊಗವನಿಂಬಿರಿಸು || ೭ ||

ನಿನ್ನಯುನುಡಿಗಿದಿರ್ದಾಡುವುದಲ್ಲ |
ಎನ್ನಯುಬಗೆ ಯೊಯ್ದೊಳೆಯಲ್ಕಿಲ್ಲ |
ಚೆನ್ನಾಗಿಯೆತಿಳಿಯುಲು ಕೇಳುವೆನು ||
ಮನ್ನಿಸಿಕಿತ್ತಡಿ ನುಡಿಯೊಳ್ಳಿತನು || ೮ ||

ಎಳವೆಯೊಳವ್ವೆಯುವ್ರೋ ಲೆಣಿಸುತ್ತಂ |
ಹೊಳೆಯಲು ಜೌವನವಿನಿಯಳೆನಲುತಾಂ |
ಬಳಿವರೆಮುಟ್ಟೀಹೆಣ್ಣಂ ಕರೆಯೆ |
ತಿಳಿಯೆಂಕೈವುಣ್ಣಿಗೆ ಕನ್ನಡಿಯೇ || ೯ ||

ಕೊಳಲ್ಸ್ಕೈಶಂಬರನದನರಿವೆಂ |
ಕೊಳಂತಿಂದೀ ಕೈಗೆಂತೊರೆವೆಂ |
ಬಾಳಂಸೆಳೆಯಲು ಬಲ್ಲೋಜನಬಲ್ ||
ಬಾಳನಳಿಸಿಕಲಿವುದೆ ಗುರಿಯುಂಪೇಳ್ || ೧೦ ||

ಜಿಡಿಗೆಯುಹೆಣ್ಣಂ ಪೇಸದಿರೀಕೆ |
ಮುಡಿವಿರತಯುಹಳು ನೀನಳಿಯಲ್ಕೆ |
ತಡೆಯದೆನಿನ್ನಂ ಪುನೆಂಪವ್ರೊಲು |
ಕಿಡುಕಸವ-ಸೆಟೊಳು ನ್ನರುತಸುತಿಪಳು || ೧೧ ||

ಬಾನವರಿತಾ ಹೊಸಮೆಯ್ಯಿಂದ |
ಬಾಣಸುತನಪಳಿಪುದು ನೀರೊಂದೆ |
ಕಿಂಣುವುದಾಯಾ ಕುಪ್ಪಿಗೆಗಳೊಳು |
ತಾನಾಯಾಬಣ್ಣದೊಳೀ ಸಿದರೊಳ್ || ೧೨ ||

ಆಗಳ್ನೀಂಮುಂ ಮೆಯ್ಯಂತೊರೆದು |
ಈಗಳೊಗೆದ ಪೋಲಿಹಳಿಸಳಿಂದು |
ನೀಗಿದೆಯಾದರೆ ಬಿಡುವಳೊಡಲನು |
ತೀಗುವುದಾದೊಸಂ ನಿನ್ನುವನು ॥ ೧೩ ॥

ಅಳುಕದಕಡಲೊಳು ಬಿಸುಟಾದುರುಳಂ |
ಒಳವರಿಯದೆ ಹೊರೆಯುಕ್ಕೇನುಪಳಂ |
ತಿಳಿದರೆಕೋಗಿಲೆ ಮರಿಯೆಂಬುವನು |
ಬಳಯಿಸಲುಂಟೇ ಕಾಗೆಯದನ್ನು ॥ ೧೪ ॥

ನೆಲಕೆಲ್ಲದನಲ್ಲಂ ಬೊಮ್ಮಂಗೆ |
ತಿಳಿಯಲ ಬಿದಿನಿಸ್ಸಂದುಂಬಳಂಗೆ |
ಆಳವೆಂದುದನೀಸಿಂ ಹುರಿಗ್ಗೆದಂ |
ಉಳಿಮ್ಮೆಸಗ್ಗಗರೊಳ್ಪು ನಿದೊಂದಂ ॥ ೧೫ ॥

ಕಾವಂ ನೀಂ ಬಾರಿ ಬಿಡಲ್ಕಳದರ್ |
ಕಾಪಂ ಕೆಂದು ಬಟ್ಟೆಯೆಯೊಳಿಳಿವರ್ |
ನೋವಾಗಲುನೆಲೆಯುಳಗುಂ ಲೋಗಂ |
ಏವೇಳ್ವೆಂಪೆಂತಂ ನಾಲಸೀಗಂ ॥ ೧೬ ॥

ಕತ್ತಲೆಯಾ ಕೈಸೊಡಂನನುಡಿಗೆ |
ತೆತ್ತಂ ಕಿವಿಯುಂ ಕೆತ್ತಡಿಯುಡಿಗೆ |
ನೆತ್ತಿಯಿಡುತ್ತಾಣೆ ಗೊಡಂಬಟ್ಟಂ |
ಸುತ್ತಿತುವಂಡದಿಯು ಕಡೆಗಣ್ಗಟ್ಟಂ ॥ ೧೭ ॥

ಕೊಳುಗುಳ ಕೊದಗಿರುವುದುಂಕ್ಕಸನೆ |
ಗಳಿಗೆಯೊಳಗೆ ಮೊಳಗುವನ್ನೃತಲನೆ |
ತಳುವವೆನುತ ಹೊಂಡಲುಮಣಿದಾಗಳ್
ತಳಿರೆಲೆವನೆನ್ನೊಕ್ಕರು ದಂಪತಿಗಳ್ ॥ ೧೮ ॥

ಏಳನೆ ಮುಗುಳು

ಕುಸುಮಷಟ್ಪದಿ ॥ ಗರುಡಿಯೊಳುಪ್ರದ್ಯುನ್ನು ನಿಂನೆಲ್ಲಿ ಗೈದಿದನೊ |
ದೊರೆಕೊಳ್ಳುವುದು ಬೇಸರಂಬಗೆಯೊಳು ॥
ತರಳಬನದೊಳಗದಂ ತೊರೆವೆನೆನ್ನುತರಕ್ಕ |
ಸರಬಲ್ಲಹಂ ನಡೆದನೊಡನಲ್ಲಿಗೆ ॥ ೧ ॥

ಬಂದುಬಲಿದಾಬಾಗಿ ಲಂದಿಟ್ಟಸುತಕರೆಯು |
ಲೊಂದಾನು ಪೋಯೆಂಬನುಡಿಗೇಳದೆ ‖
ನೊಂದುಕಿಚ್ಚಿದ್ದಾರಿದೆಂದು ಧೊಪ್ಪನೆತುಳಿಯೆ |
ಹಿಂದುರುಳಿತಾ ಕದಂಹೊಕ್ಕನೊಳಗೆ ‖ ೨ ‖

ನಡೆಯೆನಾಲ್ಕಡಿಯನೊಂ ದೆಡೆಯೊಳರಗಿಳಿಗೇಳೊ |
ನುಡಿಗೊಡುತ ಕೋಗಿಲೆಗೆತಳಿರೆತ್ತುತ ‖
ಬಡನಡುಬಳುಕೆನಿಂದ ಕಡುಗಾಡಿಗಾತಿಯುಂ |
ನಡೆನೋಡುತ ಚ್ಚರಿಯೊಳಿಂತೆಂದನು ‖ ೩ ‖

ರಂಬೆಯಿವಳುಂಗುತಿಕೆ ತುಂಬಿಡುವಸ್ಯಪನುಂ |
ಕಾಂಬಳೇನಾಕು ಸೊಬಗಿನಬಳ್ಳಿಗೆ ‖
ಇಂಬಾದಪುಗುಳುತಾ ನೆಂಬತಳವಂಹಿಡಿದು |
ಕೊಂಬುದಕೆನೋಂತು ಮೆರೆಯುಲಪ್ಪವನೊ ? ‖ ೪ ‖

ಇರಲಿಪರಿಕಿಪೆನೆಂದು ಕೆರಳಿಸನಿಯುದೆನಿಂದ |
ಮರುಳನಂಕಾಣುತಿನಿಸುಂ ಬೆದರುತ ‖
ಎರಗೆರತಿಸಂತಸಂ ಬೆರೆದುರಕ್ಕಸರಾಯು |
ನರುಹಿದಂಸುತ್ತು ಮುತ್ತುಂನೋಡುತ ‖ ೫

ಊರೆಲ್ಲಿ ಹೆಸರೇನು ಸಾರಿರುವುದೇಕಿಲ್ಲಿ |
ನೀರೆನೀಂಕದವಂ ಬಲಿದೆಯೇತಕೆ ‖
ಮಾರಂನುಡಿವನಲ್ಲ ಕೋಲದಬಯಕೆಯುನಾಂ |
ಬಾರಿತ್ತಬಳಿಗೆ ಬರಿದೇಕೆಂಜುವೆ ‖ ೬ ‖

ತಿಳಿದವನ ಕಣ್ಣೊಂಬ ಗಿಳಿವಾಗಿಲಿಡೆಗಳಿಂ |
ದೊಳಗಡೆಯೊಳು ಜ್ವಳಿಪಕಿಚ್ಚಿನಿರವಂ |
ತಳುವದಾರಂತಿಗುಯ್ಯ ಬಳಸಿತುಂಬಿಗಳೊಡನೆ |
ಹೊಳೆಯೆ ಹಲ್ಲುಗುಳಾಗಳಿಂತೆಂದಳು ‖ ೭ ‖

ಕಾಡಿನೊಳುಸರಲುತಿರೆ ನೋಡುತನ್ನಂತಂದೆ |
ನೀಡುತಡುಗೆಲಸವನು ಹೊರೆದನೀಸೆ ‖
ನಾಡೆಗುವುತಂಕೇಳ ಲ ಡಲೀನನೆ ಪೊಗದೆ |
ಕೂಡೆಬಗೆಬೆರಗಿಂದ ಪೊಳೆಯೆನುಡಿದಂ ‖ ೮ ‖

ಒಱಮ್ಮೆಯುದಲ್ಲಿನ ಲ್ಮಱವುಣ್ಮೆ ಜಾಣೆನೊ |
ಳ್ಗಣನೀನದಲ್ಲಿ ಯಾಡಿಗುವಾನೆಗುಂ ||
ಎಣೆಯೆಕತ್ತಲೆಗೆ ಹಗಲಿನವೊಯ್ಯನನ್ನಿವೇ |
ಳೆಣಸಬೇಡರಡನ ನ್ನೊಳುರನ್ನಳೆ || ೯ ||

ಒಳಿಕವಾರಾತಿತನ್ನ ಪಳಿಯುಪಾಡಂಪೇಳ್ |
ತಳುವದೀವೊಯ್ಯ ಸತ್ತರುಸಗ್ಗಿಗರ್ |
ತಿಳಿವುದೆನ್ನಲ್ಲೊಳಗೆ ಮೂಳೆಯನಾಚಿಕೆಯುದ |
ಸ್ನಳಿಕೆಗೈದಿಹ ನಲ್ಮಯಿಂದೆಂದನು || ೧೦ ||

ಕೊತ್ತಸೆಂಗಿಪನೆಂದೆನುತ್ತ ಬೇಸರಗೊಳದೆ |
ಕಿತ್ತುಬಿಸುಡಂಬಗೆಯು ಬೇಸೆಯೆಲ್ಲ |
ಪತ್ತಿಮಣಿಯುಂ ಸಂಣೆ ಗೊತ್ತದಾವೇಲಿಬೆಲ |
ಗೊತ್ತಲ್ಲದೇಂ ಗಣಯೊಳಿರಲರಿವುದೆ ? || ೧೧ ||

ಎನ್ನುಮಂ ನನ್ನಿಯುಂ ನಿನ್ನದಸನಂಗೊಡ |
ಲಂನೀಗುತೆನ್ನ ಬಗೆಯೊಳು ತುಟ್ಟಿಹಂ |
ಚೆನ್ನಾದುದಿಂಗಳಲಿ ಕನ್ನೆನೀಂಬನೆಪೊಕ್ಕು |
ಮನ್ನಿಸಂತಿಯುಂ ಬೆಳಗಿಕಾವನಂ || ೧೨ ||

ದುರುಳರೊಳವನು ನೇಹವಿರಿಸುವಂಪದಿಹೊಕ್ಕು |
ತಂದುಬಿಸುಡುವನವರನೆನ್ನೆರೆಯನು |
ಬಂದೆನಿನ್ನಲ್ಲಿ ತಾ ನಿರುವನಲ್ಲವೆನುತ್ತ |
ತಿರುಗಿದಳು ಬಳ್ಳಿವನೆಗವಳೊಯ್ಯನೆ || ೧೩ ||

ಚಿಕ್ಕಿಸದೆ ನಡೆದುದೂಂ ದುಕ್ಕುತಿಹ ಬಿರಯುಮೆರ |
ಡೊಕ್ಕಣಿಸಲಿಂತು ಕಿಡಿಗೊಂಡುರಿಗಳಿಂ |
ರಕ್ಕಸಂಬಿಂದುವುಂದಕ್ಕೆ ಹಾಯ್ದೋಡಿಕ್ಕೈ |
ಯುಕ್ಕೆಸೆರಗಿಂಗೆ ಸರಿದೊಳವೊಕ್ಕಳು || ೧೪ ||

ಬಿಳಿಮುಗಿಲಕರೆಯಲ್ಲಿ ಹೊಳೆಯುತಿಹಚಂದವನ |
ಬೆಳಕೆನಲು ಬೆಳ್ವಟ್ಟೆಯುಂಚದಿನಿತು |
ಉಳಿಯೆಪೆರಗಡೆಯುದರ ಬಳಿಯಕೊಳಂತೋರ್ದ |
ನಳಿವನೊಂದಲ್ಕಿರುವ ಕತ್ತಲೆಯುವೋಲ್ || ೧೫ ||

ಒಡನೆತಿರುವಂ ಬಿಲ್ಗೆ ಕೊಡಿಸಿಕೋಲಂಹೂಡಿ |
ಕಡೆಯದಾಪ್ರದ್ಯುಮ್ನ ನೊಳಗಣಿಂದ ||
ಅಡಿಯಿಡಲ್ಕಚ್ಚರಿಯ ಸಡರಿದಕನಲ್ಕೆಯಿಂ |
ಸಿಡಿಗೊಂಡು ಶಂಬರಂನುಡಿದನಿಂತು ||೧೬||

ಏನೆಲವೊಪ್ರದ್ಯುಮ್ನ ನೀನೇರಿಕಲಿಕೆಯಿಂ |
ದೀನೆಲೆಗೆಬಂದೆಯೋ ಮೋಹದರೊಳುಂ ||
ಮೋನದಿಂಕಳ್ಕಿಚ್ಚಿ ತಾನುಂಡಮನೆಗೆಗುಂ |
ಧಾನಲಿಂದೀಚೇಷ್ಟೆಯುಂ ಕಲಿತೆಯ | ೧೭ ||

ದುರುಳರೇಳೆನ್ನಗನಿಂ ಹೊರೆದುಕಲಿಸುವೆನದು |
ಪರಿಳೊಳಂದಿಡುಕಿದೆ ಕಡಿಗ್ನಿನ್ನಯ ||
ಸುರಗಣೆಂತೊಳಕಿಪ್ಪಸಿನ ಗರಿವೆನೆಲ್ಲವನುನೀ |
ನರಿಯದೇನುಂ ಪೆರಳ್ಗೆಳುಪಲಹುದೆ ||೧೮||

ಎನಗೊಪ್ಪಿಗೆಲ್ಲವುಂ ನೆನಪಾಗಲಿದೆಯುಳ್ಳಿ |
ಕಡೆಗೆನಾರದನೆಂದಪ್ಪಾಲಿಷ್ಟಡಪಿ ||
ಅನಿಶರೋಳವಮುನ್ನೀಗಿಳವನನಿಟ್ಟೆನೆಂದು |
ನೆನೆದುಮುಂದಾರಿ ಗಾಣದೆನೊಂದನು || ೧೯ ||

ಕಿತ್ತಿಟ್ಟಮನೆಗೆಬಳಿ ತಿಚ್ಚಿಸುತನೀಗಳಿವ |
ಹುಚ್ಚಿಸಂತಾಯ್ತಿನ್ನು ಮರುಗುತಿಹುದು ||
ಬಿಚ್ಚಿರಂದಗ್ಗರಿಗಿ ದೂಚ್ಚಿತವೆನುತಕ್ಕೆಯು |
ಬಿಟ್ಟುಗತ್ತಿಯು ಸೊಬಿಯುತಿಂತೆಂದನು || ೨೦ ||

ಹೋಗಲಸು ಬಿಲ್ಲಿನಾಳ ಗಿ ಸೀನಷ್ಟಿಯುಂ |
ಬೇಗಳಿಂ ಸಾಕಿದಳ ಕೈಪಿಡಿಪ್ಪನೆ ||
ಈಗಳೆನಸಗ್ಗಗಂಗಾಗಿ ನಾರದನೆಂದ |
ಮೋಗೆಮರುವ್ಯಮುಪಳೊಳೊಪ್ಪಿನೆಂದಂ || ೨೧ ||

ಬಿಡುಗಣ್ಣುಂ [illegible] ಸಮಬೊಂಬೆಯುತಗೊಳ್ಳು |
ಹುಡುಗನೀನಿರಲಿ ಬಾಯ್ಬಿಟ್ಟ ಸುಡಿವ ||
ಕಿಡಿಗಣ್ಣನಲ್ಲಿತಂ ಸೆಣಗೊಳದು ಮುಚ್ಚಿವ ದೆ |
ಕಡೆಗೆ ನಗುನಕ್ಕ ಜೋಗಿಯುವಾಟವೆ || ೨೨ ||

ತಣ್ಣಗೈತಂದು ನಗುತೆಣ್ಣ ತನ್ನೆಯುಗಳನು |
ಕಣ್ಣಿದುರು ವೋರೆಗೊಪ್ಪಿದ ಮಾತಿನಿಂ ||
ಬಣ್ಣವಂ ಬರೆದು ಪೋಸಣ್ಣಗಳ ಸರಿತರೇ |
ನೆಣ್ಣಬರೆಗಾಣಂ ಮುರಿಯಲುಮಾಯ್ತು || ೨೩ ||

ನರಲುತಿದ್ದಿಬ್ಬರಂ ಪೊರೆಗೊಯ್ಯು ಕನಕರದೆ |
ಪೊರೆವನಸನುಗೊಂದು ಪೊರೆಯಾಗಲು ||
ಹರಹರ ! ಪೇಳುವುದಕಿರುವುದಿನ್ನೇನು ಹಣೆ |
ಬರಹವನು ಕಾಂಬರುಂಟೇ ನೆಲದೊಳು || ೨೪ ||

ಆಗಲದು ಬರಿದೆನಾನೀಗ ಹೆಂಗುಸನಂತೆ |
ಕೂಗುವುದೆ ಮೀಸೆಯುದು ಕರಿಕೆವುಲ್ಲಿ ||
ಬಾಗಿಬದುಕುವನಲ್ಲ ಹೋಗಲನ್ನುತ್ತ ಬಾ |
ಳ್ದುಗುತಿರಿಸನು ಜಗೆಯುಳೆಚ್ಚಿದೆಯನು || ೨೫ ||

ಮುರಿವುತ್ಯಸಂನೊಂಡು ಬರುಸರಳನೆಸೆಯುಕೆ |
ಣ್ಣರಡುಕತ್ತಲಿಸ ಹಾಯೆಂದುಪೊರಲುತ ||
ಹೆರರನೆಣಿಸದನಂಬುವರು ತನ್ನನೇನೋಡಿ |
ಮುಬೆಯುಲಿಸ್ಸುತ ಲೊರಗಿದಂ ರಕ್ಕಸಂ || ೨೬ ||

ಬಂದುನಾಂದನವನ ಕೆಂದಂಗೆಮರುಗಬೇ
ಡಿಂದು ನಿನ್ನಯ್ಯನೊಳ್ದಾರಿಪಿಟ್ಟು ||
ಸಂದನೀನೆಲೆಗೆನೀಂ ದಂದುಗಂಗೊಳ್ಳದಿಹು |
ದೆಂದುದೊರೆತನವನವಗೊದಗಿಸಿದನು || ೨೭ ||

ಊರೊಳೆಲ್ಲಂಸೊಗಂಬೀರೆ ಬಿಡುಗಣ್ಣರಿಂ |
ಗಾರಲುಮ್ಮಳಪಾಗಳಾ ನಾರದಂ ||
ಸಾರಿದಂಸಗ್ಗಕಾದ್ಯಾಂಕಿಗೆರತಿಗೂಡಿ |
ಮಾರನೊಡನೈದಿದುದನೇವಣ್ಣಿಪೆಂ || ೨೮ ||

ಸರಿದನ್ನೆಕಣ್ಮುಚ್ಚಿ ತೆರೆವನಿತರೊಳಗದೇ |
ನಿರುವುದೇನೀಳ್ದಾರಿಕಾವುಂಗೆನೆ ||
ಅರಸಿಪೇಸ್ಯದುತಾ ಪೊರೆಯುವರಿದಾರೆಂದು |
ಬೆರಗುವಡುತಿರೆಹೊಕ್ಕನರಮನೆಯನು || ೨೯ ||

ಹಿರಿಯುಂಗೆಮಣಿದಪ್ಪಿ ಯುಂಬುವೆಡೆಗೆಹೋಗಿತ |
ನ್ನರೆಯುಳೊಡನೆರಗಲಪ್ಪಿರವಪ್ಪಳಂ ||
ಕಿರಿರನೆಗೆತೆರಂಬೊಳೆಯೆ ನಿರುಕಿಸಲ್ಕರೆನಿವಿಸ |
ಮುರೆಕಂಡವೊಗವೆಂದು ಬಗೆಗೊಂಡಳು || ೩೦ ||

ನೆನಪೊಡನೆಮರವೆಯಿಂ ದೆನುವಮುಚ್ಚಂತೆರೆಯು |
ಲನಿತುಮಾನಾನೆಂಬ ಸಂದೆಯಗಳಂ ||
ಕಿನಿಸಿ ದನೋಡುತೊ ದಿನಿಸುಹುಡುಕಲ್ಕಲ್ಲಿ |
ಮಿನುಗೆತಿಳಿವೆಂಬಬನ್ನಂಚೆನ್ನನೆ || ೩೧ ||

ಮಡಿದಮಗನಂಮಗುಳೆ ಪಡೆಯಲಂಪೆಣ್ಣಪೆ |
ತ್ತೊಡಲುಪರಿಯುಂಬಣ್ಣಸುತ್ತಬರಿವ ||
ಕಡುಚಾಗ್ನಿ ಈಕ್ಕೆಯೊಳೆಡೆಗೊಂಡುದಿಲ್ಲೆನಲು ||
ವಿಡಪಪ್ಪಿ ಮುಂದ್ಪಡಿಸೊಸಗೆಂದಳು || ೩೨ ||

ಹಲತೆರದಸಂಕಟದೊ ಳಲೆಮವೊಳ್ನಡತೆಯಿಂ |
ತೊಲಗದಿನಿಯಂಗೆಗೆಲ್ಲ ವನೊದಗಿಸಿ ||
ನಲವನೆಸಗಿದೆಮಗಳೆ ನೆಲದಕೆಂಗಳಿಗೆಲ್ಲ |
ಕಲಿಸಲ್ಕೆನೇಲ್ಪಂತಿಯುನ್ನು ಬರೆದೆ || ೩೩ ||

ಅತ್ತೆಯುಪಲೇನತ್ತೆ ನೆತ್ತುತೊಡಿಸಿದತೊಡು |
ದಿತ್ತುದೊಳ್ಳಂದೊಡ್ಡಿ ತಾಡುದೀಗಳ್ |
ಮತ್ತೆನ್ನಮ್ಮಬಳೆಯು ಲತ್ತಕೊಂಬೆನೆನುತ್ತ |
ಮುತ್ತುಗನ್ನಡಿಗೆರತಿನೋಡುತಿದ್ದಳ್ || ೩೪ ||

ಚೌಪದಿ || ನೆಲೆಗೊಂಡಹೆಸರಿಗಲ್ಲದೆಸಳ್ಕಬವನು |
ನಿಲಿಸದಾಂತಿಳಿದಕನ್ನಡದೊಳ್ ಬರೆದೆನು ||
ಕೆಲಸದೊಳುತಪ್ಪಿದ್ದರುಂ ನಿಚ್ಚವಾಳ್ದ |
ನಲದೊಡೆಯ ಸಂಬಳಂಗೊಡುಗಲಿಪೆ ನಡಿಗೆ || ೧ ||

ಕಂದಂ || ತಿಳಿಯಲು ತುದಿಯುಂ ಮೊದಲುಮ |
ನೊಳಕೊಂಡರಿತವರಕಣ್ಗೆ ನಾಲ್ಗಡೆಗಳೊಳುಂ ||
ಪೊಳೆವಾಣ್ಮನನೊಳ್ಪೆಯುವಂ |
ಪಳಿಯಂ ಕತ್ತಲಿಗೆ ಗಸಿಯೆ ತಪಾತೂರಯ್ಯ || ೧ ||

ಇಂತು ಸೊಬಗಿನಬಳ್ಳಿ ಮುಗಿಬಿಟ್ಟುದು.

ಸೊಬಗಿನ ಬಳ್ಳಿಯ ಗದ್ಯಾನುವಾದ.

ಮುಗುಳು ೧

ಶ್ರೀ ಕೃಷ್ಣನು ದ್ವಾರಕಾಪಟ್ಟಣದಲ್ಲಿ ಸುಖದಿಂದಿರುವಾಗ ಒಂದುದಿವಸ ಪಟ್ಟದರಸಿಯಾದ ರುಕ್ಮಿಣಿಗೆ ಏನೋ ಮನಃಖೇದವಿದೆ ಎಂದು ಗೊತ್ತಾಗಲು ಕೂಡಲೆ ಆ ರಾಣಿವಾಸಕ್ಕೆ ಹೋಗಿ ವಿಚಾರಿಸಲು ಮಕ್ಕಳಿಲ್ಲದ ದುಃಖವೆಂದು ಗೊತ್ತಾಯಿತು. "ಶಂಬರನೆಂಬ ರಕ್ಕಸನು ಲೋಕವನ್ನು ಪೀಡಿಸುತ್ತಿದ್ದಾನೆ. ನಿನ್ನ ಮಗನೇ ಅವನನ್ನು ಕೊಲ್ಲಬೇಕೆಂದು ಮಹೇಶ್ವರನ ವಿಧಿ. ಆದಕಾರಣ ನಿನಗೆ ಬೇಗನೆ ಪುತ್ರಸಂತತಿಯಾಗುವುದು." ಎಂದು ಶ್ರೀಕೃಷ್ಣನು ರುಕ್ಮಿಣಿಯನ್ನು ಸಮಾಧಾನಪಡಿಸಿದನು.

ಮುಗುಳು ೨

ಅನಂತರ ಮಣಿಪಟ್ಟಣದ ಅರಸನಾದ ಶಂಬರನು ಬೇಟೆಗೆ ಹೋದನು. ಅಲ್ಲಿ ದೂರದಲ್ಲಿ ಅಸ್ಪಷ್ಟವಾಗಿ ಕಾಣುವ ಒಂದು ವ್ಯಕ್ತಿಯನ್ನು ಮೃಗವೆಂದೆಣಿಸಿ, ಬಾಣವೆಸೆಯಲಿಕ್ಕೆ ಸಿದ್ಧನಾಗಲು ಆ ಅಸ್ಪಷ್ಟವ್ಯಕ್ತಿಯಾದ ಸ್ತ್ರೀಯು, ಬಹು ಪ್ರಯಾಸದಿಂದ ಎದ್ದು ಬಂದು ಶಂಬರನಿಗೆ ನಮಸ್ಕರಿಸಿ "ಬಾಲ್ಯವೊದಲ್ಗೊಂಡು ತಾಯಿ ತಂದೆಗಳನ್ನು ಅರಿಯೆನು. ಗಂಡನು ಕಿಚ್ಚಿಗೆ ಆಹುತಿಯಾದನು. ನಾನು ಕಾಡುಪಾಲಾದೆನು. ಕಾಪಾಡಬೇಕು." ಎಂದು ಬೇಡಿಕೊಂಡಳು. ಆ ದುಷ್ಟ ಶಂಬರನು ಕನಿಕರದಿಂದ ಒಪ್ಪಿ ಕರೆಕೊಂಡು ಹೋಗಿ ಅವಳನ್ನು ಅಡಿಗೆ ಕೆಲಸಕ್ಕೆ ನೇಮಿಸಿದನು.

ಮುಗುಳು ೩

ಆ ಮೇಲೆ ಒಂದುದಿನ ಒಡ್ಡೋಲಗದಲ್ಲಿರುವ ಶಂಬರನಲ್ಲಿಗೆ ನಾರದಋಷಿಯು ಬಂದು ಅವನ ಆಳಿಕೆಯ ರೀತಿಯನ್ನೂ ಕುಶಲವನ್ನೂ ವಿಚಾರಿಸಿದನು. ಆಗ್ಗೆ ಶಂಬರನು "ನನಗೆ ಯಾವ ಬಗೆಯಲ್ಲೂ ಕಡಿಮೆಯಿಲ್ಲ. ಕೃಷ್ಣನ ಮಗನಿಂದ ನಿನಗೆ ಮರಣವೆಂದು ಹೇಳಿದ ಬ್ರಹ್ಮನ ಮಾತಿಗಾಗಿ ಮಾತ್ರ ಎಳ್ಳಷ್ಟು ಯೋಚಿಸಬೇಕಾಗಿದೆ. ಆದರೆ ಮಹೇಶ್ವರನು "ನನ್ನ ಶಿಷ್ಯನಾದ ಕೃಷ್ಣಪುತ್ರನು ನಿನ್ನನ್ನು ವಧಿಸಬೇಕಲ್ಲದೆ ಬೇರಾರಿಗೂ ಅಸಾಧ್ಯ" ಎಂದು ವರವಿತ್ತಕಾರಣ ಇನ್ನು ಯಾವ ಹೆದರಿಕೆಯೂ ಇಲ್ಲ! ಎಂದನು. ಮಹಾ ದೇವನ ದಯದಿಂದ ಶ್ರೀಕೃಷ್ಣನಿಗೆ ಈಗ ಪುತ್ರೋತ್ಪತ್ತಿಯಾಗಿದೆ, ಆದಕಾರಣ ಈಗಲೇ ಆ ವೈರಿಯ ಸಂಗತಿಯನ್ನು ವಿಚಾರಿಸಿಕೊ ಎಂದು ಹೇಳಿ ನಾರದನು ಹೊರಟು ಹೋದನು.

ಹಗೆಯ ಬಿತ್ತನ್ನೇ ಹುರಿದು ಬಿಡುತ್ತೇನೆಂದೆಣಿಸಿ ಶಂಬರನು ಆ ರಾತ್ರಿಯೇ ದ್ವಾರಕೆಗೆ ಹೋದನು. ಮಾಯದಿಂದ ಯಾರಿಗೂ ತಿಳಿಯದಂತೆ ಮಾಳಿಗೆಗೆ ಹತ್ತಿ ಶ್ರೀಕೃಷ್ಣನ ಮಗುವನ್ನು ತಂದು ಸಮುದ್ರಕ್ಕೆ ಬಿಸಾಡಿ ನಿಶ್ಚಿಂತನಾಗಿ ಗೃಹಾಭಿಮುಖನಾದನು.

ಮುಗುಳು ೪

ಶಿವನ ಉರಿಗಣ್ಣಿಂದ ಉರಿದು ಕಾಮನು ಮಡಿದು ಹೋಗಲು, ಅನಾಥಳಾಗಿ ಕಾಡಿನಲ್ಲಿ ತೊಳಲುತ್ತ ಇದ್ದ ರತಿದೇವಿಯೇ ದೈವವಶಾತ್ ಮೊದಲು ಹೇಳಿದಂತೆ ಶಂಬರನ ಅಧೀನಳಾಗಿದ್ದಳು. ಬಾಣಸಿಗಳಾಗಿದ್ದ ಆ ಸಾಧ್ವೀಮಣಿ ತನ್ನ ಹಿಂದಿನ ಮಹತ್ವವನ್ನೂ, ಅಂದಿನ ಅವಸ್ಥೆಯನ್ನೂ ನೆನೆನೆನೆದು ಕೊರಗುತ್ತಿದ್ದಳು. ಆಗ್ಗೆ "ಅಲ್ಪ ಕಾಲದಲ್ಲಿ ನೀನು ವಲ್ಲಭನನ್ನು ಹೊಂದುವೆ" ಎಂದು ಆಕಾಶವಾಣಿಯಾಯಿತು

ಮಾರುಗಳು ೫

ಒಂದು ದಿನ ಶಂಬರನು ಸಮುದ್ರದ ಮಧ್ಯದಲ್ಲಿ ಸಿಕ್ಕಿದ ಸುಂದರವಾದ ಒಂದು ಮಗುವನ್ನು ತಂದು ಬಾಣಸಿಗಳಾದ ಆ ರತಿಯ ವಶದಲ್ಲಿ ಸಾಕಲಿಕ್ಕಾಗಿ ಕೊಟ್ಟನು. ಮಗು ಬೆಳೆಯುತ್ತಾ ಪ್ರಾಯ [illegible] ಪ್ರದ್ಯುಮ್ನನು (ಕಾಮನು). ಆತನು, ಶಂಬರನಿಗೆ [illegible] [illegible] ಗರಡಿಯ [illegible] [illegible] ಉಪವನಕ್ಕೆ [illegible] ಆ [illegible] [illegible] ಎಂದು ಹೇಳಿದನು. [illegible]

ಮಾರುಗಳು ೬

ಶಂಬರನು ನಾರದನಿಂದ [illegible] ಆತನ ಪೂರ್ವಚರಿತ್ರೆಯನ್ನು [illegible] ಪ್ರದ್ಯುಮ್ನನಾದ [illegible] ಹೇಳಿದನು. [illegible] ವಿದ್ಯಾದಾನ ಮಾಡಿ ಬೆಳೆಸುವ ಶಂಬರನ [illegible] ಮನಸ್ಸು ಎಷ್ಟಾದರೂ ಒಪ್ಪಬಹುದಲ್ಲ. [illegible] ಶಂಬರನು ಹತನಾಗುವೆನೆಂಬುದನ್ನು [illegible] ಎಂದು ಹೇಳಿ ಶಂಬರ ವಧೆಗೆ ಒಪ್ಪಿಸಿದನು. ನಾರದನು ಕೂಡಲೆ ಸ್ವರ್ಗವಾಸ್ತವ್ಯಕ್ಕೆ [illegible], ಗಾಂಧರ್ವವಿವಾಹಪೂರ್ವಕವಾಗಿ ರತೀಕಾಮರು ಅಲ್ಲಿಯೇ ಲತಾಗೃಹದಲ್ಲಿದ್ದರು.

ಕೊನೆಗಳು

ಅಷ್ಟರಲ್ಲಿ ಎಂದಿನಂತೆ ಗರುಡಿಯಲ್ಲಿ ಪ್ರದ್ಯುಮ್ನನನ್ನು ಕಾಣದೆ ಬೇಸರದಿಂದ ಶಂಬರನೂ ಅದೇ ಉಪವನಕ್ಕೆ ನಡೆದನು. ಆರಾಮದ ಬಾಗಿಲು ಮುಚ್ಚಿತ್ತು. ಕೂಗಿ ಕರೆದರೂ ಮಾತಾಡದಿರಲು, ಸಿಟ್ಟಿನಿಂದ ಒದೆಯಲು ಆ ಬಾಗಿಲು ಮುರಿದುಹೋಯಿತು. ಕೂಡಲೇ ಒಳಹೊಕ್ಕು ಹೋಗುತ್ತಿರಲು ರತಿಯೇ ಆ ರಾಕ್ಷಸನ ಕಣ್ಣಿಗೆ ಗೋಚರಿಸಿದಳು. ಆಶ್ಚರ್ಯದಿಂದ ಆಕೆಯನ್ನು ವಿಚಾರಿಸುವಲ್ಲಿ ತನ್ನ ಅಡಿಗೆಯವಳೆಂದೂ. ಅವಳ ಹಿಂದಿನ ಮತ್ತು ಆಗಿನ ನಿಜಸ್ಥಿತಿಗಳೂ ತಿಳಿದು ಬಂದುವು. ಆಕೆಯಲ್ಲಿ ತನಗಿರುವ ಅನುರಾಗವನ್ನು ಬಾಯ್ಬಿಟ್ಟು ಹೇಳಿದರೂ ಫಲವಾಗದಿರಲು ಅವಳನ್ನು ಹಿಂಬಾಲಿಸಿದನು. ರತಿಯು ಲತಾಗೃಹವನ್ನು ಹೊಕ್ಕಿದಳು. ಒಡನೆಯೇ ಆ ಲತಾಗೃಹದಿಂದ ಕಾಮನು ಹೊರಗೆ ಬಂದನು. ಶಂಬರನಿಗೂ ಅವನಿಗೂ ಯುದ್ಧವಾಯಿತು. ರಾಕ್ಷಸನು ಮಡಿದು ಹೋದನು. ಆ ರಾಜ್ಯದ ದೊರೆತನವನ್ನು ಶಂಬರನ ಮಗನಿಗೆ ದಯಪಾಲಿಸಿ ಕಾಮನು ರತಿಯೊಡನೆ ದ್ವಾರಕೆಗೆ ಹೋಗಿ ತಾಯಿತಂದೆಗಳೊಡನೆ ಸುಖವಾಗಿದ್ದನು.

ಕ್ಲಿಷ್ಟ ಪದಗಳ ಅರ್ಥಗಳು.

ಮುಗುಳು ೧

ಪದ್ಯ
೨ ಕೆಲ್ಲಾಯ್ತು—ಗುರು,
೪ ಕನಿಸಿದರೆ?—ನೋಯಿಸಿದರೆ?
೫ ಅದವಳ್ಳು—ಮುಖ,
೬ ಪನ್ನಸ—ತಪ್ಪು,

ಪದ್ಯ
೭ ಎಣ್ಣುವರು—ಎಣಿಸುವರು,
೮ ಪಿರಿಯಪುಟ್ಟು—ಮನುಷ್ಯಜನ್ಮ,
೯ ಪಾರ್ವುದು—ಹಾರೈಸುವುದು,
೧೧ ಒರೆಗೆ—ಸಮಾನಕ್ಕೆ,

ಮುಗುಳು ೨

ಪದ್ಯ
೨ ಒಬ್ಬಳಿ—ಸಮೂಹ
೫ ಮುಗಿಸು—ಒಂದುಜಾತಿಯ ಮಂಗ

ಪದ್ಯ
೫ ಉಡುಗು—ಜೋಲು
,, ಪರಡೆ—ಪ್ರಾಣಿ

ಮುಗುಳು ೩

ಪದ್ಯ
೧ ಕಿತ್ತಟ—ಮುನಿ
೩ ಮುಳಿತು—ವಿರೋಧಿಸಿ
,, ಬರ್ದಿಲರ—ದೇವತೆಗಳ
೪ ಮುನ್ನೀರು—ಸಮುದ್ರ
೬ ಮೂಜಗದೊಳ್ ಕಪಲ್ಲಿ—ತ್ರಿಲೋಕಾಧಿಪತಿ

ಪದ್ಯ
೯ ನಿಮಿಸ—ನಿಮಿಷ
೧೧ ಅಮಸೆ—ಅಮಾವಾಸ್ಯೆ
೧೨ ದುಗುಲ—ಪಟ್ಟೆ
೧೩ ಬಿದಿರ್ದ—ಬಿಸುಡಿದ
೧೬ ಅಳಿದೊಂಗುತ್ತ—ತಂತಂತುಪಡುತ್ತ

ಮುಗುಳು ೪

ಪದ್ಯ
೧ ಎಕ್ಕಟಿ—ಏಕಾಂತ
೪ ಇಲ್ಲು—ಮನೆ

ಪದ್ಯ
೫ ಕೊಂಕಗೊಂಡವನು—ವಕ್ರವಾದವನು
೭ ಸಂತಂಗೊಂಡು—ಸಮಾಧಾನಪಟ್ಟು

ಮುಗುಳು ೫

ಪದ್ಯ
೨ ಬಾಣಸಿಗಳ್—ಅಡಿಗೆಯವಳ್
,, ಪಾಪ್ಪೆ—ದುರಾಚಾರಿಣಿ
೬ ಪಸಗ್ಗೆ—ಉತ್ಪನ್ನವಾಗು
,, ಅಸಿಯಳು—ಕೃಶಾಂಗಿ
೯ ಅಳ್ಳಗೊಂಬು—ಅಡ್ಡವಾದಕೊಂಬೆ
,, ಕೊಂಬು—ಸಂಕೇತಸ್ಥಳ

ಪದ್ಯ
೧೦ ಪೂರಿಸು—ಊದು
೧೨ ಜವನಿಕೆ—ಪರದೆ
,, ಅಂಜು—ಮುಸುಕಾಗಿತೋರು
೧೫ ಬಿಸಿಲ್ ಬಗು—ಬಿಸಿಲನ್ನು ಕುಡಿಯಲಿಕ್ಕೆ ಹೋಗು
,, ಮಂತಣ—ಆಲೋಚನೆ
೨೩ ಕುಡುವಿಲ್ಲನು—ಕಾಮನು

ಮುಗುಳು ೬

ಪದ್ಯ
೮ ಒಯ್ಯಳಿ—ಸಂದೇಹಪಡು

ಪದ್ಯ
೧೪ ಹುಂಗ್ಗೆ—ಬಲಪಡಿಸು

ಮುಗುಳು ೭

ಪದ್ಯ
೪ ತುಂಬಿಡು—ನಮಸ್ಕಾರಮಾಡು
,, ನೋಂತು—ತಪಸ್ಸುಮಾಡಿ
೫ ಸನಿಯ—ಸಮೀಪ

ಪದ್ಯ
೯ ನಲ್‌ಪುಣಂ—ಒಳ್ಳೆಯ ಪರಿಣಾಮ
೧೬ ತಿರು—ಜೇಡ
೧೮ ಆಳುಪು—ಆಶೆಪಡು

ಕಾದಂಬರೀಸಂಗ್ರಹ ಗ್ರಂಥಮಾಲಾ ನಂ ೩೪

ಸಾವಿತ್ರಿ.

ಆರ್. ಎಸ್. ಎಂ.

1917

ಕ್ರಯ: 1½ ಆಣೆ

ವಿಜ್ಞಾಪನೆ

ಕನ್ನಡಿಗರೆ !

ಈಚೀಚೆಗೆ ಕರ್ನಾಟಕಭಾಷಾಸೇವೆಯನ್ನು ಮಾಡಬೇಕೆಂಬ ಆಶೆಯಿಂದ ಹಲವು ಜನ ಪಂಡಿತರು ಗ್ರಂಥಗಳನ್ನು ಬರೆಯುತ್ತಲಿದ್ದಾರೆ. ಪದ್ಯಗದ್ಯಗ್ರಂಥಗಳ ರಚನೆಗೆ ಸಾಕಾದಷ್ಟು ತಿಳುವಳಿಕೆಯು ನನ್ನಲ್ಲಿಲ್ಲ. ಅದಷ್ಟು ವಿದ್ಯೆಯನ್ನು ಆರ್ಜಿಸಿ ಬರೆಯುತ್ತೊಡಗುವುದು ಉತ್ತಮವಷ್ಟೆ. ಆದರೆ ನಾನು ವಿದ್ಯಾರ್ಜನೆಯಲ್ಲಿ ನಿರತನಾಗಿರುವಾಗಲೇ ಕಾರಣಾಂತರಗಳಿಂದ ಒಂದು ಸಣ್ಣ ಕಥೆಯನ್ನು ಬರೆಯಲು ಆತುರನಾಗಿ, ಈ ಪುಸ್ತಕವನ್ನು ಬರೆದೆನು. ಆದರೆ ಇದನ್ನು ಅಚ್ಚುಹಾಕಿಸಿ ಪ್ರಕಟಿಸಲು ಮನಸ್ಸಿರಲಿಲ್ಲ. ಕಡೆಗೆ ನನ್ನ ಹಿತೈಷಿಗಳಾದ ಕೆಲವು ಮಿತ್ರರಿಂದ ಪ್ರೇರೇಪಿಸಲ್ಪಟ್ಟು ಆ ಕಾರ್ಯದಲ್ಲಿಯೂ ತೊಡಗಿದೆನು. ಈ ಕಥೆಯಲ್ಲಿರುವ ತಪ್ಪುಗಳನ್ನು ದೋಷಜ್ಞರು ತಿಳಿಸಿದರೆ, ಅದನ್ನು ಮುಂದಣ ಮುದ್ರಣದಲ್ಲಿ ಸರಿಪಡಿಸಿಕೊಳ್ಳುವೆನು. ಹೇಗಾದರೂ ಈ ಕಥೆಯು ಕನ್ನಡಿಗರಿಗೆ ಅಭಿರುಚಿಯನ್ನುಂಟುಮಾಡುವುದೆಂದು ತಿಳಿದರೆ ನನಗೆ ಅಷ್ಟಕ್ಕೇ ಸಂತೋಷವಾಗುವುದು.

ಈ ಸಣ್ಣ ಪುಸ್ತಕವನ್ನು ತಮ್ಮ ಅಮೋಘವಾದ ಮಾಸಪತ್ರಿಕೆಯಲ್ಲಿ ಅಚ್ಚು ಹಾಕಿಸಿ ಬಹಳವಾಗಿ ಪ್ರೋತ್ಸಾಹವನ್ನು ಕೊಟ್ಟ ಮ॥ ರಾ॥ ಚಾಮರಾಜನಗರದ ವೆಂಕಟರಮಣಶಾಸ್ತ್ರಿಗಳಿಗೆ ನಾನು ಸದಾ ಕೃತಜ್ಞನಾಗಿರುವೆನು.

ಆರ್, ಎಸ್, ಎಂ.

ಸಾವಿತ್ರಿ

೧ನೆಯ ಪರಿಚ್ಛೇದ.

ಸೂರ್ಯಾಸ್ತಮಾನ ಸಮಯ. ದಕ್ಷಿಣಾನಿಲವು ಮಂದಮಂದವಾಗಿ ಬೀಸಿ ಮರ ಗಿಡಗಳ ಎಲೆಗಳನ್ನು ಅಲುಗಾಡಿಸುತ್ತಿದೆ. ಆಗ ಚಿತ್ರಾವತಿಯ ಪುರದ ದಿಣ್ಣೆಯ ಮೇಲೆ ಯುವಕರಿಬ್ಬರು ಚಿಂತಾಮಗ್ನರಾಗಿ ಕುಳಿತಿದ್ದರು. ಅವರು ಒಂದು ಬಾರಿ ಜುಳುಜುಳನೆ ಹರಿಯುವ ನದೀಪ್ರವಾಹವನ್ನು ನೋಡು ವರು. ಒಮ್ಮೆ ದೃಷ್ಟಿಯನ್ನು ತಿರುಗಿಸಿ ಮನೆಗೆ ಹೊರಡುವ ಪ್ರಾರಂಭಕ್ಕೆ ಮುಂಚೆ ನೀರನ್ನು ಕುಡಿಯುತ್ತಿದ್ದ ಗೋಗಳನ್ನು ನೋಡುವರು. ಮತ್ತೊ ಮ್ಮೆ ಬಟ್ಟೆ ಒಗೆಯುತ್ತಿರುವ ಮತ್ತು ಸಂಧ್ಯಾವಂದನೆ ಮಾಡುತ್ತಿರುವ ಬ್ರಾಹ್ಮಣಬೃಂದವನ್ನವಲೋಕಿಸುವರು. ಮಗದೊಮ್ಮೆ ಪಾತ್ರೆಗಳನ್ನು ಬೆಳಗಿ ನೀರನ್ನು ತುಂಬುತ್ತಿರುವ ಹೆಂಗಸರನ್ನು ನೋಡುವರು. ಸ್ವಲ್ಪ ಕಾಲದಲ್ಲೇ ಗೋಗಳೂ, ಹೆಂಗಸರೂ, ಗಂಡಸರೂ, ಮನೆಗೆ ತೆರಳಿದರು. ಪಕ್ಷಿಗಳು ಗೂಡುಗಳನ್ನು ಸೇರಿದುವು. ಸೂರ್ಯನು ಮುಳುಗಿದನು. ಯುವಕರು ಮಾತ್ರ ಕದಲಲಿಲ್ಲ. ಕತ್ತಲೆಯು ಮುಸುಕಿತು. ಆಕಾಶದಲ್ಲಿ ನಕ್ಷತ್ರಗಳು ಒಂದೊಂದಾಗಿ ತಲೆದೋರಿದುವು ವಕ್ರಗತಿಯುಳ್ಳ ಆ ನದಿಯು ಅಸ್ಪಷ್ಟವಾಗಿ ತೋರಹತ್ತಿತು. ಯುವಕರು ಇನ್ನೂ ಹೊರಡಲಿಲ್ಲ. ಚಿತ್ರ ವಿಚಿತ್ರಪ್ರವಾಹವುಳ್ಳ ಆ ನದಿಗೆ ಪಾದತಾಡನವಾಯಿತು. ಕಿರುತಾರೆಗಳ ಕಾಂತಿಗಳನ್ನು ತಗ್ಗಿಸಲು ಮೋಡಗಳು ಆಕಾಶದಲ್ಲಿ ಮುಸುಕಲಾರಂಭಿಸಿ ದುವು, ಅಂಧಕಾರಕ್ಕೆ ಬಲು ಹೆಮ್ಮೆಯುಂಟಾಯಿತು. ಕೆಲವುಕಾಲ ನಿಶ್ಶಬ್ದ ಒಡನೆಯೇ ಮರಮರವೆಂಬ ಶಬ್ದ ಆಗ ಮೌನಭಾವವನ್ನು ತಳೆದಿದ್ದ ಯುವಕರಿಬ್ಬರಲ್ಲೊಬ್ಬನು ನಿಟ್ಟುಸಿರುಬಿಟ್ಟು, "ಅಯ್ಯೋ! ಇನ್ನೂ ಇಲ್ಲಿ ಯೇ ಇರಬೇಕೆ? ಮನೆಗೆ ತೆರಳುವ! ವಿಧಿಬಲಹವೆಂತಿರುವುದೋ" ಎನಲು ಎರಡನೆಯವನು, ನನಗೆ ಹೋಗಲಿಚ್ಛೆಯಿಲ್ಲ. ಇಲ್ಲಿಯೇ ಇರಬೇಕೆಂದಿರು ನೆಂದನು.

ಒಂದನೆಯವ—"ನಿನಗೆ ಹುಚ್ಚು, ಇಲ್ಲಿ ನಿಂತು ನಾವು ಸಾಧಿಸುವ ಕಾರ್ಯ ವಾವುದು ?

ಎರಡನೆಯವ—ಮನಶ್ಶಾಂತಿಯೊಂದೇ ಸಾಕು

ಒಂದನೆ—ಮನಶ್ಶಾಂತಿಯು ಇಲ್ಲಿದ್ದರೇ ಬರುವುದೆಂಬುದೂ ಇನ್ನೊಂದೆಡೆ ಬಾರದೆಂಬುದೂ ಎಲ್ಲಿಯ ಮಾತು? ಯಾವ ಎಡೆಯಲ್ಲಿದ್ದರೇನು? ಯಾವನು ವಿವೇಕಶೂನ್ಯನೋ ಅಂಥವನಿಗೆ ಎಲ್ಲಿಯೂ ದುಃಖವೇ ಹೊರತು ಸುಖವು ಲಭ್ಯವಾಗುವುದಿಲ್ಲ

ಎರಡನೆ—ನಾನು, ನಿನ್ನ ಅಭಿಪ್ರಾಯದಲ್ಲಿ ಅವಿವೇಕಿಯಲ್ಲವೇ ?

ಒಂದನೆ—ಮೂರ್ಖತ್ವವನ್ನು ಬಿಡದವನಾದರೆ ವಿವೇಕಿ ಹೇಗಾಗುವೆ ?

ಎರಡನೆ—ನಿನಗೆ, ಮೂರ್ಖತನಕ್ಕೂ, ದೃಢಮನಸ್ಸಿಗೂ ಭೇದವೇ ತೋರದಂತೆ ಕಾಣುವುದು. ನಾನು ಈ ವಿಷಯದಲ್ಲಿ ಪ್ರವೇಶಿಸಿದುದರಿಂದಲೇ ಬುದ್ಧಿಹೀನನೆಂದು ತಿಳಿದಿರುವೆ ! ಅಚಾತುರ್ಯಗಳು, ನಮ್ಮ ಎದುರಿನಲ್ಲಿಯೇ ನಡೆಯುತ್ತಿರುವಾಗಲೂ, ಅವುಗಳನ್ನು ನಿವಾರಿಸಲು ನಮಗೆ ಸಾಧ್ಯವಿರುವಾಗಲೂ, ಕೈಜೋಡಿಸಿ ನಿಂತಿರಬಹುದು. ಅವುಗಳನ್ನು ತಡೆದು ಒಳ್ಳೆಯದನ್ನು ಮಾಡಲುಪಕ್ರಮಿಸಿದರೆ ನಾನು ಅವಿವೇಕಿಯಾಗುವೆನು. ಅಲ್ಲವೆ ?

ಒಂದನೆ—ನೀನು ಈಗ ನಡೆವುದನ್ನು ತಡೆಯಬಲ್ಲೆಯಾ ? ನಿನಗೆ ಆ ಶಕ್ತಿ ಇರುವುದೆಂದು ಎಣಿಸಿಕೊಂಡಿರುವಿಯಾ ?

ಎರಡನೆ—ದೇವರದಯೆಇದ್ದರೆ ಖಂಡಿತವಾಗಿಯೂ ತಪ್ಪಿಸಬಲ್ಲೆನು. ಮತ್ತೂ ಮತ್ತೂ ಅನುಕೂಲಪಡಿಸಬಲ್ಲೆನು,

ಒಂದನೆ—ದೇವರದಯೆಯಿದ್ದು ಆ ಕಾರ್ಯವು ನಿನ್ನ ಮುಖಾಂತರವಾಗಿಯೇ ಆಗಬೇಕೆಂದು ವಿಧಿಲಿಪಿಯಿದ್ದರೆ ಅದನ್ನಾರು ತಪ್ಪಿಸಬಲ್ಲರು ? ಇದಕ್ಕೇಕೆ ಚಿಂತೆ ?

ಎರಡನೆ—ಆದರೂ ನಾವು ಕಾರ್ಯಸಾಧನೆಯಾಗಲು ಯತ್ನಮಾಡದಿದ್ದರೆ ನಮಗೆ ದೈವವು ಎಂತು ಸಹಾಯ ಮಾಡೀತು ?

ಒಂದನೆ—ನಿಜ. ಅದಕ್ಕಾಗಿಯೇ ತಕ್ಕ ಪ್ರಯತ್ನಮಾಡಬೇಕು. ಈ ನದೀ ತೀರದಲ್ಲಿ ಕುಳಿತು ಚಿಂತಿಸುತ್ತಿದ್ದರೆ ನಿನ್ನ ಕಾರ್ಯವು ಅನುಕೂಲವಾಗುವುದಿಲ್ಲ.

ಎರಡನೆ—ನಾನು ಮನೆಯ ಕಡೆ ಬಂದರೆ ಮರ್ಮಭೇದಿಯಾದ ಆಲೋಚನೆಗಳು ಎದುರಿಗೆ ಬಂದು ನಿಲ್ಲುವುವು.

ಒಂದನೆ—ಪ್ರಥಮ ಮನಸ್ಸು ಮಾಡಿ ಕೆಲವು ಕಾಲ ಮನಃಕ್ಲೇಶವನ್ನು ಸಹಿಸಬೇಕು.

ಎರಡನೆ—ಅಹುದು ! ಸಹಿಸಬೇಕು. ಎಷ್ಟು ಸುಲಭವಾಗಿ ಹೇಳಬಹುದು ?

ಈರೀತಿ ಮಾತನಾಡಿದ ಬಳಿಕ ಮೆಲ್ಲ ಮೆಲ್ಲನೆ ಮಳಲು ದಿಣ್ಣೆಯನ್ನು ಬಿಟ್ಟು ನೀರಿನೊಳಗೆ ಇಳಿದರು, ಜಲವನ್ನು ದಾಟಿ ಮಾರ್ಗವನ್ನು ಸೇರಿದರು. ನದಿಗೂ ಊರಿಗೂ ಅರ್ಧಮೈಲಿಯಾಗಬಹುದು. ರಸ್ತೆಯ ಇಕ್ಕಡೆಗಳಲ್ಲೂ ಬೆಳೆದಿದ್ದ ನಿಂಬರಸಾಲಾದಿವೃಕ್ಷಶ್ರೇಣಿಗಳು ಮೇಲು ಭಾಗದಲ್ಲಿ ಚಪ್ಪರಹಾಕಿದಂತೆ ಕೊಂಬೆಗಳನ್ನು ಹರಡಿದ್ದುವು. ದಾರಿಯನ್ನು ತೋರಿಸಲು ಎಂತಹ ಬೆಳಕಾಗಲಿ ಇರಲಿಲ್ಲ. ಆದರೆ ಊರ ಜನಗಳು ಆಗಾಗ್ಗೆ ಅದೇ ಹಾದಿಯಲ್ಲಿ ರೂಢಿಯಾಗಿ ತಿರುಗಾಡುತ್ತಿದ್ದುದರಿಂದ ಕತ್ತಲೆಯಲ್ಲೂ ನೆಪ್ಪಾಗಿ ಮನೆಗೆ ಸೇರುತ್ತಿದ್ದರು.

ಎರಡನೆ—ಈಗ ನಾವು ಮಾಡುವ ಕೆಲಸವೇನು ?

ಒಂದನೆ—ಮಾಡುವುದೇನು ? ನಮಗಿನ್ನೂ ಮೂರು ತಿಂಗಳು ವಿರಾಮವಿದೆ. ಈ ಅವಧಿಯಲ್ಲಿ ಎಷ್ಟೊಂದು ಕಾರ್ಯವನ್ನಾದರೂ ನಿರ್ವಹಿಸಬಹುದು.

ಎರಡನೆ—ಈಗ ಇದರಲ್ಲಿ ನಾವೇ ಪ್ರವೇಶಿಸಿ ಮುಂದಾಳುಗಳಾಗಿ ನಿಲ್ಲುವುದು ಅಪ್ರಯುಕ್ತವಲ್ಲವೆ ?

ಒಂದನೆ—ನನಗೂ ಹಾಗೇ ತೋರುವುದು. ಅದರಲ್ಲೂ ಹೆಂಗಸರಗೊಡವೆಗೆ ಹೋಗುವುದರಲ್ಲಿ ಬಹಳ ಎಚ್ಚರಿಕೆಯಿರಬೇಕು. ನಿನ್ನ ತಂಗಿಯ ಸಹಾಯ ಈ ಕೆಲಸಕ್ಕೆ ಆವಶ್ಯಕ.

ಎರಡನೆ—ನನ್ನ ತಂಗಿ ಕೃಷ್ಣವೇಣಿಯು ನಾನು ಹೇಳಿದಂತೆ ಕೇಳತಕ್ಕವಳಾದರೂ ಈ ಸಂಗತಿ ತಿಳಿದರೆ ಒಪ್ಪುವಳೋ ಇಲ್ಲವೋ ?

ಒಂದನೆ—ಒಂದೆರಡು ಕಾಗದಗಳನ್ನು ಕೊಡಲಿಕ್ಕೆ ಒಪ್ಪದೇ ಏನು ?

ಎರಡನೆ—ಕಾಗದಗಳನ್ನು ಬರೆದವರುಂಟೆ? ನಾವು ಹಿಡಿದ ಕೇಸ ಜಯವಾದರೆ ಚಿಂತೆಯಿಲ್ಲ. ಇಲ್ಲವಾದರೆ ಕೈ ಬರಹವನ್ನು ಕೊಟ್ಟು ಮಾನ ಕಳೆದುಕೊಳ್ಳುವುದೆ ?

ಒಂದನೆ—ಹಾಗಾದರೆ ಈಗಿನ ನಡೆವಳಿಕೆ ಯೇನು ?

ಎರಡನೆ—ಏನು ನಡೆದರೂ ಬಾಯಿ ಮಾತಲ್ಲೇ ನಡೆಯಲಿ.

ಒಂದನೆ—ಸರಿ. ಅದೋ ಊರಮುಂದಿನ ಬೆಳಕು ಕಾಣುತ್ತಿದೆ. ಈಗ ಬಂದು ಸೇರಿದೆವಲ್ಲ. ಈಗ ಎಷ್ಟು ಹೊತ್ತಾಗಿರಬಹುದು.

ಎರಡನೆ—ಒಂಭತ್ತುಗಂಟೆ ಇರಬಹುದು. ಅಗೋ ತಾಲ್ಲೂಕು ಕಛೇರಿಯಲ್ಲಿ ಗಂಟೆ ಹೊಡೆಯುವುದು ಕೇಳಿಸುತ್ತಿದೆ. ನಮ್ಮನ್ನು ಮನೆಯವರು ಹುಡುಕಿಸುವರೋ, ಏನೋ ?

ಒಂದನೆ—ನಿಮ್ಮ ಮನೆಯಲ್ಲಿ ಹತ್ತುಗಂಟೆಗೆ ಮುಂಚೆ ಊಟವಾಗುವುದಿಲ್ಲ ಅಡಿಗೆಯವನು ಕಾದಿದ್ದು ಯಾವಾಗಲಾದರೂ ಬಡಿಸುವನು. ನಮ್ಮ ಮನೆಯಲ್ಲಾದರೆ ಒಂಭತ್ತುಗಂಟೆಗೇ ಮಲಗುವ ಸನ್ನಾಹ !

ಎರಡನೆ—ಅನವಶ್ಯವಾಗಿ ಬಹಳಹೊತ್ತು ಹೊಳೆಯ ಬಳಿಯಲ್ಲಿ ನಿಂತೆವು.

ಒಂದನೆ—ಇನ್ನು ಆ ಮಾತುಗಳು ಸಾಕು. ಅಲ್ಲಿನೋಡು. ನಿಮ್ಮ ಗುರುವ ಬರುತ್ತಿದ್ದಾನೆ.

ಎರಡನೆ—ಏನೋ, ಗುರುವ; ಯಜಮಾನರು ಏನು ಮಾಡುತ್ತಿದ್ದರೋ ?

ಗುರುವ—ಯಜಮಾನರು ದೀಪಾ ಹಚ್ಚೋ ಹೊತ್ತಿಗೇ ಬಂದರು. ಇಷ್ಟೊತ್ತಿದ್ದು ನಿಮ್ಮನ್ನು ಕರಕೊಂಡು ಬರಹೇಳಿದರು.

ಎರಡನೆಯವನು ಗುರುವನನ್ನು ಮನೆಗೆ ಹೋಗಹೇಳಿ ಬಳಿಕ ಸ್ನೇಹಿತರಿಬ್ಬರೂ ಆಂಜನೇಯನ ಗುಡಿ ಎದುರಿನಲ್ಲಿ ನಿಂತು ಮಾತಾಡಿ ಬೆಳಗಾಗುತ್ತಲೇ ಪುನಃ ಸೇರಬೇಕೆಂದು ನಿರ್ಧರಿಸಿದರು ಇಬ್ಬರೂ ಬೇರೆ ಬೇರೆಯಾಗುವಷ್ಟರಲ್ಲೇ ಅವರು ನಿಂತಿದ್ದ ಬೀದಿಯ ಎದುರು ಸಾಲಿನ ಮೂರನೆಯ ಮನೆಯಿಂದ ಒಂದು ವ್ಯಕ್ತಿಯು ಹೊರಗೆ ಬಂತು. ಮನೆಯ ಬೆಳಕೂ ದೀಪದ ಬೆಳಕೂ ವ್ಯಕ್ತಿಯ ಮುಖದಮೇಲೆಬಿತ್ತು. ಕ್ಷಣಕಾಲದಲ್ಲಿ ಆ ವ್ಯಕ್ತಿಯು ಬಳಿಕ್ಕೆ ಹೊರಟು ಹೋಯಿತು. ಯುವಕರಿಬ್ಬರೂ, "ಅವಳೇ, ಅವಳೇ," ಎಂದರು.

೨ನೆಯ ಪರಿಚ್ಛೇದ.

ವಾಚಕರೆ! ಯುವತೀಶ್ವರರೂ ಅವರವರ ಮನೆಗೆ ತೆರಳಿದ ಬಳಿಕ ಮುಖ್ಯವಾಗಿ ತಿಳಿಸಬೇಕಾದ ವಿಷಯವನ್ನು ತಿಳಿಸದಿದ್ದರೆ, ನಿಮಗೆ ಆಗ್ರಹ ಬರಬಹುದು. ನಾವು ಶೃಂಗಾರಶೇಖರರಾಗಿ ರಸಿಕರಾದ ನಾಯಕನಾಯಿಕೆಯರನ್ನು ಈ ಕಥೆಯಲ್ಲಿ ಸಂಪಾದಿಸಲಿಲ್ಲ. ಗೊಂಡಾರಣ್ಯಗಳಲ್ಲಿ ಹಸಿವು ಬಾಯಾರಿಕೆಗಳನ್ನು ತಡೆದು, ಹಗಲೂ ರಾತ್ರಿಯನ್ನದೆ ಕಾಂತ ಕಾಂತೆಯರನ್ನು ಹುಡಿಕಿಕೊಂಡು ಹೋಗುವ ನಾಯಕನಾಯಿಕೆಯರನ್ನೂ ಪಡೆಯಲಿಲ್ಲ. ವೀರಾಗ್ರೇಸರರಾಗಿ ಮಹತ್ಕಷ್ಟಗಳನ್ನು ಪ್ರಕಟಪಡಿಸುವವರನ್ನೂ ತರಲಿಲ್ಲ. ನಾವು ಸುತ್ತಲೂ ನಿತ್ಯಚರ್ಯೆಗಳಲ್ಲಿಯೂ, ನಿತ್ಯಾನುಭವಗಳಲ್ಲಿಯೂ ನೋಡುವ ಸಂಗತಿಗಳನ್ನೇ ಜೋಡಿಸಿಕೊಂಡು ಅವಕ್ಕೆ ತಕ್ಕ ಪಾತ್ರಗಳ ಮುಖಾಂತರ ಈ ಕಥೆಯನ್ನು ಬರೆಯಲುಪಕ್ರಮಿಸಿರುವೆವು,

ಇನ್ನೊಂದು ವಿಚಾರ:—ನಮಗೆ ಪರಿಚಯವಿರುವ ಊರುಗಳನ್ನೇ ನಮ್ಮ ಪಾತ್ರಗಳಿಗೆ ವಾಸಸ್ಥಾನಗಳಾಗಿ ಏರ್ಪಡಿಸಿರುವೆವು. ನಮಗೆ ತಿಳಿಯದ ಹೆಸರುಗಳನ್ನು ಬರೆಯುತ್ತ, ನಾವು ನೋಡಲಾಗದ ಊರುಗಳನ್ನೂ ಪಟ್ಟಣಗಳನ್ನೂ ವರ್ಣಿಸುತ್ತ ಪುರಾತನಕಾಲಗಳಲ್ಲಿ ನಡೆದ ಕಾರ್ಯಗಳನ್ನು ಕುರಿತು ಚರ್ಚಿಸಲು ನಮಗೆ ಇಷ್ಟವಿಲ್ಲ. ವಾಚಕರು ಬೇಸರಪಡದೆ ಶಾಂತಿಯಿಂದ ಪಠಿಸಿ ಸಂತೋಷಿಸಬೇಕು.

ಬಾಗೇಪಲ್ಲಿ ಎಂಬುದು ಮೈಸೂರು ಸೀಮೆಯಲ್ಲಿ ಒಂದು ತಾಲ್ಲೂಕು. ಆ ತಾಲ್ಲೂಕಿಗೆ ಆ ಹೆಸರು ಬಂದುದು ಮುಖ್ಯಊರಾದ ಬಾಗೇಪಲ್ಲಿಯಿಂದಲೇ. ಊರು ಬಹಳ ದೊಡ್ಡದಲ್ಲ. ಸುಮಾರು ಐನೂರು ಮನೆಗಳಿರಬಹುದು. ಅತಿ ವಿಶಾಲವಾದ ರಸ್ತೆಗಳಾಗಲೀ ಅತಿ ದೊಡ್ಡ ಮನೆಗಳಾಗಲೀ ಇಲ್ಲ. ಆ ತಾಲ್ಲೂಕಿನ ಉದ್ಯೋಗಸ್ಥರು ಅಲ್ಲಿಯೇ ವಾಸಮಾಡುವುದರಿಂದ ಊರು ಅಷ್ಟುಮಟ್ಟಿಗಾದರೂ ಇದೆ. ಕೆಲವುವರ್ಷಗಳ ಹಿಂದೆ ಇದೊಂದು

ಕುಗ್ರಾಮವಾಗಿತ್ತು, ಒಂದೆರಡು ಬ್ರಾಹ್ಮಣರ ಮನೆಗಳೂ ಕೆಲವು ಬೆಸ್ತರ ಗುಡಿಸಲುಗಳೂ ಇದ್ದುವು ಈಚೀಚೆಗೆ ಊರು ಅಭಿವೃದ್ಧಿಸ್ಥಿತಿಯನ್ನು ಹೊಂದುತ್ತಿರುವುದು. ಬಾಗೇಪಲ್ಲಿಯ ಸುತ್ತಲೂ ಬೆಟ್ಟ ಗುಡ್ಡಗಳು ಹೆಚ್ಚು. ಮಳೆನಾಡುಗಳಲ್ಲಾದರೋ ಬೆಟ್ಟಗಳಿದ್ದರೂ, ಗಂಭೀರವಾದ ಅತ್ಯುನ್ನತಶ್ರೇಣಿಗಳು ತುಂಬಿರುವುವು. ಮತ್ತು ಘೋರವಾದ ಅರಣ್ಯಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡು ದೂರದೂರಗಳಲ್ಲಿ ಒಂದೊಂದು ಹಳ್ಳಿಗಳನ್ನು ಒಳಗೊಂಡಿರುವುದು. ಬೈಲುಸೀಮೆಯಲ್ಲಿ ಪಶ್ಚಿಮಘಟ್ಟದ ರಾಮಣೀಯಕತೆಯು ಬಾರದಿದ್ದರೂ ವಿಶೇಷವಾಗಿ ಕೆರೆಗಳಿರುವುದರಿಂದ ಈ ಭೂಮಿಯು ಪೈರು ಪಚ್ಚೆಗಳಿಂದ ಕೂಡಿ, ಮನೋಹರವಾಗಿರುವುದು. ಆದರೆ ಈಗ ಎರಡುವರ್ಷಗಳಿಂದ ಮಳೆಯಿಲ್ಲದೆ, ಕೆರೆಗಳು ತುಂಬದ್ದರಿಂದ ಕುಡಿಯುವ ನೀರು ಸಿಕ್ಕುವುದೂ ಕಷ್ಟವಾಗಿದೆ. ಒಂದೊಂದು ವೇಳೆ ಹಳ್ಳಿಯ ಜನಗಳು ನೀರಿಗಾಗಿ ಒಂದು ಮೈಲಿಯವರೆಗೂ, ಮಡಿಕೆಗಳನ್ನೂ, ಬಿಂದಿಗೆಗಳನ್ನೂ ಹೊತ್ತುಕೊಂಡು ಹೋಗುವರು. ಬಾಗೇಪಲ್ಲಿಯಲ್ಲಿಯೂ ಕೂಡ, ಸಿಹಿನೀರು ಸಿಕ್ಕುವುದು ಕಷ್ಟ. ನದಿಗೆ ಹೊಸನೀರು ಬಂದಾಗ ರೋಗಾದಿಗಳು ಬರುವುವೆಂದು ಹೆದರಿ ಜನಗಳು ಬಹಳ ದೂರದಿಂದ ಕುಡಿಯುವ ನೀರನ್ನು ತಂದುಕೊಳ್ಳುವರು.

ಚಿತ್ರಾವತಿಯ ಬಳಿಯಲ್ಲಿ ಇಬ್ಬರು ಯುವಕರು ಮಾತನಾಡುತ್ತಲಿದ್ದರೆಂದು ಹೇಳಿರುವೆವು ಈ ಚಿತ್ರಾವತಿ ಹೊಳೆಯು ಬಾಗೇಪಲ್ಲಿಗೆ ಅರ್ಧಮೈಲಿಯ ದೂರದಲ್ಲಿ ಹರಿಯುವುದು. ಬೇಸಿಗೆಯಲ್ಲಿ ಒಂದು ಕಾಲುವೆಯಲ್ಲಿಯೂ, ಮಳೆಗಾಲದಲ್ಲಿ ಇಕ್ಕಡೆಗಳಲ್ಲಿ ಉಬ್ಬಿಯೂ ಇದು ಪ್ರವಹಿಸುವುದು. ಈನದಿಯಿಂದ ಕೊಂಚಮಟ್ಟಿಗೆ ತೋಟಗಳನ್ನೂ, ಗದ್ದೆಗಳನ್ನೂ, ಬೆಳೆಯಿಸಿಕೊಂಡು ಜನರು ನೆಮ್ಮದಿಯಾಗಿರುವರು. ಊರಿನ ಜನರು ಕುಡಿಯಲು, ಚಿತ್ರಾವತಿಯೇ ನೀರನ್ನು ಕೊಡಬೇಕು, ಚಿತ್ರಾವತಿಯಿಂದ ಬಹಳ ಪ್ರಯೋಜನವುಂಟು. ಒಟ್ಟೆಗಳನ್ನು ಒಗೆಯುವುದಕ್ಕೂ ಸ್ನಾನಸಂಧ್ಯಾವಂದನೆಗಳಿಗೂ, ಪಾತ್ರೆಗಳನ್ನು ಬೆಳಗುವುದಕ್ಕೂ ಬಹಳ

ಸಹಾಯವಾಗಿರುವುದು. ದನಕರುಗಳು ಯಾವ ಕಾಲದಲ್ಲಿಯಾದರೂ ಹೋಗಿ ನೀರನ್ನು ಕುಡಿಯುವುವು. ಸಾಯಂಕಾಲದಲ್ಲಿ ಹುಡುಗರು ಆಟ ಪಾಟಗಳನ್ನಾಡುವರು.

ತಾಲ್ಲೂಕು ಕಛೇರಿಯ ಮುಂದುಗಡೆಯಲ್ಲಿ ಆಂಜನೇಯನಗುಡಿ ಬೀದಿಯೊಂದಿರುವುದು. ಆಂಜನೇಯನ ಗುಡಿಗೆ ಮೂರನೇಮನೆಯು ಒಬ್ಬ ಶ್ಯಾನುಭೋಗನದು. ಶಾನುಭೋಗನಾದರೂ, ಆಸ್ತಿಯು ಚೆನ್ನಾಗಿತ್ತು. ಭೂಸ್ಥಿತಿಯು ಬಲವಾಗಿತ್ತು. ಈತನಿಗೆ ಎರಡುಮನೆಗಳೂ, ೫೦೦೦ ರೂಪಾಯಿಗಳ ಮೂಲಧನವೂ ಉಂಟು. ಈತನ ಹೆಸರು ಕೋನೇರಯ್ಯ. ಈತನ ವಯಸ್ಸು ಸುಮಾರು ೩೫ ವರುಷಗಳಿರಬಹುದು. ರೂಪು ಅಷ್ಟೇನು ಚಲುವಲ್ಲ; ಕುರೂಪಿಯೂ ಅಲ್ಲ. ಆಕಾರದಲ್ಲಿ ಗಿಡ್ಡ.

ಈ ಕೋನೇರಯ್ಯನೇ ಮನೆಗೆ ಯಜಮಾನನು. ಮನೆಯಲ್ಲಿ ಈತನ ಬಲತಾಯಿ, ಮತ್ತು ತಂಗಿಯೊಬ್ಬಳು ಇರುವಳು. ಈ ತಂಗಿಯು ಸ್ವಂತ ತಂಗಿಯಲ್ಲ; ಬಲತಾಯಿಯ ಮಗಳು. ಇವರಲ್ಲದೆ, ಕೋನೇರಯ್ಯನ ಹೆಂಡತಿ ಭಾವಮೈದಂದಿರೂ ಇರುವರು. ಹಳ್ಳಿಯಕಡೆಯಿಂದ ಬರುವ ಆಳುಗಳು ಮನೆಯ ಕೆಲಸಗಳನ್ನು ಮಾಡುವರು. ಆದರೆ, ಅಡಿಗೆಯ ಮನೆಯ ಯಜಮಾನಿಯು ಕೋನೇರಯ್ಯನ ಬಲತಾಯಿ ನಾಗಮ್ಮನಾಗಿದ್ದಳು. ಈ ಯಾಜಮಾನ್ಯಕ್ಕೆ ಇತರರಾರೂ ಬರಲಿಲ್ಲವಾದುದರಿಂದ ನಾಗಮ್ಮನೇ ವಹಿಸಬೇಕಾಯಿತು. ಇದರಿಂದ ಮನಸ್ಸಿಗೆ ಹೆಮ್ಮೆಯು ಬರಲು ಅವಕಾಶವಿರಲಿಲ್ಲ.

ಕೋನೇರಯ್ಯನ ತಂದೆಯು ತನ್ನ ಜೀವಿತಕಾಲದಲ್ಲಿ ವಿಷಯಾಸಕ್ತನಾಗಿದ್ದನು. ತನ್ನ ಮೊದಲನೇ ಹೆಂಡತಿಯು ಸಾಯುವಕಾಲದಲ್ಲಿ ೯ ವರುಷದ ಮಗನಾಗಿದ್ದರೂ ಅವರ ಹಿಂದೆಮುಂದೆ ಕೆಲವು ಮಕ್ಕಳು ಲೋಕಾಂತರವನ್ನು ಹೊಂದಿದ್ದರೂ ಇನ್ನೊಂದು ಮದುವೆಯನ್ನು ಮಾಡಿಕೊಂಡು ಸಂಸಾರಸುಖವನ್ನು ಅನುಭವಿಸಲು ಮನಸ್ಸು ಮಾಡಿದನು. ಇದಕ್ಕಾಗಿಯೇ ನಾಗಮ್ಮನನ್ನು ಪಾಣಿಗ್ರಹಣಮಾಡಿಕೊಂಡು ಕೆಲವು ವರುಷಗಳ ನಂತರ

ಒಂದು ಹೆಣ್ಣು ಮಗುವನ್ನು ಹೊಂದಿದನು. ಆ ಹೆಣ್ಣು ಮಗುವು ದೊಡ್ಡದಾಗಿ ಅದಕ್ಕೆ ತಾನು ಮದುವೆಯನ್ನು ಮಾಡುವಷ್ಟು ಪುಣ್ಯವನ್ನು ಮಾತ್ರ ಹೊಂದಲಿಲ್ಲ. ಆದುದು ಸಾವಿತ್ರಿಗೆ ನಾಲ್ಕು ವರುಷಗಳು ತುಂಬುವುದಕ್ಕಿಂತ ಮೊದಲೇ ಕೋನೇರಯ್ಯನ ತಂದೆಯು ಈಲೋಕವನ್ನು ಬಿಟ್ಟನು. ನಾಗಮ್ಮನಿಗಾದರೋ ತನ್ನ ತೌರುಮನೆಯವರಾರೂ ಇರಲಿಲ್ಲ. ವೈದಿಕನಾದ ಸುಬ್ಬಯ್ಯನು ಬಹಳ ಸಹಾಯಮಾಡಿ, ಸ್ಥಿತಿಗಳೆಲ್ಲವನ್ನೂ ಪರ್ಣಡಿಸಿ, ಎಚ್ಚರಿಕೆಯಿಂದ ಸಂಸಾರವನ್ನು ನೋಡಿಕೊಂಡು ಬರುತ್ತಿದ್ದನು. ಸಾವಿತ್ರಿಯು ದೊಡ್ಡವಳಾಗುತ್ತ ಬಂದಳು. ಸುಬ್ಬಯ್ಯನಿಗೆ ಸಾವಿತ್ರಿಯಲ್ಲಿ ಬಹಳ ಆದರ, ಬಹಳ ಪ್ರೀತಿ. ಸಾವಿತ್ರಿಯೂ, ಯಾವಾಗಲೂ, "ಚಿಕ್ಕಪ್ಪ ಚಿಕ್ಕಪ್ಪ" ಎನ್ನುತ್ತ ಬಂದು ಘುಳಗೇರೂ ಬಿಟ್ಟೀಳು. ಸಾವಿತ್ರಿಗೆ ೯ ವರುಷಗಳು ತುಂಬಿದವು. ಆಗ ಸುಬ್ಬಯ್ಯನಿಗೆ ಊರು ಬಿಟ್ಟು ಹೊರಟು ಹೋಗುವ ಕೆಲಸವೊಂದು ಪರ್ಣಟ್ಟಿತು. ಕೋನೇರಯ್ಯನಿಗೆ ಶಾನಭೋಗ ಕೆಲಸವನ್ನು ಮಾಡಿಸಿಕೊಟ್ಟು ತಾನು ಕೆಲವು ಕಾಲದಲ್ಲಿಯೇ ಹಿಂದಿರುಗಿ ಬರುವುದಾಗಿ ಹೇಳಿ ಹೊರಟುಹೋದನು. ಕೋನೇರಯ್ಯನ ಇನ್ನೊಬ್ಬ ಚಿಕ್ಕಪ್ಪನು ಆಗಾಗ್ಗೆ ಬಂದು ಇವರನ್ನು ವಿಚಾರಿಸಿ ಕೊಳ್ಳುತ್ತಿದ್ದನು.

೩ನೇ ಪರಿಚ್ಛೇದ.

"ಸಾವಿತ್ರಿ ಬೆಳಕ್ಕೆ ಬಾರೆ, ಅಯ್ಯೋ ಬೇಗ ಬಾರೆ"

"ಏನಮ್ಮ ಬಂದು ಸ್ವಲ್ಪ ಹೊತ್ತಾದರೂ ವಿರಾಮ ಬೇಡವೇ ?"

ನಾ—"ವಿರಾಮವಿರಲಿ, ಅಲ್ಲಿ ನೋಡು, ನಿನ್ನ ಅಣ್ಣನು ನಿನಗೆ ಗಂಡನನ್ನು ಕರೆತರುವಂತಿದೆ. ಇಂದಿಗೆ ಮೂರು ತಿಂಗಳುಗಳಾಗಿ ಹೋದುವು. ಹುಡುಕಿದ ಕಡೆಗಳಲ್ಲೆಲ್ಲಾ ಸರಿಯಾದ ವರನು ಸಿಗಲಿಲ್ಲ. ಈಗ ದೊರತಂತಿದೆ"

ಸಾ—ನನಗೆ ಮದುವೆಯ ಯೋಚನೆಯೇನೂ ಇಲ್ಲವಲ್ಲ.

ನಾ—ನಿನಗೆ ಏಕೆ ಇದ್ದೀತು? ಹೆಣ್ಣು ಮಕ್ಕಳನ್ನು ಹೆತ್ತು ಅವರಿಗೆ ವಯಸ್ಸಾಗುತ್ತಾ ಬರುವುದನ್ನು ನೋಡುವ ತಂದೆತಾಯಿಗಳಿಗಲ್ಲವೇ ಯೋಚನೆ?

ಸಾ—"ಅಹುದು—ವರನೊಬ್ಬ ಯಾವನಿದ್ದರೂ ಸರಿ, ತಂದು ಗಂಟು ಹಾಕಿ ಬಿಡುವ ಯೋಚನೆಯು ಹೊರತು, ತಕ್ಕವನೇ, ರೂಪ ಯೌವನಗಳಲ್ಲಿಯೂ, ವಿದ್ಯಾ ಬುದ್ಧಿಗಳಲ್ಲಿಯೂ ಸಿಕ್ಕುವನೇ ಎಂದು ಯೋಚಿಸುವುದಿಲ್ಲ.

ನಾ—ಹಾಗೆ ತಿಳಿಯಬೇಡ. ತಮ್ಮ ಹೊಟ್ಟೆಗಳಲ್ಲಿ ಹುಟ್ಟಿದ ಮಕ್ಕಳು ಸುಖವಾಗಿ ಬಾಳಲೆಂದು ತಂದೆತಾಯಿಗಳಿಗೆ ಆಲೋಚನೆಯಿರುವುದಿಲ್ಲವೇ?

ಸಾ—ಇರುವುದು ನಿಜ—ಆದರೆ ನಮ್ಮ ಹಳ್ಳಿಯಲ್ಲಿ ಸುಂದರಮ್ಮನ ಮದುವೆಯಾಯಿತಲ್ಲ ವರನಿಗೆ ನಲವತ್ತು ವರ್ಷ. ವಿದ್ಯೆಯಿಲ್ಲ, ಬುದ್ಧಿಯಿಲ್ಲ, ರೂಪವಲ್ಲಂತೂ ಮನ್ಮಥನೇ ಸರಿ, ಅದು ಹೇಗೆ ಕೊಟ್ಟು ಮದುವೆ ಮಾಡಿದರು?

ನಾ—ಬ್ರಹ್ಮ ಬರೆದದ್ದು—ಅದಕ್ಕೆ ನಾವೇನು ಮಾಡೋಣ?

ಸಾ—ಅಂತಹ ವಿವಾಹಗಳನ್ನು ಮಾಡುವುದಕ್ಕಿಂತ, ನಿಮ್ಮ ಮಕ್ಕಳನ್ನು ಭಾವಿಗೆ ತಳ್ಳಿ, ನೀವೂ ಬೀಳುವುದು ಲೇಸು.

ನಾ—ನೀನು ಹುಚ್ಚು ಹುಡುಗಿ ತಾಳು. ನಾವು ಅಡಿಗೆಯ ಮನೆಗೆ ಹೋಗೋಣ, ಅವರು ಬಂದರು.

ಕೋನೇರಯ್ಯನೂ ರಾಮಚಂದ್ರಯ್ಯನೂ ಬಂದರು. ಮನೆಯೊಳಗಿನ ಕೋಣೆಯಲ್ಲಿ ರಾಮಚಂದ್ರಯ್ಯನನ್ನು ಕೂರಿಸಿ ತನ್ನ ಮಲತಾಯಿಯ ಬಳಿಗೆ ಬಂದು "ವರನನ್ನು ಕರತಂದಿರುವೆನು ಬೇಗನೆ ಅಡಿಗೆಯನ್ನು ಮಾಡಿದರೆ, ಮುಂದಿನ ವಿಷಯಗಳನ್ನು ಆಲೋಚಿಸಬಹುದು" ಎಂದನು. ವರನೆಂಬ ಮಾತು ಕಿವಿಗಳಿಗೆ ಬಿದ್ದಿತೋ ಇಲ್ಲವೋ ಆಗಲೇ ನಾಗಮ್ಮನಿಗೆ ಪುಳಕಾಂಕಿತವಾಯಿತು. ಕೂಡಲೇ ಸಂಭ್ರಮದಿಂದ ಅಡಿಗೆಯನ್ನು ಮಾಡಿದಳು. ಸ್ನಾನಸಂಧ್ಯಾವಂದನೆಗಳಾದನಂತರ ಊಟಕ್ಕೆ ಕುಳಿತರು. ಅಳಿಯನು

ಎಂತಹವನೋ ಎಂದು ನಾಗಮ್ಮನಿಗೆ ಭಾವನೆಯುಂಟಾಯಿತು. ನಾಚಿಕೆಯಾಯಿತು, ಓದಿಸಲು ಸಂಕೋಚವಾಯಿತು. ಆದರೂ ಯತ್ನವಿಲ್ಲದೆ ಉತ್ಸಾಹಗಳಿಲ್ಲವನ್ನು ತರೆದುಕೊಂಡು ಓದಿಸಿದಳು ಓದಿಸುವಾಗ ಒಂದೆರಡು ತಡವೆ ಅಳಿಯ ನಾಗುವವನನ್ನು ನೋಡಿದಳು. ನಾಗಮ್ಮನ ಹೊಟ್ಟೆಯಲ್ಲಿ ಚಿಂಕಿಬಿತ್ತು.

ಊಟವಾದ ನಂತರ ರಾಮಚಂದ್ರಯ್ಯನು ಕೊಠಡಿಯಲ್ಲಿ ಸ್ವಲ್ಪ ಮಲಗಿದನು. ಕೋನೇರಯ್ಯನಾದರೋ ತಾನು ಪಟ್ಟ ಕಷ್ಟಗಳೆಲ್ಲವನ್ನೂ ಹೆಂಡತಿಗೆ ವಿವರಿಸುತ್ತಿದ್ದನು. ಎಲ್ಲೆಲ್ಲಿಯೂ ಹುಡುಕಿದುದಾಯಿತು ಕೆಲವರಿಗೆ ಆಸ್ತಿಯಿಲ್ಲ. ಕೆಲವರಿಗೆ ವಿದ್ಯೆಯಿಲ್ಲ ಕೆಲವರಿಗೆ ತಾಯಿತಂದೆಗಳಿಲ್ಲ. ಮತ್ತು ತಮ್ಮವರಾಗಿರುವವರಲ್ಲಿ ಗಂಡೆಂಬುವನೊಬ್ಬನೂಯಿಲ್ಲ. ಕಡೆಗೆ ಈ ರಾಮಚಂದ್ರಯ್ಯನನ್ನು ಎಷ್ಟೋವಿಧವಾಗಿ ಬೇಡಿಕೊಂಡು, ನಮ್ಮ ಮನೆಯನ್ನು ಉದ್ಧಾರಮಾಡಬೇಕೆಂದು ಕೇಳಿಕೊಂಡುದಕ್ಕೆ ಒಪ್ಪಿರುವನು. ಮತ್ತು ರಾಮಚಂದ್ರಯ್ಯನಿಗೂ, ತನ್ನ ಚಿಕ್ಕಪ್ಪಂದಿರಿಗೂ ವ್ಯವಹಾರಗಳೂ ಚೆನ್ನಾಗಿಲ್ಲ. ತಾವು ಏನೊಂದು ಸಹಾಯವನ್ನು ಮಾಡದಿದ್ದರೂ ಇದಕ್ಕೆ ಆಕ್ಷೇಪಣೆ ಮಾಡುವುದರಲ್ಲಿ ನಿಸ್ಸೀಮರು ಎಂಬ ಅಭಿಪ್ರಾಯದಿಂದಲೇ ತನ್ನ ಇನ್ನೊಬ್ಬ ಚಿಕ್ಕಪ್ಪನಿಗೂ ಈ ಸಮಾಚಾರವನ್ನು ತಿಳಿಸಲು ಇಷ್ಟವಿಲ್ಲ. ಈಗ ಈ ವರನನ್ನು ಹೇಗಾದರೂ ಒಪ್ಪಿಸಿದರೆ ಮುಂದಕ್ಕೆ ಬಹಳ ಅಭಿವೃದ್ಧಿಯನ್ನು ಹೊಂದಬಹುದು. ಎಂಬಿವೇ ಮುಂತಾದ ಮಾತುಗಳನ್ನು ಹೇಳಿದನು.

ನಾ—"ಅಪ್ಪಾ, ವರನಿಗೆ ವಯಸ್ಸು ಮೀರಿರುವುದಲ್ಲ! ನಮ್ಮ ಸಾವಿತ್ರಿಯನ್ನು ಇವನಿಗೆ ಕೊಡಲು ಮನಸ್ಸೇ ಇಲ್ಲ."

ಕೋ—"ಅಹುದು ನಿಜ, ಆದರೆ ಏನು? ಮೂವತ್ತು ಅಥವಾ ಮೂವತ್ತೈದು ವರುಷದವನಂತೆ ಕಾಣುವನು! ಬಹಳ ಆಸ್ತಿಯುಂಟು! ಹಿಂದೂಪುರಕ್ಕೆ ಸಮೀಪದಲ್ಲಿನ ನಾಗೋಡಿಯಲ್ಲಿರುವನು. ಮೊದಲನೆಯ ಹೆಂಡತಿ ಮಕ್ಕಳಾರೂ ಇಲ್ಲ. ಅವಳೂ ಇಲ್ಲ. ಇದಕ್ಕಿಂತ ಮೇಲಾದ ವರನನ್ನು ಹುಡುಕುವುದು ಸಾಧ್ಯವಿಲ್ಲ."

ನಾ—ನನ್ನ ಸಾವಿತ್ರಿಯು ವಿದ್ಯಾವತಿ, ತಕ್ಕಮಟ್ಟಿಗೆ ತಿಳುವಳಿಕೆಯುಳ್ಳವಳು. ಅವಳು ಒಪ್ಪುವಳೋ ಇಲ್ಲವೋ ?

ಕೋ—ಒಪ್ಪದೇನು ? ಆಭರಣಗಳು, ಹಣ, ಯಜಮಾನಿಕೆ, ಇವೆಲ್ಲವೂ ಎದುರಿನಲ್ಲಿರುವಲ್ಲಿ ಒಪ್ಪದೇ ಏನು ? ಹಟಮಾಡದೇ ಅವಳನ್ನು ನೀನು ಒಪ್ಪಿಸು.

ನಾ—ಅಯ್ಯೋ ಹಣಕ್ಕೆ ಆಶೆಪಡುವಳಲ್ಲವಲ್ಲ. ಆಭರಣಗಳನ್ನು ಕಸಕ್ಕಿಂತಲೂ ಕಡೆಯಾಗಿ ಎಣಿಸುವಳು.

ಕೋ—ನನ್ನ ಕೈಲಾದುದನ್ನು ಮಾಡಿರುವೆನು. ಇನ್ನು ನಿಮ್ಮ ಚಿತ್ತ.

ನಾ—ನಿನ್ನ ಚಿಕ್ಕಪ್ಪನಾದರೂ ಬಂದಿದ್ದರೆ ಆಲೋಚಿಸಬಹುದಾಗಿತ್ತು. ಹೋಗಿ ಮೂರು ವರುಷಗಳಾದುವು. ಇನ್ನೂ ಬರಲಿಲ್ಲ. ನನ್ನ ಇನ್ನೊಬ್ಬ ಮೈದುನನಿಗಾದರೂ ಹೇಳಿಕಳುಹಿಸೋಣವೇ ?

ಕೋ—ಹೇಳೇನು ಕಳುಹಿಸುವುದು. ಅವನು ಬಂದರೆ ಈಮದುವೆಗೆ ವಿಘ್ನವಲ್ಲದೆ ಮತ್ತೆ ಬೇರೆಯಿಲ್ಲ. ಈಗ ಸಾವಿತ್ರಿಗೂ ಈಸಮಾಚಾರಗಳು ಏಕೆ ತಿಳಿಯಬೇಕು ? ಮದುವೆಯನ್ನು ನಿಷ್ಕರ್ಷೆಮಾಡಿ ಕೆಲಸಗಳಿಗೆ ಆರಂಭಿಸೋಣ. ಮದುವೆಯಾಗುವಾಗ ತಿಳಿದರೇಸಾಕು.

ಕೋನೇರಯ್ಯನು ವರನನ್ನು ಹುಡುಕುವುದಕ್ಕೆ ನಿಜವಾಗಿಯೂ ಕಷ್ಟಪಡಲಿಲ್ಲ. ಅತನು ತನ್ನ ತಂಗಿಗೆ ಅನುರೂಪವಾದ ವರನನ್ನು ಸಂಪಾದಿಸಬೇಕೆಂಬ ಉದ್ದೇಶ್ಯವಿದ್ದಿದ್ದರೆ, ಇತರ ಕಡೆಗಳಲ್ಲಿ ತಕ್ಕವರು ಸಿಗುತ್ತಿದ್ದರು. ಆದರೆ ಕೇವಲ ದುರಭಿಪ್ರಾಯದಿಂದ ರಾಮಚಂದ್ರಯ್ಯನನ್ನು ತಂದನು. ಸ್ವಕಾರ್ಯವನ್ನು ಘಟಿಸಿಕೊಳ್ಳುವುದಕ್ಕಾಗಿ ಕುಯುಕ್ತಿಗಳನ್ನು ಮಾಡಿದನು. ರಾಮಚಂದ್ರಯ್ಯನಿಗೆ ಮದುವೆಯಾದುದಾದರೆ ತನ್ನ ತಂಗಿಯಮೂಲಕ, ಕೆಲವು ಭೂಮಿಗಳನ್ನು ಸಂಪಾದಿಸಬಹುದೆಂದು ನಿಷ್ಕರ್ಷಿಸಿದನು.

ರಾಮಚಂದ್ರಯ್ಯನಿಗೆ ಸುಮಾರು ನಲವತ್ತೈದು ವರ್ಷಗಳು ಆಗಲೇ ಕೂದಲು ನರೆಯುತ್ತಬಂದಿತ್ತು. ಮುಖದಲ್ಲಿ ಕಾಲವು ತನ್ನ ಚಿಹ್ನೆಗಳನ್ನೂ

ಗಳಿಗುನನ್ನು ಬರೆದಿತ್ತು. ಸ್ವಲ್ಪಮಟ್ಟಿಗೆ ಗೂನು ಶರೀರ. ಕೋನೇರಯ್ಯನ ತಂದೆಯೂ, ರಾಮಚಂದ್ರಯ್ಯನೂ ಸ್ನೇಹಿತರಾಗಿದ್ದರು. ರಾಮಚಂದ್ರಯ್ಯನಿಗೆ ಮೊದಲನೇ ಹೆಂಡತಿಯು ಗತಿಸಿದ ನಂತರ, ಇನ್ನೊಂದು ಮದುವೆಗೆ ಬಹಳವಾದ ಪ್ರಯತ್ನಗಳನ್ನು ಪಟ್ಟನು. ಆದರೆ ಸಾಧ್ಯವಾಗಲಿಲ್ಲ. ಈಗ ಕೋನೇರಯ್ಯನಿಗೆ ಕೆಲವು ಭೂಸ್ಥಿತಿಯನ್ನು ಕೊಡುವೆನೆಂತಲೂ, ವಧುವಿಗೆ ಸರ್ವಾಭರಣಗಳನ್ನು ಇಡುವೆನೆಂತಲೂ ಹೇಳಿ ಮೆಚ್ಚಿಸಿದನು. ಮುತ್ತಾತನ ವಯಸ್ಸು ಎಂಭತ್ತು ಬಂದಿದ್ದುದರಿಂದ ಲೇವಾದೇವಿಗಳನ್ನೂ, ಲೆಕ್ಕಪತ್ರಗಳನ್ನೂ, ನೋಡಿಕೊಳ್ಳುವರಾರೂ ಇಲ್ಲ. ಭಾಗಾವಳಿಯನ್ನು ನೆಟ್ಟಿಗೆ ತರಬೇಕು. ಇವಕ್ಕೆಲ್ಲಕ್ಕೂ ಕೋನೇರಯ್ಯನ ಸಹಾಯವು ಸಿಗುವುದೆಂದು ಭಾವಿಸಿದನು. ಕೋನೇರಯ್ಯನಾದರೋ ಆಗಾಗ್ಗೆ ಭಾವನಕೆಲಸಗಳಲ್ಲಿ ಪ್ರವೇಶಿಸುತ್ತ, ಆತನ ಭೂಸ್ಥಿತಿಯನ್ನು ಅಪಹರಿಸಬೇಕೆಂದು ಆಲೋಚಿಸಿದನು. ಇವರಿಬ್ಬರ ಕುಯುಕ್ತಿಗಳಿಂದ ಅನಾಥಳಾದ ಸಾವಿತ್ರಿಗೆ ಬಹಳ ಕಷ್ಟವೊದಗಿತು.

ಅಯ್ಯೋ ಚಂಡಾಲ! ಪರಮಪಾತಕಿ! ನಿಷ್ಕರುಣಿ! ಆ ಅನಾಥಳಾದ ಹುಡುಗಿಯನ್ನು ನಿರಂತರವಾದ ನರಕದಲ್ಲಿ ನೂಕಲು ಆಲೋಚಿಸಿರುವೆಯಲ್ಲ. ಆಕೆಯು ನಿನಗೆ ಯಾವ ಕೆಡಕನ್ನೂ ಎಣಿಸಲಿಲ್ಲ. ಮನೋವಾಕ್ಕಾಯಗಳಿಂದ ಕನಸಿನಲ್ಲಿಯೂ "ಅಣ್ಣಾ ಅಣ್ಣಾ" ಎಂದು ಹೇಳುತ್ತಿದ್ದುದಕ್ಕೆ ತಕ್ಕ ಉಪಕಾರವನ್ನೇ ಮಾಡುವದರಲ್ಲಿರುವೆ. ನಿನಗಾಗಿಯೇ ಬೇರೊಂದು ಯಮಲೋಕವು ಸೃಷ್ಟಿಯಾಗಬೇಕು. ಆ, ಏನೂ ಅರಿಯದ ಬಾಲಕಿಯನ್ನು, ಪಾಲಕರಿಲ್ಲದ, ಪೋಷಕರಿಲ್ಲದ ಬಾಲೆಯನ್ನು, ನಿಷ್ಕಾರಣವಾಗಿ ದುಃಖಸಮುದ್ರಕ್ಕೆ ಬಲಿಯಾಗಿ ಒಪ್ಪಿಸಿಕೊಳ್ಳುವೆ ನೀಚ, ನಿನಗೆ ಕೊನೆಗಾಲವು ಎಂದಿಗೋ?

ಮುದುಕನ ರಾಮಚಂದ್ರಯ್ಯನೇ ವರನೆಂದು ಸಾವಿತ್ರಿಗೆ ಸಮಾಚಾರವು ತಿಳಿಯಿತು. ವ್ಯಥೆಪಟ್ಟಳು. ಅತ್ತಳು. ತನ್ನ ಒಡನಾಡಿಗಳೊಂದಿಗೆ ಆದಿನವೆಲ್ಲ ಮಾತಾಡುವುದನ್ನು ಬಿಟ್ಟಳು. ರಾತ್ರಿಗಳನ್ನು ಬೇಗಕೊಂದು

ಬರುವನೆಂಬ ಪದದಿಂದ ಚಿತ್ರಾವತಿಯ ಕಡೆಗೆ ಹೊರಟುಹೋದಳು. ಆದಿನ ಸಾಯಂಕಾಲದಲ್ಲಿ ಚಿತ್ರಾವತಿಯಲ್ಲಿ ಸ್ವಲ್ಪ ಹೆಚ್ಚು ನೀರು ಹರಿಯುತಲಿತ್ತು. ಆ ನೀರಿಗೆ ತನ್ನ ಕಣ್ಣೀರನ್ನು ಸೇರಿಸಿದಳು. ಮರಳನ್ನು ಹಾಕಿ ಪಾತ್ರೆಗಳನ್ನು ಬಹಳ ಹೊತ್ತು ಬೆಳಗಿದಳು, ಕಡೆಗೆ ಮನಸ್ಸು ಯೋಚನೆಯುಂಟಾಯಿತು. "ಹಾ! ದೇವರೆ! ನನಗೇಕೆ ಇಷ್ಟು ತೊಂದರೆ, ಈ ಅಲ್ಪವಾದ ಹೃದಯಕ್ಕೆ ಇಷ್ಟೇಕೆ ಕ್ಲೇಶ, ನನಗೆ ಬಂದುದಾರಿಯನ್ನು ತೋರಿಸು, ಪುನಃ ಈ ಊರಿನ ಆಶೆಯನ್ನೇ ತ್ಯಜಿಸುವೆನು. ನನಗೆ ತಾಯಿಯಿಲ್ಲ? ಅಣ್ಣನಿಲ್ಲ? ಅಯ್ಯೋ ತಂದೆಯೆ! ನನಗೆ ಬುದ್ಧಿತಿಳಿವುದಕ್ಕಿಂತ ಮೊದಲೇ ಪರಲೋಕವನ್ನೈದಿದೆ. ನನ್ನ ಚಿಕ್ಕವಯಸಿಗೆ ತಿಳಿಸೋಣವೆಂದರೆ ಎಲ್ಲಿರುವನೋ, ಏನಾಗಿರುವನೋ, ಬರೆಯುವುದೆಂತೊ" ಎಂದು ಮರುಗಿದಳು, ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ "ನನ್ನ ತಾಯಿಗಂತೂ, ವಿವೇಚನೆಯಿಲ್ಲ. ಸ್ವತಃ ಮುಂದೆನಿಲ್ಲುವದಕ್ಕೆ ಧೈರ್ಯವಿಲ್ಲ—ನಮಗೆ ಸಹಾಯಕರಿಲ್ಲ—ನನ್ನ ತಾಯಿಯ ಕಡೆಯವರಾದರೂ ಇದ್ದಿದ್ದರೆ, ಹೀಗೆ ಕಷ್ಟವು ಒದಗುತ್ತಿರಲಿಲ್ಲ—ಇನ್ನು ಮಾಡುವದೇನು; ನನ್ನ ಕೈಲೇನಾದೀತು?—ಅಂತೂ ಈ ಮದುವೆಯು ನಡೆಯಬಾರದು, ವಿಧಿಯು ನನ್ನ ಹಣೆಯಲ್ಲಿ, ಅಂತಹ ಕ್ರೂರವಾದ ಲಿಖಿತವನ್ನು ಬರೆದಿಲ್ಲ" ಎಂದು ಧೈರ್ಯವನ್ನು ತಂದುಕೊಂಡು ಕೂಡಲೇ "ನನ್ನ ಯತ್ನವೇನಿದೆ. ನಾನು ಏನು ಮಾಡಬಲ್ಲೆ" ಎಂದುಕೊಂಡು ಮನೆಗೆ ಸೇರಿದಳು.

೪ನೇ ಪರಿಚ್ಛೇದ.

ಬಾಗೇಪಲ್ಲಿಯಲ್ಲಿ ನಾರಾಯಣಜೋಯಿಸನೆಂಬುವನಿದ್ದನು, ಜೋಯಿಸರ ವಿಷಯವಾಗಿಯಾಗಲಿ, ಜಾತಕಗಳ ವಿಷಯವಾಗಿಯಾಗಲಿ ಇವನಿಗೆ ಏನೂ ಗೊತ್ತಿಲ್ಲ, ಕೇವಲ ಧನಪಿಶಾಚಿ ಹಿಡಿದಿರುವ ಜೋಯಿಸನು ಗಳಲ್ಲಿರುವಂತಹ ಕಾರ್ಯಗಳೂ ಸಾಧ್ಯವಾಗುವುವು. ಅಕಾಲಗಳಲ್ಲಿಯೂ

ಬಳ್ಳಿಯು ಮುಹೂರ್ತಗಳು ಸಿಕ್ಕುವುವು, ಸರಿಬಾರದ ಜಾತಕಗಳು ಸರಿ ಬರುವುವು ಅಷ್ಟಮದಲ್ಲಿ ಶನಿಯಿದ್ದಾನೆ, ಚಿಂತೆಯಿಲ್ಲ. ಚಂದ್ರನೇ ಈ ಜಾತಕಕ್ಕೆ ಅಧಿಪನು, ಎರಡೂಸರಿ ಹೋದುವು. ಎನ್ನುವವರಿರುತ್ತಾರೆ, ಏಕಾದಶೀ, ದ್ವಾದಶೀ ತಿಥಿಗಳು ಕೂಡುವಾಗ, ಮಂಗಳವಾರ ಬೀಳುವು ದೆಂದೂ, ಪರ್ವದಫಲಗಳು–ಚಂದ್ರನು ತಾರಾಧಿಪನು, ವರುಣನು ಜಲಾಧಿ ಪನೂ, ಆದುದರಿಂದ ಬೆಳ್ಳಿಯೂ, ಬಂಗಾರವೂ ಬಹಳವಾಗಿ ಬೆಲೆಯೇರುವ ದೆಂದೂ ಮುಸಲ್ಮಾನ್ ಉದ್ಯೋಗಸ್ಥನಿಗೆ ಪಂಚಾಂಗವನ್ನು ಹೇಳಲುಪಕ್ರಮಿ ಸಿದ ಜೋಯಿಸನೊಬ್ಬನನ್ನು ನಾವು ಕಣ್ಣಾರನೋಡಿರುವೆವು.

ಪ್ರಕೃತದಲ್ಲಿ ನಾರಾಯಣಜೋಯಿಸನಿಗೆ ಅದೃಷ್ಟಗಾಲ. ಕೋನೇ ರಯ್ಯನು ಎರಡು ಕಾಗದಗಳನ್ನು ಹಿಡಿದುಕೊಂಡುಬಂದು, ಜೋಯಿಸನಿಗೆ ಕೊಟ್ಟನು ಅವನು, ಕೊಂಚಹೊತ್ತು ಜಾತಕಗಳನ್ನು ಗುಣಿಸಿನೋಡಿ, "ಏನಪ್ಪಾ ಸರಿಬರುವಂತಿಲ್ಲ ಜಾತಕಗಳಿಗೆ ಏನೋ"—ಕೋನೇರಯ್ಯನು, ಅಷ್ಟರಲ್ಲಿಯೇ "ಏನೋ ಸದ್ಯಕ್ಕೆ ಐದು ರೂಪಾಯಿಗಳನ್ನು ತೆಗೆದುಕೊಳ್ಳಿರಿ. –ಈಗ ಗುಣಿಸಿನೋಡಿ, ಸರಿಬರಬಹುದು" ಎಂದನು. ಕೂಡಲೇ ನಾರಾ ಯಣಜೋಯಿಸನಿಗೆ ಜ್ಞಾನೋದಯವಾಯಿತು. "ನಿಜ, ನೀನು ಹೇಳಿದ್ದು ನಿಜ, ಗುಣಿಸುವುದರಲ್ಲಿ ಒಂದನ್ನು ಬಿಟ್ಟುಬಿಟ್ಟಿದ್ದೆನು. ಸ್ವಲ್ಪ ತಾಳು" ಎಂದುಹೇಳಿ "ಭಲಾ, ಭಲಾ, ನಿನಗೆ ಹೊಳೆದಿದ್ದೇ ಆಶ್ಚರ್ಯವಪ್ಪಾ, ದಕ್ಷಿಣ ನಾಯಕನನ್ನು ಮರೆತಿದ್ದೆ, ಈಗ ಸರಿಹೋಯಿತು" ಕೋನೇರಯ್ಯನು "ಸ್ವಾಮಿ, ಜೋಯಿಸರೇ, ಸರಿಹೋಯಿತೋ ಇಲ್ಲವೋ, ನನ್ನ ಬಲ ಕಾಯಿಗೆ ಮಾತ್ರ ಒಪ್ಪಿಸಬೇಕು–ಈ ನೋಟು, ನಿಮ್ಮದೆಂದನು, ಯಾವ ಕ್ಷಣದಲ್ಲಿ ೧೦ ರೂಪಾಯಿಗಳಮೇಲೆ ದೃಷ್ಟಿಯು ನಾಟಿತೋ ಜೋಯಿಸನಿಗೆ ಬುದ್ಧಿಯು ಇನ್ನೂ ಚುರುಕಾಯಿತು. "ಆ ವಿಚಾರವು ನನ್ನಲ್ಲಿರಲಿ, ನಾಳೆ ಬೆಳಗ್ಗೆ ಬರುವೆನು–ಎರಡು ತೆಂಗಿನಕಾಯಿಗಳು ವೀಳೆಯದೆಲೆ, ಅಡಿಕೆ, ೧ ರೂಪಾಯಿ ದಕ್ಷಿಣೆಯನ್ನು ತಟ್ಟೆಯಲ್ಲಿಟ್ಟು, ತಟ್ಟೆಯೊಂದಿಗೆ ಯಾರೂ

ಕೊಡದ ಮರ್ಯಾದೆಯನ್ನು ಕೊಡಬೇಕಪ್ಪ, ಇಲ್ಲವಾದರೆ ಜಾತಕದೋಷಗಳು ಹೋಗುವುದಿಲ್ಲ, ಎಂದನು.

ಜೋಯಿಸನ ಮನೆಯಿಂದ ಹಿಂದಿರುಗಿ ಬರುವಾಗ, ರಾಮಚಂದ್ರಯ್ಯನು, ಕೋನೇರಯ್ಯನಿಗೆ ಎದುರುಬಿದ್ದನು.

ರಾ—" ಕೋನೇರಯ್ಯ, ನಾನು ಇನ್ನು ನಾಗೋಡಿಗೆ ಹೊರಡುವೆನು.

ಕೋ—" ಹೊರಡಬಹುದು, ಜಾತಕಗಳು ಸರಿ ಬರುವಂತಿಲ್ಲ. ಈಗತಾನೆ ಜೋಯಿಸರ ಮನೆಯಿಂದ ಬರುತ್ತಿದ್ದೇನೆ.

ರಾ— ಹಾ, ಹಾ, ಏನೆಂದೆ, ಜಾತಕಗಳು ಸರಿಬರುವುದಿಲ್ಲವೇ ?

ಕೋ—ಇಲ್ಲ.

ರಾ— ಜೋಯಿಸನೆಂಥವನೋ ?

ಕೋ—ಬಹಳ ಬುದ್ಧಿವಂತ, ನಮ್ಮ ಮನೆಗೆ ಮೊದಲಿನಿಂದಲೂ, ಅವನೇ ಜೋಯಿಸನು.

ರಾ— ಅವನಾತಲ್ಲ, ನಮ್ಮ ಆಲೋಚನೆಗಳಿಗೊಳಗಾದಾನೆ ?

ಕೋ—ಛೀ ! ಛೀ ! ಎಂತಹ ಬ್ರಾಹ್ಮಣ, ತನ್ನ ಮನಸ್ಸಿಗೆ ಜಾತಕಗಳು ಸರಿಬರಲಿಲ್ಲವೆಂದು ತೋರಿದರೆ, ಮಹಾರಾಜರು ಬಂದು ಕೇಳಿದರೂ ಒಂದೇ ಉತ್ತರವನ್ನು ಕೊಡುವಾತನು! ಅವನು ನಿಷ್ಕಪಟಿ. ವಂಚನೆಯನ್ನು ಮಾಡುವವನಲ್ಲ, ಮತ್ತು ದುರಾಶಾಪರನಲ್ಲ. ದೇವರೆಂದೇ ಭಾವಿಸಬೇಕು.

ರಾ— ಹಾಗಾದರೆ ಈಗ ಜಾತಕಗಳನ್ನು ತೋರಿಸುವುದೇ ಬೇಡ, ಮನಸ್ಸು ದೃಢಮಾಡಿಕೊಂಡು ಮದುವೆಯನ್ನು ಮಾಡಿಬಿಡೋಣ.

ಕೋ—ಮನೆಯಲ್ಲಿ ಒಪ್ಪುವುದಿಲ್ಲ—ಅದರಲ್ಲಿಯೂ, ನನ್ನ ಮಲತಾಯಿಯು. ಅವಳನ್ನು ಕಂಡರೆ ನನಗೆ ಮೈಯೆಲ್ಲಾ ಉರಿಯುವುದು. ಏನೇನೋ ಶಾಸ್ತ್ರಗಳಂತೆ, ! ವಧೂವರರಿಗೆ ಒಪ್ಪಿರಬೇಕಂತೆ, !

ರಾ— ಹಾಗಾದರೆ, ಈಗ ನಾವು ಮಾಡುವುದೇನು, ಆಗಲೀ, ತಿಮ್ಮಪ್ಪಯ್ಯನ ಜಮೀನಿನ ಪಕ್ಕದ ಗದ್ದೆಯನ್ನು ನಿನ್ನ ಸ್ವಾಧೀನಮಾಡಿರುವೆನಲ್ಲಾ !

ಕೋ—ಕೋಪದಿಂದ, ಮಾಡಿದ್ದರೆ ಎಲ್ಲಿ ಹೋಗುವುದು?

ರಾ— ಅಹುದು-ಈಗ ಮದುವೆಗೆ ವಿಘ್ನಗಳು ಬರುವುದಿಲ್ಲ.

ಕೋ—ಉಪಾಯದಿಂದ, ಅವುಗಳನ್ನು ದಾಟಬೇಕು, ಈಗ, ಆಕೆರೆ ಕೆಳಗಣಿನ ೧೦ ಖಂಡುಗದ ಗದ್ದೆಯನ್ನು ಏನುಮಾಡಿರುವೆ?

ರಾ— ಆ ಗದ್ದೆಯ ಮಾತೇಕೆ? ನಿನಗೆ ಕೊಡುವುದನ್ನೆಲ್ಲಾ ಕೊಟ್ಟಿರುವೆನು. ಮದುವೆಗೆ ಮೊದಲೇ ಅವುಗಳನ್ನು ತೆಗೆದುಕೊಂಡಿರುವೆ.

ಕೋ—ಹಾಗಲ್ಲ. ಈಗ ಈ ಜಾತಕಗಳು ಸರಿಹೋಗುವುವೋ ಇಲ್ಲವೋ [illegible] ಮಾತು ಬರಲಿಲ್ಲ-ಈಗ ನಾರಾಯಣ ಜೋಯಿಸನ ಅಹುತಿಗೆ ಕೊಡಬೇಕು-ಏನಾದರೂ ಆಕೆ ತೋರಿಸಿದರಲ್ಲವೇ?

ರಾ— ಅವನು ಒಪ್ಪುವುದಿಲ್ಲವೆಂದು ಹೇಳಿದೆಯಲ್ಲ.

ಕೋ—ಅಪಾಯವು ನನ್ನಲ್ಲಿರಲಿ, ನೀನು ಆ ೧೦ ಖಂಡುಗದ ಗದ್ದೆಯನ್ನೂ ಐವತ್ತು ರೂಪಾಯಿಗಳನ್ನೂ ಕೊಟ್ಟರೆ.

ರಾ— ಇಷ್ಟೆಲ್ಲವನ್ನೂ ಕೊಡಲಿಕ್ಕಾಗದು-ನಿನ್ನ ಸಾವಿತ್ರಿಯನ್ನು ನೀನೇ ಇಟ್ಟುಕೋ, ನಾನು ಹೆಣ್ಣನ್ನು ಇನ್ನೆಲ್ಲಾದರೂ ನೋಡುವೆನು.

ಕೋ—ನೋಡಿಕೊಳ್ಳಬಹುದು-ಕೊಡುವವರಿದ್ದರೆ, ಎಲ್ಲರೂ ಮದುವೆಗಳನ್ನು ಮಾಡಿಸಿಕೊಳ್ಳಬಹುದು!

ರಾ— ನಿನ್ನಂತಹ ದಾಸ್ಯರುಗಳು ಸಾವಿರಜನಗಳು ಬರುವರು.

ಕೋ—ಬಂದರೂ ಸಾವಿತ್ರಿಯಂತಹ ಹುಡುಗಿಯನ್ನು ಕೊಡುವುದಿಲ್ಲ-ಅವಳಿಗೆ ನಿನಗಿಂತ ಮೇಲಾದವರು ಸಿಗುವುದಿಲ್ಲವೇ? ಅವಳನ್ನು ನೋಡಿದಮಾತ್ರದಲ್ಲಿಯೇ, ಯಾರಾದರೂ ಮುಗ್ಧರಾಗುವರು-ಅವಳನ್ನು ಹೊಂದಬೇಕಾದರೂ, ಪುಣ್ಯವಿರಬೇಕಲ್ಲ.

ರಾ— ನೀನು ದುರಾಶೆಯಿಂದ ನನ್ನ ಗದ್ದೆಗಳೆಲ್ಲವನ್ನು ಕೇಳಿದರೆ ಕೊಟ್ಟು ಬಿಟ್ಟು ನಾಳೆ ನಾನು ಭಿಕ್ಷಕ್ಕೆ ಹೊರಡಲೇನು?

ಕೋ—ಈಗ ನನ್ನ ಬಲತಾಯಿಯನ್ನು ಒಪ್ಪಿಸಬೇಕು-ಸಾವಿತ್ರಿಯೂ, ಹಟಮಾಡುತ್ತಿರುವಳು, ಜಾತಕಗಳು ಮೊದಲೇ ಸರಿಬಂದಿಲ್ಲ-ಇಷ್ಟು

ತೊಂದರೆಗಳಿರುವಲ್ಲಿ-ಬಂದು ೧೦ ಖಂಡುಗ ಗದ್ದೆಯನ್ನು ಕೊಡುವದೇನೂ ಹೆಚ್ಚಲ್ಲ-ನಿನಗೆ ಇನ್ನೂ ಕೆರೆಯ ಕೆಳಗೆ ವಿಪರೀತವಾಗಿರುವುದು,

ರಾ—ಹೋಗಲಿ, ೫ ಖಂಡುಗ ಗದ್ದೆಯನ್ನು ೫೦೦ ರೂಪಾಯಿಗಳನ್ನು ಕೊಡುವೆನು.

ಕೋ—ಬೇಡ, ನೀನು ಆ ಗದ್ದೆಯನ್ನು ಮಾತ್ರ ಕೊಡು, ರೂಪಾಯಿಗಳನ್ನು ಕೊಡಬೇಡ.

ರಾ— ಹಾಗೆಯೇ ಸರಿ.

ಕೋ—ಇದನ್ನು ನಾಳೆಯೇ ಏರ್ಪಾಡುಮಾಡಬೇಕು.

ಅಷ್ಟರಲ್ಲಿಯೇ ಬಾಗಿಲಿನಲ್ಲಿಯಿಂದ ಟಪಾಲುಗಾಡಿಯು ಬಂತು.

ರಾ—ಯಾರು ಆ ಗಾಡಿಯಲ್ಲಿ ಕುಳಿರುವವರು- ಟಪ್ಪಾಲನ್ನು ನೋಡಿಕೊಂಡು, ನಾನು ಹೊರಟುಹೋಗುವೆನು.

ಕೋ—ಆತನು ಸುಬೇದಾರರ ಮಗನು-ಇನ್ನೊಬ್ಬನಾರೋ ಗೊತ್ತಿಲ್ಲ. ಬೆಂಗಳೂರಿಂದ ಬಂದಿರಬಹುದು.

ರಾ— ಅದೇನು ಈಗ ಬಂದದ್ದು.

ಕೋ—ಈಗ ರಜಾ ಬಿಟ್ಟಿವೆಂದು ತೋರುತ್ತದೆ.

"ಓ ಹೋ, ಕೋನೇರಯ್ಯನವರೆ, ಇಲ್ಲಿ ಬನ್ನಿ-ಸುಬೇದಾರರು ಊರೊಳಗಿದ್ದಾರೆಯೋ, ಸರ್ಕ್ಯುಟ್ ಹೋಗಿದ್ದಾರೆಯೋ ?"

ಕೋ—ಊರೊಳಗಿದ್ದಾರೆ ?

"ಇವರಾರು ಹೊಸಬರು ?"

ಕೋ—"ಈತನ ರಾಮಶಾಸ್ತ್ರಿಯ, ನನ್ನ ನೆಂಟ, ನಾಗೋಡಿಯಲ್ಲಿರುವನು.

"ಸರಿ ಸರಿ, ನೀವು ಸಿಕ್ಕಿ-ಎಂದು ಮುಂದೆ ಹೊರಟು, ರಾಜು, ಕೋನೇರಯ್ಯನ ಮುಖವನ್ನು ನೋಡಿದೆಯಾ ?

ರಾಜು—"ನೋಡಿದೆನು, ಅವನು, ಕೇಡಿಗನಾಗಿ ತೋರುವನು."

"ತೋರುವುದಲ್ಲ, ನಿಜವಾಗಿಯೂ, ಹಾಗೆಯೇ; ಕೆಲವು ತಿಂಗಳ ಹಿಂದೆ, ಸರ್ಕ್ಯುಟಿನಲ್ಲಿರುವಾಗ ಕೈಕಟ್ಟಿರುವನು."

ರಾಜ—" ನಾನು ಇಲ್ಲಿಯೇ ಇಳಿಯುವೆನು."

" ಮಧ್ಯಾಹ್ನ ಊಟಕೆಬರುತ್ತೇನೆ.

ಮುನ್ಸೀಪಾಲರ ಮನೆಗೆ ಆದಿನವೇ ಈ ಹೊಸವ್ಯಕ್ತಿಯು ಬಂತು– " ಅಣ್ಣ ಬಂದನೆಂದು " ಸಣ್ಣಹುಡುಗ ಸರ್ವೋತ್ತಮನು ಓಡಿಬಂದನು. ಅವನನ್ನು ಎತ್ತಿಕೊಂಡು ಮೂರ್ತಿಯು ಒಳಗೆಹೋದನು ಬಾಗೇಪಲ್ಲಿಯ ಮುನ್ಸೀಪಾಲರಿಗೆ ಮೂರುಜನ ಗಂಡುಮಕ್ಕಳೂ, ಮೂರುಜನ ಹೆಣ್ಣು ಮಕ್ಕಳೂ ಇರುವರು, ಹಿರಿಯಮಗನಾದ ಮೂರ್ತಿಯು ಬೆಂಗಳೂರಿನಲ್ಲಿ ಬಿ. ಎ. ಗೆ ಓದುತ್ತಿರುವನು. ಈಗ ರಜಾಕಾಲವು ಪ್ರಾರಂಭವಾದುದರಿಂದ, ತಾನೂ, ಅವನ ಸ್ನೇಹಿತ ರಾಜನೂ ಬಾಗೇಪಲ್ಲಿಗೆಬಂದರು, ಈತನ ತಮ್ಮನು ಪೂನಾದಲ್ಲಿ ಓದುತ್ತಿರುವನು. ಸರ್ವೋತ್ತಮನೆಂಬ ಹುಡುಗನಿಗೆ ಈಗ ಐದುವರ್ಷಗಳು. ಹೆಣ್ಣುಮಕ್ಕಳಲ್ಲಿ ಜಯಲಕ್ಷ್ಮಿಯೆಂಬುವಳು ಗಂಡನ ಮನೆಯಲ್ಲಿ ಸಂಸಾರಮಾಡಿಕೊಂಡಿರುವಳು, ಕೃಷ್ಣವೇಣಿ, ವಸುಂಧರಾ ಯೆಂಬುವರು ಮನೆಯಲ್ಲಿಯೇ ಇರುವರು. ಮಧ್ಯಾಹ್ನವೆಲ್ಲಾ ವಿಶ್ರಮಿಸಿಕೊಂಡು ಮೂರ್ತಿಯು ಪ್ರಾಣಮಿತ್ರನಾದ ರಾಜನ ಮನೆಗೆ ಬಂದನು. ಯಾವಾಗಲೂ, ಇವರು ಅಗಲಿರರು, ಬೆಂಗಳೂರಿನಲ್ಲಿಯೂ, ಊಟಕ್ಕೆ ಹೋಗುವಾಗ ಇಬ್ಬರೂ ಜತೆಯಲ್ಲಿಯೇ ಹೋಗುವರು. ಅನ್ಯೋನ್ಯಪ್ರೀತಿ-ಇಬ್ಬರ ಮನಸ್ಸೂ ಒಂದೇ ನಿಷ್ಕಪಟಗಳು. ಪ್ರಪಂಚದಲ್ಲಿ ಇಂತಹ ಸ್ನೇಹಭಾವವಿದ್ದರೆ ದುಃಖವೆಂಬುದು ಎಲ್ಲಿಯೋ ಓಡಿಹೋಗುವುದು. ರಾಜನ ಮನೆಯಲ್ಲಿ ಫಲಾಹಾರವನ್ನು ತೀರಿಸಿಕೊಂಡು, ಎಲ್ಲಿಯಾದರೂ ಸುತ್ತಿಕೊಂಡು ಬರೋಣವೆಂದು ಸಾಯಂಕಾಲವಾಗುತ್ತಲೇ ಹೊರಟರು, ಊರಿನ ಹೊರಗಿನಿಂದ ತಿರುಗಿಕೊಂಡು, ನದಿಯ ಭಾಗವನ್ನು ಸೇರಿದರು. ಮೂರ್ತಿಯು " ಈ ಚಿತ್ರಾವತಿಯಿಲ್ಲದಿದ್ದರೆ, ಬಾಗೇಪಲ್ಲಿಯು ಚೆನ್ನಾಗಿರುತ್ತಿರಲಿಲ್ಲ " ಎಂದನು. ರಾಜನು, ನಗುತ್ತ ನದಿಗಳಿಲ್ಲದಿದ್ದರೆ ಯಾವಪ್ರದೇಶವೂ ಚೆನ್ನಾಗಿರುವುದಿಲ್ಲ " ಎಂದನು, ಅಲ್ಲಿನ ಮರಳುರಾಶಿಯಮೇಲೆ ಇಬ್ಬರೂ ಕುಳಿತು. ಹರಿಯುತ್ತಿರುವ ನೀರಿನಲ್ಲಿ ಕಾಲುಗಳನ್ನು

ಆಳಬಿಟ್ಟುಕೊಂಡು ಬಾಯಿಗೆ ಬಂದುದನ್ನು ಹಾಡುತ್ತಿದ್ದರು. ಆಗಾಗ್ಗೆ ನೀರಿಗೆ ಬರುವವರನ್ನು ನೋಡುತ್ತ ಹಾಡುವುದನ್ನು ನಿಲ್ಲಿಸುವರು. ಹೀಗಿರುತ್ತಿರುವಲ್ಲಿ, ಮೂರ್ತಿಯ ದೃಷ್ಟಿಯೂ ಒಂದುಕಡೆಯಲ್ಲಿ ನಾಟಿತು. ರಾಜನು ಏನನ್ನೋ ಹೇಳುತ್ತಿದ್ದನು. ಮಾತುಗಳಿಗೆ ಬದಲು ಕೊಡಲಿಲ್ಲ.

ರಾ—"ನಿನ್ನ ಜ್ಞಾನವೆಲ್ಲಿದೆ?

ಮೂ—"ಆ ಹುಡುಗಿಯಾರು?

ರಾ—ಯಾವ ಹುಡುಗಿ?

ಮೂ—ಅಗೋ ಪಾತ್ರೆಗಳನ್ನು ಬೆಳಗುತ್ತಿರುವಳಲ್ಲ, ಅವಳು.

ರಾ—ಅವಳು ಕೋನೇರಯ್ಯನ ತಂಗಿ.

ಮೂ—ನಾನು ಇದುವರೆಗೂ ನೋಡಿಯೇ ಇರಲಿಲ್ಲ-ಕೋನೇರಯ್ಯನಿಗೆ ಇಂತಹ ತಂಗಿಯೂ, ಇರುವಳೇನು?

ರಾ—ಇರುವಳು. ನಿನಗೆ ತಿಳಿದಿರುವುದೆಂದು ಭಾವಿಸಿದ್ದೆನು.

ಮೂ—ಅದೇನು ಆಗಾಗ್ಗೆ ಕಣ್ಣೀರನ್ನೊರಸಿಕೊಳ್ಳುವಂತಿದೆ, ಅವಳ ಹೆಸರೇನು?

ರಾ—ಸಾವಿತ್ರಿ.

ಮೂ—ಸಾವಿತ್ರಿ!

೫ನೆಯ ಪರಿಚ್ಛೇದ.

"ಜೋಯಿಸರೇ, ಇಲ್ಲಿ ಕುಳಿತುಕೊಳ್ಳಿ-ಒಳ್ಳೆಯಕಾಲಕ್ಕೆ ಬಂದಿರಿ"

"ಬಂದೆನಪ್ಪ, ಮನೆಯಮುಂದೆ ಹತ್ತಾರು ಜನಗಳು ನಿಂತಿದ್ದರು. ಬಿತ್ತನೆಗೆ ಕಾಲವನ್ನುಗುಣಿಸಬೇಕು ಮಳೆಯಾವಾಗ ಬರುವುದೋ ಅದನ್ನು ತಿಳಿದುಹೇಳಬೇಕು. ಕೆಲವು ಮದುವೆಗಳನ್ನು ಘಟಿಸಬೇಕು. ಇಷ್ಟೊಂದು ಕೆಲಸಗಳಿದ್ದರೂ ಮೊದಲು ನಿನ್ನನ್ನು ನೋಡಿಹೋಗೋಣವೆಂದು ಬಂದೆನು. ಮುಖ್ಯ, ನಿನ್ನತಂದೆಗಳು ಬಹಳ ಉದಾರಿಗಳಾಗಿದ್ದರು ಇಲ್ಲಿಗೆ ಬಂದರೆ

ಅವರ ಸ್ಮರಣೆಯೇ ಬರುವುದು. ಕೊಡುವೆನಪ್ಪ! ನೀನು ನಿನ್ನ ತಂದೆಯಂತೆಯೇ ಇರುವೆ, ಬಹಳ ಸಂತೋಷ, ಬಹಳ ಸಂತೋಷ"

ಕೋ—" ಜೋಯಿಸರೆ, ನನ್ನ ತಂಗಿಯು ಹುಟ್ಟಿದ್ದು ಮೂಲಾನಕ್ಷತ್ರವಂತೆ! ಅದೇನೋ ಬೇಗನೋಡಿ, ಮದುವೆಯಾದ ಕೂಡಲೇ ಗಂಡನುಳಿಯುವುದಿಲ್ಲವಂತೆ"

ನಾರಾ—ಛೀ, ಛಿ, ಯಾರು ಹೇಳಿದರು? ಜಾತಕಫಲಗಳನ್ನೆಲ್ಲಾ ರಾತ್ರಿಯೆಲ್ಲಾ ಗುಣಿಸಿ ಗುಣಿಸಿ ಸಾಕಾಯಿತು, ಒಂದು ವೇಳೆ ಮೂಲಾನಕ್ಷತ್ರವಾಗಿದ್ದರೆ ಅದಕ್ಕೆ ಪ್ರಾಯಶ್ಚಿತ್ತವುಂಟು.

ನಾ—" ಏನಪ್ಪಾ ಜೋಯಿಸರೆ " ಎಂದು ಕಣ್ಣೀರಿಡುವಳು.

ನಾರಾ—" ಅಮ್ಮ ಅಳಬೇಡಿ, ಅಳಬೇಡಿ, ಮೂಲಾನಕ್ಷತ್ರವಾದರೂ ಚಿಂತೆಯಿಲ್ಲ. ಅದಕ್ಕೆ ಶಾಂತಿಯುಂಟು.

ನಾ—ವರನಿಗೆ ವಯಸ್ಸು ಮೀರಿರುವುದಲ್ಲ!

ನಾರಾ—ಚಿಂತೆಯೇನು? ನನ್ನ ಆಯುಃ ಪರಿಮಿತಿಯಲ್ಲಿ ಇಂತಹ ಜಾತಕಗಳನ್ನು ನೋಡಲಾರೆನೆಂದು ಭಾವನೆಯಾಗಿದೆ. ಎಂತಹ ಜಾತಕ! ವಧುವಿನದಕ್ಕಿಂತಲೂ ವರನದೇ ಚೆನ್ನಾಗಿದೆ ವರನದು ದೈವೀಸ್ವಭಾವ, ವಧುವಿನದು ರಾಕ್ಷಸಸ್ವಭಾವ. ಇದಕ್ಕಿಂತಲೂ ಉತ್ಕೃಷ್ಟವಾದುದನ್ನು ನಾನು ನೋಡಿಯೇ ಇಲ್ಲ. ಆಹ, ಎಷ್ಟು ಅನ್ಯೋನ್ಯ, ಏನು ಪ್ರೀತಿ, ಯಾವಾಗಲೂ, ಒಬ್ಬರನ್ನೊಬ್ಬರು ಅಗಲದೇನೇ ಇರುವರು. ಬಹಳ ಚೆನ್ನಾಗಿದೆ. ಇಲ್ಲಿ ನೋಡಿ. ಎಂದು ಜಾತಕಗಳನ್ನು ತಿರುಗಿಸಿ "ರವಿಯು ಈಗ ಗಗನದಲ್ಲಿದ್ದಾನೆ, ಈಗ ರವಿಯೇ ತಾರಾಪಥಕ್ಕೊಡೆಯನು. ಶನಿಯೇನೂ ಒರಿಯ ಕಣ್ಣಿಗೆ ಕಾಣಿಸುವುದಿಲ್ಲ. ಆದುದರಿಂದ ದೋಷಗಳೇ ಇಲ್ಲದಂತಾಯಿತು. ಅಂಗಾರಕನಾದರೋ ಮೂರನೇ ಪಾದದಲ್ಲಿರುವನು, ಅಂತೂ, ಏನು ದೋಷವೂ ಇಲ್ಲ. ನಿಮ್ಮ ಹುಡುಗಿ ಬಹಳ ಅದೃಷ್ಟವಂತೆ, ಭಾಗ್ಯವಂತೆ, ಪುಣ್ಯವಂತೆ, ಎಲ್ಲಾ ವಂತೆಗಳೂ ಆವಳೇ. ನೀವೇನೂ ಅನುಮಾನಿಸಬೇಡಿ

ಶೀಘ್ರದಲ್ಲಿಯೇ ಮುಹೂರ್ತವನ್ನು ನೋಡುವೆನು,

ಕೋ—ಮೂಲಾನಕ್ಷತ್ರದ ದೋಷಕ್ಕೆ ಪರಿಹಾರವೇನು ?

ನಾರಾ—ಅದಕ್ಕೆ ಯಾವದಾದರೊಂದು ಮೂಲೆಗೆ ಅಧಿಪನಾದವನನ್ನು ತೃಪ್ತಿಗೊಳಿಸಬೇಕು.

ಕೋ—ಯಾರನ್ನು ?

ನಾರಾ—ನನಗೆ ತೋರುವುದೇನೆಂದರೆ ಉತ್ತರದಿಕ್ಕಿಗೆ ಒಡೆಯನಾದ ಕುಬೇರನನ್ನು ತೃಪ್ತಿಗೊಳಿಸಬೇಕು

ಕೋ—ಕುಬೇರನಿಗೆ ತೃಪ್ತಿಯಾದರೆ ದೋಷಗಳು ನಿವಾರಣೆಯಾಗುವುವೋ!

ನಾರಾ—ನನ್ನ ಮಾತುಗಳಲ್ಲಿ ನಂಬಿಕೆಯಿಲ್ಲವೇನಪ್ಪಾ ?

ಕೋ—ಹಾಗಾದರೆ ಈಗಿನ ಕ್ರಮವೇನು ?

ನಾರಾ—ನೀವು ನಿಶ್ಚಯದಿವಸ ಕೇಳಿದಂತೆಯೂ, ನಾನು ನೆನ್ನೆ ಹೇಳಿದಂತೆಯೇ ಮಾಡಿ ಜೋಯಿಸರ 'ಗಳನ್ನು ಇಟ್ಟರೆ, ನಾನು ಮನೆಯಲ್ಲಿಯೇ ಶಾಂತಿಯನ್ನು ಪಕ್ರಮಿಸುವೆನು.

ನಾ—"ಜೋಯಿಸರೆ ಅಷ್ಟುಮಟ್ಟಿಗಾದರೂ ಮಾಡಿಯಪ್ಪಾ. ನನ್ನ ಯಜಮಾನರಿದ್ದಿದ್ದರೆ" ಎಂದು ಕಣ್ಣೀರಿಡುವಳು.

ನಾರಾ—ನಿಮ್ಮ ಯಜಮಾನರಿಗಿಂತಲೂ ಕೋನೇರಯ್ಯನೇ ಚೆನ್ನಾಗಿನಡೆಸುವನಮ್ಮ. ಏನೂ ಅನುಮಾನಬೇಡ, ಈತನು ನನಗೆತೋರಿಸುವ ಮರ್ಯಾದೆಯಲ್ಲಿಯೇ ತಂದೆಗಿಂತಲೂ ಬಹಳ ಬುದ್ಧಿವಂತನಾಗಿ ಕಾಣುವನು, ಭಲಾ, ಭಲಾ, ಇದ್ದರೆ ಇಂತಹ ಮಕ್ಕಳಿರಬೇಕು.

ಜೋಯಿಸನು ಬಹಳ ಸಂತೋಷದಿಂದ, ಮನೆಗೆ ಹಿಂದಿರುಗಿದನು, ಸಂತೋಷವಲ್ಲದೇನು ? ಅಲ್ಪಕಾಲದಲ್ಲಿಯೇ, ಹೆಚ್ಚುಶ್ರಮವಿಲ್ಲದೆ ೪೫—೫೦ ರೂಪಾಯಿಗಳು ಸಿಕ್ಕಿದರೆ ಎಲ್ಲರೂ ಸಂತೋಷಪಡುವರೇ ಜೋಯಿಸರಾದುದಕ್ಕೆ ಸಾರ್ಥಕವಾಯಿತು.

ನಾಗಮ್ಮನಿಗೂ ಮನಸ್ಸು ಸ್ವಲ್ಪ ಶಾಂತಿಯನ್ನು ಹೊಂದಿತು. ಜೋಯಿಸನ ಮಾತುಗಳು ಸುಳ್ಳಾಗಲಾರವು. ಅದರಲ್ಲಿಯೂ ಸಾಧಾರಣ

ಜೋಯಿಸರಲ್ಲ, ಪೂರ್ಣವಿದ್ಯಾವಂತ. ಕಾತ ಮುತ್ತಾತಂದಿರಕಾಲದಿಂದಲೂ ಜ್ಯೋತಿಷದಲ್ಲಿಯೇ ಬೆಳದವರು, ನಾರಾಯಣಜೋಯಿಸರೆಂದರೆ ಸಾಮಾನ್ಯರೇ ? ಅವರು ನಮ್ಮ ಮನೆಗೆ ಬಂದುದೇ ಹೆಚ್ಚು. ವಧುವಿಗೂ, ವರನಿಗೂ ಸರಿಹೋಗಿರುವುದಂತೆ. ವರನೇನೋ ವಯಸ್ಸಾದವನು, ಆದರೇನು ? ಅದೃಷ್ಟವಿದ್ದರೆ, ಮುದುಕರಾಗುವವರೆವಿಗೂ ಬದುಕಿರುವುದಿಲ್ಲವೇ. ನಮ್ಮ ಸಾವಿತ್ರಿಗೆ ಮಾಂಗಲ್ಯದ ಬಲವೊಂದಿದ್ದರೆಸಾಕು ಅಂಬಲಿಯೋ ಗಂಜಿಯೋ ಕುಡಿದುಕೊಂಡು ಮಾನದಿಂದಿರುವಳಲ್ಲ. ಇದಕ್ಕೇ ಎಷ್ಟೋ ಪುಣ್ಯಮಾಡಿರಬೇಕು. ಅಳಿಯನೂ, ಅಷ್ಟೇನು ವಯಸ್ಸಾದಂತೆ ಕಾಣುವದಿಲ್ಲ. ನಾನು ನನ್ನ ಯೌವನಾನರನ್ನು ಮದುವೆಮಾಡಿಕೊಳ್ಳಲಿಲ್ಲವೇ ? ನಾನು ಸುಖವಾಗಿರಲಿಲ್ಲವೇ ? ನಮ್ಮ ಸಾವಿತ್ರಿಯು ಮನೆಗೆಲ್ಲಾ ಯಜಮಾನಿತಿಯಾಗುವಳು, ಒಂದು ಗಂಡುಮಗುವು ಬೇಗನೆ ಆಗಿಹೋದರೆ, ಆಗ, ನಾನು ಎಷ್ಟು ಭಾಗ್ಯವಂತೆಯೋ ? ನನ್ನ ಯಜಮಾನರಿದ್ದಿದ್ದರೆ, ನೋಡಿ ಎಷ್ಟು ಸಂತೋಷಪಡುತ್ತಿದ್ದರೋ ? ಎಂಬಿವೇ ಮೊದಲಾದ ಭಾವನಾತರಂಗಗಳು ನಡೆದುಹೋಗುತ್ತಿದ್ದವು.

೬ನೆಯ ಪರಿಚ್ಛೇದ.

"ಸಾವಿತ್ರೀ, ಸಾವಿತ್ರೀ, ಎಲ್ಲಿರುವೆ, ನನ್ನ ಕಣ್ಣ ಮುಂದೆ ಬಂದುನಿಮಿಷಮಾತ್ರ ಬಂದುನಿಲ್ಲು"

"ಇದೇನು ಮೂರ್ತೀ. ನಿನಗೆ ಬುದ್ಧಿ ಭ್ರಮಣೆಯಾಗಿರುವುದಲ್ಲ ! ಈ ಚೆಂಬಿನ ಪತಿಯು ನೀರನ್ನು ಸ್ವಲ್ಪ ಮುಖಕ್ಕೆ ಹಾಕಿಕೋ. ಇದೇಕೆ ಹೀಗೆಕೂಗುವೆ, ಕೇಳದವರು ಏನನ್ನುವರು.

"ಏನಾದರೂ ಅನ್ನಲಿ, ವಿಷಯಗಳೆಲ್ಲವೂ ತಿಳದವು ಅವಳನ್ನು ಅಪಾಟಿಗೆ, ಆಸ್ಥವಿರನಿಗೆ, ಆಗೂನುಹೋರ, ನೆರತಗಡ್ಡದಹೇಡಿಗೆ, ಅಯ್ಯೋ, ನನ್ನ ಹೊಟ್ಟೆ ಯುರಿಯುವುದಲ್ಲಾ.

" ಇವುಗಳೆಲ್ಲವನ್ನೂ ಯಾರುತಿಳಿಸಿದರು ?

" ಯಾರುತಿಳಿಸಿದರೇ, ಪ್ರಪಂಚವೇ ತಿಳಿಸುವುದು. ಇಂತಹ ಕಾರ್ಯಗಳನ್ನು ಮುಚ್ಚಿಡಲಾದೀತೆ. ಬೂದಿಯನ್ನು ಮರೆಮಾಚಲಾದೀತೆ, ಹೇಳುವವರಾರು ?

" ಯಾರುಹೇಳಿದ್ದು ?

" ನನ್ನತಂಗಿ ಕೃಷ್ಣವೇಣಿ ; ಈ ಮೂರು ನಾಲ್ಕು ದಿವಸಗಳಿಂದ ಸಾವಿತ್ರಿಯು ಶಾಲೆಗೆ ಬರುತ್ತಿಲ್ಲವಂತೆ.

" ಸಾವಿತ್ರಿಯನ್ನು ಯಾರಿಗೆ ಕೊಟ್ಟರೆನಿನಗೇನು ?

ಮೂ—ನನಗೇನು ? ನಿನಗೇನು ? ೫೦ ವರುಷದ ಮುದುಕನಿಗೆ ೧೨ ವರುಷದ ಹುಡುಗಿಯನ್ನು ಕೊಟ್ಟರಾದೀತೋ ?

ರಾ—ಚೆನ್ನಾಗಿ ಬೆಳೆದಹುಡುಗಿ, ಇನ್ನು ೪—೬ ತಿಂಗಳುಗಳಲ್ಲಿಯೇ ಮನೆಗೆ ಬರುವಳು-ಎಲ್ಲವೂ ಶಕ್ಯಾಸ್ಥಿತಿಗೆ ಬಂದಿರುವಹಾಗಿದೆ. ಆಕ್ಷೇಪಣೆಯೇನೂ ಕಾಣಲಿಲ್ಲ.

ಮೂ—ಆಕ್ಷೇಪಣೆಯಿಲ್ಲವೋ ? ಆ ಪಲ್ಲವಾಧರಗಳನ್ನು ಅವಳದಲಕೆಗಳನ್ನು, ಆ ಹಲ್ಲಿಲ್ಲದ, ಜೋಲುದುಟಿಯುಗೂಬೆಯು ಚುಂಬಿಸಲರ್ಹನೋ, ಚುಂಬಿಸುತಿದ್ದರೆ ನೋಡುವರೆಂತು ಸಹಿಸುವರು ? ಅಯ್ಯೋ ಕಳಿತಮಾಕಂದ ಫಲವನ್ನು ಪಂಡಿತನೆಂದೆನಿಸುವ ಗಿಳಿಯು ಕಚ್ಚದೇ ಕಾಗೆಯು ಕಚ್ಚಬಹುದೇ ?

ರಾ—ನಿನಗೆ ಪಿತ್ತವೇರಿದಂತಿದೆ. ಯಾರು ಚುಂಬಿಸುವರೋ, ಏನೋ, ನಿನ್ನನ್ನು ನೋಡು, ಅಂದವರಾರು, ಅನ್ನುವರಾರು ?

ಮೂ—ಯಾರೇನು ಅನ್ನಬೇಕು ? ರಾಹುವಿನ ಕೈಗೆಸಿಕ್ಕಿದ ಪೂರ್ಣಚಂದ್ರನಂತೆ, ಆಪಾಪಿಗೆ ಸಿಕ್ಕಿ ಅವಳು ನರಳುವಳಲ್ಲ. ಯಾವ ಮುಖದಲ್ಲಿ ರಾಕಾಸುಧಾಕರನ ತೇಜಸ್ಸಿಗಿಂತಲೂ, ಇಮ್ಮಡಿಯಾದ ತೇಜಸ್ಸೂ, ನೋಡಿದರೆ ಮೂದುದಿ ಮನೋಹರತೆಯೂ, ಇರುವದೋ, ಆ ಮುಖವನ್ನು ನೋಡಲಿಕ್ಕಾದರೂ ಪುಣ್ಯವಿರಬೇಕು, ಆ ಕದಪುಗಳ

ಕಾಂತಿಯು ಚಕ್ರವರ್ತಿಯನ್ನು ಮೀರಿಸುವದು, ಅಯ್ಯೋ, ರಾಜ, ರಾಜ, ಈ ಯೋಚನೆಯಲ್ಲಿ ನಾನು ಬದುಕಲಾರೆ.

ರಾ—ಮೂರ್ಖನೇ, ನಿನಗೆ, ಯೋಚಿಸು ಎಂದು ಹೇಳಲಿಲ್ಲ. ಎಲ್ಲವನ್ನೂ ವಿಚಾರಿಸಿಕೊಂಡು, ಕಳ್ಳತನದಲ್ಲಿ ಅವಳನ್ನು ಎರಡುಮೂರುಬಾರಿ ನೋಡಿ ಈಗ ಹುಚ್ಚನಂತೆ ಆಲಾಪಿಸುವ ನಿನಗೆ ವಿವೇಕವೆಲ್ಲಿ ?

ಮೂ—ನನಗೆ ವಿವೇಕವ್ಯಾಕೆ, ಸಾವಿತ್ರಿಯು ಬೇಕು.

ರಾ—ಇತರರಿಗೆ ಒಪ್ಪಿತವಾದವಳನ್ನು ಪರಸ್ತ್ರೀಯೆಂದು ಎಣಿಸಬೇಕು

ಮೂ—ಇನ್ನೂ ವಿವಾಹವಾಗಿಲ್ಲ. ಅವಳು ಪರಸ್ತ್ರೀಯೆಂತು ಆದಾಳು ? ನಾನು ಅವಳೊಂದಿಗೆ ಮಾತನಾಡುವೆನು, ಬೇಡುವೆನು, ಬೇಡ, ಮುದುಕನನ್ನು ಕಟ್ಟಿಕೊಳ್ಳಬೇಡವೆಂದು. ಇನ್ನೊಂದು ತರವೆ ನೋಡುವೆನು. ಅವಳ ಕೈ ಸೋಕಿದರೆ ಸಾಕು ಅಷ್ಟೇಸಾಕು,

ರಾ—ಇಲ್ಲಿನೋಡು, ನೀನು ಅವಳೊಂದಿಗೆ ಮಾತನಾಡುವದು ಸಾಧ್ಯವಿಲ್ಲ. ಅವಳು ನಿನ್ನ ಎದುರಿಗೆ ನಿಲ್ಲುವಳೋ ?

ಮೂ—ನಿಲ್ಲದೇ ಏನು, ನಾನೇನು ಹೆದರಿಸುವೆನೋ ತಿನ್ನುವೆನೋ ಮೊದಲಿನಲ್ಲಿಯೇ " ನಾನು ನಿನಗೆ ತೊಂದರೆಯನ್ನು ಕೊಡುವದಿಲ್ಲ. ಒಂದು ಮಾತನ್ನು ಕೇಳು, ಸಾವಿತ್ರೀ, ಒಂದೇ ಮಾತನ್ನು ಕೇಳು ಎಂದು ಅಂಗಲಾಚಿಕೊಳ್ಳುವೆನು.

ರಾ—ಆದರೂ ಸಾಧ್ಯವಿಲ್ಲ. ನೀನು ಸುಬೇದಾರರ ಮಗನೆಂದು ಅವಳಿಗೆ ಗೊತ್ತು. ನೀನು ಬರುವುದನ್ನು ನೋಡಿದರೇ ಮರೆಯಾಗುವಳು.

ಮೂ—ಮರೆಯಾಗದಂತೆ ದೂರದಿಂದಲೇ ಕೇಳುವೆನು.

ರಾ—ಯಾರಾದರೂ ನೀನು ಕೂಗಿದುದನ್ನು ಕೇಳಿದರೆ ?

ಮೂ—ಕೇಳಿದರೇನು ?

ರಾ—ನಿನಗೆ ಬುದ್ಧಿಯಿಲ್ಲ. ನೀನು ಉನ್ಮಾದಸ್ಥಿತಿಯಲ್ಲಿರುವೆ. ಸ್ವಲ್ಪ ಆಲೋಚಿಸು, ನೀನು ಇದರಲ್ಲಿ ಜಯಿಸಲಾರೆ, ಬೇರೊಂದು ಉಪಾಯವನ್ನು ಮಾಡಬೇಕು.

ಮಾ—ಉಪಾಯವೇನು, ಅಪಾಯವೇನು, ಅವಳನ್ನು ಮೆಲ್ಲಗೆ ಯಾರೂ ಇಲ್ಲದಕಡೆಗೆ ಒಂದು ನಿಮಿಷ ಕರತರಬೇಕು, ಕರೆದು ನಯದಿಂದ, "ಸಾವಿತ್ರೀ" ಎಂದುಹೇಳುತ್ತ—

ರಾ—ಅಹುದು. ಅವಳನ್ನು ಯಾರೂ ಇಲ್ಲದಕಡೆಗೆ ಕರತರುವುದೆಂತು ?

ಮಾ—ಅವಳು ನಾಳೆಯದಿನ ಸಾಯಂಕಾಲದಲ್ಲಿ ಗಡಿದಂ ವೆಂಕಟರಮಣ ಸ್ವಾಮಿಯ, ದೇವಸ್ಥಾನಕ್ಕೆ ಅವಳತಾಯಿಯೊಂದಿಗೆ ಬರಬಹುದು ಆದಿನ ಅಲಂಕಾರವನ್ನು ನೋಡಲು ನಮ್ಮ ಮನೆಯವರೂ ಹೊರಡುವರು.

ರಾ—ಅವಳು ತನ್ನ ತಾಯಿಯ ಬಳಯಿರುವಳಲ್ಲದೆ ನಿನ್ನ ಬಳಗೆಬರಲು ಕಾರಣವಿಲ್ಲವಲ್ಲ,

ಮಾ—ಉಪಾಯಮಾಡಬೇಕು.

ರಾ—ಅದೇನುಮಾಡಬೇಕು ನೀನು ಹೇಳು ನೋಡೋಣ.

ಮಾ—ನನಗೆ ತೋರ ಪದಿಲ್ಲ ಒಂದುವೇಳೆ ಯಾರನ್ನೋ ಕೂಗಿದಂತೆ, ಸಾವಿತ್ರೀ ಎಂದುಕೂಗಿ, ಅವಳು ತಿರುಗಿದಾಗ ಕೈ ಸನ್ನೆಯನ್ನು ಮಾಡಿದರೆ ?

ರಾ—ಇದರಲ್ಲಿ ಎರಡು ಅಸಂಭವಗಳು. ಸಾವಿತ್ರಿಯೆಂದು ಕೂಗಿದಾಗ ಅವಳೊಬ್ಬಳೇ ತಿರುಗುವಳೋ ? ಕೂಗಿದವರಾರೆಂದು ಎಲ್ಲರೂ ತಿರುಗುವರು; ಮತ್ತು ನೀನು ದೊಡ್ಡಹುಡುಗನಾಗಿದ್ದು ಕೈಸನ್ನೆ ಮಾಡಿದರೆ ಬರುವಳೋ ? ಅದಕ್ಕೆ ಬದಲು ತನ್ನ ತಾಯಿಯ ಸಂಗಡ ನಿನ್ನ ಮೇಲೆ, ದೂರುಹೇಳುವಳು.

ಮಾ—ಅದೂ ಒಳ್ಳೇಯದೇ ಅಲ್ಲವೇ ? ಅವಳ ತಾಯಿಗೆ ನಾನು ಸಾವಿತ್ರಿಯನ್ನು ಬಹಳವಾಗಿ ಪ್ರೀತಿಸುತ್ತೇನೆಂದು ತಿಳಯುವುದು.

ರಾ—ಅಹುದು ನೀನು ಪೋಕರಿಯೆಂದು ಊರಲ್ಲೆಲ್ಲಾ ಹೇಳ ಸುಬೇದಾರರ ಮಗನು ಬೀದಿಯಲ್ಲಿ ಬರುವಾಗ ತಲೆಯನ್ನು ತಗ್ಗಿಸುವಂತೆ ಮಾಡುವಳು.

ಮೂ—ನನಗೆ ಬೇರೆ ಯೋಚನೆಯೇ ತೋರುವದಿಲ್ಲ. ನೀನು ಹೇಳು, ನಂಜೆಯೇ, ನನ್ನಮೇಲೆ ಅನೇಕಂಡೆಯನ್ನು ಹುಟ್ಟಿಸಿದರೆ ನಾನೇನು ಮಾಡಲಿ.

ಭಾ—ಹಾಗೆ ದಾರಿಗೆ ಬಂದು ವಿವೇಕವನ್ನು ತಂದುಕೋ, ನಿನಗೇನು, ಚೆನ್ನಾಗಿ ಓದಿರುವೆ. ನಿನ್ನ ತಂದೆಯು ಉದ್ಯೋಗದಲ್ಲಿರುವರು, ನೀನು ಬಹಳ ಶಕ್ತ ಇನ್ನೊಂದು ಸಾರಿ ಹೇಳುವೆನು, ಬಹಳ ಚೆನ್ನಾಗಿರುವೆ ಸಾವಿತ್ರಿಗಿಂತಲೂ ಸೊಗಸಾಗಿರುವೆ.

ಮೂ—ಇಲ್ಲ. ಸಾವಿತ್ರಿಯೇ ಚೆನ್ನಾಗಿರುವಳು ನೀನು ಹತ್ತಿರದಿಂದ ನೋಡಿಲ್ಲ.

ಭಾ—ಎಷ್ಟು ನೋಡಿದರೇನು ಸುಮಾರಾಗಿರುವಳು. ಅಂತಹ ತ್ರಿಲೋಕ ಸುಂದರಿಯೇನಲ್ಲ.

ಮೂ—ನಿನಗೆ ಅಲ್ಲ. ನನಗೆ ಅವಳು ತ್ರಿಲೋಕಸುಂದರಿ, ಭುವನಮೋಹಿನಿ, ರತಿ; ಚೆನ್ನಾಗಿಲ್ಲವಂತೆ, ಸುಮಾರಾಗಿರುವಳಂತೆ. ಎಂದಾಗಲೂ, ನಾಲ್ಕಾರು ಹುಡುಗಿಯರನ್ನು ನೋಡಿ ವ್ಯತ್ಯಾಸಗಳನ್ನು ತಿಳಿದು ಕೊಂಡಿದ್ದರಲ್ಲವೇ ? ಆ ಸಾವಿತ್ರಿಯು ನಳದೋಳುಗಳೇ ಸಾಕು ಈಗೀಗಲೆ ಸಣ್ಣವಾಗಿ ಗುತ್ತವಾಗಿ ಬೆಳದಿರುವದನ್ನು ನೀನು ಕಾಣೆ. ಇನ್ನು ಕೆಲವುದಿವಸಗಳಗೆ ಹೇಗೆ ಆಗುವಳೋ, ಆ ನಡೆಯೊಂದೇ ಸಾಕು, ಆ ಕಳೆಯೊಂದೇ ಸಾಕು

ರಾ—ರೂಪಿನಲ್ಲಿಯೇನೋ ಚೆನ್ನಾಗಿರಬಹುದು. ಅವಳಗುಣದಲ್ಲಿ ಅನುಮಾನ.

ಮೂ—ಇಂತಹ ಆಕಾರದಲ್ಲಿ ಸದ್ಗುಣಗಳಲ್ಲದೆ ದುರ್ಗುಣಗಳು ವಾಸವನ್ನು ಮಾಡಲಾರವು, ಅವಳು ಈಗಿನ ದುಃಖವನ್ನು ಸೈರಿಸಿಕೊಂಡಿರುವದನ್ನು ನೋಡಿದರೇ ಗೊತ್ತಾಗುವದಿಲ್ಲವೇ ? ಆದಿವಸ, ಚಿತ್ರಾವತಿಯಲ್ಲಿ, ಕಣ್ಣೀರುಬಿಡುತ್ತ ಹೇಗಿದ್ದಳು ? ಒಂದುಸಾರಿ, ಆ ಕಣ್ಣೀರುಹರಿದು ಕಾಲುವೆಗಳ ರೇಖೆಯಿಂದೊಪ್ಪುವ ಮುದುಕ

ಪೋಲಗಳನ್ನು ಚುಂಬಿಸಬೇಕೆಂದು ಮನಸ್ಸುಹೋಯಿತು ಅದೃಷ್ಟವಿದ್ದರೆ, ಸಾಧ್ಯವಾಗದೇ ಏನು ?

ರಾ—ಅದೃಷ್ಟವಿದ್ದರೆ, ನಾವು ಮನಸ್ಸಿನಲ್ಲಿ ಬೇಕೆಂದು ಕೋರುವುದೆಲ್ಲಾ ಸಿದ್ಧಿಸುವುದು. ಅದಕ್ಕೆ ಇಷ್ಟು ಆರ್ಭಟವನ್ನೇಕೆ ಮಾಡಬೇಕು ?

ಮೂ—ನಿನಗೆ ತಾಳ್ಮೆಯಿದೆ. ನನಗೆ ಇಲ್ಲ. ಮನಸ್ಸಿನಲ್ಲಿ ಹರ್ಷವಿದ್ದರೂ ವ್ಯಾಕುಲವಿದ್ದರೂ ನೀನು ತೋರ್ಪಡಿಸಿಕೊಳ್ಳುವುದಿಲ್ಲ. ನನಗೆ ಅದು ಸಾಧ್ಯವಿಲ್ಲ. ಮನಸ್ಸಿಗೆ ತೋಚಿದ್ದು ಹೊರಗೆಬರಬೇಕು.

ರಾ—ಈಗಲೂ, ಸಾವಿತ್ರಿಯು ಬೇಕೋ, ಬುದ್ಧಿ ಬಂತೋ ?

ಮೂ—ಸಾವಿತ್ರಿಯು ಜತೆಯಲ್ಲಿಯೇ ಬುದ್ಧಿಯೂ ಬರುವುದು.

೭ನೇ ಪರಿಚ್ಛೇದ.

ಸಾವಿತ್ರಿಯು ಒಂದು ಕಾಗದವನ್ನು ಬರೆದಳು. ಬರೆದುದನ್ನು ಎರಡು ಮೂರುಬಾರಿ ಓದಿದಳು. ಕೆಲವು ಕಡೆಗಳಲ್ಲಿ ತಿದ್ದಿದಳು. ಕೆಲವೆಡೆಗಳಲ್ಲಿ ಹೊಡೆದುಹಾಕಿದಳು. ಮತ್ತೆ ಕೆಲವು ಹೊಸಪಂಕ್ತಿಗಳನ್ನು ಬರೆದಳು. ಈ ವಿಪರೀತಗಳಿಂದ ಲಿಖಿತವು ಕೆಟ್ಟುಹೋಯಿತು ಬೇರೊಂದು ಹಾಳೆಯಲ್ಲಿ ಪುನಃ ಬರೆದಳು. "ಇದರಿಂದ ಏನಾದರೂ ಕಾವುದುವೆನು ತಪ್ಪಿದರೆ, ಕಾಗದವನ್ನು ಬರೆದುದಕ್ಕೂ ಸಾರ್ಥಕವಾಯಿತೆಂದಳು" ಕಡೆಗೆ ಕಾಗದವನ್ನೇನೋ ಬರೆದಾಯಿತು. ಕೊಟ್ಟು ಕಳುಹಿಸುವ ಬಗೆ ಹೇಗೆ ಎಂದು ಆಲೋಚಿಸಿದಳು. ತಾನು ಟಪಾಲು ಬಳಿಹೋಗಿ ಹಾಕಲಾದೀತೆ? ಇಲ್ಲವೇ ಒಬ್ಬ ಹಳ್ಳಿಯವನ ಬಳಿಕೊಟ್ಟರಾದಿತೋ. ತಾನು ಹೋಗುವದು; ಅದು ಆಗಲಾರದು, ಹಳ್ಳಿಯವನನ್ನು ಕರೆದು ಅರ್ಧಾಣೆಯು ಚೀಟಿಯನ್ನು ತರಹೇಳಿದಳು. ತಂದುದಾಯಿತು. ಕಾಗದವನ್ನು ಮಡಿಸಿ, ಅದಕ್ಕೆ ಗೋಂದನ್ನು ಅಂಟಿಸಿ. ವಿಳಾಸವನ್ನು ಬರೆದಳು. ಚೀಟಿಯನ್ನು ಹಚ್ಚಿ ಹಳ್ಳಿಯವನ ಕೈನಲ್ಲಿ ಕೊಟ್ಟಳು. "ಈಗಲೇ ಹಾಕಿಬಾ" ಎಂದು ಹೇಳಿದಳು.

ನಾಗಮ್ಮ—"ದೇವಸ್ಥಾನಕ್ಕೆ ಬರುವದಿಲ್ಲವೇನೇ ?

"ನಾನು ಬರುವದಿಲ್ಲ. ನೀನೇ ಹೋಗು.

ನಾ—" ಅದೇನು, ದೇವರನ್ನು ನೋಡುವದಿಲ್ಲವೇ, ಏಳು, ಬಾಚಿಕೊಂಡು ನಿನ್ನ ಆ ಹೊಸಸೀರೆಯನ್ನುಟ್ಟುಕೋ,

"ಇಲ್ಲ. ನಾನು ಬರುವದಿಲ್ಲ

ಅಷ್ಟರಲ್ಲಿಯೇ ಶೋಣೇರಯ್ಯನ ಹೆಂಡತಿ—ಲಕ್ಷ್ಮಮ್ಮನು "ಮನೆಗೆ ಯಾರಾದರೂ ಕಾವಲುಯಿರಬೇಕಲ್ಲ. ಬರದೇ ಇದ್ದರೆ ಇಲ್ಲಿಯೇ ಇರಲಿ."

"ಆಗಬಹುದು ನಾನು ಕಾವಲಿರುವೆನು, ತಾವು ದಯಮಾಡಬಹುದು" ಲಕ್ಷ್ಮಮ್ಮನು ತನ್ನ ಮಗುವನ್ನು ಕಂಕುಳಸಲ್ಲಿ ಹಾಕಿಕೊಂಡು ನಾಗಮ್ಮನ ಜತೆಯಲ್ಲಿ ತನ್ನ ತಮ್ಮನೊಬ್ಬನನ್ನು ಕರೆದುಕೊಂಡು ಹೊರಟುಹೋದಳು. ಸಾವಿತ್ರಿಯು ಬೀದಿಯ ದಿಣ್ಣೆಯಮೇಲೆ ಕುಳತುಕೊಂಡು ಯೋಚಿಸುತ್ತಿದ್ದಳು ತನ್ನ ಕಾಗದವು ಚಿಕ್ಕಪ್ಪನಿಗೆ ಯಾವಾಗ ಸೇರುವದೋ, ಸೇರಿದ ಕೂಡಲೇ ಬರುವನೋ, ಇಲ್ಲವೋ; ಹಳ್ಳಿಗೆ ತಲಪಲು ಕೆಲವು ದಿವಸಗಳಾಗಬಹುದು. ಕೂಡಲೇ ಬಂದರೆ, ಹೋಟುಹೋಗಬಹುದು ನನ್ನ ಚಿಕ್ಕಪ್ಪನು ಬಳ್ಳಿಯವನು. ಅವನ ಮನೆಯಲ್ಲಾದರೂ ಸುಖವಾಗಿರಬಹುದು; ಹೀಗೆ ತನ್ನಲ್ಲಿಯೇ ತಾನು ಮಾತನಾಡಿಕೊಳ್ಳುತ್ತ ಸುಬೇದಾರರ ಮನೆಯಮುಂಗೆ ನಿಂತಿದ್ದ ಎರಡೆತ್ತಿನಗಾಡಿಯನ್ನು ನೋಡಿದಳು. ಜವಾನರು ಬಳಗೆ ಹುಲ್ಲನ್ನುಹಾಕಿ, ಜಮಖಾನವನ್ನು ಹಾಸುತ್ತಿದ್ದರು ತನ್ನ ಸಹಪಾಠಿ ಕೃಷ್ಣವೇಣಿಯು ಬೀದಿಯ ಬಾಗಲಿಗೆ ಬಂದು ನಿಂತಳು, ಅವಳೂ, ಸಾವಿತ್ರಿಯನ್ನು ನೋಡಿದಳು. "ಇದೇನು ಸಾವಿತ್ರಿಯು ಇಲ್ಲಿರುವಳು. ದೇವಸ್ಥಾನಕ್ಕೆ ಬರುವದಿಲ್ಲವೇ, ಕೇಳಿ ನೋಡುವೆನೆಂದು" ಸಾವಿತ್ರಿಯು ಬಳಗೆ ಬಂದಳು.

"ಸಾವಿತ್ರೀ, ನಿನ್ನತಾಯಿಯೂ, ಅತ್ತಿಗೆಯೂ ಹೊರಟರೋ, ಇಲ್ಲವೋ ?

" ಹೊರಟು ಹೋದರು.

" ನೀನೇಕೆ ಹೋಗಲಿಲ್ಲ?

“ ಏತಕ್ಕೆ ಹೋಗಬೇಕು ?

“ ದೇವರನ್ನು ನೋಡುವದಕ್ಕೆ.

“ ದೇವರಿದ್ದರಲ್ಲವೇ ನೋಡುವುದು. ದೇವರೇ ಇಲ್ಲದಾಗ ನೋಡುವದೇನು

“ ನಾನು ನಿನಗೆ ದೇವರನ್ನು ತೋರಿಸುವೆನು, ಏಳು, ಹೋಗೋಣ. ನಮ್ಮ ಗಾಡಿಯನ್ನು ಕಟ್ಟುತ್ತಿರುವರು, ಗಾಡಿಯಲ್ಲಿಯೇ ಹೋಗೋಣ.

“ ನಾನು ಬರುವದಿಲ್ಲ.

“ ನಿನ್ನ ಹಟವನ್ನು ಬಿಡು. ನೀನು ಈಗ ಬಾರದಿದ್ದರೆ ನಿನ್ನೊಡನೆ, ನಾನು ಮಾತನಾಡುವದನ್ನೇ ಬಿಟ್ಟು ಬಿಡುವೆನು

“ ನನ್ನ ತಾಯಿಗೆ ಬರುವುದಿಲ್ಲವೆಂದು ಹೇಳಿರುವೆನು.

“ ನಿನ್ನ ತಾಯಿಗೆ ನಾನು ಹೇಳುವೆನು. ಬಲವಂತವಾಗಿ ಕರೆತಂದೆನೆಂದು ನುಡಿಯುವೆನು. ಏಳು.

“ ನನ್ನ ಹೊಸಸೀರೆಗಳೆಲ್ಲಾ ಪೆಟ್ಟಿಗೆಯಲ್ಲಿ ಸೇರಿಹೋಗಿವೆ, ಅತ್ತಿಗೆಯ ಬಳಿ ಬೀಗದಕೈಗಳಿರುವವು. ನಾನು ಹೇಗೆಬರಲಿ ?

“ ನಿನಗೆ ಹೊಸಸೀರೆಯ ಶೃಂಗಾರವೂ ಬೇಡ, ಆಭರಣಗಳ ಅಲಂಕಾರವೂ ಬೇಡ ಇದ್ದಹಾಗೆ ಬಂದರೆಯೇ ದೇವರು ಮೆಚ್ಚುವನು.

“ ಹೀಗೆಯೇ ಬಂದರೆ, ನನ್ನತಾಯಿ ಯೇನಾದರೂ ಅನ್ನುವಳಮ್ಮ.

“ ಚಿಂತೆಯಿಲ್ಲ, ಬಾ.

ಸಾವಿತ್ರಿಯನ್ನು ಕರೆದುಕೊಂಡು ಕೃಷ್ಣವೇಣಿಯು ಗಾಡಿಯಬಳಿ ಬಂದಳು. ಸುಬೇದಾರರ ಹೆಂಡತಿಯೂ, ಸರ್ವೋತ್ತಮನೂ, ವಸುಂಧರೆಯೂ ಗಾಡಿಯಲ್ಲಿ ಕುಳಿತರು. ಸಾವಿತ್ರಿಯೂ, ಕೃಷ್ಣವೇಣಿಯೂ ಗಾಡಿಯಲ್ಲಿ ಕುಳಿತರು. ಸುಬೇದಾರರಹೆಂಡತಿಯು “ ತಿಮ್ಮ, ಮೂರ್ತಿರಾಯರು ಬರುವರೇನೋ ಕೇಳೋ. ಮೂರ್ತಿಯೂ ಗಾಡಿಯ ಬಳಿಗೆ “ ಜಾಗವಿದ್ದರೆ ಬರುವೆನೆಂದು ” ಹೇಳಿಕೊಂಡು ಬಂದು ಒಳಗೆ ನೋಡಿದನು. ವಿದ್ಯುಚ್ಛಕ್ತಿಯು ಮರೀಚಿಯೊಂದು ಹೊಡೆದಂತಾಯಿತು. “ನೀವು ಹೊರಡಿ, ನಾನೂರಾಜನೂ, ನಡೆದು ಬರುತ್ತೇವೆ ” ಅಷ್ಟರಲ್ಲಿಯೇ “ ನಡೆದು ಏನು ಬರುವುದು, ಕಾಲು

ಗಳು ನೋಯುವವರಕ್ಕೆ, ಹೋಗುವಗಾಡಿ ಹೋಗುತ್ತೆ, ಮುಂದುಗಡೆಯಲ್ಲಿ ಹತ್ತಿಕೋ " ಎಂದು ಬದಲುಬಂತು. ಇಲ್ಲ. ನೀವುಹೊರಡಿ ಎಂದೆನುತ್ತ, ಮನೆಯೊಳಗೆಬಂದು " ಗುರುವಾ " ಎಂದುಕೂಗಿದನು. " ಸ್ವಾಮಿ " " ರಾಜಪ್ಪನ್ನ ಈಗಲೇ ಕರೆದುಕೊಂಡುಬಾ, ಓಡು " ಕೊಂಚಹೊತ್ತಿಗೆ, ಗುರುವನೂ, ರಾಜನೂ ಬಂದರು. " ಇದೇನುಮೂರ್ತಿ, ಸೊಗಸುಮಾಡಿ ಕೊಳ್ಳುವೆ. " ಗುಡಿಗೆಹೋಗೋಣ. ಆಗಲೇ ಗಾಡಿಯು ಹೊರಟು ಹೋಯಿತು ಗಾಡಿಯನ್ನು ಹಿಡಿಯಬೇಕು. "

ತ್ವರಿತದಿಂದ ಇಬ್ಬರೂ ನಡೆದರು ಗಡಿದಂ ವೆಂಕಟರಮಣಸ್ವಾಮಿಯ ದೇವಸ್ಥಾನವು ಬಾಗೇಪಲ್ಲಿಗೆ ೧|| ಮೈಲಿಯದೂರದಲ್ಲಿದೆ ಪುರಾತನ ಕಾಲದಲ್ಲಿ ಕಟ್ಟಿದ ದೇವಸ್ಥಾನ. ಬಹಳವರುಷಗಳಿಂದ ಪೂಜೆ ಪುರಸ್ಕಾರ ಗಳಿಲ್ಲದೆ, ದೇವರನ್ನು ಕೇಳುವವರೇ ಇರಲಿಲ್ಲ. ಹಿಂದಿನ ಸುಬೇದಾರರಾಗಿದ್ದವರು, ಸರ್ಕಾರದವರಿಗೆ ಬರೆದು, ಶಿಥಿಲವಾಗಿದ್ದ ಭಾಗಗಳನ್ನು ಸರಿಪಡಿಸಿ, ವಾಹನಗಳೆಲ್ಲವನ್ನೂ ಪುನಃ ಹೊಸದಾಗಿಮಾಡಿಸಿ, ವರ್ಷವರ್ಷಕ್ಕೂ ಒಂದು ಜಾತ್ರೆಯನ್ನು ಏರ್ಪಡಿಸಿದರು. ಈಗ ನಿತ್ಯಕಟ್ಟಳೆ ಪೂಜೆಯೂ ವಿಶೇಷದಿನಗಳಲ್ಲಿ ಮೆರವಣಿಗೆಯೂ ಬರುತ್ತದೆ. ಒಬ್ಬ ಪೂಜಾರಿಯು ಪಕ್ಕದಲ್ಲಿನ ಹಳ್ಳಿಯಲ್ಲಿಯೇ ವಾಸಮಾಡುವನು. ಉತ್ಸವಾದಿ ದಿವಸಗಳಲ್ಲಿ, ಬಾಗೇಪಲ್ಲಿಯಿಂದಲೂ, ಮತ್ತು ಇತರ ಕಡೆಗಳಿಂದಲೂ, ವೈದಿಕ ಬ್ರಾಹ್ಮಣರು ಬಂದು ಸೇರುವರು. ಆಗಿನ ಕೋಲಾಹಲವು ವರ್ಣಿಸಲಸದಳವು. ಈಗಲೂ ಪ್ರತಿಸಂವತ್ಸರದಲ್ಲೂ ಜಾತ್ರೆಯಲ್ಲಿ ದನಗಳ ಮಾರಾಟವಾಗುವುದು. ಆಗ ಸುಮಾರು ೩೦—೪೦ ಸಾವಿರ ಕಾಲ್ನಡೆಗಳು, ಸೇರುವದುಂಟು. ಕುಂಪಣಿ ಸೀಮೆಗಳಿಂದಲೂ, ವರ್ತಕರೂ, ಭಕ್ತಾದಿಗಳೂ ತಂಡೋಪತಂಡವಾಗಿ ನೆರೆಯುವರು.

ಗುಡಿಗೆ ಹೆಬ್ಬಾಗಿಲು ಉತ್ತರಮುಖವಾಗಿದೆ. ಒಳಗಿನಪ್ರಾಕಾರದಲ್ಲಿ, ಎದುರಿಗೆ ಕಲ್ಯಾಣಮಂಟಪವಿರುವದು. ಕಲ್ಯಾಣಮಂಟಪದ ಕಲ್ಲುಕಂಭಗಳಲ್ಲಿ, ಸಿಂಹಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ ಕೆಲವು ಋಷಿ

ಗಳ ಚಿತ್ರಗಳನ್ನೂ ಕೆಲವು ದೇವರಗಳ ಚಿತ್ರಗಳನ್ನೂ ಕೆತ್ತಿರುವರು. ಪ್ರಾಕಾರದಲ್ಲಿ ಪ್ರವೇಶಿಸುತ್ತಲೂ, ಎಡಬಲಭಾಗಗಳಲ್ಲಿ ಕಲ್ಲುಕಂಭಗಳನ್ನೂ ನಿಲ್ಲಿಸಿರುವರು ಈ ಕಂಭಗಳ ಮೇಲೆ, ಬಿದಿರುಬೊಂಬು, ಚಾಪೆಗಳಿಂದ ಉತ್ಸವಕಾಲಗಳಲ್ಲಿ ಚಪ್ಪರಹಾಕಲ್ಪಟ್ಟು, ಬ್ರಾಹ್ಮಣರಿಗೆ ಸಂತರ್ಪಣೆಯು ನಡೆಯುವದು. ಎಡಭಾಗದಲ್ಲಿ, ಇನ್ನೂ ಮುಂದಕ್ಕೆ ಹೋದಲ್ಲಿ, ಎರಡು ಕೊಠಡಿಗಳು, ಮತ್ತು ಕೈಸಾಲೆಗಳಿರುವವು. ಜಾತ್ರೆಯಾಗುವಾಗ, ಈ ಪ್ರದೇಶವು ಸುಬೇದಾರರ ಮತ್ತು ತಾಲ್ಲೂಕಿನ ಉದ್ಯೋಗಸ್ಥರ ಬಿಡಾರವಾಗುವುದು ಒಂದು ಪ್ರದಕ್ಷಿಣೆಯನ್ನು ಬರುವಾಗ ಸುತ್ತಲಿನ ಕಟ್ಟಡವನ್ನು ನೋಡಬಹುದು. ಕೆಲವು ಹಳೆಯ ವಾಹನಗಳನ್ನೂ, ಮತ್ತು ಸಣ್ಣ ತೇರನ್ನೂ ಪಕ್ಕದಲ್ಲಿ ಬಿಟ್ಟಿರುವರು ಪೂಜಾರಿಗೆ ಅನುಕೂಲವಾದ ಮನೆಯೊಂದು ಈ ಪ್ರಾಕಾರದಲ್ಲಿಯೇ ಇದೆ.

ಆದಿನ ಗುಡಿಯಲ್ಲಿ ತೋರಣಗಳನ್ನು ಕಟ್ಟಿ, ಕೆಳಗೆ ಕೆಲವೆಡೆಗಳಲ್ಲಿ ರಂಗವಲ್ಲಿಯನ್ನಿಕ್ಕಿರುವರು ಹಳ್ಳಿಯ ವೋಲಗವೂ ನಡೆಯುತ್ತಿತ್ತು. ಬಾಗೇಪಲ್ಲಿಯಿಂದ ಜನಗಳು, ಮುಕ್ಕಾಲುಪಾಲು ಹೆಂಗಸರು ಮತ್ತು ಮಕ್ಕಳು, ಬರುತ್ತಿದ್ದರು ಬಂದ ಬಂದವರು, ಗುಡಿಯೊಳಗೆ ಹೋಗಿ, ಮಂಗಳಾರತಿಯನ್ನು ಮಾಡಿಸಿ, ಕಾಯಿಹೋಳುಗಳನ್ನು ಹಿಡಿದುಕೊಂಡು ಕಲ್ಯಾಣಮಂಟಪಕ್ಕೆ ಬರುತ್ತಿದ್ದರು ಕೆಲವರು ಪುಷ್ಪಗಳನ್ನು ತಮ್ಮ ಜುಟ್ಟಿನಲ್ಲಿ ಸಿಕ್ಕಿಸಿಕೊಂಡು, ವಿನೋದವಾಗಿ ಮಾತನಾಡುತ್ತಿರುವರು. ಬಾಗಿಲುಬಳಿಯಲ್ಲಿ ಇಟ್ಟಿದ್ದ ಬಿಂದಿಗೆಯಲ್ಲಿ ತಮ್ಮ ಶಕ್ತ್ಯನುಸಾರ ಕಾಸುಗಳನ್ನು ಹಾಕುತ್ತಿದ್ದವರು ಗುಡಿಯಿಂದ ಹೊರಗೆಬರುವಾಗ, ಪಂಚೆಗಳಿಂದ ಮುಖದಲ್ಲಿನ ಬೆವರನ್ನು ಒರಸಿಕೊಳ್ಳುತ್ತ, ಬೀಸಿಕೊಳ್ಳುತ್ತ ಇಳಿಯುವವರು, ದೇವರ ಪ್ರಸಾದವನ್ನು ತಿನ್ನಬೇಕೆಂದು, ಕಲ್ಲಿನ ಮೇಲೆ, ಕಾಯಿ ಹೋಳುಗಳನ್ನು ಒಡೆಯುತ್ತಿದ್ದವರು. ಇವರಗಲಭೆ,ಕಲ್ಯಾಣ ಮಂಟಪದಲ್ಲೆಲ್ಲಾ ಚಿಪ್ಪಿನ ಚೂರುಗಳು; ಕೆಲವರು ಜಾಣೆಯರಾದ ಹೆಂಗಸರು. "ಕಾಯಿಗಳನ್ನು ಹಾಗೆಯೇ ಇಡಿ, ನಾಳೆ ಚಟ್ಣಿಮಾಡಲಿಕ್ಕಾಗುವದು" ಎಂದು ಎಚ್ಚರಿಕೆಯನ್ನು ಕೊಡುತ್ತಿದ್ದರು.

ಸುಬೇದಾರರ ಮನೆಯ ಗಾಡಿಯೂ ಬಂತು. ಪಕ್ಕದಲ್ಲಿಯೇ ಮೂರ್ತಿರಾಯನೂ, ರಾಜನೂ ಇದ್ದರು. ಎಲ್ಲರೂ ಇಳಿದು ದೇವಸ್ಥಾನದೊಳಕ್ಕೆ ಬಂದರು. ಮೆಟ್ಲುಗಳನ್ನು ಹತ್ತುವಾಗ ಸೀರೆಯ ಕೊನೆಗೆ ಕಾಲಿನಬೆರಳು, ಸಿಕ್ಕಿ ಸಾವಿತ್ರಿಯು ಮುಗ್ಗರಿಸಿದಳು. ಆದರೆ, ಬೀಳಲಿಲ್ಲ ಪೆಟ್ಟುತಗಲಿಲ್ಲ. "ನನ್ನ ತಾಯಿಯು ಬಯ್ಯುವಳು" ಎಂದು ಕೃಷ್ಣವೇಣಿಗೆ ನುಡಿದಳು ಬಯ್ಯುವದಿಲ್ಲ ನಡೆಯೆಂದು, ಒಳಕ್ಕೆ ಬಂದರು. ಕಲ್ಯಾಣಮಂಟಪದಲ್ಲಿ, ನಾಗಮ್ಮನೂ, ಲಕ್ಷ್ಮಮ್ಮನೂ, ಕುಳಿತಿದ್ದವರು ಸಾವಿತ್ರಿಯನ್ನು, ಸುಬೇದಾರರ ಮನೆಯವರೊಡನೆ ನೋಡಿ ಬೆಚ್ಚಿಬಿದ್ದರು. "ಸಾವಿತ್ರೀ, ಸಾವಿತ್ರೀ ಇಲ್ಲಿ ಬಾ," ಕೃಷ್ಣವೇಣಿಯೂ ಜತೆಗೆಹೋದಳು ಲಕ್ಷ್ಮಮ್ಮನು "ಏನು? ಮನೆಯನ್ನು ದೋಪುಮಾಡಿಬಿಟ್ಟು ಬಂದೆಯಾ, ಮನೆಯಲ್ಲಿ ಯಾರಿರುವರು?" "ನಿನ್ನ ತಮ್ಮನಿರುವನು ಇವರು ಬಲವಂತಮಾಡಿದರು, ಬಂದೆ," "ಇದೇನೇ ಹಳೆಯ ಸೀರೆಯನ್ನುಟ್ಟುಕೊಂಡು ನಮ್ಮ ಮಾನವನ್ನು ಕಳೆಯುತ್ತೀಯೇ" ಕೃಷ್ಣವೇಣಿಯು, "ಯಾವಸೀರೆಯಾದರೂ ಒಂದೇ ; ನಾವು ದೇವರದರ್ಶನವನ್ನು ಮಾಡಿಕೊಂಡು ಬರೋಣ ಬಾ" ಎಂದು ಇಬ್ಬರೂ ಗುಡಿಯೊಳಗೆ ಹೊರಟುಹೋದರು. ಗುಡಿಯೊಳಗೆ ಕತ್ತಲೆ, ಮೇಲಿನ ಕಲ್ಲು ಚಪ್ಪಡಿಗಳೆಲ್ಲಾ ಕಪ್ಪಾಗಿದ್ದವು. ಎದುರಿಗೆ ನಿಂತಿರುವವರು ಯಾರೆಂದು ತಿಳಿಯಲೂ ಕೂಡಾಆಗುವುದಿಲ್ಲ. ಒಳಗಿನಿಂದ ಬರುವ ಧೂಪದಪರಿಮಳ. ಹಿಲಾಲು ಬತ್ತಿಗಳಿಂದ ಹೊರಡುವ ಹೊಗೆ ; ಆಗಾಗ್ಗೆ ಘಂಟಾನಿನಾದ. ಭಕ್ತಾದಿಗಳ "ಸ್ವಾಮಿ, ಗೋವಿಂದ, ಶ್ರೀನಿವಾಸ, ವೆಂಕಟರಮಣ" ಎಂಬುವ ಕೂಗುಗಳು, "ಕರ್ಪೂರಕೊಡಿ, ತೆಂಗಿನಕಾಯಿಗೆ ಗುಂಜುತೆಗೆದಿಲ್ಲ. ಸ್ವಲ್ಪ ಬತ್ತಿಟ್ಟಿಗೆನಿಲ್ಲಿ," ಎಂಬ ಪೂಜಾರಿಯ ಮಾತುಗಳು. ಗಾಳಿಯು ಬರಲು ಅವಕಾಶವಿಲ್ಲದ್ದರಿಂದ, ಸೆರಗಿನಿಂದ ಬೀಸಿಕೊಳ್ಳುವವರು, ಮೇಲು ಹೊದ್ದಿಕೆಗಳಿಂದ ಬೀಸಿಕೊಳ್ಳುವವರು. ಅಷ್ಟರಲ್ಲಿಯೇ, ದಾರಿ, ದಾರಿ, ದಾರಿಬಿಡಿ, ಎಂದು ಸುಬೇದಾರರ ಮನೆಯವರಿಗೆ ಜಾಗವನ್ನು ಬಿಡಿಸುವದು ಈ ಅವಾಂತರಗಳಿಂದ ಗುಡಿಯು ತುಂಬಿತ್ತು. ಸುಬೇದಾರರ ಮನೆಯವರು ಮುಂಭಾಗ

ದಲ್ಲಿ ಹೋಗಿನಿಂತರು. ಪೂಜಾರಿಯು ತೆಂಗಿನಕಾಯಿಗಳನ್ನು ಒಡೆದು, ಕೆಲವು ಪುಷ್ಪಗಳನ್ನು ದೇವರಮೇಲೆ ಎರಚಿ, ಉದ್ಧರಣೆಯಿಂದ ನೀರನ್ನು ಕೈಗಳಿಗೆ ಬಿಟ್ಟುಕೊಂಡು. ಕಾಯಿಗಳಿಗೂ, ಹಣ್ಣುಗಳಿಗೂ ಸ್ವಲ್ಪ ಜೆಗಟು ನೀರನ್ನು ಸುತ್ತಿ, ಕೈಗಳನ್ನು ಜೋಡಿಸಿಕೊಂಡು ಏನೇನೋ ಮಂತ್ರಗಳನ್ನು ಹೇಳುತ್ತಿದ್ದನು. ಕಡೆಗೆ ಮಂಗಳಾರತಿಯೂ ಆಯಿತು ಎಲ್ಲರೂ ನಮಸ್ಕಾರವನ್ನು ಮಾಡಿದರು. ಸಾವಿತ್ರಿಯು, ಹರಸಿಕೊಂಡಳು. ಏನೆಂದು; "ಆಮದುವೆಯು ತಪ್ಪಲೆಂದು" ಮೂರ್ತಿಯು, ಹರಸಿಕೊಂಡನು ಏನೆಂದು; "ಸಾವಿತ್ರಿಯು ತನಗಾಗಲೆಂದು" ಅಕಸ್ಮಾತ್ತಾಗಿ, ಇಬ್ಬರ ದೃಷ್ಟಿಗಳೂ ಒಂದಾಗಿ ಸೇರಿದವು. ನಾಚಿಕೆಯಿಂದ ಇಬ್ಬರೂ ತಲೆಯನ್ನು ಬಗ್ಗಿಸಿದರು, ಪುನಃ ಏನೋ ನೆವದಿಂದ ತಲೆಯೆತ್ತಿದರು, ಪುನಃ ನೋಟಗಳು ಸೇರಿದವು ಸುಬೇದಾರರ ಮನೆಯವರು ಹಿಂತಿರುಗಿದರು. ಆ ಗಲಾಟೆಯಲ್ಲಿ, ಆ ನೂಕುನುಗ್ಗಲಲ್ಲಿ. ಹೋಗುವದು ಸುಲಭವಲ್ಲ. ಆದರೆ ಸುಬೇದಾರರ ಮನೆಯವರಿಗೆ ಕಷ್ಟವಿಲ್ಲ. ದಾರಿಯನ್ನು ಬಿಡಿಸಾಯಿತು. ಹೋಗುವಾಗ ಮೂರ್ತಿಯು ಸಾವಿತ್ರಿಯ ಪಕ್ಕವಾದನು. ಸಾವಿತ್ರಿಯು ಕೃಷ್ಣವೇಣಿಯ ಪಕ್ಕವಾದಳು. ಸಾವಿತ್ರಿಯ ಕೈಯನ್ನು ಮೂರ್ತಿಯು ಹಿಂದಸಿಂದ ಎಳೆದನು. ಸಾವಿತ್ರಿಯು ಕೃಷ್ಣವೇಣಿಯ ಕೈಯನ್ನು ಹಿಡಿದಳು.

ಗುಡಿಯ ಹೊರಗೆ ಬಂದು ಕಲ್ಯಾಣಮಂಟಪದಲ್ಲಿ ಕುಳಿತರು. ನಾಗಮ್ಮನೂ ಲಕ್ಷ್ಮಮ್ಮನೂ ಹೊರಟುಹೋಗಿದ್ದರು. ತೆಂಗಿನ ಚಿಪ್ಪುಗಳನ್ನು ಎಸೆದರು. ಕೆಲವು ಕಾಯಿಗಳನ್ನು ಮುಗಿಸಿದರು. ಗಾಡಿಯನ್ನು ಕಟ್ಟಿಸಹೇಳಿ ಮನೆಗೆ ಬಂದುಬಿಟ್ಟರು. ಮೂರ್ತಿಯೂ, ರಾಜನೂ, ಬಳಿಕ್ಕ ಹೊರಟು ಹೋದರು, ಸಾವಿತ್ರಿಯು ತನ್ನ ಮನೆಗೆ ಬಂದಳು. ಅಲ್ಲಿ ತಾನು ಕಾಗದವನ್ನು ಟಪಾಲಿಗೆ ಹಾಕೆಂದುಕೊಟ್ಟ ಹಳ್ಳಿಯವನು ನಿಂತಿದ್ದನು. "ಕಾಗದವನ್ನು ಹಾಕಿದೆಯಾ?"

"ಸ್ವಾಮಿಗಳು ಹಾಕಿರಬಹುದು"

"ಯಾವಸ್ವಾಮಿಗಳು"

"ಕೋನೇರಪ್ಪನೋರು. ನಮ್ಮ ಶಾನುಭೋಗರು. ಟಪ್ಪಾಲ್‌ಬಳಿನಿಂತಿದ್ದರು.

“ಕಾಗದ ಏನೋ” ಅಂತ ಕೇಳಿಕೊಂಡರು. ನಾನು ಬಂದುಬಿಟ್ಟೆ, “ನನಗೆ ವಿವೇಚನೆಯಿಲ್ಲ” ಎಂದೆಂದುಕೊಂಡಳು

೮ನೇ ಪರಿಚ್ಛೇದ.

ಕೆಲವು ದಿನಗಳನಂತರ ಸಂಧ್ಯಾಕಾಲದಲ್ಲಿ ದಿಕ್ಕು ದಿಕ್ಕುಗಳೆಲ್ಲವೂ ಅರುಣಪ್ರಭೆಯಿಂದ ಜಾಜ್ವಲ್ಯಮಾನವಾಗಿದ್ದವು. ಚಿಗುರಿದ ಆಮ್ರವೃಗಳಮೇಲೆ ಬೀಳುವ ಕೆನ್ನೀರಂದದಿ, ಸೂರ್ಯದೇವನಿಂದ ಬಿಸುಗದಿರುಗಳು ತಗ್ಗುಗಳಲ್ಲಿ ಬೆಳೆದ ಗಿಡಮರಗಳಮೇಲೆ ಪಸರಿಸಿದ್ದವು. ಕೆಲವರು ಆದಿತ್ಯನಿಗುಂಟಾದ ಕೋಪವಿಶೇಷದಿಂದ ಮುಖಮಂಡಲವು ಕೆಂಪೇರಿ, ಅದರ ಶೋಭೆಯು ಪ್ರತಿಬಿಂಬಿತವಾಗುವುದೆಂಬುವರು. ಮತ್ತೆ ಕೆಲವರು ಪಶ್ಚಿಮ ದಿಕ್ಕೆಂಬ ಅಂಗನೆಯಮೇಲಿನ ವ್ಯಾಮೋಹದಿಂದ ರಾಗವೇರಿದನೆಂಬುವರು. ಮತ್ತೆ ಕೆಲವರಾದರೋ, ಸೂರ್ಯದೇವನಿಗೂ ಪ್ರತೀಚೀಕಾಮಿನಿಗೂ, ಆರತಿಯನ್ನೆತ್ತಿ ಚೆಲ್ಲಿದಾಗ, ಅರಸ್ನದಟ್ಟಿಯು ಎದುರಿಗೂ ಆರತಿಯು ಸಕಲ ದಿಕ್ಕುಗಳಿಗೂ ಪಸರಿಸಿತೆಂಬುವರು. ಈ ವರ್ಣನೆಗಳೆಲ್ಲವೂ, ಕವಿಗಳ ಅಸಾಧಾರಣ ಕೌಶಲ್ಯವನ್ನೂ, ಚಮತ್ಕಾರವನ್ನೂ ತೋರಿಸುವುವು. ನಾವೇನೆಂದು ವರ್ಣಿಸಲು ಸಾಧ್ಯವಿರುವದು? ಈ ವಸಂತಕಾಲದಲ್ಲಿ, ದಕ್ಷಿಣಾನಿಲನ ತೀಟಕ್ಕೆ ತನುಗೊಟ್ಟು, ಇಂಪಾದ ಕೋಕಿಲಸ್ವರಕ್ಕೆ ಕಿವಿಗೊಟ್ಟು, ಸಕಲಾಭರಣಗಳನ್ನು ತೊಟ್ಟು, ತಮ್ಮ ತಮ್ಮ ಪತಿಗಳು ಇಷ್ಟರೊತ್ತಾದರೂ ಬರಲಿಲ್ಲವಲ್ಲಾ ಎಂಬುವ ಭಾವನೆಯಿಂದ, ಆಗ್ರಹವುಂಟಾಗಿ ಕಮಲಮುಖಿಯರ ಮೊಗಗಳು ಕೆಂಪೇರಲು, ಆ ಕಾಂತಿಯು ಪಲ್ಲವಾಧರೆಗಳ ರತ್ನದರ್ಪಣಗಳಿಗೆ ಸಮವಾದ ಕದಪುಗಳಮೇಲೆ ಬಿದ್ದು ಎಲ್ಲೆಲ್ಲಿಯೂ ಪ್ರತಿಬಿಂಬಿತವಾದುವೆಂದು ಹೇಳುವೆವು. ಯಾರು ತಮ್ಮ ತಮ್ಮ ಗೃಹಿಣಿಯರ ಮನಗಳನ್ನು ನೋಯಿಸಿ, ಅವರಿಗೆ ಕೋಪವೂ ಬರುವಂತೆ ಮಾಡಿರುವರೋ, ಅವರು ಬಳಿಯಲ್ಲಿ ಕೂಡಲು, ನಿಲ್ಲಲು ವ್ಯವಧಾನವಿಲ್ಲದೆ,

ತಪನತಾಪವನ್ನು ಶಾಂತಿಮಾಡಿಕೊಳ್ಳಲು ಹೊರಗಾಳಿಗೆ ಬರುವುದು ಚೋದ್ಯವಲ್ಲ. ಅಂತಹ ಭಾಮಿಯರ ಮುಖದಲ್ಲಿನ ಉಜ್ಜ್ವಲವಾದ ಕಾಂತಿಯು, ಸತಿಗಳ ಮುಖಗಳಲ್ಲಿಯೂ ಸ್ವಲ್ಪ ಸ್ವಲ್ಪಬಂದು ಸೇರುತ್ತಿತ್ತು. ಏಕಕಾಲದಲ್ಲಿ ಕಾಂತಾಮಣಿಗಳೆಲ್ಲರಿಗೂ ಶೋಕವುಂಟಾದರೆ, ಈ ಪ್ರಪಂಚದ ಸಕಲಭಾಗಗಳಿಗೂ ರಕ್ತವರ್ಣೋದ್ರೇಕವಾಗುವುದು ಸ್ವಾಭಾವಿಕವಲ್ಲವೇ ?

ಕಮಲಕ್ಕೆ ಸೊಂಪಡಗಿತು. ಯಾವ ಪ್ರಾತಃಕಾಲದಲ್ಲಿ ರಾಜಬಲವು ತಗ್ಗಿತೆಂದು ಕೊರಗುತ್ತಿದ್ದ ಕುಮುದಿನಿಗೆ ಹಾಸ್ಯವನ್ನು ಗೈದಳೋ ಅದು ಈಗ ನೆನಪಿಗೆ ಬಂತು ಆ ಕುಮುದಿನಿಯು ಮೆಲ್ಲ ಮೆಲ್ಲಗೆ ನಗಲಾರಂಭಿಸಿದಳು. ರವಿವಿರಹಿಣಿಯನ್ನು ಕುರಿತು "ಕ್ಷೇಮವೇ" ಎಂದಳು ಅಕಟಾ! ಮನಸ್ಸಂಕಟ ಪ್ರಾಪ್ತವಾಯಿತು. ತಾನು ಗಗನಮಣಿಯನ್ನು ಕಳೆದುಕೊಂಡುದೊಂದು, ಶತ್ರುವಾದವಳ ನಗೆಯೊಂದು, ಇವುಗಳೆರಡರಿಂದಲೂ ಅತಿದುಃಖವುಂಟಾಗಿ, ಮುಖವನ್ನು ಮುಚ್ಚಿಕೊಳ್ಳಲಾರಂಭಿಸಿದಳು. ಮುಂಗುರುಳುಗಳು ಅಡ್ಡಲಾಗಿ ಹಾರಾಡುತ್ತಿದ್ದರೂ, ಸದ್ದುಮಾಡದೆ, ಮನೋವೈಕಲ್ಯವು ವೃದ್ಧಿಯಾಗಲು ಪೂರ್ತಿಯಾಗಿ ವದನವನ್ನು ಮುಚ್ಚಿಕೊಂಡಳು.

ಪಕ್ಷಿಗಳೆಲ್ಲವೂ ಚೀತ್ಕಾರವನ್ನುಮಾಡುತ್ತ ಕಮಲಕ್ಕೆ ಬಂದ ಕಷ್ಟವನ್ನು ನೋಡಲಾರದೆ, ಬೇಗ ಬೇಗನೆ, ಗುಂಪು ಗುಂಪಾಗಿ ಮನೆಗೆ ತೆರಳಿದವು. ಮಾರುತನು ಮಂದನಾದನು. ಕೆಲವುಕಾಲ ನಿಶ್ಶಬ್ದವಾಯಿತು. ಗಿಡಗಳಿಂದಾಗಲಿ, ಮೃಗಗಳಿಂದಲೂ ಸದ್ದಿಲ್ಲ. ಎಲ್ಲರೂ ಕಮಲಿನಿಗೆ ಉಂಟಾದ ಮಹತ್ತರವಾದ ವ್ಯಸನದಿಂದ ಕುಗ್ಗಿಹೋದರು

ಇಂದಿಗೆ ಚಂದ್ರನಿಗೆ ಹದಿಮೂರನೇದಿವಸ ತನ್ನ ಪ್ರಾಣಕಾಂತೆಯು ಎಲ್ಲಿರುವಳೋ ಎಂದು ಎಲ್ಲೆಲ್ಲಿಯೂ ಹುಡುಕುವನು. ಬೆಟ್ಟ ಗುಡ್ಡಗಳ ತಳಗಳೆಲ್ಲೆಲ್ಲ ಹುಡುಕಲಾರಂಭಿಸಿದನು. ಸಿಗಲಿಲ್ಲ. ಎತ್ತರವಾದ ಮರಗಳ ಮೇಲೆ ಹುಡುಕಲಾರಂಭಿಸಿದನು ಅಲ್ಲಿಯೂ ಇರಲಿಲ್ಲ ಎಲ್ಲರ ಮನೆಯ ಮಹಡಿಗಳಲ್ಲಿಯೂ, ಅಂಗಳಗಳಲ್ಲಿಯೂ ಹುಡುಕಿದನು. ಅಲ್ಲಿಯೂ ಇಲ್ಲ.

ಬಹಳವಾಗಿ ಚಿಂತಿಸಿದನು. ಸ್ವಲ್ಪಹೊತ್ತು ತಟಸ್ಥನಾದನು. ಎಲವೋ ಕೇಡಾಳ ನಿಶಾಚರ, ನಿನಗೆ ತಕ್ಕ ಪ್ರತೀಕಾರವೇ ದೊರಕಿತು. ವಿರಹಿಗಳ ನಿನ್ನ ಶೀತಲವಾದ ಮರೀಚಿಗಳನ್ನು ಉಷ್ಣಕಿರಣಗಳಂತೆಯೇ ಭಾವಿಸ ವರಲ್ಲ. ಈಗ ನಿನಗೂ ನಿನ್ನ ಸತಿಯು ಸಿಗದಿರುವಲ್ಲಿ ಎಷ್ಟು ಚಿಂತಾಕ್ರಾಂ ತನಾಗಿರುವೆ. ಆದರೆ ನಾವು ದಯಾಳುಗಳು, ತಾಳ್ಮೆಯನ್ನು ಬಿಡದೆ, ಹುಡುಕ ನಿನಗೆ ನಿನ್ನ ಹೃದಯಪುಷ್ಪವು ಗೋಚರವಾಗುವುದು. ಕಳಾನಿಧಿಯು ವ್ಯಸ ವನ್ನು ಬಿಟ್ಟು ಮೇಲಕ್ಕೆದ್ದನು. ಪುನಃ ಹುಡುಕಲು ಮೊದಲು ಮಾಡಿದನ ಕೂಡಲೇ ಸಿಕ್ಕಿದಳು.

"ಇದೇನು, ಈ ಮೂಲೆಯಲ್ಲಿ, ಈ ತಣ್ಣಗಿರುವ ಜಲದಲ್ಲಿ ಇರುವೆಯಲ್ಲ ?"

"ಅಹುದು, ನಿನ್ನ ವೈರಿಯು, ಅಧಿಕವಾದ ಕೋಪವನ್ನು ತೋರಿಸಲು ಬಂದ ಅವಿತುಕೊಂಡೆನು.

"ಈಗ ಒಂದು ಸಮಾಚಾರವುಂಟು, ಯಾರೊಡನೆಯೂ ಹೇಳಬೇಡ

"ಇಲ್ಲ, ನಾನೇಕೆ ಹೇಳಲಿ. ?

"ಇಬ್ಬರು ಒಂದು ಕಡೆಯಲ್ಲಿ ಸೇರಿರುವರು. ಅವರನ್ನು ಬಯಲಿಗೆ ತರು ಅಶಕ್ಯ"

"ನಾನು ಒಂದು ಸಹಾಯ ಮಾಡುವೆನು."

"ಅಯ್ಯೋ ನೀನು ಹೆಂಗಸು, ನಿನ್ನ ಕೈಲಾಗುವುದೇ."

"ನಿನ್ನನ್ನೇ ನನ್ನ ಕೈಕೆಳಗೆ ಹಾಕಿಕೊಂಡಿರುವೆನು. ನಾನು ಹೇಳಿದ ಹಾ ನೀನು ಕೇಳುವೆಯಲ್ಲ"

"ಆ ಇಬ್ಬರು, ಯಾರು ಬಲ್ಲೆಯಾ ?

"ಇಲ್ಲ."

"ಹೆಸರುಗಳನ್ನು ಹೇಳಿದರೆ ತಿಳಿದುಕೊಳ್ಳುವೆಯಾ ?"

"ತಿಳಿದುಕೊಳ್ಳದೆ ಏನು ?"

"ಹೇಳಲೇ ?"

" ಹೇಳು.

" ಹಾ ಹಾ. ಹಾ. ಹೇಳಲೆ ?

" ಥೂ, ಬೇಗಹೇಳು.

" ಇಷ್ಟೇಕೆ ಕೋಪ, ಹಾಗಾದರೆ ನಾನು ಹೇಳುವುದಿಲ್ಲ.

" ನೀನು ಹೇಳಿದರೂ ನಾನು ಕೇಳುವುದಿಲ್ಲ " ಹೀಗೆಂದು ಹೇಳಿ ಕುಮುದಿನಿಯು ಮುಖವನ್ನು ಸ್ವಲ್ಪ ತಿರುಗಿಸಿದಳು. ಚಂದ್ರನು ಬಗ್ಗಿ ನೋಡಿದನು. ಇನ್ನೊಂದು ಕಡೆಗೆ ತಿರುಗಿಸಿದಳು. ಅತ್ತ ಕಡೆಯೂ ಬಗ್ಗಿ ನೋಡಿದನು. ಇತ್ತ ಅತ್ತ ಬೇಗನೆ ತಿರುಗಿಸಿದಳು. ಅವನೂ ಇತ್ತ ಅತ್ತ ಬೇಗ ಬೇಗನೆ ನೋಡಿದನು. ಕುಮುದಿನಿಗೆ ಚಂದ್ರನನ್ನು ನೋಡದಿರಲು ಆಗದೇ ಹೋಯಿತು.

" ನನಗೆ ನೀನು ಬೇಡ " ಎಂದಳು.

ಬೇಡವೋ, ಸರಿ " ಎಂದು ಹೇಳಿ ಚಂದ್ರನು ಮೋಡದ ಹಿಂದೆ ಮರೆಯಾದನು.

" ಅಯ್ಯೋ, ನನ್ನ ಪತಿಯೆಲ್ಲಿ, ನಾನು ಕೋಪಿಸಿಕೊಂಡದ್ದರಿಂ ಮರೆ ಯಾದನಲ್ಲ. ಇನ್ನೇನು ಮಾಡಲಿ. ಸಖೀ, ಹೋಗಿಬಿಟ್ಟನೇ " ಎಂದು ಮರುಗ ದಳು. ಕೂಡಲೇ ಓಷಧೀಶ್ವರನೂ ಸ್ವಲ್ಪ ಮುಖವನ್ನು ತೋರಿಸಿಕೊಂಡನು.

" ಬೇಗಬಾ, ಕ್ಷಮಿಸು, ಬುದ್ಧಿಯಿಲ್ಲದೆ ಹೇಳಿದೆನು " ಎಂದಳು.

" ಇಲ್ಲ ನಾನು ಬರುವುದಿಲ್ಲ. ಇಲ್ಲಿಯೇ ಇರುವೆನು " ಎಂದು ಪುನಃ ಮರೆಯಾದನು. " ಅಕಟಕಟಾ ! ಪತಿಗಳು ನಾವು ಹೇಳುವಂತೆ ಇರುವರೆಂದು ಹೆಮ್ಮೆಯನ್ನು ಪಟ್ಟವರನ್ನೆಲ್ಲಾ ಇಷ್ಟೇ ಸರಿ. ಆ ದುರಹಂಕಾರದ ವೇಳೆ, ಆ ಬಿಗುಮಾನದ ವೇಳೆ, ಬಾಯಿಗೆ ಬಂದ ಮಾತಿನ ವೇಳೆ, ಈಗಲಾದರೂ ಮತಿಯನ್ನು ತಂದುಕೊಳ್ಳಬೇಕು, ಎಂದು ಯೋಚಿಸಿ ತನ್ನ ಪಕ್ಕದಲ್ಲಿಯೇ ಹಾರಾಡುತ್ತಿದ್ದ ಕೈರವಪತ್ರವನ್ನು ಕಿತ್ತು ಅದರಲ್ಲಿ " ನನ್ನ ಅಪರಾಧವನ್ನು ಕ್ಷಮಿಸು, ಒಂದು ಬಾರಿ ಮುಖವನ್ನು ತೋರಿಸು, ನೀನಿದ್ದಾಗ ಸಂತೋಷ ವಾಗಿತ್ತು, ಈಗ ದುಃಖದಿಂದ ಕಪ್ಪಾಗಿಹೋಗಿರುವೆನು. ಎಂದು ಬರೆದಳು.

ಅದನ್ನು ಕೊಟ್ಟು ಕಳುಹಿಸುವ ಬಗೆ ಹೇಗೆಂದು ಯೋಚಿಸುತ್ತಿರುವಾಗ ಬಂದು ಚಂದ್ರಕಿರಣವು ಆಕಸ್ಮಾತ್ತಾಗಿ, ಕಿಟಕಿಯಿಂದ ತೂರಿಕೊಂಡು ಕುಮುದಿನಿಯ ಪಕ್ಕದಲ್ಲಿ ಬಿತ್ತು. ಕೂಡಲೇ, ಆ ಹಕ್ಕಿಗೆ ಆ ಪತ್ರವನ್ನು ಕಟ್ಟಿ, ಆ ಗಳಸ್ತ್ರವನ್ನು ಮೇಲಕ್ಕೆ ಬಿಟ್ಟಳು ಬಿಟ್ಟ ಮಾತ್ರದಲ್ಲಿಯೇ ಚಂದ್ರನೂ ಮೋಡಗಳನ್ನು ಬಿಟ್ಟು, ನಗುತ್ತ, ನಗುತ್ತ ಎದುರಿಗೆ ಬಂದುನಿಂತನು. ಆಗಲೇ ಸತಿ ಪತಿಗಳು ಒಂದಾದರು. "ನೀನು ಬಹಳ ಸೊಗಸಾಗಿರುವೆ. ಎಂದು ಸ್ತುತಿಯನ್ನು ಆರಂಭಿಸುವನು. ನೀನು "ಮನೋಹರನೆಂದು ಪ್ರೀತಿಯಾಗಿ ನಾನು ಮುದ್ದಿಸುವೆನು. ಈ ಸಂಭಾಷಣೆಗಳಲ್ಲಿರುವಾಗ ಮೆಲ್ಲಗೆ ಕುಮುದಿನಿಯು—

"ಇಲ್ಲ, ಅದೇನೋ, ಸರಿ, ಸರಿ, ಎಂದು ಹೇಳುತ್ತಿದ್ದೆಯಲ್ಲ. ಏನದು

"ಅಹ ಹ ಹ! ಅಲ್ಲಿ ಒಂದು ಕೊಠಡಿಯಲ್ಲಿ ಸಾವಿತ್ರಿಯಿದ್ದಳು.

"ಯಾವ ಕೊಠಡಿಯಲ್ಲಿ, ಯಾರ ಮನೆಯಲ್ಲಿ?

"ಯಾರದುನೆ, ಮಾಮುಲೇದಾರರ ಮನೆಯಲ್ಲಿ?

"ಆಹ! ನನಗೆಂತೂ ಆಶ್ಚರ್ಯ. ಅದು ಹೇಗೆ?

"ಹೇಗೆಂದರೇನು, ಮಾಮುಲೇದಾರರ ಮನೆಯಲ್ಲಿ ಆರತಿಯಾಗುವದೆಂದು ಸಾವಿತ್ರಿಯನ್ನು ಕರೆದಿದ್ದರು.

"ಆಮೇಲೆ, ಆಮೇಲೆ,

"ಆಮೇಲೆ, ಮೂರ್ತಿಯೂ ಅವಳೊಡನೆ ಮಾತನಾಡಿದನು.

"ಹೀಗೆ ನಡೆಯುವದನ್ನು ನಾನು ಎಲ್ಲಿಯೂ ಕೇಳಿಲ್ಲ. ನೋಡಿಯೂ ಇಲ್ಲ. ಸಾಕು ನಿನ್ನ ಕತೆ, ಹುಚ್ಚರೆಂದಾರು.

"ಅದು ಹೇಗೆ ಹುಚ್ಚು, ಕಂಡದ್ದನ್ನು ಹೇಳಿದರೆ ಹುಚ್ಚೆ.

"ನನಗೆ ನಂಬಿಕೆಯಿಲ್ಲ.

"ನಿಜವಾಗಿಯೂ ಮಾತನಾಡಿದನು.

"ಏನೆಂದು.

"ಏನೆಂದೋ ನಾನು ಕೇಳಲಿಕ್ಕಾಗಲಿಲ್ಲ

" ಮಾಲತಿಗೆ ಮಾತ್ರವಲ್ಲ ಅವಕಾಶವಿಲ್ಲವಷ್ಟೆ.

" ಅವಳದಾಗಲಿ.

" ಹಾಗಿರಲಿ, ಸಾವಿತ್ರಿಯು ಮಲಗಿರುವಳೇ, ಅಥವಾ, ಹಾಗೆಯೇ ಬಿದ್ದುಕೊಂಡಿದ್ದಾಳೆ ?

" ಇಲ್ಲ. ಅವಳು, ಕೃಷ್ಣವೇಣಿ.

" ಅವಳೇನು ಮಾಡಿದಳು ?

" ಏನು ಮಾಡಿದಳೋ ನಾನು ಕಾಣೆ. ಮೊನ್ನೆಯ ದಿವಸ ನಿನಗೆ ಒಂದು ಕೆಲಸದ ವಿಷಯವನ್ನು ಹೇಳಬೇಕೆಂ.........

" ಅದೇನೋ ನನಗೆ ಬೇಡ, ಅವಳೇನು ಮಾಡಿದಳು ಹೇಳು.

" ಏನು ಮಾಡಿದರೇನು ?

" ನಲ್ಲ, ಹೋಗುವದನಲ್ಲ, ಇದು ಬಿಟ್ಟು ಹೇಳಿನ್ನತ್ತ. ಸ್ವಲ್ಪ ಹೊತ್ತು ನನ್ನ ಹಿಡಿದಿಡಿಸಿಕೊಂಡಳು.

ಪುರುಷರ ಸ್ವಾತಂತ್ರ್ಯವೆಲ್ಲ ಇಷ್ಟೆ ! ಕೊನೆಗೆ, ಹತ್ತಿರಬಂದು, ಒಂದು ಸಾರಿ ಚುಂಬಿಸಿ, " ಹೇಳುವೆನು. ನಿನಗೆ ಕೇಳದೇನಿಸು ? ಆದರೆ ಬೇರೆಯವರಲ್ಲಿಯೂ ಹೇಳಕೂಡದು, ನನ್ನಾಣೆ "

" ಖಂಡಿತವಾಗಿಯೂ, ಹೇಳುವುದಿಲ್ಲ. ಹೇಳಗೊಡುವದಕ್ಕಿಂತ ಮೊದಲೇ ಬಾಯನ್ನು ಮುಚ್ಚಿಕೊಳ್ಳುವೆನು. ಪುನಃ ನಿನ್ನನ್ನು ನೋಡುವ ವರೆಗೂ ಬಾಯನ್ನು ತೆರೆಯುವುದಿಲ್ಲ "

" ಭಲೆ, ಭಲೆ, ಒಳ್ಳೆಯ ಹೆಂಡತಿ, ನೀನು ನನಗೆ ಸಿಕ್ಕಿದ್ದು ಎಷ್ಟೋ ಪುಣ್ಯ.

" ಪುಣ್ಯವಿರಲಿ, ಸಾವಿತ್ರಿಯ ವಿಷಯವೇನು ?

" ಕೃಷ್ಣವೇಣಿಯು ಸಹಪಾಠಿಯಲ್ಲವೇ ಸಾವಿತ್ರಿ.

" ಅಹುದು.

" ಸಾವಿತ್ರಿಯು ಬರುತ್ತಲೇ, ಪಕ್ಕದಲ್ಲಿ ಕೂರಿಸಿಕೊಂಡಳು, ಸ್ವಲ್ಪ ಹೊತ್ತಾದನಂತರ, ಇಲ್ಲಿ ಜನಗಳು ಹೆಚ್ಚು, ಈ ಕೊಠಡಿಗೆ ಹೋಗೋಣವೆಂದಳು.

" ಆಮೇಲೆ.

" ಬಳೆಗಾರರಿಗೆ, ಒಳಗಿನಿಂದಲೂ, ಹೊರಗಿನಿಂದಲೂ, ಬಾಗಿಲುಂಟು.

" ಸರಿ, ಸರಿ ?

" ಇಷ್ಟರಲ್ಲಿ ಒಳಗೆ ಹೋದ ಕೂಡಲೆ ಸಾವಿತ್ರಿಗೆ ಮೂರ್ತಿಯು ಹೊರಬಾಗಿಲನ್ನು ತಟ್ಟಿದನು. ಇವರಿಷ್ಟರಲ್ಲಿ ಒಳಗಿರುವುದು, ಹೊರಗಿರುವವರಿಗೆ, ಯಾರಿಗೂ ಗೊತ್ತಿಲ್ಲ. ಹೊರಗಿನಿಂದ ಮೂರ್ತಿಯು ಒಳಗೆ ಹೋಗುತ್ತಿದ್ದುದು ಹೆಂಗಸರ ಗುಂಪಿಗೆ ಗೊತ್ತಿಲ್ಲ.

" ಭಲೇ, ಸಾವಿತ್ರಿಯೇ ಎಂದಳು.

" ಸಾವಿತ್ರಿಯೋ, ಅಯ್ಯೋ, ಅಪ್ಪಾ, ಯಾರೋ ಬಾಗಿಲು ತಟ್ಟುವರು, ಅಲ್ಲಿಗೇನೇ ಹೋಗೋಣ ಬಾರವ್ವಾ ಎಂದಳು.

" ಬೇಡ, ನಮ್ಮ ಮನೆಗೆ ಯಾರು ಅಂಥವರು ಬರುವರು. ದಿಗಿಲು ಏನೆಂದಳು.

" ಸಾವಿತ್ರಿಯು,—ಕೃಷ್ಣವೇಣಿ, ನಿನ್ನ ಅಣ್ಣಂದಿರು ಬಂದು ಬಿಟ್ಟರು, ನಾನು ಹೋಗುವೆನು ಎಂದಳು.

" ಆಗ ಕೃಷ್ಣವೇಣಿಯು ಯಾರು ? ಸ್ವಲ್ಪತಾಳು ಎಂದು ಘಟ್ಟಿಯಾಗಿ ಕೂಗಿ ಹೇಳಿ, ಮೆಲ್ಲಗೆ ಸಾವಿತ್ರೀ, ನೀನು ಹೆದರಬೇಡ, ನಾನಿರುವೆನು ಒಂದು ಮಾತನ್ನು ಕೇಳಿಬಿಟ್ಟು, ಆಮೇಲೆ ಹೊರಟುಹೋಗೋಣ.

" ಅಯ್ಯೋ ನನಗೆಬೇಡ, ನನ್ನ ಕೈಕಾಲುಗಳು ಅದುರುತ್ತವೆ.

" ಚಿಂತೆಯಿಲ್ಲ, ನಾನಿರುವೆನು, ಎಂದು ಹೇಳಿ ಹೊರಬಾಗಿಲನ್ನು ತೆರೆದಳು, ಮೂರ್ತಿಯು, ಒಳಗೆ ಬಂದನು. ಸಾವಿತ್ರಿಗೆ ಮೈಯಲ್ಲವೂ ಬೆವರಿತು.

ಚಂದ್ರ—ಏನು ಹುಂಗುಟ್ಟದೆ ಸುಮ್ಮನಿರುವೆ.

ಶಾ—" ಇಲ್ಲ. ಆದ ನಡವಳಿಕೆಯನ್ನು ಕೇಳಿ ಆಶ್ಚರ್ಯವಾಯಿತು.

ಚಂ—" ಆಶ್ಚರ್ಯವು ಇನ್ನೂ ಉಳಿದಿರುವುದು.

ಶಾ—" ಇದೇ ಆಶ್ಚರ್ಯ. ಇನ್ನು ಉಳಿದಿರುವುದೇನು ?

ಚಂ—" ನಿನಗೆ ಆಶ್ಚರ್ಯವಿಲ್ಲದಿದ್ದರೆ, ನಾನು ಹೇಳುವುದಿಲ್ಲ.

೯ ನೆಯ ಪರಿಚ್ಛೇದ.

ಮೂರ್ತಿಯು ಭಗ್ನಮನೋರಥನಾದನು. ಯಾರು [illegible] ತನ್ನನ್ನು ನೋಡಿದ ಮಾತ್ರದಲ್ಲಿಯೇ ಸಾವಿತ್ರಿಯು ಒಪ್ಪುವಳೆಂದೂ, ತಾನು ಹೇಳಿದಂತೆ ಮಾಡುವಳೆಂದೂ ನಂಬಿದ್ದನೋ ಅಂತಹವನು, ಈಗ ಕಾಂತಿಹೀನನಾಗಿ ಮಹಡಿಯಮೇಲೆ ಬಟ್ಟನೇ ಮಲಗಿರುವನು. ಈ ಬೆಳದಿಂಗಳು, ಈ ಶೋಭಾರಶಿ, ಈ ತಂಗಾಳಿ, ಎಲ್ಲವೂ, ಅವನಿಗೆ ವಿಷಪ್ರಾಯವಾದವು. "ಅಯ್ಯೋ! ನಾನು ಎಷ್ಟು ಆತುರದಿಂದ ಅವಳೊಡನೆ ಮಾತನಾಡಬೇಕೆಂದಿದ್ದೆನೋ, ಎಷ್ಟು ಆತುರದಿಂದ ನಾನು ಕೊಠಡಿಯೊಳಗೆ ಹೋದೆನೋ, ಈಗ ಅಷ್ಟೊಂದು ನಿರಾಶೆಯಿಂದ ಬಂದೆನಲ್ಲಾ - ನಾನಾಡಿದ ಮಾತುಗಳಿಗೆ ಒಂದು ಮಾತು, ಒಂದನ್ನೂ ಬದಲುಕೊಡಲಿಲ್ಲ— ಅಯ್ಯೋ! ಅದೃಷ್ಟವೇ—ಅವಳಿಗೆ, ಆಭರಣಗಳಮೇಲೆ, ಅಪೇಕ್ಷೆಯುಂಟೇನೋ—ಅವಳಿಗೆ ವಿವೇಕವಿಲ್ಲ ಏನೆಂದು ಹೇಳಲಿ" ಎನ್ನುತ್ತ ಕೊರಗುತ್ತಿದ್ದನು. ಆಗ.

"ಸ್ವಾಮೀ, ಅಮ್ಮನವರು ಕೂಗುತ್ತಾರೆ, ಬನ್ನಿ" ಎಂದು ಗುಂಡ ಎಂಬುವ ಆಳು ಕರೆದನು.

"ಹೋಗು, ನನಗೆ ಹಸಿವಿಲ್ಲ, ಎಂದು [illegible]" ಸ್ವಲ್ಪ ಹೊತ್ತಾದಮೇಲೆ, "ಸ್ವಾಮೀ [illegible]"

"ಇದೇನು ಗಲಾಟೆ, ಬೇಕಾದಂತೆ [illegible]" ಎಂದು ಹೇಳಿಕೊಳ್ಳುತ್ತ ಸಿಡುಮಿಡುಗೊಂಡು ಮೂರ್ತಿಯು ಕೆಳಗೆ ಇಳಿದು ಬಂದನು.

"ಏನಮ್ಮಾ ಕೂಗಿದ್ದು?"

"ಏಕೆ, ಇಷ್ಟು ಕೋಪ, ನಿನಗೆ ಆಗಲೇ ಹಸಿವಾಗಿದ್ದರೆ, ಬೇಗ ಹೇಳಿ ಊಟಮಾಡಬಹುದಾಗಿತ್ತಲ್ಲ"

"ಏನೋ. ನಿಮ್ಮ ಆರತಿಗಳು, ಭಾರತಿಗಳು, ಹತ್ತು ಗಂಟೆಯಾದರೂ ಮುಗಿಯುವುದಿಲ್ಲ; ಹನ್ನೊಂದು ಆದರೂ ಮುಗಿಯುವುದಿಲ್ಲ."

"ಏನೋ ಹೊತ್ತು ಆಯಿತು ಈಗ ಊಟಕ್ಕೆ ಏಳು."

"ನನಗೆ ಬೇಡ"

"ಇದೇಕೆ ಹಟ ಮಾಡುತ್ತೀಯೋ?"

"ಹಟವೇನು, ನನ್ನ ಪಾಲಿಗೆ ಯಾರೂ ಬರಬೇಡಿ."

"ಊಟಮಾಡು. ಬರುವುದಿಲ್ಲ. ಇಲ್ಲಿ ನೋಡಿ, ನಿಮ್ಮ ಮಗನ ಮಾತಿಗೆ ಯಾರೂ ಬರಕೂಡದಂತೆ, ದೊಡ್ಡ ಮನುಷ್ಯನಂತೆ, ಭಾರೀ ಉದ್ಯೋಗಸ್ಥನಂತೆ"

ಇದೆಲ್ಲಾ ಯಾರನ್ನು ಹೇಳಿದರು?

"ಲೋ ಮೂರ್ತಿ, ಊಟಕ್ಕೇಳೋ" ಎಂದು ಸುಬ್ಬಾಬಾಯಿ ಅಪ್ಪ ಕೂಗಾಯಿತು.

"ಎದ್ದು ಬರುತ್ತೇನೆ"

ಮೂರ್ತಿ ತಾಯಿಯೊಳಗೆ ಮಾಡಿಸುವಂತೆ ತಂಗಿಯು ಬಳಿ ಮಾಡಿಸುವುದಕ್ಕೆ ಧೈರ್ಯವಿರಲಿಲ್ಲ. ಊಟಕ್ಕೆ ಕುಳಿತನು. [illegible] ಗಳನ್ನು [illegible] "ಸುಬ್ಬಲಕ್ಷ್ಮೀ ನನ್ನ ಮೂರ್ತಿಗೆ [illegible] ದ ಉಳಿದಿದ್ದರೆ, ಹಾಕಿ" ಎಂದು [illegible] ನುಡಿದಳು. ಮೂರ್ತಿಗೂ ಮನಸ್ಸು ಸಮಾಧಾನಸ್ಥಿತಿಗೆ ಬಂತು.

"[illegible], ನಾಳೆಯಿಂದ [illegible] [illegible] [illegible]" ಎಂದರು.

"[illegible]"

"[illegible] ನನ್ನ [illegible] ಮನಿಗೂ [illegible] ವನ್ನು ಹೇಳಿಕೊಳ್ಳುವುದಿಲ್ಲ."

"ಏಟ್ಟೇಮುದಿಗೆ ಬರುತೀಯಾ?"

ಮೂರ್ತಿಯು ಸ್ವಲ್ಪ ಯೋಚಿಸಿದನು. ಸಾವಿತ್ರಿಯನ್ನು ನೋಡಲು

ನಿಲ್ಲೋಣವೇ? ಇಲ್ಲ ಎಷ್ಟು ದೂರ ಹೋಗೋಣವೇ? ರಾಜನನ್ನು ಇನ್ನೂ ನೋಡಿಲ್ಲ. ಸಾವಿತ್ರಿಯು ಬಳಿ ಯಾವುದನ್ನೂ ಹೇಳಲಿಲ್ಲ.

"ಏನು ಜವಾಬು ಹೊರಡುವುದಿಲ್ಲ?"

"ಬರುತ್ತೇನೆ"

ಊಟವಾಯಿತು. ಗುರುವನು ಹಾಸಿಗೆಗಳನ್ನು ಹಾಸಿದನು. ಸಾವಿತ್ರಿಯು "ಗುರುವಾ, ನನ್ನ ಹಾಸಿಗೆಯನ್ನು ಮಹಡಿಯಮೇಲೆ ಹಾಕೋ" ಎಂದನು. ಸಾವಿತ್ರಿಯ ತಾಯಿಯು "ಅಲ್ಲೇಕೋ? ಮಂಜು ಸುರಿಯುವುದು? ಇನ್ನು ಎಂದುದಕ್ಕೆ ಶೀತವಾಗಲಿ. ಒಳಗೆಯೇ ಹಾಕು."

"ಈ ಬೇಸಿಗೆಯಲ್ಲಿ ಮಂಜು ಸುರಿಯುತ್ತದೋ? ನನಗೆ ಬಹಳ ಗೊತ್ತು. ನೀ ಮೇಲೆ ಹಾಕು, ಹೋಗು."

ಮಕ್ಕಳು ದೊಡ್ಡವರಾದಮೇಲೆ ತಂದೆತಾಯಿಗಳ ಮಾತುಗಳನ್ನು ಎಲ್ಲಿ ಕೇಳುವರು? ಈಗಿನ ಕಾಲದಲ್ಲಿ ಅದರಲ್ಲೂ ಇಂಗ್ಲೀಷು ಭಾಷೆಯನ್ನು ಓದಿದುಬಿಟ್ಟರೆ ಎಲ್ಲೂ ಇಲ್ಲದ ಅನುಭವಗಳು, ಸ್ವೇಚ್ಛಾಚಾರಗಳು, ಎಲ್ಲಾ ಅನಾಚಾರಗಳೂ ಜೊತೆಯಲ್ಲಿಯೇ ಬರುತ್ತವೆ.

"ಹೋ ಗುರುವಾ, ನಮ್ಮ ರಾಜನನ್ನು ಕರೆದುಕೊಂಡು ಬಾ, ಹೋಗು."

"ಏನು, ಸ್ವಾಮಿ, ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೋಗಲಿ. ಏನೋ."

"ಹೋಗಿ ನೋಡೋ."

ಗುರುವನು ನೋಡಿಕೊಂಡು ಬಂದು "ಸ್ವಾಮಿ, ಹೊರಗಡೆ ಬಾಗಿಲು ತಟ್ಟಿ ತಟ್ಟಿ ಸಾಕಾಯಿತು. ಆ ಹುಡುಗನು ಒಂದೆರಡು ಬಾರಿ ಹೋಗಿ ಸ್ವಾಮಿ, ಚಿಕ್ಕ ಸ್ವಾಮಿಗಳು ರಾಜಣ್ಣನನ್ನು ಕರೆಯುತ್ತಾರೆ ಬರಬೇಕು ಅದರು ಅಂದೆ. ಬೆಳಗ್ಗೆ ಅಷ್ಟು ಹೊತ್ತಿಗೆ ಕಳುಹಿಸುತ್ತೇನೆ. ಈಗ ನಿದ್ದೆ ಬಂದೈತೆ, ಅಂದ ಸ್ವಾಮಿ."

"ಹೋಗಲಿ ನೀನು ಎಲ್ಲಿ ಮಲಗುತ್ತೀಯೋ?"

"ಸ್ವಾಮಿ, ನೀರಮನೆ ಬಾಗಿಲಾಗೆ ಬಿದ್ದುಕೋತೀನಿ. ಸ್ವಾಮಿ!"

ಹುಂಜೇಲಿ ಸೀರ್ಗೈತೆ. ಹೊತಾರೆ ಒಲೆಗೆ ಉರಿ ಹಾಕಬೇಕು ಸುಬೇದಾರು ಸರ್ಕ್ಯಾಟು ಹೊರಡುತಾರೆ ತಾನಕ್ಕೆ ನೀರು ಕಾಯಬೇಕವಾ "

" ಲೋ ಗುರುವ, ತಿಮ್ಮನಿಗೆ ಅಲ್ಲಿ ಮಲಗಿಕೋ ಅಂತ ಹೇಳಿ ನೀನೂ ಇಲ್ಲೇ ಬಿದ್ಕೋ "

" ಅಪ್ಪಣೇ ಸ್ವಾಮಿ "

ಚಂದ್ರನು ಗಗನದಲ್ಲಿ ಥಳಥಳಿಸುತ್ತ ನಿಂತಿರುವನು. ಎಲ್ಲಿಯೋ ಅಲ್ಲೊಂದು ಇಲ್ಲೊಂದು ನಕ್ಷತ್ರವು ಮಿಟಮಿಟನೆ ಹೊಳೆಯುವುದು. ಮೋಡಗಳೆಲ್ಲವೂ ಆಕಾಶವೆಂಬ ರಂಗಸ್ಥಳವನ್ನು ಬಿಟ್ಟು ಎಲ್ಲಿಯೋ ಮಾಯವಾದವು. ತಣ್ಣಗೆ ಗಾಳಿಯು ಬೀಸುತ್ತ ಗಿಡದೆಲೆಗಳಲ್ಲಾ ತೂರುವಾಗ " ರೊಯ್ " ಎನ್ನುತ್ತ ಶಬ್ದವನ್ನು ಮಾಡುತ್ತಿತ್ತು. ಒಂದೊಂದು ತಡವೆ ನಾಯಿಗಳು ಬೊಗಳುವ ಸದ್ದು ; ಒಂದೊಂದು ತಡವೆ ಕತ್ತೆಗಳು ಕೂಗುವ ಅರ್ಭಟ ಇನ್ನೊಂದು ತಡವೆ ಕಾಗೆಗಳು ತಟ್ಟನೆ ಎದ್ದು ಕಾವ್, ಕಾವ್ ಎಂದು ಕೂಗುವುವು. ಸುಬೇದಾರನಿಗೆ ನಿದ್ದೆಯೇ ಬರಲಿಲ್ಲ. ಅನೇಕವಾದ ಆಲೋಚನೆಗಳು ತಾನು ಮೊದಲು, ನಾನು ಮೊದಲು ಎಂದು ಬರುತ್ತಿದ್ದುವು. " ಈಗೇನು ಮಾಡಬೇಕು ? ಆ ಮುದುಕ ರಾಮಚಂದ್ರನನ್ನು ದೂರಮಾಡಬೇಕು. ಪುನಃ ಸಾವಿತ್ರಿಯನ್ನು ನೋಡಬೇಕು, ಅವಳೆಷ್ಟು ಚೆನ್ನಾಗಿದ್ದಳು. ಈ ಬೆಳದಿಂಗಳಲ್ಲಿ ಅವಳು ಬಂದಳಾದರೆ! ಇನ್ನೊಂದು ತಡವೆ ಹೇಳುವೆನು. ಹೇಳುವದೆಂಥದು ? ಎಲ್ಲವನ್ನು ಹೇಳುವೆನು. ಆ ರಾಮಚಂದ್ರಯ್ಯನನ್ನು ಕಟ್ಟಿಹಾಕಬೇಕು, [illegible] ಬರೆಯಬೇಡ. ಒಂದುವೇಳೆ ಯಿದ್ದರೂ ನಿನಗೆ ಸುಖವಿಲ್ಲ. ಬೇಡ, ಬೇಡ ಎಂದು ಹೇಳುತ್ತಿರುವೆನು "

ಹೀಗೆ ಹೇಳಿಕೊಳ್ಳುತ್ತಿದ್ದಹಾಗೆಯೇ ಕಣ್ಣುಗಳು ಮಂಜಾದವು ತೂಕಡಿಕೆಯು ಹತ್ತಿತು. ಆಗಾಗ್ಗೆ ತಟ್ಟನೆದ್ದು — " ಸಾವಿತ್ರೀ, ಬೇಡ" ಎನ್ನುವನು. ಏನನ್ನೋ ನೋಡಿದಂತಾಗುವುದು ಕಣ್ಣುಗಳನ್ನು ಬಿಟ್ಟು ನೋಡುವನು. ಪುನಃ ಅದೇ ಚಂದ್ರ —ಅದೇ ನಿರ್ಮಲವಾದ ಆಕಾಶ.

ಕಡೆಗೆ ನಿದ್ದೆಯೂ ಬಂತು. ಏಳುವುದನ್ನು ಬಿಟ್ಟನು. ಚೆನ್ನಾಗಿ ಹೊದ್ದುಕೊಂಡನು. ಆ ಮುಖದಮೇಲೆ ಚಂದ್ರಕಿರಣಗಳು ಹಾಸ್ಯವನ್ನಾಡುತ್ತಿದ್ದುವು. ಚಂದ್ರನಿಗೂ ಮನಸ್ಸು ಕರಗಿತು. ವ್ಯಸನದಿಂದ ಪಶ್ಚಿಮಾಂಬುಧಿಯಲ್ಲಿ ಮುಳುಗಿದನು. ಆಗ ಗಾಳಿಯು ಮೆಲ್ಲಗಾಯಿತು. ಸ್ವಲ್ಪಹೊತ್ತಿಗೆ "ಬೋ, ತಿಮ್ಮ, ನಮ್ಮ ಹುಡುಗನನ್ನು ಎಬ್ಬಿಸೋ; ಗಾಡಿ ಕಟ್ಟುವಂತೆ ದಾಸಪ್ಪನಿಗೆ ಹೇಳು" ಎಂದು ಸುಬೇದಾರರ ಅಪ್ಪಣೆಯಾಯಿತು. ತಿಮ್ಮನು ಎಬ್ಬಿಸಲಿಕ್ಕೆ ಮಹಡಿಯಮೇಲೆ ಬಂದನು. ಮೂರ್ತಿಯು, "ಸಾವಿತ್ರೀ, ನೋಡು, ನೋಡು" ಎನ್ನುತ್ತ ಘಾಬರಿಯಿಂದೆದ್ದನು.

---

೧೦ ನೆಯ ಪರಿಚ್ಛೇದ.

ಮಿಚ್ಛೇನಾರು, ಬಾಗೇಪಲ್ಲಿಗೆ ೨೧ ಮೈಲಿಗಳ ದೂರವಿರುವುದು. [illegible] ಜಮಾಬಂದಿಯು ಮಿಚ್ಛೇನಾರು [illegible] ಜನಗಳಿಗೆಲ್ಲಾ ಮಿಚ್ಛೇನಾರಿನಲ್ಲಿ [illegible] ಕೆಲವು ದಿವಸಗಳಿಂದಲೂ ತಿಳಿದಿತ್ತು. [illegible] ಹಳ್ಳಿಗಳಿಂದ ಪಟೇಲರೂ, ಶಾನುಭೋಗರೂ, [illegible] ಬಂದಿದ್ದರು. [illegible] ಬಂದಿದ್ದರು [illegible] [illegible] "ಸುಬೇದಾರರು [illegible] [illegible] ಹೇಳಿಕಳುಹಿಸಿದ್ದರು. [illegible] "ಬಗೆಯ, ಗಾಡಿ ಬರುವುದು, [illegible] ಪಟೇಲರನ್ನು ಕರೆಯೋ ಶಾನುಭೋಗರೇ ಇತ್ತ ಬನ್ನಿ—ನಮ್ಮ ಶೇಕದಾರ್ರು ಗುಡಿಪಕ್ಕದಲ್ಲಿಯೇ ಬರುತ್ತಿದ್ದಾರೆ." ಎಂದು ಗಲಭೆಯಿತ್ತು. ರುಮಾಲುಗಳನ್ನು ಸರಿಮಾಡಿಕೊಳ್ಳುವವರು

ಕೆಲವರು, ಒಂದಕ್ಕೆ ಈಗಲೇ ಹೋಗಿಬರುವನೆಂಬುವರು ಕೆಲವರು, ಪಂಚೆಗಳನ್ನು ಬಿಗಿದುಕಟ್ಟುವವರು ಕೆಲವರು. ಮೇಲೆ ಹೊದ್ದುಕೊಳ್ಳುವ ವಸ್ತ್ರಗಳನ್ನು ಸರಿಪಡಿಸಿಕೊಳ್ಳುವವರು ಕೆಲವರು. ಈ ಅವಾಂತರಗಳಲ್ಲಿರುವಾಗ್ಗೆ "ಲೋ ತಟ್ಟೆಯಲ್ಲೋ ಹಿಂದುಳಿದುಹೋಯಿತು, ಲೋ ಸಣ್ಣಗ, ಲೋ ತೋಟಗಾ, ಓಡೋ, ಎಂದು ಪಟೇಲನು ಕೂಗಿದನು. ಅವರು ಓಡಿಹೋಗಿ ತಟ್ಟೆಯನ್ನು ತಂದರು. ಗಾಡಿಯೂ ಬಂತು. ಸೇರಿದ್ದ ಜನರೆಲ್ಲರೂ ಗಾಡಿಯ ಹಿಂಭಾಗಕ್ಕೆ ಹೋಗಿ "ದಂಡ ಬರುತ್ತೇ ಬುದ್ಧಿ" ಎಂದು ಹೇಳುತ್ತ ಎರಡೆರಡು ನಿಂಬೇಹಣ್ಣುಗಳನ್ನು ಕೊಟ್ಟರು. ಒಬ್ಬಾತನು ತನ್ನ ೧೦ ವರ್ಷದ ಹುಡುಗನೊಬ್ಬನನ್ನು ಮುಂದರಿಸಿಕೊಂಡು ತಟ್ಟೆಯಲ್ಲಿ ನಾಲ್ಕು ಎಳನೀರು, ಒಂದಷ್ಟು ಕಲ್ಲುಸಕ್ಕರೆ ಖರ್ಜೂರದ [illegible]ಗಳನ್ನು ತಂದುಕೊಟ್ಟನು. [illegible] ಕೂಡಲೇ

"ಈತನು [illegible] ೧೦೦ [illegible] ಕಟ್ಟುತ್ತಾನೆ"

"ಕಂದಾಯವನ್ನೆಲ್ಲಾ ಕಟ್ಟಿದ್ದಾನೆಯೋ [illegible]?"

"ಎಲ್ಲಾ ಕೊಟ್ಟಿದ್ದೇನೆ ಬುದ್ಧಿ, ಸ್ವಲ್ಪ ಬಾಕಿ ಇದೆ."

ಸು—ಏಕೆ ಬಾಕಿ ನಿಲ್ಲಿಸಿಕೊಂಡೆ?

"ಮಳೆಗಳಿಲ್ಲ ಅನಾವೃಷ್ಟಿಯಾಗೋಯಿತು, [illegible] ಕೊಟ್ಟುಬಿಡುತ್ತೇನೆ; ಸ್ವಾಮಿ ಕ್ಷಮಿಸಬೇಕು, ಬುದ್ಧಿ"

ಸು—[illegible]

"[illegible] ಬುದ್ಧಿ, [illegible]"

[illegible] "ಬುದ್ಧಿ" ಎಂದನು.

ಸು—[illegible]?

"ಬುದ್ಧಿ, ಮುಸಾಫರಖಾನೆ ಇದೆ."

ಸು—"ನೀರು ಒಳ್ಳೆಯದು ಇದೆಯೋ?

"ಚೆನ್ನಾಗಿದೆ"

ಇಷ್ಟು ಹೊತ್ತಿಗೆ ಗಾಡಿಯು ಮುಸಾಫರಖಾನೆ ಬಳಿಬಂತು. ಸುಬೇದಾರರು ಗಾಡಿಯಿಂದಿಳಿದು ಒಳಗೆಲ್ಲಾ ನೋಡಿ. "ಸರಿ, ಚೆನ್ನಾಗಿದೆ, ಹೊರಗೆ ಹೋಗುವುದಿಲ್ಲ" ಎಂದು ಹೇಳಿದರು.

"ಇಲ್ಲಿ ಅಡ್ಡಕ್ಕೆ ಎಲೆಹಟ್ಟಿದೆ ಬುದ್ಧಿ" ಎಂದು ಕಳ್ಳದಲ್ಲಿ ತೋರಿಸಿದನು. ಅಲ್ಲಿ ಬಂದಂತಹಕ್ಕೆ ಹೊಂಗೆಯು ಎಲೆಗಳಿಂದಲೂ, ಹೂಗಳಿಂದಲೂ ಸ್ವಲ್ಪಮರೆಮಾಡಿತ್ತು.

ಸು—"ಗುಮಾಸ್ತರೆಲ್ಲಾ ಯಾವಾಗ ಬಂದರು ?"

"ಸ್ವಾಮಿ, ರಾತ್ರಿ ಹತ್ತು ಘಂಟೆಗೆ ಬಂದರು, ಎಂದು ಶಾನುಭೋಗನು ಉತ್ತರಕೊಟ್ಟನು.

"ಎಲ್ಲಿದ್ದಾರೆ ?"

"ನಮ್ಮ ಕ್ಷೇತ್ರದಲ್ಲಿ ಉಳಿದಿದ್ದಾರೆ.

ಸು—ಬಾಯ್ಯಾ ಪಟೇಲ್, ... ಇದೇನಯ್ಯಾ!

"ಬುದ್ಧಿ, ವಿಶಿಷ್ಟನ್ನೈತೆ"

ಸು—"ಸುಬ್ಬಾಚಾರಿ, ಸ್ವಲ್ಪ ಸೋರುಹಾಕಿ, ಹಾಲು ಬಿಸ್ಕತ್ತು ಮಾಡಿ, ನಮ್ಮ ಹುಡುಗರಿಗೆ ಹಸಿವಾಗಿದೆ!"

"ನನಗೆ ಇಷ್ಟು ಬೇಗನೆ ಹಸಿವಾಗುವುದಿಲ್ಲ."

ಶಾನುಭೋಗನು ... ನಮ್ಮ ಕ್ಷೇತ್ರಕ್ಕೆ ... ಅಲ್ಲಿಗೆ ದಯಮಾಡಬೇಕು" ಎಂದನು.

ಸು—ಸರಿ, ಸರಿ ಶಾನುಭೋಗರಿಗೆ ಬಿಟ್ಟು ಬಿಡಬೇಕಲ್ಲ ಉತ್ತರಿಸೋಣ ?

"ಇಲ್ಲ ಸ್ವಾಮಿ" ಎಂದು ಗಳ್ಳಹಿಕ್ಕಿ ಶಾನುಭೋಗನು ಮೌನವಹಿಸಿ, ಹಸ್ತದಿಂದ ಸ್ವಲ್ಪ ಮುಚ್ಚಿಕೊಂಡನು.

ಸು— ಕೇಳದಾರರನ್ನು ಕರೆಯೋ— ಮಾಗುಂಡಪ್ಪನವರೇ

"ಸ್ವಾಮಿ"

ಸು—ಜಮಾಬಂದಿಯನ್ನು ಯಾವಾಗ ಪ್ರಾರಂಭ ಮಾಡೋಣ ?

"ಎಷ್ಟು ಗ್ರಾಮಗಳ ತನಿಖೆಯಾಗಿದೆಯೋ ವಿಚಾರಿಸಿಲ್ಲ. ವಿಚಾರಿಸಿ ಹೇಳುವೆನು."

ಸ್ತ್ರೀ—ಬೇಗನೆ ಹೋಗು, ಸ್ವಾಮಿ! ವರ್ತಮಾನವನ್ನು ತಿಳಿದುಕೊಳ್ಳುವುದಿಲ್ಲವೇ?

"ಕಾನುಭೋಗರ ಮನೆಯಲ್ಲಿ ತಿಳಿದುಕೊಳ್ಳುತ್ತೇನೆ"

ವಿಟ್ಠಲಾಪುರಿಯೆಂಬುದು ಸಣ್ಣ ಗ್ರಾಮ. ೫೦ ಮನೆಗಳಿವೆ. ಅವುಗಳಲ್ಲಿಯೂ ಮಣ್ಣಿನ ಮನೆಗಳೇ ಹೆಚ್ಚು. ಕೆಲವರು ಹಳ್ಳಿಯ ಹೆಂಚುಗಳನ್ನು ಮನೆಗೆ ಹೊದ್ದಿಸಿರುವರು. ಕೆಲವರು ಸುದ್ದೆಯ ಮಣ್ಣನ್ನು ಹಾಕಿಕೊಂಡಿರುವರು. ಮತ್ತೆ ಕೆಲವರು ಹುಲ್ಲಿನ ತಟ್ಟಿಗಳನ್ನು ಹೊದ್ದಿಸಿರುವರು. ಬಾಗಿಲುಗಳು ಹೆಂಚಿನಮನೆಗಳು ಎರಡನೆ ಬೀದಿಗಳಲ್ಲವೂ ಆ ದಿನ ನಿರ್ಮಲವಾಗಿದ್ದವು. ಸುಬೇದಾರರು [illegible] ಬರುವರೆಂದು ಶೇಕದಾರರು ಮೊದಲು ಡಂಗುರಮಾಡಿಸಿದ್ದರು. ಕಾನುಭೋಗರ ಮನೆಯು [illegible]. ಮನೆಯೇನೋ ಬಹಳ ಗೊಪ್ಪದಲ್ಲ; ತೊಟ್ಟಿಯಮನೆ. ಮಣ್ಣಿನ ಗೋಡೆಗಳು, ಹಳ್ಳಿಯ ಹೆಂಚುಗಳು, ಪೂರ್ವಕಾಲದ [illegible] ಪ್ರಾಂತ [illegible] ಕೆಲವು ಬಾಗಿಲುಗಳು [illegible] ನೂತನವೇ ಇದ್ದವು. ಮನೆಯನ್ನು [illegible] [illegible] ಒಂದುಕೋಣೆ [illegible] [illegible] ಹಾಸಿ, [illegible] [illegible]. ಕಾನುಭೋಗರು [illegible], [illegible], [illegible] [illegible], [illegible] [illegible], [illegible] [illegible] [illegible] [illegible]. [illegible] [illegible] [illegible]

[illegible] [illegible] ಸುಬೇದಾರರು [illegible] ಉಬ್ಬಿಟ್ಟು, ಹಳ್ಳಿಯ [illegible]ಗಳಲ್ಲಿ, [illegible] [illegible] [illegible] ನುಗ್ಗಿತು. ಶೇಕದಾರರು ಬಂದು ಸ್ವಾಮಿ, ನಾಲ್ಕು ಗ್ರಾಮಗಳ ತನಿಖೆಯಾಗಿದೆ. ಸೀಲಸಂದ್ರದ ಕಾನುಭೋಗ,

ಬುರ್ಲ್ಲಗುಂಟೆಯ ಪಟೇಲ್ ಬರಲಿಲ್ಲ. "ಇನ್ನೂ ಕೆಲವು ಗ್ರಾಮಗಳು ಬಾಕಿ ಯಿವೆ" ಎಂದನು.

ಸು—ಊಟಮಾಡಿ ಎರಡುಗಂಟೆಗೆ ಜಮಾಬಂಧಿಯನ್ನು ಆರಂಭಿಸೋಣ.

"ಅಪ್ಪಣೆ ಸ್ವಾಮಿ." ಎಂದು ಶೇಕದಾರನು ಹಿಂದಿರುಗಿದನು.

ಸು—ಅಯ್ಯಾ ಗುಂಡಪ್ಪನವರೇ, ಇಲ್ಲಿ ಬನ್ನಿ.

" ಸ್ವಾಮಿ !

ಸು—ಇಲ್ಲಿ ಹಾರ್ಲ್ಯೋಸಿಯುಂ, ಟಟೀಲು ಸಿಗುತ್ತೇನಯ್ಯಾ ?

"ಭೈರ'ರಡ್ಡಿ ಮನೆಯಲ್ಲಿ ಹಾರ್ಲ್ಯೋಸಿಯುಂ ಇದೆ ಸ್ವಾಮಿ, ಟಟೀಲು-ಮಾತ್ರ [illegible] ಊರಲ್ಲಿ [illegible], [illegible]"

ಸು—[illegible] !

" ಅಪ್ಪಣೆ

ಸು—[illegible] ?

" ಸ್ವಾಮಿ, ಅಪ್ಪಣೆಯಾದರೆ "

ಸು—ಶೇರಬತ್ತು ಎಷ್ಟು ಇದೆ ?

ಬೇಕಾದಷ್ಟು ಬಂದಿದೆ, ಇನ್ನೂ ಬರುತ್ತ, ಹಾಲು ಮೊ ಸರು ...

ಸು—ನೀವು ತಂದಿರುವುದನ್ನು ವಾಪಸು ಮಾಡಿ. ತರಕಾರಿ, ಹಾಲು, ಮೊಸರು ಮುಂತಾದ ಪದಾರ್ಥಗಳನ್ನು ತೆಗೆದುಕೊಳ್ಳಬೇಡಿ, ತಂದುಕೊಟ್ಟ ಕೆ ವಾಪಸುಮಾಡಿ.

"ಸ್ವಾಮಿ ! ಜಮಾಬಂದಿ ಕಾಲದಲ್ಲಿ ರೈತರು ಸರಬರಾಯಿ ಮಾಡುವ ಪದ್ಧತಿಯುಂಟು" ಎಂದು ಪಟೇಲನು ಹೇಳಿದನು.

ಸು—ಚಿಂತೆಯಿಲ್ಲ. ನಮಗೆ ಸರ್ಕಾರದವರು ಭತ್ತೆ ಕೊಡುತ್ತಾರೆ, ಬಡ ರೈತರಿಗೆ ಸುಲಿಗೆ ಮಾಡುವಂತೆ ಹುಕುಂ ಇಲ್ಲ.

"ಸ್ವಾಮಿ, ತಾವು ಸುಲಿಗೆ ಮಾಡುವುದಲ್ಲ. ನಾವು ಸಂತೋಷದಿಂದ ಕೊಡುತ್ತೇವೆ"

ಸು-ಅಯ್ಯಾ ಪಟೇಲ್, ಇಲ್ಲಿಗೆ ಜಮಾಬಂದಿಗೆ ಸುತ್ತುಮುತ್ತಲಿನ ಹಳ್ಳಿಯಿಂದ ಬರುವ ರೈತರಿಗೆ ಅನುಕೂಲಪಡಿಸು.

"ಅನುಕೂಲಪಡಿಸುತ್ತೇನೆ"

ಸು-ಸರಿ, ನಮಗೆ ನಿನ್ನ ಪದಾರ್ಥಗಳು ಬಂದಂತೆಯೇ ಆಯಿತು.

(ಪಟೇಲನೂ ನೌಕರರೂ ಕುಳಿತರು ಗ್ರಾಮಸ್ಥರೂ ವಾಪಸು ಬಂದರು.)

"ಅಯ್ಯಾ ರಾಮಪ್ಪ, ಸುಬೇದಾರ್ರು ಏನು ಅಂದ್ರು?

"ಜಗನ್ನಾಥ ಚೆನ್ನಾಗಿ ಅಂದ್ರು.

"ಇದೇನಯ್ಯಾ ನೋಡಿದ ಸುಬೇದಾರ್ರು ಏನು ಇಷ್ಟೊಂದು ಸಂತೋಷಪಟ್ಟುಬಿಟ್ಟರು

"ಆದ್ದೇನಿಲ್ಲ, ಇಲ್ಲಿ ಬನ್ನಿ; ಶಾನುಭೋಗರೇ, ಸುಬ್ಬಾಚಾರ್ರಿಗೆ ಎರಡು ರೂಪಾಯಿಗಳನ್ನು ಕೊಟ್ಟು ನಿನ್ನ ಮನೆಯಿಂದ ಅದನ್ನು ಮಾತ್ರ ಕಳುಹಿಸೋಣ.

"ಬೇಷ್, ಹಾಗೆಯೇ!"

ಸುಬ್ಬಾಚಾರರಿಗೆ ಎರಡು ರೂಪಾಯಿಗಳು ಸಿಕ್ಕಿದವು ಸುಬೇದಾರರ ಎಲೆಯಲ್ಲಿಯೂ, ಶಾನುಭೋಗರ ಎಲೆಯಲ್ಲಿಯೂ ಎರಡೆರಡು ಚಿರೋಟಿಗಳು ಬಂದು ಬಿದ್ದವು

ಸು-ಸುಬ್ಬಾಚಾರ್ರೇ, ಇವು ಎಲ್ಲಿಯವು?

ಸ್ವಾಮಿ, ಶಾನುಭೋಗರು ಕೊಟ್ಟು ಕಳುಹಿಸಿದರು.

ಸು—ಅಯ್ಯಾ, ಇದೆಲ್ಲಾ ಏಕಯ್ಯಾ ತೆಗೆದುಕೊಂಡಿರಿ.

"ಸ್ವಾಮಿ, ಬೇಡವೆಂದು ಹೇಳಿದೆನು. ಬಲವಂತವಾಗಿ ಈ ಕುಕ್ಕೆಯಲ್ಲಿ ಇಟ್ಟು ಹೋದರು"

ಯಾವ ಕಾಲದಲ್ಲಿ ಸುಬೇದಾರರು ಚಿರೋಟಿಯನ್ನು ತಿಂದರೆಂದು ಸುಬ್ಬಾಚಾರರಿಂದ ವರ್ತಮಾನ ಬಂತೋ ಆಗಲೇ ಪಟೇಲ ಮತ್ತು ಇತರ ರೈತರಿಗೆ ಬಹಳ ಸಂತೋಷವಾಯಿತು

ಏನು ಸುಬ್ಬಾಚಾರ್ರೆ, ಎಷ್ಟು ಹಾಕಿದಿರಿ?

ಎರಡೆರಡು ತಿಂದರು,

" [illegible] ಸುಬ್ಬಾಚಾರ್ಯ [illegible] [illegible] ಎರಡು [illegible] [illegible] [illegible] "

" [illegible] [illegible] [illegible] [illegible] ? "

" [illegible] [illegible] [illegible] "

" [illegible] [illegible] [illegible] ? "

" [illegible] [illegible] "

ಆ ಘಂಟೆಗೆ ಜವಾಬುದಾರಿ ಜನಗಳೆಲ್ಲ ಬರ ಹೇಳುತ್ತಿದ್ದಾರೆ. ಗುಮಾಸ್ತರು ದಫ್ತರದ ತುಂಡುಗಳನ್ನಿಟ್ಟುಕೊಂಡು ಬಾಗಿಲ ಮುಂದೆ ಕುಳಿತಿದ್ದಾರೆ. ಇನ್ನೂ ಸುಬೇದಾರರು ಬಂದಿಲ್ಲ. ಸಿಪಾಯಿ ಸಿಸುವಿಗೆ ಎದುರುನೋಡುತ್ತಿದ್ದಾರೆ. "ಅಗೋ ಬಂದರು." ಎಲ್ಲರೂ ಎದ್ದುನಿಂತರು, ಸುಬೇದಾರರು ಬಂದು ಸರಿಗೆಯ ಪಂಚೆಯನ್ನು ಉಟ್ಟುಕೊಂಡು, ರೇಶ್ಮೆಯ ಅಂಗರುಮಾಲುಗಳನ್ನು ತೊಟ್ಟುಕೊಂಡು, ಕಾಲಿನಲ್ಲಿ ಜೋಡುಗಳನ್ನು ಮೆಟ್ಟಿಕೊಂಡು ಬಂದರು. ದಫೇದಾರನು, ಟೊಪ್ಪಿಯನ್ನು ಸರಿಪಡಿಸಿಕೊಂಡು ವಸ್ತ್ರದಿಂದ ಮೋರೆಯನ್ನು ಒರಸಿ, ಕುರ್ಚಿಯನ್ನು ಮುಂದಕ್ಕೆ ಎಳೆದು, ಪಕ್ಕದಲ್ಲಿ ಕೈಕಟ್ಟಿಕೊಂಡು ನಿಂತನು. ಸುಬೇದಾರರು ಕೂತರು. ಸ್ವಲ್ಪ ಹೊತ್ತು ಸುಮ್ಮನಿದ್ದು "ದಫೇದಾರ್, ಯಾರೋ ಬೀದಿ ನೋಡುತ್ತಾರೆ. ಒಳಗೆ ಕಳುಹಿಸು"

"ಅಪ್ಪಣೆ" ಒಬ್ಬನನ್ನು ಒಳಗೆ ಕಳುಹಿಸಿದನು.

ಸು—"ಕೇಶವರಾಯರೆಲ್ಲಿ"

"ಬಂದ್ದೇ, ಬುದ್ಧಿ"

"ಸ್ವಾಮಿ"

ಸು—"ಕೇಶವರಾಯರೇ, ನಿಮ್ಮ ಹೋಬಳಿ ಜನಗಳಿಗೆಲ್ಲಾ ಪರಸ್ಪರ ಸಹಾಯ ಸಂಘದ (Co operative Society) ವಿಷಯವಾಗಿ ತಿಳಿಸಿದ್ದೀರಾ, ಅದಕ್ಕೆ ಷೇರುಗಳನ್ನು ತೆಗೆದುಕೊಂಡಿದ್ದಾರೆಯೋ.

"ಸ್ವಾಮಿ, ತಿಳಿಸಿದ್ದೇನೆ, ಇದುವರೆಗೂ ೧೦೦ ಷೇರುಗಳು ಭರ್ತಿಯಾದವು."

ಸು—"ಕೋಲಾರ್ ರೈಲ್ವೆ ಡಿಬೆನ್ಚರ್ ಲೋನ್ ವಿಷಯವಾಗಿ ಏನು ಮಾಡಿದಿರಿ."

"ಸ್ವಾಮಿ, ಜನಗಳಿಗೆ ನಂಬಿಕೆಯಿಲ್ಲ. ಒಬ್ಬರೂ, ಮುಂದಕ್ಕೆ ಬರುವುದಿಲ್ಲ"

ಸು—"ನೀವು ಅವರಿಗೆ ತಿಳಿಸಬೇಕು.

"೩ ವರ್ಷಗಳಿಂದಲೂ ಮಳೆಯಿಲ್ಲದೆ ಕಾಲದಲ್ಲಿ ಹುಟ್ಟುವಳಿ ಕಷ್ಟವಾಗಿದೆ ಎನ್ನುವರು"

ಸು—"ಅಯ್ಯೋ ಸರ್ಕಾರದವರು ಅದಕ್ಕಲ್ಲವೆ ಕೋ-ಆಪರೇಟಿವ್ ಸೊಸೈಟಿಯ ನೀವು ಕಾ ಪತ್ತ ಅರಿಯಿಟ್ ಇಲ್ಲವೆನ್ನುವರು. ಸಂಘದಿಂದ ತಕಾವಿ ಲೋನ್ ಗಳನ್ನು ತೆಗೆದುಕೊಳ್ಳುವ ಹಾಗೆ, ಮಾಡಬೇಕು.

"ಅಪ್ಪಣೆ," ಮನಸ್ಸಿನಲ್ಲಿ "ನನ್ನ ಕೆಲಸಬಂದತ್ತ ನೋಡುವನೇನು" ಎಂದಂದುಕೊಂಡನು.

ಸು—"ಗ್ರಾಮಾಭಿವೃದ್ಧಿಗಳ ವಿಷಯವಾಗಿ ಸರ್ಕ್ಯುಲರ್ ಬಂದಿದೆ. ನೀವು ಆಗಾಗ್ಗೆ ಹಳ್ಳಿಗಳಲ್ಲಿ ಜನರಿಗೆ ತಿಳಿಯುವಹಾಗೆ ಉಪನ್ಯಾಸಗಳನ್ನು ಕೊಟ್ಟು, ಎಚ್ಚರಿಕೆ ಕೊಡಬೇಕು.

"ಅಪ್ಪಣೆ"

ಸು—"ಮೊದಲನೇಗ್ರಾಮ ಯಾವುದನ್ನು ತೆಗೆದುಕೊಳ್ಳೋಣ"

ಶೋಬಳಿಗುಮಾಸ್ತೆ—"ಸ್ವಾಮಿ, ಮಾಕೇಪಲ್ಲಿ"

ಸು—"ಮಾಕೇಪಲ್ಲಿ ಶಾನುಭೋಗರು ಬಂದಿರುವರೋ"

"ಬಂದಿರುವೆನು ಸ್ವಾಮಿ" ಎಂದು ಅಚ್ಚಪ್ಪನೆಂಬ ಬ್ರಾಹ್ಮಣನು ಹೇಳಿದನು.

ಸು—"ಓಹೋ! ಅಚ್ಚಪ್ಪನವರೆ," ಗುಮಾಸ್ತೆಯ ಕಡೆಗೆ ತಿರುಗಿ "ಇವರ ಗ್ರಾಮವು ಹೇಗಿದೆ"—"ನಿಮಗೆ ಸ್ವಲ್ಪ ಕೆಲಸವಿದೆ"

“ಅಪ್ಪಣೆ, ನಾನಿಲ್ಲಿಯೇ ಇರುವೆನು, ಸ್ವಾಮಿಗಳ ಅಪ್ಪಣೆ ಹೋಗುವದಿಲ್ಲ ”

ಸು—ಸಾಯಂಕಾಲಕ್ಕೆ ... [illegible] ......

ಅಪ್ಪಣೆ ಸಿದ್ಧವಾಗಿದೇನೆ, ನನ್ನ ಗ್ರಾಮದ ಬಾಬತು ಈಗಲೇ ಅಪ್ಪಣೆಯಾಗಬೇಕು.

ಸು—ನೀವು ಗುಮಾಸ್ತರೇ [illegible] ಬಂದಿದ್ದೀರೋ.

“ಇಲ್ಲ ಸ್ವಾಮಿ”

ಸು—ಹಾಗಾದರೆ, ಪಟೇಲನನ್ನು ಕೂಗು

“ಅಯ್ಯಾ ಪಾಟಲದ್ತಿ,

“ಪಾಟಲದ್ತಿ, ಪಾಟಲದ್ತಿ, ಪಾಟಲದ್ತಿ ” ಎಂದು ದಫೇದಾರನು ಮೂರುಸಾರ್ತಿ ಘಟ್ಟಿಯಾಗಿ ಕೂಗಿದನು. ಆಗ ಎಪ್ಪತ್ತು ವರ್ಷ ವಯಸ್ಸುಳ್ಳ ಒಬ್ಬನು ವಸ್ತ್ರವನ್ನು ಸರಿಪಡಿಸಿಕೊಂಡು ಬಂದು ನಿಂತು ಸುಬೇದಾರರಿಗೆ ನಮಸ್ಕಾರವನ್ನು ಮಾಡಿದನು.

ಸು—ನೀನೇನಯ್ಯಾ ಪಟೇಲ,

“ಹೌದು ಸ್ವಾಮಿ”

ಸು—ನಿನ್ನ ಗ್ರಾಮದಲ್ಲಿ ಎಷ್ಟಯ್ಯಾ ಬಾಕಿ ?

“ಸ್ವಾಮಿ, ೫೦೦ ರೂಪಾಯಿಗಳು ಮಾತ್ರವೇ, ನೋಟೀಸು ಜಾರೀ ಮಾಡಿರುತ್ತೇನೆ. ಕೆಲವರು ಆಸಾಮಿಗಳು ಕುಂಪಣಿ ಸೀಮೆಗೆ ಹೋಗಿದಾರೆ ”

ಸು—ಒಟ್ಟು ವಸೂಲಿ ಎಷ್ಟು ?

“ಸ್ವಾಮಿ, ೧,೦೦೦ ಚಿಲ್ಲರೆ.

ಸು—ಸರಿಯಾಗಿ ಲೆಕ್ಕ ನೋಡಿ ಹೇಳು.

“ಸ್ವಾಮಿ, ೧,೦೪೦-೮-೭

ಸು—ಏನಯ್ಯಾ ೫೦೦ ರೂಪಾಯಿಗಳನ್ನು ಬಾಕಿ ನಿಲ್ಲಿಸಿಕೊಂಡಿದ್ದೀಯಾ, ಬೇವಾರ್ಸ್ ಕೆಲಸ-ಹೆಡ್ ಗುಮಾಸ್ತರೇ, ಒಂದು ನೋಟ್ ಮಾಡಿಕೊಂಡು ಉದಹರಣೆ ತೆಗೆದುಕೊಳ್ಳಿ.

"ಅಯ್ಯೋ ನನಗೆ ಈ ಪಟೇಲಿಯೇ ಬೇಡವಪ್ಪಾ" ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತ "ಸ್ವಾಮಿ, ಮಾಫಿ ಮಾಡಬೇಕು. ಶೀಘ್ರದಲ್ಲಿಯೇ ವಸೂಲ್ ಮಾಡುತ್ತೇನೆ.

ಸು—ಕೆರೆ ಕಾಮಗಾರಿಯು ಎಷ್ಟರಮಟ್ಟಿಗೆಯಾಗಿದೆ?

"ಸ್ವಾಮಿ ಅರ್ಧವಾಗಿದೆ

ಸು—ಏನಯ್ಯಾ, ಈಗಾಗಲೇ ಮುಗದಿರಬೇಕಲ್ಲಾ:

"ಸ್ವಾಮಿ, ರೈತರು ತಮ್ಮ ಕೆಲಸಗಳಮೇಲೆ ಹೊರಟುಹೋಗುತ್ತಾರೆ. ಕಂಟ್ರಾಕ್ಟ್ ಕೊಡಲಿಕ್ಕೆ ಎಲ್ಲರೂ ಬಾಬರ್ ಕುಳಗಳು

ಸು—ಎಂಥಾ ಪಟೇಲಿ ಮಾಡುತ್ತೀಯಾ, ಕೆಲಸಕ್ಕೆ ರಾಜೀನಾಮೆಯನ್ನು ಕೊಡು.

ಹೋ. ಗು. "ಸ್ಕೂಲ್ ಕಟ್ಟಡದ ವಿಷಯವಾಗಿ ತಾಕೀತು ಕೊಟ್ಟಿತ್ತು.

"ಸ್ವಾಮಿ ಕೆಲಸವು ಪೂರ್ತಿಯಾಗಿದೆ.

ಸು—ಶಾನುಭೋಗರೆ ನಿಮ್ಮ ದಫ್ತರವನ್ನೆಲ್ಲಾ ಅಜಮಾಯಿಷಿ ಮಾಡಿಸಿದ್ದೀರಾ

ಹೋ. ಗು. "ಮಾಡಿರುವೆನು ಸ್ವಾಮಿ; ಎಲ್ಲಾ ಬರೆಕಾಗಿದೆ

ಸು-ಏನಾದರು ಕಮ್ಮಿ ಬಾಕಿಯುಂಟೋ?

ಹೋ. ಗು. "ಇಲ್ಲ ಸ್ವಾಮಿ.

ಸು— ಅಂಗಡಿ ಕಂದಾಯ ಗಾಡಿ ಕಂದಾಯಗಳು

"ಇಲ್ಲ ಸ್ವಾಮಿ.

ಸು—ಇನ್ನು ಮಿಕ್ಕದ್ದು ಆಮೇಲಿರಲಿ, ಬೇರೆ ಗ್ರಾಮಕ್ಕೆ ಹೊರಡಿ.

ಹೋ. ಗು. "ನೀರಗಂಟ್ಲಪಲ್ಲಿ.

"ನೀರಗಂಟ್ಲಪಲ್ಲಿ ಪಟೇಲ್, ಶಾನುಭೋಗ್" ಎಂದು ಮೂರು ಸಾರ್ತಿ ದಫೇದಾರನು ಕೂಗಿದನು. ಇಬ್ಬರೂ ಬಂದರು.

ಸು—ಅಯ್ಯಾ ಪಟೇಲ್, ನಕಾಶಿ ಯೆಲ್ಲಿ?

ಸುಬೇದಾರರು ನಕಾಶಿಯನ್ನು ನೋಡಿ "ಏನಯ್ಯಾ, ಮೊನ್ನೆ ಮೋಜಣಿದಾರರು ಬಂದಾಗ ಹೊಸದು ಬರಸಿಕೊಳ್ಳಲಿಲ್ಲ" ಎಂದು ಹೇಳುತ್ತ ಒಂದು ಕೊನೆಯಲ್ಲಿ ತಮ್ಮ ರುಜುವನ್ನು ಮಾಡಿದರು.

ಸು—ಬಾಕಿ ಎಷ್ಟು ?

"ಸ್ವಾಮಿ ೩೦೦ ರೂಪಾಯಿಗಳು

ಸು—ಏಕಯ್ಯಾ ವಸೂಲ್ ಮಾಡಲಿಲ್ಲ ?

ಹೋ. ಗು "ಸ್ವಾಮಿ, ಅದು ಈತನದೇ ಬಾಕಿ" (ಆದಿವಸ ಹೋ ಬಳಿ ಗುಮಾಸ್ತರಿಗೆ ಈ ಪಟೇಲನಿಂದ ಮರ್ಯಾದೆ ಬಂದಿರಲಿಲ್ಲ)

ಸು—ಸರಿ, ಸರಿ. ಪಟೇಲನೇ ಬಾಕಿ ನಿಲ್ಲಿಸಿಕೊಂಡರೆ, ರೈತರು ಹೇಗೆ ಕೊಟ್ಟಾರು! ಏಕಯ್ಯಾ ಬಾಕಿ ನಿಲ್ಲಿಸಿಕೊಂಡೆ ?

"ಸ್ವಾಮಿ ಕೊಂಚ ರೆಮಿಷನ್ ಆಗಬೇಕು. ಇನ್ನು ಮಿಕ್ಕದ್ದನ್ನು ಪ್ರೋಟಿಗೇಲಿ ತಗೆದುಕೊಳ್ಳಬೇಕು.

ಸು—ಏನಯ್ಯಾ ಪಟೇಲ್, ನಿನಿಗೆ ಪ್ರೋಟಿಗೆ ಕೊಡುವುದು. ಕಂದಾಯವನ್ನು ಪೂರ್ತಿಯಾಗಿ ವಸೂಲ್ ಮಾಡುವದಕ್ಕೆ—ಕಂದಾಯವನ್ನು ಬಾಕಿ ನಿಲ್ಲಿಸಿದರೆ, ಪ್ರೋಟಿಗೆ ಸಿಗುವದಿಲ್ಲ. ಪ್ರೋಟಿಗೆಗೆ ವಜಾ ಆಗುವುದಿಲ್ಲ. ನಾಳೆಯು ದಿವಸವೇ ಹಣ ತಂದುಕೊಡಬೇಕು.

"ಅಪ್ಪಣೆ

ಹೋ. ಗು. ಸ್ವಾಮಿ ಈತನು ಅಪ್ಪಣೆಯಿಲ್ಲದೆ ರಜಾಕ್ಕೆ ಬರೆದುಕೊಳ್ಳದೆ ಒಂದು ಪಕ್ಷ ಕುಂಪಿಣೀ ಸೀಮೆಗೆ ಹೊರಟುಹೋಗಿದ್ದನು. ಶೇಕ್ ದಾರು) ರಿಪ್ರೋರ್ಟು ಮಾಡಿದ್ದಾರೆ.

ಸು—ಏಕಯ್ಯಾ ಪಟೇಲ್ ?

ಸ್ವಾಮಿ, ನನ್ನ ಹೆಂಡರು ಜನನವಾಗಿತ್ತು. ಅಗತ್ಯ ಹೋಗಬೇಕಾಯಿತು. ರಜಾಗೆ ಬರೇಲಿಕ್ಕೆ ಪುರಸತ್ತು ಆಗಲಿಲ್ಲ.

ಸು—ಪುರಸತ್ತು ಇಲ್ಲವ್ರೋ, ಇನ್ನುಮೇಲೆ ಈ ರೀತಿ ಹೊರಟುಹೋದರೆ ನಿಗೆ ಶಿಕ್ಷೆಯನು ಮಾಡಲಾದೀತು. ಇವನಿಗೆ ಒಂದು ರೂಪಾ ಜುಲ್ಮಾನೆ ವಿಧಿಸಿಗೆ. ನೋಟ್ ಮಾಡಿಕೊಳ್ಳಿ.

— ಜೂಲುಪಾಳ್ಯ —

೧೮ ಜೂಲುಪಾಳ್ಯದ ಪಟೇಲು ಶಾನುಭೋಗರು ಬಂದು ನಿಂತರು ದ್ವಾರದಲ್ಲಿಯೇ ಹೊರಗಡೆ ಗಡಬಿಡಿ ಯಾಗುತ್ತಿತ್ತು. ಏನೋ ಕೇಡು ದಫೇದಾರ್ ಎಂದು ಅಪ್ಪಣೆಯಾಯಿತು.

ದಫೇದಾರನು ಹೋಗಿ ಯಾರಿಬ್ಬರನ್ನೋ ತಳ್ಳುತ್ತಿದ್ದನು. ಹೆಂಗಸು ಮತ್ತು ಗಂಡಸು. ಅವರು ಬಲವಂತವಾಗಿ ಮುಂದಕ್ಕೆ ಬರುತ್ತಿದ್ದರು. ಸುಬೇದಾರ ತಾವಬಿಡಿ ಎಂದು ಕೂಗುತ್ತಿದ್ದರು. ಇದನ್ನೆಲ್ಲಾ ಮಾಮಲೇದಾರರು ನೋಡಿ, ದಫೇದಾರ್' ಅವರನ್ನು ಇಲ್ಲಿ ಕರೆದುಕೊಂಡು ಬಾ ! ಎಂದರು. (ಅವರಿಬ್ಬರೂ ಬಂದರು)

ಸು—ಏನ? ನಿಮ್ಮ ವಿಚಾರ? ಏಕೆ ಗಲಾಟೆ ಮಾಡುತ್ತಿದ್ದಿರಿ?

ಸೋಮಿ, ನನ್ನೊಂದರಿಕೆ ಐತೆ, ಎಂದು ಗಂಡಸು ಹೇಳಿದನು

ಸು– ಏನು ?

ಸೋಮಿ, ನನ್ನೆಂಡರು ಈಗೆ ಎಂಟವರ್ಸದಂಗೆ ಓಡ್ಬುಟ್ಕೊಂಡು ಬಂಟೋದಳು. ಮೊನ್ನೆ ತಿಂಗಳಾಗ ಪುನ ಬಂದಳು. ನಾವು ಸಂಸಾರ ಮಾಡಿಕೊಂಡಿದ್ವಿ. ಆಗಾಗ್ಗೆ ಯವಾರ ಆದೋಳು ಮನ್ನೆನಾಗೆ ಶುಕ್ರಾರ ಇರಬೋದು ಇಟ್ಕೊತ್ತಾಗೆ ತೂಸ್ಕೊ ಅ ಗೋ ಅಲ್ಲಿದ್ದ—ಒಬ್ಬ ಗುಲಾಮ ನನ್ನನೋಗನು ಪ್ರುಸಲಾಯಿಸಿ ಪ್ರೊಡಕೊಂಡೋದ ಅವಳ ನನಗೆ ಕೊಡ್ಸಿ, ಆ ಮೊಗನಿಗೆ ಜ್ಯೆಲಿಗೆ ಹಾಕಬೇಕು ಬುದ್ಧೀ

(ಇದನ್ನು ಕೇಳುತ್ತಲೂ ಎಲ್ಲರಿಗೂ ನಗು ಬಂತು)

ಸು–ಆಗಲಿ ನಿನಗೆ ಕೊಡಿಸಿಕೊಡುತ್ತೇವೆ. ಇನ್ನೇನಾದರೂ ಉಂಟೋ ?

" ಉಂಟು ಬುದ್ಧಿ, ಮೊನ್ನೆನಾಗೆ ಶಾನುಭೋಗರು ಗಾಡಿ ಕಂದಾಯ ಕೊಡು ಅಂತ ತಕೊಂಡರು ಬುದ್ಧಿ ನನ್ನತಾವ ಗಾಡಿ ಐತೆ. ಎತ್ತಿಲ್ಲ ಎತ್ತು ಮಾರಿಬಿಟ್ಟವಿನಿ, ಮಾರಿ ಬಂದವರ್ಸ ಆಗೋಯ್ತು ಹಣ ತಕ್ಕೊಂಡವರೆ "

ಸು—ಏನಯ್ಯಾ ಶಾನುಭೋಗ್' ?

" ಇಲ್ಲಾವಿ ಸುಳ್ಳು

ಸು—ಏನೋ ಸುಳ್ಳು ಹೇಳುತ್ತೀಯಾ, ನಿನ್ನ ಹೆಸರೇನೋ ?

" ಬುದ್ಧೀ ನನ್ನೆಸರು ಚೌಡಿಗ, ನಾನು ಸುಳ್ಳು ಹೇಳ್ಲಿ ಏನು ಬುದ್ಧೀ ತಮ್ಮ ಪಾದದಾಣೆ ತಕ್ಕೊಂಡ್ರು ಬುದ್ಧೀ—ಯಾವ ಹೊಲೆ ಮಾದಿಗ ನಿಮ್ಮೊಗನು ಬುದ್ಧೀ ಸುಳ್ಳು ಹೇಳೋದು

ಸುಬೇದಾರರು—ನಗುತ್ತ "ಸರಿ, ವಿಚಾರಿಸುತ್ತೇವೆ, ನೀನು ಹೊರಗಿರು"

ಹೆಂಗಸಿನ ಕಡೆಗೆ ತಿರುಗಿಕೊಂಡು "ನಿನ್ನದೇನು" ಎಂದರು.

"ಬುದ್ಧೀ—ನಾನೆರಡುವರ್ಷದಿಂದಲೂ ಒಬ್ಬನಿಗೆ ಮಡಕೊಂಡಿದ್ದೆ ಮೊನ್ನೆ ಸೋಮವಾರದಂಗೆಯುವಾರ ಅದಿ ಬೇರೊಬ್ಬನ್ನ ನೋಡಿ ಕೊಂಡೆ. ಮೊದಲವನು ಬಂದು ಮನೇ ಬಾಕಿಲಾಗೆ ಕಾಟಾಕೊಡು ತಾನೆ ಬುದ್ಧಿ, ತಪ್ಪಿಸಬೇಕು."

ಸುಬೇದಾರರು ನಗುತ್ತ "ಬಳ್ಳೇಕೇಸುಗಳು ಬರುತ್ತಲ್ಲ" ಎನ್ನುತ್ತ "ಇಗೋ ನೀನು ಮೊದಲವನಗಿಂತಲೂ ದಿಮ್ಮಗಿರುವನನ್ನು ಇಟ್ಟುಕೋ ನಿನಗೆ ಕಾಟೂತಪ್ಪುತ್ತೆ" ಎಂದು ಹೇಳಿದರು. ಅವಳಿಗೆ ಸಂತೋಷವಾಗಿ "ಸೈ ಬುದ್ಧಿ" ಎಂದು ಹೊರಟು ಹೋದಳು.

ಸು—"ಅಯ್ಯಾ ಪಟೇಲ್, ಹಳರಾದು ಕುಳಗಳು ನಿನ್ನಗ್ರಾಮದಲ್ಲಿ ಎಷ್ಟಿವೆ"

"ಸ್ವಾಮಿ. ಹನ್ನೆರಡಿವೆ"

ಸು—ಅವರನ್ನು ಕರೆ ತಂದಿದ್ದೀಯಾ.

"ಸ್ವಾಮಿ ನಾಲ್ಕು ಜನರು ಬಂದಿರುವರು"

ಸು—ಅವರನ್ನು ಕರಿ.

ನಾಲ್ಕು ಜನರು ಬಂದು ನಿಂತರು.

ಸು—"ಏಕರಯ್ಯಾ ಬಾಕಿ ಫೈಸಲ್ ಮಾಡಿಲ್ಲ.

ಒನೇ—ಸ್ವಾಮಿ, ಕೆರೆಗೆ ನೀರು ಬಂದು ನಾಕೊರ್ಷ ಆಗೋಯ್ತು. ಗದ್ದೆಗಳೆಲ್ಲಾ ಬಂಜರಾಯಿತು. ಹೆಂಗಸರನ್ನಾಲಿನ, ನಗಮಾರಿ ಕಂದಾಯ ಕಟ್ತೀವೆ

ಸು—ನೀವು ನಗಮಾರಿ ಕಟ್ತೀರೋ, ಮಾಂಗಲ್ಯ ಮಾರಿ ಕಟ್ತೀರೋ ಸರ್ಕಾರಕ್ಕೆ ಅಗತ್ಯವಿಲ್ಲ.

ಒನೇ—ಸ್ವಾಮಿ, ರವಿವರ್ಷಗೆ ಅಪ್ಪಣೆಯಾಗಬೇಕು.

ಸು—ಶಾನುಭೋಗರೆ, ಇದು ಯಾವ ವರ್ಷಗಳ ಬಾಕಿ

ಒಂಭೈನೂರಒಂಬತ್ತು; ಎರಡರದು.

ಸು—ಅದೇಕೆ ನಮ್ಮ ಇಷ್ಟು ವರುಷಗಳಿಂದಲೂ ರೆಮಿಷನ್ ಆಗಲಿಲ್ಲ.

ಶಿನೇ—ಸ್ವಾಮಿ, ಹಿಂದಿನ ಸುಬೇದಾರರು ಬರೆದು ಹಾಕಿದರು. ಜವಾಬೇ ಬರಲಿಲ್ಲ.

ಹೋ ಗು—"ಸ್ವಾಮಿ, ಕೆಲವು ದಿವಸಗಳ ಹಿಂದೆ ಬರೆದಿರುತ್ತೇವೆ. ತಮ್ಮ ಕಾಲದಲ್ಲೇ ಬರೆದಂತೆ ಜ್ಞಾಪಕವಿದೆ.

ಸು—"ಅಹುದು, ಸಾಹೇಬರಿಗೆ ಬರೆದಿರುತ್ತೇವೆ. ಗುಮಾಸ್ತರೆ, ಈ ನಾಲ್ಕು ಜನಗಳ ವಿಷಯವಾಗಿ ಬರೆದುಕೊಳ್ಳಿ. ರೆಮಿಷನ್ ವಿಷಯವಾಗಿ ಪುನಃ ಬರೆಯೋಣ."

ದಫೇದಾರನು "ಬುದ್ಧಿ, ಟಪಾಲು ಬಂತು." ಎಂದನು.

ಸುಬೇದಾರರು ಟಪಾಲನ್ನು ತೆಗೆದುಕೊಂಡು ಡಿಸ್ಟ್ರಿಕ್ಟಿಂದು ಮೊದಲು ಒಡೆದರು. ಯಾವಾಗಲೂ, ಡಿಸ್ಟ್ರಿಕ್ಟಿಂದು ಮೊದಲು ನೋಡುವ ಪದ್ಧತಿಯುಂಟು, ಬಂದ ಕಾಗದವು ಈರೀತಿಯಲ್ಲಿತ್ತು.

ಬಾಗೇಪಲ್ಲಿ ತಾಲ್ಲೂಕು ಅಮಿಲ್ದಾರರಿಗೆ ಹುಕುಂ

ನಿಮ್ಮ ತಾಲ್ಲೂಕು ಜೂಲುಪಾಳ್ಯದ ರೈತರ ರೆಮಿಷನ್ ವಿಚಾರವಾಗಿ ರೆವಿನ್ಯೂ ಕಮಿಷನರವರಿಂದ ೭ನೇ ತಾರೀಖು ಹುಟ್ಟಿರುವ ಹುಕುಂ ಅನುಸರಿಸಿ ತಿಳಿಸುವದೇನೆಂದರೆ:—ಜೂಲುಪಾಳ್ಯದ ಕೆರೆ ಕಾಮಗಾರಿಯು ಅಲ್ಲಿನ ರೈತಾಪಿ ಜನಗಳಿಂದ ಮುಗಿಸಿದರೆ, ರೆಮಿಷನ್ ಕೊಡಲಾದೀತು ಇಲ್ಲವಾಗರೆ ಅದಕ್ಕೆ ಮುಟ್ಟುವ ಹಣದಲ್ಲಿ ಅರ್ಧವನ್ನು ಕೊಟ್ಟರೆ, ಮಿಕ್ಕ ಅರ್ಧವನ್ನು ಸರ್ಕಾರದವರೇ ಕೊಟ್ಟು ಕೆಲಸವನ್ನು ಮಾಡಿಸುವರು. ಇದನ್ನು ಓದಿಕೊಂಡು "ಅಯ್ಯಾ ನಿಮ್ಮ ರೆಮಿಷನ್ ವಿಚಾರವಾಗಿ ಹುಕುಂ ಬಂದಿದೆ, ಗುಮಾಸ್ತರೆ, ಇವರಿಗೆ ಓದಿಹೇಳಿ!—ಓದಿದುದನ್ನು ಕೇಳಿ, ಅವರಲ್ಲಿ ಒಬ್ಬನು, "ಸ್ವಾಮಿ ಕಾಮಗಾರಿ ಖರ್ಚಿನ ಹಣವನ್ನು ಕೊಡಬಹುದಾದಲ್ಲಿ ನಮ್ಮ ಕಂದಾಯವನ್ನೇ ಕೊಡಬಹುದಲ್ಲ" "ಎನಲು ಅದೇನೋ ಮೇಲಕ್ಕೆ ಬರೆದುಕೊಳ್ಳಿ." ಎಂದು ಅಪ್ಪಣೆಯಾಯಿತು. ಇನ್ನೊಬ್ಬನು, ಸ್ವಾಮಿ, ನಮಗೆ ಜಮಾನು ಬೇಡ. ರಾಜೀನಾಮೆ ಕೊಡುತ್ತೇವೆ.

ಸು—"ಕಂದಾಯದ ಬಾಕಿಯನ್ನು ಕೊಟ್ಟುಬಿಡಿ, ಇಲ್ಲವಾದರೆ, ನಿಮ್ಮ ಸ್ವತ್ತನ್ನು ಜಪ್ತಿಮಾಡಿ ಸರ್ಕಾರದವರು ಹರಾಜು ಮಾಡುವರು"

ಸು—ಗುಮಾಸ್ತರೇ ಇನ್ನು ಜಾಸ್ತಿ ಇದ್ದರೆ ಹೇಳಿ

ಗು—ಏನೂ ಇಲ್ಲ.

ಸುಬೇದಾರರು "ಸರಿ ಮುಂದಿನ ಗ್ರಾಮಗಳನ್ನೆಲ್ಲಾ ನಾಳೆ ನೋಡೋಣ. ಈಗ ೬ ಗಂಟೆಯಾಗಿ ಹೋಯಿತು" ಎಂದು ಹೇಳಿ ಎದ್ದರು. ಮರುದಿನ ಬೆಳಗ್ಗೆ ೬ ಘಂಟೆಯಿಂದ ಜಮಾಬಂದಿಗೆ ಷುರುವಾಯಿತು. ಮಧ್ಯಾಹ್ನ ಊಟಕ್ಕೇಳುವ ಹೊತ್ತಿಗೆ ಮುಕ್ಕಾಲುಪಾಲು ಗ್ರಾಮಗಳು ಆಗಿಹೋಗಿದ್ದವು. ಸುಬೇದಾರರು ಶೇಕದಾರರನ್ನು ಕರೆದು "ಇನ್ನೆಷ್ಟು ಉಳಿದಿವೆ?" ಎಂದು ಕೇಳಿದರು.

ಸ್ವಾಮಿ ಇನ್ನು ೬ ಗ್ರಾಮಗಳಿವೆ.

ಸು—ಪಟೇಲ್ ಶಾನುಭೋಗರು ಬಂದಿರುವರೋ?

"ಕೆಲವರು ಬಂದಿಲ್ಲ."

ಸು—ಅವರಿಗೆಲ್ಲಾ "ಪೋ'ಚರವು" ಮೊಕ್ಕಾಂಗೆ ಬರುವಂತೆ ಬರೆಯಿರಿ.

"ಅಪ್ಪಣೆ."

ಯಾವಾಗ ಸಾಯಂಕಾಲ ಬಾಗೇಪಲ್ಲಿಗೆ ಹೊರಟು ಹೋಗಬೇಕೆಂದು ತಂದೆಯ ಬಾಯಿನಿಂದ ಮಾತುಗಳು ಹೊರಟವ್ರೋ ಆಗಲೇ ಮೂರ್ತಿಗೆ ಬಹಳ ಸಂತೋಷವಾಯಿತು. "ಸಾವಿತ್ರೀ! ಓ ಸಾವಿತ್ರೀ! ನಿನ್ನನ್ನು ನೋಡುವೆನು." ಎಂದೆಂದುಕೊಂಡನು ಸಾಮಾನುಗಳನ್ನೆಲ್ಲಾ ಪೆಟ್ಟಿಗೆಯಲ್ಲಿ ಹಾಕಿ ಸಾಯಂಕಾಲ ೪।। ಘಂಟೆಗೆ ಹೊರಟು ೮ ಘಂಟೆಗೆ ಬಾಗೇಪಲ್ಲಿಯನ್ನು ಸೇರಿದರು.

---

೧೧ ನೆಯ ಪರಿಚ್ಛೇದ.

ಯಾವದಿನ ಮೂರ್ತಿಯು ತನ್ನನ್ನು ಮಾತನಾಡಿಸಿದನೋ ಅಂದಿನಿಂದ ಸಾವಿತ್ರಿಯ ಚರ್ಯೆಗಳಲ್ಲಿ ವ್ಯತ್ಯಾಸವುಂಟಾಯಿತು. ಬಹಳ ದುಃಖ

ಬಿಟ್ಟಳು. ಏತಕ್ಕಾಗಿ ? ತನ್ನನ್ನು ಎಂತಹವನು ಪ್ರೀತಿಸುತ್ತಾನೆಂದು ತಿಳಿದಳೋ, ಅವನೊಡನೆ ಸರಸಸಲ್ಲಾಪಗಳನ್ನು ಮಾಡಬಹುದೆಂದು ಬಗೆದಳೋ, ಇಲ್ಲ; ಶಾಂತಿಕವಾಗಿಯೂ ಇಲ್ಲ. ತನ್ನಲ್ಲಿ ತಾನೇ ಏನನ್ನೋ ಹೇಳಿಕೊಳ್ಳುವಳು. ಯಾರೊಡನೆಯೂ ಮಾತಿಲ್ಲ. "ನಾನು ಆ ಮೂರ್ತಿಯನ್ನು ಹೊಂದಲು ಸಾಧ್ಯವಿಲ್ಲ. ಅಯ್ಯೋ ! ನನ್ನ ಜತೆಗಾತಿಗಳೆಲ್ಲರಿಗಿಂತ ಚೆನ್ನಾಗಿ ಬಾಳಬೇಕೆಂದಿದ್ದೆನಲ್ಲಾ ! ಬಡವನಾದರೂ ಯಾವಾತನು ಯೌವ್ವನಸ್ಥನಾಗಿ ತನ್ನನ್ನು ನಂಬಿದವಳೆಂದು ಬಗೆದು, ಪುನಃಪೂರ್ವಕವಾಗಿ ಪ್ರೀತಿಸುವನೋ ಅಂತಹವನು ನನ್ನಪಾಲಿಗೆ ದೇವರಲ್ಲದೆ ಮತ್ತೇನು ? ಇವರಿಗೆಲ್ಲಾ ವಯಸ್ಸಾಗಿ ಆಗಲೇ ಸಂಸಾರ ಸುಖಗಳನ್ನು ಅನುಭವಿಸಿ ನಮ್ಮ ಮನಸ್ಸಿನ ವ್ಯಾಪಾರಗಳನ್ನು ತಿಳಿದುಕೊಳ್ಳಲು ಸಾಮರ್ಥ್ಯವಿಲ್ಲದೆ ನಮಗೆ ಅತಿಯಾಗಿ ಕ್ಲೇಶವನ್ನುಂಟುಮಾಡುವರು. ನಮಗಿರುವ ಉತ್ಸಾಹ ಆದರೆ ಅಭಿಲಾಷೆಗಳನ್ನು ಈವಯಸ್ಸು ಮೀರಿರುವರಲ್ಲೆಂತು ವ್ಯಕ್ತಪಡಿಸುವದು ? ವ್ಯಕ್ತಪಡಿಸಿದರೂ ಅದಕ್ಕನುಸಾರವಾಗಿ ತಾವಿರುವರಾದರೆ ನಮಗೆ ಯೌವನಸ್ಥರಾದರೇನು ? ಅಲ್ಲವಾದರೇನು ? ಇವರಿಗೆ ಶೃಂಗಾರ ಹಾವಭಾವವಿಲಾಸಗಳು ಬೇಕಾಗಿರುವುದಿಲ್ಲ. ನಮಗಾದರೋ ಯಾವಾಗಲೂ ಪತಿಸಾನ್ನಿಧ್ಯದಲ್ಲಿಯೇ ಇರಬೇಕೆಂದು ಮನಸ್ಸು ಹೋಗುವದು. ಯಾವ ಸತಿಯು ಯಾವಾಗ ಪತಿ ಬರುವನೋ ಎಂದು ಎದುರುನೋಡುತ್ತಿರುವಳೋ ಯಾವ ಪತಿಯು ತಾನು ಮನೆಯನ್ನು ಸೇರುತ್ತಲೂ ಮೊದಲು ಸತಿಯನ್ನೀಕ್ಷಿಸಲು ಆತುರಪಡುವನೋ ಅಂಥವರಿಬ್ಬರೂ ಸೇರಿದರಲ್ಲವೇ ಈ ಇಹದಲ್ಲಿ ಸುಖವುಂಟು. ಹಾಗಿಲ್ಲದೆ ಮನಸ್ಸಿನಲ್ಲಿಯೇ ಕೊರಗುತ್ತ ಪತಿಯು ಬಂದರೂ ಉತ್ಸಾಹವಿಲ್ಲದೆ ಇಬ್ಬರ ಮನಸ್ಸುಗಳೂ ಒಂದಾಗಿರುವಲ್ಲಿ ಸಂಸಾರಸುಖವನ್ನೆಂತುಪಡೆಯುವುದು. ಎಂದುಹೇಳುತ್ತ ಕಣ್ಣೀರನ್ನೊರಸಿಕೊಳ್ಳುವಳು."

ಈ ದಿವಸ ಹುಣ್ಣಿಮೆಯು ಚಂದ್ರನು ಮೋಡಗಳೊಳಗೆ ಮೂಡುತ್ತಿರುವನು. ತಡೆದು ತಡೆದು ಬರಲೋ ಬೇಡವೋ ಎಂದು ಯೋಚಿಸುತ್ತಿದ್ದಹಾಗೆ ಏರುತ್ತಿದ್ದನು. ಮೊದಲು ಮೊದಲು ನವಜಪಾಪ್ರಸೂನಾಭ

ಬಂತಾದನು. ಕೆಲವು ಹೊತ್ತಿಗೆ ಕಲಶಕುಂಭದಂತಾದನು. ಮತ್ತೆ ಬಿಸಕಾಂಡದಂತೆ ಪೂರ್ಣಕಾಂತಿಯನ್ನು ಪೊಂದಿದನು. ಸುಧಾರೋಚಿಯಿಂದ ಸಕಲ ದಂಪತಿಕುಲಗಳಿಗೂ ಸುಖವನ್ನುಂಟುಮಾಡಿದನು. ಎಲ್ಲೆಲ್ಲಿಯೂ ಹಾಲು ಚೆಲ್ಲಿದಂತೆ ಬೆಳದಿಂಗಳು ರಂಜಿಸುತ್ತಿತ್ತು.

ಆಗ ಸಾವಿತ್ರಿಯು ಕೆಲಸಗಳನ್ನೆಲ್ಲಾ ತೀರಿಸಿಕೊಂಡು ಬೆಳದಿಂಗಳು ಸ್ವಲ್ಪಸ್ವಲ್ಪ ಒಳಕ್ಕೆ ಬರುತ್ತಿದ್ದುದನ್ನು ನೋಡುತ್ತ ನಿಂತಿದ್ದಳು. ಕೋನೇರಯ್ಯನು ತನ್ನ ಕೊಠಡಿಯಿಂದ ಹೊರಗೆ ಬಂದು ಸಾವಿತ್ರಿಯನ್ನು ನೋಡಿ "ನಿನಗೆ ಬಂದು ಕಾಗದವುಂಟು ನೆನ್ನೆಯು ದಿವಸವೇ ಕೊಡಬೇಕೆಂದಿದ್ದೆನು. ಮರೆತುಹೋಯಿತು ಈಗಬೇಕೋ" ಎಂದನು. ಸಾವಿತ್ರಿಯು ಶರೀರದಲ್ಲಿ ನಡುಕವುಂಟಾಯಿತು "ನನಗೆ ಎಲ್ಲಿಂದ ಕಾಗದ ಬರಬೇಕು" ಎನಲು ನಿನ್ನ ಚಿಕ್ಕಪ್ಪನು ಬರೆದಿರುವನು. ಎಂದನು.

ಬರೆಯಲು ಕಾರಣವಿಲ್ಲವಲ್ಲ ಎಂದು ಸಾವಿತ್ರಿ ಹೇಳಲು—

ಕಾರಣವಿಲ್ಲವೇ ? ಇಲ್ಲವೆ ? ಎಂದು ಮೂರುಬಾರಿ ಕೇಳಿದನು.

ನಿಜವಾಗಿಯೂ ಇಲ್ಲವೆಂದು ಉತ್ತರ ಬರಲು ಕೋನೇರಯ್ಯನು

ಹಾಗಾದರೆ ನೀನು ಬರೆದಕಾಗದಕ್ಕೆ ಬದಲು ಹೇಗೆಬಂತು ? ಎಂದನು.

ನಾನು ಬರೆದ ಕಾಗದವು ಚಿಕ್ಕಪ್ಪನಿಗೆ ಸೇರಲೇಇಲ್ಲ.

ಅದು ನಿನ್ನ ಬಳಿಯಲ್ಲಿಯೇ ಇರುವುದು ಎಂದು ಸಾವಿತ್ರಿ ಹೇಳುತ್ತಲೂ ಕೋನೇರಯ್ಯನು ನನ್ನಲ್ಲಿ ಇಲ್ಲವೆಂದು ಹೇಳಲು ನಿನ್ನಲ್ಲಿಯೇ ಇದೆಯೆಂದು ಪ್ರತ್ಯುತ್ತರ ಬಂದಿತು.

ಕೋ—ನಿನಗೆಷ್ಟು ಬಾಯಿ ? ನನ್ನೊಡನೆ ವಾದಿಸುವೆಯಾ ?

ಸಾ—ನಿಜವನ್ನು ಹೇಳಿದವರ ನಾಲಿಗೆಯನ್ನು ಕೊಯ್ಯಬೇಕಲ್ಲವೇ ?

ಕೋ—ಛೀ ! ಪಾಪಿ ನಿನಗಾಗಿ ಊರುಗಳನ್ನೆಲ್ಲಾ ಸುತ್ತಿದುದಕ್ಕೆ ತಕ್ಕ ಉಪಕಾರವನ್ನೇ ಮಾಡುವೆ.

ಸಾ—ಈಗ ನಿನಗೆ ಅಪಕಾರವನ್ನೆಣಿಸಲಿಲ್ಲ. ಚಿಕ್ಕಪ್ಪನಿಗೆ ಮದುವೆಯ ಸಮಾಚಾರವು ಏಕೆ ತಿಳಿಯಬಾರದು ?

ಕೋ—ತಿಳಿದರೆ ಅವನು ಒಪ್ಪುವದಿಲ್ಲ

ಸಾ—ಚಿಕ್ಕಪ್ಪನೂ ನಾನೂ ಒಪ್ಪದಂತಹ ಮದುವೆ ಏಕಾಗಬೇಕು ?

ಕೋನೇರಯ್ಯನು ಆಗ ಕೋಪದಿಂದ ಪ್ರಯೋಜನವಿಲ್ಲ. ಸಮಾದಿಂದ ಒಪ್ಪಿಸಬೇಕು. ಇವಳ ಹಠಕೆ ನಾಶವಾಗುವವರೆಗೂ ಸುಖವಿಲ್ಲ. ಎಂದು ಯೋಚಿಸಿ

ಕೋ—ಸಾವಿತ್ರೀ ನಾನು ನಿನಗೆ ಅಣ್ಣನಲ್ಲವೇ ?

ಸಾ—ಅಹುದು ಯಾರು ಅಲ್ಲವೆಂದರು.

ಕೋ—ಹಾಗಾದರೆ ಅಣ್ಣನ ಮಾತನ್ನು ತಂಗಿಯು ಕೇಳಬೇಕಲ್ಲವೇ ?

ಸಾ— ತಂಗಿಯ ಹಿತವನ್ನು ಅಣ್ಣನು ಬಯಸ ಬೇಕಲ್ಲವೇ ?

ಈಗ ನಿನಗಾಗಿಯೇ ರಾಮಚಂದ್ರಯ್ಯನನ್ನು ಕರೆತಂದೆನಲ್ಲ ಅವನು ನಿನಗೆ ಸಕಲಾಭರಣಗಳನ್ನು ಇಡುವನು, ನೀನು ಮನೆಯಲ್ಲಿ ಯಜಮಾನಿಯಾಗುವೆ ಅತ್ತೆ ಮಾವಂದಿರ ಕಾಟವೂ ಇಲ್ಲ. ಇರುವ ಗಂಡನಿಗೆ ಸ್ವಲ್ಪ ಆದರವನ್ನು ತೋರಿಸಿಕೊಂಡಿದ್ದರೆ, ನೀನು ಸುಖಿಯಾಗಿರುವೆ.

ಸಾ—ಅಣ್ಣಾ ನೀನು ಹೇಳುವ ಮಾತುಗಳನ್ನು ನಾನು ಒಪ್ಪಲಾರೆನು ಈಗ ನನ್ನ ಜೊತೆಯವರನ್ನು ನೋಡು. ಎಲ್ಲರೂ ಹೇಗೆ ಬಾಳುತ್ತಿರುವರು ಅವರಿಗಿಂತಲೂ ಮೇಲಾಗಿ ಬದುಕಬೇಕೆಂದಿದ್ದೇನಲ್ಲ, ಎಂದು ಹೇಳಿ ಕಣ್ಣೀರು ಸುರಿಸುತ್ತಾ ಈತನನ್ನು ಮದುವೆಯಾದುದಾದರೆ, ನಾನು ಎಷ್ಟರಮಟ್ಟಿಗೆ ನನ್ನ ಆಶೆಗಳನ್ನು ಹೊಂದಿದ ಹಾಗಾಗುವುದು. ಅತ್ತೆ ಮಾವಂದಿರು ಇರಬೇಕು. ಅವರ ಶುಶ್ರೂಷೆಯನ್ನು ಮಾಡದ ಮೇಲೆ ನನ್ನಬಾಳೇಕೆ ? ನನಗೆ ಆಭರಣಗಳಲ್ಲಿ ಅಪೇಕ್ಷೆಯಿಲ್ಲ ಎಂದಳು.

ಕೋ—ಸಾವಿತ್ರೀ ಹಾಗಾದರೆ ನಿನಗೆ ರಾಮಚಂದ್ರಯ್ಯನನ್ನು ಮದುವೆಯಾಗಲು ಇಷ್ಟವಿಲ್ಲವೋ

ಸಾ—ಖಂಡಿತವಾಗಿಯೂ ಇಷ್ಟವಿಲ್ಲ.

ಕೋನೇರಯ್ಯನಿಗೂ ಸ್ವಲ್ಪ ಮನಸ್ಸು ಕರಗಿತು ಆಗ ಸಾವಿತ್ರಿಯು ಮುಖವನ್ನು ನೋಡಿ ಮನಸನೊಂದು ಯೋಚಿಸತೊಡಗಿದನು. ಕೂಡಲೇ ತನ್ನ ಸ್ವಕಾರ್ಯಗಳೂ, ಸ್ವಂತಲಾಭಗಳೂ ಹೊಳೆದವು ಇವಳಿಂದ ತನಗಾಗಬೇಕಾದುದೇನೂ ಇಲ್ಲವಾದರೂ ರಾಮಚಂದ್ರಯ್ಯನು ಆಗಲೇ ಗದ್ದೆಯನ್ನೂ ಹೊಲವನ್ನೂ ಸ್ವಾಧೀನಪಡಿಸಿರುವನು ಆದರೆ ಇನ್ನೂ

ಹೊರಬೇಕಾದುದು ಒಂದಿಲ್ಲ. ಎಂದು ಯೋಚಿಸಿ ತಲೆಗೆ ಸಾವಿತ್ರೀ! ನಿನಗು ಮೆಯು ನಿಷ್ಕರ್ಷೆಯಾಗಿದೆ, ಒಂದೇ ಮನಸ್ಸಿನವಳಾಗಿ ಬಿಟ್ಟಿರೋ ಒಪ್ಪದಿದ್ದರೂ ಮದುವೆ ಮುಂತಾದವು ನಿಲ್ಲುವುದಿಲ್ಲ. ಇನ್ನೊಂದು ವಾರಕ್ಕೆ ಲಗ್ನವಾಗುವದು. " ಎಂದು ಹೇಳಿ ಹೊರಟುಹೋದನು,

ಸಾವಿತ್ರಿಯು ಹಾಸಿಗೆಯನ್ನು ಹಾಸಿ ಮಲಗಿದಳು ನಿದ್ದೆ ಬರಲಿಲ್ಲ. "ಮದುವೆಯ ಕೆಲಸಗಳು ನಡೆಯುತ್ತಾ ಇವೆ, ಇನ್ನೊಂದು ವಾರಕ್ಕೆ ಸಂಕಲೆ ಪ್ರಾಪ್ತಿಯಾಗುವುದು. ಈತನನ್ನು ಮದುವೆಮಾಡಿಕೊಂಡರೆ ನನ್ನ ತಾಯಿಗೂ ಅಣ್ಣನಿಗೂ ಸಮಾಧಾನ. ತಾಯಿಯ ಮನಸ್ಸನ್ನು ನೋಯಿಸಲು ಇಚ್ಛೆಯಿಲ್ಲ. ಮದುವೆಯನ್ನು ಮಾಡಿಕೊಳ್ಳಲೇ ? ನನ್ನ ಅದೃಷ್ಟವು ಹಾಗೆಯೇ ಇದ್ದುದಾದರೆ ನಾನು ಮಾಡುವದೇನು ? ದೃಢಚಿತ್ತದಿಂದ ಈತನೇ ಪತಿಯೆಂದು ನಂಬಲೇ ? ಪೂರ್ವದಲ್ಲಿ ಮಹಾನುಭಾವರಾದ ಋಷಿಗಳನ್ನು ಸೇವಿಸಿಕೊಂಡು ಸುಶೀಲೆಯರಿರಲಿಲ್ಲವೇ? ನನಗೆ ಏನೂ ತೋಚುವುದಿಲ್ಲ. ಈ ನರಕವನ್ನು ಸಹಿಸಿಕೊಳ್ಳುವದಕ್ಕಿಂತಲೂ ನನ್ನ ಆಲೋಚನೆಯೇ ಒಳ್ಳೆಯದು. ಹಾಗಾದರೆ ಪ್ರಾಣವನ್ನು ಬಿಡಲೇ ? ಹೇಗೆ ಬಿಡುವುದು ? ವಿಷವಿದ್ದರೆ ಪಾನಮಾಡುತಲಿದ್ದೆನಲ್ಲಾ ! ಅಥವಾ ಕೆರೆಯಲ್ಲಿ ಬೀಳಲೇ ? ಕೆರೆಯಲ್ಲಿ ನೀರಿಲ್ಲವಲ್ಲ. ಏನುಮಾಡಲಿ ? ಚಿತ್ರಾವತಿಯಲ್ಲಿನ ಬಾವಿಯಲ್ಲಿ ನೀರಿದೆ. ಅಲ್ಲಿ ಬೀಳುವುದು ಲೇಸೆಂದು ಎದ್ದಳು.

ಚಂದ್ರನು ಸ್ವಲ್ಪ ಮೇಲಕ್ಕೆ ಏರಿದ್ದನು. ಎಲ್ಲರೂ ಮಲಗಿ ನಿದ್ದೆಯನ್ನು ಮಾಡುತ್ತಿದ್ದಾರೆ. ನೋಡಿದಳು. ಅಷ್ಟು ದೂರ ಒಬ್ಬಳೇ ಹೋಗಬೇಕು. ತನ್ನಿಂದ ಸಾಧ್ಯವೇ ? " ಸಾಧ್ಯವಲ್ಲದೇ ಏನು ? ಹೆದರಿಕೆಯೆಂತರೇನು ? ಪ್ರಾಣದಮೇಲೆ ಆಸೆಯಿದ್ದವಳಿಗೆ ಹೆದರಿಕೆ, ನನಗೇಂಥದು " ಮನಸ್ಸ್ಥೈರ್ಯಮಾಡಿದಳು. " ನನಗೆ ಸಂಕಟವೆಲ್ಲವೂ ಪರಿಹಾರವಾಗುವದು, ನನಗೆ ಈ ಲೋಕವೇ ಬೇಡ " ಮೆಲ್ಲಮೆಲ್ಲಗೆ ಬೀದಿಯ ಬಾಗಿಲನ್ನು ತೆರೆದು ಮೆಲ್ಲಗೆ ಮುಚ್ಚಿದಳು. ಎಂತಹ ಬೆಳದಿಂಗಳು? ಸೂಜಿ ಚೆಲ್ಲಿದರೂ ಎತ್ತಬಹುದು. ರಸ್ತೆಯಲ್ಲಿ ಯಾರೂ ಇರಲಿಲ್ಲ. ಮನೆಯ ಮುಂದೆ ಸ್ವಲ್ಪನಿಂತಳು. " ಸಾಯಬೇಕಲ್ಲವೆ ? ಆ ಮುದುಕನನ್ನು ಮದುವೆಯಾಗುವದಕ್ಕಿಂತ ಬಾವಿಯಲ್ಲಿ ಬೀಳುವುದೇ ಲೇಸಲ್ಲವೇ ? ಅಹುದು " ಆದರೆ

ಸಾವಿತ್ರೀ! ಒಂದು ಚಪಲಪಡೆಯಲ್ಲ. ಅದೂ ಇಲ್ಲವೇ? ಅದು ಏಕೆ? "ಮದುವೆಯಾದರೆ ಸ್ಥಿರಭಾವವುಂಟಾಗುವೆನು. ಒಬ್ಬರಿಗೆ ಕೈಯನ್ನು ಕೊಟ್ಟು ಮತ್ತೊಬ್ಬರಿಗೆ ಸೆರಗನ್ನು ಕೊಡಲಾರೆ, ಆ ಕೇಡಿಗನಾದ ಮೂರ್ತಿಯು ಮಾತನಾಡದಿದ್ದರೆ ಮನಸ್ಸು ಏಕರೀತಿಯಾಗಿರುತ್ತಿತ್ತು, ಆದರೇನು? ಈಗ ಅದನ್ನು ಜ್ಞಾಪಕಕ್ಕೆ ತಂದುಕೊಳ್ಳಕೂಡದು. ಮೂರ್ತೀ, ಎಂತಹ ಮೂರ್ತೀ! ಅಷ್ಟು ಮಾತುಗಳನ್ನಾಡಿದಾಗ ನಾನೊಂದನ್ನೂ ಆಡಲಿಲ್ಲ. ಅಯ್ಯೋ ಏನೆಂದು ತಿಳಿದನೋ? ಆ ಅದೃಷ್ಟವೂ ಉಂಟೆ? ಇಲ್ಲ, ಅವನ ತಂದೆತಾಯಿಗಳು ಒಪ್ಪುವುದಿಲ್ಲ. ಅವನಿಗೆ ಅದು ತಿಳಿಯದು. ನಾನು ಬಲ್ಲೆ. ಅದು ಹುಚ್ಚು ಆಲೋಚನೆ ಆ ಆಶೆಯು ನಿರಾಶೆ. ಮತ್ತು ಈತನನ್ನು ಮದುವೆಯಾಗಿ ಸ್ವಲ್ಪ ಕಷ್ಟಬಂದಾಗ ಮೂರ್ತಿಯಾಗಿದ್ದರೆ ಎಂದು ಕೊಳಯುವುದಲ್ಲ! ಮದುವೆಯಾದರೂ ಸುಖವಿಲ್ಲ. ನನಗೆ ಸಾವು ಲೇಸು, ಎಲೈ ಯಮನೇ ನನಗೆ ದಾರಿಯನ್ನು ತೋರಿಸು," ಎಂದು ಬೇಗಬೇಗನೆ ರಸ್ತೆಯನ್ನು ದಾಟಿದಳು. ಒಂದೊಂದು ನಾಯಿಯು ಅಡ್ಡಲಾಗಿ ಹೋಗುವುದು. ಒಂದೊಂದು ನಾಯಿಯು ಬೊಗಳುವುದು. ಒಂದೆರಡು ಕತ್ತೆಗಳು ದಾರಿಯಲ್ಲಿ ನಿಂತಿದ್ದವು. ನದಿಯ ಕಡೆಗೆ ಹೊರಟಳು. ಆ ನಡುರಾತ್ರಿ ಆ ಬೆಳದಿಂಗಳಲ್ಲಿ ಸಾವಿತ್ರೀ, ನಿನಗೆ ಎಷ್ಟು ಧೈರ್ಯ? ಏಕಾಕಿನಿಯಾಗಿ, ಬೇಡ, ಹಿಂದಿರುಗು. ಏನು? ಹಿಂದಿರುಗದೇ ಒಂದೇರೀತಿಯಾಗಿ ಹೋಗುತ್ತಿರುವೆಯಲ್ಲಾ "ಪಿಶಾಚಿಯಿಂದೇನು? ಭೂತದಿಂದೇನು? ನಾನೇ ಭೂತವಾಗಿರುವೆನು" ಎನ್ನುತ ನದಿಯ ಮಳಲನ್ನು ಸೇರಿದಳು. ಭಾವಿಯ ಕಡೆಗೆ ತಿರುಗಿಕೊಂಡು ಹೊರಟುಹೋದಳು

---

೧೨ ನೆಯ ಪರಿಚ್ಛೇದ.

"ರಾಜ, ನನಗೆ ಮನಸ್ಸಿನಲ್ಲಿ ಒಂದುವಿಧವಾದ ಭೀತಿಯುಂಟಾಗಿದೆ ಕಾರಣವೇನೋ?

" ಈ ಬೆಳದಿಂಗಳನ್ನು ನೋಡಿದರೆ ನನಗೆ ಮನಸ್ಸಿನಲ್ಲಿ ಒಂದುವಿಧವಾದ ಪ್ರೀತಿಯುಂಟಾಗುವುದು, ಕಾರಣವೇನೋ?

-" ರಾಜ, ಹಾಸ್ಯವಲ್ಲ ಇಲ್ಲಿ ಮುಟ್ಟಿನೋಡು ನನ್ನ ಎದೆಯು ಹೇಗೆ ಹೊಡೆದುಕೊಳ್ಳುವುದು.

" ನಿಜ. ಅತಿಯಾಗಿ ಪ್ರೇಮವಿಟ್ಟರೆ ಹಾಗೆ ಆಗುವದುಂಟು.

" ನನಗೆ ಯಾರಲ್ಲಿಯೂ ಅಪೇಕ್ಷೆಯಿಲ್ಲವಲ್ಲ.

" ಅಯ್ಯೋ ಪಾಪ, ಈಗ ಆ ಸಾವಿತ್ರಿಯೇನಾದಳೋ ?

" ಏನಾದಳೋ

" ಅವಳಮೇಲೆ ಪ್ರೀತಿಯಿಲ್ಲವೇನು ? "

" ನನ್ನನ್ನು ಕೇಳಬೇಡ, ಈಗ ನನಗೆ ಈರೀತಿ ಹೆದರಿಕೆಯೇಕಾಗುತ್ತದೆ ತಿಳಿಸು. "

" ಸ್ವಲ್ಪತಾಳು, ನನಗೂ ಎದೆಯಲ್ಲಿ ದಡ್ ಎಂದು ಹೊಡೆಯಿತು ಇದು ಏಕೆ ? "

" ಈಗ ಎಷ್ಟುಗಂಟೆಯಾಗಿರಬಹುದು ? "

" ೧೧॥ ಗಂಟೆಯಾಗಿರಬಹುದು "

" ಹಾಗಾದರೆ ಈ ಬೆಳದಿಂಗಳಿನಲ್ಲಿ ಊರು ಸುತ್ತೋಣ ಬಾ. "

" ನನಗೆ ಬೇಡ "

" ಈಗ ಸಾವಿತ್ರಿಯು ಜತೆಯಲ್ಲಿ ಇದ್ದಿದ್ದರೆ ? "

" ಇದೇಕೆ, ಹೀಗೆ ಮಾತನಾಡುವೆ, ಬರುತ್ತೇನೆ, ನಡೆ. ಇಬ್ಬರೂ ಮನೆಯನ್ನು ಬಿಟ್ಟುಹೊರಟರು "

ರಾ-- " ಈ ಎರಡು ದಿವಸಗಳಿಂದಲೂ ನೀನು ಇಲ್ಲದ್ದು ಬಹಳ ಬೇಜಾರಾಗಿತ್ತು "

ಮೂರ್ತಿಯು—" ಲೋ, ಗುರುವಾ, ಯಜಮಾನರೆದ್ದುಬಂದು ಕೇಳಿದರೆ, ರಾಜಪ್ಪನೂ, ನಾನೂ, ಊರುನೋಡಿಕೊಂಡು ಬರಲು ಹೊರಟರೆಂದು ಹೇಳು " ಎನ್ನುತ್ತ "ನೀನು ಏನು ಹೇಳಿದೆ ? " ಎಂದು ರಾಜನ ಕಡೆಗೆ ತಿರುಗಿದನು.

ರಾಜ-- " ನನಗೆ ಎರಡು ದಿವಸಗಳಿಂದಲೂ ಬೇಜಾರಾಗಿತ್ತು "

ಮೂ-- " ನನಗೂ ಹಾಗೆಯೇ, ಮೊನ್ನೆಯ ದಿವಸದಿಂದ ನನಗೆ ಈ ಪ್ರಪಂಚವೇ ಬೇಡವಾಗಿದೆ.

ರಾಜ – ಅದೇನು ?

ಮಾ— ಆ ಸಾವಿತ್ರಿಯು ಕೈಕೊಟ್ಟಳು, ಮಾತನಾಡಿಸಿದರೆ ಮಾತ ನಾಡಲಿಲ್ಲ.

ರಾಜ— ' ಓಹೋ ! ಆಗಲೇ ಮಾತನಾಡಿಬಿಟ್ಟೆಯಾ ?

ಮಾ— " ನನ್ನ ತಂಗಿಯ ಸಹಾಯದಿಂದ ಮಾತನಾಡಿದೆನು, ಆದರೆ ಸಾರ್ಥಕವಾಗಲಿಲ್ಲ. ತಾಳು, ಇದೇನು! ರಾಜ ನನಗೆ ಗಳಿಗೆಗೆ ಒಂದಾವರ್ತಿ ಧಕ್ ಎಂದು ಹೊಡೆಯುತ್ತದೆ. "

ರಾ— ಅದೇನೋ ನೀನು ಏನೆಂದು ಹೇಳಿದೆ !

ಮಾ—ಹೇಳುವದೇನು? ಅವಳ ಗುಣವನ್ನು ಕಟ್ಟಿಕೊಳ್ಳಬೇಡವೆಂದು

ರಾ- ಅವಳೇನೆಂದಳು ?

ಮಾ— ಒಂದನ್ನೂ ಹೇಳಲಿಲ್ಲ.

ರಾ— ನೀನಿನ್ನೇನನ್ನ ಹೇಳಿದೆ ?

ಮಾ— ಆಸ್ತಿಯುಂಟೆಂದು ಬೆರಿಯಬೇಡ, ಆಸ್ತಿಯು ಹೆಚ್ಚಲ್ಲ, ಸುಖವಾಗಿರಬೇಕಾದರೆ, ಬೇರೆ ಆಲೋಚನೆಯನ್ನು ಮಾಡೆಂದು ಹೇಳಿದೆನು

ರಾ— ಅದಕ್ಕೇನೆಂದಳು ?

ಮಾ- " ಅದಕ್ಕೂ ಸುಮ್ಮನಿದ್ದಳು. "

ಹೀಗೆ ಮಾತನಾಡುತ್ತ ನದಿಯ ಕಡೆಗೆ ಬಂದುಬಿಟ್ಟರು

ರಾ— " ಮರಳು ಎಷ್ಟು ಚೆನ್ನಾಗಿಗೆ ನೋಡಿದೆಯಾ ಮೂರ್ತಿ. "

ಮಾ— " ನನಗೆ ಈ ಭೀತಿಯು ಹೆಚ್ಚುತ್ತಲಿದೆ, ಈದಿನವೇಕೋ ಈರೀತಿಯಲ್ಲಾಗುವುದು. ನಾನು ಒಬ್ಬೊಬ್ಬನಾಗಿ ತಿರುಗಬಾರದ ಕಡೆಗಳಲ್ಲೆಲ್ಲಾ ಹೋಗುತ್ತಿದ್ದೆನು ಈಗ ಏನೆಂದು ಕೇಳಲಿ. "

ರಾ- ಕಡೆಗೆ ಏನೆಂದು ಹೇಳಿದೆ ?

ಮಾ— " ನನ್ನನ್ನು ಒಪ್ಪುವಿಯಾ, ಸಾವಿತ್ರೀ, ನನ್ನನ್ನು ಒಪ್ಪುವದಿಲ್ಲವೇ ? ಎಂದು ಕೇಳಿದೆನು ಸ್ವಲ್ಪತಾಳು, ಅದು ಯಾರೋ ಅಲ್ಲಿಹೋಗುವಂತಿದೆ

ರಾ— ಎಲ್ಲಿ ?

ಮಾ— ಆಗೋ, ಅಲ್ಲಿ ನೋಡು. ಚೆನ್ನಾಗಿ ಕಾಣಿಸುವದಿಲ್ಲ.

ರಾ— ನಿಂತಿರುವುದೋ ? ಚಲಿಸುವುದೋ ?

ಮಾ— ಚಲಿಸುತ್ತಿದೆ

ರಾ— ಬೇಗ ಬಾ ನೋಡೋಣ, ಆಮೇಲೆ ಅವಳೇನೆಂದಳು ?

ಮಾ— ಮಾತನಾಡಲಿಲ್ಲ, ಸುಮ್ಮನಿದ್ದಳು, ಪಕ್ಕದಲ್ಲಿ ತಿರುಗಿದಂತಿದೆ, ಬೇಗ ಬಾ.

ರಾ- ನೀನು ಪುನಃ ಕೇಳಲಿಲ್ಲವೇ ?

ಮಾ— ರಾಮಚಂದ್ರಯ್ಯನನ್ನೇ ಕಟ್ಟಿಕೊಳ್ಳುವಿಯಾ ! ಎಂದೆನು

ಆ ದೂರದಲ್ಲಿ ಕಾಣಿಸುತ್ತಿದ್ದ ವ್ಯಕ್ತಿಯು ಹತ್ತಿರಬಂದರು. ಕೊಂಚದೂರ ಮಾತ್ರ ಉಳಿದಿತ್ತು, ಸ್ವಲ್ಪ ಗುರ್ತಿಸಬಹುದಾಗಿತ್ತು.

ರಾ— ಅವಳೇನೆಂದಳು ?

ಮಾ— ಸುಮ್ಮನಿದ್ದಳು

" ಆಮೇಲೆ "

" ನನಗೆ ಕೋಪಬಂದು ಭಾವಿಯಲ್ಲಿ ಬೀಳೆಂದು ಹೇಳಿದೆನು ? "

" ಛೀ. ಪಳಿರೇಳಿರ ಅದು ಯಾರುನೋಡು, ಗೊತ್ತಾಯಿತೇ, ಓಡು ಓಡು , ಎಂದು ಇಬ್ಬರೂ ಓಡಿದರು ಮಾರ್ತಿ ... ಗಟ್ಟಿಯಾಗಿ, ಸಾವಿತ್ರಿ ತಂಗಿ ತಾಳು, ಬೇಡ ಬೇಡ, ಎನ್ನುತ್ತ ಊರ್ಧ್ವಶ್ವಾಸದಿಂದ ಹೋಗಿ ಸಾವಿತ್ರಿಯನ್ನು ಹಿಡಿದುಕೊಂಡನು

" ಅಯ್ಯೋ, ಈ ಭಾವಿಯೊಳ್, ಸ್ವಲ್ಪಹೊತ್ತಿದ್ದರೆ, ಅನಾಹುತವಾಗುತ್ತಿತ್ತಲ್ಲಾ. ಇದೇನು ಆಲೋಚನೆ ಮಾಡಿದೆ , ಎಂದನು ಮಾರ್ತಿಯು ಹೋಗಿದರಭಸಕ್ಕೆ ಸಾವಿತ್ರಿಗೆ ಮೈ ಜುಮ್ಮೆಂದು ಜ್ಞಾನತಪ್ಪಿತು.

ಪೂರ್ಣಚಂದ್ರನಿಗೆ ಬಹು ತೇಜಸ್ಸುಂಟಾಯಿತು. ಚಂದ್ರಕಾಂತಿ ಶಿಲೆಗಳಿಂದ ಭೂಮಿಯನ್ನು ಹೊದ್ದಿಸಿದಂತೆ ಎಲ್ಲೆಲ್ಲಿಯೂ ಕಾಣುವದು. ಆ ಚಿತ್ರಾವತಿಯ ನೀರಿನಮೇಲೆ, ಘಳಘಳನೆ ಯಾಮಿನೀನಾಥನು ನಗುತ್ತ ನಗುತ್ತ ಸ್ವಚ್ಛವಾದ ಅಲೆಗಳಲ್ಲಿ ಕಲೆತು ಕೊನೆಮೊದಲಿಲ್ಲದೆ ನಾಟ್ಯವನ್ನಾಡುತ್ತಿದ್ದನು. ಆ ಮರಳುರಾಶಿ, ಆ ಬಿಳಿದಾದ ಮಲ್ಲಿಗೆ ಹೂಗಳನ್ನು ಹಾಸಿದಂತೆ, ಮೃಣಾಳ ಕಾಂಡಗಳನ್ನು ಹರಡಿದಂತೆ ರಾಜಿಸುವ ತಿಂಗಳ ಸೊಬಗು

ಎಂತಹ ಯೋಗಿಯ ಮನಸನ್ನಾದರೂ ಕರಗಿಸುತ್ತಿತ್ತು. ನಿರ್ಮಲವಾದ ಆಕಾಶದಲ್ಲಿ, ಅಸ್ವಚ್ಛವಾದ ಚಂದ್ರನು ಯಾವರೀತಿಯಲ್ಲಿದ್ದನು ? ಸರೋವರದಲ್ಲಿನ ಪುಂಡರೀಕದಂತಿದ್ದನೇ ? ಇಲ್ಲವೋ ಸಾಣೆಯಕಲ್ಲಿನಮೇಲೆ ಕಸ್ತೂರಿಯನ್ನು ಸಿಕ್ಕಿಸಿ ಇಕ್ಕಿದ ಶ್ರೀಗಂಧದ ಮುದ್ದೆಯಂತಿರುವನೇ ? ಎಂತಿರುವನೋ ? ಮನೋಹರನಾಗಿ ಪೂರ್ಣಚಂದ್ರನಾಗಿರುವನು ಅಷ್ಟೇ. ನದಿಯ ಎರಡು ಕಡೆಗಳಲ್ಲಿಯೂ, ನೀರು ಹರಿಯುವುದು ಗೋಚರವಾಗುವಪರ್ಯಂತರವೂ, ಮರಳುರಾಶಿಯು ಕಾಣುವವರೆಗೂ, ಸಮತಾಮ್ರಕಾಚ್ಛ ವೀಚಿಗಳು ಏಳುತ್ತಿದ್ದವು

ಸಾವಿತ್ರಿಯನ್ನು ಮಲಗಿಸಿ, ಚಿತ್ರಾವತಿಯು ನೀರನ್ನು ಮುಖಕ್ಕೆ ತಟ್ಟಿ, ಕೈವಸ್ತ್ರದಿಂದ ಮುತ್ತಿಗೆಯು ಬೀಸಲಾರಂಭಿಸಿದನು. ದಕ್ಷಿಣಾನಿಲನು ಈ ಅವಸ್ಥೆಯನ್ನು ನೋಡಿ ಕನಿಕರದಿಂದ ತಾನೇ ಬಿರುಸಾಗಿ ಬೀಸಲಾರಂಭಿಸಿದನು. ರಾಜನು ಒಂದುಕಡೆಯಲ್ಲಿ ಚಿಂತಾಮಗ್ನನಾಗಿ ರಾಜನನ್ನೀಕ್ಷಿಸುತ್ತ ಕುಳಿತುಬಿಟ್ಟನು. ಸಾವಿತ್ರಿಯು ಕಣ್ಣುಬಿಟ್ಟಳು. ತಾನೆಲ್ಲಿರುವೆನೆಂಬುದು ತಿಳಿಯದೆ ಮನೆಯತೊಟ್ಟಿಯೆಂದು ಭಾವಿಸಿದಳು. ಇಷ್ಟು ಬೆಳದಿಂಗಳು, ತೊಟ್ಟಿಯಲ್ಲಿ ಎಲ್ಲಿ ಬರುವದು ? ತೊಟ್ಟಿಯಲ್ಲಿ ಇವರ್ಯಾರು ? ಮನಸ್ಸಿಗೆ ಭೀತಿಯುಂಟಾಯಿತು. "ಸಾವಿತ್ರೀ ಸಾವಿತ್ರೀ, ಸ್ವಲ್ಪಕುಳಿತುಕೋ „ "ಇದು ಯಾರುಕೂಗುವರು „ ಎಂದು ಚೆನ್ನಾಗಿನೋಡಿದಳು. ಕೂಡಲೇ ನಾಚಿಕೆಯಾಯಿತು, ಎದ್ದುನಿಂತಳು ಮನೆಯಕಡೆಗೆ ತಿರುಗಿದಳು. "ಸಾವಿತ್ರೀ ಕುಳಿತುಕೋ ಇದೇಕೆ ? ಇಲ್ಲಿಗೆ ಬಂದೆ ? ಒಂದು ಮಾತನಾಡು" ಸಾವಿತ್ರಿಯು ನೀರವವಾಗಿದ್ದಳು. ಯೋಚಿಸಿದಳು. "ಇದೇಕೆ ಇಲ್ಲಿರಬೇಕು ? ಇಷ್ಟುಹೊತ್ತಿನರಾತ್ರಿಯಲ್ಲಿ !

"ಏಕೆ ಮಾತನಾಡುವದಿಲ್ಲ"

ಸಾವಿತ್ರಿಯು ನಿಟ್ಟುಸಿರನ್ನು ಬಿಟ್ಟಳು

"ಮನಸ್ಸಿಗೆ ಏನನ್ನೂ ತಿಳಿದುಕೊಳ್ಳಬೇಡ, ನೀನು ಆದಿನದಲ್ಲಿಯೇ ನನಗೆ ಬಿಡಲುಕೊಟ್ಟಿಲ್ಲ. ರಾಮಚಂದ್ರಯ್ಯನನ್ನು ಕಟ್ಟಿಕೊಂಡರೂ ನನಗೆ ನಿನ್ನಮೇಲೆ ದ್ವೇಷವಿಲ್ಲ. ನನ್ನನ್ನು ಬೇಡವೆಂದರೂ ಸಮ್ಮತವೇ"

ಸಾವಿತ್ರಿಯು ತಟ್ಟನೆ ತಿರುಗಿನೋಡಿದಳು. ಆ ಚಂದ್ರಿಕೆಯಲ್ಲಿ ಸಾವಿತ್ರಿಯ ಮೊಗವು ವರ್ಣಿಸಲಸಾಧ್ಯವಾದ ಕಾಂತಿಯನ್ನು ತಾಳಿತ್ತು. ಅವಳ ಕಣ್ಣುಗಳೂ, ಮೂರ್ತಿಯ ಕಣ್ಣುಗಳೂ ಸೇರಿದವು. ಸಾವಿತ್ರಿಯ ಕಣ್ಣುಗಳಲ್ಲಿ ಒಂದೊಂದಾಗಿ ಅಶ್ರುಬಿಂದುಗಳು ಸುರಿದವು.

“ಸಾವಿತ್ರಿ, ನೀನು ನಾಳೆನಿಂದ ಯಾರಿಗೆ ಸೇರಿದರೂ ಚಿಂತೆಯಿಲ್ಲ ಈಗ ಈರಾತ್ರಿ ನನ್ನೊಡನೆ ಮಾತನಾಡಬೇಕು. ಇಲ್ಲವೇ ನೀನು ಅತಿಯಾಗಿ ಸಂಕಟಪಡುವೆ. ನಿನಗೆ ಮದುವೆಯಾದಮೇಲೆಯೂ ಸುಖವಿಲ್ಲ” ವೆಂದನು, ಆದರೂ ಸುಮ್ಮನಿದ್ದಳು.

ಆಗ ಮೂರ್ತಿಯು “ನಾನು ಕೂಡಿಸಲೇ” ಎಂದು ಕೇಳಲು ಬೇಡ. ವೆಂದಳು. ಹಾಗೆ ನಾನು ಬೇಡವಾದರೆ ಮನೆಗೆ ನೀನೊಬ್ಬಳೇ ಹೊರಡುವಿಯೋ? ಎನ್ನಲು ಹೌದೆಂದು ಹೇಳಿ ಸಾವಿತ್ರಿ ಮೇಲೆ ನೋಡುತ್ತಿರಲು, ಮೂರ್ತಿಯು ನೀನು ಕಠಿಣಹೃದಯೆ ಎಂದನು. ಸಾವಿತ್ರಿಯು ಮಾತನಾಡಲಿಲ್ಲ. ಆಗ ಮೂರ್ತಿಯು ಸಾವಿತ್ರಿ! ನೀನು ಮಾತನಾಡದಿದ್ದರೆ ನನ್ನೆದೆಯು ಒಡೆದುಹೋಗುವುದು. ಇಂತಹ ದುಃಖವನ್ನು ಸಹಿಸುವುದಕ್ಕಿಂತಲೂ ನನಗೆ ಮರಣವೇ—ಎಂದು ಮುಂದೆ ಮಾತನಾಡುತ್ತಿರಲು ಸಾವಿತ್ರಿಯು ತಟ್ಟನೆ ಮೂರ್ತಿಯ ಬಾಯನ್ನು ಮುಚ್ಚಿದಳು. ಮೂರ್ತಿಗೆ ಶರೀರದಲ್ಲಿ ರೋಮಾಂಚವುಂಟಾಗಿ ಮನದಲ್ಲೇ, ಹರ್ಷಪಟ್ಟು ಸಾವಿತ್ರೀ; ನನ್ನನ್ನು ಒಪ್ಪುವಿಯಾ. ಎಂದು ಕೇಳಲು ಆಕೆಯು, ಅದು ಜನ್ಮಾಂತರವಲ್ಲವೇ? ಎಂದು ಹೇಳಿದಳು.

ಇಲ್ಲ, ನನ್ನ ಮಾತಿಗೆ ಬದಲಿಲ್ಲ ನನ್ನನ್ನಾರು ತಡೆಯುವವರು? ಎಂದ ಮೂರ್ತಿಯ ಮಾತಿಗೆ, ಸಾವಿತ್ರಿಯು, ತಪ್ಪು ತಿಳುವಳಿಕೆ. ನಿಮ್ಮ ತಂದೆ ತಾಯಿಗಳು ಸುಮ್ಮನಿದ್ದಾರೆ? ಎನ್ನಲು ಮೂರ್ತಿಯು, ಸಾವಿತ್ರಿ, ನಿನ್ನನ್ನು ಬಿಟ್ಟರೆ ಇನ್ನೊಬ್ಬ ಪತ್ನಿಯು ನನಗೆ ಅವಶ್ಯಕವಿಲ್ಲ, ಅದಿರಲಿ! ನಮ್ಮ ತಂದೆ ತಾಯಿಗಳನ್ನು ಒಪ್ಪಿಸಿದರೆ ನೀನು ಒಪ್ಪುವಿಯೋ ಎನ್ನಲು, ನಾನು ಖಂಡಿತ ಒಪ್ಪಲಾರೆ, ಎಂದು ಹೇಳಿದಳು. ಅದೇಕೆಂದು ಮೂರ್ತಿಯು ಪ್ರಶ್ನೆಮಾಡಲು ನಾನು, ವೃಥಾ ದುರಾಶೆಗಳನ್ನಿಟ್ಟುಕೊಳ್ಳಲಾರೆ, ನನಗೆ ತಾವು ಸಿಗತಕ್ಕವರಲ್ಲ

ಮೂ—ನನ್ನ ತಂದೆತಾಯಿಗಳನ್ನು ಖಂಡಿತವಾಗಿಯೂ ಒಪ್ಪಿಸುವೆನು

ಸಾ— ಒಪ್ಪಿಸುವಿರೋ ? ಒಪ್ಪಿಸುವಿರೋ ?

ಮೂ— ಒಪ್ಪಿಸುವೆನು ಖಂಡಿತ ಒಡಂಬಡಿಸುವೆನು

ಆಗ ಸಾವಿತ್ರಿಯ ದೇಹವು ಮೂರ್ತಿಯ ಮೈಯನ್ನು ಸೋಕಿತು ವಾಚಕರೆ, ಹೇಳಲು ನಾಚಿಕೆಯಾಗುವದು ಮೂರ್ತಿಯು ಸಾವಿತ್ರಿಯನ್ನು ಎರಡುಮೂರು ಬಾರಿ ಚುಂಬಿಸಿ ದೃಢವಾಗಿ ಆಲಿಂಗಿಸಿದನು. ಕೂಡಲೆ ಜತೆಯಲ್ಲಿ ರಾಜನು ಬಂದಿದ್ದುದು ಜ್ಞಾಪಕಕ್ಕೆ ಬರಲು ತಿರುಗಿನೋಡಿದನು. ರಾಜನು ಮರಳಿನ ಮೇಲೆ ಮಲಗಿದ್ದನು.

ಸಾ— ನಾನು, ಮನೆಗೆ ಹೋಗಬೇಕು.

ಮೂ— ಸ್ವಲ್ಪ ತಾಳು, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡು ಆಮೇಲೆ ಹೋಗೋಣ

ಸಾ— ನಾನು ಮನೆಯ ಬಾಗಿಲನ್ನು ತೆರೆದು ಬಂದಿರುವೆನು.

ಮೂ— ಚಿಂತೆಯಿಲ್ಲ ಇರಲಿ !

ಸಾ— ಯಾರಾದರೂ ಕಳ್ಳರು ಪ್ರವೇಶಿಸಿದರೆ ?

ಮೂ— ನಮ್ಮ ಮನೆಯಲ್ಲಿ ಜವಾನರು ಮಲಗುವರು, ಆ ಬೀದಿಯಲ್ಲಿ ಕಳ್ಳರು ಬರಲು ಧೈರ್ಯವಿಲ್ಲ.

ಸಾ— ಈಗ ಇಲ್ಲಿದ್ದು ಏನುಮಾಡಬೇಕು ?

ಮೂ— ಮೊನ್ನೆಯ ದಿವಸ ಮಾತನಾಡಿದರೆ, ನೀನೇಕೆ ಉತ್ತರವನ್ನು ಕೊಡಲಿಲ್ಲ ?

ಸಾ— ನನಗೆ ಆಗ ಹೆದರಿಕೆಯಾಗಿತ್ತು.

ಮೂ— ಅಷ್ಟೊಂದು ಕೇಳಿಕೊಂಡೆನಲ್ಲ

ಸಾ— ಅಹುದು, ಆಗ ನನಗೆ ಸರಿಯಾದ ಜ್ಞಾನವಿರಲಿಲ್ಲ ವಿವಿಧಾಲೋಚನೆಗಳು ಮನಸ್ಸಿನಲ್ಲಿ ತುಂಬಿದ್ದುವು

ಮೂ— ಈಗ ರಾಮಚಂದ್ರಯ್ಯನು ಎಲ್ಲಿರುವನು ?

ಸಾ— ನಾಗೋಡಿಯಲ್ಲಿ

ಅಲ್ಲೇನು ಕೆಲಸವೆಂದು ಮೂರ್ತಿ ಕೇಳಲು, ಮದುವೆ ಕೆಲಸ

ವೆಂದು ಉತ್ತರ ಬಂತು. ಸರಿಸರಿ ನಡೆ ಮನೆಗೆ ಹೋಗೋಣವೆಂದು ಇಬ್ಬರೂ ಎದ್ದರು. ದಾರಿಯಲ್ಲಿ ಮೂರ್ತಿಯು ಸಾವಿತ್ರೀ, ಕೋಪಿಸಿಕೊಳ್ಳಬೇಡ ನಿನಗೆ ಒಂದು ಮಾತನ್ನು ಕೇಳುವೆನು! ಎನ್ನಲು, ಸಾವಿತ್ರಿಯು— ಕೋಪವೇಕೆ? ಎಂದಳು, ಹಾಗಾದರೆ, ಹತ್ತಿರ ಬಾ ಎಂದು ಕರೆದನು. ಹತ್ತಿರಕ್ಕೆ ಬಂದ ಸಾವಿತ್ರಿಯನ್ನು ನೋಡಿ ರಸಿಕನಾದ ಮೂರ್ತಿಯು,-ಮೇಲೆ ನೋಡು. ಆ ಚಂದ್ರನಲ್ಲಿ ಈಗ ಕಳಂಕವು ಕಾಣುವುದೇ? ಎಂದನು. ಸಾವಿತ್ರಿ ಮೇಲೆ ನೋಡಿದಳು, ಆ ಮುಖಚಂದ್ರನ ಮೇಲೆ ಕುಮುದಿನೀಚಂದ್ರನು ಪೂರ್ಣವಾಗಿ ಪ್ರಸರಿಸಿ ಮೆಲ್ಲಮೆಲ್ಲಗೆ ತನ್ನ ಅಧರಗಳನ್ನು ಸಾವಿತ್ರಿಯ ಅಧರಗಳಿಗೊತ್ತಿ ಚುಂಬಿಸಿದನು.

ಮೂ— "ರಾಜ, ಏಳು, ಹೊರಡೋಣ

---

೧೩ ನೆಯ ಪರಿಚ್ಛೇದ.

ಮರದಿನ ಪ್ರಾತಃಕಾಲದಲ್ಲಿ ಕೋನೇರಯ್ಯನು ಹಳ್ಳಿಗೆ ಹೋಗಿ ಬರಲು ಪ್ರಯತ್ನಪಟ್ಟನು, "ಮದುವೆಗೆ ಅನುಕೂಲವಾದವುಗಳು ಏನಾದರೂ ಸಿಗಬಹುದು, ಒಬ್ಬೊಬ್ಬ ರೈತನಹತ್ತಿರ ಎರಡೆರಡು ಕೊಳಗ ಅಕ್ಕಿಯನ್ನು ತರಬೇಕು, ಹುಣಿಸೇಹಣ್ಣನ್ನು ಕೇಳದ ಮಾಡಬೇಕು, ಹೂಕಾಸುಗಳು ಸಿಕ್ಕಿದರೆ ಅದನ್ನೂ ತರಬೇಕು." ಎಂದೆನುತ್ತ ಹೊರಟುಹೋದನು. ಹಳ್ಳಿಯು ಬಹಳ ದೂರವಿರಲಿಲ್ಲ, ಸಮೀಪದಲ್ಲಿ ೨ ಮೈಲಿದೂರದಲ್ಲಿತ್ತು. ಅಲ್ಲಿಂದ ಕೆಲವು ಪದಾರ್ಥಗಳನ್ನು ತೆಗಿಸಿಕೊಂಡು ಹಿಂತಿರುಗಿ ಬರುವಾಗ ೧೧ ಘಂಟೆಯಾಗಿ ಹೋಯಿತು. ಮನೆಗೆ ಬರುವಾಗ ತಪಾಲು ಜವಾನನು ಒಂದು ಕಾಗದವನ್ನು ಕೈಗೆ ಕೊಟ್ಟನು. "ಕ್ಲೋಸ್‌ಪೇಟೆ, ಕ್ಲೋಸ್‌ಪೇಟೆಯಿಂದ ಬರೆಯುವವರಾರು" ಬಳಗೆ ಕಾಗದವನ್ನು ಒಡೆದು ನೋಡಿದನು. "ಚಿಕ್ಕಪ್ಪ ಬರೆದಕಾಗದ, ಓಹೋ, ವಿಪರೀತವಾಗುವದು.

ಲ— "ಈಗೇನು ಮಾಡೋಣ?

ಕೋ— ಏನು ಮಾಡುವುದೋ ದಿಕ್ಕೇ ತೋಚುವುದಿಲ್ಲ.

ನಾನು ಇದುವರೆಗೂ ಪಟ್ಟ ಕಷ್ಟಗಳು ವ್ಯರ್ಥವಾಗುವುವು. ಏನು ಬರೆದಿರುವನೊ, ಸರಿಸರಿ. ಇನ್ನು ನಾಲ್ಕು ದಿವಸಗಳಿಗೆ ಇಲ್ಲಿಗೆ ಬರುವನಂತೆ, ಇನ್ನು ಸಾವಿತ್ರಿಯ ಮದುವೆಯು ೬ ದಿವಸಗಳು ಉಳಿದಿದೆ ಎಂದುಕೊಳ್ಳುತ್ತ ಮನೆಯೊಳಗೆ ಬಂದು ಸಾಮಾನುಗಳನ್ನು ಹಳ್ಳಿಯವರಿಂದ ಇಳಿಗಿಡಿಸಿ, ಆಲೋಚಿಸಲು ಪ್ರಾರಂಭಿಸಿದನು

ಲಕ್ಷ್ಮಮ್ಮ— ಊಟಕ್ಕೇಳಿ, ಹೊತ್ತಾಯಿತಲ್ಲಾ

ಕೋ— ಅಯ್ಯೋ ನನಗೆ ಊಟಬೇಡ,

ಲ— ಅದೇನು ಅಂಥಾದ್ದು ?

ಕೋ— ನನ್ನ ಅದೃಷ್ಟಕ್ಕೇನು ಮಾಡಲಿ ?

ಲ— ಏನಾಯಿತು ? ಏನಾಯಿತು ?

ಕೋ— ನನ್ನ ಚಿಕ್ಕಪ್ಪನು ನಾಲ್ಕು ದಿವಸಗಳಲಿ ಬರುವನಂತೆ.

ಲ— ಬರಲಿ, ಬಂದರೆ ನಿಮಗೆ ಅದೃಷ್ಟವು ಕೀಳಾಯಿತೋ ?

ಕೋ— ನಿನಗೆ ಗೊತ್ತಿಲ್ಲ.

ಲ— ಅದೇನು ಹೇಳಿ, ನಾನೂ ಸ್ವಲ್ಪ ಕೇಳುವೆನು

ಕೋ— ಒಂದು ಕೆಲಸಕ್ಕೆ ಕೈ ಹಾಕಿದ್ದೆನು ಅದು ಈಗ ನಡೆಯುವುದೋ ಇಲ್ಲವೋ ಅನುಮಾನ

ಲ— ಅಯ್ಯೋ ನೀವು ಕೈ ಹಾಕಿದ್ದು ಆಗದೇನು

ಕೋ— "ಹಾಗಲ್ಲವೇ ? ನನಗೆ ನಾಗೋಡಿಯಲ್ಲಿ ಸ್ವಲ್ಪ ಜಮೀನು ಸಿಕ್ಕುವಂತೆ ಮಾಡಿಕೊಂಡಿದ್ದೆನು."

ಲ— ಈಗಲೂ ಸಿಗುವುದಿಲ್ಲವೇ ?

ಕೋ— ನಿನ್ನ ಚಿಕ್ಕಮಾವ ಬಂದರೆ ಸಿಗುವುದಿಲ್ಲ. ಸಾವಿತ್ರಿಯನ್ನು ರಾಮಚಂದ್ರಯ್ಯನಿಗೆ ಕೊಟ್ಟು ಮದುವೆ ಮಾಡಿದರೆ ರಾಮಚಂದ್ರಯ್ಯನು ೨೦ ಖಂಡುಗ ಗದ್ದೆಯನ್ನು ಕೊಡುವನೆಂದು ಮಾತು. ಈಗಾಗಲೇ ಸ್ವಲ್ಪವನ್ನು ಕೊಟ್ಟು ಇರುವನು.

ಲ— "ನಿಮ್ಮ ಚಿಕ್ಕಪ್ಪನು ಈ ಮದುವೆಗೆ ಒಪ್ಪಲಾರನೋ ?

ಕೋ— "ಖಂಡಿತವಾಗಿಯೂ ಒಪ್ಪುವದಿಲ್ಲ

ಲ—" ನನಗೆ ಒಂದು ತೋರುವದು. ಮದುವೆಯನ್ನು ನಾಗೋಡಿಯಲ್ಲೇ ಮಾಡಿದರೆ,

ಕೋ—" ಅದೂಸರಿ! ನಮ್ಮ ಚಿಕ್ಕಪ್ಪನು ಇನ್ನು ನಾಲ್ಕು ದಿವಸಗಳಿಗೆ ಬರುವನು, ಮದುವೆಯು ೬ ದಿವಸಗಳವೆ ಒಂದುವೇಳೆ ಎಂದರೆ, ಮದುವೆಯು ನಾಗೋಡಿಯಲ್ಲಿ ಎಂದು ತಿಳಿಯುವುದು ಅಲ್ಲಿಗೆ ಬರುವ ಹೊತ್ತಿಗೆ ಮುಹೂರ್ತ ನಡೆಯುತ್ತಿರುವುದು.

ಇ ತಹ ವಿಷಯಗಳಲ್ಲಿ ಹೆಂಗಸರಿಗೆ ಬಹಳಬೇಗ ಆಲೋಚನೆಗಳು ಹೊಳೆಯುವವು.

ನಮಗೆ ಆಸ ಭವದಲ್ಲಿರುವುದೇನೆಂದರೆ— ಈ ಪ್ರಪಂಚದಲ್ಲಿ ಎಂತಹ ಕಾರ್ಯಗಳಾಗಬೇಕಾದರೂ ಹೆಂಗಸರೇ ಮುಖ್ಯಭಾಗಿಗಳು ಕಾರಣಕರ್ತರಾಗಿರುತ್ತಾರೆ. ಅನೇಕಸಂದರ್ಭಗಳಲ್ಲಿ ಅವರು ಕೊಡುವ ಸಲಹೆಗಳಿಂದಲೇ ಕಾರ್ಯಾರಂಭವಾಗುವುದು. ರಾಜಕಾರ್ಯಗಳು, ನ್ಯಾಯವಿಮರ್ಶೆಗಳು, ಇತರ ವಿಷಯಗಳು, ಉದ್ಯೋಗಸ್ಥರ ಮನೆಗಳಲ್ಲಿ "ಅಮ್ಮಾವರಿಗೆ" ತಿಳಿಯದೇ ಹೋಗುವುದಿಲ್ಲ. ಒಂದೊಂದುವೇಳೆ ಯಜಮಾನರ ಒಳಿಯಲ್ಲಿ ಬಳ್ಳಿಯು ಬಾಗಬೇಕಾದರೂ "ಅಮ್ಮಾವರ" ಶಿಫಾರಸು ಅತ್ಯಾವಶ್ಯಕ. ಇವೆಲ್ಲವೂ ಏಕೆ? ನಮ್ಮ ಭಾರತಮಹಿಳೆಯರು ಸಾಧಾರಣರಲ್ಲ. "ಧರೆಯೊಳ್ ನಾನಾ ಚಮತ್ಕಾರವಂ" "ಅರಿಯಬಲ್ಲೊಡೆ ಮಂತ್ರಿಯಾಗು" ಎನ್ನುವಂತೆ, ಗೃಹಸಾಮ್ರಾಜ್ಯಕ್ಕೆ ತಕ್ಕ ಚಮತ್ಕಾರಗಳೆಲ್ಲವನ್ನೂ ಬಲ್ಲರು ಮತ್ತು ಈ ಚಮತ್ಕಾರಗಳನ್ನು ಅರಿಯುವಿಕೆಯೇ ಮಂತ್ರಿಸ್ಥಾನಕ್ಕೆ ಪೂಜ್ಯವು. ಪತಿವ್ರತೆಯಾದ ಹೆಂಗಸು ತನ್ನ ಪತಿಗೆ ಸ್ವಲ್ಪವೂ ಕಳಂಕವನ್ನುಂಟುಮಾಡದೆ, ಆತನ ದೇಹಾರೋಗ್ಯ ಪೋಷಣೆಯಲ್ಲಿಯೂ, ಆಚಾರವ್ಯವಹಾರಗಳಲ್ಲಿಯೂ, ಸಂಸಾರದಲ್ಲಿಯೂ, ತಾನೂ ಏಕೀಭವಿಸಿ ಊಟದಕಾಲದಲ್ಲಿ ತಾಯಿಯಂತೆಯೂ, ಶಯನಕಾಲದಲ್ಲಿ ಬೆಲೆವೆಣ್ಣಿನಂತೆಯೂ, ಯೋಚನಾಕಾಲದಲ್ಲಿ ಮಂತ್ರಿಯಂತೆಯೂ, ಇರಬೇಕೆಂದು ಹಿರಿಯರು ನುಡಿಯುವರಲ್ಲವೇ? ಯಾವಾಕೆಯು ಹೀಗಿರುವಳೋ ಅಂತಹವಳನ್ನು ಕುಲಸ್ತ್ರೀರತ್ನವೆಂದು ಹೊಗಳುವರು. ಆದುದರಿಂದಲೇ ನಮ್ಮ ಸ್ತ್ರೀಮಂಡಲಿಯು

ಗೃಹರಾಜ್ಯದಲ್ಲಿನ ಉತ್ಕೃಷ್ಟವಾದ ಮಂತ್ರಿಪದವನ್ನಲಂಕರಿಸಿ, ಮನೆಗೆ ಬಂದ ಸ್ವಾಮಿಯ ಮುಖಕಾಂತಿಯಿಂದಲೇ ಮನೋಭಾವವನ್ನು ಕಂಡುಹಿಡಿದು ಗುರುವಾದವನು, ಯಾವರೀತಿ ತನ್ನ ಮನಸ್ಸಿನಲ್ಲಿದ್ದುದನ್ನು, ಶಿಷ್ಯನಿಂದ, ಆಶೆಯನ್ನು ತೋರಿಸಿಯೂ, ನಯದಿಂದಲೂ, ಭಯದಿಂದಲೂ, ಮಾಡಿಸುವನೋ ಅದೇರೀತಿಯಲ್ಲಿ ತಾವು ಹೇಳಿದಂತೆಯೂ, ತಮ್ಮ ಹೃದಯಗಳಲ್ಲಿರುವಂತೆಯೂ, ತಮ್ಮ ಪತಿಗಳಿಂದ ಮಾಡಿಸುವರು. ಒಂದೊಂದುಸಾರಿ ಮನೋಭಾವವನ್ನು ಗ್ರಹಿಸಲು ಶಕ್ತಿಯಿಲ್ಲವಾದರೆ "ನೀವು ಎಂದಿನಂತಿಲ್ಲ, ಏನು ಆಲೋಚಿಸುತ್ತೀರಿ, ನನಗೆ ಹೇಳಿ, ನನಗೆ ಹೇಳದಿರುವದೆಂಥದು" ಎಂಬಿವೇ ಮೊದಲಾದ ರಾಜನೀತಿಯ,—ತಪ್ಪಾಯಿತು ಕ್ಷಮಿಸಿ, ರಾಜ್ಞೀನೀತಿಯಮಾತುಗಳಿಂದ ಮೆಚ್ಚಿಸಿ, ತದನಂತರ ತಮ್ಮ ಕಾರ್ಯಗಳನ್ನು ಮಾಡಿಸಿಕೊಳ್ಳುವರು ಅಂತೂ ನಮ್ಮ ಕಾಂತಾಮಣಿಗಳು ಪ್ರವೇಶಿಸದ ರಾಜಕಾರ್ಯವಿಲ್ಲ. ಇವರಿಗೆ ತಿಳಿಯದ ನ್ಯಾಯವಿಮರ್ಶೆಗಳಿಲ್ಲ. ಇವರಿಗೆ ಗೋಚರವಾಗದ ರಾಜರಹಸ್ಯಗಳಿಲ್ಲ. ಇಷ್ಟೊಂದು ಸಾಮರ್ಥ್ಯವು ಅಬಲೆಯರಾದ, ಲತಾಂಗಿಯರಾದ ಕೋಮಲೆಯರಾದ ನಮ್ಮ ಅಂಗನಾಜನಕ್ಕೆಂತು ಸಿದ್ಧಿಸಿತು? ನಾವು ಬಲವಂತರೆಂದೆನಿಸಿ, ಆಜಾನುಬಾಹುಗಳೆಂದೆನಿಸಿ, ಉಗ್ರಪ್ರತಾಪವನ್ನು ಹೊಂದಿದವರೆನಿಸಿಯೂ, ನಮಗೆ ಆ ಪೆಣ್ಮಣಿಗಳ ಹೃದಯವನ್ನು ಭೇದಿಸಲು ಸಾಮರ್ಥ್ಯವು ಸಿದ್ಧಿಸಲಿಲ್ಲವೇಕೆ? ಯಾರಾದರೂ ಆ ಭ್ರೂಚಾತುರ್ಯವನ್ನೂ, ಆಕುಂಚಿತವಾದ ಕಟಾಕ್ಷವೀಕ್ಷಣವನ್ನೂ, ಮಧುರವಾಣಿಗಳನ್ನೂ, ಆ ಲಜ್ಜೆಯ ವೈಖರಿಯನ್ನೂ, ಆ ಬಿನ್ನಾಣದ ಸೊಬಗನ್ನೂ, ಅಥವ ಮೌನವ್ರತಗಳನ್ನೂ, ಉಪವಾಸವ್ರತಗಳನ್ನೂ, ಕಡೆಗೆ ಕೋಪಾಗಾರಸ್ವೀಕಾರವನ್ನೂ, ಆಚರಿಸಬಲ್ಲರೋ? ಅವುಗಳು ನಮ್ಮ ಯುವತಿಯರಿಗೆ ಸಾಧ್ಯವಾದುದರಿಂದಲೇ ಆ ಸಾಮರ್ಥ್ಯವು ಸಿದ್ಧಿಸಿತು.

ಪ್ರಕೃತದಲ್ಲಿ ಕೋನೇರಯ್ಯನಿಗೆ ವ್ಯಸನವು ಕೊನೆಗಂಡಿತು. ತನ್ನ ಭಾರ್ಯೆಯು ಹೇಳಿದಂತೆಯೇ, ನಾಗೋಡಿಯಲ್ಲಿ ಮದುವೆಯನ್ನು ಮಾಡಬೇಕು. ಒಂದುವೇಳೆ ಚಿಕ್ಕಪ್ಪನು ಬಂದರೆ, ಬಾಗೇಪಲ್ಲಿಗೆ ನಾಲ್ಕನೇ

ದಿವಸ ಸಾಯಂಕಾಲ ಬರುವನು. ಬರುತ್ತಲೂ ನಾವಿಲ್ಲಿರುವದಿಲ್ಲ. ಸ್ವಲ್ಪ ವಿಶ್ರಮಿಸಿಕೊಂಡು ನಾಗೋಡಿಗೆ ಮೂರನೇ ದಿವಸ ಬರುವನು. ಮೂವತ್ತು ಮೈಲಿಗಳ ದೂರ, ರೈಲು ಕೂಡಾಯಿಲ್ಲ. ಬರಬೇಕೆಂದರೆ ಕೊಂಚಕಾಲ ಹಿಡಿಯುವುದೇ? ಅವನು ಬಂದರೂ ಬರುವ ಹೊತ್ತಿಗೆ ನಿಶ್ಚಿತಾರ್ಥವು ಆಗಿ ಹೋಗಿರುವುದು, ಇನ್ನೇನು ಮಾಡಲಾದೀತು. ಭಲಾ, ನನ್ನ ಹೆಂಡತಿಯು ಸಮಾನರುಂಟೆ? ಅದಕ್ಕೇ ಅಲ್ಲವೇ ಹೆಂಗಸರಿಗೆ ನಮಗಿಂತಲೂ ಬುದ್ಧಿಯು ಹೆಚ್ಚೆಂದು ಹೇಳುವುದು ಎನ್ನುತ್ತಾ ಹೆಂಡತಿಯನ್ನು ಎಲೇ, ಎಲೇ, ಈಗೇನು ಮಾಡಬೇಕು ಎಂದು ಕೇಳಲು, ಆಕೆಯು—

ನಾಗೋಡಿಗೆ ಕಾಗದವನ್ನು ಬರೆದು ತೋಟಿಯ ಕೈಲಿ ಕೊಟ್ಟು ಕಳುಹಿಸಿ, ನಾಳೆಯೇ ಇಲ್ಲಿಂದ ನಾವು ಹೊರಡೋಣ ಎಂದಳು. ಹಾಗೆಯೇ ನಿಷ್ಕರ್ಷೆಯಾಯಿತು

ಕೋನೇರಯ್ಯನು ಕೂಡಲೇ ಕಾಗದವನ್ನು ಬರೆದು ಕೊಟ್ಟು ಕಳುಹಿಸಿದನು ಬಾಗೇಪಲ್ಲಿಯಲ್ಲಿ ಅನಿವಾರ್ಯವಾದುದರಿಂದ ನಾಗೋಡಿಗೇನೇ ಬರುವೆವು. ಬೇರೆ ಮನೆಯನ್ನು ಏರ್ಪಾಡು ಮಾಡಿರಬೇಕು ಎಂಬಿವುಗಳೇ ಮುಖ್ಯಸಂಗತಿಗಳಾಗಿದ್ದುವು. ತನ್ನ ಬೀತಾಯಿಗೂ, "ನಾಗೋಡಿಯಲ್ಲಿ ಮದುವೆ, ನಾಳೆಯೇ ಅಲ್ಲಿಗೆ ಹೊರಟುಹೋಗುವುದು" ಎಂದು ಹೇಳಿದನು

ಸಾವಿತ್ರಿಯು—"ಏನು, ನಾಗೋಡಿಯಲ್ಲಿ ಮದುವೆಯೆ? ನಾಳೆಯೇ ಅಲ್ಲಿಗೆ ಹೊರಟುಹೋಗುವುದೆ? ಅಯ್ಯೋ ಇನ್ನೇನು ಗತಿ! ಇಷ್ಟರಹು ಮೂರು ದಿವಸಗಳ ಪರಾವುವಾದರೂ ಇದ್ದಿದ್ದರೆ, ಅಷ್ಟರಲ್ಲೇ ಬಹಳಾವಣೆಗಳಾಗುತ್ತಿತ್ತಲ್ಲ; ನೆನ್ನೆಯರಾತ್ರಿಯಲ್ಲೇನಾದರೂ ಕನಸನ್ನು ಕಂಡೆನೇ ಇಲ್ಲವೋ ನಿಜವಿರಬಹುದೇ? ನಿಜ, ಖಂಡಿತವಾಗಿಯೂ ನಿಜ, ಮಾತುಗಳು ಕೂಡ ಜ್ಞಾಪಕವಿದೆಯಲ್ಲ" ಆ ಮರಳುರಾಶಿ, ಆ ಬೆಳದಿಂಗಳು, ಆ ಚಿತ್ರಾವತಿ, ಆ ಮೂರ್ತಿ. ಇವೆಲ್ಲವೂ ನನ್ನನ್ನು ಅಣಕಿಸುವುವೋ, ಹಾಸ್ಯ ಮಾಡುವುವೋ? ಎಂದು ತೋರುತ್ತಿದೆಯಲ್ಲಾ? ಆಕೆಯೋ; ಅನ್ಯಾಯು

ವಾಗಿ, ಸಾಧ್ಯವಿಲ್ಲದ ಸ್ವರ್ಗವನ್ನು ಒಂದು ಬಾರಿ ತೋರಿಸಿ, ಕೆಲವುಕಾಲ ಕೂಡಿಸಿ, ಕಡೆಗೆ ನರಕದಲ್ಲಿ ತಳ್ಳುವೆಯಾ. ಛೀ, ಛೀ, ನೀನು ಸಾಯುವವರಿಗೆ ಅಮೃತವೆಂದೆನ್ನುವರು ನನಗೆ ಕಾಲಕೂಟವಾದೆಯಾ? ಎಂದು ಮರುಗಿದಳು.

೧೪ ನೆಯ ಪರಿಚ್ಛೇದ.

ಮೂರ್ತಿ ಇಲ್ಲಿಬಾ, ನಿನ್ನೆರಾತ್ರಿ ನಾನೂ ನಿನ್ನ ತಂದೆಯೂ ಕೆಲವು ಮಾತುಗಳನ್ನಾಡಿದೆವು ನಿನ್ನ ಸಮ್ಮತಿಯನ್ನು ತಿಳಿಯಬೇಕೆಂದು ಅವರು ಹೇಳಿದರು. ಏನು ಹೇಳುವೆ ಎಂದು ಅಮ್ಮಾವರು ಕೇಳಲು ಮೂರ್ತಿಯು ಯಾವವಿಷಯಕ್ಕೆ? ಎಂದು ಕೇಳಿದನು. ನಿನ್ನ ತಂಗಿಯ ಮದುವೆಯ ವಿಷಯವಾಗಿ ಕಾಗದ ಬಂದು ೨೦ ದಿನಗಳ ಮೇಲೆ ಆದವು ಮೇಲೆಮೇಲೆ ಕಾಗದಗಳು ಬರುತ್ತಾ ಇವೆ. ಜಾತಕಗಳೂ ಬಂದಿವೆ. ವರನು ಸೇಲಂ ಡಿಸ್ಟ್ರಿಕ್ಟಿನಲ್ಲಿದ್ದಾರಂತೆ ಭೂಮಿಕಾಣಿಗಳು ಬಹಳವಿವೆ, ಹಿರಿಯರೆಲ್ಲಾ ಚೆನ್ನಾಗಿ ಬಾಳಿದವರು ವರನು ಏನೋ ಲೋವರ್ ಸೆಕಂಡರಿಗೆ ಓದಿದ್ದಾನೆ ಒಂದು ಸ್ಕೂಲ್ ಮಾಸ್ಟರ್ ಕೆಲಸವಿದೆ, ಆದರೆ ತುಂಬಾ ಆಸ್ತಿ ಇರುವುದರಿಂದ ಆತನಿಗೆ ಕೊಡುವುದೆಂದು ಯೋಚಿಸಿರುವೆವೆನ್ನಲು, ಮೂರ್ತಿಯು— ನನಗಿಷ್ಟವಿಲ್ಲ, ನೀವು ಮದುವೆಯನ್ನು ಮಾಡಬಹುದು ಎಂದನು. ಹಾಗಾದರೆ ನಿನ್ನ ಸ್ನೇಹಿತರಲ್ಲಿ ಓದಿದವರಾಗಿಯೂ, ಯೋಗ್ಯರಾಗಿಯೂ ಇರುವ ವರನನ್ನು ತೋರಿಸೆನ್ನಲು ನನಗೆ ಅಗತ್ಯವಿಲ್ಲವೆಂದನು. ಹಾಗಾದರೆ ಈ ವರನನ್ನು ಒಪ್ಪು, ಅಥವಾ ನೀನು ಇಷ್ಟಪಟ್ಟವನು ಯಾರೆಂಬುದನ್ನು ತಿಳಿಸು.

ಮೂರ್ತಿಯು ಕೃಷ್ಣವೇಣಿಗೆ ಇದು ಗೊತ್ತೆ? ಅವಳೊಪ್ಪಿರುವಳೇ? ಒಪ್ಪಿದ್ದರಾಗಲಿ. ಎನಲು ಅವಳಿಗೇನುಗೊತ್ತು, ಅವಳನ್ನೇನು ಕೇಳುವುದು? ಅವಳಿಗೇನು ತಿಳಿಯುವುದು? ಎಂದರು ಮೂರ್ತಿಯು ಅಮ್ಮಾ, ನಿನಗೆ ಕೋಪಬಂದರೂ ಬರಲಿ, ಅತ್ತಕಡೆಯ ಜನಗಳಿಗೆ ನಮ್ಮ ಹುಡುಗಿಯರನ್ನು ಕೊಡಲು ಒಪ್ಪಲಾರೆನು ಇನ್ನೂ ವಯಸ್ಸಾಗಿರುವುದಿಲ್ಲ, ಆಗಲೇ ದುಷ್ಟ

ಸಹವಾಸ. ಸಂಭಾಷಣೆಯೋ ಮೊದಲೇ ಸರಿ. ಅನ್ನ ಹೆಂಡತಿಯನ್ನು ಸಾಕು ವುದೇನು ? ಕೊಲ್ಲ ಮಕ್ಕಳನ್ನು ಹೆತ್ತ ದಕ್ಕೆ ಕಷ್ಟಪಟ್ಟು ಹುಡುಕಿ ಬಳ್ಳಿ ಯು, ವರನಿಗೆ ಕೊಡಬೇಕು. "ನಮ್ಮ ಕಡೆಯುಳ್ಳಿಯೂ ಗಂಡಿಲ್ಲ, ಇದ್ದು ದರಲ್ಲಿ ಇವನೇವಾಸಿ" ಎಂಬುವ ವಾಕ್ಯಗಳು ನಮ್ಮಲ್ಲಿ ಬಹಳ ಕಾಲದಿಂದ ಲೂ ಇವೆ "ಜಾತಿಯನ್ನು ಬಿಟ್ಟು ಜಾತಿಗೆ ಕೊಡುವದೆಂತು, ಏನೋ ಇಷ್ಟು ಕೊಂಡಿರಲಿ, ಚಿಕ್ಕಂದಿನಿಂದಲೂ ನನಗೆ ತಿಳಿದವನು" ಇವೆಲ್ಲವೂ ಕೇಳಸಕ್ಕೆ ಬಾರವು. ನನ್ನ ಮನಸ್ಸಿನಲ್ಲಿದ್ದುದನ್ನು ಹೇಳಿರುವೆನು.

ಅಮ್ಮ—ಹಾಗಾದರೆ ಈಗ ಯಾರ ಕೈಕಾಲುಗಳನ್ನು ಕಟ್ಟೋಣ.

ಮೂ— ಯಾಂವುದೂ ಬೇಡ, ನಿನಗೆ ಸಮ್ಮತವಾದರೆ ನನ್ನ ಸ್ನೇಹಿತ ರಾಜನಿಗೆ ಕೊಟ್ಟು ಮದುವೆಯನು ಮಾಡೋಣ ಅವನು ನನಗೆ ಸಹಪಾಠಿ ಬಹಳ ವರ್ಷಗಳಿಂದಲೂ ನಾವು ಬಲ್ಲವರಾಗಿದ್ದೆವು ತಿಳಿದವನು ಜಾಣನು ಚೆನ್ನಾಗಿದಾನೆ ಬುದ್ಧಿವಂತ. ಇದಕ್ಕಿಂತಲೂ ಏನು ?

ಅಮ್ಮ— ಅಹುದು ಅಷ್ಟಿಯಿಲ್ಲವಲ್ಲ, ಅವನ ತಾಯಿಯು ಸತ್ತು ಹೋಗಿ ಬಹಳದಿವಸವಾಯಿತು. ಅವನತಂದೆಯು ಬೇರೇ ಮದುವೆಯನ್ನು ಮಾಡಿಕೊಂಡಿರುವನು. ರಾಜನ ಪಾಲಿಗೇನು ಬರುವನು.

ರಾಜನು ಅವನಿಗೆ ದೌಹಿತ್ರನಲ್ಲವೇ ? ಮುದುಕನೂ ಮುದುಕಿಯೂ ಇರುವವರೆಗೂ ರಾಜನಿಗೇನು ಕಡಿಮೆ ?

ಅ— ಅಹುದು ನಮ್ಮ ಕೃಷ್ಣವೇಣಿಗೆ ಮನೆಯಲ್ಲಿ ಸರಿಯಾದ ಏಕ್ಕಿಲ್ಲ ವಲ್ಲ, ಇರುವವರು ಮುದುಕ ಮುದುಕಿಯರು.

ಮೂ— ಮುದುಕರ ಕಾಲಾನಂತರ ನಾವು ನೋಡಿಕೊಳ್ಳಬೇಕು

ಅ – ನಿನ್ನ ಸ್ನೇಹಿತನು ಒಪ್ಪುವನೋ ?

ಮೂ— ಅದು ನನಗಿರಲಿ.

ಅ—ಹಾಗಾದರೆ ಕೇಳಿನೋಡುವೆನು, ನಾಳೆಯೋ ನಾಳಿದ್ದೋ ಸರ್ಕ್ಯೂ ಟಿನಿಂದ ವಾಪಸು ಬರುವರು, ಈಗ ನಿನ್ನ ಮದುವೆಯ ವಿಚಾರವೇನು ಹೇಳು.

ಮೂ— (ಎಡೆಯಲ್ಲಿ ರ್ಯಾಗ್ ಎನ್ನಲು) " ಈಗ ನನಗೆ ಮದುವೆಯು ಅವಶ್ಯಕವಿಲ್ಲ, ನನ್ನ ಓದು ಮುಗಿಯಬೇಕು

ಅ— ಓದಿದರೆ ಓದು, ಓದಿಗೂ, ಮದುವೆಗೂ ಏನು ಸಂಬಂಧ?

ಮೂ— ಅದೇನು ಸಂಬಂಧವ್ರೋ, "ವಿವಾಹೋ ವಿದ್ಯಾನಾಶಾಯ"

ಅ— ನಿನ್ನ ತಂದೆ ಓದುತ್ತಿರುವಾಗ ನಾನು ನಿನ್ನನ್ನು ಹೆತ್ತು ಮೂರು ತಿಂಗಳಾಗಿತ್ತು.

ಮೂ— ಅವೆಲ್ಲಾ ಪೂರ್ವಕಾಲ, ಈಗ ಆಗುವದಿಲ್ಲ

ಅ— ಮದುವೆಯಾದರೆ, ನಿನ್ನ ಹೆಂಡತಿಯು ನಮ್ಮ ಹತ್ತಿರವಿರುವಳು. ನೀನು ಎಲ್ಲಿಯಾದರೂ ಓದುತ್ತಿರಬಹುದು.

ಮೂ— ಹಾಗಾದರೆ ನನಗೆಲ್ಲಿ ಸಂಪಾದಿಸಿರುವಿರಿ?

ಅ— ಮೈಸೂರಿನಲ್ಲಿ ದೊಡ್ಡ ಉದ್ಯೋಗಸ್ಥರಂತೆ. ಅವರ ಮಗಳಿಗೆ ೧೦ ವರ್ಷಗಳಂತೆ, ಆ [illegible], ಆಗಬಹುದೋ?

ಮೂ— ಅಮ್ಮಾ, ದೊಡ್ಡ ಉದ್ಯೋಗಸ್ಥರ ಮನೆಗಳಿಂದ ಹೆಣ್ಣುಗಳನ್ನು ತಂದು, ಅವರಿಗೆ ಊಳಿಗವನ್ನು ಮಾಡಲು ನನ್ನಿಂದಾಗುವುದಿಲ್ಲ. "ನಮ್ಮ ಮನೆಯಲ್ಲಿ ಬೆಳಗಾಗುತಲೂ, ಟೀ, ಕಾಫಿ, ಬಿಸ್ಕೀಟು, ಫಲಾಹಾರಗಳಾಗುತ್ತಿದ್ದವು. ನಿಮ್ಮ ಮನೆಯಲ್ಲಿ ಏನಿದೆ" ಎಂದರೆ ನಾನೇನು ಮಾಡುವುದು? ಯಾವದೊಂದು ಕೆಲಸವನ್ನು ಹೇಳಿದರೂ 'ನನಗೆ ಬಾರದು, ನನಗೆ ಮಾಡಿ ಅಭ್ಯಾಸವಿಲ್ಲ' ವೆಂದರೆ ನಾನು ಮಾಡಬೇಕೇ? ಕಲ್ಲೂರು ಕಟ್ಟೆಯಲ್ಲಿ ಬಸ್ಯನು ಉದ್ಯೋಗಸ್ಥರ ಮಗಳನ್ನು ಕಟ್ಟಿಕೊಂಡು ಪಟ್ಟಪಾಡನ್ನು ನೀನು ಮರೆತೆಯಾ? ಅವರ ಸಹವಾಸವೇ ಬೇಡ. ಸದ್ಯಃ ಅವರು ನಮ್ಮ ಮಾತುಗಳನ್ನು ಕೇಳಿಕೊಂಡಿರುವದಿರಲಿ. ನಾವು ಅವರ ಚಾಕರರಾಗಿರಬೇಕು.

ಅ— ಸರಿಯಪ್ಪಾ, ಈಗ ನಾವೆಲ್ಲರೂ ಕೆಲಸಗಳನ್ನು ಮಾಡುವದಿಲ್ಲವೆ?

ಮೂ— ಅಹುದು, ಈಗ ನೀವು ಮಾಮುಲೇದಾರರ ಮನೆಯವರಾದಿರಿ ಮೊದಲು ಏನಾಗಿದ್ದಿರಿ. ನೀವು ಕಷ್ಟಪಡುತ್ತಿರುವುದು ಚಿಕ್ಕಂದಿನಿಂದಲೂ ಬಂದುದು.

ಅ— ಹಾಗಾದರೆ ನಿನಗೆಂತಹ ಹೆಣ್ಣುಬೇಕು?

ಮೂ— ಅಗೋ ಎದುರು ಸಾಲಿನಲ್ಲಿ ಮೂರನೇಯ ಮನೆಯಲ್ಲಿ ಸಾವಿತ್ರಿಯಿರುವಳು. ಆ ದಿನ ನಮ್ಮ ಗಾಡಿಯಲ್ಲಿಯೇ ದೇವಸ್ಥಾನಕ್ಕೆ ಬಂದಿ

ದ್ದವಳು ಅವಳನ್ನು ಕೊಟ್ಟು ನನ್ನ ಮದುವೆ ಮಾಡಿ, ಇಲ್ಲವೋ ನನಗೆ ಮದುವೆಯೇ ಬೇಡ.

ಅ-ನಿನಗೆ ಹುಚ್ಚು, ಶಾನುಭೋಗನ ಮನೆಯ ಹೆಣ್ಣನ್ನು ತಂದರಾದೀತೇ

ನಮ್ಮ ಗುರುಗಳಿಗೆ [illegible] ಸಂಗಸು; ಮಕ್ಕಳನ್ನೆತ್ತಿಕೊಂಡೆಯೆ ಶಾನುಭೋಗನ ಮಗಳಾದ ಸಾವಿತ್ರಿಯನ್ನು ಹೆತ್ತ[illegible] ವ್ಯತ್ಯಾಸವೇನು ?

ಅ-ನಿನಗೆ ಹುಚ್ಚು, ನಿನಗೆ ಅವರು ಮದ್ದನ್ನು ಹಾಕಿರುವರು. ಇಲ್ಲದಿದ್ದರೆ ನೀನು ಹೀಗೆ ಮಾತನಾಡುತ್ತಿರಲಿಲ್ಲ ಹುಡುಗೀ! ಈಗ ಗೊತ್ತಾಯಿತು. ನೀನು ಎಷ್ಟು ಹೊತ್ತಾದರೂ ಮನೆಗೆ ಬರದೆ ಸಾಯಂಕಾಲಕ್ಕೆ ಊಟವನ್ನು ಮಾಡದೆ, ತಿರುಗುತ್ತಿದ್ದುದು ಇದರಿಂದಲೇ ? ಇನ್ನೇನು ನಾಳೆ ನಿನಗೆ ವಾಂತಿಗೆ ಕೊಡಿಸಬೇಕು.

ಮೂ— ನನಗೆ ಏನನ್ನೂ ಕೊಡಿಸಬೇಡ, ನನಗೆ ಬುದ್ಧಿ ಇರುವುದು.

ಅ-ಬುದ್ಧಿಯಿಲ್ಲ, ಬುದ್ಧಿಯಿದ್ದರೆ ಅವಳನ್ನೇಕೆ ಬಯಸುವೆ ?

ಮೂ—ನಾನು ಹೇಳಿದಂತೆ ಕೇಳುವಳೆಂದು

ಅ—ನೀನು ಹಟಮಾಡಿದರೆ, ಯಾರೂ ನಿನ್ನ ಮಾತುಗಳನ್ನು ಕೇಳುವುದಿಲ್ಲ ಈಗ ನಿನ್ನ ತಂದೆ ಏನಾದರೂ ನನ್ನ ಮಾತು ಕೇಳುವರೇ ?

ಮೂ-ಅದೇನೋ; ಮಾಡಿದರೆ, ಈ ಮದುವೆ, ಇಲ್ಲವಾದರೆ ನನ್ನ—

ಅ-ನಾನು ಒಪ್ಪುವದಿಲ್ಲ, ನೀನು ದಾರಿಗೆ ಬರದಿದ್ದರೆ, ನಾನು ಊಟವನ್ನೇ ಮಾಡುವದಿಲ್ಲ

೧೫ ನೆಯ ಪರಿಚ್ಛೇದ.

ಎತ್ತ ಕಡೆಯಿಂದಲೂ ಮೇಘಾವರಣಕ್ಕಾರಂಭವಾಯಿತು ಈ ಹೃದಯಾಂಬರವೆಲ್ಲಾ ಕ್ಷಣಮಾತ್ರದಲ್ಲಿ ಕಪ್ಪಾಯಿತು. ಕಾದಂಬಿನಿಯೋಪಾದಿಯಲ್ಲಿ ಚಿಂತೆಯ ಮೇಲೆ ಚಿಂತೆ ಮುಸುಕಲಾರಂಭಿಸಿತು. ಒಂದೆರಡು ಆಶೆಗಳೆಂಬ ನಕ್ಷತ್ರಗಳೇನಾದರೂ ತಲೆದೋರುವುವೆಂದರೆ ಅವುಗಳ ಸುಳಿವೇ ಕಾಣುವುದಿಲ್ಲ. ಉಗ್ರವಾದ ಬಿರುಗಾಳಿಯ ಮಧ್ಯದಲ್ಲಿ ಸಿಕ್ಕಿದ ಬಣಗಿದ

ತರಗೆಲೆಯಂತದಿ ಮೂರ್ತಿಯು ನಿರಾಧಾರನಾಗಿ ಆಲೋಚನೆಗಳ ಜತೆಯಲ್ಲಿ ಹಾರಾಡುತ್ತಿದ್ದನು. ಅವನಿಗೆ ಈ ಪ್ರಪಂಚದಲ್ಲಿ ಸುಖಪಡತಕ್ಕವನು ಯಾರೂ ಇಲ್ಲವೆಂದುಕೊಂಡನು.

ಸಾವಿತ್ರಿಯು ಹೊರಟುಹೋದಳು. ತಾಯಿಯು ಮನಸ್ಸಿಗೆ ಖೇದವನ್ನುಂಟುಮಾಡಿಕೊಂಡಳು. ಏನುಮಾಡುವದು? ಇದೆಲ್ಲವೂ ಯಾರ ತಪ್ಪು, ತನ್ನ ತಪ್ಪೇ, ಅಹುದು. ತಾನು ಸಾವಿತ್ರಿಯನ್ನು ಏಕೆ ಬಯಸಬೇಕು. ಅವಳಾರನ್ನು ಮದುವೆಯಾದರೆ ತನಗೇನು, ದಾರಿಯಲ್ಲಿ ಹೋಗುವ ಮಾರಿಯನ್ನು ಮನೆ ಹೊಕ್ಕಿಸಿಕೊಂಡಂತಾಗಾಯಿತು. ಮನೆಯೊಳಗೆ ಎಲ್ಲರೂ ವಿಷಣ್ಣವದನರಾಗಿರುವರು. ಒಂದು ಕಡೆ ತಾಯಿ, ಒಂದು ಕಡೆ ಸಾವಿತ್ರಿ, ಯಾವುದನ್ನು ನೋಡುವುದು. ಸಾವಿತ್ರಿಯನ್ನು ಬಿಟ್ಟುಬಿಡಲೇ ನನಗೇಕೆ, ಅವಳು. ಇವರು ಯಾರನ್ನು ಮದುವೆಯಾಗೆಂದರೆ ಆಗುವೆನು ಅಯ್ಯೋ, ಎಂತಹ ಹುಡುಗಿ. ಅನ್ಯಾಯವಾಗಿ ನಿರಂತರವಾದ ದುಃಖಸಮುದ್ರದಲ್ಲಿ ಮುಳುಗುವಳು. ಅವಳ ರೂಪವಂತೂ ದಿವ್ಯವಾಗಿದೆ. ಆದಿನವೋ ನನ್ನ ಜೀವಮಾನದಲ್ಲಿ ಅಂತಹ ದಿನವು ಸಿಗುವುದೆ!! ಸಿಗಲಾರದು! ಸಿಗುವದಿಲ್ಲ! ಆ ಬೆಳದಿಂಗಳಿನಲ್ಲಿ! ಆಯೊಂದುಮುಖದಲ್ಲಿದ್ದ ಕಾಂತಿವಿಶೇಷವನ್ನು ವರ್ಣಿಸಲಸಾಧ್ಯ, ತಾವಾಗಿಯೇ ನೋಡಬೇಕು. ನೋಡಿದರೆ, ಆ ಪೂರ್ಣಚಂದ್ರನೆಲ್ಲಿ? ಚಂದ್ರನು ಕೆಲವುರಾತ್ರಿಗಳಲ್ಲಿ ಕೆಲವು ದಿವಸಮಾತ್ರ ಮನೋಹರನಾಗಿ ಆಹ್ಲಾದವನ್ನುಂಟುಮಾಡುವನು. ಇವಳ ಮುಖಬಿಂಬವಾದರೋ, ಸದಾ ಪಕ್ಷಭೇದವಿಲ್ಲದೆ, ಹಗಲಿರುಳೆಂಬ ವ್ಯವಧಾನವಿಲ್ಲದೆ, ಏಕರೀತಿಯಾಗಿ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತದೆ. ಆ ಉದ್ದವಾದ ನೀಳವಾದ ವೇಣಿ, ಎಂತಹ ಸೊಗಸು! ಮೊನ್ನೆಯರಾತ್ರಿ ನೈವುರೆತಿದ್ದ ನೀರನ್ನು ಮುಖಕ್ಕೆ ತಟ್ಟಿದಾಗ ಕೃಷ್ಣಸರ್ಪವೆಂದೇ ಬೆಚ್ಚಿಬಿದ್ದೆನಲ್ಲ. ಕಡೆಗೆ ಧೈರ್ಯಬಂತು. ಹೀಗಿರುವವಳನ್ನು ಬಿಟ್ಟು, ಮಾತು ಬೇರೆಕೊಟ್ಟಿರುವೆನಲ್ಲಾ. ಅಯ್ಯೋ, ಈಗ ಆ ಮುದುಕನಿಗೆ ಅವಳನ್ನು ಒಪ್ಪಿಸಿ ಛೀ, ನಾನು ಸಾವಿತ್ರಿಯನ್ನು ಬಿಡಲಾರೆ, ನನಗೆ ಅವಳು ಸತಿಯಾಗಬೇಕು. ಇಲ್ಲವಾದರೆ ನಾನು ಬದುಕುವುದಿಲ್ಲ.

ಹಾಗಾದರೆ ತಾಯಿಯ ಮಾತಿಗೆ ಪ್ರತ್ಯುತ್ತರವನ್ನೇನು ಕೊಡಲಿ? ತಾಯಿಯಲ್ಲವೇ? ಎಷ್ಟು ಕಷ್ಟಪಟ್ಟು, ಎಷ್ಟು ಆದರದಿಂದ ಸಾಕಿದಳೋ. ಈಗ ಆಕೆಯ ಮನಸ್ಸಿಗೆ ವ್ಯಥೆಯನ್ನುಂಟು ಮಾಡಿ, ಛೀ, ನಾನು ಪಾಪಿ! ನನಗೆ ಘೋರ ನರಕಪ್ರಾಪ್ತಿಯಾಗಬೇಕು. ಸಾವಿತ್ರಿಯನ್ನು ಬಯಸಲೇ, ಸಾವಿತ್ರೀ ನೀನು ನನಗೆ ಬೇಡ—ಎಂದು ಕಣ್ಣೀರು ಬಿಟ್ಟನು. ತಾಯಿಯ ಮಾತಿಗೆ ಬದಲು ಕೊಡಲಾರೆ. ಅಯ್ಯೋ, ಆಕೆಯ ಮಾತಿಗೆ ಬದಲನ್ನು ಕೊಡಲಾರೆ, ಮಾತನ್ನು ಮೀರಲಾರೆ, ನಿನ್ನೆಯಿಂದ ಮಾತಿಲ್ಲ. ಸರಿಯಾಗಿ ಊಟವಿಲ್ಲ. ಒಂದೇ ರೀತಿಯಾಗಿ ಶೋಕಿಸುತ್ತಿರುವಳು. ಎಷ್ಟು ಸಂಕಟಪಟ್ಟಿರುವಳೋ, ಹೆತ್ತ ತಾಯಿಗೆ ನಾನು ಸಂಕಟವನ್ನುಂಟು ಮಾಡಿರುವೆನಲ್ಲಾ! ನಾನು ಎಂತಹ ನರಾಧಮನು. ನನಗೆ ಈ ಲೋಕದಲ್ಲಿ ಸುಖವೇ ಬೇಡ. ತಾಯಿಯ ಮಾತಿಗೆ ವಿರೋಧವಾಗಿ ನಡೆಯುವುದಿಲ್ಲವೆಂದರೆ ಸಾಕು. ಆಕೆಯನ್ನು ಈಗ ನೆನಸಿಕೊಂಡರೆ, ನಾನು ಬದುಕಿರುವುದು ಉಚಿತವಲ್ಲ. ತಾಯಿಯ ಮನಸ್ಸನ್ನು ನೋಯಿಸಿದವನುಂಟೇ, ನನ್ನನ್ನು ಏನೆಂದು ಬಗೆದಳೋ. ಇವಳಾರು ಸಾವಿತ್ರೀ, ಎಷ್ಟು ದಿನದ ಪರಿಚಯ, ಒಂದು ತಿಂಗಳು ಕೂಡ ಆಗಲಿಲ್ಲ. ತಾಯಿಯೋ ಹುಟ್ಟಿದುದಕ್ಕಿಂತ ಮೊದಲೇ ಹೊತ್ತಿದ್ದು, ತನಗೆ ನಿದ್ದೆಯಿಲ್ಲದಿದ್ದರೂ, ಸುಖವಿಲ್ಲದಿದ್ದರೂ, ಗಣಿಸದೆ ಸಾಕಿದಳಲ್ಲ. ಮೊನ್ನೆಯ ದಿವಸ ನಾನು ಕೋಪಿಸಿಕೊಂಡರೂ ಎಷ್ಟು ಶಾಂತಭಾವವನ್ನು ವಹಿಸಿದಳು. ನಾನೆಷ್ಟು ತಪ್ಪುಗಳನ್ನು ಮಾಡಿದರೂ ಕ್ಷಮಿಸುತ್ತ, ಭೂದೇವಿಯೋಪಾದಿಯಲ್ಲಿ ತಾಯಿಯರು ನಮ್ಮನ್ನು ಪಾಲಿಸುವರಲ್ಲ. ಅಂತಹವರಿಗೆ ಈಗ ಖೇದವನ್ನೆಸಗಿ, ಈ ಸಾವಿತ್ರಿಯನ್ನು ಕೈ ಹಿಡಿಯಲೇ ನನಗೆ ಬೇಡ. ಸಾವಿತ್ರಿಯ ಆಲೋಚನೆಯನ್ನು ದೂರಮಾಡುವೆನು, ತಾಯಿಯೊಂದಿದ್ದರೆ ಸಾಕು. ನನಗೆ ಇತರ ವಸ್ತುಗಳಾವುವೂ ಬೇಡ. ನಾವು ಜನ್ಮಜನ್ಮಾಂತರಗಳಲ್ಲಿಯೂ ತಾಯಿಯ ಋಣವನ್ನು ತೀರಿಸಲಾದೀತೇ? ನನಗೆ ಸಾವಿತ್ರೀ, ಓ, ಸಾವಿತ್ರೀ ನೀನು ಬೇಡ. ಬೇಡ, ನಿನ್ನನ್ನು ಇನ್ನು ಮರೆಯುವೆನು. ಎನ್ನುತ್ತ ಕಣ್ಣೀರ ಪ್ರವಾಹವನ್ನು ಹೊರಡಿಸಿ ಮುಖವನ್ನು ತನ್ನೆರಡು ಕೈಗಳಿಂದಲೂ ಮುಚ್ಚಿಕೊಂಡನು.

ಕೂಡಲೇ, ಆ ಚಿತ್ರಾವತಿಯು ತಟ್ಟನೆ ಮೇಲುಕ್ಕಿದ್ದ ಹಾಗಾಯಿತು. ಚಂದ್ರನು ಕೋಟಿಸೂರ್ಯರಿಗಿಂತ ತೀಕ್ಷ್ಣನಾಗಿ ಪುನಃ ಭೂಮಿಗೆ ಬಂದಂತೆ ಭಾವನೆಯಾಯಿತು. ಮರಳುರಾಶಿಯು ಬೆಟ್ಟದಷ್ಟು ಎತ್ತರವಾಗಿ ಬೆಳೆಯುತ್ತಿದ್ದ ಹಾಗಾಯಿತು. ಸುತ್ತುಮುತ್ತಲಿನ ಗಿಡಗಳೂ ಮರಗಳೂ ಬತ್ತಿತ್ತಾಗಿ ಬಂದಂತಾದವು. ತಾನು ಚಿತ್ರಾವತಿಯು ದಡದಲ್ಲಿರುವುದಕ್ಕಿಂತ ಬದಲು, ಬೆಟ್ಟಗುಡ್ಡಗಳ ಸಾಲಿನಲ್ಲಿ, ಅಗಾಧವಾದ ಅರಣ್ಯದಲ್ಲಿ ಕಲ್ಲುಮುಳ್ಳುಗಳಿಂದ ಕೂಡಿದಪ್ರದೇಶದಲ್ಲಿ ತಾನು ತಪ್ಪಿಸಿಕೊಳ್ಳಲು ಅವಕಾಶವಿಲ್ಲದಂತಹಪ್ರದೇಶದಲ್ಲಿ, ಇರುವುದಾಗಿ ಎಣಿಸಿದನು. ಕೆಳಗೆಯಾವುದೋಕೂಪ. ಮೇಲೆ ಎತ್ತರವಾದ ನಿಬಿಡವಾದ ಕಾಡುಮರಗಳು ತೂರಲು ಸಂದಿಲ್ಲ. ತಾನು ಬಂದು ಬಂಡೆಯಮೇಲಿರುವನು. ಮೇಲಿನಿಂದಾರೋ ಕೂಗುವಂತೆ ಕೇಳಿಸುವದು. ತಿರುಗಿನೋಡಿದಾಗ ಯಾವುದೋ ಒಂದು ವಿಕಾರಮೂರ್ತಿಯು ನಿಂತಿರುವುದು, ಭಯವಾಗುವುದು. ಅಯ್ಯೋ ಹತ್ತಿರ ಹತ್ತಿರಕ್ಕೆ ಬರುವುದಲ್ಲಾ, ಎಲ್ಲಿ ಹೋಗಲಿ, ಹೇಗೆ ತಪ್ಪಿಸಿಕೊಳ್ಳಲಿ. ಇನ್ನೂ ಹತ್ತಿರ ಬಂತು. ನನ್ನನ್ನು ಹತಮಾಡುವುದೋ, ಎಲ್ಲಿ ಅವಿತುಕೊಳ್ಳಲಿ. ಭೂಮಿಯುನ್ನುದಾಟಿ ಹೊರಟುಹೋಗಲೇ, ದಿಕ್ಕೇತೋಚುವುದಿಲ್ಲ. ಬಹಳ ಹತ್ತಿರಬಂತು. ಕೂಪವನ್ನುದಾಟಲೇ, ದಾಟಬಿಡುವೆನು. ಎನ್ನುತ್ತ ಕೂಪದ ಹತ್ತಿರ ಬಂದನು. ಹಿಂದಿನಿಂದ "ತಾಳು, ತಾಳು, ಬೇಡ, ಬೇಡ" ಎಂದು ಕೂಗಿದಂತಾಯಿತು. ಕೂಗಿದವರಾರೆಂದು ಹಿಂದಿರುಗಿನೋಡಿದನು, ಅಭೀಷಣವಾದ ಆಕಾರಕ್ಕೆ ಬದಲು —ಅದು ಯಾರು-ನೋಡಿನಿಂತಿರುವದು. ಅವಳು, ಅವಳ ಮುಖ, ಸಾವಿತ್ರಿಯ ಮುಖವಲ್ಲವೇ. "ಓ ಸಾವಿತ್ರಿ" ಎನ್ನುತ್ತ ಹಿಂದುರಿಗಿ ಬೇಗನೆ ಹತ್ತಲಾರಂಭಿಸಿದನು. ಕೈಗಳಿಗೂ, ಕಾಲುಗಳಿಗೂ, ಮುಳ್ಳುಗಳು ಚುಚ್ಚಿಕೊಂಡವು. ಮನನೊಂದವನಾಗಿ ಮೇಲೆನೋಡಿದನು. ಪುನಃ ಆ ಭೀಕರವಾದ ಮೂರ್ತಿ- ಹತ್ತಿರಕ್ಕೆ ಬರುತ್ತಲಿದೆ, ಈಸಾರ್ತಿ ಕೈಯನ್ನೆತ್ತಿ ಹೊಡೆಯುವಂತೆ ಬಂತು, ಇನ್ನುಳಿಯುವದಿಲ್ಲ. ಎನ್ನುತ್ತ ಬೇಗನೆ ಕೂಪವನ್ನು ದಾಟಲುದ್ಯುಕ್ತನಾದನು. ಪುನಃ "ತಾಳು, ತಾಳು, ಬೇಡ, ಬೇಡ" ತಿರುಗಿ ನೋಡಿದನು, ಸಾವಿತ್ರಿಯಮುಖ. ಅಲ್ಲಿಯೇನಿಂತನು. ದೃಷ್ಟಿಸಿ

ನೋಡಿದನು, ನಿಶ್ಚಲವಾಗಿ ಆ ಮೂರ್ತಿಯೂ ನಿಂತಿತ್ತು. "ಸಾವಿತ್ರೀ" ಎಂದನು. ಎಲೆಗಳಲ್ಲಿನ ಮರಮರ ಶಬ್ದದಿಂದ ಬಾ, ಎಂದಹಾಗಾಯಿತು. ಊರ್ಧ್ವಶ್ವಾಸದಿಂದ ಹತ್ತಲಾರಂಭಿಸಿದನು. ಪುನಃ ಮುಳ್ಳುಗಳು, ಪುನಃ ಆ ಭೀಕರವಾದ ಆಕಾರ. ಓಡಿ ಬರುವುದು ಅದಕ್ಕೆ ಮುಳ್ಳುಗಳಲ್ಲ ತಾಗುವದಿಲ್ಲ. ಈಗ ಆ ಕಾನನವನ್ನು ದಾಟಲೇಬೇಕು. ಇಲ್ಲವಾದರೆ ಜೀವವು ಉಳಿಯುವದಿಲ್ಲ. ಬೇಗನೇ, ಇಳಿದು ಬಂದನು. ಬಾವಿಯಲ್ಲಿ ಬಿದ್ದು ಹೋಗುತ್ತಿದ್ದನು. "ತಾಳು, ತಾಳು, ಬೇಡ" ಆ ಸಾವಿತ್ರಿಯು ಹತ್ತಿರಕ್ಕೆ ಬಂದಳು, ಬಹಳ ಹತ್ತಿರಕ್ಕೆ ಬಂದಳು. ಒಂದು ಮಾರುದೂರದಲ್ಲಿ ನಿಂತಳು. ಆದರೂ ಚಿಂತೆಯಿಲ್ಲ, ಬಾವಿಯನ್ನು ದಾಟಬೇಕು. ಎಷ್ಟು ಆಳವಿದೆಯೋ ನೋಡಿದನು. ತನ್ನ ತಾಯಿಯ ಮುಖವು ತೇಜಃಪುಂಜವಾಗಿ ಕಾಣಿಸುತ್ತಿತ್ತು. ಎರಡು ಕೈಗಳನ್ನೂ ಚಾಚಿ, "ಬಾ, ಮೂರ್ತಿ, ನನ್ನ ಕಂದಾ, ಬಾ" ಎಂದು ಕರೆಯುವಂತೆ ನಿಂತಿದ್ದಳು. ಹಿಂದುಗಡೆಯಲ್ಲಿ ಸಾವಿತ್ರಿಯು "ತಾಳು, ತಾಳು, ಬೇಡ ಬೇಡ" ಎನ್ನುವಂತೆ ನಿಂತಿದ್ದಳು. ಇಬ್ಬರನ್ನೂ ನೋಡಿದನು. ತಟಸ್ಥನಾದನು. ಮೂರ್ತಿಗೆ ಜ್ಞಾನವು ಶೂನ್ಯವಾಗುತ್ತಲಿದ್ದ ಹಾಗೆ ತೋರಿತು. ಮೈಮೇಲೆ ಎಚ್ಚರಿಕೆಯಿಲ್ಲದಂತಾಯಿತು. ಕಣ್ಣುಗಳನ್ನು ಮುಚ್ಚಿದನು. ಪುನಃ ಕಣ್ಣುಗಳನ್ನು ಬಿಟ್ಟನು. ನಿಜವಾಗಿಯೂ ಕಣ್ಣುಗಳನ್ನು ಬಿಟ್ಟನು, ಎಲ್ಲವೂ ಮಾಯವಾಗಿದ್ದವು. ಆದೇ ಚಿತ್ರಾವತಿಯ ಬಳಿ ತಾನು ಮರಳಿನ ಮೇಲೆ ಕುಳಿತಿರುವನು. "ಇದೇನು"

"ಇದೇನು ?

"ಅದು ಯಾರು ಎಂದು ಹಿಂದಿರುಗಿ ನೋಡಿದನು

"ನಾನು ರಾಜ.

"ಅದು ಯಾವಾಗ ಬಂದೆ

"ನಾನು ಬಂದು ಬಹಳ ಹೊತ್ತಾಯಿತು, ಇಷ್ಟು ಹೊತ್ತಾದರೂ ತಿರಿಗಿ ನೋಡಲಿಲ್ಲವೇಕೆ ?

"ಏನೋ ನೋಡಲಿಲ್ಲ"

"ನನ್ನಲ್ಲಿ ಮುಚ್ಚುಮರೆಯನ್ನು ಮಾಡಬೇಡ. ಇದ್ದ ಸಂಗತಿಗಳನ್ನು ಹೇಳು"

" ಹೇಳುವುದೇನು?

" ನೀನೇಕೆ ಇಲ್ಲಿರುವೆ ?

" ಚಿತ್ರಾವತಿಯು ಬಳಿಗೆ ಎಲ್ಲರೂ ಬರುವಂತೆ ನಾನೂ ಬಂದೆನು "

" ಎಲ್ಲರೂ ಹೊರಟುಹೋಗಿ ಬಹಳ ಹೊತ್ತಾಯಿತಲ್ಲ, ನೀನು ಏಕಾಂಗಿಯಾಗಿ ಇಲ್ಲಿ ಏಕೆ ಇರಬೇಕು ?

" ಅದರಲ್ಲೇನು ?

" ಏಳು ಹೊರಡೋಣ "

" ಇನ್ನೂ ಹೊತ್ತಿರುವದು, ನೀನೂ ಕುಳಿತುಕೋ

" ಈ ನದಿಯು ಹೇಗೆ ಹರಿಯುವದು, ನೋಡಿದೆಯಾ ?

" ನೋಡಿದೆನು. ಎಷ್ಟು ಕಲ್ಮಷಗಳನ್ನು ಸಮುದ್ರಕ್ಕೆ ಸಾಗಿಸಿದರೂ ಇನ್ನೂ ಇದ್ದೇ ಇರುವದೆಂದು ಬೇಜಾರುಪಟ್ಟುಕೊಂಡು ನಿಧಾನವಾಗಿ ಹರಿಯುವಂತಿದೆ."

" ನನಗೆ ಈ ದಿನವೇನೋ ಸಂತೋಷವಾಗಿದೆ

" ಅದೇನು ?

" ನಿನ್ನನ್ನು ಹುಡುಕಿಕೊಂಡು ನಿನ್ನಮನೆಗೆ ಹೋಗಿ ಕೂಗಿದೆನು. ನಿನ್ನತಂಗಿಯು ಹೊರಗೆ ಬಂದಳು. ಮಾತನಾಡುವಳೇನೋ ಎಂದರೆ, ತಟ್ಟನೆ ಒಳಗೆ ಹೊರಟುಹೋದಳು.

" ಅದರಲ್ಲಿ ಉತ್ಸಾಹಕ್ಕೆ ಕಾರಣವಿಲ್ಲವಲ್ಲ

" ಇಲ್ಲ. ನಿಮ್ಮ ಗುರುವನ ಕೈಲಿ ಚಿತ್ರಾವತಿಯೆಡೆಗೆ ಹೋಗೆಂದು ಹೇಳಿ ಕಳುಹಿಸಿದಳು.

" ಅದಕ್ಕೇನು ?

" ಅದಕ್ಕೇನೋ, ನನ್ನದೊಂದು ಆಲೋಚನೆಯುಂಟಾಯಿತು, ಅದಿರಲಿ. ನಿನ್ನ ಸಾವಿತ್ರಿಯು ಹೊರಟುಹೋದ ಸಮಾಚಾರವು ತಿಳಿಯಿತೇ?

" ತಿಳಿಯದೇ ಏನು ? ನನಗೆಲ್ಲವೂ ಗೊತ್ತು, ಈಗ ಆ ಮಾತನ್ನೆತ್ತಬೇಡ

" ಅದು ಏಕೆ, ಕೆಲವುದಿವಸಗಳ ಹಿಂದೆ ಸಾವಿತ್ರಿಯ ಹೆಸರು, ನಿನಗೆ ನಿದ್ರಾಹಾರಗಳಾಗಿತ್ತಲ್ಲ"

" ಈಗ ನಾನು ಸಾವಿತ್ರಿಯನ್ನು ಮದುವೆಯಾಗುವಸಂಭವವಿಲ್ಲ.

" ನಿನ್ನ ತಂದೆ ತಾಯಿಗಳು ಒಪ್ಪಲಿಲ್ಲವೇನು ?

" ತಂದೆಯ ಅಭಿಪ್ರಾಯವು ತಿಳಿಯಲಿಲ್ಲ, ತಾಯಿಗಂತೂ ಮನಸ್ಸೇ ಇಲ್ಲ. ನಿನ್ನೆಯದಿವಸ ಮಾತುಗಳ ಮೇಲೆ ಮಾತು ಬಂದು "ನನಗೆ ಸಾವಿತ್ರಿಯನ್ನು ಕೊಟ್ಟು ಮದುವೆ ಮಾಡಿದರೆ ಮಾಡಿ, ಇಲ್ಲವಾದರೆ ನನಗೆ ಮದುವೆಯೇ ಬೇಡ" ಎಂದು ಹೇಳಿದೆನು. ಅದಕ್ಕೆ ನಿನ್ನೆಯಿಂದಲೂ, ಊಟವಿಲ್ಲದೆ, ಮಾತಿಲ್ಲದೆ, ರೋದಿಸುತ್ತಿರುವಳು. ನಾನೇನು ಮಾಡಲಿ ?

" ಸಾವಿತ್ರಿಯ ಆಲೋಚನೆಯನ್ನು ದೂರಮಾಡು.

" ಮಾಡಿರುವೆನು. ಆದರೆ, ರಾಜ, ಆದರೆ ಆದಿನ ಒಂದು ನಡೆದು ಹೋಯಿತು, ಅದು ನನ್ನ ಜನ್ಮವಿರುವವರೆಗೂ ಮರೆತುಹೋಗುವದಿಲ್ಲ. ಮುಂದೆ ಯಾರನ್ನು ಮದುವೆಯಾದರೂ, ಈ ವಿಷಯವು ಜ್ಞಾಪಕಕ್ಕೆ ಬಂದರೆ ಅಲ್ಲಿಯೇ ಭೂಗತವಾಗಿ ಹೋಗುವೆನು.

" ಅದೇನು ಅಂಥದು.

" ನಾನು ಅವಳನ್ನು ಮುಟ್ಟಿರುವೆನು, ಅಪ್ಪಿಕೊಂಡಿರುವೆನು, ಮಾತು ಕೊಟ್ಟಿರುವೆನು.

" ನೀನು, ಯಾವಾಗಲೂ, ಹೀಗೆಯೇ ಅಷ್ಟರಲ್ಲಿ ಆತುರವೇನಿತ್ತು.

" ಆಗ ಖಂಡಿತವಾಗಿಯೂ, ಮದುವೆಯಾಗುವೆನೆಂದು ತಿಳಿದಿದ್ದೆ.

" ನಿನ್ನ ತಂದೆಗೆ ಹೇಳಿನೋಡು.

" ಈ ಮಾತುಗಳನ್ನು ತಂದೆಗೆಂತು ಹೇಳಲಿ, ನನಗೆ ಮದುವೆಯನ್ನು ಮಾಡು, ನನಗೆ ಸಾವಿತ್ರಿಯನ್ನು ಕೊಟ್ಟು ಮದುವೆಮಾಡು' ಎಂದು ಹೇಳಲೇ? ಅದಕ್ಕೆ ಪ್ರತಿಯಾಗಿ ವಿಷಪಾನವನ್ನಾದರೂ ಮಾಡುವೆನು. ಅದನ್ನು ಮಾತ್ರ ಕೇಳಲಾರೆ. ಆದರೂ, ನನ್ನ ತಂಗಿ ಇರುವಳು ಅವಳಿಂದ ಈ ಕಾರ್ಯವು ಕೈಗೂಡಬಹುದು

" ಸಾವಿತ್ರಿಯನ್ನೇ ಮರೆತುಬಿಡು.

" ಹೇಳಲಿಕ್ಕೇನೋ ಸುಲಭ, ಒಂದು ಬಾಯಿಮಾತು ಆದರೆ ನನ್ನ ಹೃದಯದಲ್ಲಿ, ಯಾವಮೂರ್ತಿಯು ಸ್ಥಿರವಾಗಿ ಆಶ್ರಯವನ್ನು ಹೊಂದಿದು

ವುದೋ, ಯಾವಳನ್ನು ನಾನು ಸದಾ ಬಯಸುತ್ತಿರುವೆನೋ ಅಂತಹವಳನ್ನು ಮರೆತುಬಿಡು ಎಂದು ಹೇಳುವೆಯಲ್ಲ. ಮರೆಯುವಲ್ಲೆನೆ ಆ ವಿಗ್ರಹವನ್ನೂ ಆ ಕಾಂತಿಯನ್ನೂ, ಆ ದಿನವನ್ನೂ, ಮರೆಯುವಲ್ಲೆನೆ, ಇಲ್ಲ ಅದು ನನ್ನ ದೇಹದೊಂದಿಗೆ ನಾಶವಾಗಬೇಕಲ್ಲದೆ, ಇತರ ವಿಧಗಳಲ್ಲಿ ಹೋಗಲಾರದು" ಎಂದೆನುತ್ತ ಕಣ್ಣೀರನ್ನು ಬಿಟ್ಟನು.

"ನಾನು ನಿನಗೆ ಏನನ್ನು ಹೇಳಲೂ ತೋರುವುದಿಲ್ಲ. ಘೋರಸಂಕಟದಲ್ಲಿ ಬಿದ್ದಿರುವೆ.

"ಆ ದಿನರಾತ್ರಿಯಲ್ಲಿ, ನಿನಗೆ ಸ್ವಪ್ನವನ್ನು ಮರೆತಿದ್ದೆನು. ಸಾವಿತ್ರಿಯು ನನ್ನ ಮನಸ್ಸನ್ನು ಅಪಹರಿಸಿದಳು. ಹಾಗೇ ರಾಮಚಂದ್ರನನ್ನು ಮದುವೆಯಾದ ಹಾಗೆ ಕೆಲವು ಕಾಲದ ಮೇಲೆ ತಾನು ಮಾಡಿದ್ದು ತಪ್ಪಾಯಿತೆಂದು ತಿಳಿದು ಎಲ್ಲರೂ ಬಯಸುವದಾದ, ಲೋಕೋಪಕಾರಿಯಾದ ಅಮೃತವನ್ನು ಬಿಟ್ಟು, ಲೋಕಗಳನ್ನು ದಹಿಸುವ, ಯಾರೂ ಹೇಳಲಿಕ್ಕಿಲ್ಲದ ಹಾಲಾಹಲವನ್ನು ಕುಡಿದೆನೆಂದು ಸಂಕಟಪಡುತ್ತಿರುವಾಗ, ಕೃಷ್ಣವೇಣಿಯೂ ನಾನೂ ಎದುರು ಹೋದಂತೆಯೂ, ಆಗ ತನ್ನ ಕಷ್ಟಗಳೆಲ್ಲವನ್ನೂ ನನ್ನ ತಂಗಿಯೊಡನೆ ಹೇಳುತ್ತ, ಆ ದಿನ ಗುಡಿಯಲ್ಲಿ, ನಾನು ಕೈ ಎಳೆದುದನ್ನೂ, ತನ್ನೊಡನೆ, ಮನೆಯಲ್ಲಿ ಮಾತನಾಡಿದ್ದುದನ್ನೂ ಜ್ಞಾಪಿಸಿಕೊಂಡು ತಾನು ಇನ್ನು ಜೀವಿಸಿರುವದು ಸಾಧ್ಯವಿಲ್ಲವೆಂದು, ಆ ಚಿಂತೆಯಲ್ಲಿಯೇ ದಗ್ಧಳಾಗಿ ಹೋಗುವೆನೆಂದೂ ನುಡಿದು, ತಾನು ಆ ಕಳೇಬರವನ್ನು ನೀಗಲಪೇಕ್ಷಿಸಿ, ಭಾವಿಯಲ್ಲಿ ಬೀಳಲುದ್ಯುಕ್ತಳಾದಾಗ, ನಾನು ಘಾಬರಿಯಿಂದ "ಸಾವಿತ್ರೀ ಬೇಡ, ಬೇಡ" ಎನ್ನುತ್ತ ಎಚ್ಚರಿಕೆಯನ್ನು ಹೊಂದಿದೆನು. ಅದು ಈಗಲೂ ಜ್ಞಾಪಕವಿದೆ. ಆ ದಿನದಲ್ಲಿಯೇ ನಿನ್ನನ್ನು ನೋಡಲಿಕ್ಕೂ ಸಹ ಆಗದೆ ನನ್ನತಂದೆಯೊಂದಿಗೆ ಹೊರಟುಹೋಗಬೇಕಾಯಿತು.

"ಹಾಗಾದರೆ ಅವಳು ನಿನಗೆ ದಕ್ಕತಕ್ಕವಳಲ್ಲ.

"ಆದರೂ ಆಶೆಯೊಂದು ಬಾಧಿಸುತ್ತಿರುವದು. ಸಿಗುವಳೋ, ಏನೋ ಎಂಬುವ ಭ್ರಾಂತಿಯೊಂದು ಬಿಡಲೊಲ್ಲನೆಂಬುವುದು. ಈಗ ನೀನು ಬರುವದಕ್ಕಿಂತ ಮೊದಲು, ಅತಿದುಃಖದಿಂದ ಆಲೋಚಿಸುತ್ತಿರು

ವಾಗ ನಾವೆಲ್ಲಿಯೋ ಕುಳಿತಿದ್ದಂತೆಯೂ, ವಿಕಾರವಾದ ಮುಖಗಳನ್ನು ನೋಡಿದ ತೆಯೂ, ಭಾವಿಯಲ್ಲಿ ಬಿದ್ದಂತೆಯೂ, ಹಿಂದಿನಿಂದ ಯಾರೋ ಕೂಗಿದಂತೆಯೂ ತೋರುತ್ತದೆ.

"ನನಗೆ ಇವೆಲ್ಲವೂ ಲಕ್ಷ್ಯವನ್ನು ಟುಮಾಡುತ್ತಿವೆ.

"ನನಗಾದರೋ ಮಹತ್ತರವಾದ ವ್ಯಥೆಯನ್ನುಂಟುಮಾಡುತ್ತಿವೆ.

---

೧೬ ನೆಯ ಪರಿಚ್ಛೇದ.

ನಡುಹಗಲಿನಲ್ಲಿ, ಸೂರ್ಯದೇವನು, ತನ್ನ ಪೂರ್ಣಶಕ್ತಿಯನ್ನು ವಿಶದಪಡಿಸುತ್ತಿರುವಾಗ, ಈತನಿಗೆ ಹೆದರಿ ವಾಯುದೇವನು, ಎಲ್ಲಿಯೋ ಅವಿತುಕೊಂಡಿರುವಲ್ಲಿ, ಒಂದು ಎರಡೆತ್ತಿನಬಂಡಿಯು ನಿಧಾನವಾಗಿ ಪ್ರಯಾಣಮಾಡುತಲಿತ್ತು. ಹಿಂದುಗಡೆಯಲ್ಲಿ ಒಂದು ಕಂಬಳಿಯನ್ನು ಕಟ್ಟಿದ್ದರು. ಮುಂದುಗಡೆಯಲ್ಲಿ ಮಾತ್ರ ಬಯಲಾಗಿತ್ತು. ಉರಿಯುವ ಬಿಸಲಿನಝಳವನ್ನು ತಾಳಲಾರದೆ ಒಳಗಿರುವ ಜನಗಳು ತಹತಹಪಡುತ್ತಿದ್ದರು. ಆಗ ಗ್ರಹಚಾರಕ್ಕೆ ತಕ್ಕಂತೆ ಗಾಡಿಯಚಕ್ರವು ಸ್ವಲ್ಪ ಹಳ್ಳಕ್ಕಿಳಿಯಲು 'ಥಕ್' ಎನ್ನುತ್ತ ಗಾಡಿಯ ಗೂಟವು ತಲೆಗೆ ತಗುಲುತ್ತಿತ್ತು. ಅದನ್ನು ಸುಧಾರಿಸಿಕೊಳ್ಳುವದರೊಳಗಾಗಿ ಬೆನ್ನುಮೂಳೆಗಳು ಪುಡಿಯಾಗುತ್ತಿದ್ದವು. ಸಾಲದುದಕ್ಕೆ ಮುಖಮುಖಕ್ಕೂ ತಾಡನಗಳು. ಕೇಳುವರ್ಯಾರೆಂದರೆ ಅತ್ಯುಗ್ರವಾದ ಸೂರ್ಯಾತಪ. ಮರಗಳ ಸೋಲೇ ಇಲ್ಲ. ಇಲ್ಲೊಂದು ಅಲ್ಲೊಂದು ಗಿಡವು ಕಾಣಿಸುವದು. ಕಲ್ಲುಬಂಡೆಗಳೂ, ಗುಡ್ಡಗಳೂ ಮಾತ್ರ ಹೇರಳವಾಗಿರುವವು. ಏತನ್ಮಧ್ಯೆ ಎಲ್ಲರಿಗೂ, ಬಾಯಾರಿಕೆಗಾರಂಭವಾಯಿತು. "ಸಾವಿತ್ರೀ, ಆ ಲೋಟವನ್ನು ಕೊಡು." ಲಕ್ಷ್ಮಮ್ಮನು—"ನೀರೆಲ್ಲಾ ಕುಡಿದು ಬಿಡಬೇಡಿ, ಇನ್ನು ಬಹಳ ದೂರದವರೆಗೂ ನೀರು ಸಿಗವದಿಲ್ಲ" ಎಂದಳು. 'ಅಯ್ಯೋ ಸಾಯುಂಕಾಲವಾದೀತೆ, ತಂಗಾಳಿಯು ಬೀಸೀತೆ, ಗಿಡ ಮರಗಳು ಬಂದಾವೇ? ಎಂದು ಎಲ್ಲರೂ ಕೋರಲಾರಂಭಿಸಿದರು. ಎತ್ತುಗಳು ಮೆಲ್ಲಮೆಲ್ಲಗೆ ತೂಕಡಿಸುತ್ತಾ ಗಾಡಿಯನ್ನು ಎಳೆಯುತ್ತಿದ್ದವು. ಯತ್ನವಿ

ಲ್ಲದೆ ಪ್ರಯಾಣಮಾಡಿದರು, ಆಗಾಗ್ಗೆ "ಟರ್, ಟರ್, ಎತ್ತೋಗತ್ತೆತ್ತ-ಥು," ಎಂಬುವ ಶಬ್ದವೂ ಎತ್ತುಗಳ ಕೊರಳುಗಳಲ್ಲಿನ ಕಿರುಗಂಟೆಗಳ ಮಣ ಮಣ ಶಬ್ದವೂ, ಕಿವಿಗಳಿಗೆ ಬೇಸರಿಕೆಯನ್ನುಹೋಗಲಾಡಿಸುತ್ತಿದ್ದವು. ಒಂದೊಂದು ಕಲ್ಲು ದೂರವಾಯಿತು, ಬಹಳ ದೂರವಾಯಿತು. ಬಹಳ ಕಲ್ಲುಗಳನ್ನು ಬಿಟ್ಟುಹೋದರು. ಸೂರ್ಯನು ಪಶ್ಚಿಮದಲ್ಲಿ ತಗ್ಗುತ್ತಿದ್ದನು. "ಹೊಳೆಗೆ ಇನ್ನೆಷ್ಟುದೂರವುಳಿದಿರುವದು ?" ಎಂದು ಯಾರೋ ಕೇಳಿದರು. "ಇನ್ನೊಂದು ಮೈಲಿಯುಂಟು" ಎಂದು ಯಾರೋ ಬದಲು ಕೊಟ್ಟರು.

ಸಾಯಂಕಾಲವಾಗಿಹೋಯಿತು, "ಬೇಕಾದವರು ಗಾಡಿಯನ್ನು ಇಳಿಯಿರಿ, ಮರಗಳ ಸಾಲುಗಳವೆ, ತಂಪುಹುಟ್ಟಿತು" ಎಂದು ಹೇಳಿ ಕೋನೇರಯ್ಯನು ಕಂಬಳಿಯನ್ನು ಬಿಚ್ಚಿ ಧುಮುಕಿದನು. ಅವನಹಿಂದೆಯೇ ಅವನ ಭಾವಮೈದಂದಿರೂ ಧುಮುಕಿದರು. ಗಾಡಿಯಲ್ಲಿನಾಗಮ್ಮನೂ, ಸಾವಿತ್ರಿಯೂ, ಲಕ್ಷ್ಮಮ್ಮನೂ, ಮಗುವೂ ಉಳಿದರು. ರಸ್ತೆಯು ಚೆನ್ನಾಗಿತ್ತು. ಗಾಳಿಯು ಬಿರುಸಾಗಿ ಬೀಸುತ್ತಿತ್ತು. ಸಾವಿತ್ರಿಗೂ ಇಳಿಯಲು ಚಪಲ ಮನಸ್ಸಿನಲ್ಲಿರುವ ವೇದನೆಯು ನಿವಾರಣೆಯಾಗಬಹುದೆಂದುಕೊಂಡಳು ಕೆಳಕ್ಕೆಇಳಿದಳು ಗಾಡಿಯಜತೆಯಲ್ಲಿಯೆ ನಿಧಾನವಾಗಿ ನಡೆದುಬರುತ್ತಿದ್ದಳು.

ಮಾರುತನು ನಿಷ್ಕರುಣಿಯಾಗಿ, ನಾಚಿಕೆಯಿಲ್ಲದೆ ಸಾವಿತ್ರಿಯ ಅಂಗಗಳನ್ನು ನೋಡಲೆಳಸುವನು. ಒಂದೊಂದುಬಾರಿ ಸೆರಿಗೆಯು ಬಿಚ್ಚಿ ಹೋಗುವದೆಂದು ಹೆದರಿ, ಗಟ್ಟಿಯಾಗಿ ಹಿಡಿದುಕೊಳ್ಳುವಳು. ಒಂದೊಂದು ಬಾರಿ, ಸೆರಗಿನಕೊನೆಗಳು ಹಾರಿಕೊಂಡು ಆಕಾಶದಲ್ಲಿನಿಲ್ಲುವುವು. ಮುಂದಿನ ಕೂದಲುಗಳನ್ನು ಎಷ್ಟುಹಿಂದಕ್ಕೆ ಒತ್ತಿದರೂ ಪುನಃ ಬಂದು ಬಂದು ಮುಖದಮೇಲೆಲ್ಲಾ ಹಾರಾಡುವುವು. ಎಲ್ಲಿಯೋ ನೋಡುತ್ತಿರುವಾಗ ಕಣ್ಣುಗಳಲ್ಲಿ ಧೂಳು ತುಂಬಿಕೊಳ್ಳುವದು. ಕಣ್ಣುಗಳನ್ನು ಬಿಡಲಿಕ್ಕಾಗದೆ, ಗಾಳಿಗೆ ವಾರೆಯಾಗಿ, ತನ್ನನ್ನು ಬಿಡಲೊಲ್ಲದೆಂದು ಬಗೆದು-ಬೆನ್ನನ್ನು ತಿರುಗಿಸಿಕೊಂಡು ಕಣ್ಣುಗಳನ್ನು ಉಜ್ಜಿಕೊಳ್ಳುವಳು. ಒಂದೊಂದು ಪಕ್ಷಿಯು ಕೂಗುವದನ್ನು ಕೇಳುವಳು. ಗಿಳಿಗಳೆಲ್ಲ ಗುಂಪಾಗಿ ಬಂದು ಮರದ ಮೇಲೆ ಕುಳಿತು ಕೂಡಲೇ ಹಾರಿಹೋದವು, ಅದನ್ನೂ ನೋಡಿದಳು.

ಕೋಕಿಲವು ಒಂದೊಂದುಸಾರಿ " ಕುಹೂ " ಎನ್ನುವದು. ಇದು ಇಲ್ಲಿಗೇಕೆ ಬಂತೆನ್ನುವಳು.

ಸಾವಿತ್ರೀ, ಈಗ ನೀನು ಏನನ್ನು ಬಯಸುವೆ? ನಿನ್ನ ಹೃದಯದಲ್ಲಿ ದುಃಖಸಮುದ್ರವು ಉಕ್ಕಿಬರುತ್ತಿದ್ದರೂ, ಒಂದು ಆಲೋಚನೆಯಿರುವದಲ್ಲವೇ. ಅದೇನು ಆಲೋಚನೆ, ಈಗ ಕಷ್ಟಗಳಿಗೆಯಲ್ಲಿ ಮೂರ್ತಿಯು ಜತೆಯಲ್ಲಿದ್ದರೆ, ನಿನಗೆ ಸತ್ಯಲೋಕಪದವಿಯೇಕೆ ಎನ್ನುತ್ತಿದ್ದೆಯಲ್ಲವೆ? ನಿನ್ನ ವಯಸ್ಸಿಗೆ ನೀನು ಓದಿರುವಷ್ಟು ಯಾರು ಓದಿರುವರು? ಯಾರೂ ಓದಿರುವದಿಲ್ಲ. ನೀನು ಜೈಮಿನಿಯನ್ನೂ ಓದಬಲ್ಲೆ, ಕಾವ್ಯಗಳ ಅಲಂಕಾರಗಳನ್ನೂ ಗ್ರಹಿಸಬಲ್ಲೆ. ಯುಕ್ತವನ್ನರಿತು ಮಾತನಾಡುವೆ, ನಿನಗೆ ಕೆಲವು ಸಂಗತಿಗಳು ತಿಳಿದಿಲ್ಲವೇ? ಯಾವಕಾರ್ಯವೂ ದೈವಾಧೀನವು. ದೈವಸಂಕಲ್ಪವಿಲ್ಲದೆ ಏನೂ ನಡೆಯುವದಿಲ್ಲ. ಒಂದೊಂದುವೇಳೆ ಒಬ್ಬರಿಗೆ ಕೇಡನ್ನು ಮಾಡಲು ಯತ್ನಿಸಿದರೆ, ಅದು ಅವರಿಗೆ ಒಳ್ಳೆಯದಾಗಿ ಪರಿಣಮಿಸುವುದು. ಒಳ್ಳೆಯದಾಗಲೆಂದು ಬಯಸಿದರೆ, ಹಾನಿಯಾಗುವುದು. ಇವಕ್ಕೆಲ್ಲಕ್ಕೂ ಯಾರುನಿಯಾಮಕರು, ಯಾರು ಕಾರಣರು; ಜಗದೊಡೆಯನಲ್ಲದೆ ಇತರರಲ್ಲ.

ನದಿಯು ಸಿಕ್ಕಿತು, ಎಲ್ಲಿಯೋ ಒಂದು ಕಾಲುವೆಯಲ್ಲಿ ನೀರುಹರಿಯುತಲಿತ್ತು. ಆ ನದಿಯನ್ನು ನೋಡಿದಳು, ಆ ಮರಳನ್ನು ನೋಡಿದಳು, ಸುತ್ತಮುತ್ತಲಿನ ಮರಗಳನ್ನು ನೋಡಿದಳು ಸಾವಿತ್ರಿಯು ದೃಷ್ಟಿಯನ್ನು ಮೇಲಕ್ಕೆ ತಿರುಗಿಸಿದಳು. ಆಗಲೇ ಶೂಲದಮೊನೆಯು ಎದೆಯಲ್ಲಿ ತೂರಿ ಬೆನ್ನಲ್ಲಿ ಬಂದಂತಾಯಿತು, ಅವಳ ಮನಸ್ಸಿನ ಸ್ಥಿತಿಯನ್ನು ನಾವು ಹೇಳುವುದಿಲ್ಲ.

೧೭ ನೆ ಪರಿಚ್ಛೇದ.

ಪ್ರಭಾತಸಮಯದಲ್ಲಿ, ಶೀತಾನಿಲನು ಮೆಲ್ಲಮೆಲ್ಲಗೆ ಬೀಸತೊಡಗಿದನು. ಬಳಿಕ ಬಿರುಸಾಗಿ ಬೀಸತೊಡಗಿದನು. ಅಂಬುಜಗಳನ್ನೂ ಹಸರು ಹುಲ್ಲುಗಳನ್ನೂ ಕೆದರುತ್ತ, ಕೋಕಗಳಲ್ಲಿ ರಾಗವನ್ನು ಉಕ್ಕಿಸುತ್ತ, ವನ

ಜಗಳಿಗೆ ಬಯ್ಯನೆ ತಂಗಾಳಿಯನ್ನು ತಿಳಿಸುತ್ತ, ಬೀಸುತ್ತಿದ್ದನು. ಸ್ವಲ್ಪ ಸ್ವಲ್ಪವಾಗಿ ಬಿರಿಯುತ್ತಿದ್ದ ಮಲ್ಲಿಕಾದಿ ಪುಷ್ಪಗಳ ಸುವಾಸನೆಯನ್ನು ಕದ್ದುಕೊಂಡು ಓಡಿಹೋಗುತ್ತಿದ್ದನು. ಮಲ್ಲಿಕಾಮಾನಿನಿಯ ಮಾನಭಂಗವನ್ನು ಮಾಡಿ, ವಿಟಭಾವದಿಂದ ವಂಚಿಸಿ, ನಾಗರಿಯಲ್ಲಿ ನೆರತು, ಅಮೋಘವಾದ ಚಂಪಕಸೌಂದರ್ಯರಾಶಿಯಲ್ಲಿ ಸೇರಿಹೋದನು. ಶೃಂಗಾರಸಪೂರ್ಣವಾದ ವನಿತೆಯರ ಮುಖಕಮಲಗಳನ್ನು ಚುಂಬಿಸಲು, ಸಂದು ಸಂದುಗಳಲ್ಲಿಯೂ ಹುಡುಕುವನು. ಅಕಟಾ! ಆ ಮುಖಕಮಲಗಳು ತಮ್ಮತಮ್ಮ ಪತಿಗಳ ಬಾಹುಶಾಖೆಗಳಲ್ಲಿ ಸೇರಿಕೊಂಡಿರುವದು, ಆ ಮಂದಗತಿಯುಳ್ಳ ದಕ್ಷಿಣಾನಿಲನಿಗೆಂತು ತಿಳಿವುದು. ಆ ಮೊಗದಾವರೆಗಳು ಸ್ಥಿರಚಿತ್ತವಿಲ್ಲದ ಜಾರ, ಚೋರಪ್ರಭಂಜನನಿಗೆಂತು ಸಿಕ್ಕುವುವು. ತನ್ನ ಕೈಲಾಗದಿದ್ದುದರಿಂದ ಪಕ್ಷಿಕುಲವನ್ನೆಬ್ಬಿಸಿ ಕರೆಯಿಸಲಾರಂಭಿಸಿದನು. ನಯದಿಂದಗೆಲ್ಲಬೇಕು ಉಪಾಯದಿಂದಲೇ ಕಾರ್ಯವನ್ನು ಆಗಮಾಡಿಕೊಳ್ಳಬೇಕೆಂದು ಕೋಕಿಲವನ್ನೆಬ್ಬಿಸಿ, ಚೂತಾಂಕುರಗಳನ್ನು ಬಾಯಿಗೆ ಒಡ್ಡಿ, "ಕುಹೂ" ಸ್ವರವನ್ನು ಹೊರಡಿಸಿದನು. ಇದರಿಂದಲೂ ಏನೂ ಅನುಕೂಲವಾಗಲಿಲ್ಲ. ಭಯವನ್ನು ತೋರಿಸಬೇಕೆಂದು, ಕಾಗೆಗಳ ಗುಂಪನ್ನು ಎಬ್ಬಿಸಿ, ಕೂಗಿಸಿದನು. ಆದರೂ ಅನುಕೂಲವಾಗಲಿಲ್ಲ. ಕಡೆಗೆ ತೆರೆದಿದ್ದ ಕೆಲವು ಹೊರಬಾಗಿಲುಗಳನ್ನೂ ತಟ್ಟಿ, ಮುರಿಯಲಾರಂಭಿಸಿದನು. ಏನೊಂದು ಪ್ರಯೋಜನವೂ ಕಾಣಲಿಲ್ಲ. ಈ ಆರ್ಭಟಗಳನ್ನುಂಟುಮಾಡಿದುದರಿಂದ ಯುವತಿಯರು ಇನ್ನೂ ಬಿಗಿಯಾಗಿ ತಮ್ಮ ಎರೆಯರನ್ನು ಅಪ್ಪಿಕೊಂಡರು.

ಪ್ರಾತಃಕಾಲ ೫ ಘಂಟೆಯಾಗಿರಬಹುದು. ಮೂರ್ತಿಯು ಉಡುವಸ್ತ್ರಗಳನ್ನು ಧರಿಸಿ ರಾಜನ ಮನೆಯ ಬಾಗಿಲಿಗೆ ಬಂದು ರಾಜನನ್ನೆಬ್ಬಿಸಿಕೊಂಡು ಹೊರಟುಹೋದನು. ಮನಸ್ಸಿನಲ್ಲಿ ವೇದನೆಯಿಲ್ಲದೆ ಹರ್ಷವಾಗಿದ್ದಲ್ಲಿ, ಈ ಅರುಣೋದಯಕಾಲವು ಮೂರ್ತಿಗೆ ಬಹಳ ಆಹ್ಲಾದಕರವನ್ನುಂಟುಮಾಡುತ್ತಿತ್ತು. ಆದರೆ ಆದಿನ ಅವನಿಗೆ ಹರ್ಷವಿರಲಿಲ್ಲ. ಮುಖದಲ್ಲಿ ಒಂದು ಅಪೂರ್ವಭಾವವು ತಲೆದೋರಿತ್ತು, ದೂರದಲ್ಲಿ ಬೆಟ್ಟಗಳಮೇಲೆ ಮಲಗಿದ್ದ ಮೋಡಗಳನ್ನು ನೋಡದೆ ಹೊರಟರು. ಅಲ್ಲಲ್ಲಿ ಕಣಿವೆಗಳಂತ ಕಾಣುವ

ಪ್ರದೇಶಗಳಲ್ಲಿ ಹೇಗೆ ಯಂತೆ ಹೋಗುತ್ತಿರುವದನ್ನು ನೋಡಲಿಲ್ಲ. ಮೆಲ್ಲಮೆಲ್ಲಗೆ ಕಳ್ಳತನದಿಂದ ಕತ್ತಲೆಯು ಓಡಿಹೋಗುತ್ತಿರುವದು ಗೋಚರವಾಗಲಿಲ್ಲ. ತಟ್ಟನೆ ಪ್ರೋದಯಗಳಿಂದ ಹೆದರಿ ಓಡಿಹೋಗುವವೊಂದೂ ಕಣ್ಣಿಗೆ ಬೀಳಲಿಲ್ಲ. ಪ್ರಾಚೀನಿತಂಬಿನಿಯು ಮೊಗವನುರಾಗದಿಂದ ರಕ್ತವರ್ಣವಾದುದನ್ನು ತಿಳಿಯಲಿಲ್ಲ. ಅಸ್ತವ್ಯಸ್ತವಾಗಿ ಓಡುತ್ತ, ಹಾರಾಡುತ್ತಿದ್ದ ಗಿಳಿಗಳ ಬಳಗವೂ ಅರಿವಾಗಲಿಲ್ಲ. ನಡುನಡುವೆ ಪೈರುಗಳ ಮಧ್ಯದಲ್ಲಿ ನಿಂತಿದ್ದ ಒಕ್ಕಲಗಿತ್ತಿಯರೂ ಎದುರಾಗಲಿಲ್ಲ. ಮತ್ತು ತಲೆಯಮೇಲೆ ಕುಕ್ಕೆಗಳನ್ನು ಹೊತ್ತುಕೊಂಡು ಹೋಗುವವರು ಪಕ್ಕವಾದರೂ ಮನಸ್ಸಿಗೆ ಬರಲಿಲ್ಲ. ಒಂದೊಂದು ಗಾಡಿಯು ಗಡಗಡನೆಂದರೂ ಕಿವಿಗಳಿಗೆ ಸದ್ದಾಗಲಿಲ್ಲ. ಸೂರ್ಯೋದಯವಾಗಿ ಎಳೆಬಿಸಿಲು ಅಲ್ಲಲ್ಲಿ, ಬಂಡೆಗಳಮೇಲೂ, ಸೀರಿನ ಶಾಖೆಗಳ ಮೇಲೂ, ಗಿಡ ಮರಗಳಮೇಲೂ, ಭಂಗಾರದ ವಸ್ತ್ರಗಳನ್ನು ಹೊದ್ದಿಸಿದಂತೆ ರಂಜಿಸುತ್ತಿರುವದೂ, ತೋರಲಿಲ್ಲ.

ಬಾಗೇಪಲ್ಲಿಯನ್ನು ಬಿಟ್ಟು ಪೂರ್ವಾಭಿಮುಖವಾಗಿ ಆ ವ್ಯಕ್ತಿಗಳು ನಡೆದಿದ್ದರೂ, ಮಾತನಾಡದೆ ಹೋಗುತ್ತಿದ್ದರು. ಕಡೆಗೆ ವೇಗವು ಕಮ್ಮಿಯಾಯಿತು. ಮೌನಧಾರಿಗಳು ಸ್ವಲ್ಪ ಬಾಯಿಗಳನ್ನು ಬಿಟ್ಟರು.

ರಾ— ಇಷ್ಟುದೂರ ಮಾತನಾಡದೆ ಬಂದಿರುವೆವಲ್ಲ.

ಮೂ— ಅಹುದು ನನಗೂ ಆಶ್ಚರ್ಯವಾಗಿ ತೋರುವುದು.

ರಾ— ಈಗ ಎಲ್ಲಿಗೆ ಹೋಗೋಣ?

ಮೂ— ಎಲ್ಲಿಯೂ ಬೇಡ, ಆ ಹೊಂಗೆಯಮರದ ಕೆಳಗೆ ಹೋಗಿ ಕುಳಿತುಕೊಳ್ಳೋಣ.

ರಸ್ತೆಗೆ ಸ್ವಲ್ಪದೂರದಲ್ಲಿ ಹೊಂಗೆಯಮರವೊಂದು ಬೆಳೆದಿತ್ತು. ಮರದ ಕೆಳಗೆ, ಮಳೆಯನೀರಿನ ಪ್ರವಾಹಗಳು ಆಗಾಗ್ಗೆ ಹರಿಯುತ್ತಲಿರುವುದರಿಂದ ತಳವೆಲ್ಲವೂ ಮರಳಿನಿಂದ ಕೂಡಿತ್ತು. ಹೊಂಗೆಯಮರದಕೆಳಗೆ ಹೋಗಿ ನೋಡಲು ಚೊಕ್ಕಟವಾಗಿಗುಡಿಸಿದ್ದು, ರತ್ನಗಂಬಳಿಯನ್ನುಹಾಸಿದಂತಿತ್ತು. ನಮ್ಮವಾಚಕರು ಇದನ್ನುಕೇಳಿ ಆಶ್ಚರ್ಯವನ್ನು ಹೊಂದಬಾರದು. ಹೊಂಗೆಯಹೂವೂ, ಹೊಂಗೆಯ ಎಲೆಯೂ ಕಬ್ಬಿನ ಗದ್ದೆಗೆ ಶ್ಲಾಘ್ಯವಾದ ಗೊಬ್ಬ

ರವಾಗುದರಿಂದ, ಹಳ್ಳಿಯ ಜನರು ಆ ಹೂವುಗಳನ್ನು ಗುಡಿಸಿ, ಬುಟ್ಟಿ ಮಾಡಿ ತೆಗೆದುಕೊಂಡು ಹೊರಟುಹೋಗುವರು. ಈಗಲೂ ಯಾರಿಗಾದರೂ ಅಪೇಕ್ಷೆಯಿದ್ದಲ್ಲಿ ಹೊಂಗೆಯ ಮರಗಳು ಚಿಗುರಿ ಹೂವುಗಳನ್ನು ತಳೆದಿರುವಾಗ ಬಾಗೇಪಲ್ಲಿಯ ಪ್ರಾಂತ್ಯಕ್ಕೆ ಹೋಗಿ ನೋಡಬಹುದು. ಯಾವ ಹೊಂಗೇ ಮರಗಳ ಸಾಲುಗಳು ಗುಡಿಸದೆ ಹೇಯವಾಗಿರುವುವೆಂದು ಹೇಳುವರೋ ನಾವು ಕೇಳಲು ಆಶೆಯುಂಟು. ಹಾಗೆ ಗುಡಿಸಿದ ತರುವಾಯ ಪುಷ್ಪಗಳು ಆಗಾಗ್ಗೆ ಕ್ಷಣಕ್ಷಣಕ್ಕೂ ಉದುರುತ್ತ ಭೂಮಿಯ ಮೇಲೆ ರತ್ನಗಂಬಳಿಯನ್ನು ಹಾಸಿರುವರೋ ಎನ್ನುವ ಭ್ರಾಂತಿಯನ್ನುಂಟುಮಾಡುವದು. ಇಂತಹ ಎಡೆಯಲ್ಲಿ ಮೂರ್ತಿಯೂ, ರಾಜನೂ ಹೋಗಿ ಕೆಲವು ಹೊಂಗೆಯ ಎಲೆಗಳನ್ನು ಹಾಸಿಕೊಂಡು ಕುಳಿತರು.

ಮೂ— ನಾನು ನಾಳೆಯ ದಿವಸವೇ ಬೆಂಗಳೂರಿಗೆ ಹೊರಟು ಹೋಗುವೆನು. ಮನೆಯಲ್ಲಿ ನನಗೆ ಸುಖವಿಲ್ಲ.

ರಾ— ಅದೇನು ಹೀಗೆ ನುಡಿಯುವೆ, ಮನೆಯಲ್ಲಿ ಸುಖವಿಲ್ಲವೇ.

ಮೂ— ನೆನ್ನೆಯ ದಿವಸ ರಾತ್ರಿಯಲ್ಲಿ ನನ್ನ ತಂದೆಯು ಸರ್ಕ್ಯೂಟಿನಿಂದ ವಾಪಸು ಬಂದನು. ಇಷ್ಟು ಹೊತ್ತಿಗೆ ಸಮಾಚಾರಗಳು ತಿಳಿದುಹೋಗಿರುತ್ತವೆ. ನಾನು ಇನ್ನು ಮನೆಗೆಂತು ಹೋಗಲಿ, ನನ್ನ ತಂದೆಯೊಂದಿಗೆ ಮುಖವನ್ನು ಕೊಟ್ಟು ಮಾತನಾಡಲೂ ಸಹ ಆಗುವದಿಲ್ಲ.

ರಾ— ಆದರೂ ಬೆಂಗಳೂರಿಗೆ ಹೋದರೇನು.

ಮೂ— ಮರೆಯಾಗಿದ್ದರೆ ಅದೇ ಸಾಕು. ಎದುರಿನಲ್ಲಿದ್ದುಕೊಂಡು ಮೋರೆಗಳನ್ನು ಸೊಟ್ಟಗೆ ಮಾಡಿಕೊಳ್ಳುವದಕ್ಕಿಂತಲೂ, ನಮ್ಮ ಹಿಂದಿನಲ್ಲಿ ಏನು ನಡೆದರೂ ಚಿಂತೆಯಿಲ್ಲ.

ರಾಜ— ನಾನು ನಿನ್ನ ನಡವಳಿಕೆಯನ್ನು ಮೆಚ್ಚಲಾರೆ. ಅದು ತಪ್ಪು, ಏನಿದ್ದರೂ ಎದುರಿಗೆ ನಡೆಯಲಿ, ಹೆದರಿಕೆಯೇನು.

ಮೂ— ಹೆದರಿಕೆಯೇನು, ನನಗೆ ಧೈರ್ಯವಿಲ್ಲ.

ರಾ— ನೀನು ಹೇಡಿ.

ಮೂ— ಯಾವ ಕಾರ್ಯದಿಂದ ತಂದೆತಾಯಿಗಳು ಅತೃಪ್ತರಾಗುವರೋ

ಅವರಿಗೆ ಕೋಪವೂ ಬರುವುದೋ, ಅಂತಹ ನಿನ್ನ ನಾನುವಾಟಿ, ಅವರೆದುರಿಗೆ ಹೋಗುವುದುಚಿತವೇ ?

ರಾ— "ನೀನು ಮಾಡಿದ ತಪ್ಪುಗಳನ್ನೆಲ್ಲಾ ಅವರು ಮನಸ್ಸಿನಲ್ಲಿಟ್ಟು ವುದಾದರೆ ಇದುವರಿಗೂ ನಿನ್ನಮೇಲೆ ಎಷ್ಟು ದೋಷಾರೋಪಣೆಗಳಾಗ ಬಹುದು ನಿನಗೆ ಸರಿಯಾದವಿವೇಚನೆಯಿಲ್ಲ. ತಾಯಿತಂದೆಗಳು ಮಕ್ಕಳ ಹಿತಕ್ಕಾಗಿಯೇ ಒಂದೆರಡುಮಾತು ಗದರಿಸಿದ್ದಾದರೆ, ಅದನ್ನು ಪ್ರತಿಕೂಲ ವಾಗೆಣಿಸುವುದು ಯಾವಧರ್ಮ. ನೀನು ನಿನ್ನತಾಯಿಯಾಳಿಯಲ್ಲಿ ಹೇಳು. "ನನಗೆ ಸಾವಿತ್ರಿಯೇನೂ ಬೇಡ, ನೀವು ಯಾರನ್ನು ಮದುವೆಯಾಗೆಂದರೆ ಅವರನ್ನು ಆಗುವೆನು. ತಪ್ಪೆಣಿಸಬೇಡಿ"

ಮೂ— "ರಾಜ, ನನಗೆ ಇತರರೊಂಗಸಿನಲ್ಲಿ ಸುಖವಿಲ್ಲ. ನನ್ನಸುಖವನ್ನು ನನ್ನಮಾತಾಪಿತೃಗಳು ಎಣಿಸಬೇಕಲ್ಲವೇ ? ನಾನಲ್ಲವೇ ಮುಂದಕ್ಕೆ ಸಂಸಾರವನ್ನು ನಡೆಸಿಕೊಂಡಿರಬೇಕು. ಸಾವಿತ್ರಿಯು ಅವರೊಡನೆ ಎಷ್ಟು ದಿವಸಗಳು ನನ್ನನ್ನು ಬಿಟ್ಟು ಇದ್ದಳು ?

ರಾ—"ಅವರಿಗೂ ಈ ಆಲೋಚನೆಗಳುಂಟು, ಹುಡುಗನಾದ ನಿನಗೇ ಇಷ್ಟುಬುದ್ಧಿಯಿರುವಲ್ಲಿ ಅವರಿಗೆಷ್ಟಿರಬಹುದು ?

ಮೂ—"ನನಗೆ ಸಾವಿತ್ರಿಯುಹೊರತು ಬೇರೆಬೇಡ, ಬೇರೆಯಾದರೆ, ಅಯ್ಯೋ ನನಗೆ ದುಃಖವಲ್ಲದೆ—

ರಾ— "ಛೀ ನಿನ್ನ ಕೀಳುಮತಿಯನ್ನು ಹೇಗೆಂದು ವರ್ಣಿಸಲಿ. ಅವಳ ಹಿಂದುಮುಂದು ಗೊತ್ತಿಲ್ಲ. ಸದ್ಗುಣ ದುರ್ಗುಣಗಳು ತಿಳಿದಿಲ್ಲ, ಅವಳಲ್ಲಿ ಏನಾದರೂ ಹುಳುಕಿರುವದು ಕಂಡಿಲ್ಲ. ನೀನು ದುಡುಕಿ ಅವಳೇ ಬೇಕೆಂದು ಹಟಹಿಡಿದರೆ ನೀನು ಮೂರ್ಖನು

ಮೂ— "ನಾನು ಮೂರ್ಖನಾದರೂ ಚಿಂತೆಯಿಲ್ಲ.

ರಾ-ಈಗಸಾವಿತ್ರಿಯು ಹೊರಟುಹೋದಳಲ್ಲ. ಅವಳ ಮದುವೆಯು ಇನ್ನುಎರಡುಮೂರು ದಿವಸಗಳುಕೂಡ ಇರುವಹಾಗಿಲ್ಲ ನೀನು ಮಾಡುವದೇನು ? ಮಾಡಿದುದೇನು ? ನೀನು ಬೆಂಗಳೂರಿಗೆ ಹೋದರೂ ಮದುವೆಯು ನಿಲ್ಲುವದಿಲ್ಲ.

ಮೂ—“ ಆದರೂ ನನ್ನತಂಗಿಯಮಾತೊಂದಿರುವದು, ಅದರ ಸಹಾಯವು ಏತಾಗುವದೋ ಸಾವಿತ್ರಿಯ ಚಿಕ್ಕಪ್ಪನೂ, ಈದಿವಸವೋ, ನಾಳೆಯೋ ಬರುವನಂತೆ. ಬಂದರೆ—

ರಾ— ಬಂದರೇನು ?

ಮೂ— ಕೇಳಬಹುದು

ರಾ— ಈಗ ಆ ಮಾತುಗಳಿರಲಿ, ಊರಿಗೆ ಹೋಗೋಣ

ಮೂ— ಈಗ ನಾನು ಊರಿಗೆ ಬರುವದಿಲ್ಲ. ಇಲ್ಲಿಯೇ ಹತ್ತಿರದ ಹಳ್ಳಿಯಲ್ಲಿ ನಿಂತುಬಿಡುವೆನು.

ರಾ— ಮನೆಯಲ್ಲಿ ಹೇಳದೇ ಮಾಡದೇ—

ಮೂ— ಇಲ್ಲಿಂದ ಹೇಳಿಕಳುಹಿಸುವುದು

ರಾ— ಇಲ್ಲಿ ನಿಲ್ಲುವುದೆಲ್ಲಿ? ಊಟಮಾಡುವುದೆಲ್ಲಿ ?

ಮೂ— ಅವುಗಳ ಆಲೋಚನೆಯೇಕೆ, ನಾನು ಆಸ ಲೋ...... ವೆನು. ರಾಜ ನನ್ನಮಾತಿರಲಿ; ನೀನೂ, ನಾನೂ ಎಷ್ಟು ದಿವಸಗಳಿಂದ ಸ್ನೇಹಿತರು ?

ರಾ— ಎಷ್ಟುದಿವಸಗಳಿಂದಯೆಂದರೇನು, ಈಗ್ಗೆ ೬ ವರುಷಗಳಾದುವು.

ಮೂ— ನನ್ನಮಾತನ್ನು ನೀನು ಎಂದೂ ಮೀರಿಲ್ಲ, ನಿನ್ನಮಾತನ್ನು ನಾನು ಎಂದೂ ಮೀರಿಲ್ಲ

ಅಹುದು ಅದರಿಂದೇನು ?

ಮೂ—ನನ್ನ ತಂಗಿ ಕೃಷ್ಣವೇಣಿಯನ್ನು ನೋಡಿರುವೆಯಲ್ಲವೆ ?

ರಾ— “ ಅಹುದು ” ರಾಜನಿಗೆ ರೋಮಾಂಚವುಂಟಾಯಿತು.

ಮೂ— ನೀನು ಅವಳನ್ನು ಒಪ್ಪುವಿಯೋ !

ರಾ— ಇದೇನು ಹಾಸ್ಯಮಾಡುವಿಯೋ ಮೂರ್ತಿ, ಎಂದು ನಗುತ್ತ ನುಡಿದನು.

ಮೂ— ಹಾಸ್ಯವಲ್ಲ. ನಿಜವಾಗಿಯೂ, ಅವಳನ್ನು ನಿನಗೆ ಕೊಡಬೇಕೆಂದು ಮಾತುಗಳು ನಡೆದಿವೆ. ನನ್ನ ತಂದೆಯಂತೂ ನಿನ್ನನ್ನು ಚೆನ್ನಾಗಿ ಬಲ್ಲನು. ನನ್ನತಾಯಿಯೂ ಒಪ್ಪಿರುವಳು.

ರಾಜನು ಯೋಚಿಸಿದನು. "ನನ್ನ ಮಗಳನ್ನೂ, ಮಧುಕಪುತ್ರನೂ, ಒಪ್ಪಬೇಕಲ್ಲ, ಅವರಿಗೇನು, ಒಪ್ಪುವರು. ನಾನು ಸರಿಮಾಡುತ್ತೇನೆ. ಹಾಗಾದರೆ ನಮ್ಮಿಬ್ಬರ ಮದುವೆಗಳು ಏಕಕಾಲದಲ್ಲಿ ಆಗಬಹುದು,

ಮೂ— ನನ್ನ ಸಾವಿತ್ರಿಯು ನನಗೆ ದಕ್ಕಿದ್ದರೆ ನನ್ನ ಜನ್ಮ ಪಾವನವಲ್ಲ.

ರಾ- ಛೀ ಛೀ, ಹಾಗೆನ್ನಬೇಡ.

ಹೊಂಗೆಯ ಮರದ ನೆಳಲಿನಿಂದ ಹೊರಟು ಮಾರ್ಗವನ್ನು ಸೇರಿದರು ನೂರುವಾರು ದೂರದಲ್ಲಿ ಒಂದು ಕಾಲುಹಾದಿಯು ಎಡಕ್ಕೆ ತಿರುಗುವದು. ಅದರಲ್ಲಿ ಹೊರಟು "ನೀರ್ಗಲ್ಲಿ" ಯನ್ನು ಸೇರಿದರು ಇವರು ಇನ್ನೂ ಹಳ್ಳಿಯೊಳಗೆ ಪ್ರವೇಶಿಸುತ್ತಿರುವಲ್ಲಿಯೇ ಪಕ್ಕದಲ್ಲಿ ಹುಡುಗರೂ ಹುಡುಗಿಯರೂ, ಆಶ್ಚರ್ಯದಿಂದ ಅವರ ಉಡುಪುಗಳನ್ನು ನೋಡಲುಪಕ್ರಮಿಸಿದರು ಕುಕ್ಕೆಯಲ್ಲಿ ಮಣ್ಣನ್ನು ಹೊತ್ತುಕೊಂಡು ಹೋಗುತ್ತಿದ್ದ ಒಕ್ಕಲಗಿತ್ತಿಯೂ, ನಿಂತು ತಿರುಗಿನೋಡಿದಳು. ಕುರಿಗಳನ್ನು ಅಟ್ಟಿಕೊಂಡು ಹೋಗುತ್ತಿದ್ದ ಕುರುಬರೂ ತಟಸ್ಥರಾದರು. ಯಾರೋ ಹೊಸಬರು ಬಂದಿರುವರೆಂದು ಹಳ್ಳಿಯಲ್ಲಿ ವರ್ತಮಾನವು ಹರಡಿತು ಒಬ್ಬೊಬ್ಬರು "ಯಾವೂರು ಸ್ವಾಮಿ" ಎಂದು ಕೇಳುವರು "ನಮ್ಮದು ಇಲ್ಲೇ ಹತ್ತಿರದಲ್ಲೇ" ಎಂದು ಮೂರ್ತಿಯು ಬದಲು ಕೊಡುತ್ತಿದ್ದನು ಹಳ್ಳಿಯಲ್ಲಿ ಒಂದು ದೊಡ್ಡ ಅಶ್ವತ್ಥಮರ ಇರುವುದು ದೊಡ್ಡ ಅಶ್ವತ್ಥ ಕಟ್ಟೆಯೂ ಉಂಟು ಅಶ್ವತ್ಥ ಕಟ್ಟೆಯ ಮೇಲೆ ನಾಗರಕಲ್ಲುಗಳನ್ನು ನಿಲ್ಲಿಸಿರುವರು ಕಲ್ಲು ಕಲ್ಲುಗಳಿಗೆ ಅರಿಸಿನ ಕುಂಕುಮ ಪೂಜೆಯೂ, ಒಂದೆರಡು ಬಾಡಿದ ಹೂವುಗಳ ಅರ್ಚನೆಯೂ ಆಗಿದ್ದವು. ಆ ಅಶ್ವತ್ಥ ಕಟ್ಟೆಯ ಮುಂದುಗಡೆಯಲ್ಲಿ ಮೂರ್ತಿಯೂ, ರಾಜನೂ, ಕುಳಿತರು. ಮೂರ್ತಿಯು-ಏ ಹುಡುಗ, ಪಟೇಲನ್ನು ಕರೆದುಕೊಂಡು ಬಾ, ಮೂರು ಕಾಸು ಕೊಡುತ್ತೇನೆಂದನು 'ಹೂ' ಎನ್ನುತ್ತ ಹುಡುಗನು ಓಡಿಹೋದನು. ಕೊಂಚ ಹೊತ್ತಿನಲ್ಲಿಯೇ ಪಟೇಲನೂ ಬಂದನು. ಇನ್ನು ಸ್ವಲ್ಪ ಹೊತ್ತಿಗೆ ಹೊಲದ ಕಡೆಯಿಂದ ಶಾನುಭೋಗನೂ ಬಂದನು.

"ಏನು ಸ್ವಾಮಿ, ಬಹಳ ದೂರ ಬಂದಿರಿ, ದಣಿವಾಗಿರಬಹುದು, ಊರೊಳಗೆ ಬನ್ನಿ" ಎಂದು ಪಟೇಲನು ಕರೆದನು

"ಇಲ್ಲ, ನಾವು ಊರಿಗೇನೆ ಹೊರಟುಹೋಗುತ್ತೇವೆ. ಸುಮ್ಮನೆ ಮಾತನಾಡುತ್ತ ಬಂದುಬಿಟ್ಟೆವು. ಈಗೇನು ಅಷ್ಟು ಹೊತ್ತಾದಂತೆಯೂ ಕಾಣುವುದಿಲ್ಲ."

"ನಮ್ಮ ಮನೆಯಲ್ಲಿ ಅಡಿಗೆಯಾಗಿದೆ, ಊಟವನ್ನು ಮಾಡಿಕೊಂಡು ಸಾಯಂಕಾಲದಲ್ಲಿ ದಯಮಾಡಿಸಬೇಕು." ಎಂದು ಶಾನುಭೋಗನು ಹೇಳಿದನು.

"ಶಾನುಭೋಗರೆ, ಇನ್ನೊಂದು ತಡವೆ ಬರುತ್ತೇವೆ. ಈಗ ಮನೆಯಲ್ಲಿ ಹೇಳಿಬಂದಿಲ್ಲ. ಯಜಮಾನರು ಕೋಪಿಸಿಕೊಳ್ಳುತ್ತಾರೆ" ಎಂದು ಹೇಳುತ್ತ ಕಲ್ಲಿನಮೇಲಿನಿಂದೆದ್ದನು. ಅಷ್ಟರಲ್ಲಿಯೇ "ಸ್ವಾಮಿ, ಹೋಗಕೂಡದು. ತೋಟಿಯನ್ನು ಸಂಬೇದಾರರಿಗೆ ಹೇಳಿ ಕಳುಹಿಸುತ್ತೇನೆ. ನೀವು, ನಿಲ್ಲಬೇಕು. ಏನೋ ಬಡವರ ಮನೆ" ಎಂದು ಶಾನುಭೋಗನು ಉತ್ತರ ಕೊಟ್ಟನು.

"ಶಾನುಭೋಗರೆ, ಬಡವರ ನೀವಾದರೆ, ಭಾಗ್ಯವಂತರಾರು? ನೀವು ಏಕೆ ತೊಂದರೆಯನ್ನು ತೆಗೆದುಕೊಳ್ಳುತ್ತೀರಿ. ಇನ್ನೆರಡು ಗಂಟೆಯೊಳಗಾಗಿ ಬಾಗೇಪಲ್ಲಿಯನ್ನು ಸೇರುತ್ತೇವೆ." ಎಂದು ಕೆಳಕ್ಕಿಳಿದನು.

ಸ್ವಾಮಿ, ಕ್ಷಮಿಸಬೇಕು. ನೀವು ಹೋದರೆ ನನಗೆ ಬಹಳ ತೊಂದರೆಯುಂಟಾಗುವುದು

"ಏನಪ್ಪಾ, ನಾವು ಎಲ್ಲಿ ಹೋದರೂ ತೊಂದರೆಕೊಡತಕ್ಕ ಜನಗಳಿಗೆ ನೆಮ್ಮದಿಯಿಲ್ಲ. ಮೊನ್ನೆ ಜಮಾಬಂದಿಯಲ್ಲೇ ನಿಮಗೆಲ್ಲಾ —

"ಸ್ವಾಮಿ, ಇಂತಹ ಖರ್ಚುಗಳು ದಿವಸ ದಿವಸದಲ್ಲಿಯೂ ನಡೆಯುತ್ತಿರುತ್ತವೆ. ಅವುಗಳನ್ನೆಲ್ಲಾ ಎಣಿಸುವುದಕ್ಕಾದೀತೆ?

"ಸರಿ, ನಿಮ್ಮಿಷ್ಟವಿದ್ದಂತೆಯೇ ನಡೆಯಲಿ. ಇನ್ನೊಂದು ಬಾರಿ ಹೀಗೆ ಬರುವುದಿಲ್ಲ

"ನೀವು ಇಲ್ಲಿಯೇ ಇದ್ದರೂ, ಸಂತೋಷ., ನಮಗೆ ಭಾರವಿಲ್ಲ.

"ನಿಮ್ಮ ಮನೆಗೆ ಹೊರಡೋಣ. ಅಯ್ಯಾ ಪಟೇಲ್, ಎರಡು ಎಳನೀರು ತರಿಸಯ್ಯಾ, ಬಹಳ ಬಾಯಾರಿಕೆಯಾಗುತ್ತೆ.

ಪಟೇಲನನ್ನು ಕರತಂದ ಹುಡುಗನಿಗೆ ಮೂರು ಕಾಸು ಸಿಕ್ಕಿತು.

೧೮ ನೆ ಪರಿಚ್ಛೇದ.

ನೀರ್ಗಹಳ್ಳಿಯ ಶಾನಭೋಗನು ಸಮೃದ್ಧನಾದನು. ತನ್ನ ಗ್ರಾಮದಲ್ಲಿಯೇ ಹೊಲ, ಗದ್ದೆ, ತೋಟಗಳೂ ಅಲ್ಲದೆ ಒಂದು ಒಳ್ಳೆಯ ಮನೆಯನ್ನೂ ಸಂಪಾದಿಸಿದ್ದನು. ಊರಿಂದೂರಿಗೆ ಹೋಗುವ ಪ್ರಯಾಣಿಕರು ಈತನ ಹಳ್ಳಿಗೆ ಮಧ್ಯಾಹ್ನದ ಹೊತ್ತಿಗೆ ಬಂದರಾದರೆ ಅವರನ್ನು ಊಟ ಉಪಚಾರಗಳಿಲ್ಲದೆ ಕಳುಹಿಸುತ್ತಿರಲಿಲ್ಲ. ಸಾಧಾರಣವಾಗಿ ನಾಲ್ಕು ಅಥವ ಐದು ಬ್ರಾಹ್ಮಣರು ಹೊರಗಿನ ಜನಗಳು ಊಟಕ್ಕಿರುತ್ತಿದ್ದರು. ತನಗೆ ದೇವರು ಕೊಟ್ಟಿರುವುದರಿಂದ ದಾನಧರ್ಮಗಳನ್ನು ಮಾಡಬೇಕಲ್ಲದೆ ಅನ್ಯಥಾ ಆಗಕೂಡದೆಂದು ಭಾವಿಸಿದ್ದನು. ಬಡವರಾದವರಿಗೆ ಆಗಾಗ್ಗೆ ಸಮಾರಾಧನೆಗಳನ್ನು ಮಾಡಿಸಿ, ಉಟ್ಟುಬರೆಗಳನ್ನು ಕೊಡುವನು. ಬಗುಬರಹ ಬಂದಿರುವವರು ಬಂದರೆ ಅವರಿಗೆ ಮರ್ಯಾದೆಯನ್ನು ಕೊಡುವನು.

ಈತನ ಸದ್ಗುಣಗಳನ್ನು ಬಲ್ಲ ಸುತ್ತಮುತ್ತಲಿನ ಹಳ್ಳಿಯ ಜನರು ವಿಶೇಷವಾಗಿ ಕೊಂಡಾಡುವರು. ತನ್ನನ್ನು ಯಾರಾದರೂ ಪ್ರೋತ್ಸಾಹಿಸಿದರೂ, ಒಳ್ಳೆಯ ಮಾತುಗಳನ್ನಾಡಿದರೂ ಹಿಗ್ಗತಕ್ಕವನಲ್ಲ. ಮತ್ತು ದೂಷಿಸಿದರೂ ಕೋಪವನ್ನು ತಾಳತಕ್ಕವನಲ್ಲ. ಕೆಲವು ವರುಷಗಳಿಂದೆ ತನ್ನ ಹಿರಿಯಮಗನು ಕಾಲವಾದನು. ಆ ದುಃಖವನ್ನು ಸಹಿಸಿಕೊಂಡು ತನ್ನ ಕೈಲಾದಮಟ್ಟಿಗೂ ಬಡಹುಡುಗರಿಗೆ ವಿದ್ಯಾಬುದ್ಧಿಗಳನ್ನು ಹೇಳಿಸಲುಪಕ್ರಮಿಸಿದನು. ಈತನು ತನ್ನ ಹಣವನ್ನು ವ್ಯಯಮಾಡಿ ಕಟ್ಟಿಸಿದ ಪಾಠಶಾಲೆಯೊಂದು ಈಗಲೂ ನೀರ್ಗಹಳ್ಳಿಯಲ್ಲಿರುವದು. ಕೇವಲ ತಿನ್ನುವದಕ್ಕೂ ಗತಿಯಿಲ್ಲದೆ ಹೀನಸ್ಥಿತಿಯಲ್ಲಿದ್ದ ಹುಡುಗರು ಯಾವಜಾತಿಯವರಾದರೂ ತನ್ನ ಕಣ್ಣಿಗೆ ಬಿದ್ದರಾದರೆ ಅವರನ್ನು ಕರೆತಂದು ತಂದೆಯೋಪಾದಿಯಲ್ಲಿ ಶಾಲೆಗೆ ಸೇರಿಸಿ ತನ್ನ ಮನೆಯಲ್ಲಿ ಅನ್ನವನ್ನು ಹಾಕುವನು. ಅವರು ಬುದ್ಧಿವಂತರಾಗಿ ಓದುತ್ತ ಬಂದರೆ, ದೊಡ್ಡ ಊರುಗಳಿಗೂ ಕಳುಹಿಸಿ, ತನಗೆ ನೆಂಟರೂ ಇಷ್ಟರೂ ಆದವರಲ್ಲಿ ಬಿಟ್ಟು ವೃದ್ಧಿಗೆ ತರುವನು.

ತಾನು ಪ್ರತಿದಿನದಲ್ಲೂ ಬ್ರಾಹ್ಮಮುಹೂರ್ತದಲ್ಲೆದ್ದು ಸ್ನಾನಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು, ಕೆಲವುಹೊತ್ತು ಪಾರಾಯಣವನ್ನು ಮಾಡುವನು. ತನ್ನ ಜವಾನುಗಳ ಬಳಿ ಹೋಗಿ ಅವರಿಂದ ಮಾಡಬೇಕಾದ ಕೆಲಸಗಳನ್ನು ಮಾಡಿಸುತ್ತ ಆಗಾಗ್ಗೆ ತಾನೂ ಸಹಾಯಕನ್ನಾಗುತ್ತ, ನಯದಿಂದಲೂ ಭಯದಿಂದಲೂ ಸಾಗುವಳಿಯನ್ನು ಮಾಡಿಸುತ್ತಿದ್ದನು. ತೋಟದಲ್ಲಿ ಮಾತ್ರ ತನಗೆಬೇಕಾದ ಗಿಡಗಳಿಗೆ ತಾನೇ ನೀರನ್ನು ಹಾಕಿ ಬೆಳಯಿಸಿರುವನು. ಇರುವಂತಿಗೆ, ಮೊಲ್ಲೆ, ಮಲ್ಲಿಗೆ ಒತ್ತೆಗಳು ಅತನಿಗೆ ಪ್ರಿಯವಾದವು. ಇವುಗಳಲ್ಲದೆ ಗುಲಾಬಿ, ಸೇವಂತಿಗೆ, ಸಂಪಿಗೆಯಗಿಡಗಳೂ ಇದ್ದವು. ಬಾಳೆಯತೋಪು ತೆಂಗಿನತೋಪುಗಳೂ ಇದ್ದವು. ಬಾಳೆಯಗೊನೆಗಳ ತುದಿಯಲ್ಲಿನ ಹೂವಿನಿಂದ ಮಕರಂದವು ತೊಟ್ಟಿಕ್ಕುವದನ್ನು ನೋಡುತ್ತಾ ನಿಲ್ಲುವನು. ಭ್ರಮರಗಳ ಆಗಮನವನ್ನೂ, ಅವುಗಳ ಝೇಂಕಾರವನ್ನೂ, ಹಾರಾಡುವಿಕೆಯನ್ನೂ, ಈಕ್ಷಿಸುತ್ತ, ಸಂತೋಷವನ್ನು ಹೊಂದುವನು. ಬಾಳೆಯಗಿಡಗಳಿಗೆ ಸರಿಯಾದ ಪಾತಿಗಳನ್ನು ಮಾಡಿರುವರೋ, ಇಲ್ಲವೋ ಎಂಬುದನ್ನು ವಿಚಾರಿಸುವನು. ಮಧ್ಯಾಹ್ನಕಾಲಕ್ಕೆ ಹೊದಲೇ ಮನೆಗೆಬಂದು ಕೆಲವು ಹಳೆಯಕಡತಗಳನ್ನು ನೋಡುತ್ತ, ಅಡಿಗೆಯಾಗುವವರೆವಿಗೂ ಹೊತ್ತನ್ನು ಕಳೆಯುವನು.

ಶಾನುಭೋಗನ ಹೆಸರು ನಾರಣಪ್ಪ. ಈತನ ಸಂಸಾರವು ಬಹಳ ದೊಡ್ಡದಲ್ಲ. ಇಬ್ಬರು ಗಂಡುಮಕ್ಕಳಿರುವರು. ಇಬ್ಬರು ಹೆಂಣುಮಕ್ಕಳಿರುವರು. ಹಿರಿಯಮಗನು ಈಗ ಮೈಸೂರಿನಲ್ಲಿ ಓದುತ್ತಿರುವನು. ಹೆಣ್ಣುಮಗಳೊಬ್ಬಳು ಗಂಡನಮನೆಯಲ್ಲಿ ಸಂಸಾರ ಮಾಡಿಕೊಂಡಿರುವಳು. ಈಗ ಮನೆಯಲ್ಲಿರುವ ಹುಡುಗನಿಗೆ ೧೦ ವರುಷಗಳು, ಹುಗಳಿಗೆ ೮ ವರುಷಗಳು. ತನ್ನ ಹೆಂಡತಿ, ಹೆಂಡತಿಯ ಅಕ್ಕನೊಬ್ಬಳು, ಮತ್ತು ತನ್ನತಾಯಿ. ಇಷ್ಟು ಜನ ಮಾತ್ರವೇ ಈಗಿರುವರು. ಹೆಂಡತಿಯ ಅಕ್ಕನೂ, ತನ್ನತಾಯಿಯೂ ವಿಧವೆಯರು.

ನಾರಣಪ್ಪನಮನೆಯು ವಿಶಾಲವಾಗಿಯೂ, ಮಹಡಿಯ ಮನೆಯಾಗಿಯೂ ಇದೆ. ಗಾರೆಯ ಮನೆ; ಅಷ್ಟುಹೆಚ್ಚಾಗಿ ಕಿಟಕಿಗಳನ್ನಿಟ್ಟು ಪಟ್ಟ

ಗಳಲ್ಲಿನ ಮನೆಗಳ ಹಾಗೆ ಕಟ್ಟಿಲ್ಲದಿದ್ದರೂ, ಆ ಪ್ರಾಂತ್ಯಗಳಲ್ಲಿ ಅಂತಹ ಮನೆಗಳಿರುವದು ಅತಿವಿರಳ. ಬೀದಿಯಲ್ಲಿಯೋ ದಿಣ್ಣೆಗಳು. ಮೂರುಮೆಟ್ಟಿಲುಗಳನ್ನು ಮಾತ್ರ ಹತ್ತಬೇಕು. ಮುಂದಿನ ಹಜಾರವನ್ನು ದಾಟುತ್ತಲೂ, ತೊಟ್ಟಿ. ಎಡಗಡೆಯಲ್ಲಿಯೂ, ಬಲಗಡೆಯಲ್ಲಿಯೂ ಕೊಠಡಿಗಳಿವೆ. ಎಡಗಡೆಯಿಂದ ಮಹಡಿಯ ಮೇಲಕ್ಕೆ ಹೋಗಲು ಮೆಟ್ಟಿಲುಗಳಿವೆ. ಮಹಡಿಯ ಮೇಲೆ ಎರಡು ಕೊಠಡಿಗಳುಂಟು. ಒಂದು ಕೊಠಡಿಯಲ್ಲಿ ಕರಿಯಮರದ ಮಂಚವೂ, ನಿಲುಗನ್ನಡಿಗಳೂ, ಒಂದು ಉಯ್ಯಾಲೆಯೂ, ಒಂದು ಮೇಜೂ ಇದ್ದವು. ಕೆಳಗಡೆಯಲ್ಲಿ ನಡುಮನೆಗೆ ಹೋಗಲು ಒಂದು ಇಕ್ಕಟ್ಟಾದ ದಾರಿಯು ಸಿಗುವದು. ಇಲ್ಲಿಯೇ ಅಡಿಗೆಯಮನೆಯೂ, ದೇವರಮನೆಯೂ ನೀರಿನಮನೆಯೂ ಇರುವವು. ಕಲ್ಲುಗಾರೆಗಳಿಂದ ಕಟ್ಟಿಸಿದ ಒಂದು ಭಾವಿ ಉಂಟು, ಹಿತ್ತಲಿನ ಭಾಗದಲ್ಲಿ ಕೆಲವು ಬಾಳೆಯಗಿಡಗಳಿದ್ದವು

“ ನಾರಣಪ್ಪನವರೆ, ಬಾಗೇಪಲ್ಲಿಗೆ ಹೇಳಕಳುಹಿಸಿ ”

“ ಸ್ವಾಮಿ, ಹೇಳಕಳುಹಿಸಿರುವೆನು. ಅವರು ಆಗಲೇ ಅರ್ಧದೂರ ಹೋಗಿರಬಹುದು. ತಾವು ಸ್ನಾನಕ್ಕೆ ಏಳಿ ”

“ ಆಗಲಿ, ನಿಮ್ಮ ದೇವತಾರ್ಚನೆಯು ಮುಗಿದಕೂಡಲೇ ಕರೆಯಿರಿ, ಬರುತ್ತೇವೆ. ಈಗ ನಾವು ಕೂಡುವದಕ್ಕೆ ಜಾಗವೆಲ್ಲಿ ?

“ ಸ್ವಾಮಿ, ಈ ಮನೆಯೇ ತಮ್ಮದಾಗಿದೆ. ಮಹಡಿಯಮೇಲಿನ ಕೊಠಡಿಗೆ ದಯಮಾಡಿಸಬೇಕು. ಅಲ್ಲಿ ಉಯ್ಯಾಲೆಯಲ್ಲಿ ಕುಳಿತು ತೂಗಿಕೊಳ್ಳುತ್ತಿದ್ದರೆ ”

“ ಓಹೋ ! ಉಯ್ಯಾಲೆ, ತೂಗುಮಣೆಗಳಿದ್ದರೆ ನನಗೆ ಬಹಳ ಸಂತೋಷ. ”

ಎಲ್ಲರೂ ಮಹಡಿಯಮೇಲಕ್ಕೆ ಬಂದರು.

“ ನಾರಣಪ್ಪನವರೆ, ಏನಾದರೂ ಕನ್ನಡದ ಪುಸ್ತಕಗಳನ್ನಿಟ್ಟಿರುವಿರೋ

“ ಕೆಲವು ಪುಸ್ತಕಗಳಿವೆ ”

“ ಏನು ಇವೆಯೋ ನೋಡೋಣ ”

ನಾರಣಪ್ಪನು ಬೀರುವನ್ನು ತೆಗೆದು "ಹೆಚ್ಚು ಇಲ್ಲ. ಇವುಗಳಲ್ಲಿ ನೋಡಿ" ಎಂದನು

"ಷಡಕ್ಷರಿಯ ಶಬರಶಂಕರವಿಲಾಸ, ನಾನು ಓದಿರುವೆನು. ರಾಜಶೇಖರವಿದ್ದರೆ-ಓ, ಇಲ್ಲಿ ಇದೆಯಲ್ಲಾ." ರಾಜಶೇಖರವನ್ನು ತೆಗೆದುಕೊಂಡನು. "ಲೀಲಾವತಿ, ಭಿಕ್ಷಾಟನಚರಿತ್ರೆ. ಭಿಕ್ಷಾಟನಚರಿತ್ರೆಯನ್ನು ಬರೆದವರಾರು ಎಲ್ಲಿ, 'ಗುರುಲಿಂಗವಿಭು' ಇದೇನು ಷಟ್ಪದೀಕಾವ್ಯ-ನನಗೆ ಬೇಡ, ಚಂಪೂಗ್ರಂಥಗಳಿದ್ದರೆ"—ಅಷ್ಟರಲ್ಲಿಯೇ ರಾಜನು "ನಿನಗೆ ಗೊತ್ತಿಲ್ಲ, ಇದು ಬಹಳ ಚೆನ್ನಾಗಿದೆ, ಓದಿನೋಡು" ಎಂದನು.

"ಹಾಗಾದರೆ ನೋಡೋಣ, ರನ್ನನಗದಾಯುದ್ಧ, ಇದೂ ಇರಲಿ, ಇನ್ನು ಸಾಕು. ನಾರಣಪ್ಪನವರೇ ನನಗೆ ಬೇಕಾದಪುಸ್ತಕಗಳನ್ನು ಬರೆದು ಕಳುಹಿಸುತ್ತೇನೆ. ಓದುವುದಕ್ಕೆ ಮಾತ್ರ ಕೊಡಬೇಕು, ಪುನಃ ವಾಪಸು ಕೊಟ್ಟುಬಿಡುವೆನು."

"ಅದಕ್ಕೇನು ಸ್ವಾಮಿ, ಆಗಲಿ"

"ಸರಿ ಇನ್ನು ನಿಮ್ಮ ಕೆಲಸವನ್ನು ನೋಡಿಕೊಳ್ಳಿ."

ಆಗ ನಾರಣಪ್ಪನ ಮಗನು ಒಂದು ತಟ್ಟೆಯಲ್ಲಿ ಸ್ವಲ್ಪ ಉಪ್ಪಿಟ್ಟನ್ನು ತಂದನು.

"ಇದೇನು ನಾರಣಪ್ಪನವರೇ, ಈಗಲೇ ಊಟವಾಗುವುದಲ್ಲ."

"ಅದರೂ ತೆಗೆದುಕೊಳ್ಳಿ, ಸ್ವಲ್ಪ ಹೊತ್ತಾಗಿಹೋಯಿತು. ನಮ್ಮ ಮನೆಗಳಲ್ಲಿ ಒಂದು ಗಂಟೆಗೆ ಮೊದಲು ಊಟವಾಗುವುದಿಲ್ಲ.

"ನಿಮ್ಮ ಹುಡುಗನ ಹೆಸರೇನು?

"ಕೃಷ್ಣಸ್ವಾಮಿ,

ಆ ಹೆಸರು, ಕಿಟ್ಟಸ್ವಾಮಿ, ಕಿಟ್ಟಸಾಮಿ, ಕಿಟ್ಟಾಮಿ, ಕಡೆಗೆ ಸಾಮಿ ಎಂಬ ರೂಪಾಂತರವನ್ನು ಹೊಂದಿತ್ತು.

ಕಿಟ್ಟಾಮಿ, ಇಲ್ಲಿ ಬಾ, ಕುಳಿತುಕೊ, ನೀನೂ ಸ್ವಲ್ಪ ತಿನ್ನು.

"ನಾನು ತಿಂದಿರುವೆನು, ಇನ್ನೂ ನನ್ನ ತಾಯಿ ಕೊಡುವಳು.

"ಚಿಂತೆಯಿಲ್ಲ, ನೀನು ಕುಳಿತುಕೋ, ನೀನು ನಮ್ಮ ಜತೆಯಲ್ಲಿಯೇ ತಿನ್ನಬೇಕು.

ಆಗಾಗ್ಗೆ ದುರ್ಮೂರ್ತಿಯು ಕಿಟ್ಟಸ್ವಾಮಿಯ ಮುಖವನ್ನೇ ನೋಡುವನು, ಕಿಟ್ಟಸ್ವಾಮಿಯು ಬೆಪ್ಪಾಗುವನು. ತಿನ್ನುವುದನ್ನು ಬಿಟ್ಟು, ಮುಖವನ್ನು ಕೆಳಗೆಮಾಡುವನು. ಉಪ್ಪಿಟ್ಟು ಸ್ವಲ್ಪ ಕಾಲಕ್ಕೆ ಮುಗಿಯಿತು.

"ಕಿಟ್ಟಸ್ವಾಮಿ, ನೀನು ಉಯ್ಯಾಲೆಯನ್ನಾಡುವೆಯಾ?

"ನನಗೆ ಹೆದರಿಕೆ.

"ನಾವಿಬ್ಬರೂ ನಿನ್ನನ್ನು ಮಧ್ಯೆ ಕೂಡಿಸಿಕೊಳ್ಳುವೆವು ಬಾ"

ರಾಜ—"ಮೂರ್ತಿ! ರನ್ನನಗದಾಯುದ್ಧವನ್ನು ಓದಿರುವೆಯಾ?

ಮೂ—"ಓದಿರುವೆನು

ರಾ—"ರಾಜಶೇಖರವನ್ನು

ಮೂ—"ಅದನ್ನೂ ಓದಿರುವೆನು.

ರಾ—'ಹಾಗಾದರೆ ರನ್ನನೂ, ಷಡಕ್ಷರಿಯೂ ನಿನ್ನ ಅಭಿಪ್ರಾಯದಲ್ಲಿ ಎಂತಹ ಕವಿಗಳು?

ಮೂ—"ಎಂತಹಕವಿಗಳೇನು. ಇಬ್ಬರೂ ಕವಿಚಕ್ರವರ್ತಿಗಳೇ

ರಾ-"ಷಡಕ್ಷರಿಗೆ ಕವಿಚಕ್ರವರ್ತಿಯೆಂಬಬಿರುದನ್ನು ಯಾರುಕೊಟ್ಟರು?

ಮೂ—"ಯಾರೇನು ಕೊಡುವುದು, ನಾನು ಕೊಡುವೆನು. ಯಾರು ಓದಿದರೂ ಅವರು ಕೊಡುವರು."

ರಾ— ರನ್ನನ ಪದಗಾಂಭೀರ್ಯ ಷಡಕ್ಷರಿಯಲ್ಲಿದೆಯೇ?

ಮೂ— ಇಲ್ಲದೇ ಏನು?

ರಾ— ನನಗೆ ಕಾಣಲಿಲ್ಲ. ಷಡಕ್ಷರಿಗೆ ಸಂಸ್ಕೃತಜ್ಞಾನವು ಹೆಚ್ಚು. ಸಂಸ್ಕೃತಪದಗಳ ಜಮಾವಣೆಯಿಂದ ಪದ್ಯದಲ್ಲಿ ಬಿಗಿಯನ್ನುಂಟುಮಾಡುವನು. ಅದನ್ನು ಕನ್ನಡಿಗರು ಮೆಚ್ಚುವದಿಲ್ಲ.

ಮೂ— ರನ್ನನಿಗೂ ಸಂಸ್ಕೃತದಲ್ಲಿ ವಿಶೇಷವಾದ ಪಾಂಡಿತ್ಯವುಂಟು. ಆತನ ಪದ್ಯಗಳಲ್ಲಿಯೂ, ಅನೇಕವಾದ ಸಂಸ್ಕೃತಪ್ರಯೋಗಗಳೂ, ವಾಕ್ಯಗಳೂ, ಸೇರಿವೆ ಅಜಿತಪುರಾಣದಲ್ಲಿ ಜನ್ಮಾಭಿಷೇಕದ ಪರಿಚ್ಛೇದದಲ್ಲಿ ಒಂದು ಸಂಸ್ಕೃತದ ಗದ್ಯವನ್ನೇ ಬರೆದಿರುವನಲ್ಲ. ಆದರೂ ಕನ್ನಡಿಗರಿಗೆ ಮೆಚ್ಚುಗೆ ಇಲ್ಲವೇನು?

ರಾ—" ಆದರೂ, ಷಡಕ್ಷರಿಯು ತನ್ನ ಅಸಾಧಾರಣವಾದ ಪಾಂಡಿತ್ಯವನ್ನು ಪ್ರಕಟಪಡಿಸಬೇಕೆಂಬ ಆಶೆಯಿಂದಲೇ ರಾಜಶೇಖರ ವನ್ನು ಬರೆದಂತೆ ನನಗೆ ತೋರುವದು. ತನ್ನ ಗ್ರಂಥವು ಕೃತಿಯಲ್ಲಿಯೂ, ರಸಾಲಂಕಾರಗಳಲ್ಲಿಯೂ, ಅಗ್ರಗಣ್ಯವಾಗಬೇಕೆಂದು ಬರೆದಂತೆ ಕಾಣುವದು. ರನ್ನನಾದರೋ ತನ್ನ ಮನಸ್ಸಿನಲ್ಲಿರುವದು ಒಳಗೆ ನಿಲ್ಲಲು ಸಾಧ್ಯವಿಲ್ಲದೆ, ವಾಕ್ಯಗಳೂ ಪದ್ಯಗಳೂ, ಹೊರಹೊರಟಂತೆ ಬರೆಯುತ್ತಾನೆ.

ಮಾ—" ಕಾವ್ಯಗಳನ್ನು ಬರೆಯುವವರೆಲ್ಲರೂ ತಮ್ಮ ತಮ್ಮದು ಉತ್ಕೃಷ್ಟವಾಗಬೇಕೆಂದು ಬರೆಯುವರಲ್ಲದೆ ಕನಿಷ್ಠವಾಗಲೆಂದು ಬರೆಯುವದಿಲ್ಲ. ಅವರು ಬರೆದನಂತರ ಪಂಡಿತರು, ಓದುವವರು, ಯಾವದು ಒಳ್ಳೆಯ ಗ್ರಂಥ ಯಾವದೂ ಅಲ್ಲ ಎಂದು ತೀರ್ಮಾನಿಸುವರು.

ರಾ— ಷಡಕ್ಷರಿಯನ್ನೂ, ರನ್ನನನ್ನೂ ಹೋಲಿಸೋಣ.

ಮಾ— ಇಬ್ಬರೂ, ಅಗ್ರೇಸರರು. ತಮ್ಮ ಕಾವ್ಯಗಳಲ್ಲಿ, ಅಪ್ರತಿಮವಾದ ಕವಿತಾಶಕ್ತಿಯನ್ನೂ, ಅಪರೂಪವಾದ ವಾಕ್ಯಸಮೂಹಗಳನ್ನೂ ತೋರಿಸಿರುತ್ತಾರೆ.

ರಾ— ರನ್ನನು, ದುರ್ಯೋಧನನ ಪ್ರಲಾಪವನ್ನು ವರ್ಣಿಸಿರುವದನ್ನು ಓದಿರುವಿಯಲ್ಲ, ಅದು ಹೇಗಿರುವದು?

ಮಾ—" ನಿಜವಾಗಿಯೂ ದುರ್ಯೋಧನನಲ್ಲಿ, ನಮಗೆ ಕನಿಕರವುಂಟಾಗುವದು. ಸಾಧಾರಣವಾಗಿ, ದುರ್ಯೋಧನನು, ಕಠಿಣಮನಸ್ಕನೆಂದೂ, ನೀಚನೆಂದೂ, ಪರನಾರೀಪಾತಕಿಯೆಂದೂ, ಹೇಳುವರು. ಅವುಗಳು ಸತ್ಯವಿರಬಹುದು. ಅವುಗಳಿಂದ ನಮ್ಮ ಮನಸ್ಸು ದುರ್ಯೋಧನನ ವಿಷಯವಾಗಿ ಪಶ್ಚಾತ್ತಾಪವನ್ನು ಪಡಲಾರದು. ಆದರೂ, ಕರ್ಣವಿಯೋಗವನ್ನು ವರ್ಣಿಸುತ್ತ ದುಃಖಿಸುವ ದುರ್ಯೋಧನನನ್ನು ಸ್ಮರಿಸಿಕೊಂಡರೆ, ಅವನೊಡನೆ, ನಾವೂ ಒಂದಾಗಿ ರೋದಿಸುವೆವು. ಸಜ್ಜನರಾಗಲೀ-ತಮ್ಮ ತಮ್ಮ ಸ್ನೇಹಿತರು, ಮತ್ತು ತಮಗೆ ಸೇರಿದವರು ಗತಿಸಿದುದಾದರೆ, ವ್ಯಸನಪಡುವದು ಸ್ವಾಭಾವಿಕವಲ್ಲವೆ, ಅದರಲ್ಲಿಯೂ ತನಗಾಗಿಯೇ, ಇನ್ನೊಬ್ಬನು ಯುದ್ಧದಲ್ಲಿ ಹೊಡೆದಾಡಿ, ಮರಣವನ್ನೈದಿ, ಆ ಮಡಿದಾತನೂ, ಬಾಲ್ಯಾರಭ್ಯ ತನ್ನ

ಷ್ಟೀವ ಚಿಂತನೆಗಳಲ್ಲಿ, ದುಃಖವನ್ನೂ ರೋದಿಸುವನಲ್ಲವೇ; ಆ ಕಾಲಕ್ಕೆ ಅವನು ತನ್ನ ದುಃಖವನ್ನು ತೋರ್ಪಡಿಸುತ್ತಿರುವಾಗ, ನೋಡುವವರು ಅವನ ದುರ್ಗುಣಗಳನ್ನು ಮರೆತುಬಿಡುವರು. ಈ ರೀತಿಯಲ್ಲಿ ರಸಾಸ್ವಾದನೆಯನ್ನು ಕಾವ್ಯದ ಮೂಲಕ ಮಾಡಿಸುವದು ಸಾಧಾರಣ ಕವಿಗಳಿಗೆ ಸಾಧ್ಯವಿಲ್ಲ.

"ಗದಾಯುದ್ಧ"ಕಾಲದಲ್ಲಿ ಒಬ್ಬರೊಬ್ಬರ ಪೌರುಷವಾಕ್ಯಗಳನ್ನು ಅವರವರಿಗೆ ಅನುಸಾರವಾಗಿಯೇ ಬರೆದಿರುತ್ತಾನೆ. ದುರ್ಯೋಧನನ ಬಲ ಪೌರುಷಗಳನ್ನು ಚೆನ್ನಾಗಿ ವರ್ಣಿಸಿದ್ದಾನೆ. ತನಗೆ ಸಂಕಟವನ್ನುಂಟುಮಾಡಿದ ಭೀಮನನ್ನು ಗದೆಯಿಂದ ಹೊಡೆಯುವಾಗಲೂ, "ಕರಿಯುಂ ಸಿಂಗಿ ಕಳಿಂಗಸಂಭವದ ದರ್ಪಕ್ಕೊಂದುಗೊಳ್" "ಮತ್ಸ್ಯೋದರರಿಂಗನೆಕೊಂದುಹಕ್ಕರದುಗೊಳ್" – "ದುಶ್ಯಾಸನೋರಸ್ಥಳಕ್ಷತಜಸ್ರಾಂ ಎವನಾದರ್ ಪೀರ್ದಪುಳಿಸಿಂಗಂ ಮೂರುಗೊಳ್" ಎಂದು ನುಡಿಯುವನು. ಕೋಪ ಬಂದಿರುವಾಗ ನಾವೂ ಇದೇರೀತಿಯಲ್ಲೇ, ನುಡಿಯುವೆವಲ್ಲವೆ. ಇದು ನಮ್ಮೆಲ್ಲರ ಅನುಭವಕ್ಕೂ ಬಂದಿರುವದು. ಅದನ್ನು ಪದ್ಯದಮೂಲಕವಾಗಿ ಬರೆದಿರುವದನ್ನು ಎಲ್ಲರೂ ಮೆಚ್ಚಬೇಕು. ಮತ್ತು ಭೀಮಸೇನನು ಈ ಪ್ರಹಾರಗಳನ್ನು ಸಹಿಸಿಕೊಂಡು ತನ್ನ ಗದಾದಂಡವನ್ನು ಎತ್ತಿ "ಆ ಟ್ಟಿಗೇ ಪದಾಹತಕ್ಕಿದು" ಎನ್ನುವಾಗ ಗದೆಯನ್ನು ತೂಗಿಬಿಟ್ಟಂತೆಯೇ ಕಾಣುವದು. ಈ ಮೊದಲಿನ ಹೊಯ್ಯುವಿಕೆಯು, ನಿಧಾನವಾಗಿಯೂ, ತನ್ನಲ್ಲಿ ಉಕ್ಕಿ ಬರುತ್ತಿರುವ ಕೋಪಾತಿಶಯವನ್ನು ತಡೆಯುತ್ತ ತಾನು ಪಡೆದ ಗದೆಯ ಪೆಟ್ಟುಗಳನ್ನು ಸ್ಮರಿಸಿಕೊಳ್ಳುತ್ತಾ, ಪ್ರತಿಯಾಗಿ ತನ್ನ ಪೂರ್ಣಶಕ್ತಿಯನ್ನು ಪ್ರಯೋಗಿಸಿ, ಗದಾಘಾತವನ್ನುಂಟುಮಾಡಿದಂತೆಯೇ ಭಾವನೆಯಾಗುವದು. ಆಮೇಲೆ ಪಂಪ—

ರಾ— "ತಾಳು, ತಾಳು. ನೀನು ಈ ರೀತಿಯಲ್ಲಿ ಈ ದಿನವೆಲ್ಲಾ ಹೇಳುತ್ತಿರುವೆ. ನನಗಿರುವ ಒಂದು ಅನುಮಾನಕ್ಕೆ ಬದಲು ಕೊಡು.

ಮಾ— ಏನು.

ರಾ— "ಸಂಸ್ಕೃತಪದಗಳ ಜವಾವಣೆಯಿಂದ ಪದ್ಯಗಳು ಸರಳವಾಗಿ ಓಡುವ ಹಾಗೆ ಮಾಡುವವರೆಲ್ಲರೂ ಕವಿಶಿಖಾಮಣಿಗಳೇ?

ಮೂ— ನಿನಗೆ ಕೆಲವು ಸಂಗತಿಗಳು ತಿಳಿದಿಲ್ಲ. ಇಗೋ, ಯಾವಾತನು ತನ್ನಮನಸ್ಸಿನಲ್ಲಿರುವದನ್ನು ಇತರರಿಗೆ ತಿಳಿಯುವಂತ ಸುಲಭಶೈಲಿಯಲ್ಲಿಯೂ, ವ್ಯಾಕರಣ ಸಮ್ಮತವಾಗಿಯೂ, ಛಂದೋಬದ್ಧವಾಗಿಯೂ, ಇರುವ ವಾಕ್ಯಗಳಿಂದ ಬರೆಯುವನೋ, ಆತನು ಕವಿಗಳಲ್ಲಿ, ಅಗ್ರಗಣ್ಯನು. ನಮ್ಮ ಕರ್ಣಾಟಕದಲ್ಲಿ ಸಂಸ್ಕೃತಪದಗಳು ಸೇರಿಕೊಂಡಿವೆ, ಅವುಗಳನ್ನು ಎಲ್ಲರಮಾತುಗಳಲ್ಲಿಯೂ ಕೇಳಬಹುದು, ಇಂತಹ ವಾಡಿಕೆಯಾದವುಗಳನ್ನು ಬೇರೆ ಮಾಡಲಾಗದು ನಮಗೆ ಸಾಧ್ಯವಾದಮಟ್ಟಿಗೆ ಅನಾವಶ್ಯಕವಾಗಿ ಸಂಸ್ಕೃತಮಿಶ್ರವನ್ನು ಮಾಡಬಾರದು ಕೇವಲ ಕನ್ನಡಪದಗಳ ಸಹಾಯದಿಂದ ಕಾವ್ಯವನ್ನು ಬರೆಯುವದೂ ಕಷ್ಟ. ಆಂಡಯ್ಯನೂಕೂಡ ತತ್ಸಮಗಳನ್ನು ತದ್ಭವಗಳಾಗಿ ಉಪಯೋಗಿಸಬೇಕಾಯಿತು. ಹೆಚ್ಚು ಸಂಸ್ಕೃತಪದಗಳ ಪ್ರಯೋಗವೂ ಕವಿಯಶಕ್ತಿಗೆ ಪ್ರಮಾಣವಲ್ಲ. ನಾವು ಒಬ್ಬ ಕವಿಯಲ್ಲಿಯೂ, ಒಂದು ಕಾವ್ಯಗಳಲ್ಲಿಯೂ ನೋಡಬೇಕಾದುದೇನೆಂದರೆ-ಆತನು ಎಷ್ಟರಮಟ್ಟಿಗೆ ಹೊಸವಿಷಯಗಳನ್ನು ತಿಳಿಸಿರುತ್ತಾನೆ ಎಷ್ಟರಮಟ್ಟಿಗೆ ಇತರರಿಗೆ ತಾನು ಯಾವವರ್ಣನೆಗೂ ಬಾಧ್ಯನಲ್ಲ. ಒಂದುವೇಳೆ ಪೂರ್ವಕವಿಗಳಿಂದ ಭಾವಗಳನ್ನು ತೆಗೆದುಕೊಂಡಿದ್ದಲ್ಲಿ, ತನ್ನ ಸಂದರ್ಭಗಳಿಗೆ ಯಾವರೀತಿಯಲ್ಲಿ ಅಡಕಿಸಿಕೊಂಡಿರುವನು, ಯಾವಭಾಗಗಳಲ್ಲಿ ಮೊದಲಿನದರಮೇಲೆ, ಉತ್ಕೃಷ್ಟತೆಯನ್ನು ತೋರ್ಪಡಿಸಿರುವನು, ಎಂಬುವುಗಳೇ- ಈ ಪ್ರಮಾಣಗಳಿಂದ ರನ್ನವನ್ನೂ, ಷಡಕ್ಷರಿಯನ್ನೂ ಹೋಲಿಸಿದರೆ ಇಬ್ಬರೂ ಸರಿಯಾಗಿ ತೂಗುವರು

ರಾ— ಗದಾಯುದ್ಧದ ಕಥೆಯು ಎಲ್ಲರಿಗೂ ತಿಳಿದಿತ್ತು

ಮೂ-ತಿಳಿದ ಕಥೆಯನ್ನೇ ಯಾವರೀತಿಯಲ್ಲಿ ಬರೆದಿರುವನು ನೋಡು. ಷಡಕ್ಷರಿಯಾದರೋ ತನ್ನಚಂಪೂದ ಬಂಧಕ್ಕೆ ತನ್ನ ಕಥೆಯನ್ನೇ ಚುನಾಯಿಸಿಕೊಂಡನು ಇದರಲ್ಲಿ ಆತನು ಪೂರ್ವಕವಿಗಳಿಗೆ ಎಳ್ಳಷ್ಟೂ ಬಾಧ್ಯನಲ್ಲ. ಅದರ ರನ್ನನು ಹೆಚ್ಚು ಚಮತ್ಕಾರವನ್ನೂ, ಹೆಚ್ಚು ಶಕ್ತಿಯನ್ನೂ ತೋರಿಸಬೇಕಾಯಿತು ಎಲ್ಲರಿಗೂ ತಿಳಿದಿದ್ದುದನ್ನು ಯಾರುತಾನೆ ಓದುವರು, ಕಥೆಗಾಗಿ ರನ್ನನನ್ನು ಹೊಗಳಬೇಕಾದುದಿಲ್ಲ. ಆದರೂ ಈಗ ರನ್ನನ ಕಾವ್ಯವನ್ನು

ಎಷ್ಟು ಬಾರಿ ನೋಡಿದರೂ, ಪುನಃ ನೋಡಬೇಕೆಂಬ ಅಭಿಲಾಷೆಯೇ ಆಗುತ್ತಿತ್ತು. ಇವನು

ರಾ- ಈತನು ವೀರ, ರೌದ್ರ, ಶೋಕರಸಗಳನ್ನು ವ್ಯಕ್ತಪಡಿಸುತ್ತಾನೆ.

ಮೂ-" ಮತ್ತು ದುರ್ಯೋಧನನ ಮಾತುಗಳನ್ನಾಗಲೀ, ಅವನು ಅತ್ತುದನ್ನಾಗಲೀ ನಾವಾರೂ, ನೋಡಿಲ್ಲ ಕೇಳಿಲ್ಲ. ಭೀಮನ ಕೋಪವನ್ನೂ, ರೋಷಾವೇಶವನ್ನೂ, ಕಣ್ಣಾರೆ ಕಂಡಿಲ್ಲ. ಆದರೆ ಗದಾಯುದ್ಧವನ್ನು ನೋಡುವಾಗ ಎಲ್ಲವೂ ನಮ್ಮೆದಿರಿನಲ್ಲಿಯೇ ನಡೆದಂತೆ ಭಾವಿಸುವುವಲ್ಲವೇ ? "

ಇಷ್ಟು ಹೊತ್ತಿಗೆ ದೇವರಮನೆಯಿಂದಾಗುವ ಘಂಟಾನಿನಾದವು ಕೇಳಿಸಿತು. ಮೂರ್ತಿಯು " ದೇವರಪೂಜೆಯಾಯಿತು. ಇನ್ನು ಸ್ನಾನಕ್ಕೇಳಿಯೋಣ, ಕಿಟ್ಟಾಮಿ, ಸ್ನಾನಮಾಡೋಣವೇ

" ಮಾಡಿ, ನಮ್ಮಪ್ಪನಿಗೆ ಹೇಳಬರುವೆನು,

" ಬೇಡ. ಬೇಡ ಇಲ್ಲಿ ಬಾ.

ರಾ— " ಕಿಟ್ಟಾಮಿಯನ್ನು ನೋಡಿದರೆ ನನಗೆ ಎಲ್ಲಿಯೋ ನೋಡಿದಂತೆ ಕಾಣುವದು.

ಮೂ— " ಅಹುದು- ಇದು ಸ್ವಪ್ನಮುಟ್ಟಿಗೆ, ಅವಳಮುಖವಲ್ಲವೇ.

ರಾ— ನನಗೂ ಹಾಗೆಯೇ ತೋರುವದು.

ಮೂ— ಕಿಟ್ಟಾಮಿ, ನಿಮಗೆ ಬಾಗೇಪಲ್ಲಿಯಲ್ಲಿ ತಿಳಿದವರುಂಟೇ ?

ಕಿ— ನಮ್ಮಕ್ಕನೂ, ನಮ್ಮಣ್ಣನೂ ಇದ್ದರು ಈಗ ನಾಗೋಡಿಗೆ ಹೋದರೆಂದು ತೋಟಿಯು ಹೇಳಿದನು.

ಮೂ— ನಿಮ್ಮಕ್ಕನ ಹೆಸರೇನು ?

ಕಿ— ಸಾವಿತ್ರಿ.

ಮೂ— ಸಾವಿತ್ರಿಯೂ ನೀನೂ ಜತೆಯಲ್ಲಿ ಹುಟ್ಟಿದವಳೇ ?

ಕಿ— ಇಲ್ಲ. ಸಾವಿತ್ರಿಯು ದೊಡ್ಡಪ್ಪನ ಮಗಳು.

ನಾರಣಪ್ಪನೂ, ಮಹಡಿಯಮೇಲೆ ಬಂದು " ಸ್ನಾನಕ್ಕೆ ದಯಮಾಡಿಸಬೇಕು " ಎಂದನು. ಸ್ನಾನಕ್ಕೆ ಇಳಿದರು, ಸ್ನಾನವಾಯಿತು. ನಾನು ಭೋಗನು ಪೆಟ್ಟಿಗೆಯಿಂದ ತೆಗೆಸಿ, ಹುಗುಟ ಪೀತಾಂಬರಗಳನ್ನು ಕೊಟ್ಟನು. ಉಟ್ಟುಕೊಂಡು, ಊಟಕ್ಕೆ ಕುಳಿತರು. ದೊಡ್ಡದೊಡ್ಡ ಮಣೆಗಳು, ವಿಶಾ

ಲವಾದ ಬಾಳೆಯ ಅಗ್ರದೆಲೆಗಳು, ಬೆಳ್ಳಿಯ ಪಂಚಪಾತ್ರೆಗಳಲ್ಲಿ ನೀರು, ಉದ್ಧರಣೆ. ಇವುಗಳನ್ನು ನೋಡಿ ಮೂರ್ತಿಯು, "ಏನು ನಾರಾಯಣಪ್ಪನವರೇ, ಅಳಿಯನ ಮರ್ಯಾದೆ ಸಲ್ಲುವದಲ್ಲ" ಎಂದನು.

"ಸ್ವಾಮಿ, ನೀವು ನಮ್ಮ ಮನೆಗೆ ಅಳಿಯನಿಗಿಂತ ಹೆಚ್ಚು, ನಮಗೆ ಅಳಿಯನಾಗುವದೆಂದರೇನು, ಎಲ್ಲಿಗೆಲ್ಲಿಗೆ

"ಅದೇನು ಹಾಗೆನ್ನುತ್ತೀರಿ.

"ನೀವು ಉದ್ಯೋಗಸ್ಥರ ಮಕ್ಕಳು.

"ನೀವು ದೊಡ್ಡಮನುಷ್ಯರು.

"ನಮಗೆ ದೊಡ್ಡಮನುಷ್ಯರೆಂಬ ಹೆಸರು ಬರುವದೇ ಕೊಂಪೆ ಗದ್ದೆಗಳಲ್ಲಿ ಹಗಲಿರುಳೂ ಬೇಸಾಯಮಾಡಿಕೊಂಡಿರುವೆವು.

"ಉದ್ಯೋಗವನ್ನು ಮಾಡಿದರೇನು? ದೊಡ್ಡ ದೊಡ್ಡ ಪದವಿಗಳಲ್ಲಿದ್ದರೇನು? ದುರಾಚಾರಗಳಲ್ಲಿ ಪ್ರವರ್ತಿಸುತ್ತ, ಕುಡಿಯುವದನ್ನು, ವ್ಯಭಿಚಾರಗಳನ್ನೂ ಆರಂಭಿಸಿ, ಅಧಿಕಾರದ ಬಲದಿಂದ ಮತ್ತರಾಗಿದ್ದಲ್ಲಿ ಅವರಿಗೆ ದೊಡ್ಡಮನುಷ್ಯರೆಂಬ ಹೆಸರು ಕೊಡಲು ನನಗೆ ಸಮ್ಮತವಿಲ್ಲ. ಒಳ್ಳೆಯ ಮನಸ್ಸೂ, ಉದಾರತ್ವವೂ, ಪರಜನಹಿತಚಿಂತನೆಯೂ, ಇರುವವರು, ಬಡವರಾದರೂ ದೊಡ್ಡಮನುಷ್ಯರು, ಅಲ್ಲ. 'ದೊಡ್ಡ' ಎಂದರೆ 'ಉದ್ಯೋಗದಲ್ಲಿರುವ' ಅರ್ಥವಲ್ಲ, 'ಭಾರಿಯ ಗುಣಗಳುಳ್ಳ' ಎಂಬುದು ಅರ್ಥ

"ಸ್ವಾಮಿ, ನಮಗೆ ಇದು ತಿಳಿದಿಲ್ಲ.

"ನಿಮ್ಮಂತಹವರ ಸಹವಾಸವು ಸಿಗುವದು ಅಪರೂಪ.

"ಏನೋ ನಮ್ಮ ಸಂತೋಷ

ಊಟಕ್ಕೆ ಜನಗಳು ಕುಳಿತಿದ್ದರು ಮನೆಯವರಲ್ಲದೆ ಹೊರಗಿನ ಬ್ರಾಹ್ಮಣರು ನಾಲ್ಕು ಜನರಿದ್ದರು. ಮೂರ್ತಿಯು "ಇವರಾರು" ಎಂದನು.

"ಸ್ವಾಮಿ, ನಾವಿಬ್ಬರೂ ಪಾಲ್ಘರುವಿನಿಂದ ಬಂದಿರುತ್ತೇವೆ. ಇವರು ಚೇಳೂರಿನಿಂದ ಬಂದರು.

"ಅಯ್ಯೋ ಪಾಪ, ಎಷ್ಟು ದೂರ, ನಿಧಾನವಾಗಿ ಊಟಮಾಡಿ ನಾವಿರುವೆನೆಂದು ಸಂಕೋಚಪಡಬೇಡಿ.

"ತಾವಿದ್ದರೆ ನಮಗೆ ಸಂತೋಷ ಚೆನ್ನಾಗಿ ಊಟಮಾಡುವೆವು."

"ನಾರಣಪ್ಪನವರೇ, ನಿಮಗೆ ಬಾಗೇಪಲ್ಲಿಯಲ್ಲಿರುವ ಕೋನೇರ ಯ್ಯನೇನಾಗಬೇಕು ?"

"ಅವನು ನನ್ನ ಅಣ್ಣನಮಗ ಸ್ವಾಮಿ, ಆತನು ನನ್ನಮನಸ್ಸಿಗೆ ಬಹಳ ಕೆಟ್ಟವನಾಗಿ ಕಾಣುವನು.

"ಅದೇನು ?

"ನಮ್ಮ ಮಾತಿಲ್ಲದೆ, ಹೇಳದೆ ಕೇಳದೆ ಸಾವಿತ್ರಿಯ ಮದುವೆಯನ್ನು ನಿಷ್ಕರ್ಷಿಸಿ, ನಾಗೋಡಿಯ ರಾಮಚಂದ್ರಯ್ಯನಿಗೆ ಕೊಡುವದಕ್ಕೆ ಹೊರಟು ಹೋಗಿರುವನು."

"ನೀವು ಇದನ್ನು ನಿಲ್ಲಿಸಿ

"ಈಗಾಗಲೇ ನಾಗೋಡಿಯನ್ನು ಸೇರಿ, ಎರಡು ಮೂರು ದಿವಸ ಗಳಾಗಿ ಹೋಗಿವೆ. ನನಗೂ ಮೊನ್ನೆತಾನೆ ತಿಳಯಿತು ಸುಬ್ಬಯ್ಯನು ನಾಳೆಯದಿನ ಬಾಗೇಪಲ್ಲಿಗೆ ಬರುವನೆಂದು ಕಾಗದ ಬರೆದಿದ್ದಾನೆ ನಾನೂ ಬಾಗೇಪಲ್ಲಿಗೆ ಹೊರಡುವೆನು

೧೯ ನೆಯ ಪರಿಚ್ಛೇದ.

ನಾಳೆಯದಿವಸ ೯ ಘಂಟೆಗೆ ಮದುವೆಯ ಮುಹೂರ್ತ. ರಾಮಚಂದ್ರಯ್ಯನ ಮನೆಯ ಮುಂದುಗಡೆಯಲ್ಲಿ ವಿಸ್ತಾರವಾದ ಚಪ್ಪರವನ್ನು ಹಾಕಿದ್ದಾರೆ. ತೆಂಗಿನಗರಿಗಳನ್ನು ಹೆಣದು ಅಲ್ಲಲ್ಲಿ ಜೋತುಬಿಟ್ಟಿರುವರು. ಬಾಳೆಯಕಂಭಗಳನ್ನು ಕಟ್ಟಿರುವರು. ಚಪ್ಪರದ ಕೆಳಭಾಗದಲ್ಲಿ ಅರಶಿನ ಬಣ್ಣದ ರಂಗವಲ್ಲಿಯನ್ನಿಟ್ಟು ಶೃಂಗಾರ ಮಾಡಿರುವರು. ಮನೆಯಮುಂದೆ ಜನಗಳ ಕೋಲಾಹಲ. ಹಳ್ಳಿಯ ಕಡೆಗಳಿಂದ ರಾಮಚಂದ್ರಯ್ಯನಿಗೆ ಬೇಕಾದವರು ಹಾಲು, ಮೊಸರು, ತುಪ್ಪಗಳನ್ನು ತೆಗೆಯಿಸಿಕೊಂಡು ಬಂದಿರುವರು.

ಕೆಲವರು ತರಾರಿಗಳನ್ನು ತಂದಿರುವರು. "ಅಯ್ಯನವರಿಗೆ ನಾಳೆ ಮುಹೂರ್ತ, ಎಲಾ ಅಸ್ಸಯ್ಯಾ, ನಮ್ಮ ಮನೇನಾಗಿಂದ ಜಲ್ದಿ ತರ್ತಾರೋ ; ತೋಟಕ್ಕೋಗಿ ಗಂದಟ್ಟು ತೆಂಗಿನಕಾಯಿ ಕೆಡುವಲಾ" ಎಂದು ಕೂಗಿ ಹೇಳುತ್ತಿದ್ದರು ಮಾವಿನೆಲೆಗಳನ್ನು ತಂದು ಪೋಣಿಸಿ ತೋರಣಗಳನ್ನು ಕಟ್ಟುತ್ತಿದ್ದರು. ಆದಿನ ದೇವರಸಮಾರಾಧನೆ. ಹಾಸ್ತಕ್ಕೆ ವಾಲಗವಾಗುತ್ತಿತ್ತು. ಊರುಗಳಿಂದ ಬಂದ ಹೆಂಗಸರೂ, ಗಂಡಸರೂ, ಘಳಿಗೆಗೊಂದಾವರಿ, ಬೀದಿಯ ಬಾಗಲಿಗೆ ಬರುವದು, ಬಗ್ಗಿ ನೋಡಿಕೊಂಡು ಒಳಗೆ ಹೋಗುವದು; ಹುಡುಗರ ಹಾವಳಿಯು ಕೇಳಬೇಕಾದುದಿಲ್ಲ ; ಈ ಅವಾಂತರಗಳಲ್ಲಿರುವಾಗ ಪುರೋಹಿತನು ಬಂದು "ಆದಿನ ವಧೂವರರಿಗೆ ಅಭ್ಯಂಗನಸ್ನಾನವಾಗಬೇಕು. ಸಾಯಂಕಾಲ ಎದುರುಗೊಂಬುವದು, ನಿಶ್ಚಿತಾರ್ಥ. ಎಲ್ಲರೂ ೭ ಘಂಟೆಗೆ ಸಿದ್ಧವಾಗಿರಿ" ಎಂದು ಹೇಳಿದನು

ಈ ರಾಮಚಂದ್ರಯ್ಯನಮನೆಯೋ ಹೆಣ್ಣಿನವರುಳಿಯುವುದಕ್ಕೆ ಬಿಡಾರವಾಗಿತ್ತು. ಗಂಡಿನವರು ಇನ್ನೊಂದು ಮನೆಯಲ್ಲಿ ಸುಮಾರು ೫೦ ಜನರು ಹೊರಗಲ್ಲಿದ್ದರು. ಸಾರಿಸುವದು, ಗುಡಿಸುವದು, ರಂಗವಲ್ಲಿಗಳನ್ನಿಡುವದು, ಇವುಗಳೊಂದು ಕಡೆಯಲ್ಲಿ ನಡೆಯುತ್ತಿದ್ದವು. ಅಗಲೇ ಅಡಿಗೆಯವನೊಬ್ಬನು ತಿರುಗಾಡುತ್ತಿದ್ದನು. ಅವನ ಸಹಾಯಕ್ಕೆ ಕೆಲವು ಹೆಂಗಸರು, ವಿಧವೆಯರು, ಮುತ್ತೈದೆಯರು ಕಾಯಿಪಲ್ಯಗಳನ್ನು ಹೆಚ್ಚುತ್ತ, ಪದಾರ್ಥಗಳನ್ನು ಹವಣಿಸುತ್ತ, ಉಗ್ರಾಣದಿಂದ ಅಡಿಗೆಯ ಮನೆಗೂ, ಅಡಿಗೆಯಮನೆಯಿಂದ ಉಗ್ರಾಣಕ್ಕೂ ತಿರುಗಾಡುತ್ತಿದ್ದರು. "ಒಲೆಯನ್ನು ಹಚ್ಚಿಸಿ, ಬೇಗ ಅಡಿಗೆಯಾಗಬೇಕು. ಓ ಗೋಪಾಲಭಟ್ಟರೆ ನೋಡಿ, ನಿಮ್ಮ ಕೆಲಸಗಳನ್ನು ಬೇಗಮಾಡಿ" ಎಂದು ಕೂಗುತ್ತಿದ್ದರು. "ಚೆಂಡೇಕಾಯಿಯಲ್ಲೀ ಲಕ್ಷ್ಮೀ, ಈಳಿಗೆಮಣೆಯನ್ನು ಕೊಡು ಶಿವನ್ನ, ಈ ಬಾಳೆಕಾಯಿಯನ್ನು ಹೋಳಾಗಿ ನೀನುಹೆಚ್ಚು" ಎನ್ನುತ್ತಿದ್ದರು. "ಈ ಬಾಳೆಎಲೆಕಟ್ಟು ಉಗ್ರಾಣದಲ್ಲಿಡಿ. ಈ ತರಕಾರಿಕುಕ್ಕೆಯನ್ನು ಕೊಡುಕೊಳ್ಳಿ. ಹಾಲು ಒಡೆದುಹೋದೀತು, ಒಂದು ಕಡೆ ದೂರದಲ್ಲಿ ಮುಚ್ಚಿಡಿ" ಎಂದು ಎಚ್ಚರಿಕೆಯನ್ನು ಕೊಡುತ್ತಿದ್ದರು.

ನೀರುಮನೆಯ ಬಳಿಯಲ್ಲಿಯೂ, ಭೂಮಿಯ ಬಳಿಯಲ್ಲಿಯೂ, ಗಲಭೆಯನ್ನು ಕೇಳಲಿಕ್ಕಾಗದು. ತೆಂಗಿನಮಟ್ಟೆಗಳಿಂದಲೂ, ವಾಸಗಳಿಂದಲೂ, ನೀರುಮನೆಯನ್ನು ಕಟ್ಟಿದ್ದರು. ಸುತ್ತಲೂ ಹೊರಗೆ, ಒಳಗೆಲ್ಲಾ ನೀರು, ಕೊಚ್ಚೆ. ಇದರಲ್ಲಿ ಅಲ್ಲಲ್ಲಿ ಪಾತ್ರೆಗಳನ್ನು ಬೆಳಗುತ್ತಿರುವದು, ನೀರೆಗಳನ್ನು ಕಟ್ಟುತ್ತಿರುವರು, ಬಿಬ್ಬಿರ ಜಾರುವಿಕೆ ಇವೆಲ್ಲವೂ ಮದುವೆಯ ಮನೆಯ ವಿಜೃಂಭಣೆಯನ್ನು ತೋರಿಸುತ್ತಿದ್ದವು. ಭೂಮಿಯಲ್ಲಿ ನೀರನ್ನು ಸೇದುವವರೊಬ್ಬರು, ಮಡಿಕೆಗಳನ್ನು ತುಂಬಿಸುತ್ತಿ, ಹಂಡೆಯೊಳಗೆ ಉರಿಯನ್ನು ಹಾಕುವ ವ್ಯಾಪಾರ, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತಿದ್ದವು. "ಶೀಗೇಕಾಯನ್ನು ಹಾಕಿ ಬೆಚ್ಚಗೆ ಪಾತ್ರದಲ್ಲಿಟ್ಟಿದ್ದೇನೆ"— ನೀರುಮನೆಯಿಂದ, "ನೀರು, ನೀರು ಬೇಕು" ಎಂದು ಕೂಗುವದು ಚಿತ್ರವಾಗಿದ್ದವು. ಆ ಹೊಗೆಯಲ್ಲಿ, ಆ ಸೆಕೆಯಲ್ಲಿ, ಕಣ್ಣೊಳಗೆ ಸೀಗೇಹುಡಿ ಬಿದ್ದಿರುವಲ್ಲಿ, ಹತ್ತಿರದಲ್ಲಿ ನೀರಿಲ್ಲದೆ ಗೂಳಿಯು ಬೀಸುತ್ತಲೆ ಕಳೆಯಲ್ಲಿ ಉದುರುತ್ತ, ಮನಸ್ಸಿನಲ್ಲೇ ಬೈದುಕೊಳ್ಳುತ್ತ, ಅಭ್ಯಂಗಸ್ನಾನವನ್ನು ಮಾಡಿದರಲ್ಲವೇ ಶಾಸ್ತ್ರಕ್ಕೆ ಸ್ನಾನವಾದಂತಾಗುವದು.

"ನಿನ್ನ ಸ್ನಾನ ಮೊದಲಾಗಲಿ, ನೀನು ಏಳೇ" ಎಂದು ಸಾವಿತ್ರಿಯನ್ನು ನಾಗಪ್ಪನು ಕೂಗಿದಳು.

"ಅಮ್ಮಾ ನನಗೆ ಸ್ನಾನಬೇಡ.

"ಇದೇಕೇ ಹೀಗೆಮಾಡುವೆ, ಬಂದವರೆದುರಿಗೆ ಮಾನವನ್ನು ತೆಗೆಯುತ್ತೀಯೋ

"ಕೇಳಿದರೆ ನನ್ನ ಸ್ನಾನವಾಯಿತೆಂದು ಹೇಳು.

"ಹಾಗುಂಟೇ? ಮದುವೆಯ ಮನೆ, ನೀನು ಮುಖ್ಯಳು ಕಣ್ಣು, ಎಲ್ಲರೂ ಕೇಳಲ್ಲ, ನೋಡಲ್ಲ. ಏಳು"

"ನನಗೆ ಬೇಡ.

"ಇದೇನು ಹಟಮಾಡುತ್ತೀಯೇ, ನಿನ್ನಣ್ಣನನ್ನು ಕಳುಹಿಸಲೇ.

"ಯಾರನ್ನು ಕಳುಹಿಸಿದರೂ ಬೇಡ.

"ಅಯ್ಯೋ ಮೂಗಾರಳೋ ಬರುತ್ತಾರೆ, ನೀನು ಏಳು, ನನ್ನಪ್ಪಾತ

ನ್ನು ಕೇಳು ಅಗೋ ಲಕ್ಷ್ಮಮ್ಮನು ಬಂದಳು ಲಕ್ಷ್ಮಮ್ಮ, ಸಾವಿತ್ರಿಯನ್ನು ಸ್ನಾನಕ್ಕೆ ಎಬ್ಬಿಸು."

ಲ—"ಅದೇಕೆ ಸಾವಿತ್ರೀ ಹೀಗೆ ಮಲಗಿದ್ದೀಯೇ, ಏಳು, ಏಳು," ಎಂದು ಕೈಯನ್ನು ಹಿಡಿದೆಳೆದಳು.

ಸಾವಿತ್ರಿಯು ಕೈಯನ್ನು ಹಿಂದಕ್ಕೆ ಎಳೆದುಕೊಂಡು "ನನಗೆ ಬೇಡವೆಂದರೆ ಕೇಳಬೇಕು."

ಲ—ನಿನಗೆ ಯಾವದು ಬೇಕು, ಯಾವದು ಬೇಡ ಅನ್ನುವದನ್ನು ಅನುಸರಿಸಿ ನಡೆಯಬೇಕೋ, ಏಳು ಸಾಕು" ಎಂದು ಹೇಳಿ ಬಲವಂತವಾಗಿ ಕರೆದೊಯ್ದಳು.

ಸಾವಿತ್ರಿಯ ಸ್ನಾನವಾಯಿತು, ಕೋನೇರಯ್ಯನ ಸ್ನಾನವಾಯಿತು, ಲಕ್ಷ್ಮಮ್ಮನದೂ ಆಯಿತು. ಇತರ ಬಂಧುಗಳಿಗೆ ಕೆಲವರಿಗೂ ಆಯಿತು. ಕೊಂಚಹೊತ್ತಿಗೆ ಉಪ್ಪಿಟ್ಟೂ, ರವೆ ಉಂಡೆಗಳೂ, ಫಲಾಹಾರವಾದವು. ಇನ್ನು ಊಟವಾಗುವವರೆವಿಗೂ ಮಾಡುವದೇನೆಂದು ಕೆಲವರು ಇಸ್ಪೀಟನ್ನು ಮಾಡಲಿಕ್ಕೆ ಅನುಕೂಲಪಡಿಸಿಕೊಂಡರು. ಕೆಲವರು ಹರಟೆಯ ಮಾತುಗಳನ್ನಾಡುವದಕ್ಕೆ ತೊಡಗಿದರು. ಕೋನೇರಯ್ಯನೂ, ರಾಮಚಂದ್ರಯ್ಯನಬಳಿಗೆ ಹೊರಟುಹೋದನು.

ಮಧ್ಯಾಹ್ನ ಸುಮಾರು ಎರಡು ಘಂಟೆಯಾಗಿರಬಹುದು. ಅಡಿಗೆಯೂ ಮುಗಿಯಿತು. ದೇವತಾರ್ಚನೆಯೂ ಮುಗಿಯಿತು. ಎಲೆಗಳನ್ನು ಹಾಕುವ ಸಂರಂಭವಾರಂಭವಾಯಿತು. ನೆಂಟರೂ, ಇಷ್ಟರೂ, ಬರುತ್ತಾ ಇರುತ್ತಿದ್ದಾರೆ. "ಈ ಕಡೆಯಲ್ಲಿ ಹೆಂಗಸರಿಗೆ ಹಾಕಿ, ಈ ಕಡೆಯಲ್ಲಿ ಗಂಡಸರು, ಹುಡುಗರಿಗೆಲ್ಲಾ ಹಜಾರದಲ್ಲಿ ಎಲೆಗಳನ್ನು ಹಾಕಿ" ಎಂದು ಬುಚ್ಚಯ್ಯ ಜವಾನನು ಹೇಳುತ್ತಿದ್ದನು. "ಶೇಕದಾರರ ಮನೆಯವರನ್ನು ಪುನಃ ಕರೆದು ಬಾರೋ ಶ್ಯಾಮೂ, ಅವರಿಗೆಲ್ಲ ಹಾಕೋಣ, ಈ ತೊಟ್ಟಿಯ ಮೇಲುಗಡೆಯಲ್ಲಿ ಹಾಕೋಣ" ಎಂದು ಇನ್ನೊಬ್ಬನು ಹೇಳುತ್ತಿದ್ದನು "ಸುಮಾರು ಎಷ್ಟು ಎಲೆಗಳು ಬೀಳುತ್ತವೆ ಅದು ನೋಡಿಕೊಳ್ಳಿ. ಜಾಗವು ಸಾಲದಿದ್ದರೆ, ಬೀದಿಯಲ್ಲಿ ಒಂದು ಜಮಖಾನವನ್ನು ಕಟ್ಟಿ, ದಿಣ್ಣೆಗಳಮೇಲೆಯೂ ಎಲೆ

ಗಳನ್ನು ಹಾಕೋಣವೆಂದು ಮತ್ತೊಬ್ಬ ಯಜಮಾನನು ಹೇಳುತ್ತಿದ್ದನು ಕೊಂಚ ಹೊತ್ತಿನಲ್ಲಿಯೇ ಎಲ್ಲಾ ಕಡೆಗಳಲ್ಲಿಯೂ, ಎಲೆಗಳನ್ನು ಹಾಕಿದರು. "ಲೋ, ಹುಡುಗರಾ, ನೀವೆಲ್ಲಾ ಬೀದಿಯ ದಿಣ್ಣೆಯ ಮೇಲಕ್ಕೆ ಬನ್ನಿರೋ" ಎಂದು ಸುಬ್ಬನ ಜವಾನನು ಕರೆದುಕೊಂಡು ಹೋದನು, ಎಲೆಗಳಲ್ಲಿ ಬಡಿಸಲುಪಕ್ರಮಿಸಿದರು. ಉಪ್ಪು, ಚಟ್ನಿ, ಕೋಸಂಬರಿಗಳು, ಪಲ್ಯಗಳು, ಕೂಟು, ಹುಳಿ, ತೊವ್ವೆ, ಪರಮಾನ್ನ, ಹಪ್ಪಳ, ಚಿತ್ರಾನ್ನ ಮತ್ತು ಕೆಲವರೆಲೆಗಳಲ್ಲಿ ಹೋಳಿಗೆ, ಎಲ್ಲವೂ ಕ್ರಮವಾಗಿ ಬಡಿಸಲಾಯಿತು "ಓಹೋ, ನಮ್ಮ ಸುಬ್ಬಯ್ಯನವರು ಬಂದರು ಈಗತಾನೆ ಬೆಂಗಳೂರಿಂದ, ಬಾ ಬಾ, ನಿನ್ನ ಮೂಟೆಯನ್ನಿಳಿಸು." 'ಸುಬ್ಬಯ್ಯ, ಸುಬ್ಬಯ್ಯ, ಯಾವ ಸುಬ್ಬಯ್ಯ' ಕೋನೇರಯ್ಯನಿಗೆ ಎದೆಯಲ್ಲಿ ಝುಗ್ ಎನ್ನಲು ತಿರುಗಿ ನೋಡಿದನು. ಸಾವಿತ್ರಿಯು ಕಿವಿಗೂ ಈ ಶಬ್ದವು ಬಿತ್ತು; "ಓಹೋ, ಚಿಕ್ಕಪ್ಪನು ಬಂದನು. ಇನ್ನೇನು,' ಎಂದು ಹರ್ಷವನ್ನು ತಾಳಿದಳು; ಅತ್ತು—ಈ ಮದುವೆಯನ್ನು ನಿಲ್ಲಿಸುವೆನೆಂದುಕೊಂಡಳು. ಸ್ವಲ್ಪ ಕಾತರದಿಯಿಂದ ಬಗ್ಗಿ ನೋಡಿದಳು. ಚಿಕ್ಕಪ್ಪನು ಚಿಕ್ಕಮಾವನು ಬಂದನೆಂದು ಸಡಗರದಿಂದೆದ್ದು ಮರೆಯಾಗಲಿಕ್ಕೆ ಯತ್ನಿಸಿದಳು ನಾಗಮ್ಮನಿಗೆ ಸಾವಿತ್ರಿಯ ಮದುವೆಗೆ ಮೈದುನನೂ ಬಂದನೆಂದು ಸಂತೋಷವಾಯಿತು. ಚಿಕ್ಕಪ್ಪನಲ್ಲ! ಚಿಕ್ಕಮಾವನಲ್ಲ! ಮೈದುನನಲ್ಲ! ಈ ಸುಬ್ಬಯ್ಯನೇ ಬೇರೆ. ಆದಿನ ಬೆಳಿಗ್ಗೆ ಬೆಂಗಳೂರಿಂದ ಹೊರಟು ಹಿಂದೂಪುರಕ್ಕೆ ಬಂದಿಳಿದನು. ರಾವ್ ಚಂದ್ರಯ್ಯನ ಅಕ್ಕನ ಮಗನು ಈತನ ಹೆಸರೂ ಸುಬ್ಬಯ್ಯ. ರಾವು ಚಂದ್ರಯ್ಯನ ಅಕ್ಕನೂ, ಅಕ್ಕನ ಮಕ್ಕಳೂ, ಭಾವನೂ ಬಂದಿಳಿದರು. ಕೋನೇರಯ್ಯನಿಗೆ ಮನಸ್ಸು ಸಮಾಧಾನಸ್ಥಿತಿಯನ್ನು ಹೊಂದಿತು. ಆದರೂ ಮೊದಲಿನ ಭೀತಿಯು ಪೂರ್ತಿಯಾಗಿ ಹೋಗಲಿಲ್ಲ. ಸಾವಿತ್ರಿಯ ಮನೋಭಾವವು, ವ್ಯತ್ಯಸ್ತವಾಯಿತು. ನಾಗಮ್ಮನಿಗೂ ಸಂತೋಷವು ಕಮ್ಮಿಯಾಯಿತು.

ಊಟವೇನೋ ಮುಗಿಯಿತು. ಮುಗಿಯುವಹೊತ್ತಿಗೆ ೩ ಘಂಟೆಯಾಗಿಹೋಯಿತು. ಇನ್ನು ಸಾಯಂಕಾಲದ ಕೆಲಸಗಳಿಗೆ ಜಾಗರೂಕ

ರಾದರು. ಜಡೆಗಳನ್ನು ಹೆಣೆದುಕೊಳ್ಳುವುದು, ಹೂವುಗಳನ್ನು ಕಟ್ಟು ವದು, ಹೊಸಸೀರೆಗಳನ್ನು ತೆಗೆದುಟ್ಟುಕೊಳ್ಳುವುದು ಆಗಲೇ ಸಾಯಂಕಾಲ ವಾಯಿತು. ತಟ್ಟೆಗಳಲ್ಲಿ ಅರಿಶಿನ ಕುಂಕುಮಗಳನ್ನೂ ತೆಂಗಿನಕಾಯಿಗಳ ನ್ನೂ ಜೋಡಿಸಿಕೊಳ್ಳುವರೂ; ಮತ್ತೆ ಇತರರು ಜಮಖಾನವನ್ನು ರಾಮ ದೇವರ ಗುಡಿಯ ಒಳಗೆ ತೆಗೆದೊಯ್ಯುವರು. ದೀಪಗಳನ್ನು ಸರಿಪಡಿಸು ವುದು. ಈ ಕಾರ್ಯಗಳಲ್ಲಿ ರಂಗಾಗ ಪುರೋಹಿತರು ಬಂದು "ನಿಶ್ಚಿತಾರ್ಥವು ಮನೆಯಲ್ಲಿಯೇ ಆಗಬೇಕೋ, ಇಲ್ಲವೇ ಗುಡಿಯಲ್ಲಿ ಆಗಬೇಕೋ" ಎಂದು ಕೇಳಿದರು. "ಎಲ್ಲವೂ ಗುಡಿಯಲ್ಲಿಯೇ ನಡೆಯಲಿ" ಎಂದು ಬದಲು ಬಂತು. ಹಿಲಾಲುಬತ್ತಿಗಳನ್ನು ಸರಿಪಡಿಸಿಕೊಂಡರು, ಪಲ್ಲಕ್ಕಿಗಳನ್ನು ಸಿದ್ಧಪಡಿಸಿಕೊಂಡರು ಓಲಗದವರೂ ಸಿದ್ಧವಾದರು. ಸೂರ್ಯಾಸ್ತ ವಾಗಿಹೋಗಿ ಕತ್ತಲೆಯಾಗುತ್ತ ಬಂದಿತು, ಎಲ್ಲರೂ ಬಹಳ ಗಡಿಬಿಡಿಯ ಲ್ಲಿದ್ದರು. ಗಂಡಿನವರು, ಆಗಲೇ ಹೊರಟು ಹೋಗಿರುವರು, ಜೋಯಿಸ್ರು ಕಾದಿರುತ್ತಾರೆ; ಇನ್ನೂ ಆಗಬೇಕಾದ ಕೆಲಸಗಳು ಬಹಳವಿವೆ" ಎಂದು ಪುರೋಹಿತರು ಎಚ್ಚರಿಕೆಯನ್ನು ಕೊಡುತ್ತಿದ್ದರು. ಲಕ್ಷ್ಮಮ್ಮನೂ ಸಿಂಗ ರಿಸಿಕೊಂಡಳು. ತನ್ನ ಅಕ್ಕನಿಗೂ, ತಂಗಿಯರಿಗೂ ಸಿಂಗರಿಸಿದಳು. ಅವಳೇ ಅಲ್ಲವೇ ಬೀಗಿತ್ತಿ. "ಮನೆಯಿಂದ ಹೊರಡಿ, ಬೇಗ ಓಲಗದವರಾದರೋ" ಓಲಗವನ್ನೂ ಶುರುಮಾಡಿಯಾಯಿತು. "ಸಾವಿತ್ರಿಯನ್ನು ಕರೆಯಿರಿ" "ಸಾವಿತ್ರೀ, ಸಾವಿತ್ರೀ, ಸಾವಿತ್ರೀ" ಏನೂ ಇನ್ನೂ ಬರಲಿಲ್ಲ, ಸಾವಿತ್ರೀ ಎಂದು ಕೂಗುತ್ತ ಕೆಲವರು ಒಳಗೆಹೋದರು. "ಸಾವಿತ್ರೀ, ಸಾವಿತ್ರೀ, ಸಾವಿ ತ್ರೀ" ಸಾವಿತ್ರಿಯೇ ಇಲ್ಲ. "ಸಾವಿತ್ರಿಯೆಲ್ಲಿ ಸಾವಿತ್ರೀ, ಸಾವಿತ್ರೀ ಅಯ್ಯೋ ಸಾವಿತ್ರಿಯೇ ಇಲ್ಲ." ಸಾವಿತ್ರಿಯು ಎಲ್ಲಿಹೋದಳು? ಎಲ್ಲಿ ಅದೃಶ್ಯಳಾದಳು?

೨೦ ನೆಯ ಪರಿಚ್ಛೇದ

ಯಾವದಿನದಲ್ಲಿ ಮೂರ್ತಿಯು ನೀರ್ಲಹಳ್ಳಿಯ ಗ್ರಾಮಾಭಿಮುಖವಾಗಿ ಹೊರಟುಹೋದನೋ ಆ ದಿನದಲ್ಲಿ ಸುಬೇದಾರರಮನೆಯಲ್ಲಿ ಕೆಲವು ಸಂಗತಿಗಳು ಜರುಗುತ್ತಿದ್ದವು. ಯಜಮಾನ ಯಜಮಾನತಿಯರಿಗೆ ಆದ ಸಂಭಾಷಣೆಯಲ್ಲಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಮೂರ್ತಿಗೂ ತನಗೂ ನಡೆದ ಮಾತುಗಳನ್ನು ವಿವರ ವಿವರವಾಗಿ ಯಜಮಾನತಿಯು ಹೇಳುತ್ತಿದ್ದಳು. ಮಧ್ಯೆ ಮಧ್ಯೆ ತನ್ನ ಸಮ್ಮತಿಯನ್ನು ಕೇಳುತ್ತ, ಕೆಲವೆಡೆಗಳಲ್ಲಿ ಪ್ರತಿಕೂಲವಾಗಿ ಮಾತನಾಡುತ್ತಿದ್ದಳು. ಕೃಷ್ಣವೇಣಿಯ ಮದುವೆಯ ವಿಷಯವಾಗಿ ಇಬ್ಬರ ಅಭಿಪ್ರಾಯಗಳೂ ಒಂದಾದವು.

“ಮೂರ್ತಿಗೆ ಆ ಶಾನುಭೋಗರ ಮನೆಯ ಹೆಣ್ಣನ್ನು ತರುವದು ನನಗಿಷ್ಟವಿಲ್ಲ.”

“ಹಾಗೆನ್ನಬೇಡ, ಕೋನೇರಯ್ಯನೇನೋ ಕೆಟ್ಟವನು. ನನ್ನ ಅನುಭವಕ್ಕೆ ಅದು ಬಂದಿರುವದು. ಆದರೆ ಹುಡುಗಿಯ ವಿಷಯವಾಗಿ ಏನು ಹೇಳಲಿಕ್ಕೂ ಇಲ್ಲ. ಜಾತಕಗಳನ್ನು ತೋರಿಸೋಣ.”

“ನನಗೆ ಮನಸ್ಸಿಲ್ಲ. ಮೈಸೂರಿನಿಂದ ಬಂದ ಕಾಗದಕ್ಕೆ ಬದಲು ಕೊಡಿ. ಆ ಹೆಣ್ಣನ್ನೇ ನಮ್ಮ ಮೂರ್ತಿಗೆ ತರೋಣ.”

“ಮೂರ್ತಿಗೆ ಮೈಸೂರಿನದ ಇಚ್ಛೆ ಇಲ್ಲವೆಂದು ನೀನೇ ತಿಳಿಸಿದೆಯಲ್ಲ.”

“ಅವನಿಗೇನುಗೊತ್ತು. ಇನ್ನೂ ಎಳೆಯಹುಡುಗ. ಯಾರುಹೇಗೆ ಹೇಳಿಕೊಟ್ಟರೆ, ಹಾಗೆ ಕೇಳುವನು.”

“ನೀನು ಅವನ ತಾಯಿಯಾದುದಕ್ಕೆ ಇಷ್ಟುಮಟ್ಟಿಗೆ ಅವನಗುಣವನ್ನು ಕಂಡು ಹಿಡಿದುಕೊಂಡಿರುವೆಯಲ್ಲ. ಅವನು ಓದಿದವನು. ಮುಂದಿನ ವರುಷ ಬೊಂಬಾಯಿಗೆ ಹೋಗುವನು, ಅವನಿಗೆ ತಿಳುವಳಿಕೆಯಿಲ್ಲವೇ. ನೀನು ಹೇಳಿದಂತೆ ನಡೆಯಲಾರದು. ಮುದ್ದನ್ನು ಹಾಕಬೇಡವೆಂದರೇನು? ನಾನು ಅದನ್ನು ನಂಬುವದಿಲ್ಲ. ಜಾತಕಗಳು ಸರಿಹೋದರೆ ಯಾವದಕ್ಕೂ

ದರೇನು ? ಇನ್ನೂ ಶಾನುಭೋಗರ ಮನೆಯು ಹೆಣ್ಣಾದರೆ ಭಯಭಕ್ತಿಗಳಿಂದ ಇರುವಳು."

" ಅವಳವಿಷಯವಾಗಿ ಕೃಷ್ಣವೇಣಿಯನ್ನು ಕೇಳಿನೋಡಿ.

" ಅವಳಿಗೇನು ತಿಳಿಯುವದು. ಆದರೂ ನೋಡೋಣ, ' ಕೃಷ್ಣವೇಣೀ, ಕೃಷ್ಣವೇಣೀ ' "

ಕೃ— " ಏನಪ್ಪಾ.

ಯು ಜ. ನ—ಸಾವಿತ್ರಿಯು ನಿನ್ನಸಹಪಾಠಿಯಲ್ಲವೇ?

ಕೃ— ಅಹುದು.

ಯು ಜ. ನ—ನೀನು ಅವಳೊಡನೆ ಮಾತನಾಡಿರುವೆಯಾ

ಕೃ—ಅವಳೂ, ನಾನೂ ಸ್ನೇಹಿತರು. ಯಾವಾಗಲೂ ಶಾಲೆಯಲ್ಲಿ ಪಕ್ಕದಲ್ಲಿಯೇ ಕುಳಿತುಕೊಳ್ಳುವೆವು.

ಯು. ಜ. ನ—" ಹೇಗೆ ಓದುವಳು. ಬುದ್ಧಿವಂತಳೇ

ಕೃ— ಅವಳು ಯಾವಾಗಲೂ ಮೊದಲಿನವಳಾಗಿಯೇ ನಿಲ್ಲುವಳು. ಮೊನ್ನೆಯಪರೀಕ್ಷೆಯಲ್ಲಿ ಮಾತ್ರ ಲೆಕ್ಕಗಳಲ್ಲಿ ನಾನು ಮೇಲೆಬಂದೆನು.

ಯು. ಜ. ನ—ಅದಿರಲಿ. ಮೂರ್ತಿಯು ಸಾವಿತ್ರಿಯ ವಿಚಾರವಾಗಿ ನಿನ್ನೊಡನೆ ಏನಾದರೂ ಹೇಳಿದ ವನೆ ?

ಕೃ— ನಗುತ್ತ ಹೇಳಿದ ವನು.

ಯು ಜ. ತಿ—" ಏನೆಂದು

ಕೃ— " ನಿನ್ನ ಸಹಪಾಠಿಯು ಚೆನ್ನಾಗಿರುವಳು. ನನಗೆ ಅವಳನ್ನು ಕೊಟ್ಟು ಮದುವೆ ಮಾಡಿದರೆ,—

ಯು. ಜ. ತಿ-ನೋಡಿದಿರಾ, ನಾನು ಹೇಳಲಿಲ್ಲವೇ.

ಯು. ಜ. ನ—" ಇರಲಿ, ತಾಳು. ಆಮೇಲೆ, ಆಮೇಲೆ,

ಕೃ- ' ಮಾಡಿದರೆ ಸುಖವಾಗಿರಬಹುದು, ಇವರು ಎಲ್ಲಿಂದ ಯಾವ ಹುಡುಗಿಯನ್ನು ಸಂಪಾದಿಸುವರೋ,' ಎಂದು ಹೇಳಿರುವನು."

ಯು. ಜ. ನ—ಮೂರ್ತಿಯು ಬಯಸುವದು, ಸಾವಿತ್ರಿಗೆ ಗೊತ್ತೆ ?

ಕೃ— ಗೊತ್ತು

ಯು. ಜ. ತಿ— ಅದು ಹೇಗೆ

ಕೃ— ಅದು ಹೇಗೋ; ಗೊತ್ತು

ಯು. ಜ. ನ—ಇಲ್ಲಿ ಬಾ. ಹೋಗಬೇಡ, ಅವಳೇನಾದರೂ ಹೇಳಿರುವಳೇ

ಕೃ— ಇಲ್ಲ.

ಯು. ಜ. ನ—ಹಾಗಾದರೆ ಹೇಗೆ ಗೊತ್ತು?

ಕೃ— ಅದೇನೋ ನನಗೆ ತಿಳಿಯದು. ನನ್ನನ್ನು ಕೇಳಬೇಡಿ

ಯು. ಜ. ನ—ಹಾಸ್ಯದಿಂದ. ಇರಲಿ ನೋಡು, ನೀನು ಹೇಳದಿದ್ದರೆ, ನಿನಗೆ ಒಬ್ಬ ಪಟೇಲನ ಮಗನನ್ನು ತಂದು ಗಂಡನನ್ನಾಗಿ ಮಾಡುವೆನು

ಕೃ— ನನಗೇನೂ ಅವಮಾನವಲ್ಲ. ನಿನಗೆ ಪಟೇಲನ ಮಗನು ಅಳಿಯನಾಗುವನಲ್ಲ.

ಯು. ಜ. ತಿ— "ಅವಳೇನು ಚತ್ರಾಂಗಿ, ಮಾತುಗಳನ್ನು ನೋಡಿ, ಗಂಡನನ್ನು ಕಕ್ಕೆಯಲ್ಲಿ ಕೂರಿಸಿ, ಸಂತೆಯಲ್ಲಿ ಮೂರು ಕಾಸಿಗೆ ಮಾರಿ ಬಂದುಬಿಡುವಳು.

ಯು. ಜ. ನ—ಅದಿರಲಿ. ಕೃಷ್ಣವೇಣಿ, ಸಾವಿತ್ರಿಯು ನಿನ್ನೊಡನೆ ಎಂದಾದರೂ ಈ ವಿಷಯವಾಗಿ ಹೇಳಿರುವಳೇ?

ಕೃ— ಇಲ್ಲಪ್ಪ. ಮೂರ್ತಿಯೂ, ಅವಳೂ, ಆಗಲೇ ಮಾತನಾಡಿಬಿಟ್ಟಿರುವರು.

ಯು. ಜ. ತಿ— ಅಯ್ಯೋ, ಇನ್ನೇನು ಗತಿ! ನನಗೆ ಗೊತ್ತು. ನಾನು ಹೇಳಲಿಲ್ಲವೇ, ಏನೋ ನಡೆದಿರಬೇಕು. ಅವನಿಗೆ ಮದ್ದನ್ನು ಹಾಕಿರಬೇಕು, ಇಲ್ಲದಿದ್ದರೆ, ಹೀಗೇಕೆ ಮಾಡುತ್ತಿದ್ದನು.

ಯು. ಜ. ನ— ಛೀ, ಸುಮ್ಮನಿರು. ಇದರಲ್ಲಿ ನನಗೇನೂ ಆಶ್ಚರ್ಯವು ತೋರುವದಿಲ್ಲ. ಇನ್ನು ಮೇಲೆಲ್ಲಾ ಹೀಗೆಯೇ ಆಗುವುದು. ಅವನೂ, ಓದಿರುವನು. ಅವಳೂ ಓದಿರುವಳು. ಸರಿ, ಸರಿ, ನಾನು ಜಾತಕಗಳನ್ನು ಕೂಡ ತೋರಿಸುವುದಿಲ್ಲ. ಹಾಗೆಯೇ ಮದುವೆಯನ್ನು ಮಾಡಿಬಿಡುವೆನು.

ಯು. ಜ. ತಿ—ಎಲ್ಲಿಯಾದರೂ ಉಂಟೇ. ಆಹಾಳು ಓದಿಸಿಂದ ಎಲ್ಲರೂ ಕೆಟ್ಟುಹೋಗಿರುವರು, ಸಾಕು. ಇನ್ನು ನಿಮ್ಮ ಮಗನನ್ನು ಇಲ್ಲಿಯೇ

ಇಟ್ಟುಕೊಳ್ಳ ಹೊಂಬಾಯಿಗೆ ಹೋಗಿಬಿಟ್ಟು ಒಂದು ಗುಜರಾತಿ ಹುಡುಗಿಯನ್ನು ತಂದು ಬಿಟ್ಟರೇ ನಾನೇನುಮಾಡಲಿ

ಸು. ಜ. ನ– ಅದಕ್ಕೇ ನಾನು ಹೇಳುವದೇನಂದರೆ,—ಅವನಿಗೆ ಸಾವಿತ್ರಿಯನ್ನು ಕೊಟ್ಟು ವಿವಾಹ ಮಾಡಿಬಿಡೋಣ. ಗುಜರಾತೀಹುಡುಗಿಯನ್ನಾಗಲೀ, ಪಾರ್ಸಿಹುಡುಗಿಯನ್ನಾಗಲೀ, ಅವನು ಕಟ್ಟಿಕೊಳ್ಳುವುದಿಲ್ಲ.

ಯ. ಜ. ತಿ ನನಗೆ, ಆ ಹುಡುಗನಮೇಲೆ ಛಲವಿಲ್ಲ ಆದರೆ ಆ ಒಳಗವನ್ನು ಕಟ್ಟಿಕೊಂಡು ಏಗುವವರಾರು ?

ಯ. ಜ. ನ–ಅವರ ಒಳಗವೆಂದರೆ ಯಾರು ಸುಬ್ಬಯ್ಯನೂ, ನಾರಣಪ್ಪನೂ, ಒಳ್ಳೆಯವರು ಒಳ್ಳೆಯವರ ಸಹವಾಸವನ್ನು ಮಾಡಬೇಕಲ್ಲದೆ, ಗರ್ವಿತರಾದರ ಜತೆಯಲ್ಲಿ ಸೇರಬಾರದು.

ಎ. ಜ. ತಿ- ಇಂತಹ ನೆಂಟಸ್ತನವನ್ನು ಯಾರೂ ಮಾಡಿರಲಾರರು

ಎ. ಜ, ನ-" ಮಾಡಿದ್ದರೂ ನಿನಗೆ ತಿಳಿದಿರಲಾರದು.

ಎ. ಜ. ತಿ— ಅಂತೂ ಕಾತರಗಳನ್ನು ತೋರಿಸಿ

ಯಜಮಾನರು ಆಲೋಚಿಸುತ್ತ, ಆಗಾಗ್ಗೆ ಮುಗುಳುನಗೆಯನ್ನು ನಗುತ್ತ. 'ಕಲ್ಯಾಣಿ, ಇಲ್ಲಿಬಾ, ಎಂದು ಕರೆದು ತಮ್ಮ ಕೋಣೆಗೆ ಹೊರಟರು.

" ಅವರು ಯಾವಾಗ ಮಾತನಾಡಿದರು. ಅವರಿಗೆ ಹೇಗೆ ಸಂದರ್ಭವು ಒದಗಿತು.

" ಆದಿನ, ಆರತಿಯೊಂದು ನಮ್ಮ ಮನೆಗೆ ಸಾವಿತ್ರಿಯನ್ನು ಕರೆದಿದ್ದೆವು ಆ ದಿನದಲ್ಲಿಯೇ.

" ಅದು ಹೇಗೆ.

" ಕಾಳೋತಡಿಯಲ್ಲಿ.

" ಇಬ್ಬರೂ ಸೇರಲು ಕಾರಣವಿಲ್ಲದಿದ್ದರೂ, ಇಬ್ಬರನ್ನೊಬ್ಬರು ಅರಿಯರಲ್ಲ.

" ನನ್ನೊಡನೆ, ಹೇಳಿದನು. ನಾನು ಸಾವಿತ್ರಿಯನ್ನು ಮೂರ್ತಿಗೆ ಸಿಗುವಂತೆ ಮಾಡುವೆನು.

"ನೀನು, ಅಸಾಧ್ಯಹುಡುಗಿ"—ಎಂದು ಹತ್ತಿರಕ್ಕೆ ಎಳೆದುಕೊಂಡು ಮುಂದಲೆಯನ್ನು ಸವರಿ—"ಅವಳು ಒಳ್ಳೆಯವಳೇ" ಎನಲು "ಹೌದು. ಇದುವರೆಗೂ, ಅವಳು ಯಾರೊಡನೆಯೂ, ಹೆಚ್ಚು ಮಾತಾಡಿದುದನ್ನೇ ನಾನು ನೋಡಿಲ್ಲವೆಂದಳು. ಹೋಗಲಿ, ಅವಳು ನಿನಗೆ ಅತ್ತಿಗೆಯಾದರೆ, ನಿನಗೆ ಸಮ್ಮತವೇ? ಎಂದು ಕೇಳಲು

"ಸಮ್ಮತವಲ್ಲದೆ ಏನು? ನನಗೆ ಬಹಳ ಸಂತೋಷವೆಂದು ಹೇಳಿದಳು. ಹಾಗಾದರೆ ನಿನ್ನ ಮದುವೆಯೂ, ಮೂರ್ತಿಯ ಮದುವೆಯೂ ಜತೆಯಲ್ಲಿಯೇ ನಡೆಯುವುವು, ಎಂದು ಸುಬೇದಾರರು ಹೇಳಲು ಕೃಷ್ಣವೇಣಿಯು

ನನ್ನ ಮದುವೆ, ಅದೇನು? ಎನ್ನಲು ನಿನಗೆ ಗೊತ್ತಿಲ್ಲವೆ, ನಿನಗೆ ನಿನ್ನ ತಾಯಿಯು ಎಲ್ಲೋ ವರನನ್ನು ಸಂಪಾದಿಸುವಳಂತೆ, ಅಥವಾ ನೀನೇ ಎಲ್ಲಿಯಾದರೂ ನೋಡಿ ಮಾತನಾಡಿಕೊಂಡಿರುವೆಯೋ ಎನಲು 'ಹೋಗಪ್ಪ' ಎಂದು ಮುಖವನ್ನು ತಿರುಗಿಸಿದಳು. ಸುಬೇದಾರರು— ಮೂರ್ತಿಯ ಸ್ನೇಹಿತನನ್ನು ನೋಡಿರುವೆಯಲ್ಲವೇ. ಎಂದೊಡನೆಯೇ, ಕೃಷ್ಣವೇಣಿಯು, ಯಾರು? ಯಾವಾಗಲೂ ಜೊತೆಯಲ್ಲಿರುವಾತನೋ? ಇಲ್ಲಿಗೆ ಆಗಾಗ್ಗೆ ಬರುವನು. ಎನ್ನಲು, ಇಗೋ ಇನ್ನು ಮೇಲೆ, ಅವನು, ಇವನು, ಅನ್ನಬಾರದು; ಅವರು ಎನ್ನಬೇಕು. ನೀನು ಅವನ ಹೆಂಡತಿಯಾಗುವೆ, ಎಂದು ಹೇಳುತ್ತಿರುವಾಗಲೇ ಕೃಷ್ಣವೇಣಿಯು ಕೈಯನ್ನು ಬಿಡಿಸಿಕೊಂಡು ಓಡಿಹೋದಳು.

೨೧ ನೆಯ ಪರಿಚ್ಛೇದ

ಸಾಯಂಕಾಲದಲ್ಲಿ ಸುಬ್ಬಯ್ಯನು ಬಾಗೇಪಲ್ಲಿಗೆ ಬಂದನು. ಬರುತ್ತಲೂ, ಕೋನೇರಯ್ಯನೂ, ಸಾವಿತ್ರಿಯೂ, ಎಲ್ಲರೂ ನಾಗೋಡಿಗೆ ಹೊರಟುಹೋಗಿರುವರೆಂದೂ, ಸಾವಿತ್ರಿಯ ಮದುವೆಯು ನಿಷ್ಕರ್ಷಿಸಲ್ಪಟ್ಟಿರುವುದೆಂದೂ ತಿಳಿದು ಅತ್ಯಂತ ಕೋಪದಿಂದುಂಟಾದ ದುಃಖದಿಂದ—'ಛೀ, ಪಾಪಿ! ನೀನು ಇಷ್ಟು ದುಷ್ಟನೆಂದು ತಿಳಿದಿರಲಿಲ್ಲ. ನಾನು ಕಾಗದವನ್ನು

ಬರಬಹುದೆಂದು ಯೋಚಿಸುತ್ತಿದ್ದನು. ಒಂದುವೇಳೆ ಕಾಗದವು ಸೇರಿ ಲ್ಲವೇನೋ, ಆದರೂ ಮದುವೆಯು ಇಲ್ಲಿಯೇ ನಡೆಯಬೇಕಾಗಿತ್ತಲ್ಲ. ಗಂಡಿನವರಿಗೆ ಕಡಿಮೆಯಾಗುವುದು ಅವಮಾನಸಂಪ್ರದಾಯ. ಆ ರಾಮಚಂ ದ್ರಯ್ಯನಿಗೆ ಗೊತ್ತಿರುವಂತೆ,' ಎಂದು ಯೋಚಿಸುತ್ತ, 'ನಾರಾಯಣಪ್ಪನಿಗೇ ಬುದ್ಧಿ ತಿಳಿಯದಿರಬಹುದೇ, ಅವನೂ ಸುಮ್ಮನೆ [illegible] ಇನೋ? ಇರ ಲಾರನು. ಆ ರಾಮಚಂದ್ರಯ್ಯನ ವಿಷಯವು ನಮಗೆಲ್ಲಾ ತಿಳಿದಿರ ಬೇಕಲ್ಲ ಆ ಕೇಡಿಗನು. ಈ ಮದುವೆಯ ಸಮಾಚಾರವನ್ನು ಒಬ್ಬರಿಗೆ ತಿಳಿಸುವುದಂ ದರೇನು, ತಿಳಿಸಲಾರನೇ. ಆ ರಾಮಚಂದ್ರಯ್ಯನಿಗೆ, ನಾರಾಯಣನನ್ನು ಕೊಡಲು, ಏನೋ ತಂತ್ರ ನಡೆದಿರಬೇಕು. ಈ ಮದುವೆಯ ಕಾಲದಲ್ಲಿ ನಾನು ಸಂಧಿಸಿದುದಾದರೆ, ನಿಷ್ಫಲವಾಗುವದೆಂದು ತಿಳಿದು ಹೀಗೆ ಮಾಡಿರುವ ನಲ್ಲವೇ' ಎಂದು ಯೋಚಿಸಿ, ಕೂಡಲೇ ನಾಗೋಜಿಗೆ [illegible] ಜಟ ಕಾಗಾಡಿಗಳ ಬಳಿ ಬಂದನು. ಆ ಊರಲ್ಲಿ ನಾಲ್ಕು ಜಟಕಾ ಗಾಡಿಗಳಿಗಿಂತ ಹೆಚ್ಚಿಲ್ಲ, ಆಗಾಗ್ಗೆ ಚಿಕ್ಕಬಳ್ಳಾಪುರದಿಂದ ಬಂದಿರುವ ಗಾಡಿಗಳು ಇರು ವುವು. ಬಂದರೂ ಪುನಃ ಶೀಘ್ರದಲ್ಲಿಯೇ ವಾಪಸು ಹೊರಟುಹೋಗು ವುವು. ಸುಬ್ಬಯ್ಯನು ವಿಚಾರಿಸಲು, [illegible] ಸಿದ್ಧವಾಗುವದಿಲ್ಲ. ನಾಳೆ ಗೆ ಬಿಟ್ಟುಕೊಂಡಿರುವೆವು ಎಂದರು. ಬುದ್ಧಿ, ಈಗತಾನೆ ಬಂದೆ. ಕುದು ರೆಬಳಲಿದೆ, ಬಂಗಳ್ಕೆ ಎರಡು [illegible] ವೆನೆಂದರೂ [illegible] ಗುವ ದಿಲ್ಲವೆನ್ನಲು, ಸುಬ್ಬಯ್ಯನು ಖಿನ್ನನಾಗಿ ಮನೆಗೆ ಬಂದು ಕುಳಿತನು.

ಮೂರ್ತಿಯೂ, ರಾಜನೂ, ಆಗತಾನೆ ಪಠ್ಲಶಾಲೆಯಿಂದ ಮನೆಗೆ ಬಂದರು. ಬರುವಾಗ ಸುಬ್ಬಯ್ಯನನ್ನು ನೋಡಿದರು, ಆದರೆ ಮಾತನಾ ಡಿಸಲಿಲ್ಲ. ಮೂರ್ತಿಯು [illegible] ಯು ಒಳಗೆ ಹೋಗಿ ತಾನಿಲ್ಲದಾಗ ನಡೆದ ಸಮಾಚಾರವೇನೆಂದೂ ಈಗ ತಂದೆಯವರೆಲ್ಲಿಗೆ ಹೋದರೆಂದೂ ತಾಯಿಯು ಮನ ಸ್ಸಂತಿರುವದೆಂದೂ ನಾನು ಮನೆಯಲ್ಲಿಲ್ಲದುದಕ್ಕೆ ಏನೆಂದರೆಂದೂ ಕೇಳಲು, ಅಕ್ಕಯು ಕಛೇರಿಯಿಂದ ತಂದೆಯು ಇನ್ನೂ ಬಂದಿಲ್ಲವೆಂದೂ, ತಾಯಿಯು ಏನೂ ಅನ್ನಲಿಲ್ಲವೆಂದೂ ಹೇಳಿದಳು. ಮೂರ್ತಿಯು, ತಂಗಿ! ನಾನು ನಿನಗೆ ಹೇಳಿದುದನ್ನು ಏನುಮಾಡಿದೆ! ಎನಲು ಈಗ ತಂದೆಯು ಬರಬಹುದು

ನೇ ಕೇಳು, ಎಂದಳು. ಹಾಗಾದರೆ ಇವನ್ನು ವಿವಾಹಗಳು ನಡೆದಿಲ್ಲವೆ? ಎಂದು ಮೂರ್ತಿ ಕೇಳಲು, ನಡೆದಾದವು ನಿನ್ನನ್ನು ಪ್ರಾತಃ ಕೇಳಬೇಕೆಂ ರುವರು ಎಂದು ಹಾಸ್ಯವನ್ನು ಒರೆಮಾಡಿಕೊಂಡಳು. ಮೂರ್ತಿಯೂ, ಇಯ್ಯೋ, ಹಾಗಾದರೆ ಆ ವೈಸೂರಿ ಹೊಡೆದುಹೋದವನ್ನೇ ನೀವು ಪ್ರೀತಿಸಿದರೋ ನೀವು ನಿನಗೆ ಯಾವ ಹುಡುಗಿಯಾದರೇನು? ಎಂದು ಕೃಷ್ಣವೇಣಿ ಹೇಳಿ ದಳು. ಸರಿ, ನಿನ್ನ ಮೂರ್ತಿಗೆ ಶಾಸ್ತ್ರ ಬರಲು ಹೋದಲ್ಲಿ, ಅಲ್ಲಿ ಬೀದಿಯಲ್ಲಿ ಹೋಗುತ್ತಿರುವವರನ್ನು ನೋಡಿದೆಯಾ, ಅವನನ್ನು ನೀನು ಮದುವೆಯಾಗು ಎನ್ನಲು, ಆಕೆಯು ಛೀ, ಛೀ, ನನಗೆ ಬೇಡ, ಎಂದಳು. ಅದು ಏಕೆ? ಎಂದ ಮೂರ್ತಿಯ ಮಾತಿಗೆ, ನನಗೆ ಮನಸ್ಸು ಒಪ್ಪುವವನಾಗಬೇಕು, ಎಂದಳು. ನನಗೂ ಹಾಗೆಯೇ ಎಂದು ಮೂರ್ತಿಯೂ ಅನ್ನಲು, ಹಾಗಾ ದರೆ ಸಾವಿತ್ರಿಯು ನಿನ್ನ ಮನಸ್ಸಿಗೆ ಒಪ್ಪಿರುವಳೋ? ಎಂದು ಕೇಳಿದಳು. ಪ್ರಾತಃ ಆ ಮಾತನ್ನು ಕೇಳಿ, ಎಂದು ನಗುತ್ತ, ನನ್ನ ಮನಸ್ಸಿಗೊಪ್ಪಿರು ವಳು ಎಂದು ಮೂರ್ತಿ ಅಂದನು. ಹಾಗೆಂದು ಯಾವಾಗ ನಿನ್ನೊಡನೆ ಹೇಳಿದಳು ಎಂದು ಕೃಷ್ಣವೇಣಿ ಕೇಳಲು, ನಿನಗೆ ನನ್ನ ಅಭಿಪ್ರಾಯ ಗೊತ್ತಾಗಲಿಲ್ಲ. ನನ್ನ ಮನಸ್ಸು ಅವಳ ಮೇಲಿರುವುದು, ಎಂದು ಮೂರ್ತಿ ಹೇಳಿದ್ದಕ್ಕೆ, ಅವಳ ಮನಸ್ಸು ರಾಮಚಂದ್ರನ ಮೇಲಿರುವುದು, ಎಂದು ಕೃಷ್ಣವೇಣಿ ನುಡಿದಳು. ಇಲ್ಲ, ನನ್ನ ಮೇಲೆಯೇ ಇರುವುದು ಅದು ನನಗೆ ಖಂಡಿತವಾಗಿ ಗೊತ್ತು ಎಂಬಹಾಗೆ ಮೂರ್ತಿ ಅನ್ನಲು, ಅದು ಹೇಗೆ ಬಲ್ಲೆ? ನೀನು ಬಿಚ್ಚಿ ಹೇಳದಿದ್ದರೆ, ನಾನೂ ನಿನಗೆ ಹೇಳುವುದಿಲ್ಲ ಏನೋ ಹೊಸಸಂಗತಿಗಳು ಜರುಗಬೇಕು, ಎನಲು, ಕೃಷ್ಣವೇಣಿ! ಅವ ಳೂ ನನ್ನೊಡನೆ ಮಾತನಾಡಿರುವಳು, ಬಾಯಿಬಿಟ್ಟು ಹೇಳಿರುವಳು. ತಿಳಿ ಯಿತೋ, ಎಂದು ಮೂರ್ತಿ ಹೇಳಲು ಎಲ್ಲಿ, ಯಾವಾಗ? ಎಂದು ಪುನಃ ಪ್ರಶ್ನೆ ಹುಟ್ಟಿತು. ಅದೆಲ್ಲಾ ದೊಡ್ಡಕಥೆ, ಅಂತೂ ನಮ್ಮಿಬ್ಬರ ಮನಸ್ಸು ಒಂದಾಗಿರುವುದು, ಎಂದು ಮೂರ್ತಿ ಹೇಳಿದನು. ಹಾಗಾದರೆ ನೀವಿಬ್ಬರೂ ದಂಪತಿಗಳು. ಎಂದು ತಂಗಿಯು ನುಡಿಯಲು ಹಾಗಾಗಲೆಂದೇ ಕೋರು ವೆನು. ಎಂದು ಮೂರ್ತಿಯು ನುಡಿದನು. ಹಾಗೆಯೇ ನಿಷ್ಕರ್ಷೆಯಾ

ಗಿದೆ. ಧೈರ್ಯವಾಗಿರು ಎಂದು ಕೃಷ್ಣವೇಣಿ ಹೇಳಲು, ತಟ್ಟನೆ ತಂಗಿಯನ್ನು ಹತ್ತಿರಕ್ಕೆಳೆದುಕೊಂಡು ಕೃಷ್ಣವೇಣಿ! ಅದು ಹೇಗೆ? ತಂದೆಯೇನೂ ಅನ್ನಲಿಲ್ಲವೇ ಎನಲು, ಇಲ್ಲ. ನಿನ್ನವಿಚಾರವನ್ನು ಕೇಳಿ ತಂದೆಗೆ ನಗು ಬಂತು, ಜಾತಕಗಳನ್ನುಕೂಡ ನೋಡುವುದೇಬೇಡವೆಂದರು. ಅದರಂತೆ ತಾಯಿಗೂ ಸಮಾಧಾನವೇ ಸರಿ. ನೀನು ಇನ್ನೆಲ್ಲಾದರೂ ಹೋಗಿ ಗುಜರಾತೀ ಹುಡುಗಿಯನ್ನು ತಂದುಬಿಡುವೆಯೆಂದು ಅವಳಿಗೆ ಯೋಚನೆ. ಆಗೋ. ಅಪ್ಪನು ಬರುತ್ತಿರುವನು. ನಾನು ನನ್ನಕೊಠಡಿಗೆ ಹೋಗುವೆನು. ಎಂದು ಕೃಷ್ಣವೇಣಿ ಹೊರಟುಹೋದಳು.

ಸುಬೇದಾರರು ಬರುವಾಗ ಸುಬ್ಬಯ್ಯನನ್ನು ದೂರದಿಂದಲೇ ನೋಡಿ ಹತ್ತಿರಕ್ಕೆ ಕರೆದು, ಏನು ಸುಬ್ಬಯ್ಯ, ಯಾವಾಗ ಬಂದದ್ದು. ನೀವು ಬಾಗೇಪಲ್ಲಿಯನ್ನು ಬಿಟ್ಟು ಬಹಳ ದಿವಸಗಳಾಗಲಿಲ್ಲವೇ, ಎಂದು ಕೇಳಲು “ಅಹುದು ಸ್ವಾಮಿ. ಈಗತಾನೇ ಬಂದೆನೆಂದು ಆತನು ಹೇಳುತ್ತಿರಲು, ಆತನನ್ನೂಕರೆದುಕೊಂಡು ಮನೆಯೊಳಗೆ ಬಂದು, ಎಲೋ ಮೋಟೀನ್ ಬೂಟ್ಸ್ ಬಿಚ್ಚು,, ಎಂದು ಹೇಳುತ್ತ ಬಂದು ಕುರ್ಚಿಯಮೇಲೆ ಕುಳಿತರು, ‘ಸುಬ್ಬಯ್ಯ, ಮೇಲೆಬನ್ನಿ ಕುಳಿತುಕೊಳ್ಳಿ, ಎಂದು ಹೇಳಿ ಲೋ ಗುರುಪ, ನಮ್ಮ ಮೂರ್ತಿ ಬಂದನೇನು ಎಂದು ಕೇಳಲು, ಚಿಕ್ಕಸ್ವಾಮಿಗಳು ಬಂದಿದಾರೆಬುದ್ಧೀ ಎಂದು ಗುರುಪನು ಹೇಳಿದನು. ಸುಬೇದಾರರು ಸರಿ. ಸುಬ್ಬಯ್ಯ, ನೀವು ಇಲ್ಲಿಯೇ ನಿಲ್ಲಿ, ಸ್ವಲ್ಪ ಒಳಗೆ ಹೋಗಿಬರುವೆನೆನ್ನಲು ಸ್ವಾಮಿ, ಕ್ಷಮಿಸಬೇಕು. ಈಗ ಅಗತ್ಯವಾಗಿ ನಾಗೋಡಿಗೆ ಹೊರಟುಹೋಗಬೇಕು. ಎಂದು, ಸುಬ್ಬಯ್ಯನು ಹೇಳಿದನು. ಸುಬೇದಾರರು, ಸ್ವಲ್ಪತಾಳಿ! ಎಂದು ಹೇಳಿ ಪುಟ್ಟಜೋಯಿಸರನ್ನು ಬರಮಾಡುವಂತೆ ಜವಾನನಿಗೆ ಅಪ್ಪಣೆ ಮಾಡಿ, “ನಮ್ಮ ಮೂರ್ತಿಯನ್ನು ನೋಡಿರುವಿರೋ? ಎಂದು ಕೇಳಲು, ಸುಬ್ಬಯ್ಯನು ಒಂದೆರಡು ಬಾರಿ ಬೆಂಗಳೂರಿನಲ್ಲಿ ನೋಡಿರುವೆನೆಂದನು. ಆಗ ಸುಬೇದಾರರು, ಸುಬ್ಬಯ್ಯನವರೇ? ಈ ಹುಡುಗರು ಮಾಡುವ ಕೆಲಸಗಳು ದೊಡ್ಡವರಿಗೆ ಪ್ರಾಣಕ್ಕೆ ಬರುತ್ತೆ ಅದೇನೋ ಗಲಾಟೆಯನ್ನು ಮಾಡಿಟ್ಟುಕೊಂಡಿರುವನು. ನೀವು ನಾಗೋ

ಡಿಗೆ ಹೋದರೆ—" ಎನ್ನಲು ಸುಬ್ಬಯ್ಯ— ಸ್ವಾಮಿ, ನನ್ನಿಂದಾಗಬೇಕಾದ ಕಾರ್ಯವಿದ್ದರೆ ತಮ್ಮ ಅಪ್ಪಣೆಯನ್ನು ಮೀರುವುದಿಲ್ಲ. ಸುಬೇ— ನಿಮ್ಮ ಹುಡುಗಿ, ಸಾವಿತ್ರಿಯ ಜಾತಕವು ಬೇಕಯ್ಯಾ. ಸುಬ್ಬಯ್ಯ— ಉದಲು ಕೊಡಲಿಕ್ಕೆ ಏನೂ ತೋಚದೆ ದಿಗ್ಭ್ರಮೆ ಹೊಂದಿದನು. ಸುಬೇ—ಏತಕ್ಕೆ ಉಡಲು ಕೊಡುವುದಿಲ್ಲ. ನೀವೆಲ್ಲಿಯಾದರೂ ನಿಷ್ಕರ್ಷೆ ಮಾಡಿಕೊಂಡಿದ್ದೀರಾ! ಸುಬ್ಬಯ್ಯ-ಸ್ವಾಮಿ, ಕೋದಂಡರಯ್ಯನು ನಡೆಸಿದ ಸಂಗತಿಯು ತಮಗೆ ತಿಳಿದಿರಬಹುದು. ಸುಬೇ- ನನಗೆ ಏನೂ ತಿಳಿದಿಲ್ಲ. ಸುಬ್ಬ - ಮನೆಗೆ ಬೀಗ ಹಾಕಿಕೊಂಡು ನಾಗೋಡಿಗೆ ಹೊರಟುಹೋಗಿರುವನು. ಸಾವಿತ್ರಿಗೆ ನಾಳಿದ್ದು ಮದುವೆಯನ್ನು ಮಾಡುವನಂತೆ. ಸುಬೇ— ನಿಮ್ಮನ್ನೊಬ್ಬರನ್ನೂ ಕೇಳದೆ ಮಾಡುವನೆ? ಅದುಹೇಗೆ ಗೊತ್ತುಮಾಡಿದನು? ಸುಬ್ಬ— ಎದುರಿಗೆ ಬಂದಾಗ ಕೇಳಬೇಕು. ಸುಬೇ— ಅವನು ಹುಚ್ಚ ಮುಂಡೆ, ನೀವುಹೋಗಿ ಸಾವಿತ್ರಿಯನ್ನು ನಾಳೆಯದಿನ ಕರೆದುಕೊಂಡು ಬನ್ನಿ. ಅವಳು ಹುಟ್ಟಿದ ಘಳಿಗೆ, ನಕ್ಷತ್ರ, ದಿನ, ಜ್ಞಾಪಕವಿದೆಯೋ" ಸುಬ್ಬ— ಸ್ವಲ್ಪ ಯೋಚಿಸಿ, ಬೆಳಗಿನಝಾವದಲ್ಲಿನಾಲ್ಕುವರೆ ಘಂಟೆಯಲ್ಲಿ ಹುಟ್ಟಿದ್ದು ಚೈತ್ರಶುದ್ಧದಲ್ಲಿ ಸಪ್ತಮಿಯೋ, ಅಷ್ಟಮಿಯೋ ಚೆನ್ನಾಗಿ ನೆನಪಿಲ್ಲ.

ಅಷ್ಟುಹೊತ್ತಿಗೆ ಪುಟ್ಟಜೋಯಿಸರು ಬಂದರು. "ಬನ್ನಿ ಪುಟ್ಟಜೋಯಿಸರೆ, ಮೇಲೆಬನ್ನಿ" ಸುಬ್ಬಯ್ಯನಕಡೆಗೆ ತಿರುಗಿಕೊಂಡು ಸುಬೇದಾರರು " ಈಗ ಸಾವಿತ್ರಿಗೆ ಎಷ್ಟುವಯಸ್ಸು" ಸುಬ್ಬ—ಹನ್ನೆರಡುತುಂಬಿ ಕೆಲವು ದಿವಸಗಳಾದವು. "ಸುಬೇ— ಜಾತಕವನ್ನು ಬರೆಯಿಸೋಣ"

ಪುಟ್ಟಜೋಯಿಸರಿಗೆ ಈ ವರ್ತಮಾನ ಬಂದಕೂಡಲೇ ಜಾತಕವನ್ನು ಬರೆದರು ಸಾವಿತ್ರಿಯ ಚಿಕ್ಕವಯಸ್ಸಿನಲ್ಲಿ ನಡೆದ ಕೆಲವುವಿಷಯಗಳನ್ನು ಸುಬ್ಬಯ್ಯನು ಹೇಳಿದನು. ಅದರವೇಲೆ ಬಂದ ಜಾತಕವನ್ನು ಬರೆದಿಟ್ಟು, ಮೂರ್ತಿಯದನ್ನೂ ತರಿಸಿ, ಅದನ್ನೂ ನೋಡಿ ಸ್ವಾಮಿ, ಎರಡೂ ಚೆನ್ನಾಗಿ ಒಪ್ಪುವಂತೆ ಕಾಣುತ್ತೆ. ಮುಕ್ಕಾಲುಪಾಲು ಎರಡು ಜಾತಕಗಳೂ ಸರಿಹೋಗಿವೆ. ಕೆಲವು ದೋಷಗಳುಂಟು, ಆದರೆ ಅವು

ಗಳು ಅಷ್ಟು ಬಾಧಿಸುವುದಿಲ್ಲ. ನಾಳೆ ಇನ್ನೂ ಚೆನ್ನಾಗಿ ಗುಣಿಸಿ ಹೇಳುವೆನು. ಈಗ ನೋಡಿದ್ದರಲ್ಲಿ ಪ್ರಶಸ್ತವಾಗಿದೆ ಎನಲು

ಒಳ್ಳೆಯದು, ಬೆಳಗ್ಗೆ ಸ್ವಲ್ಪ ಬನ್ನಿ, ಇನ್ನೆರಡು ಜಾತಕಗಳನ್ನು ತೋರಿಸಬೇಕೆಂದು ಸುಬೇದಾರರು ಹೇಳಿದರು. ಅಪ್ಪಣೆ, ಎಂದು ಪುಟ್ಟಜೋಯಿಸರು ಹೊರಟುಹೋದರು. ಮಾರುದಿನ ಬೆಳಗ್ಗೆ ಸುಬೇದಾರರು, ಸುಬ್ಬಯ್ಯನನ್ನು ಊಟಮಾಡಿಕೊಂಡು ಹೊರಡಿ ಎನ್ನಲು, ಸ್ವಾಮೀ, ಜಟಕಾ ಗಾಡಿಗಳಾವವೂ ಇಲ್ಲ, ಎಲ್ಲರೂ ಒಪ್ಪಿಕೊಂಡಿರುವೆವು ಎನ್ನುವರು. ಎಂದು ಸುಬ್ಬಯ್ಯ ಹೇಳಲು, ಅವರು ಕಳ್ಳರು- ಇಲ್ಲದಿದ್ದರೂ ಉಂಟೆಂದು ಹೇಳುವ ಪದ್ಧತಿ. ಎಲೋ, ದಫೇದಾರ್, ಜಟಕಾಗಾಡಿಯವರನ್ನು ಇಲ್ಲಿಗೆ ಕರೆದುಕೊಂಡು ಬಾ. ಎಂದು ಅಪ್ಪಣೆ ಮಾಡಲು, ಜಟಕಾಗಾಡಿಯವರು ಕೂಡಲೇ ಬಂದರು. ಒಬ್ಬೊಬ್ಬರನ್ನು ಬೆದರಿಸಿ, ಒಂದು ಜಟಕಾವನ್ನು ಏರ್ಪಾಡು ಮಾಡಿದರು ಇನ್ನೊಂದು ಘಂಟೆಯೊಳಗಾಗಿ ಹೊರಡಬೇಕು ಸಿದ್ಧವಾಗು, ಹೋಗೆಂದು ಅಪ್ಪಣೆಯಾಯಿತು, ಜಟಕಾಗಾಡಿಯವನು, ಬುದ್ಧಿ! ರಾಜಂಡಳ್ಳಿಗೆ ಗೋಡ ಬದಲಾಯಿಸಬೇಕು, ಅಲ್ಲೇ ಖಾನಮಾಡುತೇನೆ, ಎಂದು ಹೇಳಿದನು. ಸುಬ್ಬಯ್ಯನವರು ಊಟಮಾಡಿ ಪ್ರಯಾಣ ಹೊರಟರು.

೨೨ ನೆಯ ಪರಿಚ್ಛೇದ

ಜಟಕಾಗಾಡಿಯು ನಾಗೋಡಿಯನ್ನು ಸೇರುವದಕ್ಕಿಂತ ಮೊದಲೇ ಸುಬ್ಬಯ್ಯನ ಮನಸ್ಸು ನಾಗೋಡಿಯನ್ನು ಸೇರಿದ್ದಿತು. ಕುದುರೆಯು ಎಷ್ಟು ವೇಗವಾಗಿ ಓಡುತ್ತಿದ್ದರೂ, ನಿಧಾನವಾಗಿ ಪ್ರಯಾಣವನ್ನು ಮಾಡುತ್ತಿದ್ದ ಹಾಗೆ ಭಾವನೆಯುಂಟಾಯಿತು. ಈಗತಾನೆ ಒಂದು ಮೈಲಿಯಾಯಿತಲ್ಲ. ಇನ್ನೂ ಎರಡನೇ ಕಲ್ಲು ಬರಲಿಲ್ಲ, ಎಂದು ತಹತಹಪಡುತ್ತಿದ್ದನು ಹೃದಯದಲ್ಲಿನ ಚಿಂತೆಯನ್ನೂ, ಶೀಘ್ರದಲ್ಲಿ ಸೇರಬೇಕೆಂಬ ಕುತೂಹಲವನ್ನೂ

ಸಮಾಧಾನಸ್ಥಿತಿಗೆ ತರಲು ಗಾಡಿಯಲ್ಲಿಯೇ ಮಲಗಲು ಪ್ರಯತ್ನಿಸಿದನು. ಕಣ್ಣುಗಳನ್ನು ಮುಚ್ಚಿಕೊಂಡನು. ಗಾಡಿಯು ತಾನು ಹೋಗುತ್ತಿದ್ದ ದಿಕ್ಕಿಗೆ ಪ್ರತಿಯಾಗಿ, ಹೋಗುತ್ತಿದ್ದ ಹಾಗೆ ತಿಳಿದನು. ಕಣ್ಣುಗಳನ್ನು ಬಿಟ್ಟನು. ಪುನಃ, ಅದೇ, ಕಟಕಟನೆ ಓಡುವ ಜಟಕಾಗಾಡಿ. ಒಂದೊಂದಾಗಿ ಬಂಡೆಗಳೂ, ಕಲ್ಲುಗಳೂ, ಹಿಂದೆ ಹಿಂದೆಯೇ ನಿಲ್ಲುತ್ತಿದ್ದವು. ಈ ಬೇಸರಿಕೆಯನ್ನು ನೀಗಲು ಸುಬ್ಬಯ್ಯನಿಗೆ ಸಾಧ್ಯವಾಗಲಿಲ್ಲ. ಇನ್ನೂ ಐದು ಮೈಲಿಗಳು ಮಾತ್ರ ಬಂದಿರುವೆನು. ಇನ್ನೂ ೨೫ ಮೈಲಿಗಳು ಹೋಗಬೇಕಲ್ಲ, ಎಂದು ನೊಂದುಕೊಳ್ಳುವನು. ಕೂಡಲೇ— ಒಂದೊಂದು ಮೈಲಿಯು ಹತ್ತಿರವಾಗುತ್ತಿದೆ, ಎಂದು ತಾಳ್ಮೆಯನ್ನು ಹೊಂದುವನು. ಓ, ಅರ್ಧದೂರ ಸಾಗಿಬಂದೆನೆಂದು ಉತ್ಸಾಹವನ್ನು ತಾಳಿದನು. ಆ ಉತ್ಸಾಹದ ಕಾರಣದಿಂದ ಹಾಡಲಿಕ್ಕಾರಂಭಿಸಿದನು. ವಿಧವಿಧವಾದ ಪದ್ಯಗಳನ್ನು ಹಾಡಿದನು. ಕೀರ್ತನೆಗಳನ್ನು ಹಾಡಿದನು. ಸಾಲದುದಕ್ಕೆ ಗಾಡಿಯವನಿಂದಲೂ ಮುಸಲ್ಮಾನ್ ಭಾಷೆಯಲ್ಲಿ ಹಾಡಿಸಿದನು. ಇವರಿಬ್ಬರಿಗೂ ಸಾಕಾಯಿತು. ರಾಜಂಡಹಳ್ಳಿಯ ಬಳಿಯಲ್ಲಿನ ಹೊಳೆಯೂ ಸಿಕ್ಕಿತು. ಹೊಳೆಯಲ್ಲಿ ಸ್ವಲ್ಪ ಇಳಿದು, ನೀರನ್ನು ಕುಡಿದು, ಮರಗಳ ನೆರಳಿನಲ್ಲಿಯೇ, ಹಳ್ಳಿಯ ಹತ್ತಿರ, ಹತ್ತಿರ, ನಡೆದು ಬಂದನು. ಗಾಡಿಯವನು ಕುದುರೆಯನ್ನು, ಬದಲಾಯಿಸುವ ನೆಪದಿಂದ, ಮೊದಲಿನ ಕುದುರೆಯನ್ನು ಬಿಚ್ಚಿ, ಸಾಮಾನುಗಳನ್ನು ಬಳಿಗಿಟ್ಟು, ಕುದುರೆಯನ್ನು ಹಿಡಿದುಕೊಂಡು ಹೊರಟುಹೋದನು.

ಕಾಲುಘಂಟೆಯಾಗಿ ಹೋಯಿತು; ಬರಲಿಲ್ಲ; ಗಾಡಿಯವನು ಇನ್ನೂ ಬರಲಿಲ್ಲ. ಅರ್ಧಘಂಟೆಯಾಯಿತು. ಎಷ್ಟೋ ಕೂಗಿಕೊಂಡನು, ಯಾರಾರು ಬಳಿಯಲ್ಲೋ, ಹೇಳಿ ಕಳುಹಿಸಿದರು. ಮನದಲ್ಲಿ ಸುಬ್ಬಯ್ಯನಿಗೆ ಕೋಪದ ಭಾವವು ಉಕ್ಕಿಬರುತ್ತಲಿತ್ತು. ದೂರದಲ್ಲಿ ಗಾಡಿಯವನನ್ನು ನೋಡಿದನು. ನಿಧಾನವಾಗಿ, ಹೆಜ್ಜೆಯಮೇಲೆ ಹೆಜ್ಜೆಯನ್ನು ಹಾಕುತ್ತ, ಒಂದು ಕೈಯಿಂದ ಕುದುರೆಯನ್ನು ಎಳೆಯುತ್ತ, ಇನ್ನೊಂದು ಕೈಯನ್ನು ಜೇಬಿನಿಂದ ಬಾಯಿಗೂ, ಬಾಯಿನಿಂದ ಜೇಬಿಗೂ ತರುತ್ತಿದ್ದನು. ಸುಬ್ಬಯ್ಯನು ಚಪ್ಪಾಳೆಯನ್ನು ತಟ್ಟಿದನು, ಕೂಗಿದನು. ಅದ್ಯ

ಷ್ಟಕ್ಕೆ ತಕ್ಕಂತೆ ಗಾಡಿಯವನಿಗೆ ಒಬ್ಬ ಸ್ನೇಹಿತನು ಸಿಕ್ಕಿದನು. ಅವನೊಡನೆ ಮಾತನಾಡುತ್ತ, ಮೆಲ್ಲಗೆ ಬಂದ ಬೀಡಿಯನ್ನು ಹಚ್ಚಿ ಸೇದುತ್ತ, ಅಲ್ಲಿಯೇ ನಿಂತುಬಿಟ್ಟನು. ಸುಬ್ಬಯ್ಯನಿಗೆ ತಾಳಲಾರದಷ್ಟು ಕ್ರೋಧವು ತಲೆದೋರಿತು. ಮುಖವೆಲ್ಲವೂ ಕೆಂಪೇರಿತು. ಕೂಡಲೇ ಗಾಡಿಯವನನ್ನು ಭೂಗತ ಮಾಡಬೇಕೆಂದು ಮನಸ್ಸು ಹೋಯಿತು. ಪುನಃ ಕೂಗಿಕೊಂಡನು. ಕುದುರೆಯನ್ನು ಎಳೆದುಕೊಂಡು ಗಾಡಿಯವನು ತಿರುಗಿದನು. ಹತ್ತಿರ ಹತ್ತಿರಕ್ಕೆ ಬಂದನು. "ಹೊತ್ತಾಗಿಹೋಯಿತು, ಬೇಗ ಕಟ್ಟು." ಎಂದು ಸುಬ್ಬಯ್ಯನು, ನುಡಿದನು. ತಾಳು ಸ್ವಾಮಿ, ಇನ್ನೂ ಗೋಡ ಪಾಣಿ ಪೀಲಿಲ್ಲ" ಎಂದು ಒದರಲು ಬಂತು. ಕೋಪಕ್ಕೆ ಇದು ತಕ್ಕ ಸಮಯವಲ್ಲವೆಂದುಕೊಂಡು, "ಇಲ್ಲಿ ನೋಡು ನಿನಗೆ ೧ ರೂಪಾಯಿ ಇನಾಮು ಕೊಡುತ್ತೇನೆ, ಬೇಗನೆ ಕಟ್ಟು" ಎಂದನು. ಕೂಡಲೇ, ಕುದುರೆಗೆ ಎರಡು ಚಾಟಿಯ ಏಟುಗಳು ಬಿದ್ದವು ಕುದುರೆಯು ಓಡುತ್ತ, ಓಡುತ್ತ ಹೊಳೆಯ ಬಳಿಗೆ ಹೋಗಿ ನೀರನ್ನು ಕುಡಿಯಿತು. ವಾಪಸು ಬಂದು, ಪಕ್ಕದಲ್ಲಿ ನಿಂತಿತು. ಆಗಲೇ ಸಾಮಾನುಗಳನ್ನು ಹಾಕಿ, ಗಾಡಿಯಲ್ಲಿ ಹುಲ್ಲನ್ನು ಸವರಿಸಿ, ಜಮಖಾನವನ್ನು ಝಾಡಿಸಿ, ಸುಬ್ಬಯ್ಯನು ಗಾಡಿಯೊಳಗೆ ಕೂತನು. ಅಷ್ಟರಲ್ಲಿ ಯಾರೋ ಪಕ್ಕದಲ್ಲಿ ಬಂದು "ಏನು ಸುಬ್ಬಯ್ಯ, ಅಪರೂಪವಾಗಿ ಇತ್ತ ಬಂದಿರುವೆ, ಮನೆಗೆ ಬಂದು ಹೋಗುವದಿಲ್ಲವೇ

"ಸೀನಪ್ಪನವರೆ, ಬರುತ್ತೇನೆ, ಈಗ ಅಗತ್ಯವಾಗಿ ಹೊರಡಬೇಕು

"ಬೆಳಗ್ಗೆ ಹೊರಡಬಹುದಲ್ಲ."

ಸುಬ್ಬಯ್ಯನು ಸ್ವಲ್ಪ ಯೋಚಿಸಿದನು. ಗಾಡಿಯಿಂದಿಳಿದನು. ಕಡೆಗೆ "ಸೀನಪ್ಪನವರೆ, ಈಗ ಒಂದು ಕಾರ್ಯಕ್ಕಾಗಿ ಹೋಗುವೆನು, ಈಗ ತಡೆಯಬೇಡಿ, ನಿಮ್ಮಲ್ಲಿಗೆ ಈ ರಾತ್ರಿಯೇ ಬರುವೆನು."

"ಊಟದಹೊತ್ತಿಗೆ ಬಂದುಬಿಡುವಿರೋ ?

"ಬಂದು ಬಿಡುವೆನು" "ಸಾಷ್ಟಾಂಗ" "ಸಾಷ್ಟಾಂಗ"

ಕುದುರೆಯು ವೇಗದಾಗಿ ಓಡಿತು. ಗಾಡಿಯು ಎಲ್ಲಿ ಪುಡಿಪುಡಿಯಾಗುವದೋ ಎಂದು ಸುಬ್ಬಯ್ಯನು ಹೆದರಿದನು. ಅಹರೋ, ಈ ಹಡ

ರಿಕೆಗಿಂತ ಜಾಗ್ರತೆಯಾಗಿ ಹೋಗುವೆನೆಂಬುದು ತೋರಿದುದರಿಂದ ಹರ್ಷವನ್ನು ತಾಳಿದನು. ಈ ಹರ್ಷವು ನಿಮಿಷಮಾತ್ರದಲ್ಲಿ ಮಾಯವಾಯಿತು. ಮನಸ್ಸಿನಲ್ಲಿ ತಾನು, ಆ ಕೂಡಲೇ, ನಾಗೋಡಿಯಲ್ಲಿರಬಾರದೆ! ಎಂದು ಹೊಳೆಯಿತು. ನಿಟ್ಟುಸುರನ್ನು ಬಿಟ್ಟನು. ಸುಬ್ಬಯ್ಯನ ಚಿತ್ತವು ಮೊದಲು ದೇವರನ್ನು ನೆನೆಯಿತು. ಮನಸ್ಸಿನಲ್ಲಿಯೇ ವಂದಿಸಿದನು. ಸಾವಿತ್ರಿಯ ಮುಖವನ್ನು ಸ್ಮರಿಸಿಕೊಂಡನು. ಮೂರು ವರುಷಗಳಾಗಿ ಹೋದವು. ಹೇಗಿರುವಳೋ, ಈಗ ಎಷ್ಟು ಸಂಕಟಪಟ್ಟಿರುವಳೋ, ಯಾವಸ್ಥಿತಿಯಲ್ಲಿರುವಳೋ, ಆ ನಾಗಮ್ಮನಿಗಂತೂ ವಿವೇಚನೆಯೇ ಇಲ್ಲ. ಚಿಕ್ಕಂದಿನಿಂದಲೂ ಸಾವಿತ್ರಿಯು ಎಷ್ಟು ಜಾಣ್ಣುಡಿಗಳನ್ನಾಡುತ್ತಿದ್ದಳು. ಯಾವಾಗಲೂ, ತನ್ನ ಬಳಿಯಲ್ಲೇ ಇರುತ್ತಿದ್ದಳಲ್ಲ. ಒಂದೊಂದು ಸಾರಿ, ತನ್ನ ಮುದ್ದಾದ ಮೊಗವನ್ನೆತ್ತಿ ' ಚಿಕ್ಕಪ್ಪ, ನಾನು ಈದಿನ ಎಷ್ಟು ಓದಿರುವೆನು ಕೇಳು, ' ಎಂದು ಗೋವಿನ ಕಥೆಯೆಲ್ಲವನ್ನೂ ಹೇಳುತ್ತ, ಕೆಲವೆಡೆಗಳಲ್ಲಿ ' ನಿಷ್ಠೆಯಿಂದಲಿ ಪೋಪೆನಲ್ಲಿಗೆ ' ಎಂದರೆ ಅರ್ಥವೇನು? ಎಂದು ನುಡಿಯುತ್ತಿದ್ದುದನ್ನು ಜ್ಞಾಪಿಸಿಕೊಂಡನು. ಕಣ್ಣುಗಳು ಒಗಲೇ ಅಶ್ರುಮಯವಾದವು. " ಚಿಕ್ಕಪ್ಪ, ನನಗೆ, ನೀನು ಹುಡುಕಿ, ಹುಡುಕಿ, ಒಬ್ಬಾತನನ್ನು ತರಬೇಕು " ಎನ್ನುತ್ತ ಬಾಲಬುದ್ಧಿಯಿಂದ " ನಾನು ಅವನೊಡನೆ ಮಾತನಾಡಿ, ನನಗೊಪ್ಪಿದರೆ, ಮದುವೆಯಾಗುವೆನು " ಎಂದು ಹೇಳಿದ್ದುದು ತಟ್ಟನೆ ಈಗ ನುಡಿದಂತೆ ಭಾವನೆಯಾಯಿತು. ಈಗ ತನ್ನನ್ನು ನೋಡುತ್ತಲೂ, ಸಾವಿತ್ರಿಯು ಮೊದಲಿನಂತೆ ಬರುವಳೋ, ಇಲ್ಲವೇ, ದೊಡ್ಡ ಹುಡುಗಿಯಾದೆನೆಂದು ಹಿಂದೆ ನಿಲ್ಲುವಳೋ ಎಂದು ಅನುಮಾನವುಂಟಾಯಿತು. ಈಗಲೇ, ಆ ಸಾವಿತ್ರಿಯನ್ನು ಎತ್ತಿಕೊಳ್ಳಬೇಕೆಂದು, ಮನಸ್ಸು ಮುಂದಾಯಿತು. ಏನುಮಾಡಲಿ, ಈಗ ಏನಾಗಿರುವಳೋ, ಎಂತಿರುವಳೋ, ಬದುಕಿರುವಳೋ ಇಲ್ಲವೇ, ರಾಮಚಂದ್ರಯ್ಯನೇ ಬೇಡವೆಂದು ಮಾಡಿದಿರುವಳೋ ' ಎಂದು ದಿಗಿಲು ಹುಟ್ಟಿತು. ಇವುಗಳಿಂದ ನಾಗೋಡಿಯು ಬಳಿಗೆ ಬಂದುದು ಬೇಗ ತಿಳಿಯಲಿಲ್ಲ. ಗಾಡಿಯವನು, ಎಚ್ಚರಿಕೆಯನ್ನು ಕೊಟ್ಟನು.

ನಾಗೋಡಿಯನ್ನು ಸೇರುವಹೊತ್ತಿಗೆ ಸಾಯಂಕಾಲ ೬ ಘಂಟೆಯಾಗಿಹೋಯಿತು. ಗಾಡಿಯನ್ನು ಹಳ್ಳಿಯ ಹೊರಗೆಯೇ ನಿಲ್ಲಿಸಹೇಳಿದನು.

ತಾನು ಕಾಲುಸರಿಯಲ್ಲಿಯೇ ಹೊರಟನು. ಒಬ್ಬಿಬ್ಬರಿಂದ ಹೆಣ್ಣಿನವರ ಬಿಡಾರವನ್ನು ವಿಚಾರಿಸಿಕೊಂಡನು. "ಈಗ ತಾನು ಮಾಡತಕ್ಕದ್ದೇನೆಂದು ಯೋಚಿಸಿದನು. ತಾನು ಸರಾಸ್ತಾಗಿ ಹೋದರೆ ತನ್ನ ಮಾತುಗಳು ನಡೆಯುವವೋ ಇಲ್ಲವೋ ಎಲ್ಲರೂ ಸೇರಿಕೊಂಡು ತನಗೇನನ್ನಾದರೂ ಮಾಡಿದರೂ ಮಾಡಬಹುದು ಕೋನೇರಯ್ಯನೂ, ತನಗೆ ಪ್ರತಿಜವಾಬುಗಳನ್ನು ಕೊಟ್ಟು ಅವಮಾನ ಮಾಡಬಹುದು. ರಾಮಚಂದ್ರಯ್ಯನಿಗೂ ತನಗೂ ಮೊದಲಿನಿಂದಲೂ ಮಾತಿಲ್ಲ. ತಾನೇ ಎದುರಿಗೆ ಹೋಗಿ ಈ ಮದುವೆಯು ಆಗಕೂಡದೆಂದು ನಿರ್ಬಂಧಿಸಲೇ, ಇಲ್ಲವೇ, ಯಾವ ಉಪಾಯದಿಂದ ಇದನ್ನು ನಿವಾರಣೆ ಮಾಡಬೇಕು, ಎಂದು ಸ್ವಲ್ಪನಿಂತನು. ಮೆಲ್ಲಮೆಲ್ಲಗೆ ಜರುಗಿದನು. ಯೋಚಿಸುತ್ತಾ ಹೊಲಗಳ ಮೇಲಿನಿಂದಲೇ, ರಾಮಚಂದ್ರಯ್ಯನ ಮನೆಯ ಬಳಿಗೆ ಬಂದನು. ಹಳ್ಳಿಯ ಜನಗಳೆಲ್ಲರೂ, ಹೆಣ್ಣಿನವರ ಮನೆಯ ಮುಂದೆಯೂ, ರಾಮದೇವರ ಗುಡಿಯ ಬಳಿಯೂ ಇದ್ದುದರಿಂದ ಶಾರೀ ಸುಬ್ಬಯ್ಯನು ಯಾವ ಹೆಚ್ಚು ಜನಗಳಿಗೂ ತಿಳಿಯದೆ, ಅಷ್ಟುದೂರ ಬಂದುಬಿಟ್ಟನು. ಕಡೆಗೆ ಸುಬ್ಬಯ್ಯನು, "ಈಗಿನ ಉಪಾಯವು ಸಾಗಿದುದಾದರೆ, ಅವರಿಗೆ ತಕ್ಕ ಪ್ರಾಯಶ್ಚಿತ್ತವೂ, ನನ್ನ ಕಾರ್ಯಸಾಧಕವೂ, [illegible]ಹೆಯ ನಿವಾರಣೆಯೂ, ಮತ್ತು ಈ ಸಂಗತಿಯನ್ನು ಕೇಳಿದವರಿಗಾನಂದವೂ ಉಂಟಾಗುವುದೆಂದು ಹಿಗ್ಗಿದನು. ಮೆಲ್ಲಮೆಲ್ಲಗೆ, ನಾಗದಾಳೆಯ ಪೊದರುಗಳ ಪಕ್ಕದಲ್ಲಿಯೇ ನಿಂತು, ನಿಂತು, ಹಿಂದುಮುಂದು ನೋಡುತ್ತ, ಯಾರಿಗೂ ಕಾಣಿಸಿಕೊಳ್ಳದೆ, ಹೆಣ್ಣಿನವರ ಬಿಡಾರದ ಮನೆಯ ಹಿಂದುಗಡೆಗೆ ಸಾಗಿ ಹೋದನು. ಅಲ್ಲಿ ಬೆಳೆದಿದ್ದ ಹುಣಸೇಗಿಡಗಳ ಮರೆಯಲ್ಲಿ ನಿಂತು, ಮನೆಗೆ ಮುಂದಿನಿಂದ, ಕಿಟ್ಕಿಯಲ್ಲಿ ಬರುವವರನ್ನು ನೋಡಿದನು. ಆ ಹೆಂಗಸರ, ಮಕ್ಕಳ, ಗಂಡಸರ, ಗುಂಪುಗಳು ಹಿಂದಕ್ಕೆ ಹೋಗುವುದನ್ನೂ, ಮುಂದಕ್ಕೆ ಹೋಗುವುದನ್ನೂ ಕಂಡನು. ಆಗ ಹಿತ್ತಲಕಡೆಯಿಂದ ಎರಡುಸವಟು, ಒಂದು ತಪ್ಪಲೆಯನ್ನು ಹಿಡಿದುಕೊಂಡು ಒಬ್ಬಳು ಮನೆಯೊಳಗೆ ಹೋಗುವುದರಲ್ಲಿದ್ದಳು. ಸುಬ್ಬಯ್ಯನು ಚಪ್ಪಾಳೆತಟ್ಟಿದನು. ತಿಮ್ಮಿಯು ತಿರುಗಿನೋಡಿದಳು. ಕೈಸನ್ನೆಯಿಂದ ಹತ್ತಿರಕ್ಕೆ ಕರೆದನು.

ತಿಮ್ಮಿ—ಏನಪ್ಪ ಕರದೀಯೋ ಸು—ನೀನು ಇಲ್ಲಿ ಏನು ಕೆಲಸವನ್ನು ಮಾಡುತ್ತಿಯೋ ತಿ—ಮುಸರೆ ತಿಕ್ಕೊಂಡಿದ್ದೀನಿ. ಸು— ಈ ಎರಡುರೂ ಪಾಯಿಗಳನ್ನು ತೆಗೆದುಕೋ. ತಿ—ಅದ್ಯಾಕಾ ಸಂಗೆಲಡು ರೂಪಾಯಿ ಸು—ಇದನ್ನು ಇಟ್ಟುಕೋ, ನಿನಗೆ ಮದುವೆಕೆಲ್ಸ ಗೊತ್ತೇನು ತಿ—ಸಾವಿತ್ರಮ್ಮನು ನನ್ಗೆ ಗೊತ್ತಿಲ್ವೆ, ಹರಿಬಿಡಪ್ಪಾ. ಸು—ಒಳಗೆಹೋಗಿ, ಕರತರಬೇಕು ತಿ—ಅವಳ್ಬಂದಾಳೆ, ಸಿಂಗಾರ ಮಾಡಿಕೊಂಡ್ ಕಂತವ. ಸು—ಎಲ್ಲಿದಾಳೆ. ತಿ—ಕೋಣ್ಯಾಗ ಸು—ಇನ್ನೂ ಗುಡಿಗೆ ಹೋಗಿಲ್ಲ ಅದು ದೋ ಅಲ್ಲಪ್ಪೋ. ತಿ—ಇನ್ನೂ ಇಲ್ ಕಾಣಪ್ಪ ಸು—ಸರಿ, ನೀನುಹೋಗಿ, ಅವಳಿಗೆ ಹೇಳು ‘ ನಿನ್ನಚಿಕ್ಕಪ್ಪ, ಸುಬ್ಬಯ್ಯನು ಬಂದಿರನು. ಕಿತ್ತಲಾಗಿದಾನೆ ’ ತಿ—ನೀನೇನಪ್ಪ, ಸಾವಿತ್ರಮ್ಮನ ಚಿಕ್ಕಪ್ಪನ. ಸು—ಹೌದು. ತಿ—ಒಳಕ್ಕೆ ಬರಬಾರದಾ, ಮದುವೆಪೂಟ ಮಾಡಾಕಿಲ್ವೆ ಸು—ಮಾಡುತ್ತೀನೆ. ನನಗೆ ನೀರುಬೇಕು ಅವಳನ್ನು ಬೇಗ ಕಳುಹಿಸು ತಿ—ಆಗಲಿ, ಕಾಣಪ್ಪ ಎಂದು ಹೊರಟಳು. ಸು—ಇಗೋ, ಇಲ್ಲಿ, ಬಾ, ನಿನ್ನಹೆಸರೇನು ತಿ—ಎಸರಾ, ತಿಮ್ಮಿ ಸು—ತಿಮ್ಮಿ, ಜೋಕೆ, ಬೇರಾರಿಗೂ ತಿಳಿಯದಂತೆ ಅವಳಿಗೆ ಹೇಳು ತಿ—ಸರಿಕಾಣಪ್ಪ.

ಸಾವಿತ್ರಿಯು ಆದಿನ ಕೋಣೆಯನ್ನು ಬಿಟ್ಟು ಕದಲಿಲ್ಲ. ತನ್ನ ತಾಯಿಯೂ, ಅತ್ತಿಗೆಯೂ, ಬಲವಂತದಿಂದ, ಒಂದು ಹೊಸಸೀರೆಯನ್ನು ಡಿಸಿ, ಕೆಲವು ಆಭರಣಗಳನ್ನು ತೊಡಿಸಿದ್ದರು ಹಾಸಿಗೆಗಳರಾಸಿಯಲ್ಲಿ ಮುಖವನ್ನು ಮುಚ್ಚಿಕೊಂಡು ಮನಸ್ಸಿನಲ್ಲಿಯೇ ಕೊರಗುತ್ತಿದ್ದಳು ಮುಖದಲ್ಲಿ ಮೊದಲಿನ ಕಳೆಯಿರಲಿಲ್ಲ. ಇದೇಶೃಂಗಾರವು ಕೆಲವು ದಿವಸಗಳ ಹಿಂದೆ ಅವಳಿಗಾರಾದರೂ ಮಾಡಿದ್ದರೆ, ನೋಡಿ ಹರು ಯುವಕರಾದರೂ, ಹಯಸ್ಸಿನವರಾದರೂ, ಮುದುಕರಾದರೂ, ಮುಗ್ಧರಾಗುತ್ತಿದ್ದರು. ಆದರೆ ಈದಿವಸದಲ್ಲಿ, ಮುಖದಲ್ಲಿ ರಕ್ತವಿಲ್ಲ ಬಹಳ ದಿವಸಗಳು ಖಾಯಿಲೆಯಲ್ಲಿಬಿದ್ದುಸರಳುತ್ತಿರುವವರಮುಖದಂತೆ, ಕಾಣುತ್ತಿತ್ತು ತನ್ನಹಣೆಯಲ್ಲಿವಿಧಿಯು ಅತಿಕ್ರೂರವಾದ ಲಿಖಿತವನ್ನುಬರೆದಿರುವನೆಂತಲೂ, ‘ತನಗೆ ಅಲ್ಪಾಯುಸ್ಸು’ ಎಂದು ಯಾರೂ ಹೇಳಲಿಲ್ಲವೆಂತಲೂ, ನೋಡುಕೊ

ಳ್ಳುತ್ತಿದ್ದಳು. ಆಗ ಕೊಠಡಿಗೆ ಯಾರೋ ಬರುವಸದ್ದು ಕೇಳಿಸಿತು. ಮುಖವನ್ನು ಎತ್ತಿದಳು ಬಾಗಿಲುಮೇಲೆ ಒಂದು ಛಾಯೆಯು ನಿಂತಿತು ಮುಂದಕ್ಕೆ ಬಂದು ಕತ್ತಲೆಯಲ್ಲಿ ಸೇರಿಹೋಯಿತು. ತಿ—ಅಮ್ಮಾ ಸಾಯಿತ್ರಮ್ಮಾ, ಸಾವಿತ್ರಿಯು ಎದ್ದುನಿಂತಳು ತಿ—ನಿನ್ನಚಿಕ್ಕಪ್ಪನಂತೆ, ಸುಬ್ಬಯ್ಯ ಹಿತ್ತಲಾಗೆ ಬಂದವನೇ, ಕದೀತಾನೆ. ಸಾ—ಯಾವಸುಬ್ಬಯ್ಯನೇ. ತಿ—ನಿನ್ನ ಚಿಕ್ಕಪ್ಪನಮ್ಮಾ, ಉದ್ಯೋಗವನೆ ಸಾ-ಮನಸ್ಸಿನಲ್ಲಿ, ಹೆದರಿಕೆಯೂ, ಸಂತೋಷವೂ, ಆಸೆಯೂ, ನಿರಾಸೆಯೂ, ಎಲ್ಲವೂ ಏಕಕಾಲದಲ್ಲಿ ಸಂಧಿಸಿದವು ಯಾರಿರಬಹುದು, ಚಿಕ್ಕಪ್ಪನೇ ಬಂದಿರುವನೇ, ನೋಡುವೆನು, ಎಂದು ಹೊರಟಳು. ತಿಮ್ಮಿ, ನೀನು ಇಲ್ಲೇಯಿರು ಬರುವೆನು.

ಮೆಲ್ಲಗೆ ಕೊಠಡಿಯನ್ನು ಬಿಟ್ಟು ತೊಟ್ಟಿಯನ್ನು ದಾಟಿ, ಅಡಿಗೆಯ ಮನೆಯ ಪಕ್ಕದಲ್ಲಿಯೇ ಹಿತ್ತಲಿಗೆ ಬಂದುಬಿಟ್ಟಳು ಮನೆಯವರೆಲ್ಲರೂ ಹಜಾರದಲ್ಲಿಯೂ, ಮೇಲುತೊಟ್ಟಿಯಲ್ಲಿಯೂ, ಸೀರೆಗಳನ್ನುಟ್ಟುಕೊಳ್ಳುವುದರಲ್ಲಿಯೂ, ಆಭರಣಗಳನ್ನಿಟ್ಟುಕೊಳ್ಳುವುದರಲ್ಲಿಯೂ, ಇದ್ದರಾಗಿ ಕಾರಣ ಸಾವಿತ್ರಿಯು ಹೋದುದನ್ನು ಯಾರೂ ನೋಡಲಿಲ್ಲ. ಹಿತ್ತಲ ಬಾಗಿಲು ತೆರದಿತ್ತು. ಗಿಡದಕೆಳಗೆ ಯಾರೋ ನಿಂತಿದ್ದಹಾಗೆ ತಿಳಿಯಿತು ಬಾಗಿಲಬಳಿಯಲ್ಲಿ ನಿಂತುನೋಡಿದಳು. ಚಿಕ್ಕಪ್ಪನೇ ಅಹುದೆಂದು ಗೋಚರವಾಯಿತು; ಹಿಂದೆ ನೋಡಿದಳು, ಯಾರೂ ಇರಲಿಲ್ಲ. ಇನ್ನೊಂದುಸಾರಿ ಮುಂದೆ ನೋಡಿದಳು ಸುಬ್ಬಯ್ಯನು 'ಸಾವಿತ್ರೀ' ಎಂದುದು ಕಿವಿಯಲ್ಲಿ ಬಿತ್ತು. ಬಹುತ್ರಾ, 'ಚಿಕ್ಕಪ್ಪ', ಎಂದು ಕೂಗಿ, ಪ್ರಜ್ಞೆಯಿಲ್ಲದಂತ ಬಿದ್ದುಬಿಟ್ಟಳು. ಹೆಚ್ಚುಯೇಟು ತಗಲಲಿಲ್ಲ. ಸುಬ್ಬಯ್ಯನು ಮೇಲಕ್ಕೆ ಎತ್ತಿ ಹಿಡಿದುಕೊಂಡು. ಹತ್ತಿರಕ್ಕೆ ಮೆಲ್ಲಗೆ ಎಳೆದುಕೊಂಡು "ಸಾವಿತ್ರೀ ಮಗು, ಅಮ್ಮಾ, ಸಾವಿತ್ರಿ" ಎನ್ನುತ್ತ ಕಣ್ಣೀರುಬಿಟ್ಟನು ಕೂಡಲೇ ಅಲ್ಲಿನಿಲ್ಲುವದು ಸರಿಯಲ್ಲವೆಂದು ಯೋಚಿಸಿ, ಗಿಡಗಳ ಹಿಂದಿನಲ್ಲಿಯೇ ನಾಗದಾಳಿಯ ಪೊದರುಗಳ ಆಶ್ರಯದಲ್ಲಿಯೇ ಹೊಲಹನ್ನು ದಾಟಿ, ಬೇಲಿಗಳಲ್ಲಿ ತೂರಿ ಗಾಡಿಯಬಳಿಗೆ ಬಂದುಬಿಟ್ಟರು. ಗಾಡಿಯಲ್ಲಿ ಸಾವಿತ್ರಿಯನ್ನು ಕೂಡಿಸಿ, ತಾನೂ ಕುಳಿತು, 'ರಾಜಂಡಹಳ್ಳಿಗೆ, ಹೊಡಿಯೆಂದು ಹೇಳಿದನು.

" ಸಾ— ಚಿಕ್ಕಪ್ಪಾ, ನನಗೆ ಈ ಮದುವೆಯನ್ನು ತಪ್ಪಿಸು.

" ಸು— ಮಗು, ಈಗ, ನಾವು ಎಲ್ಲಿ ಹೋಗುತ್ತಿರುವದು ತಿಳಿದಿರುವದೋ ?

" ಸಾ— ನನಗೆ ತಿಳಿದಿಲ್ಲ.

" ಸು— ಬಾಗೇಪಲ್ಲಿಗೆ.

" ಸಾ— ಬಾಗೇಪಲ್ಲೀಗೆ ?

" ಸು— ಅಹುದು.

ಸಾವಿತ್ರಿಯ ಮನಸ್ಸಿನಲ್ಲಿ ಸಂತೋಷವು ತುಂಬುತ್ತಿತ್ತು. ಬಂದುಗಳಿಗೆಯು ಹಿಂದೆ ತಾನಿದ್ದ ಸ್ಥಿತಿಯನ್ನು ಜ್ಞಾಪಿಸಿಕೊಂಡಳು. ಈಗ ತಾನಿರುವದನ್ನು ನೋಡಿದಳು. ಚಿಕ್ಕಪ್ಪನ ಮುಖವನ್ನು ನೋಡಿ ಕಣ್ಣೀರನ್ನು ಬಿಟ್ಟಳು. ಮನಸ್ಸಿನಲ್ಲಿರುವದನ್ನು ತಡೆಯಲು ಅವಳಿಂದ ಸಾಧ್ಯವಾಗಲಿಲ್ಲ. ಸುಬ್ಬಯ್ಯನು ಸಾವಿತ್ರಿಯ ಮುಂದಲೆಯನ್ನು ಸವರುತ್ತ, " ಮಗು ಸಾವಿತ್ರಿ ಏತಕ್ಕೆ ಕಣ್ಣೀರುಬಿಡುವೆ. ಈಗ ನಾನಿರುವೆನಲ್ಲ " ಎಂದನು.

" ನಿನ್ನನ್ನು ನೋಡಿಯೇ ನನಗೆ ಗುರುತಾಯಿತು. ನೀನು ಬಹಳ ಇಳಿದುಹೋಗಿರುವೆ

" ಇಳಿದೇನುಹೋಗಿಲ್ಲ, ನನಗೆ ನೆನ್ನೆಯಿಂದ ಸರಿಯಾದ ಆಹಾರವೇ ಇಲ್ಲ. ನೆನ್ನೆಯದಿವಸ ಬಾಗೇಪಲ್ಲಿಗೆ ಬಂದೆನು. ನಿನ್ನವಿಷಯವಾಗಿ ಕೇಳಿದೆನು. ಕೋನೇರಯ್ಯನ ನಡೆವಳಿಕೆಯೂ ತಿಳಿಯಿತು, ನನಗೆ ಅನ್ನವೇ ಇಳಿಯಲಿಲ್ಲ.

" ಚಿಕ್ಕಪ್ಪ, ಬಾಗೇಪಲ್ಲಿಯಲ್ಲಿ ಸಮಾಚಾರವೇನು ?

" ಸಾವಿತ್ರೀ, ನೀನು ಅದೃಷ್ಟವಂತೆ ನಿನ್ನನ್ನುಚಿಕ್ಕಂದಿನಿಂದಲೂ ಕಂಡಿರುವೆನಲ್ಲ. ನಿನ್ನಲ್ಲಿರುವ ಗುಣಗಳು, ನಿನ್ನವಿದ್ಯೆ, ನಿನ್ನನಡತೆಗಳು. ಇವೆಲ್ಲವೂ ನಿನಗೆ ಒಳ್ಳೆಯುಪದವಿಯನ್ನೇ ತರುವದೆಂದು ನನಗೆ ನಂಬಿಕೆಯಿತ್ತು.

" ಅದೇನು ಚಿಕ್ಕಪ್ಪ, ನಾನು ಅದೃಷ್ಟವಂತೆ ? ಈಗ ನೀನು ಬಾರದಿದ್ದರೆ ನನ್ನ ಆಯುಸ್ಸುಪರ್ಯಂತರವೂ ಹೇಗಿರುತ್ತಿದ್ದೆನು ?

" ಸು— ಇನ್ನು ಮುಂದಕ್ಕೆ ಹೇಗಿರುತ್ತೀಯೋ ?

“ ಸಾ— ರೋಗಿಷ್ಠನನ್ನು, ನೋಡಿಕೊಳ್ಳಲೆ ? ”

“ ಸು— ಈಗ ನೀನು ಸುಬೇದಾರನ ಮನೆಯನ್ನು ನೆ

ಸಾವಿತ್ರಿಯ ಮನಸ್ಸಿನಲ್ಲಿ ಧಡ್ [illegible].

“ ಅದೇನು ” ?

“ ಸು— [illegible] ಮಾಡಿಕೊಂಡಾಗಿನಿಂದ [illegible] ಮನಸ್ಸು [illegible].

“ ಸಾ— ಇದು ಎಲ್ಲಿಯ ಮಾತು ? ನನ್ನ ಸುಬೇದಾರರ ಮನೆಗೆ ನಾನು ಹೊಸಬಳಾಗಿ ಹೋಗುವದೆಂದರೇನು

“ ಸು— ನಿಜವಾಗಿಯೂ ” ಎಂದು ನಡೆದ ವೃತ್ತಾಂತವನ್ನೆಲ್ಲಾ ಹೇಳಿದನು

“ ಸಾವಿತ್ರಿ— ಹೇ ಜಗದೀಶ ! ನೀನಿರುವಲ್ಲಿ ಯಾರಿಂದ ಯಾವದೂ ಸಾಧ್ಯವಿಲ್ಲ. ಒಳ್ಳೆಯದಾಗಲೆಂದೆಣಿಸಿದರೆ, ಕೇಡಾಗುವುದು. ಬೇಕಾದ ಬೇಕೆಂದು ಬಗೆದರೆ ತಪ್ಪಿಹೋಗುವುದು. ನಮಗೆ ನಮಗೆ ಬೇಕಾದ ವಸ್ತುಗಳು ಕೈಸೇರುವುವು, ಬೇಕೆಂಬುದು ದೂರವಾಗುವವು. ನೀನು ಹೇಳಬೇಕಾದುದೇ, ಅಪೇಕ್ಷಿಸಿದುದೇ ಸಿಗುವುದು. ಯಾವುದೂ ದೈವಾಧೀನ, ಅವರವರ ಯೋಗ್ಯತಾನುಸಾರವಾಗಿ ಸುಖದುಃಖಗಳು ಸಿದ್ಧವಾಗುವುವು. ನಿನ್ನ ಆಜ್ಞೆ. ” ಎಂದು ಮನಸ್ಸಿನಲ್ಲಿಯೇ ನುಡಿಸಿದಳು.

ಸಾವಿತ್ರಿಯು ಇನ್ನೇನು. ತಿಳಿಗಳು ಕಳೆದ, [illegible] ದಗೆಯನ್ನೂ, ಅವಳಿಗಾಗಿ ಎತ್ತ ಕಡೆಯಲ್ಲಿ [illegible] ರಿಂದ ಎಲ ರಬಾಯಿಗಳಲ್ಲಿಯೂ ಸಾವಿತ್ರೀ, ಸಾವಿತ್ರೀ [illegible] ಸಾವಿತ್ರಿಯು ಜೆಕ್ಕನೆ. ಸುಬ್ಬಯ್ಯನು ಬಂದಿರುವುದು ತಿಳಿದು [illegible] ದುದನ್ನೂ ಆಗ ರಾಮಚಂದ್ರಯ್ಯನ ಮತ್ತು ಕೋನೇರಯ್ಯನ ಮನಸ್ಸಿನ ಸ್ಥಿತಿಗಳನ್ನೂ, ಅವಳು ಅವನೊಂದಿಗೆ ಜಟಕಾಗಾಡಿಯಲ್ಲಿಯೇ ಹಿಂದಿರುಗಿ ಹೋದಳೆಂಬ ಸಮಾಚಾರವು ವಿಶದವಾಗುತ್ತಲೂ, ಅಲ್ಲಿ ನಡೆದ ಕಥನಗಳನ್ನೂ, ನಮ್ಮ ವಾಚಕರೇ ಊಹಿಸಿಕೊಳ್ಳಲು ಬಿಟ್ಟಿರುವೆವು.

ಉಪಸಂಹಾರ.

ಇತ್ತ ಜಾತಕಗಳ ಸಮಾಲೋಚನೆ [illegible] ಒಂದು ಶುಭದಿನದಲ್ಲಿ ತಮ್ಮ ಸ್ವಾಗೃಹದಲ್ಲಿಯೇ ವಿವಾಹವನ್ನು [illegible] ನಿಶ್ಚಯಿಸಿದರು. ಆಮಂತ್ರಣಪತ್ರಗಳನ್ನು [illegible] ಆಪ್ತರಿಗೆ ಕಳುಹಿಸಿದರು. [illegible], ಬಂದಿದ್ದ ಜನರ ಗುಂಪಿನಿಂದ [illegible] ಸ್ವರ್ಗವು. [illegible] ಗುತ್ತಿದ್ದಳು, ಪುರೋಹಿತರ ಮಂತ್ರಗಳು ಎಲ್ಲ [illegible] ಬೀಳುತ್ತಿದ್ದವು, ಸಾವಿತ್ರಿಗೂ ಮೂರ್ತಿಗೂ, ಶಾಸ್ತ್ರೋಕ್ತ [illegible] ವಿವಾಹವು ಸಾಂಗೋಪಾಂಗವಾಗಿ ನೆರವೇರಿತು.

[illegible] ಬಿಡಾರದಲ್ಲಿ [illegible] ಹುಡುಗರನ್ನು ಕಂಡು, ನಮ್ಮ [illegible] ಹುಡುಗಿ [illegible] ಅಂತಿಮ [illegible] ಊರಾಚೆ, [illegible] ಅಪ್ಸರಸ್ತ್ರೀಯರೋ ಎನ್ನುವಂತೆ [illegible] ತೋರುತ್ತಿದ್ದಳು, ಆ [illegible] ಮನಸ್ಸಿನಲ್ಲಿ ಉಕ್ಕುತ್ತಿದ್ದ ಆನಂದಾತಿಶಯವನ್ನು [illegible] ಕೆಲವು ಸಂದರ್ಭಗಳಲ್ಲಿ ಬಿರುನೋಟಗಳಿಂದ ನೋಡುತ್ತಿದ್ದಳು. [illegible] ಹತ್ತಿರ ಹತ್ತಿರಕ್ಕೆ ಬರುತ್ತಿದ್ದಳು, ಪುರೋಹಿತರು 'ಕೈಯನ್ನು ಹಿಡಿಯಬೇಕು' ಎಂದಾಗ ಆದರದಿಂದ ಹಿಡಿಯುತ್ತಿದ್ದಳು, ತನ್ನ [illegible] ಕಾಂಕ್ಷೆಯನ್ನು ಸಫಲವಾಗಿಸಿಕೊಳ್ಳುತ್ತಿದ್ದಳು.

ಕಡೆಗೆ ದೇವರಿಗೆ ನಮಸ್ಕರಿಸಿ, ವಧೂವರರು [illegible] ಎಲ್ಲರ ಆಶೀರ್ವಾದವನ್ನೂ ಪಡೆದು, ತಮ್ಮ [illegible] ಗಳಿಗೆ [illegible] ಹೋದರು.

ಕೊನೆಯಲ್ಲಿ ರಾಜನು [illegible] "[illegible] ಬೇಕಾದ ಕೋರಿಕೆಯನ್ನು ಕೈಗೂಡಿದರೆ ಸಂತೋಷವಲ್ಲವೇ" ಎಂದನು.

ಮೂರ್ತಿಯು ಅದಕ್ಕೆ "ನಾವು [illegible] ಸಾಧಿಸಿ ಹೊಂದಿದಾಗಲಲ್ಲವೇ ನಿಜವಾದ ಆನಂದವು ಕಲೆದೋರುವುದು" ಎಂದು ಬದಲುಕೊಟ್ಟನು.

ಸಂಪೂರ್ಣವು

ಕಾದಂಬರೀ ಸಂಗ್ರಹ.

ಮಾಸಪತ್ರಿಕೆಯಲ್ಲಿ ಪ್ರಕಟವಾದ ನವೀನಕಾದಂಬರಿಗಳಲ್ಲಿ ಕೆಲವು

ವಿಶಾಲಾಕ್ಷಿ	0—12—0	ಮಧುಸೂದನ	0—4—0
ವಿಲಾಸಿನಿ	0—10—0	ರೋಹಿಣಿ	0—4—0
ಶಂಕರಕಥಾಸಾರ	0—8—0	ಕ್ಷಾತ್ರತೇಜ	0—6—0
ಕಮಲಕುಮಾರಿ	0—9—0	ಸೌದಾಮಿನಿ	0—6—0
ಸಾವಿತ್ರಿ	0—12—0	ನನ್ನ ಸಂಸಾರ	0—5—0

ಇದರ ವಾರ್ಷಿಕ ಚಂದಾ. ಪೋಸ್ಟೇಜ್ ಸೇರಿ ೧—೮—೦

ಕಾದಂಬರೀ ಸಂಗ್ರಹ ಆಫೀಸ್,

ಮೈಸೂರ್.